ಬಾಗಲಕೋಟೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ: ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನದ ಮಹಾಪ್ರಬಂಧ

ಸಂಶೋಧಕರು

ಹಿರೇಮಠ ವಿನಯಕುಮಾರ ರಾಜಯ್ಯ

ನೋಂದಣಿ ಸಂಖ್ಯೆ: BVVBHS-0175

ಮಾರ್ಗದರ್ಶಕರು

ಡಾ. [illegible]

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನಾ ಕೇಂದ್ರ ಬಾಗಲಕೋಟೆ

ಇತಿಹಾಸ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಹಂಪಿ, ವಿದ್ಯಾರಣ್ಯ - 583276

ಮಾನ್ಯತಾ ಸಂಸ್ಥೆ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನಾ ಕೇಂದ್ರ ಬಾಗಲಕೋಟೆ

ಬಾಗಲಕೋಟ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ: ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನದ ಮಹಾಪ್ರಬಂಧ

ಸಂಶೋಧಕರು

ಹಿರೇಮಠ ವಿನಯಕುಮಾರ ರಾಚಯ್ಯ

ನೋಂದಣಿ ಸಂಖ್ಯೆ: **BVVBHS-0175**

ಮಾರ್ಗದರ್ಶಕರು

ಡಾ. ಜಿ. ಬಿ. ಕುಲಕರ್ಣಿ,ಎಂ.ಎ.,ಪಿಎಚ್.ಡಿ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನ ಕೇಂದ್ರ ಬಾಗಲಕೋಟ

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ,

ಹಂಪಿ, ವಿದ್ಯಾರಣ್ಯ – ೫೮೩೨೭೬

ಮಾನ್ಯತಾ ಸಂಸ್ಥೆ

ಬಸವೇಶ್ವರ ವೀರಶೈವ ವಿದ್ಯಾವರ್ಧಕ

ಸಂಘದ ಸಂಶೋಧನ ಕೇಂದ್ರ ಬಾಗಲಕೋಟ

ಪ್ರಮಾಣ ಪತ್ರ

"ಬಾಗಲಕೋಟ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಡಾ. ಜಿ.ಬಿ. ಕುಲಕರ್ಣಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯದ, ಚರಿತ್ರೆ ವಿಭಾಗಕ್ಕೆ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಮಾನ್ಯತಾ ಸಂಸ್ಥೆಯ ಮುಖಾಂತರ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ದಿನಾಂಕ : 27/3/2017
ಸ್ಥಳ : ಬಾಗಲಕೋಟ

ಹಿರೇಮಠ ವಿನಯಕುಮಾರ ರಾಚಯ್ಯ
ಸಂಶೋಧಕರು, ಚರಿತ್ರೆ ವಿಭಾಗ
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ ಬಾಗಲಕೋಟ

ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮಾರ್ಗದರ್ಶಕರ ದೃಢೀಕರಣ ಪತ್ರ

"ಬಾಗಲಕೋಟ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ : ಒಂದು ಅಧ್ಯಯನ" ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಚರಿತ್ರೆ ವಿಭಾಗದ, ಮಾನ್ಯತಾ ಸಂಸ್ಥೆ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರ ಮುಖಾಂತರ ಹಿರೇಮಠ ವಿನಯಕುಮಾರ ರಾಚಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 27/3/2017
ಸ್ಥಳ : ಬಾಗಲಕೋಟ

ಮಾರ್ಗದರ್ಶಕರು
ಡಾ. ಜಿ. ಬಿ. ಕುಲಕರ್ಣಿ
ಬಸವೇಶ್ವರ ವೀರಶೈವ ವಿದ್ಯಾವರ್ಧಕ
ಸಂಘದ ಸಂಶೋಧನ ಕೇಂದ್ರ ಬಾಗಲಕೋಟ

ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಪ್ರಸ್ತಾವನೆ

ಭಾರತವು ಸ್ವಾತಂತ್ರ್ಯಪೂರ್ವದಲ್ಲಿ ಹಲವು ಸಂಸ್ಥಾನಗಳಿಂದ ಕೂಡಿದ ಒಂದು ದೇಶವಾಗಿತ್ತೇ ಹೊರತು, ಅಖಂಡ ರಾಷ್ಟ್ರವಾಗಿರಲಿಲ್ಲ. ಹಲವು ಅರಸರ ಕೈಯಲ್ಲಿ ಹರಿದು ಹಂಚಿ ಹೋಗಿದ್ದ ಈ ದೇಶ ಅಪಾರ ಸಂಪತ್ತಿನಿಂದ ಕೂಡಿತ್ತು. ಆದ್ದರಿಂದಲೇ ಈ ದೇಶದ ಮೇಲೆ ನಡೆದಷ್ಟು ವಿದೇಶಿ ಆಕ್ರಮಣಗಳು ಮತ್ತ್ಯಾವ ದೇಶದ ಮೇಲೂ ನಡೆಯಲಿಲ್ಲ. ಕೆಲವು ವಿದೇಶಿ ಆಕ್ರಮಣಕಾರರು ಇಲ್ಲಿಯ ಸಂಪತ್ತನ್ನು ಲೂಟಿಗೈದು ತಮ್ಮ ನಾಡಿಗೆ ಹೋದರೆ, ಮತ್ತೆ ಕೆಲವರು ಈ ಮಣ್ಣಿನಲ್ಲಿ ಬೆರೆತು ಭಾರತೀಯರಾದರು. ಬ್ರಿಟಿಷರು ಈ ನಾಡನ್ನು ಸುದೀರ್ಘವಾದ ಕಾಲದವರೆಗೆ ಆಳಿದರು. ಇವರು ಈ ನೆಲದಲ್ಲಿ ಎರಡುನೂರು ವರ್ಷಗಳ ಕಾಲ ಇದ್ದರೂ, ಎಂದಿಗೂ ಈ ದೇಶದ ಸಂಸ್ಕೃತಿಗೆ ಒಗ್ಗಿಕೊಂಡು ಭಾರತೀಯರಾಗಲಿಲ್ಲ. ಇತ್ತ ವಿದೇಶಿ ಆಕ್ರಮಣಕಾರರಂತೆ ದೇಶದ ಸಂಪತ್ತನ್ನು ದೋಚಿಕೊಂಡು ಬಹುಬೇಗನೆ ತಮ್ಮ ನಾಡಿಗೆ ಮರಳಲಿಲ್ಲ. ಭಾರತದ ಜನತೆಯ ಹಾಗೂ ಬ್ರಿಟಿಷರ ಹಿತಾಸಕ್ತಿಗಳ ನಡುವೆ ಊಂಟಾದ ಘರ್ಷಣೆಗಳ ಫಲವೇ ಸ್ವಾತಂತ್ರ್ಯ ಚಳವಳಿ.

ಭಾರತದಲ್ಲಿ ಪೋರ್ಚುಗೀಸರು, ಡಚ್ಚರು, ಬ್ರಿಟಿಷರು ತಮ್ಮ ವ್ಯಾಪಾರದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಮ್ಮ ತಮ್ಮಲ್ಲಿಯೇ ಸ್ಪರ್ಧೆಗೆ ಇಳಿದರು. ಇವರಲ್ಲಿ ಯಶಕಂಡವರು ಬ್ರಿಟಿಷರು ಮಾತ್ರ. ವಿದೇಶಿಯರ ಸ್ಫರ್ಧೆಯನ್ನು ತಡೆಗಟ್ಟಿದ ನಂತರ ಭಾರತದಲ್ಲಿ ನೆಲೆನಿಲ್ಲಲು ದೇಶಿಯ ಅರಸರ ಒಳಜಗಳದಲ್ಲಿ ಭಾಗವಹಿಸತೊಡಗಿದರು. ೧೭೫೭ರ ಪ್ಲಾಸಿ ಕದನದಲ್ಲಿ ಪಾಲ್ಗೊಳ್ಳುವ ಮೂಲಕ ಬಂಗಾಳದಲ್ಲಿ ಅಧಿಕೃತವಾಗಿ ತಮ್ಮ ಆಡಳಿತವನ್ನು ಆರಂಭಿಸಿದರು. ಆ ಮೂಲಕ ತಮ್ಮ ಮೂಲ ವೃತ್ತಿ ವ್ಯಾಪಾರವನ್ನು ಬಿಟ್ಟು ರಾಜಕೀಯ ರಂಗವನ್ನು ಪ್ರವೇಶಿಸಿದರು. ಆಕ್ರಮಣದ ಮೂಲಕ ಕೆಲವು ಪ್ರದೇಶಗಳನ್ನು ದುರಾಡಳಿತದ ನೆಪವೊಡ್ಡಿ, ದತ್ತುಪುತ್ರರಿಗೆ ಹಕ್ಕಿಲ್ಲ ಎಂಬ ನೀತಿಯೊಂದಿಗೆ ಹಂತ ಹಂತವಾಗಿ ಇಡೀ ದೇಶವನ್ನೇ ಆಕ್ರಮಿಸಿಕೊಂಡರು. ಈ ವಿದೇಶಿಯರ ಆಡಳಿತವು ಭಾರತೀಯರಲ್ಲಿ ರಾಷ್ಟ್ರೀಯತೆ ಭಾವನೆಗಳು ಮೂಡುವದಕ್ಕೆ ಕಾರಣವಾಯಿತು.

ರಾಷ್ಟ್ರೀಯ ಹೋರಾಟವು ಭಾರತದಲ್ಲಿ ಬೆಳೆದದ್ದು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧಗಳಲ್ಲಿ. ಮೊದಲ ಬಾರಿಗೆ ಬ್ರಿಟಿಷರ ಪ್ರಭುತ್ವವನ್ನು ೧೮೫೭ರ ಸಿಪಾಯಿ ದಂಗೆಯ ಮೂಲಕ ಭಾರತೀಯರು ವಿರೋಧಿಸಿದರು. ನಂತರದ ಅವಧಿಯಲ್ಲಿ ಕಾಂಗ್ರೆಸ್ ಸ್ಥಾಪನೆಗೊಂಡ ಮೇಲೆ ಭಾರತೀಯರು ತಮ್ಮ ಹೋರಾಟದ ಸ್ವರೂಪವನ್ನು ಬದಲಾಯಿಸಿಕೊಂಡು ಮೃದುಧೋರಣೆ ತಳೆದು ಮಂದಗಾಮಿಗಳಾದರು. ೧೯೦೫ರಲ್ಲಿ ಬಂಗಾಳ

ವಿಭಜನೆ ಮಾಡಿದಾಗ ಭಾರತೀಯರ ಹೋರಾಟವು ಉಗ್ರಸ್ವರೂಪವನ್ನು ತಾಳಿತು. ತಿಲಕರ ವಿಶೇಷ ಪ್ರಯತ್ನದಿಂದ ಚಳವಳಿಯು ಜನಸಾಮಾನ್ಯರ ಮನ ಮನೆಗಳಿಗೆ ತಲುಪಿತು. ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಮೇಲೆ ಅದರ ಸ್ವರೂಪ ಮತ್ತಷ್ಟು ಬದಲಾಯಿತು. ಸತ್ಯ-ಅಹಿಂಸೆ ಸತ್ಯಾಗ್ರಹ ತತ್ವಗಳ ತಳಹದಿಯ ಮೇಲೆ ಚಳವಳಿ ಆರಂಭಗೊಂಡಿತು. ಜೊತೆಗೆ ಅಸ್ಪೃಶ್ಯತೆ ನಿವಾರಣೆ, ಪಾನ ನಿಷೇಧ, ಖಾದಿ ಪ್ರಚಾರ ಮುಂತಾದ ರಚನಾತ್ಮಕ ಕಾರ್ಯಗಳು ಚಳವಳಿಗೆ ಇಂಬು ನೀಡಿದವು. ಹೀಗೆ ಭಾರತದ ಸ್ವಾತಂತ್ರ್ಯ ಚಳವಳಿ ವಿವಿಧ ಆಯಾಮಗಳ ಮೂಲಕ ನಡೆದುಬಂದು ಅಗಸ್ಟ್ ೧೫, ೧೯೪೭ರಲ್ಲಿ ತನ್ನ ಗುರಿ ಸಾಧಿಸಿತು. ಈ ರೀತಿಯಲ್ಲಿ ದೇಶವು ಸ್ವಾತಂತ್ರ್ಯ ಗಳಿಸುವಲ್ಲಿ ಈ ನಾಡಿನ ಮಹಾನ್ ನಾಯಕರ ಕೊಡುಗೆ ಮಹತ್ತರವಾಗಿದೆ. ಅದರಲ್ಲೂ ಕರ್ನಾಟಕದ ಸ್ವಾಭಿಮಾನಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ ಅಪಾರವಾಗಿದೆ. ಬಾಗಲಕೋಟ ಜಿಲ್ಲೆಯ ಜನರು ದೇಶದ ಸ್ವಾತಂತ್ರ್ಯಕ್ಕಾಗಿ ಹಲವು ಮಾದರಿಯಲ್ಲಿ ಶ್ರಮಿಸಿದ್ದಾರೆ. ಅನೇಕ ಚಳವಳಿಗಳಲ್ಲಿ ಭಾಗವಹಿಸುವುದರ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ದುಡಿದಿದ್ದಾರೆ. ಇವರ ಕುರಿತಾಗಿ ನಡೆಸಿದ ಅಧ್ಯಯನವೇ ಪ್ರಸ್ತುತ ಬಾಗಲಕೋಟ ಜಿಲ್ಲೆಯ ಸ್ವಾತಂತ್ರ್ಯ ಚಳವಳಿ ಒಂದು ಅಧ್ಯಯನವಾಗಿದೆ.

೧.೧ ಅಧ್ಯಯನದ ಉದ್ದೇಶ

೧. ಮೊದಲು ಚರಿತ್ರೆಯ ಅಧ್ಯಯನವು ರಾಷ್ಟ್ರೀಯ ಮಟ್ಟದಿಂದ ಆರಂಭಗೊಂಡು ಸ್ಥಳೀಯ ಮಟ್ಟದಲ್ಲಿ ಪೂರ್ಣಗೊಳ್ಳುತ್ತಿತ್ತು. ಇಂದಿನ ಆಧುನಿಕ ಯುಗದಲ್ಲಿ ಇಡೀ ವಿಶ್ವವೇ ಒಂದು ಗ್ರಾಮವಾಗಿದೆ. ಆದ್ದರಿಂದ ಆಧುನಿಕ ಚರಿತ್ರೆಕಾರರು ಸ್ಥಳೀಯ ಮಟ್ಟದಿಂದ ರಾಷ್ಟ್ರೀಯತೆಯನ್ನು ಗುರುತಿಸುತ್ತಿರುವರು. ಆದ್ದರಿಂದ ಈ ಅಧ್ಯಯನವು ಸ್ಥಳೀಯ ಚಳವಳಿಯ ಮೂಲಕ ರಾಷ್ಟ್ರೀಯ ಚಳವಳಿಯನ್ನು ಗುರುತಿಸುವ ನೆಲೆಯಲ್ಲಿ ನಡೆದಿದೆ.

೨. ರಾಷ್ಟ್ರೀಯ ನಾಯಕರೊಂದಿಗೆ ಸ್ಥಳೀಯ ನಾಯಕರ ಸಂಪರ್ಕದ ಪರಿಣಾಮವಾಗಿ, ರಾಷ್ಟ್ರಮಟ್ಟದ ಚಳವಳಿ ಸ್ಥಳೀಯ ಮಟ್ಟದಲ್ಲಿ ಜರುಗಲು ಸ್ಥಳೀಯ ನಾಯಕರ ಪಾತ್ರ ಹಿರಿದಾಗಿರುವದರಿಂದ ಈ ನಾಯಕರ ವ್ಯಕ್ತಿತ್ವವನ್ನು ವಿಶ್ಲೇಷಣೆ ಮಾಡಿ ನಿರೂಪಿಸಲಾಗಿದೆ. ದೇಶಕ್ಕಾಗಿ ಹಗಲಿರುಳು ಎನ್ನದೇ ಹೆಂಡತಿ ಮಕ್ಕಳು ಮನೆ ಮಾರು ಬಿಟ್ಟು ಲಾಠಿ ಏಟು ತಿಂದು ಜೈಲು ವಾಸ ಅನುಭವಿಸಿದ ಸ್ವಾತಂತ್ರ್ಯ ಚಳವಳಿಗಾರರ ಇಂದಿನ ಬದುಕಿನ ಬವಣೆಯನ್ನು ಇಲ್ಲಿ ಅಧ್ಯಯನ ಮಾಡಿ ಮಹತ್ವದ ವಿಚಾರವನ್ನು ಅಧ್ಯಯನದಲ್ಲಿ ದಾಖಲಿಸಲಾಗಿದೆ. ಸ್ವಾತಂತ್ರ್ಯ ಚಳವಳಿಗಾರರು ಬಹುತೇಕ ಮಂದಿ ಇಂದು ಜೀವಂತವಾಗಿ ಬದುಕಿಲ್ಲ, ಕೇವಲ ಬೆರಳೆಣಿಕೆಯಷ್ಟು ಜನರು ಮಾತ್ರ ಬದುಕಿರುವರು. ಅವರ ಹೋರಾಟದ ಬದುಕಿನ ಸಂಗತಿಗಳನ್ನು ಸೆರೆಹಿಡಿಯುವುದು ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿತ್ತು. ಅವುಗಳನ್ನು ಅಧ್ಯಯನದಲ್ಲಿ ನಿರೂಪಿಸಲಾಗಿದೆ.

೩. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಭಾರತೀಯರ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆ ಇತ್ತು. ಹೆಚ್ಚಿನ ಸಂಖ್ಯೆಯ ಜನರು ಗ್ರಾಮವಾಸಿಗಳಾಗಿದ್ದರು. ರಾಷ್ಟ್ರೀಯ ನಾಯಕರ ಸಂದೇಶಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ ಲಾವಣಿ ಪದಗಳು, ದೇಶಭಕ್ತಿ ಗೀತೆಗಳು ಮಹತ್ವದ ಪಾತ್ರವಹಿಸಿದ್ದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ದೇಶದ ವಿವಿಧ ಕಡೆಗಳಲ್ಲಿ ನಡೆಯುವ ಚಳವಳಿಯ ಸ್ವರೂಪವನ್ನು ಜನಸಾಮಾನ್ಯರಿಗೆ ಮುಟ್ಟಿಸಿ ಬ್ರಿಟಿಷ ಸರಕಾರದ ನಿರ್ಬಂಧನೆಗಳ ನಡುವೆಯು ಸ್ವಾತಂತ್ರ್ಯ ಚಳವಳಿಯ ಕಾವು ನಿರಂತರವಾಗಿ ಇರುವಂತೆ ಮಾಡಿದ ಪತ್ರಿಕೆಗಳು ಮತ್ತು ರಂಗಭೂಮಿಯು ಜನರಿಗೆ ಮನರಂಜನೆ ಒದಗಿಸುವದರ ಜೊತೆಗೆ ಅಪ್ರತ್ಯಕ್ಷವಾಗಿ ಚಳವಳಿ ತತ್ವಗಳನ್ನು ಜನರಲ್ಲಿ ತುಂಬಿದ್ದರಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ರಂಗಭೂಮಿಯ ಪಾತ್ರ ಕುರಿತು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೪. ಗಾಂಧೀಜಿಯವರ ಕಾನೂನುಭಂಗ ಚಳವಳಿಯ ಅಂಶಗಳಲ್ಲಿ ಒಂದಾದ ಉಪ್ಪನ್ನು ಸಿದ್ಧಪಡಿಸಿ ಕಾಯ್ದೆ ಭಂಗ ಮಾಡುವ ಕಾರ್ಯವನ್ನು ಬಾಗಲಕೋಟ ಜಿಲ್ಲೆಯ ಜನರು ತಮ್ಮ ಜಿಲ್ಲೆಯಲ್ಲಿ ಸಮುದ್ರ ಇರದಿದ್ದರೂ ಉಪ್ಪನ್ನು ತಯಾರಿಸಬೇಕೆಂಬ ಹಠದಿಂದ ಬಿಸನಾಳ ಹಳ್ಳದಲ್ಲಿ ಉಪ್ಪು ತಯಾರಿಸಿರುವದು ಸಾಮಾನ್ಯ ಕಾರ್ಯವಲ್ಲ. ಬಿಸನಾಳದ ಉಪ್ಪಿನ ಸತ್ಯಾಗ್ರಹದ ರೋಚಕ ಅಂಶಗಳನ್ನು ಅಧ್ಯಯನ ಮಾಡಿ ಮಹತ್ವದ ವಿಚಾರಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೫. ನಾ.ಸು. ಹರ್ಡೀಕರ ಅವರು ಬಾಗಲಕೋಟೆಯಲ್ಲಿ ಸೇವಾದಳದ ಶಾಖೆಯನ್ನು ಆರಂಭಿಸಿ ಅದನ್ನು ಉತ್ತರ ಕರ್ನಾಟಕದ ಕೇಂದ್ರಸ್ಥಾನವನ್ನಾಗಿ ಮಾಡಿದರು. ಹರ್ಡೇಕರ ಮಂಜಪ್ಪನವರು ಆಲಮಟ್ಟಿಯಲ್ಲಿ ಆಶ್ರಯ ಸ್ಥಾಪಿದರು. ಸ್ವಾತಂತ್ರ್ಯ ಚಳವಳಿಯ ಕುರಿತು ನೀಡಿದ ಪ್ರೇರಣಾತ್ಮಕ ಅಂಗಗಳ ಬಗೆಗೆ ಮಾಹಿತಿಯನ್ನು ಅಧ್ಯಯನದಲ್ಲಿ ಚರ್ಚಿಸಿದೆ. ಜೊತೆಗೆ ಅಂದು ಜಿಲ್ಲೆಯಾದ್ಯಂತ ಅಸ್ಪೃಶ್ಯತೆ ನಿವಾರಣೆಗಾಗಿ ಮಾಡಿದ ಮಾರ್ಗೋಪಾಯದ ಅಂಶಗಳ ಕುರಿತು ಅಧ್ಯಯನದಲ್ಲಿ ನಿರೂಪಿಸಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಭೌಗೋಳಿಕವಾಗಿ ಬಾಗಲಕೋಟ ಜಿಲ್ಲೆಯನ್ನು ಒಳಗೊಂಡಿದೆ. ೧೯೯೭ರ ವರೆಗೆ ಬಾಗಲಕೋಟ ವಿಜಾಪೂರ ಜಿಲ್ಲೆಯಲ್ಲಿದ್ದುದರಿಂದ ಸಮಯೋಚಿತವಾಗಿ ವಿಜಾಪೂರ ಜಿಲ್ಲೆಯನ್ನು ಒಳಗೊಂಡಿದೆ. ಹಾಗೂ ೧೮೫೭ ರಿಂದ ೧೯೪೭ರ ವರೆಗಿನ ಸ್ವಾತಂತ್ರ್ಯ ಚಳವಳಿಯ ಘಟನಾವಳಿಗಳನ್ನು ಹಾಗೂ ಅದಕ್ಕೆ ಪೂರಕವಾದ ಅಂಶಗಳನ್ನು ಈ ಅಧ್ಯಯನವು ಒಳಗೊಂಡಿದೆ.

೧.೩ ಅಧ್ಯಯನದ ಮಹತ್ವ

ಬ್ರಿಟಿಷ ಆಡಳಿತದ ಪರಿಣಾಮದಿಂದ ರಾಷ್ಟ್ರೀಯತೆಯು ಬಂಗಾಳದಲ್ಲಿ ಹೆಚ್ಚು ಬೆಳೆದು ಬ್ರಿಟಿಷ ಸರಕಾರದ ವಿರುದ್ಧ ಪ್ರತಿಭಟನೆಗಳು ಆರಂಭಗೊಂಡವು. ಅದರ ಪರಿಣಾಮ ಮುಂಬೈ ಕರ್ನಾಟಕದ ಮೇಲಾಯಿತು. ಮುಂಬೈ ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ ಕಂಡಿದ್ದು ಮೊದಲು

ಬೆಳಗಾವಿಯಲ್ಲಿ. ನಂತರ ಅಖಂಡ ವಿಜಾಪೂರ ಜಿಲ್ಲೆಯಲ್ಲಿ ಕಂಡಿತು. ರಾಷ್ಟ್ರೀಯ ಮುಖಂಡರಾದ ಗಾಂಧೀಜಿ, ಸರೋಜಿನಿ ನಾಯ್ಡು, ವಿಠ್ಠಲಬಾಯಿ ಪಟೇಲ ಮುಂತಾದ ನಾಯಕರು ಬಾಗಲಕೋಟ ಮತ್ತು ವಿಜಾಪೂರಕ್ಕೆ ಭೇಟಿ ನೀಡುತ್ತಿದ್ದರು. ಇವರ ಸ್ಪೂರ್ತಿದಾಯಕ ಭಾಷಣಗಳಿಂದ ಈ ಭಾಗದಲ್ಲಿ ಚಳವಳಿ ತೀವ್ರಗೊಂಡಿತು. ಈ ಭಾಗದ ಜನಸಾಮಾನ್ಯರು ಚಳವಳಿಯಲ್ಲಿ ಭಾಗವಹಿಸುವುದರ ಮೂಲಕ ತಮ್ಮದೇ ಆದ ಕೊಡುಗೆಯನ್ನು ದೇಶಕ್ಕೆ ನೀಡಿದ್ದಾರೆ. ರಾಷ್ಟ್ರೀಯ ನಾಯಕರ ಪ್ರಭಾವದಿಂದ ಕೆಲವೊಂದು ರಚನಾತ್ಮಕ ಕೆಲಸಕಾರ್ಯಗಳಾದವು. ಅಸ್ಪೃಶ್ಯತೆಯ ನಿವಾರಣೆ, ಮದ್ಯಪಾನ ನಿಷೇಧ, ದೇವದಾಸಿ ಪದ್ಧತಿಯ ನಿರ್ಮೂಲನೆ ಹೀಗೆ ಅನೇಕ ಸಾಮಾಜಿಕಾಭಿವೃದ್ಧಿಯ ಕೆಲಸಕಾರ್ಯಗಳು ನಡೆದವು ಇವುಗಳು ಅಧ್ಯಯನದ ಮಹತ್ವದ ಅಂಶಗಳಾಗಿವೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವಹಿಸಿವೆ. ಬಾಗಲಕೋಟೆಯಿಂದ ಕನ್ನಡಿಗ, ನವಕರ್ನಾಟಕ, ಶುಭೋದಯ ವಿಜಾಪೂರದಿಂದ ಕರ್ನಾಟಕ ವೈಭವ, ಉದಯ, ಆಲಮಟ್ಟಿಯಿಂದ ಶರಣ ಸಂದೇಶ ವೃತ್ತ ಪತ್ರಿಕೆಗಳು ಹೊರಡುತ್ತಿದ್ದವು. ಮೊಹರೆ ಹನುಮಂತರಾಯರು, ಶ್ರೀನಿವಾಸರಾವ ಮಂಗಳವೇಡೆ ಫಕೀರಪ್ಪ ಹಳಕಟ್ಟಿ, ಗುಂಡೆರಾವ ಮಣ್ಣೂರು ಮುಂತಾದ ಪತ್ರಕರ್ತರು ಬ್ರಿಟಿಷ ಸರಕಾರದ ನೀತಿ ನಿಯಮಗಳನ್ನು ಟೀಕಿಸಿ ಲೇಖನಗಳನ್ನು ಬರೆಯುವದರ ಮೂಲಕ ಜನಸಾಮಾನ್ಯರಿಗೆ ರಾಷ್ಟ್ರೀಯತೆಯ ಕುರಿತು ಮಹತ್ವದ ವಿಚಾರಗಳನ್ನು ತಿಳಿಸಿದರು.

ಮುಂಬಯಿ ಪ್ರಾಂತ್ಯದ ರಾಜಕೀಯ ಪರಿಷತ್ತು, ವೃತ್ತಪತ್ರಿಕಾ ಪರಿಷತ್ತು, ಕರ್ನಾಟಕ ರಾಜಕೀಯ ಪರಿಷತ್ತುಗಳು ಜಿಲ್ಲೆಯಲ್ಲಿ ನಡೆಯುವ ಚಳವಳಿಯ ಕುರಿತು ಅಪಾರ ಶ್ರಮವಹಿಸಿದವು. ಜಿಲ್ಲೆಯ ಸ್ವಾತಂತ್ರ್ಯ ಚಳವಳಿಗಾರರಾದ ಶ್ರೀನಿವಾಸರಾವ ಕೌಜಲಗಿ, ಬಿ.ಡಿ.ಜತ್ತಿ, ಎಸ್.ಆರ್. ಕಂಠಿ, ಮಂಗಳವೇಡೆ ಶ್ರೀನಿವಾಸರಾವ, ಕಾಕಾ ಕಾರಖಾನೀಸ ಮುಂತಾದವರು ರಾಷ್ಟ್ರೀಯ ನಾಯಕರೊಂದಿಗೆ ಸಂಪರ್ಕ ಹೊಂದಿದ್ದರು. ಇದರ ಫಲವಾಗಿ ಜಿಲ್ಲೆಯ ಜನರಲ್ಲಿ ದೇಶಾಭಿಮಾನ ಮೂಡುವಂತೆ ಮಾಡಿದರು.

೧.೪ ಆಕರಗಳ ಸಮೀಕ್ಷೆ

ಈವರೆಗೆ ಭಾರತದ ಸ್ವಾತಂತ್ರ್ಯ ಚಳವಳಿಯ ಬಗೆಗೆ ಅನೇಕ ಕೃತಿಗಳು, ಲೇಖನಗಳು, ಸಂಶೋಧನಾ ಪ್ರಬಂಧಗಳು ಹೊರಬಂದಿವೆ. ಬಾಗಲಕೋಟ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಬಗೆಗೆ ಸಮಗ್ರ ಮಾಹಿತಿಯನ್ನು ನೀಡುವ ಕೃತಿಗಳು ತುಂಬ ವಿರಳ. ಕೆಲವೊಂದು ಬಿಡಿಬಿಡಿ ಲೇಖನಗಳು ದೊರೆಯುತ್ತವೆ.

ಸೂರ್ಯನಾಥ ಕಾಮತ ಅವರ ಸ್ವಾತಂತ್ರ್ಯ ಸಂಗ್ರಾಮದ ಕುರಿತು 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಎಂಬ ಗ್ರಂಥವು ಮೂರು ಸಂಪುಟಗಳಲ್ಲಿ ಹೊರಬಂದಿವೆ. ಇವು ಕರ್ನಾಟಕದ ಜಿಲ್ಲಾವಾರು ಚಳವಳಿಗಾರರ ಸ್ವ-ಅನುಭವಗಳನ್ನು ಪ್ರಸ್ತುತಪಡಿಸುತ್ತದೆ.

ಜಿ.ಎಸ್. ಹಾಲಪ್ಪನವರ 'ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ' ಗ್ರಂಥವು ಎರಡು ಸಂಪುಟಗಳನ್ನು ಒಳಗೊಂಡಿದೆ. ಈ ಗ್ರಂಥ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಪ್ರಮುಖ ಘಟನಾವಳಿಗಳನ್ನು ತಿಳಿಸುತ್ತದೆ.

ರಂಗನಾಥ ದಿವಾಕರರವರ 'ಕರ ನಿರಾಕರಣೆ ವೀರಕತೆ' ಗ್ರಂಥವು ಸ್ವಾತಂತ್ರ್ಯ ಚಳವಳಿಯ ಒಂದು ಭಾಗವಾದ ಕರ ನಿರಾಕರಣೆಯ ಬಗೆಗೆ ಮಾಹಿತಿಯನ್ನು ಒದಗಿಸುತ್ತದೆ ಮತ್ತು ಈ ಗ್ರಂಥ ಹಿರೇಕೆರೂರು, ಶಿರಸಿ, ಸಿದ್ದಾಪೂರ, ಅಂಕೋಲಾ ತಾಲೂಕುಗಳ ಭೌಗೋಳಿಕ ವ್ಯಾಪ್ತಿಯನ್ನು ಮಾತ್ರ ಒಳಗೊಂಡಿದೆ.

ಎಸ್.ವೈ. ಮುಗಳಿಯವರ 'ಫ್ರೀಡಂ ಮೂವ್‌ಮೆಂಟ್ ಇನ್ ಬಾಂಬೆ ಕರ್ನಾಟಕ ದ ರೂಲ್ ಆಫ್ ಇಂಟೆಲೆಕ್ಚುವಲ್'ಎಂಬ ಪಿಎಚ್.ಡಿ. ಮಹಾಪ್ರಬಂಧವು ಮುಂಬಯಿ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಬುದ್ಧಿಜೀವಿಗಳ ಪಾತ್ರ ಕುರಿತು ಮಾಹಿತಿ ನೀಡುತ್ತದೆ.

ಅನುರಾಧ ದೀಕ್ಷಿತ ಅವರ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನಪದ ಗೀತೆಗಳ ಮೂಲಕ ರಾಷ್ಟ್ರೀಯ ಮನೋಭಾವನೆಗಳ ಸಂವಹನ : ಉತ್ತರ ಕರ್ನಾಟಕ ಒಂದು ಅಧ್ಯಯನ' ಎಂಬ ಪಿಎಚ್.ಡಿ ಮಹಾಪ್ರಬಂಧ ರಾಷ್ಟ್ರೀಯತೆ ಬೆಳೆಸುವಲ್ಲಿ ಜನಪದ ಗೀತೆಗಳ ಪಾತ್ರ ಕುರಿತು ಮಾಹಿತಿ ಒದಗಿಸುವದು.

ಬಾ.ಯ. ದೇಶಪಾಂಡೆಯವರ 'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ' ಎರಡು ಸಂಪುಟಗಳನ್ನು ಒಳಗೊಂಡಿದ್ದು ಇದು'ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಕ್ಕೆ' ಮಾತ್ರ ಸೀಮಿತವಾಗಿದೆ.

ಮಲ್ಲಿಕಾರ್ಜುನ ಮೇತ್ರಿಯವರ 'ಕರ್ನಾಟಕ ಗಾಂಧಿ' ಎಂಬ ಪಿಎಚ್.ಡಿ ಮಹಾಪ್ರಬಂಧ ಪ್ರಕಟಿತ ಗ್ರಂಥ ಹರ್ಡೇಕರ ಮಂಜಪ್ಪನವರ ಜೀವನ ಹಾಗೂ ಸ್ವಾತಂತ್ರ್ಯ ಚಳವಳಿಯಲ್ಲಿ ಅವರ ಪಾತ್ರ ಕುರಿತು ವ್ಯಕ್ತಿ ಚಿತ್ರಣ ನೀಡುತ್ತದೆ.

ಮಂಜುನಾಥ ಬೇವಿನಕಟ್ಟಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ' ಗ್ರಂಥವು ಹಲಗಲಿ ಬಂಡಾಯ ಬಗ್ಗೆ ಮಹತ್ವದ ಲೇಖನಗಳನ್ನು ಒಳಗೊಂಡಿವೆ.

ಕೃಷ್ಣ ಕೊಲ್ಹಾರ ಕುಲಕರ್ಣಿಯವರ 'ಕಾಕಾ ಕಾರಖಾನೀಸ' ಕೃತಿಯು ಅಖಂಡ ವಿಜಾಪೂರ ಜಿಲ್ಲೆಯಲ್ಲಿ ಕಾಕಾ ಕಾರಖಾನೀಸರು ಸ್ವಾತಂತ್ರ್ಯ ಚಳವಳಿಯಲ್ಲಿ ನಿರ್ವಹಿಸಿದ ಪಾತ್ರ ಕುರಿತು ವ್ಯಕ್ತಿ ಚಿತ್ರಣ ನೀಡುತ್ತದೆ.

ಶ್ರೀರಾಮ ಇಟ್ಟಣ್ಣನವರ 'ಸ್ವಾತಂತ್ರ್ಯ ಹೋರಾಟಗಾರ್ತಿ ಸೀತಾಬಾಯಿ ತಿಮಸಾನಿ' ಕೃತಿಯು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಂಟೂರ ಗ್ರಾಮದ ಸೀತಾಬಾಯಿ ತಿಮಸಾನಿಯವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದುದರ ಕುರಿತು ವ್ಯಕ್ತಿಗತ ಮಾಹಿತಿ ನೀಡುತ್ತದೆ.

೧.೫ ಅಧ್ಯಯನದ ವಿಧಾನಗಳು

ಪ್ರಸ್ತುತ ಅಧ್ಯಯನವು ಬಾಗಲಕೋಟ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಸ್ವರೂಪ ಹಾಗೂ ಬ್ರಿಟಿಷ ಸರಕಾರದ ಕಾರ್ಯವೈಖರಿಗೆ ಜನಸಾಮಾನ್ಯರ ಸ್ಪಂದನೆಯ ಕುರಿತು ತಿಳಿದುಕೊಳ್ಳಲು ಚರಿತ್ರೆಯ ವಿಧಿ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧. ಪ್ರಾಥಮಿಕ ಆಕರಗಳು

೧. ಸಂದರ್ಶನ

ಪ್ರಸ್ತುತ ಪ್ರಬಂಧವನ್ನು ರಚಿಸಲು ಅತ್ಯಂತ ಮೂಲ ಪ್ರಾಥಮಿಕ ಆಕರಗಳೆಂದರೆ ಸ್ವಾತಂತ್ರ್ಯ ಚಳವಳಿಗಾರರ ಸಂದರ್ಶನ. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ದೇಶಕ್ಕಾಗಿ ಮನೆ ಮಾರು ಬಿಟ್ಟು ಹೋರಾಡಿದ ಚಳವಳಿಗಾರರನ್ನು ಪ್ರಶ್ನಾವಳಿಗಳ ಮೂಲಕ ಸಂದರ್ಶಿಸಿ ಅವರಿಂದ ಚಳವಳಿಯ ಕುರಿತು ಅಗತ್ಯ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ಈಗಾಗಲೇ ಮರಣ ಹೊಂದಿದ ಚಳವಳಿಗಾರರ ಪತ್ನಿ ಮಕ್ಕಳನ್ನು ಹಾಗೂ ಅವರ ಸಮಕಾಲೀನರನ್ನು ಸಂದರ್ಶಿಸಿ ಮಾಹಿತಿಯನ್ನು ಕಲೆ ಹಾಕಲಾಗಿದೆ.

೨. ಸ್ಮೃತಿಗಳು

ಕೆಲವು ಸುಶಿಕ್ಷಿತ ಸ್ವಾತಂತ್ರ್ಯ ಚಳವಳಿಗಾರರು ತಾವು ಬದುಕಿರುವಾಗಲೆ ತಮ್ಮ ಹೋರಾಟದ ಬದುಕನ್ನು ಬರೆದಿದ್ದಾರೆ. ಗುಳೇದಗುಡ್ಡದ ಮಡಿವಾಳಪ್ಪ ಪಟ್ಟಣಶೆಟ್ಟಿಯವರು ತಮ್ಮ ಹೋರಾಟದ ಕುರಿತು 'ನಾನು ನಡೆದು ಬಂದ ದಾರಿ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಹರ್ಡೇಕರ ಮಂಜಪ್ಪನವರು ತಮ್ಮ ಆತ್ಮ ಚರಿತ್ರೆ 'ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ' ಹಾಗೂ ಆಲೂರು ವೆಂಕಟರಾವ ಅವರ 'ನನ್ನ ಜೀವನ ಸ್ಮೃತಿಗಳು', ಸೂರ್ಯನಾಥ ಕಾಮತರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಮತ್ತು ಕೆಲವು ಸ್ವಾತಂತ್ರ್ಯ ಚಳವಳಿಗಾರರ ಸ್ವ ಅನುಭವದ ಕೈ ಬರಹಗಳು ಚಳವಳಿಗಳಿಗೆ ಸಂಬಂಧಿಸಿದಂತೆ ಅಮೂಲ್ಯ ದಾಖಲೆಗಳು ದೊರೆಯುತ್ತವೆ. ಇವುಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

೩. ಮೂಲ ದಾಖಲೆ ಪತ್ರಗಳು

ಸ್ವಾತಂತ್ರ್ಯ ಚಳವಳಿಗಾರರ ಜೈಲು ಪತ್ರಗಳು, ಜಿಲ್ಲಾ ಕಾಂಗ್ರೆಸ್ ಕಮಿಟಿಯ ವರದಿಗಳು, ಜಿಲ್ಲಾ ಹಾಗೂ ರಾಜ್ಯ ಪತ್ರಾಗಾರಗಳಲ್ಲಿರುವ ಮಹತ್ವದ ದಾಖಲೆಗಳಿಂದ ನಿಖರವಾದ ಮಾಹಿತಿಗಳನ್ನು

ಪಡೆದುಕೊಳ್ಳಲಾಗಿದೆ. ಅವುಗಳನ್ನೆಲ್ಲ ಸಮೀಕ್ಷೆ ನಡೆಸಿ ಈ ಮಹಾಪ್ರಬಂಧದ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೪. ಸಮಕಾಲಿನ ವೃತ್ತ ಪತ್ರಿಕೆಗಳು

ಸಮಕಾಲಿನ ವೃತ್ತ ಪತ್ರಿಕೆಗಳಾದ ಕನ್ನಡಿಗ, ಕರ್ನಾಟಕ ವೈಭವ, ಸಂಯುಕ್ತ ಕರ್ನಾಟಕ, ಕರ್ಮವೀರಗಳು ಸ್ವಾತಂತ್ರ್ಯ ಚಳವಳಿ ಸಮಯದಲ್ಲಿಯೇ ಪ್ರಕಟಗೊಳ್ಳುತ್ತಿದ್ದವು ಅಂದಿನ ಚಳವಳಿಯ ನೈಜ ಘಟನೆಗಳನ್ನು ಪ್ರಕಟಿಸಿರುವದರಿಂದ ಅವುಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಆನುಷಂಗಿಕ ಆಕರಗಳು

ಮಾಧ್ಯಮಿಕ ಆಕರಗಳು ಸಹ ಅಧ್ಯಯನಕ್ಕೆ ಉಪಯುಕ್ತವಾಗಿವೆ. ಜಿ.ಎಸ್. ಹಾಲಪ್ಪನವರ 'ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ', ಬಿಪಿನ್ ಚಂದ್ರರ 'ಸ್ವಾತಂತ್ರ್ಯ ಹೋರಾಟ' ಮತ್ತು 'ಆಧುನಿಕ ಭಾರತದ ಇತಿಹಾಸ', ಎಸ್. ನಾಗರತ್ನಮ್ಮರ 'ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳವಳಿ', ಜಿ.ಎ. ಬಿರಾದಾರ ಅವರ 'ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿ', ರಂಗನಾಥ ದಿವಾಕರರ 'ಕರ್ಮಯೋಗಿ ಹಣಮಂತರಾಯರು', 'ಕಾಂಗ್ರೆಸ್ ರನ್ನ ಮಹೋತ್ಸವ', ಮುನಿಸ್ವಾಮಿ(ಸಂ) 'ವಿಜಾಪೂರ ಜಿಲ್ಲಾ ಗ್ಯಾಜಿಟಿಯರ', ಎನ್.ಬಿ. ಮಟ್ಟೋಳಿಯವರ 'ಜಮಖಂಡಿ ಇತಿಹಾಸ ದರ್ಪಣ', ಆರ್.ಗೋಪಾಲ(ಸಂ) 'ಬಾಗಲಕೋಟೆ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ', ಹಣಮಂತ ತಾಸಗಾಂವಕರರ 'ಜೋರಾಪೂರ ಗುರುರಾಯರು' ಮುಂತಾದ ಕೃತಿಗಳು ಸದರಿ ಅಧ್ಯಯನಕ್ಕೆ ಅಗತ್ಯ ಮಾಹಿತಿ ಕೊಡುತ್ತವೆ. ಸಂಶೋಧನಾ ಪ್ರಬಂಧಗಳನ್ನು ಬಿಡಿಲೇಖನಗಳನ್ನು ಮಾಧ್ಯಮಿಕ ಆಕರಗಳಾಗಿ ಬಳಸಲಾಗಿದೆ.

೧.೬ ಅಧ್ಯಯನದ ಸ್ವರೂಪ.

ಬಾಗಲಕೋಟ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಕುರಿತಾಗಿ ಸಮಗ್ರವಾಗಿ ಚರ್ಚಿಸುವುದೇ ಈ ಮಹಾಪ್ರಬಂಧದ ಆಶಯ. ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಈ ಮಹಾಪ್ರಬಂಧವು ಒಟ್ಟು ಹನ್ನೆರಡು ಅಧ್ಯಾಯಗಳನ್ನು ಒಳಗೊಂಡಿದೆ. ಮುಖ್ಯವಾಗಿ ಈ ಅಧ್ಯಾಯಗಳು ಈ ಕೆಳಗಿನ ವಸ್ತು ವಿಷಯಗಳನ್ನು ಹೊಂದಿರುತ್ತದೆ.

ಮೊದಲ ಅಧ್ಯಾಯವು ಒಟ್ಟಾರೆ ಮಹಾಪ್ರಬಂಧದ ತಾತ್ವಿಕ ನಿಲುವನ್ನು ಸ್ಥೂಲವಾಗಿ ವಿವರಿಸುತ್ತದೆ. ಇಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ವೈಧಾನಿಕತೆ, ಆಕರ ಸಾಮಗ್ರಿ ಹಾಗೂ ಅಧ್ಯಯನದ ಸಮೀಕ್ಷೆಯನ್ನು ಒಳಗೊಂಡಿದೆ.

ಅಧ್ಯಾಯ ಎರಡು ಬಾಗಲಕೋಟ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ವಿಷಯಗಳ ಕುರಿತು ಇಲ್ಲಿ ಚರ್ಚಿಸಿದೆ. ಜಿಲ್ಲೆಯ ಭೂರಚನೆ, ಖನಿಜ ಸಂಪತ್ತು, ನಿರಾವರಿ, ಮಾನವ ಸಂಪತ್ತಿನ ಕುರಿತು ನಿರೂಪಿಸಲಾಗಿದೆ.

ಅಧ್ಯಾಯ ಮೂರು ರಾಷ್ಟ್ರೀಯತೆ ಮತ್ತು ಸ್ಥಳೀಯ ಬಂಡಾಯದ ಕುರಿತಾಗಿದೆ. ಇಲ್ಲಿ ದೇಶಾಭಿಮಾನಕ್ಕಾಗಿ ಹಿರಿಯ ರಾಷ್ಟ್ರೀಯ ಹೋರಾಟಗಾರರ ಪ್ರಭಾವದಿಂದ ಸ್ಥಳೀಯವಾಗಿನೆ ಹೊರಾಟ ಮಾಡಲು ಆರಂಭಿಸಿದರು. ಸಿಂದಗಿ ಬಂಡಾಯ, ಬದಾಮಿ ಬಂಡಾಯ, ಹಲಗಲಿ ಬಂಡಾಯ ಮುಂತಾದವುಗಳ ಕುರಿತಾಗಿ ಇಲ್ಲಿ ಚರ್ಚಿಸಿದೆ. ಜೊತೆಗೆ ಬಂಡಾಯದಲ್ಲಿ ಭಾಗವಹಿದ ನಾಯಕರ ವಿಚಾರಗಳ ಮಾಹಿತಿಯನ್ನು ನೀಡಲಾಗಿದೆ.

ಅಧ್ಯಾಯ ನಾಲ್ಕು ಸ್ವಾತಂತ್ರ್ಯ ಚಳವಳಿಗೆ ಕಾರಣವಾದ ಅಂಶಗಳು ಮತ್ತು ಸ್ವದೇಶಿ ಚಳವಳಿಯ ಕುರಿತಾಗಿದೆ. ಮುಖ್ಯವಾಗಿ ಚಳವಳಿಗೆ ಪ್ರೇರಣೆಯಾದ ಅಂಶಗಳಲ್ಲಿ ಪಾಶ್ಚಾತ್ಯ ಶಿಕ್ಷಣ, ವೃತ್ತಪತ್ರಿಕೆಗಳು, ಹಿರಿಯ ರಾಷ್ಟ್ರೀಯ ನಾಯಕರ ಪ್ರಭಾವ, ರಂಗಭೂಮಿಯ ನಾಟಕಗಳು, ಜಾನಪದ ಮೌಖಿಕ ಸಾಹಿತ್ಯ, ತೀವ್ರಗಾಮಿಗಳ ಪ್ರಭಾವಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಿದೆ.

ಅಧ್ಯಾಯ ಐದು ಹೋಂ ರೂಲ್ ಮತ್ತು ಅಸಹಕಾರ ಚಳವಳಿಯಾಗಿದೆ. ಇಲ್ಲಿ ಹಿರಿಯ ಕಾಂಗ್ರೆಸ ನಾಯಕರ ಪ್ರಭಾವದಿಂದ ಜಿಲ್ಲೆಯಲ್ಲಿ ಸಾಮಾಜಿಕಾಭಿವೃದ್ಧಿ, ಆರ್ಥಿಕಾಭಿವೃದ್ಧಿಯ ಕುರಿತಾಗಿ ಜನರು ಅಪಾರ ಪ್ರಮಾಣದಲ್ಲಿ ಭಾಗವಹಿಸಿದರು. ಅಸ್ಪೃಶ್ಯತೆಯ ನಿವಾರಣೆ, ದೇವದಾಸಿಯಂತಹ ಮೌಢ್ಯತೆಯ ನಿವಾರಣೆಗೆ ಪುರುಷ ಮತ್ತು ಮಹಿಳೆಯರು ಭಾಗವಹಿಸಿ ಮಹತ್ತರ ಸಾಮಾಜಿಕ ಕಾರ್ಯಗಳನ್ನು ಮಾಡಿದುದರ ಬಗೆಗೆ ನಿರೂಪಿಸದೆ.

ಅಧ್ಯಾಯ ಆರು ಜನಾಂದೋಲನದ ಪೂರ್ವ ಸಿದ್ಧತೆಯ ಕುರಿತು ಮಾಹಿತಿ ನಿಡಲಾಗಿದೆ. ಹರ್ಡೇಕರ್ ಪ್ರಯತ್ನದ ಫಲವಾಗಿ ರಾಷ್ಟ್ರೀಯ ಸೇವಾದಳ ಸ್ಥಾಪಿಸಿ ಯುವಕರಲ್ಲಿ ರಾಷ್ಟ್ರೀಯ ಪರಿಕಲ್ಪನೆಯನ್ನುಂಟು ಮಾಡಿದುದರ ಬಗೆಗೆ ಚರ್ಚಿಸಿದೆ. ಸೇವಾದಳ, ಕರ್ನಾಟಕ ಸರ್ವಪಕ್ಷಗಳ ಸಭೆ, ಸೈಮನ್ ಆಯೋಗದ ಬಹಿಷ್ಕಾರ, ವಿಜಾಪೂರ ಜಿಲ್ಲೆ ರಾಜಕೀಯ ಕೈದಿಗಳ ಪರಿಷತ್ತು ಮುಂತಾದವುಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಅಧ್ಯಾಯ ಏಳು ಕಾನೂನು ಭಂಗ ಚಳವಳಿಯ ಕುರಿತಾಗಿದೆ. ಇಲ್ಲಿ ರಾಷ್ಟ್ರಮಟ್ಟದಿಂದ ಹಿಡಿದು ಸ್ಥಳೀಯ ಮಟ್ಟದವರೆಗೆ ಕಾನೂನು ಭಂಗ ಚಳವಳಿ ಉಂಟು ಮಾಡಿದ ಪ್ರಭಾವದ ಕುರಿತಾಗಿ ಮಾಹಿತಿ ನೀಡಲಾಗಿದೆ. ಖಾದಿ ಪ್ರಚಾರ, ಅರಣ್ಯ ಸತ್ಯಾಗ್ರಹ, ಸ್ವದೇಶಿ ಪ್ರಚಾರ, ಪಾನನಿಷೇಧ ಮುಂತಾದ ಸಂಗತಿಗಳ ಕುರಿತು ಚರ್ಚಿಸಿದೆ.

ಅಧ್ಯಾಯ ಎಂಟು ಅಸ್ಪೃಶ್ಯತೆ ನಿವಾರಣಾ ಮತ್ತು ವೈಯಕ್ತಿಕ ಸತ್ಯಾಗ್ರಹದ ಕುರಿತಾಗಿದೆ. ಇಲ್ಲಿ ಮುಖ್ಯವಾಗಿ ಹಿರಿಯ ವಿಚಾರವಾದಿಗಳು ಅಸ್ಪೃಶ್ಯತೆಯ ನಿವಾರಣೆಗೆ ಕೈಗೊಂಡ ಕ್ರಮಗಳ ಬಗೆಗೆ ಮಾಹಿತಿ

ಕೊಡಲಾಗಿದೆ. ಮಹಾತ್ಮ ಗಾಂಧೀ, ಹರ್ಡೇಕರ್ ಮಂಜಪ್ಪ, ಕೌಜಲಗಿ ಹಣಮಂತರಾವ್ ಇಂತಹ ಅನಿಷ್ಟ ಪದ್ಧತಿಯ ವಿರುದ್ಧ ಹೋರಾಡಿ ಜನಸಾಮ್ಯರಿಗೆ ಜಾಗೃತಿಯನ್ನು ಮೂಡಿಸಿದರ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗಿದೆ.

ಅಧ್ಯಾಯ ಒಂಬತ್ತು ಚಲೇಜಾವ ಚಳವಳಿಯಾಗಿದೆ. ಇಲ್ಲಿ ಜನರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹಲವು ಮಾದರಿಯಲ್ಲಿ ಚಳವಳಿಯನ್ನು ಆರಂಭಿಸಿದರು. ಭೂಗತ ಹೋರಾಟ, ಹಿಂಸಾತ್ಮಕ ಹೋರಾಟ, ಅಂಚೆ ಅಪಹರಣ, ಸರಕಾರಿ ಕಟ್ಟಡಗಳ ನಾಶ, ಖಜಾನೆಗಳ ಲೂಟಿ ಮಾಡುವುದರ ಮೂಲಕ ಬ್ರಿಟಿಷರಿಗೆ ಭಯವನ್ನು ಹುಟ್ಟಿಸಿದರು. ಇಂತಹ ಅಂಶಗಳ ಕುರಿತಾಗಿ ಅಧ್ಯಾಯದಲ್ಲಿ ನಿರೂಪಿಸಿದೆ.

ಅಧ್ಯಾಯ ಹತ್ತು ಸ್ವಾತಂತ್ರ್ಯ ಚಳವಳಿಗಳ ಜೀವನಾಡಿಗಳ ಕುರಿತಾಗಿದೆ. ಇಲ್ಲಿ ಮುಖ್ಯವಾಗಿ ಸ್ವಾತಂತ್ರ್ಯ ಚಳವಳಿಗೆ ಜನರಲ್ಲಿ ಜಾಗೃತಿ ಮೂಡಿಸಿದ ರಂಗಭೂಮಿ, ವೃತ್ತ ಪತ್ರಿಕೆಗಳು, ನಾಟಕಗಳು, ಲಾವಣಿಗಳಂತಹ ಜಾನಪದ ಹಾಡುಗಳ ಮುಖೇನ ರಾಷ್ಟ್ರೀಯ ಪ್ರಜ್ಞೆ ಮೂಡಿಸಿದುದರ ಕುರಿತು ಚರ್ಚಿಸಿದೆ.

ಅಧ್ಯಾಯ ಹನ್ನೊಂದು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಚಳವಳಿಗಾರರ ಕುರಿತಾಗಿದೆ. ಬಾಗಲಕೋಟ ಜಿಲ್ಲೆ ಮತ್ತು ಸುತ್ತಮುತ್ತಲಿನ ಹಿರಿಯ ಚಳವಳಿಗಾರರ ಬಗೆಗೆ ಮಾಹಿತಿ ನೀಡಲಾಗಿದೆ.

ಅಧ್ಯಾಯ ಹನ್ನೆರಡು ಸಮಾರೋಪಕ್ಕೆ ಮೀಸಲಾಗಿದೆ. ಇದು ಎಲ್ಲಾ ಅಧ್ಯಾಯಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಇಲ್ಲಿ ಸಂಶೋಧನೆಯಿಂದ ಕಂಡುಕೊಂಡ ಅಧ್ಯಯನಗಳ ಫಲಿತವನ್ನು ದಾಖಲಿಸಲಾಗಿದೆ.

ಅಧ್ಯಾಯ ೨

ಬಾಗಲಕೋಟ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ೨

ಬಾಗಲಕೋಟ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಇತಿಹಾಸ ಮತ್ತು ಭೂಗೋಳ ಈ ಎರಡೂ ಶಾಸ್ತ್ರಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಇತಿಹಾಸ ರಚನೆಗೊಳ್ಳಬೇಕಾದರೆ ಒಂದು ಪ್ರದೇಶದ ಭೌಗೋಳಿಕ ಅಂಶಗಳು ಮಹತ್ವದ ಪ್ರಭಾವವನ್ನು ಬೀರುತ್ತವೆ. ಆಯಾ ಪ್ರದೇಶಗಳ ರಾಜಕೀಯ ಚರಿತ್ರೆಯು ಹುಟ್ಟಲು ಭೌಗೋಳಿಕ ಅಂಶಗಳು ಕಾರಣವಾಗುವದರ ಜೊತೆಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣವಾಗುತ್ತವೆ. ಆದ್ದರಿಂದ ಬಾಗಲಕೋಟ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯ ಕುರಿತು ಅಧ್ಯಯನ ಮಾಡುವುದಕ್ಕಿಂತ ಮುಂಚಿತವಾಗಿ ಭೌಗೋಳಿಕ ಅಂಶಗಳ ಬಗೆಗೆ ತಿಳಿದುಕೊಳ್ಳುವದು ಅಗತ್ಯವಾಗಿದೆ.

"ಬಾಗಲಕೋಟ ಜಿಲ್ಲೆಯು ಮೊದಲು ವಿಜಾಪೂರ ಜಿಲ್ಲೆಯಲ್ಲಿತ್ತು. ಅಗಸ್ಟ್ ೧೫, ೧೯೯೭ರಲ್ಲಿ ಹೊಸ ಜಿಲ್ಲೆಯಾಗಿ ರಚನೆಗೊಂಡಿತು. ಈ ಜಿಲ್ಲೆಯು ಕರ್ನಾಟಕ ಉತ್ತರ ಒಳನಾಡಿನ ಒಣ ಮತ್ತು ಶುಷ್ಕ ಮೈದಾನದ ಕೇಂದ್ರ ಸ್ಥಾನದಲ್ಲಿದೆ. ಇದು ಭಾರತದ ದಖ್ಖನ್ ಪ್ರಸ್ಥಭೂಮಿಯ ಪಶ್ಚಿಮ ಕರಾವಳಿಯಿಂದ ಸುಮಾರು ೨೦೮ ಕಿ.ಮೀ.ಗಳಷ್ಟು ಒಳಪ್ರದೇಶದಲ್ಲಿದೆ. ೧೫.೨೮ ರಿಂದ ೧೬.೩೩ ಉತ್ತರ ಅಕ್ಷಾಂಶಗಳಲ್ಲಿ ಹಾಗೂ ೭೪.೪೯ ರಿಂದ ೭೬.೨೮ ಪೂರ್ವ ರೇಖಾಂಶಗಳ ಮಧ್ಯದಲ್ಲಿ ಸುಮಾರು ೬೫೮೮.೭೭ ಚ.ಕಿ.ಮೀಗಳಷ್ಟು ಭೂಪ್ರದೇಶವನ್ನು ಆವರಿಸಿದೆ. ಬದಾಮಿ, ಬಾಗಲಕೋಟ, ಬೀಳಗಿ, ಮುಧೋಳ, ಹುನಗುಂದ ಮತ್ತು ಜಮಖಂಡಿ ಎಂಬ ಆರು ತಾಲೂಕುಗಳನ್ನು ಒಳಗೊಂಡಿದೆ. ಅಲ್ಲದೇ ೧೧ ವಿವಿಧ ದರ್ಜೆಯ ನಗರ ಪಟ್ಟಣ, ೫೯ ಗ್ರಾಮಗಳನ್ನು ಒಳಗೊಂಡಿದೆ. ಜಿಲ್ಲೆಯ ಉತ್ತರದಲ್ಲಿ ವಿಜಾಪೂರ ಜಿಲ್ಲೆ, ಪೂರ್ವದಲ್ಲಿ ಕಲಬುರ್ಗಿ ಮತ್ತು ರಾಯಚೂರ ಜಿಲ್ಲೆಗಳು, ದಕ್ಷಿಣದಲ್ಲಿ ಧಾರವಾಡ ಜಿಲ್ಲೆ, ಪಶ್ಚಿಮದಲ್ಲಿ ಬೆಳಗಾವಿ ಜಿಲ್ಲೆಗಳು ಆವೃತಗೊಂಡಿವೆ."[೧]

ಭೂ ರಚನೆ

"ಬಾಗಲಕೋಟ ಜಿಲ್ಲೆಯು ಭಾರತ ಪರ್ಯಾಯ ದ್ವೀಪದ ಒಂದು ಭಾಗವಾಗಿದೆ. ಆದಿಜೀವಿ ವಿಕಲ್ಪದ ಶಿಲಾ ಸಮುದಾಯಗಳು ಕಲಾದಗಿಯ ಅಕ್ಕ ಪಕ್ಕದಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಈ ಶಿಲಾ ಸಮುದಾಯಗಳನ್ನು ಕಲಾದಗಿಯ ಶಿಲಾಸ್ತೋಮಗಳೆಂದು ಕರೆಯುವದು ರೂಢಿಯಲ್ಲಿದೆ. ಇದು ಪೆಂಟೆಕಲ್ಲು, ಮರಳ ಶಿಲೆ, ಫೆಲ್ ಸಣ್ಣಶಿಲೆ ಮೊದಲಾದವುಗಳಿಂದ ರಚಿತಗೊಂಡ ಜಲಜ ಶಿಲೆಯಾಗಿದೆ."[೨] ಈ ಶಿಲಾವರ್ಗವನ್ನು ಪ್ರಥಮವಾಗಿ ಬ್ರೂಸ್‌ಫುಟ್ ಅವರು ಸಂಶೋಧಿಸಿದರು.

"ಈ ಶಿಲೆಗಳ ಮೇಲೆ ಬಹಳ ಕಡೆ ಪದರುಕಲ್ಲುಗಳು ಮುಚ್ಚಿಕೊಂಡಿವೆ. ಜಮಖಂಡಿ ಬಳಿ ಸವೆತದಿಂದ ಕಲಾದಗಿ ವರ್ಗ ಕಾಣಿಸುತ್ತದೆ. ಈ ವರ್ಗದ ಕಳೆವರ್ಗದಲ್ಲಿ ಬೆಣಚುಕಲ್ಲು, ಸುಣ್ಣಕಲ್ಲು,

ಜೇಡಿಶಿಲೆ ಮತ್ತು ಹೆಮಟೈಟ್ ಪದರುಕಲ್ಲುಗಳು ಕಂಡು ಬರುತ್ತವೆ."[೩] ಕಲಾದಗಿ ವರ್ಗದ ಜಲಶಿಲೆಯನ್ನು ಎರಡು ನಿರ್ಧಿಷ್ಟ ಗುಂಪುಗಳಾಗಿ ವಿಂಗಡಿಸಲಾಗಿದೆ.

೧. ಬದಾಮಿ ವರ್ಗ

ಅ. ಕಟಗೇರಿ ರಚನೆ	ಅರ್ಜಿಲೈಟುಗಳು ಮತ್ತು ಡೋಲೊಮೈಟಗಳು
ಬ. ರಾಮದುರ್ಗ ರಚನೆ	ಗುಂಡುಶಿಲೆಗಳು ಮತ್ತು ಕ್ವಾಟ್ಸ್ ಅರೆನೈಟುಗಳು
ಕ. ಮುಧೋಳ ರಚನೆ	ಕ್ವಾರ್ಟ್ಸ್ ಅರೆನೈಟುಗಳು, ಡೋಲೋಮೈಟುಗಳು ಮತ್ತು ಅರ್ಜಿ ಲೈಟುಗಳು

೨. ಕಲಾದಗಿ ವರ್ಗ

ಅ. ಲೋಕಾಪೂರ ರಚನೆ	ಡೋಲೋಮೈಟುಗಳು ಮತ್ತು ಸುಣ್ಣಕಲ್ಲುಗಳು
ಬ. ಬಾಗಲಕೋಟ ರಚನೆ	ಗುಂಡುಶಿಲೆ, ಬೆಣಚುಕಲ್ಲುಗಳು ಮತ್ತು ಬ್ರೆಷಿಯಾ

ಬದಾಮಿ ವರ್ಗದ ಬೆಣಚುಶಿಲೆಯು ಕೆಂಪು ಬಣ್ಣದಾಗಿದ್ದು, ಐಹೊಳೆ ಗುಹಾಲಯಗಳು ಕೆಂಪು ಮರಳು ಕಲ್ಲಿನಲ್ಲಿ ಕೊರೆಯಲ್ಪಟ್ಟಿದೆ. ಕಲಾದಗಿ ವರ್ಗದ ಶಿಲೆಗಳು ಸುಣ್ಣ ಮತ್ತು ಸುಣ್ಣ ಆಧಾರಿತ ಕೈಗಾರಿಕೆಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ."[೪]ಇಲ್ಲಿ ಹಲವು ಮಾದರಿಯ ಕಲ್ಲುಗಳು ಗೋಚರಿಸುತ್ತವೆ.

ಜಲ ಸಂಪತ್ತು

ಕೃಷ್ಣಾ ನದಿ "ಕೃಷ್ಣಾನದಿಗೆ ಸ್ಥಳೀಯರು ಹಿರೇಹೊಳೆ ಎಂದು ಕರೆಯುವರು. ಶಾಸನಗಳಲ್ಲಿ ಇದಕ್ಕೆ 'ಪೆರ್ದೊರೆ' ಎಂದು, ಸಂಸ್ಕೃತದಲ್ಲಿ 'ಕೃಷ್ಣವೇಣಿ' ಅಥವಾ 'ಕೃಷ್ಣವೇಣ್ಣಾ' ಎಂದು ಕರೆಯಲಾಗಿದೆ. ಇದು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕನ್ನು ಮೊದಲು ಪ್ರವೇಶಿಸುತ್ತದೆ. ನಂತರ ಬೀಳಗಿ ತಾಲೂಕಿನ ವಾಯುವ್ಯ ಭಾಗದಲ್ಲಿ ಹರಿಯುವದು. ಬೀಳಗಿ, ಬಾಗಲಕೋಟ, ಹುನಗುಂದ ತಾಲೂಕುಗಳ ಗಡಿರೇಖೆಯಾಗಿ ನದಿ ಹರಿಯುವದು. ಜಮಖಂಡಿ ತಾಲೂಕಿನಲ್ಲಿ ಉತ್ತರ ದಿಕ್ಕಿನ ಕಡೆಗೆ, ಬೀಳಗಿ ತಾಲೂಕಿನ ಗಲಗಲಿಯ ಬಳಿ ಪೂರ್ವದ ಕಡೆಗೆ ಮತ್ತೆ ಪೂರ್ವ ದಕ್ಷಿಣ ಉತ್ತರದ ಕಡೆಗೆ ತಿರುಗುತ್ತಾ ಸಾಗುತ್ತದೆ. ಬೀಳಗಿ ತಾಲೂಕಿನ ಈಶಾನ್ಯದಲ್ಲಿ ಟಕ್ಕಳಕಿಯ ಬಳಿ ಇಬ್ಭಾಗವಾಗಿ ಮತ್ತೆ ಚಿಮ್ಮಲಗಿಯ ಬಳಿ ಒಂದಾಗಿ ಅಲ್ಲಿ ದೊಡ್ಡ ದ್ವೀಪ ನಿರ್ಮಿಸಿದೆ. ಜಮಖಂಡಿ ತಾಲೂಕಿನ ಮುತ್ತೂರು ಮತ್ತು ಶೂರ್ಪಾಲಿ, ಬೀಳಗಿ ತಾಲೂಕಿನ ಗಲಗಲಿ, ದೇವರಗೆಣ್ಣೂರುಗಳು ಈ ನದಿ ಪ್ರದೇಶದ ಪುಣ್ಯ ಕ್ಷೇತ್ರಗಳು."[೫] ಈ ನದಿಯಿಂದ ಈ ಭಾಗದ ಜನತೆಗೆ ತುಂಬ ಸಹಾಯಕಾರಿಯಾಗಿದೆ.

ಘಟಪ್ರಭಾ ನದಿ "ಮುಧೋಳ ನಗರಕ್ಕೆ ಪಶ್ಚಿಮದಲ್ಲಿ ೧೩ ಕಿ.ಮೀ. ದೂರದಲ್ಲಿ ಇದು ಬಾಗಲಕೋಟ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಧೋಳ ಮತ್ತು ಬಾಗಲಕೋಟ ತಾಲೂಕುಗಳ ಮೂಲಕ ಸುಮಾರು ೧೧೨ ಕಿ.ಮೀ. ಪ್ರವಹಿಸುತ್ತದೆ. ಬೀಳಗಿ ತಾಲೂಕಿನ ಹೆರಕಲ್‌ದಲ್ಲಿ ಕೊರೆತ ಉಂಟುಮಾಡಿದೆ. ಚಿಮ್ಮಲಗಿ ಬಳಿ ಗಿರಿಸಾಗರ ಎಂಬಲ್ಲಿ ಕೃಷ್ಣಾ ನದಿಯನ್ನು ಸಂಗಮಿಸುತ್ತದೆ. ಬಾಗಲಕೋಟ, ಮುಧೋಳ ನಗರಗಳು ಈ ನದಿ ದಡದಲ್ಲಿವೆ."[೬]

ಮಲಪ್ರಭಾ ನದಿ "ಇದು ಬದಾಮಿ ಮತ್ತು ಹುನಗುಂದ ತಾಲೂಕುಗಳಲ್ಲಿ ಹರಿಯುತ್ತದೆ. ಕರ್ಲಕೊಪ್ಪದ ಬಳಿ ಬದಾಮಿ ತಾಲೂಕ ಪ್ರವೇಶಿಸುವದು, ನಂತರ ತಾಲೂಕಿನ ನಾಗರಾಳ ಬಳಿ ಪೂರ್ವಕ್ಕೆ ತಿರುಗಿ ಮತ್ತೆ ಉತ್ತರಾಭಿಮುಖವಾಗಿ ನೆಲವಗಿಯವರೆಗೂ ಹರಿದು ಪಟ್ಟದಕಲ್ಲಿನ ಬಳಿ ವಾಯುವ್ಯಕ್ಕೆ ತಿರುಗಿ, ಜಾಲಿಹಾಳದ ಬಳಿ ಈಶಾನ್ಯಕ್ಕೆ ತಿರುಗಿ ಐಹೊಳೆ ಬಳಿ ವಾಯುವ್ಯ ದಿಕ್ಕಿಗೆ ತಿರುಗಿ ಕಮತಗಿಯವರೆಗೂ ಉತ್ತರಾಭಿಮುಖವಾಗಿ ಹರಿದು ಕೂಡಲಸಂಗಮದಲ್ಲಿ ಕೃಷ್ಣಾ ನದಿಯನ್ನು ಸೇರುತ್ತದೆ."[೭]

ಖನಿಜ ಸಂಪತ್ತು

ಸುಣ್ಣಶಿಲೆಗಳು ಕಲಾದಗಿ, ಖಜ್ಜಿಡೋಣಿ, ದೇವನಾಳ, ಬಾಗಲಕೋಟ, ಗದ್ದನಕೇರಿಗಳಲ್ಲಿ ಅಧಿಕವಾಗಿ ದೊರೆಯುತ್ತವೆ.

ಕಬ್ಬಿಣದ ಅದಿರು ಹುನಗುಂದ ತಾಲೂಕಿನ ರಾಮತಾಳದಲ್ಲಿ ಕಬ್ಬಿಣದ ಗಣಿ ಇದೆ. ಇದು ೧೯೬೦ ರಲ್ಲಿ ಸುಮಾರು ೧೦ ಸಾವಿರ ಟನ್ನುಗಳಷ್ಟು ಅದಿರನ್ನು ಉತ್ಪಾದಿಸಿ ದಾಖಲೆ ಹೊಂದಿದೆ. ಈ ಅದಿರಿನಲ್ಲಿ ಶೇ.೬೪.೩೩ ಕಬ್ಬಿಣಾಂಶ, ಶೇ.೬.೩೯ ಸಿಲಿಕ್ ಮತ್ತು ಅಲ್ಯೂಮಿನಿಯಂ, ಶೇ.೦.೦೧೬ ಗಂಧಕ, ಶೇ.೦.೦೧೬ ರಂಜಕವಿದೆ.

ತಾಮ್ರ ಖಜ್ಜಿಡೋಣಿಯಲ್ಲಿ ಸುಣ್ಣದಶಿಲೆ ಪದರುಗಳಲ್ಲಿ ತಾಮ್ರದ ಅದಿರುಗಳ ಗುರುತುಗಳಿವೆ. ಗದ್ದನಕೇರಿ ಸಮೀಪ ಕಲಾದಗಿ ಸುಣ್ಣದ ಶಿಲೆಗಳಲ್ಲಿ ಮ್ಯೂಲಕೈಟ್ ಖನಿಜದ ಹಸಿರು ಕಲೆಗಳು ಮತ್ತು ಕೆಲವು ಕಡೆ ಚಾಲ್ಕೋಪೈರೆಟ್ ಖನಿಜ ಮಚ್ಚೆಗಳು ಕಂಡುಬಂದಿವೆ.

ಸಿಲಿಕ "ಬದಾಮಿ ತಾಲೂಕಿನ ಗುಳೇದಗುಡ್ಡಕ್ಕೆ ೮ ಕಿ.ಮೀ. ದೂರವಿರುವ ದಕ್ಷಿಣದಲ್ಲಿರುವ ಪರ್ವತಿಗುಡ್ಡ ಮತ್ತು ಮರಡಿಗುಡ್ಡಗಳಲ್ಲಿ ಸಿಲಿಕಾ ಅಥವಾ ಮರಳುಗಲ್ಲುಗಳ ನಿಕ್ಷೇಪಗಳಿವೆ. ಅಲ್ಲದೇ ಅಭ್ರಕಕಲ್ನಾರು ಬಾಗಲಕೋಟ ತಾಲೂಕಿನ ಯಲ್ಲನಹಟ್ಟಿಯಿಂದ ೨ಕಿ.ಮೀ. ಆಗ್ನೇಯ ದಿಕ್ಕಿನಲ್ಲಿರುವ ಪ್ರದೇಶದಲ್ಲಿ ಕೆಲವು ಬಿರುಸಾದ ಎಳೆಗಳುಳ್ಳ ಕಲ್ನಾರಿನ ಶಿಲೆಗಳಿವೆ."[೮] ಹೀಗೆ ಜಿಲ್ಲೆಯು ಖನಿಜ ಸಂಪತ್ತನ್ನು ಒಳಗೊಂಡಿದೆ.

ಕೃಷಿ ಮತ್ತು ನೀರಾವರಿ

“ಬಾಗಲಕೋಟ ಜಿಲ್ಲೆಯ ಒಟ್ಟು ೬.೫೯ ಲಕ್ಷ ಹೆಕ್ಟೆರ್ ಭೂಮಿಯಲ್ಲಿ ಕೃಷಿ ಸಾಗುವಳಿಗೆ ೪.೬೭ಲಕ್ಷ ಹೆಕ್ಟೆರ ಭೂಮಿಯನ್ನು ಬಳಸಲಾಗುತ್ತದೆ. ಈ ಕ್ಷೇತ್ರದಲ್ಲಿ ಮೂರು ನದಿಗಳ ದಡಗುಂಟ ಎರೆ ರೇವೆಮಣ್ಣಿನ ಭೂಮಿ, ಬಯಲು ಪ್ರದೇಶದ ಎರಿಭೂಮಿ, ಅರಣ್ಯ ಪ್ರದೇಶಕ್ಕೆ ಹೊಂದಿಕೆಯಾಗಿರುವ ಕೆಂಪು ಮಸಾರಿ ಭೂಮಿ, ಉಸುಕು ಭೂಮಿ ಮತ್ತು ಮಸಾರಿ ಭೂಮಿ ಇದೆ. ಪ್ರಧಾನವಾಗಿ ಜೋಳ, ಹತ್ತಿ, ಕಬ್ಬು, ನೆಲಗಡಲೆ, ಹೆಸರು ಸಜ್ಜೆ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲದೇ ಆಧುನಿಕ ಮಾದರಿಯ ಹಲವು ಬೆಳೆಗಳನ್ನು ಸಹ ಬೆಳೆಯಲಾಗುತ್ತದೆ.”[೯]

ಒಟ್ಟು ಸಾಗುವಳಿ ಪ್ರದೇಶದಲ್ಲಿ ೧.೮೬ ಲಕ್ಷ ಹೆಕ್ಟೆರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ ಪ್ರತಿಶತ ೩೮ ರಷ್ಟು ನೀರಾವರಿ ಪ್ರದೇಶವಿದೆ. ಜಮಖಂಡಿ, ಮುಧೋಳ ಮತ್ತು ಬೀಳಗಿ ತಾಲೂಕಿನಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯಿಂದ ಮತ್ತು ಬದಾಮಿ ತಾಲೂಕು ಮಲಪ್ರಭಾ ಎಡದಂಡೆ ಕಾಲುವೆಯಿಂದ ಹಾಗೂ ಮೂರು ನದಿಗಳ ದಂಡೆಯ ಏತನೀರಾವರಿಯಿಂದ ನೀರುಣಿಸಲಾಗುತ್ತದೆ. “ಘಟಪ್ರಭಾ ಮಲಪ್ರಭಾ ಅಚ್ಚುಕಟ್ಟು ಪ್ರದೇಶ ಬೀಳಗಿ, ಮುಧೋಳ, ಜಮಖಂಡಿ ಮತ್ತು ಬದಾಮಿ ತಾಲೂಕಗಳು ಅನುಕ್ರಮವಾಗಿ ೧೦,೦೦೦ ಹೆಕ್ಟೆರ ಪ್ರದೇಶ ನೀರಾವರಿ ಸೌಲಭ್ಯ ಹೊಂದಿವೆ. ಕೆರೆಗಳಿಂದ ೨,೩೫೫ ಹೆಕ್ಟೆರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ತೋಡುಭಾವಿಯಿಂದ ೨,೮೧,೨೨೦ ಹೆಕ್ಟೆರ ಪ್ರದೇಶ ನೀರಾವರಿಗೆ ಒಳಪಟ್ಟರೆ ಕೊಳವೆ ಬಾವಿಯಿಂದ ೧೦,೫೫೭ ಹೆಕ್ಟೇರ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ನದಿಯ ದಡದ ಪ್ರದೇಶಗಳಲ್ಲಿ ನದಿಯ ನೀರನ್ನು ಪೈಪಲೈನಗಳ ಮೂಲಕ ಬಳಸಲಾಗುತ್ತಿದ್ದು ಇದರಿಂದ ೬೪,೧೧೧ ಹೆಕ್ಟೇರ ಪ್ರದೇಶ ನೀರಾವರಿಗೆ ಒಳಪಟ್ಟಿದೆ.”[೧೦]

ಮಾನವ ಸಂಪತ್ತು

“ಬಾಗಲಕೋಟ ಜಿಲ್ಲೆಯ ೨೦೧೧ರ ಜನಗಣತಿಯ ಪ್ರಕಾರ ಒಟ್ಟು ೧೮,೮೯,೭೫೨ ರಷ್ಟು ಜನಸಂಖ್ಯೆ ಹೊಂದಿದೆ. ಇವರಲ್ಲಿ ೯,೫೦,೧೧೧ ಪುರುಷರಿದ್ದು, ೯,೩೯,೬೪೧ ಸ್ತ್ರೀಯರ ಸಂಖ್ಯೆ ಇದೆ. ಪ್ರತಿ ಸಾಪಿರ ಪುರುಷರಿಗೆ ೯೮೯ ಲಿಂಗಾನುಪಾತವಿದೆ. ಸಾಕ್ಷರತೆಯ ಪ್ರಮಾಣ ಶೇ.೬೮.೮೨ ರಷ್ಟಿದೆ. ಅದರಲ್ಲಿ ಪುರುಷರ ಪ್ರಮಾಣ ೭೯.೨೩ ರಷ್ಟು, ಮಹಿಳೆಯರ ಪ್ರಮಾಣ ೫೮.೪೦ರಷ್ಟಿದೆ”.[೧೧]

ಪೌರಾಣಿಕ ಹಿನ್ನೆಲೆ

ಜಿಲ್ಲೆಯ ಅನೇಕ ಸ್ಥಳಗಳು ರಾಮಾಯಣ, ಮಹಾಭಾರತಗಳೊಂದಿಗೆ ಸಂಬಂಧ ಕಲ್ಪಿಸುವ ಐತಿಹ್ಯಗಳನ್ನು ಹೊಂದಿವೆ. ಜಿಲ್ಲೆಯಲ್ಲಿ ಹರಿಯುವ ಕೃಷ್ಣಾನದಿಯ ಬಗ್ಗೆ ಸ್ಕಂದ, ವಾಯು, ಪದ್ಮ ಹಾಗೂ ಬ್ರಹ್ಮ ಪುರಾಣಗಳಲ್ಲಿ ಮಹಾಭಾರತದ ಸಭಾಪರ್ವದಲ್ಲಿ ಹಾಗೂ ಭೀಷ್ಮಪರ್ವಗಳಲ್ಲಿ, ಮಂಗಳಾಷ್ಟಕ

ಹಾಗೂ ಜಾತಕ ಕಥೆಗಳಲ್ಲೂ ಉಲ್ಲೇಖಿತಗೊಂಡಿದೆ. ಕೃಷ್ಣಾನದಿಯು 'ಸ್ವರ್ಗದಿಂದ ಇಳಿದು ಬಂದ ದಕ್ಷಿಣ ಗಂಗೆ' ಎಂದು ಪ್ರಸಿದ್ಧವಾಗಿದೆ.

"ಕ್ಷತ್ರಿಯ ದ್ವೇಷಿಯಾದ ಪರಶುರಾಮನು ೨೧ ಬಾರಿ ಭೂ ಪ್ರದಕ್ಷಿಣೆ ಮಾಡಿ ಎದುರಾದ ಕ್ಷತ್ರಿಯರನ್ನು ಕೊಂದು ಬರುವಾಗ ತನ್ನ ರಕ್ತಸಿಕ್ತವಾದ ಕೊಡಲಿಯನ್ನು ಐಹೊಳೆ ಬಳಿ ಹರಿಯುತ್ತಿರುವ ಮಲಪ್ರಭಾ ನದಿಯಲ್ಲಿ ಅದ್ದಿದಾಗ ಹೊಳೆಯ ನೀರೆಲ್ಲಾ ಕೆಂಪಾಯಿತು. ಅದನ್ನು ಕಂಡ ಜನ' ಅಯ್ಯೋ ಹೊಳೆ' ಎಂದು ಉದ್ಗರಿಸಿದರಂತೆ ಮುಂದೆ ಅದೇ 'ಐಹೊಳೆ' ಆಯಿತೆಂದು ಸ್ಥಳೀಯರ ನಂಬಿಕೆ."[೧೨]

"ಹುನಗುಂದ ತಾಲೂಕಿನ ನಂದವಾಡಗಿ ನಂದರ ರಾಜಧಾನಿಯಾಗಿತ್ತೆಂದು ಸ್ಥಳೀಯರ ನಂಬಿಕೆ. ರಾಮ ವನವಾಸದಲ್ಲಿದ್ದಾಗ ಈ ಭಾಗಕ್ಕೆ ಬಂದಿದ್ದನೆಂದೂ ಮಹಾಕೂಟ, ಐಹೊಳೆ, ಬದಾಮಿ, ಬಾಗಲಕೋಟ, ಗಲಗಲಿ, ಹಿಪ್ಪರಗಿ ಪ್ರದೇಶಗಳು ರಾಮಾಯಣ ಕಾಲದಲ್ಲಿ ದಂಡಕಾರಣ್ಯ ಪ್ರದೇಶಗಳಾಗಿದ್ದವೆಂದು ಅಭಿಪ್ರಾಯವಿದೆ. ಕುಂದರಗಿ ಗಲಗಲಿಗಳಲ್ಲಿರುವ ಲಿಂಗಗಳು ರಾಮ ಪ್ರತಿಷ್ಠಾಪಿತವೆಂದು ಹೇಳಲಾಗುತ್ತದೆ. 'ಸೀತಿಮನಿ' ರಾಮಾಯಣ ಕಾಲದ ನೆಲೆ ಎಂಬ ಅಭಿಪ್ರಾಯವಿದೆ. ಅಲ್ಲಿ ಸೀತೆಯ ಆರಾಧಕರಿದ್ದಾರೆ. ವನವಾಸದಲ್ಲಿದ್ದ ರಾಮನು ಅಲ್ಲಿದ್ದನೆಂದು ಹೇಳಲಾಗುತ್ತದೆ. ಸೀತಿಮನಿ ಗುಡ್ಡದಾಚೆ ಇರುವ ರಾಮಪುರ, ಜಡರಾಮನಕುಂಟಿ, ಬಿಲ್‌ಕೆರೂರು, ಬೀರಖಬ್ಬಿ ಗ್ರಾಮಗಳ ಸುತ್ತ ರಾಮಾಯಣದ ಕಥೆಗಳು ದಟ್ಟವಾಗಿವೆ. ಲಂಕಾಧಿಪತಿ ರಾವಣನು ವಾದ್ಯ ಮೇಳದವರಿಗೆ ಬಿಟ್ಟ ದತ್ತಿ ಗ್ರಾಮ ಬಾಗಲಕೋಟ ಎಂಬ ಐತಿಹ್ಯವಿದೆ."[೧೩] ಕರ್ನಾಟಕದ ಇತರೆ ಪ್ರದೇಶದಲ್ಲಿರುವಂತೆ ಈ ಜಿಲ್ಲೆಯಲ್ಲಿಯೂ ಪುರಾಣ ಐತಿಹ್ಯಗಳಿವೆ.

"ಐಹೊಳೆ-ಬದಾಮಿಗಳಿಗೆ ಸಂಬಂಧಿಸಿದಂತೆ ಇಲ್ವಲ-ವಾತಾಪಿ ದೈತ್ಯ ಸಹೋದರರ ಕುರಿತು ಪೌರಾಣಿಕ ಕಥೆ ಇದೆ. ಈ ಸಹೋದರರು ಬ್ರಾಹ್ಮಣ ದ್ವೇಷಿಗಳಾಗಿದ್ದರು. ತಮ್ಮಲ್ಲಿ ಬಂದ ಬ್ರಾಹ್ಮಣರನ್ನು ಆತಿಥ್ಯ ನೀಡುವ ನೆಪದಲ್ಲಿ ಕರೆತಂದು ಅಣ್ಣ ವಾತಾಪಿ ಟಗರಿನ ರೂಪ ತಾಳಿ ಅತಿಥಿಗಳಿಗೆ ಆಹಾರವಾಗುತ್ತಿದ್ದ, ಅತಿಥಿ ಆಹಾರ ಸೇವಿಸಿದ ನಂತರ ಇಲ್ವಲನು ವಾತಾಪಿಯನ್ನು ಹೊರಗೆ ಬರುವಂತೆ ಕರೆದಾಗ ವಾತಾಪಿ ಅತಿಥಿಯ ಹೊಟ್ಟೆ ಹರಿದು ಹೊರ ಬರುತ್ತಿದ್ದ. ಅಗಸ್ತ್ಯ ಋಷಿಗಳಿಗೆ ಇದೆ ರೀತಿ ಮಾಡಲು ಮುಂದಾದರು. ಅಗಸ್ತ್ಯರು ಇಲ್ವಲ ನೀಡಿದ ಆಹಾರ ಸೇವಿಸಿದರು. ಇಲ್ವಲ ವಾತಾಪಿಯನ್ನು ಹೊರ ಕರೆದಾಗ ಅಗಸ್ತ್ಯರು 'ವಾತಾಪಿ ಜೀರ್ಣೋದ್ಭವ' ಎಂದು ಹೇಳಿ ಸಹೋದರರ ವಂಚನೆಯನ್ನು ತಡೆದರು. ಇಲ್ವಲನು ಋಷಿಗಳಿಗೆ ತಮ್ಮನ್ನು ಉದ್ಧರಿಸಲು ಮೊರೆ ಹೊಕ್ಕಾಗ ಇಲ್ವಲ ಐಹೊಳೆ ಬಳಿ ಗುಡ್ಡವಾದರೆ ವಾತಾಪಿ ಬದಾಮಿ ಬಳಿ ಗುಡ್ಡವಾದ ಅಗಸ್ತ್ಯರ ನೆನಪಿಗಾಗಿ ಇಂದಿಗೂ ಬದಾಮಿಯಲ್ಲಿ 'ಅಗಸ್ತ್ಯ ಹೊಂಡ'ವಿದೆ."[೧೪]

ಮಹಾಕೂಟ ಸ್ಥಳ ಪುರಾಣದ ಪ್ರಕಾರ ಸಿಂಹಾಸುರ ದೈತ್ಯನನ್ನು ಸಂಹರಿಸಿದ ವಿಷ್ಣು ಇಲ್ಲಿಯ

ಪುಷ್ಕರಣಿಯಲ್ಲಿ ಅದೃಶ್ಯನಾಗಿದ್ದ. ಆದ್ದರಿಂದ ಇಲ್ಲಿಯ ಹೊಂಡಕ್ಕೆ 'ವಿಷ್ಣು ಪುಷ್ಕರ' ಎಂದು ಹೆಸರಿದೆ. ಕಾಶಿರಾಜ ದೇವದಾಸನ ಮಂಗನ ಮುಖದ ಮಗಳು ಈ ಪುಷ್ಕರಣಿಯಲ್ಲಿ ಮುಳಗಿ ಪುನೀತಳಾದಳು, ಆದ್ದರಿಂದ ಮುದಿ ಮಲ್ಲಿಕಾರ್ಜುನ ಹಾಗೂ ವಿರೂಪಾಕ್ಷ ದೇವಾಲಯಗಳನ್ನು ಕಾಶಿರಾಜ ನಿರ್ಮಿಸಿದನೆಂದು ಪ್ರತೀತಿ ಇದೆ.

"ಗಲಗಲಿ ಬಳಿ ಕೃಷ್ಣಾನದಿ ಮಧ್ಯದಲ್ಲಿರುವ ಬಂಡೆಗಳ ಮೇಲೆ ಅಲ್ಲಲ್ಲಿ ತಗ್ಗುಗಳಿದ್ದು ಅವು ಕೃಷ್ಣನ ಕೈಲ್ಲಿದ್ದ ಕೋಲಿನಿಂದ ಊರಿದ ಗುರುತುಗಳು ಎಂಬ ನಂಬಿಕೆ ಇದೆ. ಗಾಲವ ಋಷಿಗಳು ತಪಸ್ಸು ಮಾಡಿದ್ದ ಕ್ಷೇತ್ರವೆ ಗಲಗಲಿ ಆಯಿತೆಂದು ಹೇಳಲಾಗುತ್ತದೆ. ಕಟಗೇರಿಯ ೧೧೧೭ರ ಶಾಸನದಿಂದ ಇಲ್ಲಿ ತ್ರೈಪುರುಷ ದೇವಾಲಯವು ಮಾರೀಚಾಸುರ ಪ್ರತಿಷ್ಠಾಪಿತವೆಂದು ಉಲ್ಲೇಖಿಸುತ್ತದೆ. ಇದು ಜನಮೇಜಯ ನಿರ್ಮಿತ ಅಗ್ರಹಾರವೆಂದು ಕಳಚೂರಿ ಸಂಕಮನ ಕಾಲದ ಶಾಸನ ತಿಳಿಸುತ್ತದೆ. ಮಂಕಣಿ ಗ್ರಾಮವನ್ನು ಮಾರ್ಕಂಡೆಪುರ ಎಂದು ೧೨೦೬ ಶಾಸನ ದಾಖಲಿಸಿದೆ."[೧೫]

ಪ್ರಾಗೈತಿಹಾಸಿಕ ಕಾಲ

ಬಾಗಲಕೋಟ ಜಿಲ್ಲೆಯಲ್ಲಿ ಹಳೆ ಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ, ಮತ್ತು ಬೃಹತ್ ಶಿಲಾಯುಗಕ್ಕೆ ಸೇರಿದ ಹಲವಾರು ನೆಲೆಗಳು ದೊರಕಿವೆ. ಬೃಹತ್ ಶಿಲಾಯುಗದ ಕಾಲಾನಂತರ ಆದಿ ಇತಿಹಾಸ ಕಾಲವು ಆರಂಭಗೊಳ್ಳುತ್ತದೆ. "ಜಿಲ್ಲೆಗೆ ಸಂಬಂಧಿಸಿದ ನೆಲೆಗಳ ಕುರಿತು ರಾಬರ್ಟ್ ಬ್ರೂಸ್ ಫುಟ್‌ರವರ ಕಾಲದಿಂದಲೂ ಅಂದರೆ ಸುಮಾರು ೧೮೭೦ರ ದಶಕದಿಂದ ಆರಂಭಿಸಿ ಇಂದಿನವರೆಗೆ ಹಲವಾರು ವಿದ್ವಾಂಸರು ಸಂಶೋಧನೆ ಕೈಗೊಳ್ಳುತ್ತಾ ಬಂದಿದ್ದಾರೆ. ರಾಬರ್ಟ್ ಬ್ರೂಸ್ ಫುಟ್‌ರವರು ಬದಾಮಿಯ ಸಮೀಪ ಮಲಪ್ರಭಾ ನದಿ ದಂಡೆಯಲ್ಲಿರುವ ಢಾಣಕಶಿರೂರನಲ್ಲಿ ಶಿಲಾಯುಗದ ನೆಲೆ ಪತ್ತೆ ಹಚ್ಚಿ ೧೮೭೩ರಲ್ಲಿ ವರದಿ ಮಾಡಿರುತ್ತಾರೆ".[೧೬]

ಹಳೆ ಶಿಲಾಯುಗ

ಆದಿಹಳೆ ಶಿಲಾಯುಗ ಜಿಲ್ಲೆಯಲ್ಲಿ ಆದಿ ಹಳೆಯ ಶಿಲಾಯುಗ ಕಾಲದ ಅವಶೇಷಗಳು ಬದಾಮಿ ತಾಲೂಕಿನಲ್ಲಿರುವ ಮಲಪ್ರಭಾ ನದಿಯ ಬಯಲು ಪ್ರದೇಶದಲ್ಲಿ ದೊರಕಿವೆ. ಆದಿ ಹಳೆ ಶಿಲಾಯುಗ ಕಾಲಕ್ಕೆ ಸೇರಿದ ಅವಶೇಷಗಳಲ್ಲಿ ಮುಖ್ಯವಾಗಿ ಉಸುಕುಕಲ್ಲಿನಿಂದ ತಯಾರಿಸಿದ ಉಪಕರಣಗಳು ಢಾಣಕಶಿರೂರು, ಖ್ಯಾಡ, ಆಲೂರ (ತಳಕವಾಡ), ತಮಿನಾಳ ಮುಂತಾದ ಕಡೆ ದೊರೆಕಿವೆ. ರಾಬರ್ಟ್ ಬ್ರೂಸ್ ಫುಟ್ ಮತ್ತು ಆರ್.ವಿ. ಜೋಶಿಯವರು ಅವುಗಳ ಅಧ್ಯಯನ ಮಾಡಿರುತ್ತಾರೆ.

"ಎಂ.ಎನ್. ದೇಶಪಾಂಡೆ, ಅ.ಸುಂದರ ಮುಂತಾದವರು ಪಟ್ಟದಕಲ್ಲು, ಐಹೊಳೆ, ಭದ್ರನಾಯಕನ ಜಾಲಿಹಾಳ, ನಂದಿಕೇಶ್ವರ, ಸಿಡಿಲುಪಡಿ, ಸಾಬರಪಡಿ ಮುಂತಾದ ನೆಲೆಗಳು ಈ ಸಂಸ್ಕೃತಿಗೆ ಸೇರಿವೆ. ಈ

ಕಾಲಕ್ಕೆ ಸೇರಿದ ಉಪಕರಣಗಳು ಮುಖ್ಯವಾಗಿ ಕೈಗೊಡಲಿ, ಮಚ್ಚು, ಮತ್ತು ಹೆರೆಯುವ ಚಕ್ಕೆಗಳು ಅಧಿಕವಾಗಿ ದೊರಕುತ್ತವೆ. ಕೆಲವು ಅಂಡಾಕಾರದ ಆಯುಧಗಳು ಈ ಕಾಲಘಟ್ಟದಲ್ಲಿ ದೊರಕಿವೆ. ಇಲ್ಲಿನ ಆಯುಧಗಳ ರಚನಾ ತಂತ್ರಗಾರಿಕೆ ಮತ್ತು ಆಕಾರದನ್ವಯ ಅಶ್ಯೂಲಿಯನ್ ಎಂದು ಗುರುತಿಸಲಾಗಿದೆ".[೧೭]

ಮಧ್ಯ ಹಳೆ ಶಿಲಾಯುಗ

"ಆದಿ ಹಳೆಯ ಶಿಲಾಯುಗ ನಂತರದ ಕಾಲಘಟ್ಟವನ್ನು ಮಧ್ಯ ಹಳೆಶಿಲಾಯುಗ ಕಾಲವೆಂದು ಆ ಕಾಲಕ್ಕೆ ಸೇರಿದ ಉಪಕರಣಗಳ ಅಧಾರದಿಂದ ಗುರುತಿಸಲಾಗುತ್ತದೆ. ಮಲಪ್ರಭಾನದಿ ತಟದ ತಮಿನಹಾಳ, ಸಿಡಿಲುಪಡಿ, ಹುಲ್ಲಿಗೆಮ್ಮನ ಕೊಳ್ಳದ ನಂದಿಕೇಶ್ವರ, ಮಂಗಳೂರಿನ ಕಳ್ಳರ ಪಡೆ ಈ ಸಂಸ್ಕೃತಿಯ ಮುಖ್ಯ ನೆಲೆಗಳು. ಈ ಸಂಸ್ಕೃತಿಗೆ ಸೇರಿದ ಉಪಕರಣಗಳು ಆದಿ ಹಳೆಶಿಲಾಯುಗದ ಉಪಕರಣಗಳಿಗಿಂತ ಗಾತ್ರ ಮತ್ತು ಆಕಾರದಲ್ಲಿ ಚಿಕ್ಕದಾಗಿರುತ್ತದೆ. ಅರೆಪ್ರಶಸ್ತ ಕಲ್ಲುಗಳನ್ನು ಬಳಸಿ ಆಯುಧಗಳನ್ನು ತಯಾರಿಸಿರುವುದನ್ನು ಕಾಣಬಹುದು. ಮುಖ್ಯವಾಗಿ ಚರ್ಟ್, ಅಗೇಟ್, ಜಾಸ್ಪರ ಮುಂತಾದವುಗಳನ್ನು ಬಳಸಿ ರಂಧ್ರಕೊರೆಯುವ ಸೂಜಿಕಲ್ಲುಗಳು, ಮೊನೆಗಳು, ಪೀನ್ ಮತ್ತು ನಿಮ್ನ ಅಂಚಿನ ಅರೆಯುವ ಚಿಕ್ಕ ಆಯುಧಗಳನ್ನು ತಯಾರಿಸಿರುವದು ಕಂಡುಬರುತ್ತದೆ."[೧೮]

ಅಂತ್ಯ ಹಳೆ ಶಿಲಾಯುಗ ಈ ಕಾಲಘಟ್ಟಕ್ಕೆ ಸೇರಿದ ಅವಶೇಷಗಳು ನೀಳ ಚಕ್ಕೆ ಆಯುಧಗಳು ಐಹೊಳೆ ಬೇವಿನಾಳಗಳಲ್ಲಿ ದೊರೆತಿವೆ.

ಸೂಕ್ಷ್ಮಶಿಲಾಯುಗ "ಬದಾಮಿ ಸಮೀಪದ ಸಿಡಿಲು ಪಡಿಯ ಗುಡ್ಡದ ಅಡಿಯ ದಿಣ್ಣೆಯಲ್ಲಿ ಸಹಸ್ರಾರು ಸೂಕ್ಷ್ಮ ಶಿಲಾಯುಧಗಳನ್ನು ಅ.ಸುಂದರ, ರವಿ ಕೋರಿಶೆಟ್ಟರ್, ಮೈಕೆಲ್ ಪೆಟ್ಟಿಗಾವ್ ಮತ್ತು ಇತರ ವಿದ್ವಾಂಸರು ಶೋಧಿಸಿದ್ದಾರೆ. ರಂಗನಾಥ ಬೆಟ್ಟದಲ್ಲಿ ಈ ಕಾಲಕ್ಕೆ ಸೇರಿದ ಉಪಕರಣಗಳನ್ನು ಶೀಲಾಕಾಂತ ಪತ್ತಾರ ಸಂಶೋಧಿಸಿದ್ದಾರೆ. ಹಿರೇಗುಡ್ಡದಲ್ಲಿಯು ಸೂಕ್ಷ್ಮಶಿಲಾಯುಧಗಳು ದೊರಕಿವೆ."[೧೯]

ನವಶಿಲಾಯುಗ "ಬದಾಮಿ ಪರಿಸರದಲ್ಲಿರುವ ಹುಲಿಗೆಮ್ಮನ ಕೊಳ್ಳವು ಬಾಚಿನಗುಡ್ಡದ ಸಮೀಪದ ಆದಿ ಇತಿಹಾಸಕಾಲದ ನೆಲೆಯಾಗಿ ಕಂಡುಬಂದಿದೆ. ಇಲ್ಲಿ ಅ.ಸುಂದರ ಅವರು ಉಜ್ಜಿ ನಯಗೊಳಿಸಿದ ಎರಡು ಕಲ್ಲಿನ ಕೊಡಲಿಗಳು ಮತ್ತು ಬೂದು ವರ್ಣದ ಮೃತ್ಪಾತ್ರೆಯ ಅವಶೇಷಗಳನ್ನು ಶೋಧಿಸಿದ್ದಾರೆ. ಆರ್.ಎಸ್. ಪಂಚಮುಖಿಯವರು ಶಂಖದ ಅಭರಣಗಳನ್ನು ಸಂಗ್ರಹಿಸಿದ್ದಾರೆ. ಇದೇ ಕಾಲಘಟ್ಟಕ್ಕೆ ಸೇರಿದ ಹಲವಾರು ಕೆಮ್ಮಣ್ಣಿನ ಪ್ರಾಣಿ ಮತ್ತು ಮನುಷ್ಯರ ರೇಖಾಚಿತ್ರಗಳು ಬದಾಮಿ, ಐಹೊಳೆ ಮಹಾಕೂಟಗಳ ಕಲ್ಲಾಸರೆ ಬಂಡೆಗಳ ಮೇಲೆ ಕಾಣಬಹುದು".[೨೦] ಅಲ್ಲದೇ ಈ ಜಿಲ್ಲೆಯ ಇನ್ನೂ ಅನೇಕ ಪ್ರದೇಶಗಳಲ್ಲಿ ಶಿಲಾಯುಗದ ಮಾಹಿತಿಗಳು ದೊರೆಯುವ ಸಾಧ್ಯತೆಗಳಿವೆ.

ಬೃಹತ್ ಶಿಲಾಯುಗ "ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ ಅನೇಕ ನೆಲೆಗಳು ಜಿಲ್ಲೆಯಾದ್ಯಂತ ಕಂಡು

ಬಂದಿವೆ. ಬದಾಮಿ ಸರಿಸರದಲ್ಲಿ ಅಕ್ಕರಗಲ್ ಮತ್ತು ಬಾಚಿನಗುಡ್ಡದಲ್ಲಿ ಪತ್ತೆಯಾಗಿರುವ ನೆಲೆಗಳು ಮುಖ್ಯವಾದವು. ಈ ಪರಿಸರದಲ್ಲಿ ನಾಲ್ಕು ಬೃಹತ್ ಶಿಲಾಯುಗದ ಗೋರಿಗಳು ದೊರೆಯುತ್ತವೆ.

೧. ಹಾದಿಕೋಣೆ ಗೋರಿಗಳು

೨. ಕಿಂಡಿಕೋಣೆ ಗೋರಿಗಳು

೩. ವರ್ತುಳ ಕಲ್ಲುಗುಪ್ಪೆ

೪. ಗುಂಡಿ ವೃತ್ತಗಳು

ಬಾಚಿನಗುಡ್ಡದ ಸಮೀಪ ಎರಡು ಕಿಂಡಿ ಕೋಣೆಯ ಕಲ್ಗೋರಿಗಳು ಮತ್ತು ಅಕ್ಕರಗಲ್ ಸಮೀಪದ ಇಪ್ಪತ್ತಕ್ಕೂ ಅಧಿಕ ಕಲ್ಗೋರಿಗಳು ಪತ್ತೆಯಾಗಿವೆ. ಇಲ್ಲಿ ನಿರ್ಮಿಸಿದ ಕಲ್ಗೋರಿಗಳು ಕಣಶಿಲೆಯನ್ನು ಬಳಸಿ ನಿರ್ಮಿಸಿರುವುದನ್ನು ಕಾಣಬಹುದು. ಐಹೊಳೆಯ ಮೇಗುತಿ ದೇವಾಲಯದ ಪೂರ್ವ ಭಾಗದಲ್ಲಿರುವ ಗುಡ್ಡದ ಮೇಲೆ ಸುಮಾರು ಒಂದು ಹೆಕ್ಟೇರ್ ಪ್ರದೇಶದಲ್ಲಿ ೪೫ ಕಲ್ಗೋರಿಗಳು ಇವೆ. ಇವು ಕಿಂಡಿ ಕೋಣೆಯ ಮಾದರಿಯದಾಗಿವೆ. ಕ್ಯಾದಿಗೇರಿ ಗ್ರಾಮದ ಹೊಲದಲ್ಲಿ ಹಾದಿಕೋಣೆ ಗೋರಿಗಳು ಮತ್ತು ವರ್ತುಲ ಕಲ್ಲುಗುಪ್ಪೆಗಳು ಕಂಡು ಬಂದಿವೆ. ಅರವತ್ತಕ್ಕೂ ಅಧಿಕ ಹಾದಿಕೋಣೆ ಗೋರಿಗಳು ಮತ್ತು ವರ್ತುಲ ಕಲ್ಲುಗುಪ್ಪೆಗಳನ್ನು ಅ. ಸುಂದರ ಅವರು ಸಂಶೋಧಿಸಿದ್ದಾರೆ. ಹಾದಿಕೋಣೆ ಗೋರಿಗಳು ಮತ್ತು ಕಿಂಡಿಕೋಣೆ ಗೋರಿಗಳು ಇಲ್ಲಿವೆ. ಒಂದೆ ನೆಲೆಯಲ್ಲಿ ಎರಡು ಪ್ರಕಾರದ ಕಲ್ಗೋರಿಗಳು ದೊರಕಿರುವ ಭಾರತದ ಏಕೈಕ ನೆಲೆ ಇದಾಗಿದೆ. ಬಾಚಿನಗುಡ್ಡದ ಕಲ್ಗೋರಿಗಳನ್ನು ಕಣಶಿಲೆಯಿಂದ ನಿರ್ಮಿಸಲಾಗಿದೆ".[೨೧] ಇವುಗಳು ತುಂಬ ವಿಶಿಷ್ಟ ಮಾದರಿಯಲ್ಲಿವೆ.

ಬದಾಮಿ ತಾಲೂಕಿನ ಪರಿಸರದಲ್ಲಿ ಹರಿಯುವ ಮುಖ್ಯನದಿಗಳು ಜೀವನ ನಿರ್ವಹಣೆಗೆ ಸೂಕ್ತವಾಗಿದ್ದವು. ಜೊತೆಗೆ ತಮ್ಮ ಬದುಕಿಗೆ ಬೇಕಾಗಿರುವ ಆಯುಧಗಳ ರಚನೆಗೆ ಬೇಕಾದ ಶಿಲೆಗಳು ಇಲ್ಲಿ ಹೇರಳವಾಗಿ ದೊರಕುವುದರಿಂದ ಪ್ರಾಗೈತಿಹಾಸಕಾಲದ ಮಾನವನು ಇಲ್ಲಿಯ ಪ್ರದೇಶವನ್ನು ಸ್ವಾಭಾವಿಕವಾಗಿಯೆ ಆಯ್ದುಕೊಂಡಿರುವನು. ಶಿಲಾ, ತಾಮ್ರಯುಗ ಮತ್ತು ನಂತರದ ಕಾಲಘಟ್ಟಗಳಿಗೆ ಸೇರಿದ ನೆಲೆಗಳು ಜಮಖಂಡಿ, ಹುನಗುಂದ ಮತ್ತು ಇತರ ತಾಲೂಕುಗಳಲ್ಲಿ ಕಂಡು ಬರುತ್ತವೆ.

ಇತಿಹಾಸ ಕಾಲ

ಮೌರ್ಯರು

"ದೇಶದ ಇತಿಹಾಸದಂತೆ ರಾಜ್ಯದ ಇತಿಹಾಸವೂ ಮೌರ್ಯರೊಂದಿಗೆ ಆರಂಭಗೊಳ್ಳುತ್ತದೆ. ಕರ್ನಾಟಕದಲ್ಲಿ ಮೌರ್ಯ ಚಕ್ರವರ್ತಿ ಅಶೋಕನ ಕಾಲಕ್ಕೆ ಸೇರಿದ ೧೦ ಕಿರು ಶಿಲಾಲೇಖಗಳು ಹಾಗೂ

ನಾಲ್ಕು ಬೃಹತ್ ಶಿಲಾಲೇಖಗಳು ಚಿತ್ರದುರ್ಗ, ಬಳ್ಳಾರಿ, ರಾಯಚೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಕಂಡುಬಂದಿವೆ. ಆದರೆ ವಿಜಾಪೂರ ಜಿಲ್ಲೆಯಲ್ಲಿ ಅಶೋಕನ ಶಿಲಾ ಶಾಸನಗಳು ಈವರೆಗೆ ಪತ್ತೆಯಾಗಿಲ್ಲ. ಸುಮಾರು ೧೫ನೆಯ ಶತಮಾನದ ಕೃತಿಯಾದ ಸಿಂಗಿರಾಜ ಪುರಾಣವು ಪಟ್ಟದಕಲ್ಲು ಪ್ರದೇಶ ನಂದರಿಗೆ ಒಳಪಟ್ಟಿತ್ತೆಂದು ದಾಖಲಿಸಿದೆ. ನೆರೆಯ ಗುಲ್ಬರ್ಗಾ ಜಿಲ್ಲೆಯ ಸನ್ನತಿ, ಕೊಪ್ಪಳ ಮತ್ತು ಮಸ್ಕಿಗಳಲ್ಲಿ ಅಶೋಕನ ಶಿಲಾಶಾಸನಗಳು ಲಭಿಸಿರುವ ಹಿನ್ನೆಲೆಯಲ್ಲಿ ವಿಜಾಪೂರ ಜಿಲ್ಲೆಯೂ ಮೌರ್ಯರ ಆಡಳಿತಕ್ಕೆ ಒಳಪಟ್ಟಿರುವ ಸಾಧ್ಯತೆಗಳಿವೆ. ಮೌರ್ಯ ಸಾಮ್ರಾಜ್ಯದ ದಕ್ಷಿಣ ಭಾಗವಾಗಿದ್ದ ಈ ಪ್ರದೇಶವನ್ನು 'ಸುವರ್ಣಗಿರಿ' ಎಂದು ಕರೆಯಲಾಗುತಿತ್ತು. ಬ್ರಹ್ಮಗಿರಿ(ಇಸಿಲಾ)ಯಿಂದ ಮಹಾಮಾತ್ರರು ಅಶೋಕನ ಅಧಿಕಾರಿಗಳಾಗಿ ಆಡಳಿತ ನಡೆಸುತ್ತಿದ್ದರೆಂದು ಅಲ್ಲಿಯ ಶಾಸನದಿಂದ ಗೊತ್ತಾಗುತ್ತದೆ".[೨೨] ಹೀಗೆ ಇಲ್ಲಿಯ ಶಾಸನಗಳಿಂದ ಈ ಭಾಗದ ಕುರಿತಾಗಿ ಕೆಲವೊಂದು ಮಾಹಿತಿ ದೊರೆಯುತ್ತವೆ.

ಶಾತವಾಹನರು

"ಶಾತವಾಹನರ ಆಡಳಿತವು ಕರ್ನಾಟಕದ ಉತ್ತರ ಭಾಗ ಒಳಪಟ್ಟಿದ್ದ ಅಂಶ ಅವರ ಕಾಲಕ್ಕೆ ಸೇರಿದ ಬನವಾಸಿ ಮತ್ತು ಸನ್ನತಿ, ಮುಂತಾದ ಕಡೆಗಳಲ್ಲಿಯ ಶಾಸನಗಳಿಂದ ಹಾಗೂ ವಡಗಾಂವ್ ಮಾಧವಪುರ, ಬನವಾಸಿ, ಸನ್ನತಿ, ಐಹೊಳೆ ಮೊದಲಾದ ಸ್ಥಳಗಳಲ್ಲಿ ದೊರೆತಿರುವ ಶಾತವಾಹನ ನಾಣ್ಯಗಳಿಂದ ವೇದ್ಯವಾಗುತ್ತದೆ.

ಜಿಲ್ಲೆಯಲ್ಲಿ ಇದುವರೆಗೆ ಶಾತವಾಹನರ ಕಾಲಕ್ಕೆ ಸೇರಿದ ಶಾಸನಗಳಾವವೂ ವರದಿಯಾಗಿಲ್ಲ. ಆದರೆ ತದ್ದವಾಡಿ, ಮಸ್ಕನಾಳ ಹಾಗೂ ಐಹೊಳೆಗಳಿಂದ ಶಾತವಾಹನರ ಕಾಲದ ನಾಣ್ಯಗಳು ಲಭಿಸಿವೆ. ಹಿಪ್ಪರಗಿಯಲ್ಲಿ ಶಾತವಾಹನರ ಕಾಲದ ತಾಮ್ರದ ನಾಣ್ಯಗಳು ಲಭಿಸಿವೆ. ಇವು ಪ್ರಾಕೃತ ಭಾಷೆ, ಬ್ರಾಹ್ಮಿ ಲಿಪಿಯಲ್ಲಿ ಸಿರಿ ಸತಕಣಿಸ; ವಾಸಿರಿ ಪುತಸ್ ಪುಳಮಾದಿಸ ಮುಂತಾದ ಶಾತವಾಹನ ಅರಸರ ಹೆಸರುಳ್ಳ ಶಾತವಾಹನರ ಕಾಲದಲ್ಲಿ ಪ್ರಮುಖ ಧಾರ್ಮಿಕ ನೆಲೆಗಳಾಗಿದ್ದವೆಂಬ ಅಂಶವನ್ನು ವಿದ್ವಾಂಸರು ಗುರುತಿಸಿದ್ದಾರೆ.

"ಸುಮಾರು ಕ್ರಿ.ಶ. ೧೫೦ರಲ್ಲಿ ಈಜಿಪ್ತ್ ಪ್ರವಾಸಿ ಟಾಲೆಮಿಯಿಂದ ರಚನೆಗೊಂಡಿರುವ 'ಎ ಗೈಡು ಟು ದಿ ಜಿಯೋಗ್ರಫಿ' ಗ್ರಂಥದಲ್ಲಿ ಜಿಲ್ಲೆಯ ಬದಾಮಿ, ಪಟ್ಟದಕಲ್ಲು, ಇಂಡಿ, ಕಲಕೇರಿಗಳು ದಾಖಲಿಸಲ್ಪಟ್ಟಿದ್ದು, ಇದರಿಂದ ಆ ವೇಳೆಗಾಗಲೇ ಈ ಪಟ್ಟಣಗಳು ಪ್ರಮುಖ ವಾಣಿಜ್ಯ ಕೇಂದ್ರಗಳಾಗಿ ಬೆಳೆದಿದ್ದ ಅಂಶ ಸ್ಪಷ್ಟವಾಗುತ್ತದೆ. ಶಾತವಾಹನರ ಕಾಲದಲ್ಲಿ ದಕ್ಷಿಣ ಭಾರತವು ವಿಶೇಷವಾಗಿ ರೋಮನ್‌ರೊಂದಿಗೆ ವಾಣಿಜ್ಯ ವ್ಯಾಪಾರ ಸಂಪರ್ಕವನ್ನು ಹೊಂದಿದ್ದು, ದಕ್ಷಿಣ ಭಾರತದ ವಿವಿಧ ಸ್ಥಳಗಳಿಂದ ದೊರತಿರುವ ರೋಮನ್ ನಾಣ್ಯಗಳಿಂದ ಇದು ಸ್ಪಷ್ಟವಾಗುತ್ತದೆ. ಈವರೆಗೆ ಜಿಲ್ಲೆಯಲ್ಲಿ ೨೨ ರೋಮನ್ ನಾಣ್ಯಗಳು ದೊರೆತಿವೆ ಎಂದು ಕಾತ್ರಾಳದಿಂದ ತಿಳಿದು ಬರುತ್ತದೆ. ಅವುಗಳಲ್ಲೊಂದನ್ನು

ಐದನೆಯ ಶತಮಾನದಲ್ಲಿದ್ದ ಬೈಜಾಂಟಿನ್ ದೊರೆ ಒಂದನೆಯ ಲಿಯೋನದೆಂದು ವಿದ್ವಾಂಸರು ಗುರುತಿಸಿದ್ದಾರೆ."[೨೩]

ಕದಂಬರು

"ಕರ್ನಾಟಕವನ್ನಾಳಿದ ಕನ್ನಡ ಮೂಲದ ಮೊಟ್ಟ ಮೊದಲ ರಾಜಮನೆತನ ಬನವಾಸಿ ಕದಂಬರದು. ಬದಾಮಿ ಪರಿಸರದಿಂದ ಇತ್ತೀಚೆಗೆ ಸುಡಾವೆ ಮಣ್ಣಿನ ದ್ವಿಬಾಹು ನರಸಿಂಹ, ಗಣಪತಿ ಹಾಗೂ ಪಟ್ಟದಕಲ್ಲಿನ ತೀರ್ಥಂಕರ ಮೂರ್ತಿ ಶಿಲ್ಪಗಳು ಕಂಡುಬಂದಿವೆ. ಇವು ಆದಿ ಕದಂಬರದಿರಬಹುದೆಂದು ಅಭಿಪ್ರಾಯವಿದೆ. ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿ ಜೈನ ನಾರಾಯಣ ಗುಡಿಯ ಎಡಭಾಗದಲ್ಲಿ ಬಾದಾಮಿ ಚಾಲುಕ್ಯ ಪೂರ್ವ ಕಾಲಕ್ಕೆ ಸೇರಿದ ಇಟ್ಟಿಗೆಯ ಎರಡು ದೇವಾಲಯಗಳ ಅವಶೇಷಗಳಿವೆ. ಇದೇ ರೀತಿ ಐಹೊಳೆಯಲ್ಲಿರುವ ಬಾದಾಮಿ ಚಾಲುಕ್ಯರ ಕಾಲದ ಅಂಬಿಗೇರಗುಡಿ ಹಾಗೂ ಪಟ್ಟದಕಲ್ಲಿನ ಸಂಗಮೇಶ್ವರ ದೇವಾಲಯವು ಕೂಡ ಚಾಲುಕ್ಯ ಪೂರ್ವ ಕಾಲದ ಇಟ್ಟಿಗೆಯ ರಚನೆಯ ಮೇಲಿವೆ".[೨೪]

ಬದಾಮಿ ಚಾಲುಕ್ಯರು

ಬದಾಮಿ ಚಾಲುಕ್ಯರು ಬಾಗಲಕೋಟ ಜಿಲ್ಲೆಯ ಬದಾಮಿ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೨೫೦ ವರ್ಷಗಳ ಕಾಲ ಆಳಿದ್ದಾರೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಸಾಮ್ರಾಜ್ಯ ನಿರ್ಮಿಸಿದರು.

ಒಂದನೆಯ ಪುಲಕೇಶಿ ಸುಮಾರು ಶತಮಾನಗಳ ಕಾಲ ಅಧಿಕಾರದಲ್ಲಿದ್ದ ಇವನಿಗೆ ಸಂಬಂಧಿಸಿದಂತೆ ಬದಾಮಿ ಬಂಡೆಗಲ್ಲು ಶಾಸನ ಮಹತ್ವದ ಅಂಶವನ್ನು ನೀಡುತ್ತದೆ. ಶಕ ಸಂವತ್ಸರದ ಪ್ರಾಚೀನ ಉಲ್ಲೇಖವನ್ನು ಹೊಂದಿರುವ ಈ ಶಾಸನದ ಕಾಲ ಶಕ ೪೬೫ (ಕ್ರಿ.ಶ. ೫೪೩). ಶತ್ರುಗಳು ಸುಲಭವಾಗಿ ಪ್ರವೇಶಿಸಲು ಆಗದಂತಹ ಅಭೇದ್ಯವಾದ ಗಿರಿದುರ್ಗವನ್ನು ಬದಾಮಿಯಲ್ಲಿ ನಿರ್ಮಿಸಿ ಅಶ್ವಮೇಧ, ಹಿರಣ್ಯಗರ್ಭ, ವಾಜಪೇಯ, ಅಗ್ನಿಸ್ತೋಮ ಮುಂತಾದ ಯಾಗ-ಯಜ್ಞಗಳನ್ನು ಪುಲಕೇಶಿಯು ನೆರವೇರಿಸಿದನೆಂದು ಈ ಶಾಸನ ತಿಳಿಸುತ್ತದೆ.

ಮಂಗಳೇಶನ ಮಹಾಕೂಟ ಶಾಸನದಿಂದ ಒಂದನೆಯ ಪುಲಕೇಶಿಗೆ ಬಪ್ಪುರ ವಂಶದ ದುರ್ಲಭದೇವಿ ಎಂಬ ರಾಣಿ ಇದ್ದ ಅಂಶ ಗೊತ್ತಾಗುತ್ತದೆ. ಇವನಿಗೆ ಧರ್ಮ ಮಹಾರಾಜ, ಸತ್ಯಾಶ್ರಯ, ಶ್ರೀಪೃಥ್ವಿವಲ್ಲಭ, ರಣವಿಕ್ರಮ ಮುಂತಾದ ಬಿರುದುಗಳಿದ್ದವು. ಇವನು ಕದಂಬ ಇಮ್ಮಡಿ ಕೃಷ್ಣವರ್ಮನನ್ನು ಸೋಲಿಸಿ ಚಾಲುಕ್ಯ ಸಾಮ್ರಾಜ್ಯದ ಸ್ಥಾಪನೆಗೆ ಮುಂದಾದನೆಂಬ ಅಭಿಪ್ರಾಯವಿದೆ. ಸೇಂದ್ರಕ ಮನೆತನದ ಶ್ರೀವಲ್ಲಭ ಇವನ ಸಾಮಂತನಾಗಿದ್ದನು. ಇವನು ಅಳುಪರನ್ನೂ ಪರಾಜಯಗೊಳಿಸಿದನು.

ಒಂದನೆಯ ಕೀರ್ತಿವರ್ಮ ಒಂದನೆಯ ಪುಲಕೇಶಿಯ ನಂತರ ಅಧಿಕಾರಕ್ಕೆ ಬಂದ ಇವನು ಸಮರ್ಥನಿದ್ದು, ಚಾಲುಕ್ಯ ಸಾಮ್ರಾಜ್ಯದ ಸ್ಥಿರತೆ ಹಾಗೂ ಗಡಿ ವಿಸ್ತರಣೆಗೆ ಮುಂದಾದ ಅಂಶ ಅವನ ಶಾಸನಗಳಿಂದ ವೇದ್ಯವಾಗುತ್ತದೆ. ಇವನು ಅವಸಾನದ ಅಂಚಿನಲ್ಲಿದ್ದ ಕದಂಬರನ್ನು ಬೇರು ಸಹಿತ ಕಿತ್ತು ಹಾಕುವಲ್ಲಿ ಯಶಸ್ವಿಯಾದನೆಂದು ಶಾಸನದಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಇವನು ಗಂಗ, ನಳ ಹಾಗೂ ಕೊಂಕಣದ ಮೌರ್ಯರನ್ನೂ ಸೋಲಿಸಿ ಅವರ ರಾಜ್ಯಗಳನ್ನೂ ಸ್ವಾಧೀನಪಡಿಸಿಕೊಂಡನು. ಅಲ್ಲದೇ ಉತ್ತರದ ಅಂಗವಂಗ, ಕಳಿಂಗ, ಮಗಧ, ಮಟ್ಟೂರ, ವಜ್ರಕ, ದಕ್ಷಿಣ ಕೇರಳ, ಮೂಷಕ, ಪಾಂಡ್ಯ, ಚೋಳ ಹಾಗೂ ಅಳುಪರನ್ನು ಗೆದ್ದನೆಂದು ಶಾಸನಗಳು ವರ್ಣಿಸಿವೆ. "ಒಂದನೆಯ ಕೀರ್ತಿವರ್ಮನ ಆಳ್ವಿಕೆಯಲ್ಲಿ ಬದಾಮಿಯ ಮೂರನೆಯ ಗುಹಾಲಯವನ್ನು (ವಿಷ್ಣು ದೇವಾಲಯ) ಇವನ ಸಹೋದರನಾದ ಮಂಗಳೇಶನು ಅಣ್ಣನ ಆದೇಶದಂತೆ ೫೭೮ರಲ್ಲಿ ಕೊರೆಸಿ, ವಿಷ್ಣು ಪ್ರತಿಷ್ಠೆಯನ್ನು ಮಾಡಿ, ನಾರಾಯಣ ಬಲಿ ಮುಂತಾದ, ಧಾರ್ಮಿಕ ಕಾರ್ಯಗಳ ನಿರ್ವಹಣೆಗೆಂದು ನಂದಿಕೇಶ್ವರ ಗ್ರಾಮವನ್ನು ದತ್ತಿ ನೀಡಿ ಈ ಧರ್ಮಕಾರ್ಯದಿಂದ ಬರುವ ಪುಣ್ಯವು ತನ್ನ ಅಣ್ಣನಿಗೆ ಸಂದಾಯವಾಗಲೆಂದು ಬಯಸಿದ ಅಂಶವನ್ನು ಬದಾಮಿಯ ಮೂರನೆಯ ಗುಹಾಲಯದಲ್ಲಿರುವ ೫೭೮ರ ಶಾಸನ ತಿಳಿಸುತ್ತದೆ."[೨೫]

ಮಂಗಳೇಶ ಅಣ್ಣ ಕೀರ್ತಿವರ್ಮನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದುದರಿಂದ, ಚಾಲುಕ್ಯ ಸಿಂಹಾಸನವನ್ನು ಏರುವ ಅವಕಾಶ ಸಹೋದರ ಮಂಗಳೇಶನಿಗೆ ಸುಮಾರು ೫೯೭ರಲ್ಲಿ ಒದಗಿ ಬಂತು. ಅಣ್ಣನ ಮಕ್ಕಳು ಪ್ರಾಪ್ತ ವಯಸ್ಕರಾಗುವವರೆಗೆ, ಸಾಮ್ರಾಜ್ಯದ ಸಂರಕ್ಷಣೆಯ ಹೊಣೆ ಇವನದಾಗಿತ್ತು. ಅದರಂತೆ ಮಂಗಳೇಶನು ಅಧಿಕಾರ ಸೂತ್ರ ವಹಿಸಿಕೊಳ್ಳುತ್ತಿದಂತೆ ಗುಜರಾತ ಹಾಗೂ ಖಾಂದೇಶ ಪ್ರದೇಶಗಳ ಮೇಲೆ ಹಿಡಿತ ಹೊಂದಿದ್ದ ಕಳಚೂರಿ ಅರಸರಾದ ಶಂಕರಗಣ ಮತ್ತು ಬುದ್ಧರಾಜರನ್ನು ಸೋಲಿಸಿ ಅವರಿಂದ ಆ ಪ್ರದೇಶಗಳನ್ನು ವಶಪಡಿಸಿಕೊಂಡನು. ಶಂಕರಗಣ ಯುದ್ಧರಂಗದಲ್ಲಿ ಮರಣ ಹೊಂದಿದರೆ, ಬುದ್ಧರಾಜ ಸಂಪೂರ್ಣ ಸೋತು ಶರಣಾದನು. ಇವನು ರೇವತಿ ದ್ವೀಪವನ್ನು ಆಳುತ್ತಿದ್ದ ಸ್ವಾಮಿರಾಜನನ್ನು ಸೋಲಿಸಿ ಅದನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು.

ಮಂಗಳೇಶನಿಗೆ ಅಧಿಕಾರ ದಾಹದಿಂದಾಗಿ ಅಣ್ಣನ ಮಗನಾದ ಇಮ್ಮಡಿ ಪುಲಕೇಶಿಗೆ ಅಧಿಕಾರ ಹಸ್ತಾಂತರಿಸುವ ವಿಷಯ ರುಚಿಸಲಿಲ್ಲ. ಇದನ್ನು ಮನಗಂಡ ಇಮ್ಮಡಿ ಪುಲಕೇಶಿ ಮತ್ತವನ ಸಹೋದರರು ಸಂಬಂಧಿಕರಾದ ಬಾಣರ ಆಶ್ರಯ ಪಡೆದು ಬೆಂಬಲಿಗರೊಂದಿಗೆ ಒಗ್ಗೂಡಿ, ಚಿಕ್ಕಪ್ಪ ಮಂಗಳೇಶನ ವಿರುದ್ಧ ದಂಗೆ ಎದ್ದರು. ಮುಂದೆ ಯುದ್ಧದಲ್ಲಿ ಪುಲಕೇಶಿಯು ಮಂಗಳೇಶನನ್ನು ಕೊಂದು ಜಯಶಾಲಿಯಾದನೆಂದು ಆಂಧ್ರ ಪ್ರದೇಶದ ಗೂಟಿ ತಾಲೂಕಿನ ಪೆದ್ದವಡಗೂರು ಶಿಲಾಶಾಸನ ತಿಳಿಸುತ್ತದೆ.

"ಮಂಗಳೇಶನಿಗೆ ರಣವಿಕ್ರಮ, ಉರುರಣಪರಾಕ್ರಮ, ಸಿಂಹವಿಕ್ರಮ ಮುಂತಾದ

ಬಿರುದುಗಳಿದ್ದವು. ಇವನ ಆಳ್ವಿಕೆಯಲ್ಲಿ ಮಲತಾಯಿಯಾದ ದುರ್ಲಭದೇವಿಯು ಮುಕುಟೇಶ್ವರ ದೇವಾಲಯಕ್ಕೆ ಇನ್ನೂ ಹತ್ತು ಗ್ರಾಮಗಳನ್ನು ದಾನ ಬಿಟ್ಟ ವಿಷಯವನ್ನು ಮಂಗಳೇಶ ಮಹಾಕೂಟ ಸ್ತಂಭ ಶಾಸನ ತಿಳಿಸುತ್ತದೆ. ಇವನ ಆಳ್ವಿಕೆಯ ಅವಧಿಯಲ್ಲಿ ಐಹೊಳೆಯ ರಾವಳಫಡಿ ಗುಹಾಲಯವು ನಿರ್ಮಾಣಗೊಂಡಿತು".[೨೬]

ಇಮ್ಮಡಿ ಪುಲಕೇಶಿ ಒಂದನೆಯ ಕೀರ್ತಿವರ್ಮನ ಹಿರಿಯ ಮಗನಾದ ಇಮ್ಮಡಿ ಪುಲಕೇಶಿಯ ಜನ್ಮನಾಮ ಎರೆಯ ಎಂದಿದ್ದಿರಬೇಕೆಂದು ಪೆದ್ದವಗೂರು ಶಾಸನದಿಂದ ಗೊತ್ತಾಗುತ್ತದೆ. ಆದರೆ ಈತ ಹೆಚ್ಚು ಜನಾದರಕ್ಕೆ ಒಳಗಾದದ್ದು ತಾತನ ಹೆಸರಿನಿಂದಲೇ. ಇದನ್ನು ಚಾಲುಕ್ಯ ಶಾಸನಗಳು ಸಮರ್ಥಿಸುತ್ತವೆ. ಬಾಲಕನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡು ಚಿಕ್ಕಪ್ಪ ಮಂಗಳೇಶನ ಆಶ್ರಯದಲ್ಲಿ ಬೆಳೆಯುತ್ತಿದ್ದ ಪುಲಕೇಶಿ ಮತ್ತವನ ಸಹೋದರರು ಪ್ರೌಢರಾಗುತ್ತಿದ್ದಂತೆ ಚಿಕ್ಕಪ್ಪನಲ್ಲಿದ್ದ ಅತಿಯಾದ ಅಧಿಕಾರ ದಾಹದಿಂದ ಬೆಚ್ಚಿ ತಮ್ಮ ಸಂಬಂಧಿಕರಾದ ಬಾಣರಲ್ಲಿ ಆಶ್ರಯ ಪಡೆದು, ಚಿಕ್ಕಪ್ಪನ ವಿರುದ್ಧ ಬಂಡೆದ್ದು, ಯುದ್ಧರಂಗದಲ್ಲಿ ಮಂಗಳೇಶನನ್ನು ಕೊಂದು ಅಧಿಕಾರವನ್ನು ಗಳಿಸುವಲ್ಲಿ ಯಶಸ್ವಿಯಾದರು. ತತ್ಪರಿಣಾಮವಾಗಿ ಇಮ್ಮಡಿ ಪುಲಿಕೇಶಿ ಚಾಲುಕ್ಯ ಸಿಂಹಾಸನವನ್ನು ೬೦೮ ರಲ್ಲಿ ಆರೋಹಣ ಮಾಡಿದನು.

ಪುಲಕೇಶಿ ಅಧಿಕಾರಕ್ಕೆ ಬರುತ್ತಿದ್ದಂತೆ ಎದುರಾದ ಸಮಸ್ಯೆಗಳು ಮತ್ತು ಅವನು ಕೈಗೊಂಡ ದಿಗ್ವಿಜಯಗಳ ಬಗ್ಗೆ ಅವನ ಆಸ್ಥಾನ ಕವಿ ಆಗಿದ್ದ ರವಿಕೀರ್ತಿಯಿಂದ ರಚಿಸಲ್ಪಟ್ಟಿದ್ದೆಂದು ಹೇಳಲಾಗುವ ೬೩೪ರ ಐಹೊಳೆ ಪ್ರಶಸ್ತಿ ಶಾಸನ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ಇಮ್ಮಡಿ ಪುಲಕೇಶಿಯು ಮಂಗಳೇಶನನ್ನು ಸದೆಬಡಿದು ಸಿಂಹಾಸನವನ್ನು ಏರುತ್ತಿದ್ದಂತೆ ಚಾಲುಕ್ಯ ಸಾಮ್ರಾಜ್ಯದ ಅಂತಃಕಲಹದ ಲಾಭ ಪಡೆದು ರಾಷ್ಟ್ರಕೂಟ ದಂಡನಾಯಕರಾದ ಅಪ್ಪಾಯಿಕ ಹಾಗೂ ಗೋವಿಂದರ ಬಂಡಾಯವನ್ನು ಎದುರಿಸಬೇಕಾಯಿತು. ಭೀಮಾನದಿ ತೀರದ ಮೇಲೆ ಜರುಗಿದ ಈ ಸಂಘರ್ಷದಲ್ಲಿ, ಅಪ್ಪಾಯಿಕ ಸೋತು ಹೆದರಿ ಪಲಾಯನ ಮಾಡಿದರೆ ಗೋವಿಂದ ಶರಣಾದನು. ಬನವಾಸಿಯ ಕದಂಬರು. ತುಳನಾಡಿನ ಆಳುಪರು, ತಲಕಾಡಿನ ಗಂಗರು ಹಾಗೂ ಕೊಂಕಣದ ಮೌರ್ಯರನ್ನು ಸೋಲಿಸಿದ. ಪುಲಕೇಶಿಯ ದಾಳಿಗೆ ಹೆದರಿ ಲಾಟ, ಮಾಳವ ಹಾಗೂ ಗುರ್ಜರು ಯಾವದೇ ಪ್ರತಿಭಟನೆಗಳಿಲ್ಲದೆ ಶರಣಾದರು. ಈ ದಿಗ್ವಿಜಯಗಳಿಂದಾಗಿ ಪುಲಕೇಶಿಯ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ ನದಿಯವರೆಗೆ ವ್ಯಾಪಿಸಿದ್ದು, ಅವನನ್ನು ೯೯,೦೦೦ ಹಳ್ಳಿಗಳನ್ನುಳ್ಳ ಮಹಾರಾಷ್ಟ್ರಕತ್ರಯ ಪ್ರದೇಶದ ಸಾರ್ವಭೌಮನಾದನೆಂದು ಐಹೊಳೆ ಶಾಸನ ಉಲ್ಲೇಖಿಸಿದೆ. ಇದರ ನೆನಪಾಗಿ 'ಪರಮೇಶ್ವರ' ಎಂಬ ಬಿರದನ್ನೂ ಧರಿಸಿದ. ಈ ದಿಗ್ವಿಜಯಗಳಿಂದಾಗಿ ಪುಲಕೇಶಿ ಸಹಜವಾಗಿ ನರ್ಮದೆಯಾಚೆ ಇದ್ದ ಕನೂಜನ ಹರ್ಷವರ್ಧನನ್ನು ಎದುರಿಸಬೇಕಾಯಿತು. ನರ್ಮದಾ ನದಿ ಇವರಿಬ್ಬರ ಸಾಮ್ರಾಜ್ಯಗಳ ಗಡಿಯಾಯಿತು. ಇಮ್ಮಡಿ ಪುಲಕೇಶಿ 'ದಕ್ಷಿಣ ಪಥೇಶ್ವರ' ಎಂಬ ಬಿರುದನ್ನು ಧರಿಸಿದನು. ಪುಲಕೇಶಿಯ ವಿರುದ್ಧ ಶಿಲಾದಿತ್ಯ(ಹರ್ಷವರ್ಧನ)ನು ವಿಫಲಗೊಂಡ ವಿಷಯವನ್ನು ಚೀನಿ ಯಾತ್ರಿಕ ಹ್ಯೂವೆನ್‌ತ್ಸಾಂಗ್ ಕೂಡ ದಾಖಲಿಸಿದ್ದಾನೆ.

ದಿಗ್ವಿಜಯ ಮುಂದುವರೆಸಿ ಕೋಸಲ, ಕಳಿಂಗ, ವೆಂಗಿ ಪ್ರದೇಶಗಳನ್ನು ವಶಪಡಿಸಿಕೊಂಡನು. ಈ ದಿಗ್ವಿಜಯದ ಸಂದರ್ಭದಲ್ಲಿ ಪಲ್ಲವ ಸಾಮಂತನಾದ ವೆಂಗಿಯ ಪೃಥ್ವಿ ಧ್ರುವರಾಜನನ್ನು ಕೊಲ್ಲೂರು ಯುದ್ಧದಲ್ಲಿ ಪುಲಕೇಶಿಯು ತನ್ನ ಸಾಮಂತ ಹಾಗೂ ಮಾವನಾದ ಆಳುಪ ಮಹಾರಾಜನ ನೆರವಿನೊಂದಿಗೆ ಸೋಲಿಸಿ ಜಯಶೀಲನಾದನು. ಮಾವನ ಹೆಸರಲ್ಲಿ ರಾಣಿ ಕದಂಬ ಮಹಾದೇವಿಯ ಬೇಡಿಕೆಯಂತೆ ಪುಲಕೇಶಿಯು ಗ್ರಾಮವೊಂದನ್ನು ಅಗ್ರಹಾರಕ್ಕೆ ದತ್ತಿ ನೀಡಿದ ಅಂಶವನ್ನು ೬೧೩ರ ಮರೂರ ತಾಮ್ರ ಶಾಸನ ತಿಳಿಸುತ್ತದೆ. ತನ್ನ ಸಾಮ್ರಾಜ್ಯವನ್ನು ಪರಿಣಾಮಕಾರಿಯಾಗಿ ಆಳುವ ದೃಷ್ಟಿಯಿಂದ ತಾಟ ಪ್ರದೇಶಕ್ಕೆ ಸೋದರ ಧಾರಾಶ್ರಯ ಜಯಸಿಂಹನನ್ನು ವೆಂಗಿ ಪ್ರಾಂತ್ಯಕ್ಕೆ ಇನ್ನೊಬ್ಬ ತಮ್ಮ ಕುಬ್ಜ ವಿಷ್ಣುವರ್ಧನನನ್ನು ಪ್ರಾಂತಾಧಿಕಾರಿಗಳನ್ನಾಗಿ ಮಾಡಿದನು. ಪುಲಕೇಶಿಯ ಸೈನ್ಯಕ್ಕೆ 'ಕರ್ನಾಟಕಬಲ' ಎಂದೇ ಸಂಬೋಧಿಸಲಾಗುತಿತ್ತು. ಅದರ ಕೀರ್ತಿ ನರ್ಮದೆಯಾಚೆಗೂ ಪಸರಿಸಿತು. ಉತ್ತರ-ಪೂರ್ವ-ಪಶ್ಚಿಮ ದಿಗ್ವಿಜಯಗಳ ನಂತರ ಪುಲಕೇಶಿ ಸಹಜವಾಗಿ ದಕ್ಷಿಣದ ಪಲ್ಲವ, ಚೋಳ, ಚೇರ ಹಾಗೂ ಪಾಂಡ್ಯರತ್ತ ಗಮನ ಹರಿಸಿಧನು. ಚೋಳ, ಚೇರ, ಪಾಂಡ್ಯರು ಶರಣಾದರು. ಪಲ್ಲವ ಚಕ್ರವರ್ತಿ ಒಂದನೆಯ ಮಹೇಂದ್ರವರ್ಮನು ಚಾಲುಕ್ಯ ಸೈನ್ಯದ ದಾಳಿಯನ್ನು ಹಿಮ್ಮೆಟ್ಟಿಸಲಾಗದೆ ಸೋತನು. ಆದರೆ ಪಲ್ಲವ ಮಹೇಂದ್ರವರ್ಮನ ನಂತರ ಅಧಿಕಾರಕ್ಕೆ ಬಂದ ನರಸಿಂಹವರ್ಮನ ಆಳ್ವಿಕೆಯಲ್ಲಿ ಪುಲಕೇಶಿ ಪೆರಿಯಾಳ, ಮಣಿಮಂಗಳ ಹಾಗೂ ಸುರಮಾರಗಳಲ್ಲಿ ಜರುಗಿದ ಕಾಳಗದಲ್ಲಿ ಸೋತನು. ನರಸಿಂಹವರ್ಮ ಮೇಲುಗೈ ಸಾಧಿಸಿದುದಷ್ಟೆ ಅಲ್ಲದೇ, ಚಾಲುಕ್ಯ ಸೈನ್ಯವನ್ನು ಹಿಮ್ಮೆಟ್ಟಿಸಿಕೊಂಡು ಚಾಲುಕ್ಯ ರಾಜಧಾನಿ ವಾತಾಪಿಯವರೆಗೂ ಬಂದು ವಾತಾಪಿಗೆ ಮುತ್ತಿಗೆ ಹಾಕಿದನು. ಪಲ್ಲವ ನರಸಿಂಹವರ್ಮನ ಆಳ್ವಿಕೆಯ ೧೩ನೆಯ ವರ್ಷದಲ್ಲಿ(ಸುಮಾರು ೬೪೨-೪೩)ಜರುಗಿದ ಈ ಯುದ್ಧದಲ್ಲಿ ನರಸಿಂಹವರ್ಮನು ವಾತಾಪಿ ನಗರವನ್ನು ವಶಪಡಿಸಿಕೊಂಡು ರಾಜಧಾನಿ ಬದಾಮಿಯ ದಕ್ಷಿಣ ಗುಡ್ಡದಲ್ಲಿ ಶಾಸನ ಬರೆಯಿಸಿ 'ವಾತಾಪಿಗೊಂಡ' ಎಂಬ ಬಿರುದನ್ನು ಗಳಿಸಿದನು.

ಇಮ್ಮಡಿ ಪುಲಕೇಶಿ ಕಲಾಪೋಷಕ ಹಾಗೂ ಸಾಹಿತ್ಯಾಭಿಮಾನಿಯೂ ಆಗಿದ್ದನು. ಇವನಿಗೆ ಸತ್ಯಾಶ್ರಯ, ಪೃಥ್ವಿವಲ್ಲಭ, ಪರಮೇಶ್ವರ, ಪರಮಭಾಗವತ, ದಕ್ಷಿಣ ಪಥೇಶ್ವರ ಮುಂತಾದ ಬಿರುದುಗಳಿದ್ದವು. ಈತನ ಆಸ್ಥಾನದಲ್ಲಿದ್ದ ಜೈನ ಕವಿ ರವಿಕೀರ್ತಿಯ ಕಾವ್ಯ ಸಾಮರ್ಥ್ಯವನ್ನು ಅಳೆಯಲು ಐಹೊಳೆ ಪ್ರಶಸ್ತಿ ಶಾಸನವೊಂದೇ ಸಾಕು. ಈ ಶಾಸನದಲ್ಲಿ ರವಿಕೀರ್ತಿ ತನ್ನನ್ನು ಸಂಸ್ಕೃತ ಕವಿಗಳಾದ ಕಾಳಿದಾಸ ಹಾಗೂ ಭಾರವಿಯರೊಂದಿಗೆ ಹೋಲಿಸಿಕೊಂಡಿರುವುದು ಗಮನಾರ್ಹವಾಗಿದೆ. ಇಮ್ಮಡಿ ಪುಲಕೇಶಿಯ ಕಾಲದಲ್ಲಿ ದ್ರಾವಿಡ ಹಾಗೂ ರೇಖಾ ನಾಗರ ಮಾದರಿಯ ದೇವಾಲಯಗಳು ನಿರ್ಮಾಣಗೊಂಡವು ಬಾದಾಮಿಯ ಮೇಲು ಶಿವಾಲಯ ಹಾಗೂ ಕೆಳ ಶಿವಾಲಯ, ಐಹೊಳೆಯ ಮೇಗುತಿ ಜಿನಾಲಯ ದ್ರಾವಿಡ ಶೈಲಿಯದಾದರೆ, ಐಹೊಳೆಯ ಹುಚ್ಚಿಮಲ್ಲಿಗುಡಿ ಚಾಲುಕ್ಯ ಕಾಲದ ಅತ್ಯಂತ ಪ್ರಾಚೀನ ರೇಖಾ ನಾಗರ ಮಾದರಿಯಲ್ಲಿ ನಿರ್ಮಾಣವಾಗಿದೆ. ಇಮ್ಮಡಿ ಪುಲಕೇಶಿಯ ಸೊಸೆಯಾದ ವಿಜಯಭಟ್ಟಾರಿಕಾ(ಚಂದ್ರಾದಿತ್ಯನ ಮಡದಿ) ಶ್ರೇಷ್ಠ ಕವಿಯತ್ರಿಯಾಗಿದ್ದು, ಅವಳು 'ಕೌಮುದಿ

ಮಹೋತ್ಸವ' ಎಂಬ ಕೃತಿಯನ್ನು ರಚಿಸಿದಳು. 'ಕರ್ನಾಟಕ ಸರಸ್ವತಿ' ಎಂದು ಬಿರುದು ಪಡೆದಿದ್ದಾಳೆ. ಕರೆದಿರುವವರಾದರೂ ಅವಳು ರಚಿಸಿರುವ ಕೃತಿ ಲಭ್ಯವಾಗಿಲ್ಲ.

ಈ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಚೀನಿ ಯಾತ್ರಿಕರಾದ ಹ್ಯೂಯನ್‌ತ್ಸಾಂಗ್ ಪುಲಕೇಶಿಯ ಸಾಮ್ರಾಜ್ಯಕ್ಕೂ ಭೇಟಿ ನೀಡಿದನು. ಇವನು ಪುಲಕೇಶಿಯ ಸಾಮ್ರಾಜ್ಯವು ಸಮೃದ್ಧವಾಗಿದ್ದ ಅಂಶವನ್ನು ತಿಳಿಸುತ್ತಾ ಅಲ್ಲಿಯ ಜನರು ಶಾಂತಿಪ್ರಿಯರು, ಸ್ನೇಹಜೀವಿಗಳು, ವೀರರು, ಸರಳತೆ ಪ್ರಾಮಾಣಿಕತೆ, ಕೃತಜ್ಞತೆ ಹಾಗೂ ನೇರ ನಡತೆಗಳಿಗೆ ಹೆಸರಾದವರು. ಶತ್ರುಗಳನ್ನು, ವಂಚಕರನ್ನು ನಿರ್ದಯೆಯಿಂದ ಸದೆಬಡಿಯುವವರು ಎಂದೆಲ್ಲಾ ಪ್ರಶಂಸಿಸಿದ್ದಾರೆ. ಪುಲಕೇಶಿಯು ಇರಾನ್ ದೇಶದೊಂದಿಗೆ ರಾಯಭಾರ ಸಂಬಂಧವನ್ನು ಹೊಂದಿದ್ದ ಅಂಶವನ್ನು ಅರಬ್ ಇತಿಹಾಸಕಾರ 'ತಬರಿ' ದಾಖಲಿಸಿದ್ದಾನೆ. ಅಜಂತಾದ ಗುಹೆಯೊಂದರ ಮೇಲಿರುವ ವರ್ಣಚಿತ್ರದಲ್ಲಿ ಅರಸನೊಬ್ಬನು ವಿದೇಶಿ ರಾಯಭಾರಿಯನ್ನು ಸ್ವಾಗತಿಸುತ್ತಿರುವ ದೃಶ್ಯವು ಪುಲಕೇಶಿಯು ಇರಾನಿನ ರಾಜ ಇಮ್ಮಡಿ ಖುಸ್ರೂವಿನ ರಾಯಭಾರಿಯನ್ನು ಸ್ವಾಗತಿಸುತ್ತಿರುವ ದೃಶ್ಯವೆಂದು ನಂಬಲಾಗಿದೆಯಾದರೂ ಇನ್ನೂ ಖಚಿತಗೊಳ್ಳಬೇಕಾಗಿದೆ.

ಒಂದನೇ ವಿಕ್ರಮಾದಿತ್ಯ ಇಮ್ಮಡಿ ಪುಲಕೇಶಿಯ ಮಕ್ಕಳಲ್ಲಿ ಒಬ್ಬನಾದ ಒಂದನೆಯ ವಿಕ್ರಮಾದಿತ್ಯ ೬೫೫ರಲ್ಲಿ ಸಿಂಹಾಸನ ಏರಿದನು. ಇವನ ತಾಲಮಂಚಿ ಹಾಗೂ ಗದ್ವಾಲ್ ತಾಮ್ರ ಶಾಸನಗಳಲ್ಲಿ ವಿಕ್ರಮಾದಿತ್ಯನು ತ್ರೈರಾಜ್ಯಾಧಿಪತಿಗಳನ್ನು ಅಂದರೆ ಮೂವರು ಅರಸರನ್ನು ಸೋಲಿಸಿ ಅಧಿಕಾರವನ್ನು ಗಳಿಸಿದನೆಂಬ ಉಲ್ಲೇಖಿಸಿದೆ. ಈತ ಸೋಲಿಸಿದ ತ್ರೈರಾಜ್ಯಾಧಿಪತಿಗಳು ಯಾರೆಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಪಲ್ಲವರಾಜ, ಸಹೋದರರಾದ ಆದಿತ್ಯವರ್ಮ ಹಾಗೂ ಚಂದ್ರಾದಿತ್ಯರೇ ಆ ಮೂವರೆಂದು ಕೆಲವರು ಅಭಿಪ್ರಾಯಪಟ್ಟರೆ, ಉಳಿದವರು ಪಲ್ಲವ, ಚೋಳ ಹಾಗೂ ಚೇರ ಅರಸರೇ ಆ ಮೂವರೆಂದು ಅಭಿಪ್ರಾಯ ಪಡುತ್ತಾರೆ. ಆದರೆ "ಗದ್ವಾಲ್ ಶಾಸನದಲ್ಲಿ ಬರುವ ಈಶ್ವರವರ್ಮನೇ ಈ ತ್ರೈರಾಜ್ಯಪತಿಯೆಂದು ಹೇಳಲಾಗುತ್ತದೆ. ಒಟ್ಟಾರೆ ಒಂದನೆಯ ವಿಕ್ರಮಾದಿತ್ಯನು ಆ ಮೂವರು ಅರಸರನ್ನು ಸೋಲಿಸಿ ರಾಜಕೀಯ ಕ್ಷೋಭೆಯ ಅವಧಿಯಲ್ಲಿ ಸ್ಥಗಿತಗೊಂಡಿದ್ದ ಇಲ್ಲವೇ ದುರ್ಬಳಕೆಗೆ ಒಳಗಾಗಿದ್ದ ದತ್ತಿಗಳನ್ನು ಯಥಾಸ್ಥಿತಿಗೆ ತರುವಲ್ಲಿ ಯಶಸ್ವಿಯಾಗುವುದರ ಮೂಲಕ 'ಪರಮೇಶ್ವರ' ಎಂಬ ಬಿರುದನ್ನು ಧರಿಸಿದನು. ಹೀಗೆ ಆಂತರಿಕ ಶಾಂತಿ ಸ್ಥಾಪಿಸಿದ ಮೇಲೆ ಪಲ್ಲವ, ಚೋಳ, ಚೇರ ಹಾಗೂ ಸಿಂಹಳ ರಾಜರನ್ನು ಸೋಲಿಸಿದನೆಂದು ಶಾಸನಗಳು ದಾಖಲಿಸಿವೆ".[೩೭]

ಪಲ್ಲವ ನರಸಿಂಹವರ್ಮ, ಎರಡನೆಯ ಮಹೇಂದ್ರವರ್ಮ ಮತ್ತು ಪರಮೇಶ್ವರವರ್ಮರು ಈತನ ಸಮಕಾಲೀನ ಪಲ್ಲವ ಅರಸರಾಗಿದ್ದು, ಇವರೆಲ್ಲರ ಕಾಲದಲ್ಲು ಒಂದನೆಯ ವಿಕ್ರಮಾದಿತ್ಯ ಪಲ್ಲವ ರಾಜ್ಯದ ಮೇಲೆ ದಾಳಿ ಮಾಡಿದ. ಆದರೆ ೬೮೧ರ ದಾಳಿಯಲ್ಲಿ ವಿಕ್ರಮಾದಿತ್ಯನ ಮಗನಾದ ವಿನಯಾದಿತ್ಯನು ಉರೈಯೂರನ್ನು ಪಲ್ಲವರಿಂದ ವಶಪಡಿಸಿಕೊಂಡ ಪಾಂಡ್ಯರ ಮೇಲೂ ದಾಳಿ ಮಾಡಿ, ಪಾಂಡ್ಯ

ಅರಿಕೇಸರಿ ಮಾಧವವರ್ಮನನ್ನು ಸೋಲಿಸಿದನು. ಕೇರಳದ ಚೇರರು ಶರಣಾಗತರಾದರು. ಪಲ್ಲವ ಮಹೇಂದ್ರವರ್ಮನ ಆಳ್ವಿಕೆಯಲ್ಲಿ ವಿಕ್ರಮಾದಿತ್ಯನು ಕೈಗೊಂಡ ದಾಳಿಯು ಚಾಲುಕ್ಯರಿಗೆ ಜಯ ನೀಡಿತು. ಇವನಿಗೆ ಸತ್ಯಾಶ್ರಯ, ಶ್ರೀ ಪೃಥ್ವಿವಲ್ಲಭ, ಮಹಾರಾಜಾಧಿರಾಜ ಶ್ರೀ ವಲ್ಲಭ, ಪರಮೇಶ್ವರ ಮುಂತಾದ ಬಿರುದುಗಳಿದ್ದವು.

ವಿನಯಾದಿತ್ಯ ಒಂದನೆಯ ವಿಕ್ರಮಾದಿತ್ಯ ಅಧಿಕಾರದಲ್ಲಿದ್ದಾಗಲೇ ಯುವರಾಜನಾಗಿ ಆಡಳಿತದಲ್ಲಿ ಅನುಭವವನ್ನು, ಯುದ್ಧರಂಗದಲ್ಲಿ ಪರಿಣತಿಯನ್ನು ಗಳಿಸಿಕೊಂಡು, ಚಾಲುಕ್ಯ ಸಾಮ್ರಾಜ್ಯದ ವಿಸ್ತರಣೆಯಲ್ಲಿ ತನ್ನ ತಂದೆಯೊಂದಿಗೆ ಕೈಜೋಡಿಸಿದ್ದ. ಇವನು ಅಧಿಕಾರಕ್ಕೆ ಬರುವ ವೇಳೆಗಾಗಲೇ ಸುಮಾರು ೬೦ ವರ್ಷಗಳಾಗಿದ್ದ ಕಾರಣ ಮಗನಾದ ವಿಜಯಾದಿತ್ಯನು ಆಡಳಿತದಲ್ಲಿ ತಂದೆಗೆ ನೆರವಾದನು. ವಿನಯಾದಿತ್ಯನನ್ನು ಸಮಕಾಲೀನ ಶಾಸನಗಳಲ್ಲಿ ಯುಧಿಷ್ಠರ, ವಾಸುದೇವ, ಪರಶುರಾಮ, ಭರತ ಮುಂತಾದ ಪೌರಾಣಿಕ ಯೋಧರೊಂದಿಗೆ ಹೋಲಿಸಲಾಗಿದೆ. ಇವನ ಆಳ್ವಿಕೆಯಲ್ಲಿ ಚಾಲುಕ್ಯ ಸೈನ್ಯವು ಮಾಳವ ರಾಜ ವಜ್ರಟನ ಮೇಲೆ ದಾಳಿ ಮಾಡಿತು. ಈ ದಾಳಿಯ ನೇತೃತ್ವ ವಹಿಸಿದ ಯುವರಾಜ ವಿಜಯಾದಿತ್ಯನು ಶತ್ರುವನ್ನು ಸೋಲಿಸಿ, ಹಿಂತಿರುಗುವಾಗ ಬೆನ್ನಟ್ಟಿ ಬಂದ ವೈರಿಗಳಿಗೆ ಸೆರೆಯಾದನು. ಶತ್ರುಗಳ ಸೆರೆಯಿಂದ ತಪ್ಪಿಸಿಕೊಂಡು ಮರಳಿದನು.

ವಿಜಯಾದಿತ್ಯ ಬದಾಮಿ ಚಾಲುಕ್ಯ ಅರಸರಲ್ಲಿ ಅತಿ ಹೆಚ್ಚು ಕಾಲ ಅಧಿಕಾರದಲ್ಲಿದ್ದನೆಂಬ ಕೀರ್ತಿಗೆ ಪಾತ್ರನಾಗಿದ್ದ. ಚಾಲುಕ್ಯ ಅರಸರಲ್ಲೇ ಅಧಿಕ ಸಂಖ್ಯೆಯಲ್ಲಿ ಶಾಸನಗಳನ್ನು ಹೊರಡಿಸಿದ ಹೆಗ್ಗಳಿಕೆಯು ಈತನಿಗಿದೆ. ಈವರೆಗೆ ಇವನ ಕಾಲದ ಸುಮಾರು ೫೦ ಶಾಸನಗಳು ದೊರೆತಿವೆ. ಅವುಗಳಲ್ಲಿ ಐದು ಅಖಂಡ ವಿಜಾಪೂರ ಜಿಲ್ಲೆಯಲ್ಲಿವೆ. ಈತನ ಶಾಸನಗಳು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ದೊರೆತಿರುವದರಿಂದ ಪ್ರಜಾಕಲ್ಯಾಣಕ್ಕಾಗಿ ಸಾಮ್ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿದ ಅಂಶ ವೇದ್ಯವಾಗುತ್ತದೆ. ದೇವಾಲಯಗಳಿಗೆ ಅಗ್ರಹಾರಗಳಿಗೆ ಉದಾರ ದಾನ ದತ್ತಿಗಳನ್ನು ನೀಡಿದ. ಇವನ ಉದಾರ ಗುಣಗಳನ್ನು ಭವ್ಯವಾಗಿ ಚಿತ್ರಿಸಿರುವ "ಅಲಂಪುರ ಪ್ರಶಸ್ತಿ ಶಾಸನ ಕೆರೆಗಳ ನಿರ್ಮಾಣ, ನಿರಾಶ್ರಿತರಿಗೆ ಆಶ್ರಯ ಹಾಗೂ ವಿವಿಧ ಧರ್ಮಗಳಿಗೆ ಪ್ರೋತ್ಸಾಹ ನೀಡುವಲ್ಲಿ ಮುಂದಾದ ಅಂಶವನ್ನು ಕಾವ್ಯಮಯವಾಗಿ ಹೇಳಿದೆ. ಇವನ ಕಾಲಕ್ಕೆ ಸೇರಿದ ೬೯೯ ರ ಶಾಸನ, ಬದಾಮಿಯ ಜಂಬುಲಿಂಗ ದೇವಾಲಯದ ಕಂಬದ ಮೇಲಿದೆ. ಈ ಶಾಸನ ವಿಜಯಾದಿತ್ಯನ ತಾಯಿಯಾದ ರಾಜಮಾತೆ ವಿನಯವತಿ ದೇವಿಯು ವಾತಾಪಿಯಲ್ಲಿ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರ ಮೂರ್ತಿಗಳನ್ನುಳ್ಳ ತ್ರಿಕೂಟ ದೇವಾಲಯವನ್ನು ನಿರ್ಮಿಸಿದ ಸಂದರ್ಭದಲ್ಲಿ ಅರಸನು ಹಲವಾರು ಸುಂಕಗಳನ್ನು ದೇವಾಲಯಕ್ಕೆ ದಾನ ಬಿಟ್ಟ ಅಂಶವನ್ನು ತಿಳಿಸುತ್ತಿದ್ದು, ಕರ್ನಾಟಕದ ಅತ್ಯಂತ ಪ್ರಾಚೀನ ತ್ರಿಕೂಟ ದೇವಾಲಯ ಇದಾಗಿದೆ."[೨೮]

ಐಹೊಳೆಯ ಹುಚ್ಚಮಲ್ಲಿಗುಡಿಯ ಗೋಡೆಯ ಮೇಲಿರುವ ೬೦೮ರ ಶಾಸನ ಆ ದೇವಾಲಯದ ಪೂಜಾರಿಗೆ ಒಂದೊಂದು ಸೊಂಟಿಗೆ ಎಣ್ಣೆಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇವನ

ಆಳ್ವಿಕೆಗೆ ಸೇರಿದ ಸುಮಾರು ೭೦೩ರ ಅಲಂಪುರ ಶಾಸನವು ನವಲಿಂಗೇಶ್ವರ ದೇವಾಲಯಕ್ಕೆ ಪ್ರಾಕಾರ ನಿರ್ಮಿಸಿದ ಅಂಶವನ್ನು ದಾಖಲಿಸಿದೆ. ವಿಜಯಾದಿತ್ಯನ ಸೂಳೆಯಾದ ವಿನಾಪೋಟಿ ಮಹಾಕೂಟೇಶ್ವರ ದೇವಾಲಕ್ಕೆ ಹಿರಣ್ಯಗರ್ಭ ದಾನನೀಡಿ, ಛತ್ರಿ ಚಾಮರ ಹಾಗೂ ೮೦೦ ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ. ನಾಗರಾಳದ ನಾಗನಾಥ ದೇವಾಲಯ, ಮಹಾಕೂಟದ ಮಲ್ಲಿಕಾರ್ಜುನ, ಐಹೊಳೆಯ ಲಾಡಖಾನ್, ಹುಚ್ಚಪ್ಪಯ್ಯನಗುಡಿ, ಹುಚ್ಚಪ್ಪಯ್ಯಮಠ, ಗೌಡರ ಗುಡಿ ಮತ್ತು ಸಿದ್ದನಕೊಳ್ಳದ ಲಕುಲೀಶ ದೇವಾಲಯಗಳೂ ಈ ಕಾಲದ ರಚನೆಗಳಾಗಿವೆ.

ಅರಸನ ಸಹೋದರಿಯಾದ ಕುಂಕುಮ ಮಹಾದೇವಿಯು ಅಳುಪ ವಂಶದ ಚಿತ್ರವಾಹನನ ರಾಣಿಯಾಗಿದ್ದು, ಈಕೆ ಲಕ್ಷ್ಮೇಶ್ವರದಲ್ಲಿ ನಿರ್ಮಿಸಿದ ಆನೆ ಸಜ್ಜೆ ಬಸದಿಗೆ ಗುಡಗೇರಿ ಗ್ರಾಮವನ್ನು ದಾನ ಬಿಟ್ಟ ಅಂಶವನ್ನು ಇವನ ಕಾಲದ ಬಾಗಲಕೋಟ ತಾಮ್ರ ಶಾಸನ ಹಾಗೂ ಗುಡಗೇರಿಯ ೧೦೭೮ರ ಶಿಲಾ ಶಾಸನಗಳು ದಾಖಲಿಸಿವೆ.

ಇಮ್ಮಡಿ ವಿಕ್ರಮಾದಿತ್ಯ ಇವನು ಅಧಿಕಾರಕ್ಕೆ ಬಂದ ಮೇಲೆ ಗಂಗರ ನೆರವಿನೊಂದಿಗೆ ಪಲ್ಲವರ ಮೇಲೆ ದಾಳಿ ಮಾಡಿದನು. ಪಲ್ಲವ ಅರಸ ನಂದಿವರ್ಮ ಚಾಲುಕ್ಯ ಸೈನ್ಯವನ್ನು ಎದುರಿಸಿ ಉಗ್ರ ಹೋರಾಟ ಮಾಡಿದನಾದರೂ ಅಂತಿಮವಾಗಿ ಸೋತು ಯುದ್ಧರಂಗದಿಂದ ಪಲಾಯನ ಮಾಡಬೇಕಾಯಿತು. ಪಲ್ಲವ ರಾಜಧಾನಿ ಕಂಚಿ ಚಾಲುಕ್ಯರ ವಶವಾಯಿತು. ಆದರೆ ರಾಜಧಾನಿಯನ್ನು ಸೂರೆ ಮಾಡದೆ ಕಂಚಿಯ ರಾಜ ಸಿಂಹೇಶ್ವರ ದೇವಾಲಯವನ್ನು ಸಂದರ್ಶಿಸಿ, ಅದರಲ್ಲಿದ್ದ ಸಂಪತ್ತನ್ನು ಕಂಡು ಬೆರಗಾದರೂ, ಲೂಟಿ ಮಾಡದೆ, ಆ ದೇವಾಲಯಕ್ಕೆ ತಾನೇ ಮತ್ತಷ್ಟು ದಾನವನ್ನು ನೀಡಿ ಔದಾರ್ಯತೆಯಿಂದ ನಡೆದುಕೊಂಡನು.

ಪಾಂಡ್ಯ, ಚೋಳ ಹಾಗೂ ಕಳಭ್ರರು ಶರಣಾಗತರಾದರು. ಈ ಗೆಲುವಿನ ನೆನಪಾಗಿ ದಕ್ಷಿಣ ಸಮುದ್ರ ತೀರದಲ್ಲಿ ವಿಜಯಸ್ತಂಭವನ್ನು ನೆಟ್ಟನು.

ಇಮ್ಮಡಿ ವಿಕ್ರಮಾದಿತ್ಯನು ಕಂಚಿಯ ಮೇಲೆ ಮೂರು ಬಾರಿ ದಂಡಯಾತ್ರೆ ಮಾಡಿ ವಿಜಯ ಪಡೆದ ಅವುಗಳ ಸ್ಮರಣಾರ್ಥವಾಗಿ ಅವನ ರಾಣಿಯರಾದ ಹೈಹಯ ಕುಲದ ಲೋಕಮಹಾದೇವಿ ಹಾಗೂ ತ್ರೈಲೋಕ ಮಹಾದೇವಿಯರು ಕ್ರಮವಾಗಿ ಪಟ್ಟದಕಲ್ಲಿನಲ್ಲಿ ಲೋಕೇಶ್ವರ ಹಾಗೂ ತ್ರೈಲೋಕೇಶ್ವರ (ಇಂದಿನ ವಿರೂಪಾಕ್ಷ ಹಾಗೂ ಮಲ್ಲಿಕಾರ್ಜುನ) ದೇವಾಲಯಗಳನ್ನು ನಿರ್ಮಿಸಿದರು. ಲೋಕೇಶ್ವರ ದೇವಾಲಯದ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದ ಸೂತ್ರಧಾರಿ ಗುಂಡನನ್ನು ಸನ್ಮಾನಿಸಿ 'ತ್ರಿಭುವನಾಚಾರಿ' ಎಂಬ ಬಿರುದನ್ನು ನೀಡಿದ ಅಂಶವನ್ನು ಪಟ್ಟದಕಲ್ಲಿನ ಶಾಸನವೊಂದು ತಿಳಿಸುತ್ತದೆ.

ಇವನ ಆಳ್ವಿಕೆಗೆ ಸೇರಿದ ಬದಾಮಿಯ ಶಾಸನದಿಂದ, ವಾತಾಪಿಯ ಎರಡು ಸಾವಿರ ಮಹಾಜನರು ಅಲ್ಲಿಯ ಚಮ್ಮಾರ ಸುಂಕವನ್ನು ಬಿಟ್ಟುಕೊಟ್ಟ ಅಂಶ ಗೊತ್ತಾಗುತ್ತದೆ. ಐಹೊಳೆಯ ದುರ್ಗಾ

(ಶಾಸನೋಕ್ತ ಕೊಮಾರ ಸಿಂಗ) ದೇವಾಲಯ, ಚಿಕ್ಕಿಗುಡಿ, ಜ್ಯೋತಿರ್ಲಿಂಗ ಸಮೂಹದ ಕಿರುಗುಡಿಗಳು ಮಹಾಕೂಟದ ಕಿರುಗುಡಿಗಳು ಈ ಕಾಲದ ರಚನೆಗಳಾಗಿವೆ.

ಇಮ್ಮಡಿ ಕೀರ್ತಿವರ್ಮ ಬಾದಾಮಿ ಚಾಲುಕ್ಯ ಅರಸರಲ್ಲೇ ಕೊನೆಯ ಅರಸನಾದ ಇವನು ತಂದೆ ವಿಕ್ರಮಾದಿತ್ಯ ಬದುಕಿದ್ದಾಗಲೇ ಯುವರಾಜನಾಗಿ ಪಲ್ಲವರ ಮೇಲೆ ದಂಡಯಾತ್ರೆ ಕೈಗೊಂಡು ತಂದೆಯ ಮೆಚ್ಚುಗೆಗೆ ಪಾತ್ರ ನಾಗಿದ್ದನು. ಆದರೆ ಅದೇ ಅವನ ಕೊನೆಯ ದಂಡಯಾತ್ರೆಯಾಯಿತು. ಇಮ್ಮಡಿ ವಿಕ್ರಮಾದಿತ್ಯನ ನಿಷ್ಠಾವಂತ ಸಾಮಂತರಲ್ಲಿ ಅಗ್ರ ಗಣ್ಯನಾಗಿದ್ದ ರಾಷ್ಟ್ರಕೂಟ ದಂತಿದುರ್ಗನು, ಕೀರ್ತಿವರ್ಮನನ್ನು ಸೋಲಿಸಿ ತಾನೆ ಸಾಮ್ರಾಟನೆಂದು ಸಾರಿಕೊಳ್ಳುವುದರೊಂದಿಗೆ ಬದಾಮಿ ಚಾಲುಕ್ಯರ ಆಳ್ವಿಕೆಗೆ ಮಂಗಳ ಹೇಳಿ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿ ಹಾಡಿದನು.

ರಾಷ್ಟ್ರಕೂಟರು

ರಾಷ್ಟ್ರಕೂಟರದಂತಿದುರ್ಗನು ಬದಾಮಿ ಚಾಲುಕ್ಯರನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದನು. ರಾಷ್ಟ್ರಕೂಟರು ಸುಮಾರು ಎರಡು ಶತಮಾನಗಳಿಗೂ ಅಧಿಕ ಅವಧಿಯವರೆಗೆ ಅಧಿಕಾರದಲ್ಲಿದ್ದು ಉತ್ತರ ಭಾರತದ ಮೇಲೂ ತಮ್ಮ ಪ್ರಭಾವ ಬೀರಿದರು.

ಶ್ರೀ ವಿಜಯ ವಿರಚಿತ 'ಕವಿರಾಜ ಮಾರ್ಗ' ರಚನೆಯಾದುದು ಚಕ್ರವರ್ತಿ ಒಂದನೆಯ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಕವಿರಾಜ ಮಾರ್ಗಕಾರ ತಿರುಳ್ಗನ್ನಡ ಪ್ರದೇಶದ ಗಡಿಗಳನ್ನು ಸೂಚಿಸುವಾಗ ಪಟ್ಟದಕಲ್ಲನ್ನೂ ಗಡಿಯಾಗಿ ಉಲ್ಲೇಖಿಸಿರುವುದು ಗಮನಾರ್ಹವಾಗಿದೆ.

"ಐಹೊಳೆಯ ರಾವಳಫಡಿ ಗುಹಾಲಯದ ಬಳಿ ಇರುವ ಶಾಸನವೊಂದು ಅಮೋಘವರ್ಷ ನೃಪತುಂಗನ ಕಾಲಕ್ಕೆ ಸೇರಿದ್ದು. ಸೂರ್ಯಕರ್ತಾರ ಭಟಾರ ಹಾಗೂ ಬಾಳಕರ್ತಾರ ಭಟಾರರು ಅಲ್ಲಿ ಚಾತುರ್ಮಾಸ ಕಳೆದ ಅಂಶವನ್ನು ದಾಖಲಿಸಿದೆ. ಇದೇ ಅರಸನ ಕಾಲಕ್ಕೆ ಸೇರಿದ ೮೩೨ರ ಕೆಸರಭಾವಿ ಶಿಲಾಶಾಸನದಿಂದ ಗಂಗ ಎರೆಯಂಗನ ರಾಣಿ ಹಾಗೂ ನೃಪತುಂಗನ ಪುತ್ರಿಯೂ ಆಗಿದ್ದ ರೇವಕಬ್ಬೆಯು ಎಡದೊರೆ ನಾಡನ್ನು ಆಳುತ್ತಿದ್ದ ಅಂಶ ಗೊತ್ತಾಗುತ್ತಾದರೂ ಶಾಸನ ತ್ರುಟಿತವಾಗಿದ್ದು ಹೆಚ್ಚಿನ ವಿಷಯ ಲಭ್ಯವಾಗುವುದಿಲ್ಲ. ನೃಪತುಂಗನಿಗೆ ರಟ್ಟಮಾರ್ತಂಡ ಎಂಬ ಬಿರುದಿದ್ದ ಅಂಶವೂ ವೇದ್ಯವಾಗುತ್ತದೆ. ನಂದವಾಡಗಿಯ ೯೦೩ರ ತ್ರುಟಿತ ಶಾಸನ ಇಮ್ಮಡಿ ಕೃಷ್ಣನ ಆಳ್ವಿಕೆಯಲ್ಲಿ ದೇವಾಲಯ ನಿರ್ಮಾಣ ಹಾಗೂ ಭೂದಾನಗಳ ಬಗ್ಗೆ ತಿಳಿಸುತ್ತದೆ."[೨೯]

ಲೋಕಾಪೂರ ಶಾಸನದಿಂದ ರಾಷ್ಟ್ರಕೂಟರದಂಡನಾಯಕ ಲೋಕಾಪುರ ಎಂಬ ಗ್ರಾಮವನ್ನು ಕಟ್ಟಿಸಿ, ಅಲ್ಲಿ ಲೋಕಮಹೇಶ್ವರಿ ದೇವಾಲಯ, ಲೋಕನಾಥ ಬಸದಿ, ಹಾಗೂ ಲೋಕಸಮುದ್ರಗಳನ್ನು ನಿರ್ಮಿಸಿದ ಅಂಶವನ್ನು ತಿಳಿಸುವುದು. ಮಹಾಕೂಟದ ಸಂಗಮೇಶ್ವರ ದೇವಾಲಯದಲ್ಲಿರುವ ೯೩೩ರ

ಶಾಸನ, ನಂದಿಕೇಶ್ವರ ಹಾಗೂ ನೆಲುವಿಗೆ ಗ್ರಾಮಗಳನ್ನು ದಾನ ಬಿಟ್ಟ ವಿಷಯವನ್ನು ದಾಖಲಿಸಿದೆ. ಐಹೊಳೆಯ ಹುಚ್ಚಮಲ್ಲಿಗುಡಿ ಮುಂದೆ ನಿಂತಿರುವ ೯೪೫ರ ಶಾಸನ ಕೆಯ್ಚಯ್ಯನು ಗೋಸಹಸ್ರದಾನ ಮಾಡಿದ ಅಂಶವನ್ನು ದಾಖಲಿಸಿದೆ.

"ಐಹೊಳೆಯ ಹುಚ್ಚಮಲ್ಲಿಗುಡಿ ಆವರಣದಲ್ಲಿರುವ ೯೮೧ರ ಶಾಸನ ಕೊಟ್ಟಿಗದೇವನು ರಾಜ್ಯವಾಳುತ್ತಿದ್ದಾಗ, ಶಾಂತಿಗಾವುಂಡನು ೯ ದೇಗುಲವನ್ನು ನಿರ್ಮಿಸಿ ಗೋಸಹಸ್ರದಾನ ನೀಡಿದ ಅಂಶವನ್ನು ತಿಳಿಸುತ್ತದೆ. ಈ ಮೇಲಿನ ಶಾಸನಗಳು ಜಿಲ್ಲೆಯ ಮೇಲೆ ರಾಷ್ಟ್ರಕೂಟರು ಹೊಂದಿದ್ದ ಹಿಡಿತವನ್ನು ಸೂಚಿಸುತ್ತದೆ. ಇವರ ಕಾಲದ ದೇವಾಲಯಗಳು ಜಿಲ್ಲೆಯ ಬಾದಾಮಿ, ಪಟ್ಟದಕಲ್ಲು, ಬನಶಂಕರಿ ಹಾಗೂ ಐಹೊಳೆ ಮುಂತಾದ ಸ್ಥಳಗಳಲ್ಲಿವೆ. ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ಈ ಪ್ರದೇಶಗಳನ್ನೊಳಗೊಂಡ ತರ್ದವಾಡಿ-೧೦೦೦ ಪ್ರಾಂತ ರೂಪಿತಗೊಂಡಿದ್ದ ಅಂಶ ಅವರ ಶಾಸನಗಳಿಂದ ಸ್ಪಷ್ಟವಾಗುತ್ತದೆ."[೩೦]

ಕಲ್ಯಾಣ ಚಾಲುಕ್ಯರು

ಇಮ್ಮಡಿ ತೈಲಪನು ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟ ದೊರೆ ಕರ್ಕನನ್ನು ಸೋಲಿಸಿ ಚಾಲುಕ್ಯ ಅಧಿಕಾರವನ್ನು ಪುನಃ ಸ್ಥಾಪಿಸಿದ. ಆರಂಭದಲ್ಲಿ ಈತನ ರಾಜಧಾನಿ ಮಾನ್ಯಖೇಟವಾಗಿತ್ತು. ಒಂದನೆ ಸೋಮೇಶ್ವರನು ರಾಜಧಾನಿಯನ್ನು ಬಸವಕಲ್ಯಾಣಕ್ಕೆ ವರ್ಗಾಯಿಸಿದ. ಈತನ ಆಳ್ವಿಕೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಅಧಿಕಗೊಂಡಿರುವುದನ್ನು ಅವಿಭಜಿತ ವಿಜಾಪೂರ ಜಿಲ್ಲಾದ್ಯಂತ ಕಾಣಬಹುದು. ಇವರ ಕಾಲದ ಇತಿಹಾಸ ರಚಿಸುವಲ್ಲಿ ಶಾಸನಗಳು ಪ್ರಧಾನ ಪಾತ್ರ ವಹಿಸುತ್ತವೆ.

"ಪಟ್ಟದಕಲ್ಲಿನ ಮಲ್ಲಿಕಾರ್ಜುನ ದೇವಾಲಯದ ದ್ವಾರದ ಎಡಕಂಬದ ಮೇಲೆ ಸುಮಾರು ಎಂಟನೆ ಶತಮಾನಕ್ಕೆ ಸೇರಿದ 'ಶ್ರೀ ಪೆರ್ಗಡೆ ಮಾಹಾರಾಜನ ತೈಲ ಮಹಾಧಿರಾಜ ಪೆಸರು' ಎಂದು ಉಲ್ಲೇಖಿಸಲಾಗಿದೆ. ತೈಲಪನ ೯೯೦ರ ತ್ರುಟಿತ ಶಾಸನ ಹಳ್ಳೂರಿನ ಬಸವೇಶ್ವರ ದೇವಾಲಯದ ಮುಂದೆ ಇದೆ. ಎರಡನೆ ಜಯಸಿಂಹನ ಕಾಲದ ಶಾಸನ ಜಮಖಂಡಿ ತಾಲೂಕಿನ ಆಲಗೂರ ಗ್ರಾಮದಲ್ಲಿ ದೊರಕಿದೆ. ಈ ಶಾಸನವು ಇಮ್ಮಡಿ ಜಯಸಿಂಹ ೧೦೧೭ ರಿಂದ ೧೦೧೮ರವರೆಗೆ ಆಳಿದ ಸಂಗತಿಯನ್ನು ತಿಳಿಸುತ್ತದೆ."[೩೧]

ಜಿಲ್ಲೆಯಲ್ಲಿ ಬನಶಂಕರಿ (೧೦೧೯), ಬೇಲೂರ (೧೦೪೦) ಮಂಟೂರು (೧೦೪೧)ಗಳಲ್ಲಿ ಶಾಸನಗಳು ದೊರೆತಿವೆ. ಜಯಸಿಂಹನ ಕಾಲದಲ್ಲಿ ದೇವಾಲಯ ನಿರ್ಮಾಣ, ದಾನ ದತ್ತಿ ಮುಂತಾದ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದ ಬಗ್ಗೆ ಉಲ್ಲೇಖಿಸುತ್ತವೆ.

ಒಂದನೆಯ ಸೋಮೇಶ್ವರ ಕಾಲದಲ್ಲಿ ಹುನಗುಂದ ತಾಲೂಕಿನ ಅರಿಸಿಬೀದಿಯ ಸೂಳೆ ಗುಡಿ

ಮುಂದೆ ಇರುವ ಶಾಸನ ಕಿಸುಕಾಡು ೭೦ನ್ನು ಆಳುತ್ತಿದ್ದ ಅರಸನ ಸೋದರತ್ತೆ ಅಕ್ಕಾದೇವಿ ಗೋಕಾಕೆಯಲ್ಲಿ ಬೀಡುಬಿಟ್ಟಾಗ ರಾಜಧಾನಿ ವಿಕ್ರಮಪುರ(ಅರಸಿಬೀದಿ)ದಲ್ಲಿ ತನ್ನ ಬಿರುದಾದ 'ಗುಣಪೇಡಂಗಿ'ಯ ಹೆಸರಲ್ಲಿ ನಿರ್ಮಿಸಿದ 'ಗುಣಬೆಡಂಗಿ' ಜಿನಾಲಯದ ನಾಗಸೇನ ಪಂಡಿತರಿಗೆ ಭೂದಾನ ನೀಡಿದ ಅಂಶವನ್ನು ದಾಖಲಿಸುತ್ತದೆ. ಅಲ್ಲದೆ ಕಲ್ಕುಟಿಗ ಸರೋಜನಿಗೆ ೧೨ ಮತ್ತರು ಹೊಲ ಹಾಗೂ ಒಂದು ಮತ್ತರ ತೋಟವನ್ನು ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.

ಶಿರೂರಿನ ಸಿದ್ದೇಶ್ವರ ದೇವಾಲಯದ ದಕ್ಷಿಣಗೋಡೆ ಮೇಲಿರುವ ೧೦೪೯ರ ಸಂಸ್ಕೃತ ಶಾಸನ ಪ್ರಭು ಮಾರಸಿಂಗನು ಹುನಗುಂದ ೩೦ ರಲ್ಲಿದ್ದ ಶ್ರೀಪುರ (ಶಿರೂರ) ದ ದಕ್ಷಿಣದಲ್ಲಿದ್ದ ಸಿದ್ದೇಶ್ವರ ದೇವರ ಸೇವೆಗೆಂದು ೨೦೦ ನಿವರ್ತನ ಭೂಮಿಯನ್ನು ಸೇರಿದಂತೆ ಇತರ ದಾನಗಳನ್ನು ನೀಡಿರುವದನ್ನು ದಾಖಲಿಸಿದೆ. ಅಲ್ಲದೆ ಸೋಮೇಶ್ವರನ ರಾಣಿ ಲೀಲಾದೇವಿಯನ್ನು ಹೆಸರಿಸಿದೆ. "ಈತನ ಕಾಲದಲ್ಲಿ ಪೆರೂರು ಮತ್ತು ನಂದವಾಡಿಗೆಗಳಲ್ಲಿ ಶಿವಾಲಯಗಳನ್ನು ಹುನಗುಂದ, ಪುರುಗೂರು, ಕುಂದರಣೆಗಳಲ್ಲಿ ಜಿನಾಲಯಗಳನ್ನು ನಂದವಾಡಗಿಯ ನಾಗಲಿಂಗೇಶ್ವರ ದೇವಾಲಯ ನಿರ್ಮಿಸಿ ವಿವಿಧ ಚಾಕರಿಯವರಿಗೆ ಭೂದಾನ ನೀಡಿದ್ದಾನೆ."[೩೨]

"ಎರಡನೇ ಸೋಮೇಶ್ವರ ಪಟ್ಟದಕಲ್ಲಿನ ಪಾಪನಾಥೇಶ್ವರ ದೇವಾಲಯದ ಮುಂದೆ ಇರುವ ೧೦೭೦ರ ಶಾಸನ ಭುವನೈಕ್ಯಮಲ್ಲನ ಸಾಮಂತನಾದ ನೊಳಂಬ ಪಲ್ಲವ ಪೆರ್ಮಾಡಿ ಸಿಂಗಣದೇವನು ಕಿಸುಕಾಡು ೭೦ ಹಾಗೂ ಕಿಸುವೊಳಲ್ ೬ ಪ್ರದೇಶವನ್ನು ಆಳುತ್ತಿದ್ದನು. ಕಿಸುವೊಳಲ್ ಮಹಾದೇವರ ಉಪಭೋಗಕ್ಕೆ ೧೨ ಮಹತ್ತರ ಹೊಲವನ್ನು ದಾನ ನೀಡಿದ ಅಂಶ ಒಳಗೊಂಡಿದೆ. ಹುನಗುಂದದ ೧೦೭೪ರ ಶಾಸನ ಮಹಾಮಂಡಲೇಶ್ವರ ಲಕ್ಷ್ಮರಸನು ಬೆಳ್ವಲ-೩೦೦ ಹಾಗೂ ಪುಲಿಗೆರಿ ೩೦೦ಗಳನ್ನು ಆಳುತ್ತಿದ್ದಾಗ ಪೊನ್ನುಗುಂದದ ಬಸದಿಗೆ ೩೦ ಮಹತ್ತರ ಭೂಮಿಯನ್ನು ದಾನ ನೀಡಿದ ವಿಷಯ ತಿಳಿಸುತ್ತದೆ."[೩೩]

ಆರನೆಯ ವಿಕ್ರಮಾದಿತ್ಯ ಕಲ್ಯಾಣ ಚಾಲುಕ್ಯ ಅರಸರಲ್ಲಿಯೇ ಶ್ರೇಷ್ಠನಾದ ಈತನು ಸಾವಿರಕ್ಕೂ ಅಧಿಕ ಶಾಸನಗಳನ್ನು ಹೊರಡಿಸಿದ್ದಾನೆ. ಹೀಗಾಗಿ ಇವನಿಗೆ 'ಸಾವಿರ ಶಾಸನಗಳ ಸರದಾರ' ಎಂದು ಕರೆಯುತ್ತಾರೆ. ತಾನು ಅಧಿಕಾರಕ್ಕೆ ಬಂದ ನೆನಪಿಗಾಗಿ ವಿಕ್ರಮ ಶಕೆಯನ್ನು ಆರಂಭಿಸಿದನು.

ಬಾಗಲಕೋಟ ಜಿಲ್ಲೆಯಲ್ಲಿ ಈತನ ಶಾಸನಗಳು ದೊರೆತಿವೆ. "ಕಟಗೇರಿಯ ೧೦೯೬ರ ಶಾಸನ ಈತನ ರಾಣಿ ಚಂದಲದೇವಿಯ ಬಗ್ಗೆ ಉಲ್ಲೇಖಿಸುತ್ತದೆ. ೧೦೭೬ ರಿಂದ ೧೧೨೬ರ ಕಾಲಾವಧಿಗೆ ಸೇರಿದ ೬೦ ಶಾಸನಗಳು ಅವಿಭಜಿತ ವಿಜಾಪೂರ ಜಿಲ್ಲೆಯಲ್ಲಿ ದೊರೆತಿವೆ. ಜಮಖಂಡಿ, ಅರಸಿಬೀದಿ, ಕಟಗೇರಿ, ಶಿರೂರ, ಖೇಡ, ಐಹೊಳೆ, ಹುನಗುಂದ ಮುಂತಾದ ಕಡೆಗಳಲ್ಲಿ ದೊರೆತಿವೆ. "ಜಮಖಂಡಿಯಲ್ಲಿ ದೊರೆತ ಕ್ರಿ.ಶ.೧೦೮೨ರ ಶಾಸನ ಜಮಖಂಡಿಯ ಉತ್ತರೇಶ್ವರ ದೇವಸ್ಥಾನಕ್ಕೆ ೫೦೦

ಮತ್ತರ ಭೂಮಿದಾನ ಮಾಡಿದ ಬಗ್ಗೆ ಹೇಳುತ್ತದೆ."[೩೪] ಜಮಖಂಡಿ ತಾಲೂಕಿನ ತೇರದಾಳ ಪಟ್ಟಣದ ಶಾಸನವು ತೇರದಾಳವನ್ನು ಹೀಗೆ ವರ್ಣಿಸಿದೆ. "ಇದು ಕುಂತಳದೇಶದ ಕುಂದಿ ೩೦೦೦ ಉಪ ವಿಭಾಗದಲ್ಲಿ ತೇರದಾಳ ದೊಡ್ಡ ಗ್ರಾಮ. ಜೀಮೂತವಾಹನ ವಂಶದವನೆಂದು ಹೇಳಲಾದ ಗೊಂಕದೇವನ ವಂಶಾವಳಿಯನ್ನು ತಿಳಿಸುತ್ತದೆ. ಗೊಂಕದೇವ ಮಾಂಡಲಿಕ ಮಹಾಮಂಡಲೇಶ್ವರ ಎಂದು ಕರೆಯಿಸಿಕೊಂಡಿದ್ದ. ರಟ್ಟವಂಶದ ಕಾರ್ತವೀರ್ಯ ದೇವರಸನು ೬ನೇ ವಿಕ್ರಮಾದಿತ್ಯನ ಸಾಮಂತ ಅರಸ ಎಂದು ಪ್ರಸ್ತಾಪಿಸಿದೆ."[೩೫] "ಜಮಖಂಡಿ ತಾಲೂಕಿನ ಕಡಕೋಳದ ಮಾಧವನ ಹೊಲದಲ್ಲಿ ದೊರೆತಿರುವ ಶಾಸನ ೧೨ನೇ ಶತಮಾನದ ತ್ರಿಭುವನಮಲ್ಲ (೬ನೇ ವಿಕ್ರಾಮಾದಿತ್ಯ) ಕಾಲದ್ದು ಇದು ಜಮಖಂಡಿ ಒಂದು ಅಗ್ರಹಾರವೆಂದು ಅಲ್ಲಿ ೪೦೦ ಮಹಾಜನರಿದ್ದರೆಂದು ಅವರಿಗೆ ಭೂದಾನ ನೀಡಿದ ಉಲ್ಲೇಖವಿದೆ."[೩೬]

ಇಮ್ಮಡಿ ಜಗದೇಕಮಲ್ಲನು ಆಳ್ವಿಕೆಯ ಕಾಲದಲ್ಲಿ ಜಿಲ್ಲೆಯ ಶಿರೂರ, ಹೆರಕಲ್ಲ, ಕಂದಗಲ್ಲ ಮುಂತಾದ ಕಡೆಗೆ ದಾನದತ್ತಿ ನೀಡಿದ ಶಾಸನಗಳು ದೊರೆತಿವೆ. ೧೧೪೮ರ ಶಿರೂರ ಶಾಸನ ಸಿರವೂರ ವಾದಿಯಣ್ಣ ಸೂರ್ಯ ದೇವಾಲಯವನ್ನು ನಿರ್ಮಿಸಿದಾಗ ಅದರ ಸೇವಾವಿಧಿಗೆ ಮಹಾಪ್ರಭುವಿಣಿಯಾದ ಲಕ್ಷ್ಮಾದೇವಿಯು ಭೂದಾನ ನೀಡಿದ ವಿಷಯ ತಿಳಿಸುತ್ತದೆ.

ಮೂರನೆ ತೈಲಪ ಈತ ತ್ರೈಲೋಕಮಲ್ಲ, ವೀರಗಂಗ ಬಿರುದನ್ನು ಹೊಂದಿದ್ದ. ಅರಿಸಿಬೀದಿಯಲ್ಲಿ ದೊರೆತ ಈತನ ಶಾಸನ "ಸಿಂಧ ಕುಲಕ್ಕೆ ಸೇರಿದ ವೀರ ಪಾಂಡರಸನು ಕಿಸುಕಾಡು ೭೦ ಹಾಗೂ ಬೆಳ್ವಲ ೩೦೦ಗಳನ್ನು ಆಳುತ್ತಿದ್ದಾಗ ಪಟ್ಟದ ರಾಣಿ ದೇಮಲದೇವಿಯ ವಿನಂತಿಯಂತೆ ಇಲ್ಲಿಯ ಬಸದಿಯ ದೇವನಂದಿ ಪಂಡಿತ ಮತ್ತು ನೇಮಿಚಂದ್ರ ಪಂಡಿತರಿಗೆ ಎರಂಬರಗೆ ಪಟ್ಟದಲ್ಲಿ ದಾನ ನೀಡಿದರ ಬಗೆಗೆ ತಿಳಿಸುತ್ತದೆ. ಅನಗವಾಡಿಯ ದುಗ್ಗವನ್ ದೇವಾಲಯದ ಮುಂದಿರುವ ಶಾಸನ (೧೧೫೩) ಬಸದಿಗೆ ೨ ಮತ್ತರ ಭೂಮಿ ದಾನ ಬಿಟ್ಟ ವಿಷಯ ತಿಳಿಸುತ್ತದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಬಾಗಲಕೋಟ ಜಿಲ್ಲೆ ಒಳಪಟ್ಟಿದ್ದರ ಬಗ್ಗೆ ಶಾಸನಗಳು ದಾಖಲೆಯನ್ನು ಒದಗಿಸುತ್ತವೆ."[೩೭]

ಕಳಚೂರಿಗಳು

"ಕಲ್ಯಾಣ ಚಾಲುಕ್ಯರ ನಂತರ ಕಲಚೂರಿ ಅರಸರು ಅಧಿಕಾರಕ್ಕೆ ಬಂದರು. ಜಮಖಂಡಿ ತಾಲೂಕಿನ ಕುಂಚನೂರುದಲ್ಲಿ ಮಲ್ಲಿಕಾರ್ಜುನ ದೇವಾಲಯದಲ್ಲಿದ್ದ ಶಾಸನವು ಕಳಚೂರಿ ಅರಸರನ್ನು ಕಾಳಂಜಪುರವರಾಧೀಶ್ವರ, ಸುವರ್ಣ ವೃಷಭ ಧ್ವಜ ಮುಂತಾದಾಗಿ ವರ್ಣಿಸಿದೆ."[೩೮] "ತೊದಲಬಾಗಿ ಶಾಸನ ಪ್ರಭು ಚಂಗದೇವ ಭಟ್ಟೋಪಾಧ್ಯಾಯನ ಮಗ ಶಂಕರ ಭಟ್ಟೋಪಾಧ್ಯಾಯ ಭೂದಾನ ಮಾಡಿರುವ ಬಗ್ಗೆ ತಿಳಿಸುತ್ತದೆ."[೩೯] ತುಂಗಳ ಶಾಸನ ರಾಯಮುರಾರಿ ಸೋವಿದೇವನ ಆಳ್ವಿಕೆ ಕುರಿತು ದಾಖಲೆ ಒದಗಿಸುತ್ತದೆ.

ದೇವಗಿರಿ ಯಾದವರು(ಸೇವುಣರು)

ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಯಾದವರು ಮೂಲತಃ ಕನ್ನಡಿಗರು. ಇವರ ಶಾಸನಗಳು ಕನ್ನಡ, ಸಂಸ್ಕೃತ ಹಾಗೂ ಮರಾಠಿ ಭಾಷೆಯಲ್ಲಿ ದೊರೆತಿವೆ. ಅವುಗಳಲ್ಲಿ ಹೆಚ್ಚಿನವು ಮರಾಠಿ ಭಾಷೆಯಲ್ಲಿವೆ. ಈ ವಂಶದಲ್ಲಿ ಅತ್ಯಂತ ಪ್ರಸಿದ್ಧ ದೊರೆ ಸಿಂಘಣ. ಈತನ ಶಾಸನಗಳು ಬಾಗಲಕೋಟ ಜಿಲ್ಲೆಯಲ್ಲಿ ದೊರೆತಿವೆ. ಕೆ.ಡಿ.ಜಂಬಗಿ ಶಾಸನ ಸಿಂಘಣವರಗಿನ ಯಾದವರ ವಂಶಾವಳಿಯನ್ನು ತಿಳಿಸುವದು. ಈತನ ದಂಡನಾಯಕ ಸಹದೇವ ವಿಜಯಪುರದಲ್ಲಿದ್ದಾಗ ತುಂಗಳ ೧೨ ರಲ್ಲಿದ್ದ ಕೃಷ್ಣವೆಣ್ಣೆ ನದಿಯ ಉತ್ತರದ ತೀರದಲ್ಲಿನ ಜಂಬಗಿ ಗ್ರಾಮವನ್ನು ನಾನಾಗೋತ್ರದ ೬೫ ಜನ ಬ್ರಾಹ್ಮಣರಿಗೆ ಹಂಚಿ ತನ್ನ ಪತ್ನಿ ಮಕಲಾದೇವಿಯ ಶ್ರೇಯಸ್ಸಿಗಾಗಿ ದಾನ ನೀಡಿದ ಉಲ್ಲೇಖವಿದೆ.

"ಆಲಗೂರಿನ ಕಲ್ಮೇಶ್ವರ ದೇವಾಲಯದಲ್ಲಿ ಸಿಂಹಣ ದೇವನ ಕಾಲದ ಶಾಸನ ಶಾಪಾಶಯಶ್ಲೋಕ ಒಳಗೊಂಡಿದೆ. ಹಾಗೂ ಅಲಗೂರದ ಮಹಾಜನರು, ಸಮಸ್ತ ಪ್ರಜೆಗಳು, ಮಾಲಿಕರು, ವಕ್ಕಲು ಸೇರಿ ಮಲ್ಲಿಕಾರ್ಜುನ ದೇವರಿಗೆ ಕೆಲವು ದಾನ ನೀಡಿರುತ್ತಾರೆ. ತಾವು ತೆಗೆಯುವ ಎಣ್ಣೆಯಲ್ಲಿ ಒಂದು ಪಾಲು ಎಣ್ಣೆ, ಒಂದು ಹೆಡಿಗೆಗೆ ಒಂದು ಹಿಡಿಬಾಡು ಒಂದು ಹೇರಿಗೆ ಒಂದು ಮಾನ ಉಪ್ಪು ಹಾಗೂ ಒಂದು ಅಡಿಕೆ ಲೆಕ್ಕದಲ್ಲಿ ದಾನಬಿಟ್ಟ ಉಲ್ಲೇಖವಿದೆ."[೪೦]

"ಮಂಕಣಿ ದೇವಾಲಯದಲ್ಲಿ ಇರುವ ೧೨೦೬ರ ಶಾಸನ ಸಾದೇವ ದಂಡನಾಯಕ ತಮ್ಮನಾದ ಕೇಶವ ಮಾರ್ಕಂಡೇಯಪುರ ಎನಿಸಿದ ಮಂಕಣಿಯಲ್ಲಿ 'ಭಾಸ್ಕರದೇವನು' ತ್ರಿಕೂಟ ನಿರ್ಮಿಸಿದ ವಿಷಯ ತಿಳಿಸುತ್ತದೆ."[೪೧] "ರಾಮಚಂದ್ರದೇವನ ಕಾಲದ ಶಿರೋಳ ೧೨೮೨ರ ಶಾಸನ ಸಮಸ್ತ ಪ್ರಜೆಗಳು ಬಸದಿಗೆ ಭೂದಾನ ಬಿಟ್ಟ ವಿಷಯ ತಿಳಿಸುತ್ತದೆ."[೪೨]

ವಿಜಯನಗರ ಸಾಮ್ರಾಜ್ಯ

"ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಜಿಲ್ಲೆಯ ಬದಾಮಿ ಪ್ರದೇಶ ಒಳಪಟ್ಟಿತ್ತು. ಇಲ್ಲಿ ವಿಜಯನಗರದ ಶಾಸನಗಳು ದೊರೆತಿವೆ. ಒಂದನೆಯ ಹರಿಹರನ ಕಾಲಕ್ಕೆ ಸೇರಿದ ಬದಾಮಿ ಶಾಸನ ವಿಜಯನಗರ ರಾಜ್ಯೋದಯದ ಆರಂಭದ ಘಟ್ಟದಾಗಿದೆ. ಬದಾಮಿಯ ತಟ್ಟುಕೋಟೆ ಮಾರುತಿ ದೇವಾಲಯದ ಪಕ್ಕದ ಬಂಡೆಯ ಮೇಲಿರುವ ೧೩೪೦ ಫೆಬ್ರವರಿ ೨೯ರಂದು ಹೊರಡಿಸಿದ ಶಾಸನದಲ್ಲಿ ಹರಿಹರನನ್ನು ಮಹಾಮಂಡಲೇಶ್ವರ, ಅರಿರಾಯ ವಿಭಾಡ, ಭಾಷೆಗೆ ತಪ್ಪದ ರಾಯರಗಂಡ ಪೂರ್ವ ಪಶ್ಚಿಮ ಸಮುದ್ರಾಧಿಪತಿ, ಎಂದು ಉಲ್ಲೇಖಿಸಿದೆ. ಇವನ ದಂಡನಾಯಕ ಚಾಮನಾಯಕ ಬದಾಮಿ ಹಾಗೂ ಮುಂಡನೂರುಗಳನ್ನು ಬದಾಮಿಯ ಎರಡು ಸಾವಿರ ಜನರಿಗೆ ಭೂತನಾಥ ದೇವರ ಸನ್ನಿಧಿಯಲ್ಲಿ ಸರ್ವಮಾನ್ಯವಾಗಿ ದಾನ ಮಾಡಿದ. ಹರಿಹರನ ಕಾಲದಲ್ಲಿ ಬದಾಮಿ ಆಡಳಿತಭಾಗವಾಗಿತ್ತು. ಇದನ್ನು 'ಬದಾಮಿ ಸೀಮೆ' ಎಂದು ಕರೆಯುತ್ತಿದ್ದರು."[೪೩]

ಕೃಷ್ಣದೇವರಾಯಕಾಲದಲ್ಲಿ ೧೫೨೯ರ ಕೆರೂರ ಶಾಸನ ಮಹಾಮಂಡಳೇಶ್ವರಲ್ಲೊಬ್ಬನಾದ ಬಳವನೆಂಬುವವನಿಗೆ ಭೂದಾನ ಮಾಡಿದ ವಿಷಯ ತಿಳಿಸುತ್ತದೆ. ಬದಾಮಿಯಲ್ಲಿ ಐದು ಸಾಲಿನ ಸಂಸ್ಕೃತ ಶಾಸನ ದೊರೆತಿದ್ದು ಭೈಯಪೇಂದ್ರನೆಂಬ ಅಧಿಕಾರಿಯು ಅಪಾರ ಹಣವನ್ನು ವೆಚ್ಚಮಾಡಿ ಶಿಥಿಲವಾಗಿದ್ದ ಬದಾಮಿಯ ಕೋಟೆಯ ಭಾಗಗಳನ್ನು ದುರಸ್ತಿ ಮಾಡಿಸುವದರ ಜೊತೆಗೆ ಅಶ್ವಾದೀಶ, ಗಜಾದೀಶ, ನರಾದೀಶಾದಿಗಳಿಗೆ ದುರ್ಗಮವಾದ ವನದುರ್ಗವನ್ನು ರಚಿಸಿ ಕಂದಕವನ್ನು ನಿರ್ಮಿಸಿದ ಬಗ್ಗೆ ಉಲ್ಲೇಖಿಸುತ್ತದೆ.

"ಅಚ್ಚುತರಾಯನ ಕಾಲದಲ್ಲಿನ ಅನವಾಲ ಶಾಸನವು ಕೆರೆಯ ನಿರ್ಮಾಣದ ಬಗ್ಗೆ ಉಲ್ಲೇಖಿಸುತ್ತದೆ. ಬನಶಂಕರಿಯ ೧೫೩೨ರ ಶಾಸನ ಹಾಳಾಗುತ್ತಿದ್ದ ಬದಾಮಿಯ ದುರ್ಗ ಬನದ ಮಾಹಾಮಾಯೆಯ ದೇಗುಲ ಹಾಗೂ ಇತರ ದೇವಾಲಯಗಳನ್ನು ಮಂತ್ರಿ ಚಿನ್ನಪ್ಪ ನಾಯಕನು. ತನ್ನ ತಮ್ಮ ಕುಮಾರ ಚಿಕ್ಕ ಚಿನ್ನಪ್ಪನಾಯಕನ ಮೂಲಕ ಜೀರ್ಣೋದ್ಧಾರ ಮಾಡಿಸಿದ ವಿಷಯವನ್ನು ತಿಳಿಸುತ್ತದೆ"[೪೪].

ಸದಾಶಿವರಾಯನ ಕಾಲದಲ್ಲಿ, ಬದಾಮಿಯಲ್ಲಿ ಕೆಲವು ಕೊತ್ತಲಗಳು ವಿಜಯನಗರದ ಅಧಿಕಾರಿಗಳಿಂದ ನಿರ್ಮಿಸಲ್ಪಟ್ಟವು. "ಮೂರನೆಯ ಗುಹಾಲಯದ ಎದುರುಗಡೆ ಕೊಂಡರಾಜ ಅರಸನೆಂಬ ಅಧಿಕಾರಿಯ ಉಸ್ತುವಾರಿಯಲ್ಲಿ ಒಂದು ಕೊತ್ತಲ ನಿರ್ಮಿಸಲ್ಪಟ್ಟಿದೆ. ಹಡಪದ ಎರೆ ಕೃಷ್ಣಪ್ಪನಾಯಕನಿಂದ ಮಾಲಗತ್ತಿ ಶಿವಾಲಯದ ಎದುರುಗಡೆ ಇನ್ನೊಂದು ಕೊತ್ತಲ ನಿರ್ಮಾಣಗೊಂಡ ಅಂಶವನ್ನು ಅಲ್ಲೇ ಇರುವ ಎರಡು ಪ್ರತ್ಯೇಕ ಶಾಸನಗಳು ದಾಖಲಿಸಿವೆ. ವಿಜಯನಗರದ ಅರಸರ ಕಾಲದಲ್ಲಿ ಬದಾಮಿಯು ಹೇಗೆ ರಾಜಕೀಯ ಪ್ರಾಮುಖ್ಯತೆ ಗಳಿಸಿತ್ತೆಂಬ ಅಂಶ ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ. ಬನಶಂಕರಿಯ ೧೫೪೨ರ ಶಾಸನ, ಹಡಪದ ಎರೆ ಕೃಷ್ಣಪ್ಪನಾಯಕನು ಬನದ ಮಹಾಮಾಯೆಯ ಅಮೃತಪಡಿ ಮತ್ತು ಅಂಗವೈಭವಗಳಿಗೆಂದು ಬದಾಮಿ ಸೀಮೆಗೆ ಸೇರಿದ ಮಲಪ್ರಭಾ ತೀರದ ಢಾಣಕ ಶಿರೂರನ್ನು ದಾನ ನೀಡಿದ ವಿಷಯವನ್ನು ದಾಖಲಿಸಿದೆ."[೪೫]

ಬಹಮನಿ ಸಾಮ್ರಾಜ್ಯ

ಅಫಘನ್ನ ಮೂಲದ ಹಸನ್‌ಗಂಗು(ಜಾಫರ್‌ಖಾನ್) ಎಂಬುವನು ೧೩೪೭ರಲ್ಲಿ ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿ, ಗುಲ್ಬರ್ಗಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಾವುದ್ಧೀನ್ ಬಹುಮನ್‌ಷಾ ಎಂಬ ಹೆಸರಿನೊಂದಿಗೆ ಬಹಮನಿ ಸಿಂಹಾಸನವನ್ನು ಅಲಂಕರಿಸಿದನು.

ಒಂದನೆಯ ಅಲ್ಲಾವುದ್ಧಿನ್ ಬಹಮನ್ ಷಾ ಅತ್ಯಲ್ಪಾವಧಿಯಲ್ಲೇ ಸಾಮ್ರಾಜ್ಯವನ್ನು ವಿಸ್ತರಿಸುವಲ್ಲಿ ಯಶಸ್ವಿಯಾದ. "ಬಂಡೆದ್ದು ಜಮಖಂಡಿಯಲ್ಲಿ ಅಡಗಿಕೊಂಡಿದ್ದ ಮುಧೋಳದ ನಾರಾಯಣ ಘೋರ್ಪಡೆಯನ್ನು ಸೋಲಿಸಿ ಅವನಿಂದ ಜಮಖಂಡಿಯನ್ನು ವಶಪಡಿಸಿಕೊಂಡನು. ಸೋತು ಶರಣಾದ

ಮುಧೋಳದ ಪ್ರಭು ನಾರಾಯಣನಿಗೆ ಸುಲ್ತಾನನು ಮುಧೋಳವನ್ನು ಜಹಗೀರಾಗಿ ನೀಡಿದನು. ತಾಜುದ್ದೀನ್ ಫಿರೋಜ ಬಹಮನ ಷಾ ಆಸ್ಥಾನದಲ್ಲಿ ನಡೆದಿದ್ದ ಗುಂಪುಗಾರಿಕೆಯನ್ನು ಬಗ್ಗು ಬಡಿಯಲು ಮುಂದಾಗಿ ಆಡಳಿತದಲ್ಲಿ ಬ್ರಾಹ್ಮಣರಿಗೆ ಅವಕಾಶ ಕಲ್ಪಿಸಿಕೊಟ್ಟನು. ಇವನು ೧೩೯೮ರಲ್ಲಿ ೮೪ ಹಳ್ಳಿಗಳನ್ನೊಳಗೊಂಡ ಮುಧೋಳ ಜಹಗೀರನ್ನು ಬೈರಾಮಸಿಂಗ್‌ನಿಗೆ ನೀಡಿದನು."[೪೬]

ಇಮ್ಮಡಿ ಮಹಮದ್ ಬಹಮನ್ ಷಾ ಆಳ್ವಿಕೆಯಲ್ಲಿ ಪ್ರಧಾನಮಂತ್ರಿಯಾಗಿದ್ದ ಮಹ್ಮದ್ ಗವಾನನು ಬಹಮನಿ ಸಾಮ್ರಾಜ್ಯದ ಏಳಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದನು. ಖೆಲ್ರಾಕೋಟೆಯನ್ನು ವಶಪಡಿಸಿಕೊಳ್ಳಲು ಗವಾನನು ೧೪೬೯ರಲ್ಲಿ ಮುಂದಾದಾಗ, ಮುಧೋಳದ ಪ್ರಭು ಭೀಮಸಿಂಗನು ತಮ್ಮ ಘೋರ್ಪಡೆಸೈನ್ಯವನ್ನು ಗವಾನನಿಗೆ ಒದಗಿಸಿಕೊಟ್ಟನು. ಇದರಿಂದ ಸಂಪ್ರಿತನಾದ ಸುಲ್ತಾನನು ಮುಧೋಳದ ಅರಸನಿಗೆ 'ರಾಜ ಘೋರ್ಪಡೆ ಬಹದ್ದೂರ್' ಬಿರುದನ್ನು ನೀಡಿ ಗೌರವಿಸಿದ ಅಂಶವನ್ನು ೧೪೭೧ರ ಫರ್ಮಾನು ದಾಖಲಿಸಿದೆ.

ಶಹಾಬುದ್ಧೀನ್ ಮಹಮ್ಮದ್ ಬಹಮನ್ ಷಾ ೧೪೯೪ರಲ್ಲಿ "ಗೋವಾದ ಕೊತ್ವಾಲನಾದ ಬಹದ್ದೂರ್ ಗಿಲಾನಿಯು ಗುಜರಾತ ಸುಲ್ತಾನನ ಬಂದರುಗಳ ಮೇಲೆ ಬಲಿಷ್ಠವಾದ ಪಡೆಯೊಂದಿಗೆ ದಾಳಿ ಮಾಡಿದನು. ಆಗ ಗುಜರಾತ್ ಸುಲ್ತಾನನ ಕೋರಿಕೆಯಂತೆ ಬಹಮನಿ ಸುಲ್ತಾನ ಬಹುದ್ದೂರ್ ಗಿಲಾನಿಯನ್ನು ನಿಯಂತ್ರಿಸಲು ತನ್ನೆಲ್ಲಾ ತರಫ್‌ದಾರರ ನೆರವು ಕೋರಿದನು. ಆ ಸಂದರ್ಭದಲ್ಲಿ ಜಮಖಂಡಿಯಲ್ಲಿ ಅಡಗಿದ್ದ ಬಹದ್ದೂರ್ ಗಿಲಾನಿಯನ್ನು ಜಮಖಂಡಿಯಿಂದ ಕಾಲ್ತೆಗೆಯುವಂತೆ ಮಾಡುವಲ್ಲಿ ಯುಸೂಫನು ಯಶಸ್ವಿಯಾದನು."[೪೭]

ವಿಜಾಪೂರದ ಆದಿಲ್‌ಶಾಹಿ ಸಾಮ್ರಾಜ್ಯ

ಯುಸೂಫ್ ಆದಿಲ್‌ಖಾನ್ ವಿಜಾಪುರ ಆದಿಲ್‌ಶಾಹಿ ಸಾಮ್ರಾಜ್ಯದ ಸ್ಥಾಪಕ. ಜಮಖಂಡಿ ಕೋಟೆಯನ್ನು ಗೋವೆಯ ಕೋತ್ವಾಲ ಬಹಾದ್ದೂರ್ ಗಿಲಾನಿಗೆ ವಹಿಸಿಕೊಟ್ಟನು.

ಇಸ್ಮಾಯಿಲ್ ಆದಿಲ್‌ಖಾನ "ಸುಲ್ತಾನ ಇಸ್ಮಾಯಿಲ್ ಬಾಲಕನಿದ್ದಾಗಲೆ ಅಧಿಕಾರಕ್ಕೆ ಬಂದನು. ರಾಜ್ಯದ ಪೂರ್ಣ ಹೊಣೆಯನ್ನು ಕಮಲ್‌ಖಾನ ಹೊತ್ತುಕೊಂಡು ಆಡಳಿತ ನಡೆಸಿದನು. ದೊರೆ ಇಸ್ಮಾಯಿಲ್‌ನ ವಿರುದ್ಧ ದಂಗೆಎದ್ದು ವಿಫಲನಾದ ಇಸ್ಮಾಯಿಲ್ ಬೀದರಿನ ಅಮಿಲ್ ಬರೀದನನ್ನು ಸೋಲಿಸಿದನು. ಪರ್ಷಿಯಾದ ದೊರೆ ಷಾ ವಿಜಾಪೂರಕ್ಕೆ ತನ್ನ ಪ್ರತಿನಿಧಿಯನ್ನು ಕಳುಹಿಸಿ ವಿಜಾಪೂರ ಸ್ವತಂತ್ರ ರಾಜ್ಯವೆಂದು ಮಾನ್ಯ ಮಾಡಿದನು."[೪೮]

ಒಂದನೆ ಇಬ್ರಾಹಿಂ ಅದಿಲ್ ಷಾ ವಿಜಯನಗರದ ಆಂತರಿಕ ಕದನದ ಲಾಭ ಪಡೆದು ರಾಯಚೂರ ದೋಅಬ್‌ಗಳನ್ನು ಮುತ್ತಿದನು. ನಂತರ ರಾಮರಾಯನ ಜೊತೆ ಉತ್ತಮ ಸಂಬಂಧ ಹೊಂದಿದನು. ಈತನ

ಮಂತ್ರಿ ಅಸಾದ್‌ಖಾನ ಅಹಮ್ಮದನಗರ, ಬೀದರ ಗೋಲ್ಕುಂಡಗಳನ್ನು ಗೆದ್ದುಕೊಂಡ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಆಡಳಿತದಲ್ಲೇ ಅಳವಡಿಸಿಕೊಂಡ.

ಒಂದನೆ ಅಲಿ ಅದಿಲ್ ಷಾ ಹದಿನಾರನೆ ವಯಸ್ಸಿಗೆ ಅಧಿಕಾರಕ್ಕೆ ಬಂದನು. ಷಿಯಾ ಧರ್ಮವನ್ನು ರಾಜ್ಯದ ಅಧಿಕೃತ ಧರ್ಮ ಎಂದು ಸಾರಿದನು. ಅಹಮ್ಮದನಗರ ವಿರುದ್ಧ ಸೇಡು ತೀರಿಸಿಕೊಳ್ಳಲು ವಿಜಯನಗರ ದೊರೆ ಅಳಿಯರಾಮರಾಯನೊಂದಿಗೆ ಉತ್ತಮ ಸಂಬಂಧ ಬೆಳೆಸಿ ಅಹಮ್ಮದನಗರವನ್ನು ಮುತ್ತಿ ವಶಪಡಿಸಿಕೊಂಡ.

ರಾಮರಾಯನು ಷಾಹಿ ಸುಲ್ತಾನರ ಒಳಜಗಳದಲ್ಲಿ ಭಾಗವಹಿಸುವದನ್ನು ಸಹಿಸದ ಸುಲ್ತಾನರು ವಿಜಯನಗರದ ವಿರುದ್ಧ ಒಕ್ಕೂಟ ರಚಿಸಿಕೊಂಡರು. ಅಲಿ ಆದಿಲ್ ಷಾನನ್ನು ತಮ್ಮತ್ತ ಸೆಳೆಯಲು ಅಹಮ್ಮದ ನಗರದ ಹುಸೇನ ನಿಜಾಂಷಾನ ಮಗಳು ಚಾಂದಬೀಬಿಯನ್ನು ಅಲಿ ಆದಿಲ್ ಷಾಗೆ ಮದುವೆಮಾಡಿ ಅಲಿಯ ಸಹೋದರಿ ಹದಿಯ ಸುಲ್ತಾನಳನ್ನು ಹುಸೇನ ಮಗ ಮುರ್ತಜಾನನಿಗೆ ನೀಡಿ ರಕ್ತ ಸಂಬಂಧ ಬೆಳೆಸಿ ಸುಲ್ತಾನರು ಒಂದು ಒಕ್ಕೂಟ ರಚಿಸಿಕೊಂಡು ತಾಳಿಕೋಟೆ ಕದನದಲ್ಲಿ ವಿಜಯನಗರವನ್ನು ಪತನಗೊಳಿಸಿದರು.

ಎರಡನೆ ಇಬ್ರಾಹಿಂ ಆದಿಲ್‌ಷಾ ಅಲಿಯ ಸಹೋದರನ ಮಗನಾದ ಎರಡನೆ ಇಬ್ರಾಹಿಂ ವಿಜಾಪೂರ ಸುಲ್ತಾನರಲ್ಲಿಯೇ ಶ್ರೇಷ್ಠನಾದವನು. ಅಧಿಕಾರಕ್ಕೆ ಬಂದಾಗ ಒಂಬತ್ತು ವರ್ಷದ ಬಾಲಕನಾಗಿದ್ದ ಚಾಂದಬೀಬಿಯು ಕಾಮಿಲ್ ಖಾನನೆಂಬ ಸರದಾರನ ನೆರವಿನಿಂದ ಆಡಳಿತ ನಡೆಸುತ್ತಿದ್ದಳು. ನಂತರ ಕಾಮಿಲ್ ಖಾನನನ್ನು ಕಿಶ್ವರಖಾನನಿಂದ ಕೊಲ್ಲಿಸಿ ಆತನ ನೆರವಿನಿಂದ ಆಡಳಿತ ನಡೆಸಿದಳು. ಕಿಶ್ವರ ಒಳ ಸಂಚು ರೂಪಿಸಿದಾಗ ಆತನನ್ನು ಕಿತ್ತೊಗೆದು ಅಫ್ಜಲ್‌ಖಾನನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದಳು. ಮುಂದೆ ಸೇನಾನಿ ದಿಲ್‌ವರಖಾನ ಎಂಟು ವರ್ಷಗಳ ಕಾಲ ರಾಜ್ಯ ರಕ್ಷಕನಾಗಿ ಕಾರ್ಯ ನಿರ್ವಹಿಸಿದನು. ಗೋಲ್ಕುಂಡದ ರಾಜಕುಮಾರಿ ತಾಜ್ ಸುಲ್ತಾನಳನ್ನು ಇಬ್ರಾಹಿಂ ಮದುವೆಯಾಗಿ ವೈವಾಹಿಕ ಸಂಬಂಧ ಬೆಳಸಿದನು. "ಮೊಘಲ ಸೈನ್ಯ ದಾಳಿಮಾಡಿದಾಗ ಇಬ್ರಾಹಿಂ ಸೋತು ಅಕ್ಬರನ ಮಗ ದನಿಯಾಲನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು. ೧೬೧೯ರಲ್ಲಿ ಬೀದರ ಮೇಲೆ ದಾಳಿ ಮಾಡಿದ ಇಬ್ರಾಹಿಂ ಬರಿದ್ ಷಾಹಿಗಳ ಆಡಳಿತ ಕೊನೆಗೊಳಿಸಿದನು. ಈತನು ಹಿಂದೂಗಳ ಬಗ್ಗೆ ಸಹಿಷ್ಣು ಗುಣವನ್ನು ಹೊಂದಿದ್ದ. ತನ್ನ ಕಿತಾಬ್-ಇ-ನವರಸ ಗ್ರಂಥದಲ್ಲಿ ಲಕ್ಷ್ಮೀ, ಸರಸ್ವತಿ, ಕುರಿತು ಪ್ರಾರ್ಥನೆ ಸಲ್ಲಿಸಿದ್ದಾನೆ. 'ಜಗದ್ಗುರು' ಎಂಬ ಬಿರುದನ್ನು ಪಡೆದಿದ್ದನು."[೪೯]

ಮಹಮ್ಮದ್ ಆದಿಲ್ ಷಾ ಮಹಮ್ಮದ್ ಆದಿಲ್ ಷಾನ ಕಾಲದಲ್ಲಿ ಮೊಘಲ ದೊರೆ ಷಹಜಾಹನ ವಿಜಾಪೂರದ ಮೇಲೆ ದಾಳಿ ಮಾಡಿದಾಗ ಆತನಿಗೆ ಕಪ್ಪಕಾಣಿಕೆ ನೀಡಿದನು. ವಿಜಾಪೂರದಲ್ಲಿ ಜಗತ್ ಪ್ರಸಿದ್ಧವಾದ ಗೋಲಗುಮ್ಮಟ ಈತನ ಕಾಲದಲ್ಲಿ ರಚನೆಗೊಂಡಿತು.

ಎರಡನೆ ಅಲಿ ಆದಿಲ್ ಷಾ ಈತನು "ಶಿವಾಜಿಯ ವಿರುದ್ಧ ತೀವ್ರ ಹೋರಾಡಬೇಕಾಯಿತು. ಶಿವಾಜಿ ವಿಜಾಪೂರದ ಸೇನಾನಿ ರಣದುಲ್ಲಾಖಾನನನ್ನು ಕೊಂದು ಹಾಕಿದ. ಶಿವಾಜಿಯು ವಿಜಾಪೂರದ ಮೇಲೆ ಎರಡು ಬಾರಿ ದಾಳಿ ಮಾಡಿದಾಗ ಭೀಮಾನದಿಯ ಉತ್ತರ ಭಾಗವನ್ನು ಆತನಿಗೆ ಬಿಟ್ಟು ಕೊಟ್ಟನು."[೫೦]

ಸಿಕಂದರ್‌ಆದಿಲ್ ಷಾ ನಾಲ್ಕು ವರ್ಷದ ಬಾಲಕ ಸಿಕಂದರ ಅಧಿಕಾರಕ್ಕೆ ಬಂದನು. "ಪ್ರಧಾನಿ ಅಬ್ದುಲ್ ಮಹಮ್ಮದನು ವಿಜಾಪೂರವನ್ನು ನಾಲ್ಕು ಭಾಗಗಳಾಗಿ ಮಾಡಿ ಖವಾಸಖಾನನ್ನು ರಿಜೆಂಟನನ್ನಾಗಿ ನೇಮಿಸಿದನು. ಔರಂಗಜೇಬನು ೧೬೮೫ರಲ್ಲಿ ವಿಜಾಪೂರದ ಮೇಲೆ ದಾಳಿ ಆರಂಭಿಸಿದನು. ೧೬೮೬ ಸೆಪ್ಟೆಂಬರ್ ೧೨ರಂದು ಸಿಂಕದರನನ್ನು ಬೆಳ್ಳಿಯ ಸಂಕೋಲೆಯಿಂದ ಬಂಧಿಸಲಾಯಿತು. ಈ ಮೂಲಕ ವಿಜಾಪೂರದಲ್ಲಿ ಆದಿಲ್ ಶಾಹಿಗಳ ಆಡಳಿತ ಕೊನೆಗೊಂಡಿತು."[೫೧]

ಹೈದರಾಬಾದ ನಿಜಾಮ

"೧೭೨೪ರ ನಂತರ ಹೈದರಾಬಾದಿನಲ್ಲಿ ಅಸಫ್ ಜಾ ಮನೆತನ ಸ್ವತಂತ್ರವಾಗಿ ಆಳಲು ಆರಂಭಿಸಿದಾಗ ವಿಜಾಪೂರ ಪ್ರಾಂತ ಆತನ ಆಳ್ವಿಕೆಗೆ ಒಳಪಟ್ಟಿತು. ಅಸಫನು ಕೃಷ್ಣೆಯ ದಕ್ಷಿಣ ಭಾಗವನ್ನು ಸವಣೂರಿನ ನಿಜಾಮನಿಗೆ ವಹಿಸಿದನು. ೧೭೫೬ ರಲ್ಲಿ ಬಾಗಲಕೋಟ ಮತ್ತು ಬದಾಮಿ ಪ್ರದೇಶಗಳನ್ನು ಸವಣೂರಿನ ನವಾಬ ಮರಾಠರ ಪೇಶ್ವೆಗಳಿಗೆ ಒಪ್ಪಿಸಿದನು. ಈ ಎರಡು ಪ್ರದೇಶಗಳನ್ನು ಪೇಶ್ವೆಗಳು ಮಲಾಹರಿರಾವ್ ರಾಸ್ತಿಯನಿಗೆ ವಹಿಸಿಕೊಟ್ಟರು. ಅವನು ಕೃಷ್ಣಾಜಿ ವಿಶ್ವನಾಥನನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಿದ."[೫೨]

ಹೈದರಲಿ ಮತ್ತು ಟಿಪ್ಪುಸುಲ್ತಾನ

"೧೭೭೬ರಲ್ಲಿ ಹೈದರಲಿಯು ಮರಾಠ ಮತ್ತು ನಿಜಾಮರ ಕೂಟವನ್ನು ಹಿಮ್ಮೆಟ್ಟಿಸಿದ. ೧೭೭೮ರಲ್ಲಿ ಗಜೇಂದ್ರಗಡ, ಬದಾಮಿ ಮತ್ತು ಜಾಲಿಹಾಳಗಳನ್ನು ವಶಪಡಿಸಿಕೊಂಡನು. ಅವುಗಳ ಆಡಳಿತವನ್ನು ಸ್ಥಳೀಯ ದೇಸಾಯಿಗಳಿಗೆ ವಹಿಸಿಕೊಟ್ಟು ದುಪ್ಪಟ್ಟು ಕಪ್ಪಕಾಣಿಕೆ ಪಡೆದನು. ಬಾಗಲಕೋಟವನ್ನು ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಂಡ ಸವಣೂರ ನವಾಬನಿಗೆ ವಹಿಸಿಕೊಟ್ಟ.

ಟಿಪ್ಪುಸುಲ್ತಾನ ಕಾಲದಲ್ಲಿ ನಾನಾ ಫಡ್ನವಿಸ್ ಮುಂದಾಳತ್ವದಲ್ಲಿ ಬೃಹತ್ ಸೈನ್ಯ ಬದಾಮಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡಿತು. ಮತ್ತೆ ರಾಸ್ತಿಯಾನಿಗೆ ಅದರ ಜವಾಬ್ದಾರಿಯನ್ನು ನೀಡಿದನು. ಟಿಪ್ಪು ನಿಜಾಮ ಮತ್ತು ಮರಾಠರ ಸೈನ್ಯವನ್ನು ಹಲವಾರು ಕಡೆ ಸೋಲಿಸಿದರು. ಬ್ರಿಟಿಷರ ಭಯದಿಂದ ದಕ್ಷಿಣ ವಿಜಾಪೂರದ ಮೇಲಿನ ತನ್ನ ಪ್ರಭುತ್ವವನ್ನು ಮರಾಠರಿಗೆ ಬಿಟ್ಟುಕೊಡಲು ೧೭೮೭ರಲ್ಲಿ ಹುನಗುಂದ ನಿಜಾಮರ ಕೈಸೇರಿತು."[೫೩]

ಮರಾಠರು

"೧೭೯೫ರಲ್ಲಿ ಹೈದರಾಬಾದ ನಿಜಾಮನನ್ನು ಸೋಲಿಸಿ ಮರಾಠರು ಹುನಗುಂದ ಪ್ರದೇಶವನ್ನು ವಶಪಡಿಸಿಕೊಂಡರು. ಕೊನೆಯ ಪೇಶ್ವೆ ಬಾಜಿರಾಯನು ರಾಸ್ತಿಯಾ ಮನೆತನದ ಮೇಲಿನ ದ್ವೇಷದಿಂದ ಬಾಗಲಕೋಟ ಮೇಲೆ ದಾಳಿ ಆರಂಭಿಸಿದನು. ೧೮೧೦ರಲ್ಲಿ ಪೇಶ್ವೆಯು ರಾಸ್ತಿಯಾ ಮನೆತನದವರನ್ನು ಸೋಲಿಸಿ ಬಾಗಲಕೋಟವನ್ನು ವಶಪಡಿಸಿಕೊಂಡನು. ೧೮೦೪ರಲ್ಲಿ ಪೇಶ್ವೆಬಾಜಿರಾಯನು ಕರ್ನಾಟಕ ಪ್ರಾಂತ್ಯದ ರಾಜ್ಯಪಾಲನಿಗೆ ಬದಾಮಿ ಬಾಗಲಕೋಟ ಹಾಗೂ ಜಾಲಿಹಾಳಗಳ ಅಧಿಕಾರಿಯಾದ ಮಾಧವರಾಯ ರಾಸ್ತಿಯನಿಂದ ವಶಪಡಿಸಿಕೊಳ್ಳಲು ಆದೇಶ ನೀಡಿದ. ರಾಸ್ತಿಯಾನು ಪುಣೆ ಸರಕಾರಕ್ಕೆ ನಲವತ್ತು ಲಕ್ಷ ರೂಪಾಯಿ ನೀಡಿ ತನ್ನ ಅಧಿಕಾರ ಉಳಿಸಿಕೊಂಡನು. ರಾಸ್ತಿಯಾ ಮನೆತನಕ್ಕೆ ಸೇರಿದ್ದ ಆನಂದರಾವ ಬಿಕ್ಕಾಜಿ ಸುಮಾರು ೧೮೦೦ರಲ್ಲಿ ಬಾಗಲಕೋಟದಲ್ಲಿ ಅರಮನೆ ನಿರ್ಮಿಸಿದನು. ಬಾಜಿರಾಯನು ೧೮೧೦ರಲ್ಲಿ ರಾಸ್ತಿಯನಿಂದ ಬಾಗಲಕೋಟ ಮತ್ತು ಬದಾಮಿಯನ್ನು ಕಸಿದುಕೊಂಡನು. ಬಾಗಲಕೋಟದ ಹೊಣೆಯನ್ನು ನೀಲಕಂಠರಾವ್ ಸುಭೆದಾರನಿಗೆ ವಹಿಸಿಕೊಟ್ಟನು. ಬ್ರಿಟಿಷರು ಬಾಗಲಕೋಟ ವಶಪಡಿಸಿಕೊಳ್ಳುವವರೆಗೂ ನೀಲಕಂಠರಾವ ಅಧಿಕಾರದಲ್ಲಿದ್ದನು."[೫೪]

ಮುಧೋಳ ಸಂಸ್ಥಾನ

"ಮುಧೋಳ ಸಂಸ್ಥಾನ ಭೋಸಲೆ ಮತ್ತು ಘೋರ್ಪಡೆ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ೧೮೮೨-೮೩ರಲ್ಲಿ ೩೬೧ ಚದರ ಮೈಲಿ ವಿಸ್ತಿರ್ಣ ಹೊಂದಿತ್ತು. ೮೧ಹಳ್ಳಿಗಳನ್ನು ೨.೪೫, ೩೬೦ ರೂಪಾಯಿಗಳ ವಾರ್ಷಿಕ ಆದಾಯ ಹೊಂದಿತು. ಈ ಸಂಸ್ಥಾನದಲ್ಲಿ ಮುಧೋಳ, ಥವಳೇಶ್ವರ, ಜಂಬಗಿ, ಮಾಚಕನೂರು ಹಾಗೂ ಲೋಕಾಪೂರ ಮಹಲ್‌ಗಳಿದ್ದವು. ಹಲಗಲಿ ಗ್ರಾಮದಲ್ಲಿ ಬೇಡರು ಬ್ರಿಟಿಷರ ವಿರುದ್ಧ ೧೮೫೭ರ ದಂಗೆ ಸಮಯದಲ್ಲಿ ಬಂಡಾಯ ಎದ್ದರು."[೫೫]

ಜಮಖಂಡಿ ಸಂಸ್ಥಾನ

"ಜಮಖಂಡಿ ಸಂಸ್ಥಾನ ಪಟವರ್ಧನ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ೧೮೮೨-೮೩ರಲ್ಲಿ ಜಮಖಂಡಿ ಸಂಸ್ಥಾನವು ೪೯೨ ಮೈಲಿ ಪ್ರದೇಶವನ್ನು ಒಳಗೊಂಡಿತ್ತು. ಅದರಲ್ಲಿ ಮೂರು ಮಹಲಗಳಿದ್ದವು. ಒಟ್ಟು ೮೮ ಗ್ರಾಮಗಳಿದ್ದವು. ೪,೧೨,೪೩೦ ರೂಪಾಯಿ ವಾರ್ಷಿಕ ಆದಾಯ ಹೊಂದಿತ್ತು."[೫೬]

ಅಡಿ ಟಿಪ್ಪಣಿ

೧. ಹನುಮಂತರಾಯ ಕಂಠಿ(ಸಂ), ಬಾಗಲಕೋಟ ಜಿಲ್ಲಾ ದರ್ಶನ, ಸ್ವಾಗತ ಸಮಿತಿ ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೦, ಪುಟ ಸಂಖ್ಯೆ ೧.

೨. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್,ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೪.

೩. ವಿಶ್ವನಾಥ ವಂಶಾಕೃತಮಠ(ಸಂ), ಅಗಸ್ತ್ಯ ತೀರ್ಥ, ಚಾಲುಕ್ಯ ಉತ್ಸವ ಸಮಿತಿಯ ಸ್ಮರಣ ಸಂಚಿಕೆ, ಬಾಗಲಕೋಟ, ೨೦೦೭, ಪುಟ ಸಂಖ್ಯೆ ೬.

೪. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೫-೧೬

೫. ಅದೇ, ಪುಟ ಸಂಖ್ಯೆ ೨೦.

೬. ಅದೇ, ಪುಟ ಸಂಖ್ಯೆ ೨೦.

೭. ಅದೇ, ಪುಟ ಸಂಖ್ಯೆ ೨೦.

೮. ಅದೇ, ಪುಟ ಸಂಖ್ಯೆ ೨೦.

೯. ಹನುಮಂತರಾಯ ಕಂಠಿ(ಸಂ), ಬಾಗಲಕೋಟ ಜಿಲ್ಲಾ ದರ್ಶನ, ಸ್ವಾಗತ ಸಮಿತಿ ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೦, ಪುಟ ಸಂಖ್ಯೆ ೧೫.

೧೦. ಅದೇ, ಪುಟ ಸಂಖ್ಯೆ ೨೨-೨೩.

೧೧. ಬಾಗಲಕೋಟ ಜಿಲ್ಲೆಯ ಅಂಕಿ ಅಂಶಗಳು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬಾಗಲಕೋಟ, ೨೦೧೪-೧೫, ಪುಟ ಸಂಖ್ಯೆ ೧೦.

೧೨. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೪೮

೧೩. ಅದೇ, ಪುಟ ಸಂಖ್ಯೆ ೪೮.

೧೪. ಅದೇ, ಪುಟ ಸಂಖ್ಯೆ ೪೯.

೧೫. ಅದೇ, ಪುಟ ಸಂಖ್ಯೆ ೪೯.

೧೬. ಗೋಪಾಲ ಆರ್(ಸಂ), ಬಾಗಲಕೋಟ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೧, ಪುಟ ಸಂಖ್ಯೆ ೯.

೧೭. ಅದೇ, ಪುಟ ಸಂಖ್ಯೆ ೯.

೧೮. ಅದೇ, ಪುಟಸಂಖ್ಯೆ ೧೦.

೧೯. ಅದೇ, ಪುಟಸಂಖ್ಯೆ ೧೧.

೨೦. ಅದೇ, ಪುಟಸಂಖ್ಯೆ ೧೨.

೨೧. ಅದೇ, ಪುಟ ಸಂಖ್ಯೆ ೧೩.

೨೨. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೬೪.

೨೩. .ಅದೇ, ಪುಟ ಸಂಖ್ಯೆ ೬೬.

೨೪. ಅದೇ, ಪುಟ ಸಂಖ್ಯೆ ೬೭.

೨೫. ಅದೇ, ಪುಟ ಸಂಖ್ಯೆ ೭೦.

೨೬. ಅದೇ, ಪುಟ ಸಂಖ್ಯೆ ೭೧.

೨೭. ಅದೇ, ಪುಟ ಸಂಖ್ಯೆ. ೭೫.

೨೮. ಅದೇ, ಪುಟ ಸಂಖ್ಯೆ ೭೭.

೨೯. ಅದೇ, ಪುಟ ಸಂಖ್ಯೆ ೮೨.

೩೦. ಅದೇ, ಪುಟ ಸಂಖ್ಯೆ ೮೩.

೩೧. ಎಸ್.ಐ.ಐ., ಸಂಪುಟ ೨೦, ಪುಟ ಸಂಖ್ಯೆ ೨೮೩, ಕ್ರಿ.ಶ. ೧೦೧೭.

೩೨. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೮೯.

೩೩. ಅದೇ, ಪುಟ ಸಂಖ್ಯೆ ೯೧.

೩೪. ಎಸ್.ಐ.ಐ., ಸಂಪುಟ ೨೦, ಪುಟ ಸಂಖ್ಯೆ ೨೮೭ ಕ್ರಿ.ಶ. ೧೦೮೨.

೩೫. ಕರ್ನಾಟಕ ಇನ್ಸ್ಕ್ರಿಪ್ಷನ್ಸ್, ಸಂಪುಟ ೫, ಪುಟ ಸಂಖ್ಯೆ ೨೧, ಕ್ರಿ.ಶ. ೧೧೨೫.

೩೬. ಐಸ್.ಐ.ಐ., ಸಂಪುಟ ೧೫, ಪುಟ ಸಂಖ್ಯೆ. ೫೭೭, ಕ್ರಿ.ಶ. ೧೨ನೇ ಶತಮಾನ.

೩೭. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೬೯.

೩೮. ದೇವರಕೊಂಡಾರೆಡ್ಡಿ, ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೮.

೩೯. ಎಸ್.ಐ.ಐ., ಸಂಪುಟ ೨೦, ಪುಟ ಸಂಖ್ಯೆ ೧೩೫, ನಿಖರವಾಗಿಲ್ಲ.

೪೦. ದೇವರಕೊಂಡಾರೆಡ್ಡಿ, ಮುಳುಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ಸಂಖ್ಯೆ ೯.

೪೧. ಅದೇ, ಪುಟ ಸಂಖ್ಯೆ ೯.

೪೨. ಅದೇ, ಪುಟ ಸಂಖ್ಯೆ ೯.

೪೩. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೧೮.

೪೪. ಅದೇ, ಪುಟ ಸಂಖ್ಯೆ ೧೧೯.

೪೫. ಅದೇ, ಪುಟ ಸಂಖ್ಯೆ ೧೨೦.

೪೬. ಅದೇ, ಪುಟ ಸಂಖ್ಯೆ ೧೨೧.

೪೭. ಅದೇ, ಪುಟ ಸಂಖ್ಯೆ ೧೨೩.

೪೮. ಅದೇ, ಪುಟ ಸಂಖ್ಯೆ ೧೩೦.

೪೯. ಸೂರ್ಯನಾಥ ಕಾಮತ, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಮ್.ಸಿ.ಸಿ. ಪಬ್ಲಿಕೇಷನ್, ಬೆಂಗಳೂರು, ೧೯೭೩, ಪುಟ ಸಂಖ್ಯೆ ೯೧-೯೨.

೫೦. ಅದೇ, ಪುಟ ಸಂಖ್ಯೆ ೯೧.

೫೧. ಅದೇ, ಪುಟ ಸಂಖ್ಯೆ ೯೨.

೫೨. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೬೧.

೫೩. ಅದೇ, ಪುಟ ಸಂಖ್ಯೆ ೧೬೨.

೫೪. ಅದೇ, ಪುಟಸಂಖ್ಯೆ ೧೬೩-೧೬೪.

೫೫. ಅದೇ, ಪುಟ ಸಂಖ್ಯೆ ೧೬೫.

೫೬. ಅದೇ, ಪುಟ ಸಂಖ್ಯೆ ೧೬೭.

ಅಧ್ಯಾಯ ೩

ರಾಷ್ಟ್ರೀಯತೆ ಮತ್ತು ಸ್ಥಳೀಯ ಬಂಡಾಯ

ಅಧ್ಯಾಯ ೩

ರಾಷ್ಟ್ರೀಯತೆ ಮತ್ತು ಸ್ಥಳೀಯ ಬಂಡಾಯ

೩.೧ ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯ

"ರಾಷ್ಟ್ರೀಯತೆ ಎಂಬ ಶಬ್ದವು ವಿಶಾಲವಾದ ಪರಿಕಲ್ಪನೆಯನ್ನು ಒಳಗೊಂಡಿದೆ. ರಾಷ್ಟ್ರ ಮತ್ತು ರಾಷ್ಟ್ರೀಯತೆ ಎಂಬ ಪದಗಳು ನಾಡಿನ ಬಗೆಗೆ ಅಭಿಮಾನ ಸೂಚಿಸುವಂತಾಗಿವೆ. ಸಾಮಾನ್ಯವಾಗಿ ಸ್ವತಂತ್ರ ಸರಕಾರವನ್ನು ಹೊಂದಿರುವ ಹಾಗೂ ಪರಸ್ಪರ ಐಕ್ಯ ಮನೋಭಾವನೆ ಹೊಂದಿರುವ ಜನಸಮುದಾಯವೇ ರಾಷ್ಟ್ರ ಎಂದಾಗಿದೆ."[೧] ಅರವಿಂದ ಘೋಷರವರ ಪ್ರಕಾರ "ದೇಶವೇ ರಾಷ್ಟ್ರೀಯತ್ವದ ಪ್ರತಿಷ್ಠಾನ ಒಂದೇ ಭೂಮಿ, ಜಾತಿ, ಧರ್ಮ ದೇಶ ಇವೆಲ್ಲವುಗಳು ರಾಷ್ಟ್ರೀಯತ್ವದ ಉಪಕರಣಗಳು"[೨] ಭಾರತದ ಪ್ರಾಚೀನ ಗ್ರಂಥಗಳಾದ ವೇದಗಳಲ್ಲಿ ರಾಷ್ಟ್ರೀಯತೆಯ ಉಲ್ಲೇಖಗಳು ದೊರೆಯುತ್ತದೆ. ಅಥರ್ವಣವೇದದ ಮಂತ್ರ (೧೯-೪೧-೧)ವು ಈ ರೀತಿಯಲ್ಲಿ ಸೂಚಿಸುತ್ತದೆ.

"ಭದ್ರಮಿಚ್ಛಂತ ಋಷಯಃ ಸ್ವರ್ವಿದ
ತಪೋದೀಕ್ಷಾಮುಪನಿಷೇದುರಗ್ರೇ
ತತೋ ರಾಷ್ಟ್ರಂ ಬಲಮೋಜಶ್ಚ ಜಾತಂ
ತದಸ್ಮೈ ದೇವಾ ಉಪಸಂ ನಮಂತು"

ಅಂದರೆ ಇಡಿ ಜಗತ್ತಿಗೆ ಕಲ್ಯಾಣವನ್ನುಂಟು ಮಾಡುವ ಇಚ್ಛೆಯಿಂದ ಆತ್ಮಜ್ಞಾನಿಗಳಾದ ಋಷಿಗಳು ಸೃಷ್ಟ್ಯಾಧಿಯಲ್ಲಿ ದೃಢದೀಕ್ಷೆ ತೊಟ್ಟು ಮಾಡಿದ ತಪಸ್ಸಿನ ಫಲವಾಗಿ ರಾಷ್ಟ್ರದ ನಿರ್ಮಾಣವಾಯಿತು. ರಾಷ್ಟ್ರದಲ್ಲಿ ಬಲ ಪರಾಕ್ರಮಗಳು ವೃದ್ಧಿಗೊಂಡವು. ಅಂಥ ಮಹಿಮಾನ್ವಿತ ರಾಷ್ಟ್ರವನ್ನು ದೇವತೆಗಳು, ವಿದ್ವಾಂಸರು ನಮ್ರತೆಯಿಂದ ಉಪಾಸನೆ ಮಾಡಿ ಅದನ್ನು ವೃದ್ಧಿಗೊಳಿಸಲಿ"[೩] ರಾಷ್ಟ್ರದ ಬಗೆಗೆ ನಮ್ಮ ಪೂರ್ವಿಕರಲ್ಲಿ ತಮ್ಮದೆಯಾದ ಕಲ್ಪನೆ ಇತ್ತು ಎಂಬುವದು ಸ್ಪಷ್ಟವಾಗುತ್ತದೆ.

'ಭಾರತೀಯರ ದೇಶಭಕ್ತಿ' ಗ್ರಂಥದಲ್ಲಿ ಹರ್ಡೀಕರ ಮಂಜಪ್ಪನವರು "ರಾಷ್ಟ್ರವೆಂದರೆ ಅದಕ್ಕೆ ಮೇರೆ ಬೇಕು. ಅದು ನಿಸರ್ಗದತ್ತವಾಗಿದ್ದರೆ ಚೆನ್ನ, ಇಲ್ಲದಿದ್ದರೆ ಕೃತ್ರಿಮವಾಗಿ ಯಾರಾದರೂ ಕಲ್ಪಿಸಿಕೊಳ್ಳಬೇಕು. ಹೀಗಿರದಿದ್ದರೆ ಅದು ಒಂದು ರಾಷ್ಟ್ರವೆಂದು ಪರಿಗಣಿಸಲಾಗದು. ಆಗ ವ್ಯಕ್ತಿಗಳಿಗೆ ಇದು ನನ್ನ ದೇಶ ಎಂದು ತಿಳಿಯಲು ಸಾಧ್ಯವಾಗುತ್ತದೆ. ನನ್ನ ದೇಶ ಎನ್ನುವಲ್ಲಿಯೇ ದೇಶವಾಸಿಯೊಬ್ಬನ ರಾಷ್ಟ್ರೀಯ ಅಭಿಮಾನವನ್ನು ಸೂಚಿಸುತ್ತದೆ".[೪] ಎಂದು ಪ್ರತಿಪಾದಿಸಿದ್ದಾರೆ.

"ರಾಷ್ಟ್ರೀಯತೆ ಎನ್ನುವುದು ಯುದ್ಧ ಅಥವಾ ಘರ್ಷಣೆಯ ಪರಿಸ್ಥಿತಿಯಲ್ಲಿ ಹೆಚ್ಚಾಗಿ ಉದ್ರೇಕಗೊಳ್ಳುವ ಮಾನಸಿಕ ಕ್ರಿಯೆ. ಆದರೆ ಇದು ನಕಾರಾತ್ಮಕವಾದ ಪ್ರತಿಕ್ರಿಯೆಯಾಗಿದೆ. ಇಂತಹ

ಮಾನಸಿಕ ಕ್ರಿಯೆ ಬ್ರಿಟಿಷರ ವಿರುದ್ಧ ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಉದ್ಭವವಾಯಿತು ಏಷ್ಯಾ ಹಾಗೂ ಆಫ್ರಿಕಾದ ರಾಷ್ಟ್ರಗಳಲ್ಲಿನ ರಾಷ್ಟ್ರೀಯತೆ ಮೂಲತಃವಾಗಿ ವಸಾಹತುಶಾಹಿ ಸ್ವರೂಪವನ್ನು ಹೊಂದಿದೆ."[5]

ಭಾರತೀಯ ರಾಷ್ಟ್ರೀಯ ಚಳವಳಿಯು ತನ್ನ ಆರಂಭದ ದಿನಗಳಲ್ಲಿ ವಿದೇಶಿ ಆಳ್ವಿಕೆಯ ದುಷ್ಟತನವನ್ನು ತಿಳಿಯುವ ಮತ್ತು ದೇಶಪ್ರೇಮವನ್ನು ಬೆಳಸುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿತು. ವಿದ್ಯಾವಂತ ಭಾರತೀಯರಿಗೆ ಅದು ಅವಶ್ಯಕ ರಾಜಕೀಯ ತರಬೇತಿಯನ್ನು ಕೊಟ್ಟಿತು. ಅದು ಜನರ ಮನೋಭಾವವನ್ನು ಬದಲಾಯಿಸಿ ದೇಶದಲ್ಲಿ ಒಂದು ಹೊಸ ಜೀವನವನ್ನು ಸೃಷ್ಟಿಸಿತು.

ಆಧುನಿಕ ಭಾರತದ ಮೊಟ್ಟ ಮೊದಲ ಸಮಾಜ ಸುಧಾರಕರಾದ ರಾಜಾರಾಮ ಮೋಹನರಾಯರು ಬ್ರಹ್ಮ ಸಮಾಜವನ್ನು ಸ್ಥಾಪಿಸಿ ಸಾಮಾಜಿಕ ಸುಧಾರಣೆಗೆ ಕಾರಣಕರ್ತರಾದರು. ಅವರು ಈ ದಿಸೆಯಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಮಾಡಿದ ಕಾರ್ಯ ಶ್ಲಾಘನೀಯವಾಗಿದೆ. ಅದೇ ಪ್ರಕಾರ ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯಸಮಾಜ, ಸ್ವಾಮಿವಿವೇಕಾನಂದರ ರಾಮಕೃಷ್ಣ ಮಿಷನ್, ಆ್ಯನಿಬೆಂಸೆಟರ ಥಿಯೋಸೊಫಿಕಲ್ ಸೊಸೈಟಿ ಹಾಗೂ ಇತರರು ಕೂಡ ಸಮಾಜೋ-ಧಾರ್ಮಿಕ ಸುಧಾರಣೆಯನ್ನು ಪ್ರತಿಪಾದಿಸುವ ಮೂಲಕ ಭಾರತೀಯರಲ್ಲಿ ಸ್ವಾಭಿಮಾನ, ಆತ್ಮಗೌರವ ಹಾಗೂ ದೇಶಭಕ್ತಿಯನ್ನು ಜಾಗೃತಿಗೊಳಿಸಿದರು. ರಾಷ್ಟ್ರೀಯತೆಯ ಉದಯಕ್ಕೆ ಪಾಶ್ಚಿಮಾತ್ಯ ಶಿಕ್ಷಣವು ಕಾರಣವಾಯಿತು. ಆಂಗ್ಲಭಾಷಾ ಬೋಧನೆಯಿಂದಾಗಿ ಭಾರತೀಯ ತರುಣರಲ್ಲಿ ಆತ್ಮಗೌರವ ಬೆಳೆಸಿ ನವ ಚಿಂತನೆಗೆ ನಾಂದಿಯಾಯಿತು.

ರಾಷ್ಟ್ರೀಯ ವಿಚಾರಗಳು ಈಗ ಮೇಲ್ವರ್ಗ ವಿದ್ಯಾವಂತ ಭಾರತೀಯರನ್ನಷ್ಟೇ ಆಕ್ರಮಿಸಿಕೊಂಡಿರಬೇಕಾದ ಪರಿಸ್ಥಿತಿ ಇರಲಿಲ್ಲ. ಬದಲಿಗೆ ಜನಸಮೂಹದಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಬೇಕಾಗಿತ್ತು. ಆದ್ದರಿಂದ ಸ್ವಾಮಿ ವಿವೇಕಾನಂದರು ಕೆಳವರ್ಗದವರು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕೆಂದು ಈ ರೀತಿ ಹೇಳಿದ್ದಾರೆ. "ಸಮೂಹದಿಂದ ಮಾತ್ರ ಭಾರತಕ್ಕೆ ಭರವಸೆ ಸಾಧ್ಯ. ಮೇಲ್ವರ್ಗವು ಭೌತಿಕವಾಗಿ ಮತ್ತು ನೈತಿಕವಾಗಿ ಮೃತವಾಗಿದೆ."[6] ಭಾರತೀಯರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧಗೊಳಿಸಲು ೧೮೮೫ರಲ್ಲಿ ಕಾಂಗ್ರೆಸ್ ಉದಯಿಸಿತು. ಅಲ್ಲದೆ ಸಾರಿಗೆ ಸಂಪರ್ಕ ಬೆಳೆಯಿತು. ಮುದ್ರಣ ಕರಗತವಾದ ನಂತರ ಪತ್ರಿಕೆಗಳು ಪ್ರಸಾರಗೊಂಡು ರಾಷ್ಟ್ರೀಯತೆ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

"೧೮೯೨-೧೯೦೫ರ ನಡುವಿನ ಅವಧಿಯ ರಾಜಕೀಯ ಘಟನೆಗಳು ರಾಷ್ಟ್ರೀಯವಾದಿಗಳನ್ನು ನಿರಾಶೆಗೊಳಿಸಿ, ಅವರು ಹೆಚ್ಚು ತೀವ್ರಗಾಮಿ ರಾಜಕೀಯದ ಬಗ್ಗೆ ಆಲೋಚಿಸುವಂತೆ ಮಾಡಿದವು. ೧೮೯೨ರ ಭಾರತೀಯ ಕೌನ್ಸಿಲ್ ಅಧಿನಿಯಮವು ಪೂರ್ಣ ನಿರಾಶಾದಾಯಕವಾಗಿತ್ತು. ಜೊತೆಗೆ ಜನರಿಗೆ

ಪ್ರಸ್ತುತ ಇದ್ದ ರಾಜಕೀಯ ಹಕ್ಕುಗಳ ಮೇಲೂ ಆಕ್ರಮಣ ಮಾಡಲಾಯಿತು. ೧೮೯೮ರಲ್ಲಿ ವಿದೇಶಿ ಆಡಳಿತದ ವಿರುದ್ಧ 'ಅತೃಪ್ತಿಯ ಭಾವನೆ'ಯನ್ನು ಕೆರಳಿಸುವದು ಒಂದು ಅಪರಾಧ ಎಂದು ಕಾನೂನು ಜಾರಿಗೆ ಮಾಡಲಾಯಿತು. ೧೮೯೯ರಲ್ಲಿ ಕಲ್ಕತ್ತಾದ ನಗರಸಭೆಯಲ್ಲಿದ್ದ ಭಾರತೀಯರ ಸಂಖ್ಯೆಯನ್ನು ಕಡಿಮೆ ಮಾಡಲಾಯಿತು. ೧೯೦೪ರಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ನಿರ್ಬಂಧಿಸಿ ಭಾರತೀಯ ಗೌಪ್ಯ ಅಧಿನಿಯಮವನ್ನು ಜಾರಿಗೊಳಿಸಲಾಯಿತು. ೧೮೯೭ರಲ್ಲಿ ನಾಟು ಸಹೋದರರನ್ನು ವಿಚಾರಣೆ ಮಾಡದೆ ಗಡಿಪಾರು ಮಾಡಲಾಯಿತು. ಮತ್ತು ಅವರ ಮೇಲಿನ ಆರೋಪಗಳನ್ನು ಬಹಿರಂಗಗೊಳಿಸಲಿಲ್ಲ. ಅದೇ ವರ್ಷ ಲೋಕಮಾನ್ಯ ತಿಲಕ ಮತ್ತು ಇನ್ನೂ ಕೆಲವು ಪತ್ರಿಕಾ ಸಂಪಾದಕರನ್ನು ವಿದೇಶಿ ಆಡಳಿತದ ವಿರುದ್ಧ ಜನರನ್ನು ಪ್ರಚೋದಿಸಿದ ಆರೋಪದ ಮೇಲೆ ದೀರ್ಘಾವಧಿ ಸೆರೆವಾಸದ ಶಿಕ್ಷೆಗೆ ಗುರಿಪಡಿಸಲಾಯಿತು. ಹೀಗೆ ತಮಗೆ ಹೆಚ್ಚು ರಾಜಕೀಯ ಹಕ್ಕುಗಳನ್ನು ಕೊಡುವುದರ ಬದಲು ಆಡಳಿತಗಾರರು ಇದ್ದ ಹಕ್ಕುಗಳಲ್ಲಿ ಕೆಲವು ಹಕ್ಕುಗಳನ್ನು ಹಿಂಪಡೆಯುತ್ತಿರುವುದನ್ನು ಜನರು ಗಮನಿಸಿದರು. ಲಾರ್ಡ್ ಕರ್ಜನ್‌ನ ಕಾಂಗ್ರೆಸ್ ವಿರೋಧಿ ನಡವಳಿಕೆಯು, ಬ್ರಿಟನ್ ಭಾರತವನ್ನು ಆಳುತ್ತಿರುವವರೆಗೆ ಯಾವುದೇ ರಾಜಕೀಯ ಮತ್ತು ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸುವುದು ಅಪ್ರಯೋಜಕ ಎಂದು ಜನರಿಗೆ ಸ್ಪಷ್ಟವಾಯಿತು. ಸೌಮ್ಯವಾದಿ ನಾಯಕ ಗೋಖಲೆ ಅವರೂ ಸಹ ಅಧಿಕಾರಶಾಹಿಯು ಮುಚ್ಚುಮರೆ ಇಲ್ಲದೆ ಸ್ವಾರ್ಥಿಯಾಗಿ ಬೆಳೆಯುತ್ತಿದೆ. ಮತ್ತು ರಾಷ್ಟ್ರೀಯ ನಿರೀಕ್ಷೆಗಳಿಗೆ ಬಹಿರಂಗವಾಗಿಯೇ ವಿರೋಧಿಯಾಗುತ್ತಿದೆ ಎಂದು ದೂರಿದರು. ಬ್ರಿಟಿಷ್ ಆಡಳಿತವು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಪ್ರಗತಿಪರವಾಗಿ ಉಳಿಯಲಿಲ್ಲ. ಪ್ರಾಥಮಿಕ ಮತ್ತು ತಾಂತ್ರಿಕ ವಿದ್ಯಾಭ್ಯಾಸವು ಯಾವುದೇ ಪ್ರಗತಿಯನ್ನು ಸಾಧಿಸಲಿಲ್ಲ. ಅಧಿಕಾರಿಗಳು ಭಾರತೀಯರ ಉನ್ನತ ವಿದ್ಯಾಭ್ಯಾಸದ ಬಗ್ಗೆ ಸಂಶಯಗೊಂಡು ದೇಶದಲ್ಲಿ ಅದರ ಪ್ರಸಾರವನ್ನು ತಡೆಯಲು ಪ್ರಯತ್ನಿಸುತ್ತಿದ್ದರು. ೧೯೦೪ರ ಭಾರತೀಯ ವಿಶ್ವವಿದ್ಯಾಲಯ ಅಧಿನಿಯಮವನ್ನು ರಾಷ್ಟ್ರೀಯವಾದಿಗಳು ಭಾರತೀಯ ವಿಶ್ವವಿದ್ಯಾಲಯಗಳನ್ನು ಬಿಗಿಯಾದ ಅಧಿಕೃತ ನಿಯಂತ್ರಣಕ್ಕೆ ಮತ್ತು ಉನ್ನತ ವಿದ್ಯಾಭ್ಯಾಸ ತಡೆಗೆ ಮಾಡುತ್ತಿರುವ ಪ್ರಯತ್ನ ಎಂದು ತಿಳಿದರು. ಹೀಗೆ ಹೆಚ್ಚು ಜನ ಭಾರತೀಯರಿಗೆ ದೇಶದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಗತಿಗೆ ಸ್ವರಾಜ್ಯವು ಅವಶ್ಯಕ ಮತ್ತು ರಾಜಕೀಯ ದಾಸ್ಯವೆಂದರೆ ಭಾರತೀಯರ ಬೆಳವಣಿಗೆಗೆ ತಡೆ ಎಂದು ಸ್ಪಷ್ಟವಾಗಿತ್ತು."[೭] ಹತ್ತೊಂಬತ್ತನೆಯ ಶತಮಾನದ ಅಂತ್ಯಕ್ಕೆ ಭಾರತೀಯ ರಾಷ್ಟ್ರೀಯವಾದಿಗಳು ಆತ್ಮಗೌರವ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡಿದ್ದರು. ತಮ್ಮನ್ನು ತಾವು ಆಳಿಸಿಕೊಳ್ಳುವ ಸಾಮರ್ಥ್ಯದ ಬಗ್ಗೆ ಮತ್ತು ಭವಿಷ್ಯದಲ್ಲಿ ದೇಶದ ಅಭಿವೃದ್ಧಿಯ ಬಗ್ಗೆ ಅವರು ನಂಬಿಕೆಯನ್ನು ಗಳಿಸಿಕೊಂಡಿದ್ದರು. ತಿಲಕ್, ಅರವಿಂದ ಘೋಷ ಮತ್ತು ಬಿಪಿನ್ ಚಂದ್ರಪಾಲ್‌ರಂತಹ ನಾಯಕರು ಆತ್ಮಗೌರವದ ಸಂದೇಶವನ್ನು ಬೋಧಿಸಿದರು ಮತ್ತು ರಾಷ್ಟ್ರೀಯವಾದಿಗಳು ಭಾರತೀಯರ ಸ್ವಭಾವ ಮತ್ತು ಸಾಮರ್ಥ್ಯವನ್ನು ಅವಲಂಬಿಸಬೇಕೆಂದು ತಿಳಿಸಿದರು. ತಮ್ಮ ದೈನ್ಯಸ್ಥಿತಿಯ ನಿವಾರಣೆಗೆ ನಮ್ಮ ಕೈಗಳಲ್ಲೇ ಪರಿಹಾರ ಇದೆ. ಆದ್ದರಿಂದ ಅವರು ಭಯಮುಕ್ತರಾಗಿ ಶಕ್ತಿಶಾಲಿಗಳಾಗಬೇಕೆಂದು

ಜನರಿಗೆ ತಿಳಿಸಿದರು. ಸ್ವ ಸಾಮರ್ಥ್ಯದಲ್ಲಿನ ನಂಬಿಕೆಯು ರಾಷ್ಟ್ರೀಯ ಚಳವಳಿಯ ವಿಸ್ತರಣೆಗೂ ಉತ್ಸಾಹ ತುಂಬಿತು. ರಾಷ್ಟ್ರೀಯ ವಿಚಾರಗಳು ಶಕ್ತಿಗಳ ಜೊತೆ ಸ್ಥಾನ ಪಡೆಯಬೇಕು. "ಐರ್ಲೆಂಡ್, ರಷ್ಯಾ, ಈಜಿಪ್ತ, ಟರ್ಕಿ, ಚೀನಾ ಮತ್ತು ದಕ್ಷಿಣ ಆಫ್ರಿಕದ ಬೊಯೆರ್ ಯುದ್ಧಗಳು ತ್ಯಾಗ ಮಾಡಬಲ್ಲ ಮನಸ್ಸಿನ ಜನರು ಒಗ್ಗೂಡಿದರೆ. ಎಂತಹ ಪ್ರಬಲ ನಿರಂಕುಶಾಧಿಕಾರದ ಸರಕಾರದ ಜೊತೆಗೂ ಸ್ಪರ್ಧಿಸಬಲ್ಲದು ಎಂದು ಭಾರತೀಯರಿಗೆ ಮನವರಿಕೆ ಮಾಡಿ ಕೊಟ್ಟವು. ಎಲ್ಲಕಿಂತ ಮುಖ್ಯವಾಗಿ ಬೇಕಾಗಿದ್ದುದು ದೇಶಭಕ್ತಿ ಮತ್ತು ಸ್ವಾರ್ಥತ್ಯಾಗ."[೮]

ರಾಷ್ಟ್ರೀಯತೆಯ ಬಗ್ಗೆ ವಿಚಾರಿಸುತ್ತಾ ನೆಹರುರವರು ಸ್ವಾತಂತ್ರ್ಯ ಚಳವಳಿಯ ಪ್ರಚಾರದಲ್ಲಿ "ಭಾರತ ಮಾತೆ ಎಂದರೆ ಯಾರು ? ಎಂದು ಕೇಳಿದಾಗ ಈ ನೆಲ, ಈ ಭೂಮಿ, ಭೂ ದೇವಿ, ಪೃಥ್ವಿ ಮಾತೆ, ಈ ದೇಶ, ಚಾಮುಂಡೇಶ್ವರಿ ಇತ್ಯಾದಿ ಉತ್ತರಗಳು ಬಂದವು. ಆಗ ನೆಹರೂ ಅವರು ಭಾರತ ಮಾತಾ ಎಂದರೆ ಈ ನೆಲ, ದೇಶ ಯಾವುದು ಅಲ್ಲ. ಈ ದೇಶದ ವಿವಿಧ ಭಾಷೆಯ, ವಿವಿಧ ಸಂಸ್ಕೃತಿಯ, ವಿವಿಧ ಧರ್ಮದ ಜನ ಸಮುದಾಯವು ಎಂದರು."[೯]

ಸ್ವಾತಂತ್ರ್ಯದ ಅರ್ಥ

ಸ್ವಸ್ಯ – ತಂತ್ರ – ಸ್ವತಂತ್ರ , ತಮ್ಮ ತಂತ್ರದಲ್ಲೇ ಇರುವವರು ಪರರ ಆಧೀನರಾಗಿರದೆ ತಮ್ಮ ಸ್ವತಂತ್ರ ವಿಚಾರವುಳ್ಳವರು ಎಂದರ್ಥ ನೀಡುವದು.

ಸ್ವಾತಂತ್ರ್ಯವೆಂದರೆ ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ಮತ್ತೊಬ್ಬರನ್ನು ಆಶ್ರಮಿಸದೆ ಇರುವದು. ಮನುಷ್ಯನಿಗೆ ಜೀವಿಸಲು ಸ್ವಾತಂತ್ರ್ಯವು ಎಷ್ಟು ಮುಖ್ಯವೊ ಹಾಗೆ ದೇಶಕ್ಕೂ ತನ್ನ ಆಡಳಿತವನ್ನು ಸುಗಮವಾಗಿ ನಿರ್ವಹಿಸಿಕೊಂಡು ಹೋಗಲು ಸ್ವಾತಂತ್ರ್ಯ ಅವಶ್ಯಕವಾಗಿದೆ.

'ತಂತಿ ವಾದ್ಯವು ಲೇಸು ಮಂತ್ರಿಯ ಕಳೆ ಲೇಸು
ಯಂತ್ರವಾಹಕನ ದಯೆ ಲೇಸು ! ಜಗದಿ
ಸ್ವಾತಂತ್ರ್ಯವೇ ಲೇಸು ಸರ್ವಜ್ಞ'

ಮನಸ್ಸಿಗೆ ಮುದ ನೀಡುವದಕ್ಕೆ ತಂತಿ ವಾದ್ಯವು ಲೇಸು, ಇಷ್ಟಾರ್ಥ ಸಿದ್ಧಿಗೆ ಮಂತ್ರಿಯ ಸ್ನೇಹ ಲೇಸು, ಒಂದು ಸ್ಥಳ ತಲುಪಲು ಯಂತ್ರವಾಹಕ (ಚಾಲಕ)ನ ದಯೆ ಲೇಸು ಇವೆಲ್ಲಕಿಂತ ಮಿಗಿಲಾಗಿ ಜಗತ್ತಿಗೆ ಸ್ವಾತಂತ್ರ್ಯವೆ ಲೇಸೆಂದು ಸರ್ವಜ್ಞ ಹೇಳಿದ್ದಾರೆ.

ಕವಿ ಈಶ್ವರ ಸಣಕಲ್ಲರವರು – 'ಸ್ವಾತಂತ್ರ್ಯವೇ ಬೇಕು ಏಳ್ಗೆಗೆ ಸ್ವಾತಂತ್ರ್ಯವೇ ಬೇಕು ....' ಎಂದು ಹಾಡುವ ಮೂಲಕ ಸ್ವಾತಂತ್ರ್ಯ ಎಲ್ಲರಿಗೂ ಅವಶ್ಯವೆಂದು ಸಾರಿ ಹೇಳಿದ್ದಾರೆ.

ವ್ಯಾಖ್ಯಾನಗಳು

೧. ರವೀಂದ್ರನಾಥ ಟ್ಯಾಗೋರ –"ಎಲ್ಲಿ ನಿರ್ಭಯ ಚಿತ್ತ ಉಚ್ಚ ಶಿರ ಹಾಗೂ ಎಲ್ಲಿ ಜ್ಞಾನದ ಮೌಲ್ಯ ಮುಕ್ತವಾಗಿರುವದೋ ಅದುವೇ ಸ್ವಾತಂತ್ರ್ಯ" ಎಂದು ಹೇಳಿದ್ದಾರೆ.

೨. ಇಸ್‌ಕೇಸ ಹೆರಾಲ್ಡ್ ಎಲ್ – ಎಂಬ ಅಮೆರಿಕದ ನ್ಯಾಯಾಧೀಶ ಮತ್ತು ಪತ್ರಕರ್ತ ತನ್ನ ಭಾಷಣದಲ್ಲಿ "ಸ್ವಾತಂತ್ರ್ಯವೆಂದರೆ ಚೇತನ ಅದು ಎಂದೂ ಸಾಯುವದಿಲ್ಲ ಅದು ಎಲ್ಲ ಕಾಲಕ್ಕೂ ಉಳಿಯುತ್ತದೆ" ಎಂದು ಉಲ್ಲೇಖಿಸಿದ್ದಾರೆ.

೩.೨ ಬ್ರಿಟಿಷರ ಆಕ್ರಮಣ

೧೮೦೦ರ ವೇಳೆಗೆ ಭಾರತದಲ್ಲಿ ಪ್ರಬಲ ರಾಜಕೀಯ ಶಕ್ತಿಗಳಾಗಿ ಬ್ರಿಟಿಷರು ರೂಪುಗೊಂಡರು. ತತ್ಪರಿಣಾಮವಾಗಿ ೧೮೧೭ರ ವೇಳೆಗೆ ಪೇಶ್ವೆ ಮತ್ತು ಬ್ರಿಟಿಷರ ಸಂಬಂಧ ಹದಗೆಟ್ಟು ಯುದ್ಧ ಅನಿವಾರ್ಯವಾಯಿತು. ಜನರಲ್ ಮನ್ರೋ ಬೃಹತ್ತಾದ ಬ್ರಿಟಿಷ ಸೈನ್ಯದೊಂದಿಗೆ ಬದಾಮಿಗೆ ಮುತ್ತಿಗೆ ಹಾಕಿದನು. ೧೮೧೮ರ ಫೆಬ್ರುವರಿ ೧೩ರಂದು ಬದಾಮಿ ಕೋಟೆಯ ಮೇಲೆ ದಾಳಿ ಮಾಡಿದಾಗ ಆರಂಭದಲ್ಲಿ ಪ್ರಬಲ ವಿರೋಧ ಎದುರಿಸಿದರೂ ಕೂಡ ಕೊನೆಗೆ ಜನರಲ್ ಮನ್ರೋ ೧೮ ರಂದು ಬದಾಮಿ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದನು.

"ಬದಾಮಿಯ ಉತ್ತರಕ್ಕೆ ದಾಳಿ ಮುಂದುವರೆಸಿ ಫೆಬ್ರುವರಿ ೨೨ರಂದು ಯಾವುದೇ ಪ್ರಬಲ ವಿರೋಧವಿಲ್ಲದೆ ಬಾಗಲಕೋಟವನ್ನು ವಶಪಡಿಸಿಕೊಂಡನು. ಇದರಿಂದ ಉತ್ತೇಜಿತಗೊಂಡ ಮನ್ರೋ ಕೃಷ್ಣೆಯ ಉತ್ತರಭಾಗವನ್ನು ೧೮೧೮ರ ಮೇ ೧೭ರ ವೇಳೆಗೆ ಸಂಪೂರ್ಣ ವಿಜಾಪೂರ ಪ್ರದೇಶವನ್ನು ಆಕ್ರಮಿಸಿಕೊಂಡನು."[೧೦] ಪೇಶ್ವೆಗಳ ಆಳ್ವಿಕೆಯನ್ನು ಕೊನೆಗೊಳಿಸಿ ಈ ಪ್ರದೇಶವನ್ನು ಮುಂಬಯಿ ಗವರ್ನರನ ಆಳ್ವಿಕೆಗೆ ಒಳಪಡಿಸಲಾಯಿತು. ಸದರನ್ ಮರಾಠ ಪ್ರದೇಶ ಎಂದು ಕರೆಸಿಕೊಳ್ಳುತ್ತಿದ್ದ ಜಮಖಂಡಿಯನ್ನು ಪಟವರ್ಧನರ ಆಳ್ವಿಕೆಗೆ ಹಾಗೂ ಮುಧೋಳವನ್ನು ಘೋರ್ಪಡೆಯವರಿಗೆ ವಹಿಸಿಕೊಡಲಾಯಿತು.

"ಬಾಗಲಕೋಟ, ಇಂಡಿ, ಮುದ್ದೇಬಿಹಾಳ ತಾಲೂಕುಗಳನ್ನು ಒಳಗೊಂಡ ಉಪ ಕಲೆಕ್ಟರೆಟ್ ಇದು ಧಾರವಾಡ ಕಲೆಕ್ಟರೆಟ್‌ಗೆ ಸೇರಿತ್ತು. ೧೮೨೦ರಲ್ಲಿ ಉಪಕಲೆಕ್ಟರೇಟ್ ರದ್ದಾಯಿತು. ಬಾಗಲಕೋಟ, ಬದಾಮಿ ಹಾಗೂ ಹುನಗುಂದ ತಾಲೂಕಗಳು ೧೮೧೮ ರಿಂದ ೧೮೩೭ರ ವರೆಗೆ ಧಾರವಾಡ ಕಲೆಕ್ಟರೆಟ್ ಅಧೀನದಲ್ಲಿದ್ದರೂ ೧೮೩೭ರಲ್ಲಿ ಹೊಸದಾಗಿ ರೂಪಗೊಂಡ ಬೆಳಗಾವಿ ಕಲೆಕ್ಟರೆಟ್‌ಗೆ ವರ್ಗಾವಣೆಗೊಂಡವು. ಬಾಗಲಕೋಟ ಹಾಗೂ ಬದಾಮಿ ತಾಲೂಕುಗಳಿಗೆ ಕ್ರಮವಾಗಿ ಸೇರಿದ ಬೀಳಗಿ ಮತ್ತು ಕೆರೂರು ಉಪತಾಲೂಕುಗಳಾದವು. ದಕ್ಷಿಣಭಾಗ ಕಂದಾಯ ಆಯುಕ್ತನಾದ ಡಬ್ಲ್ಯು. ಹಾರ್ಟ್‌ನ

ಸಲಹೆಯಂತೆ ಆಡಳಿತ ಅನುಕೂಲಕ್ಕಾಗಿ ಇಂಡಿ, ಹಿಪ್ಪರಗಿ, ವಿಜಾಪೂರ, ಮನಗೂಳಿ, ಮುದ್ದೇಬಿಹಾಳ, ಬಾಗಲಕೋಟ, ಬದಾಮಿ ಹಾಗೂ ಹುನಗುಂದಗಳನ್ನು ಒಳಗೊಂಡ ಕಲಾದಗಿ ಕಲೆಕ್ಟರೇಟ್ ೧೮೬೪ ಡಿಸೆಂಬರ್ ೧ ರಿಂದ ಅಸ್ತಿತ್ವಕ್ಕೆ ಬಂದಿತು. ನಂತರ ಕರ್ನಲ್ ಸೆಂಟ್ ಕ್ಲಾರ್ ವಿಲ್ಕಿನ್ಸ್‌ನ ಸಲಹೆಯಂತೆ ೧೮೮೫ ರಿಂದ ವಿಜಾಪೂರ ಜಿಲ್ಲಾ ಕೇಂದ್ರವಾಯಿತು".[೧೧]

೩.೩ ಸ್ಥಳೀಯ ಬಂಡಾಯಗಳು

ವ್ಯಾಪಾರ ಉದ್ದೇಶಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ರಾಜಕೀಯವಾಗಿ ಪ್ರಬಲವಾಗಿ ಬೆಳೆಯತೊಡಗಿದರು. ದೇಶಿಯ ಅರಸರ ಒಳಜಗಳಗಳಲ್ಲಿ ಪ್ರವೇಶಿಸಿ ಲಾಭ ಪಡೆಯತೊಡಗಿದರು. ಭಾರತೀಯರು ಬ್ರಿಟಿಷರ ವಸಾಹತುಶಾಹಿ ಧೋರಣೆಯನ್ನು ವಿರೋಧಿಸಿ ಆರಂಭದಲ್ಲಿ ಸ್ಥಳೀಯವಾಗಿ ಪ್ರತಿಭಟನೆಗಳು ನಡೆದವು. ೧೮೫೭ ಕ್ಕಿಂತ ಮುಂಚಿತವಾಗಿ ಕರ್ನಾಟಕದಲ್ಲಿ ಕೊಪ್ಪಳ (೧೮೧೯), ಕಿತ್ತೂರು (೧೮೨೪), ಸಿಂದಗಿ (೧೮೨೪), ಬದಾಮಿ (೧೮೪೧) ಗಳಲ್ಲಿ ಬಂಡಾಯಗಳಾದವು.

೧೮೫೭ ಕ್ಕಿಂತ ಮೊದಲಿನ ಬಂಡಾಯಗಳು

೧. ಸಿಂದಗಿ ಬಂಡಾಯ (೧೮೨೪)

ವಿಜಾಪೂರ ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದರೆ ಸಿಂದಗಿ ಬಂಡಾಯ. ೧೮೨೦ರಲ್ಲಿ ಬ್ರಿಟಿಷರು ಅನುಸರಿಸುತ್ತಿದ್ದ ತೆರಿಗೆ ನೀತಿ ಈ ಬಂಡಾಯಕ್ಕೆ ಕಾರಣವಾಯಿತು. ೧೮೨೪ರ ಡಿಸೆಂಬರದಲ್ಲಿ ಚಿಂದಂಬರ ದೀಕ್ಷಿತರ ಮುಂದಾಳತ್ವದಲ್ಲಿ ಬಂಡಾಯ ಬಾವುಟ ಹಾರಿಸಲಾಯಿತು. ಚಿದಂಬರ ದೀಕ್ಷಿತರು 'ಈಸ್ಟ್ ಇಂಡಿಯಾ ಕಂಪನಿ ಅಳಿದು ಹೋಯಿತು ನಾವು ಅದಕ್ಕೆ ಮುನ್ನಣೆ ಕೊಡಬೇಕಾಗಿಲ್ಲ. ಈಗ ನಾವು ಸ್ವತಂತ್ರರು' ಎಂದು ಘೋಷಿಸಿದರು. "ಚಿದಂಬರ ದೀಕ್ಷಿತರ ಮಗ ದಿವಾಕರ ದೀಕ್ಷಿತ, ರಾವಜಿ ರಾಸ್ತಿಯ, ಬಾಳಪ್ಪ ದೇಶಪಾಂಡೆ, ಟಕ್ಕಳಿಯ ಶೆಟ್ಟಿಯಪ್ಪ ಮುಂತಾದವರು ಈ ಬಂಡಾಯದಲ್ಲಿ ಪ್ರಧಾನ ಪಾತ್ರವಹಿಸಿದರು. ದಿವಾಕರ ದೀಕ್ಷಿತರು ರಾವಜಿ ರಾಸ್ತಿಯ, ಬಾಳಪ್ಪ ದೇಶಪಾಂಡೆಯವರ ನೆರವಿನಿಂದ ಒಂದು ಸೈನ್ಯಕಟ್ಟಿ ಸಿಂದಗಿ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಠಾಣೆಯನ್ನು ಸ್ಥಾಪಿಸಿದರು. ಅಮೃತರಾವ ವಿನಾಯಕರಾವ ಎಂಬುವವರು ಧ್ವಜವನ್ನು ಹಾರಿಸಿದರು. ಸಿಂದಗಿ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳ ಕಂದಾಯವನ್ನು ತಾವೇ ವಸೂಲಿ ಮಾಡಲು ಆರಂಭಿಸಿದರು. ಆದರೆ ಇದು ವಿದ್ರೋಹಿಗಳಿಂದಾಗಿ ವಿಫಲಗೊಂಡಿತು. ಅಣ್ಣಪ್ಪ ಫಡಕೆ ಎಂಬುವನು ಸರಕಾರಕ್ಕೆ ಮಾಹಿತಿ ನೀಡಿದಕ್ಕಾಗಿ ಬಂಡಾಯಗಾರರಿಂದ ಕೊಲೆಯಾದನು."[೧೨]

ಸಿಂದಗಿ ಬಂಡಾಯದ ಸುದ್ದಿತಿಳಿದ ಧಾರವಾಡ ಕಲೆಕ್ಟರ್ ಸ್ಟೀವನ್‌ಸನ್ ಬಂಡಾಯಗಾರರ ಸುಳಿವು ನೀಡಿದವರಿಗೆ ಹಣದ ರೂಪದಲ್ಲಿ ಬಹುಮಾನ ನೀಡುವುದಾಗಿ ಘೋಷಿಸಿದನು. "ದಿವಾಕರ

ದೀಕ್ಷಿತರಿಗೆ ೧೦೦೦ ರೂ, ರಾವಜಿ ರಾಸ್ತಿಯವರಿಗೆ ೫೦೦ ರೂ, ಬಾಳಪ್ಪ ದೇಶಪಾಂಡೆಯವರಿಗೆ ೫೦೦ ರೂ, ಆಲೂಪ ಪಿಂಡಾರಿಯವರಿಗೆ ೨೦೦ ರೂ, ಶೆಟ್ಟಿಯಪ್ಪನವರಿಗೆ ೧೦೦ ರೂ, ಶೀನಪ್ಪ ನವರಿಗೆ ೧೦೦ ರೂ ಎಂದು ಆದೇಶ ಹೊರಡಿಸಿದನು. ಹಾಗೂ ಬಂಡಾಯಗಾರರಿಗೆ ಆಶ್ರಯ ನೀಡುವದು ಅಪರಾಧ ಎಂದು ಘೋಷಿಸಿದನು."[೧೨]

ಬ್ರಿಟಿಷ್ ಸೈನ್ಯವನ್ನು ಸಿಂದಗಿಗೆ ರವಾನಿಸಿದಾಗ ಬಂಡಾಯಗಾರರಿಗೆ ಬ್ರಿಟಿಷರ ವಿರುದ್ಧ ವ್ಯವಸ್ಥಿತವಾಗಿ ಹೋರಾಡಲು ಸಲಕರಣೆಗಳಿರಲಿಲ್ಲ ಹಾಗೂ ಅಧಿಕ ಸಂಖ್ಯೆಯಲ್ಲಿ ಸ್ಥಳೀಯರ ಬೆಂಬಲವೂ ದೊರೆಯಲಿಲ್ಲ. ಸುಲಭವಾಗಿ ಸಿಂದಗಿ ಬ್ರಿಟಿಷರ ವಶವಾಯಿತು. ಸಿಂದಗಿ ಬಂಡಾಯ ವಿಫಲವಾದರೂ ಕೂಡಾ ಬ್ರಿಟಿಷ ವಿರೋಧಿ ಮನೋಭಾವನೆಗಳು ವಿಜಾಪೂರ ಜಿಲ್ಲೆ ಜನರಲ್ಲಿ ಇತ್ತು.

೨. ಬದಾಮಿ ಬಂಡಾಯ (೧೮೪೦)

ಬದಾಮಿಯಲ್ಲಿ ನರಸಪ್ಪ ಪೇಟಕರ್ ಬಂಡಾಯ ಆರಂಭಿಸಿದನು. ಈ ಬಂಡಾಯವು ಕುತೂಹಲಕಾರಿಯಾಗಿದೆ. "ಶಿವಾಜಿಯ ವಂಶಜನಾದ ಪ್ರತಾಪಸಿಂಹನು ಸತಾರಾ ಸಂಸ್ಥಾನದ ಮಹಾರಾಜನಾಗಿದ್ದ. 'ಸತಾರದ ಛತ್ರಪತಿ' ಎಂಬ ಬಿರುದು ಹೊಂದಿದ್ದನು. ಆಗ ಮರಾಠ ಸಾಮ್ರಾಜ್ಯ ಪೇಶ್ವೆಯವರ ಹಿರಿತನದಲ್ಲಿತ್ತು. ಇದನ್ನರಿತ ಬ್ರಿಟಿಷರು ಪ್ರತಾಪಸಿಂಹನನ್ನು 'ಮರಾಠ ಛತ್ರಪತಿ'ಯನ್ನಾಗಿ ಮಾಡುತ್ತೇವೆಂದು ತಂತ್ರ ಹೂಡಿದರು. ಇದಕ್ಕೆ ಪ್ರತಾಪಸಿಂಹ ಒಪ್ಪಲಿಲ್ಲ. ಬ್ರಿಟಿಷರು ಪ್ರತಾಪ ಸಿಂಹನ ಸಹೋದರನಾದ ಅಪ್ಪಾಸಾಹೇಬನನ್ನು ಎತ್ತಿಕಟ್ಟಿ ೦೫-೦೯-೧೮೩೯ರಂದು ಪ್ರತಾಪಸಿಂಹನನ್ನು ಸತಾರ ಸಂಸ್ಥಾನದಿಂದ ಪದಚ್ಯುತಗೊಳಿಸಿ ಅವನ ಸ್ಥಾನದಲ್ಲಿ ಅಪ್ಪಾಸಾಹೇಬನನ್ನು ನೇಮಿಸಿದರು."[೧೩] ಪ್ರತಾಪಸಿಂಹನು ಸತಾರವನ್ನು ಮರಳಿ ಪಡೆಯಲು ಯತ್ನಿಸಿದಾಗ ಬ್ರಿಷರು ಆತನನ್ನು ಬಂಧಿಸಿ ಮಾಸಿಕ ಹತ್ತು ಸಾವಿರ ರಾಜಧನ ನೀಡಿ ಬನಾರಸಕ್ಕೆ ಕಳುಹಿಸಿದರು.

ಸತಾರದ ದಿವಾನ ದತ್ತಾತ್ರೇಯರಾಯನ ಮಗ ನರಸಿಂಹ ಪೇಟಕರ ಪ್ರತಾಪಸಿಂಹನ ಸ್ವಾಮಿನಿಷ್ಠನಾಗಿದ್ದ. ಆತ ಬ್ರಾಹ್ಮಣನಾಗಿದ್ದು ಬಾಲ್ಯದಲ್ಲಿ ಸಿಡುಬು ರೋಗಕ್ಕೆ ಬಲಿಯಾಗಿದ್ದರಿಂದ ಒಂದು ಕಣ್ಣಿನ ದೃಷ್ಟಿಕಳೆದುಕೊಂಡಿದ್ದ. (ಈತನಿಗೆ ಒಕ್ಕಣ್ಣ ನರಸಪ್ಪ ಎಂದು ಕರೆಯುತ್ತಿದ್ದರು) ಸತಾರವನ್ನು ಮರಳಿ ಪಡೆಯುವ ಉದ್ದೇಶದಿಂದ ಪುಣೆ, ನಾಸಿಕ, ಅಹಮ್ಮದನಗರ, ರಾಯಚೂರು, ದೇವದುರ್ಗ ಮುಂತಾದ ಕಡೆ ಸಂಚರಿಸಿ ಸೈನ್ಯವನ್ನು ಸಂಘಟಿಸಿದನು.

"ಪ್ರತಾಪಸಿಂಹನು ಬನಾರಸಿಗೆ ಹೋಗುವಾಗ ನಿಂಬ ಎಂಬಲ್ಲಿ ಕೆಲಕಾಲ ಇದ್ದನು. ಈ ಸಂಗತಿ ತಿಳಿದ ನರಸಿಂಹನು ಪ್ರತಾಪಸಿಂಹನನ್ನು ಭೇಟಿ ಮಾಡಿ ತನ್ನ ಯೋಜನೆ ವಿವರಿಸಿದ. ಪ್ರತಾಪಸಿಂಹ ಸತಾರ ಸ್ವತಂತ್ರ್ಯಗೊಳ್ಳಲೆಂದು ತನ್ನ ಬಳಿಯಲ್ಲಿದ್ದ ಸಂಸ್ಥಾನದ ಬೆಳ್ಳಿ ಮೊಹರು ನೀಡಿದನು."[೧೪]

ಮೊಹರು ಪಡೆದ ನರಸಿಂಹ ಅದರ ಮೂಲಕ ಸಂಸ್ಥಾನದ ಜನರಲ್ಲಿ ನಂಬಿಕೆ ಹುಟ್ಟಿಸಿ ಸೈನ್ಯ ಸಂಘಟಿಸಿದನು. ಅರಬ್ ಜನಾಂಗದ ಮುಖಂಡ ಜಮೇದಾರ ಸಲೀಮ್ ಬಿನ್ ಅಬೂದ್ ಉರುಫ್ ಕೊಹೆರೆನ್ ಎಂಬುವನು ಸುರಪುರ ನಾಯಕನಲ್ಲಿದ್ದನ್ನರಿತು ಸುರಪುರಕ್ಕೆ ಹೋಗಿ ಕೊಹೆರೆನನ್ನು ಕಂಡನು. ಕೊಹೆರೆನ್‌ನೊಂದಿಗೆ ತಾಲೂಬ್ ಬಿನ್ ಅಲಿಯನ್ನು ಕಂಡು ತನ್ನೊಂದಿಗೆ ಹೋರಾಟಕ್ಕೆ ಒಪ್ಪಂದ ಮಾಡಿಕೊಂಡು ಸೈನ್ಯವನ್ನು ಸಿದ್ಧಗೊಳಿಸಿದನು. ನೇರವಾಗಿ ಸತಾರಕ್ಕೆ ಮುತ್ತಿಗೆ ಹಾಕದೆ ಸತಾರ ಸಂಸ್ಥಾನದ ವಶದಲ್ಲಿದ್ದ ಬದಾಮಿ ಕೋಟೆಗೆ ಮುತ್ತಿಗೆ ಹಾಕಲು ನಿರ್ಧರಿಸಿ ದೇವದುರ್ಗದಿಂದ ಲಿಂಗಸಗೂರು, ಹನುಮಸಾಗರ, ಹನುಮನಾಳ, ಜಾಲಿಹಾಳ ಮಾರ್ಗವಾಗಿ ಬದಾಮಿಗೆ ಬಂದನು.

೨೭-೦೫-೧೮೪೧ರಂದು ನರಸಿಂಹನು ಬದಾಮಿ ಕೋಟೆಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡನು. ಬದಾಮಿ ಕೋಟೆಯ ಮೇಲೆ ಸತಾರ ಸಂಸ್ಥಾನದ ಧ್ವಜವನ್ನು ಹಾರಿಸಿ 'ಛತ್ರಪತಿ' ಎಂಬ ಬಿರುದನ್ನು ಧರಿಸಿ ಸ್ವತಂತ್ರವಾಗಿ ಆಳತೊಡಗಿದನು. ಬ್ರಿಟಿಷರ ಖಜಾನೆ ವಶಪಡಿಸಿಕೊಂಡ ರೈತರಿಗೆ ಜಮೀನು ಹಂಚಿದ. ಬದಾಮಿಯಿಂದಲೇ ಸತಾರ ಸಂಸ್ಥಾನದ ವಿಮೋಚನೆಗೆ ಗುಪ್ತ ಚಟುವಟಿಕೆ ನಡೆಸುತ್ತಿದ್ದನು. "ಬ್ರಿಟಿಷರು ನರಸಿಂಹನನ್ನು ಹತ್ತಿಕ್ಕಲು ಸಿದ್ಧರಾದರು. ಸಿವಿಲ್ ಸರ್ವಿಸ್ ಅಧಿಕಾರಿಯಾಗಿದ್ದ ಬೆಟ್ಟಿಂಗಟನ್ ಮತ್ತು ಸೈನ್ಯಾಧಿಕಾರಿಯಾಗಿದ್ದ ಎಮ್.ಎನ್. ಷಾ ಅವರು ಧಾರವಾಡ ಮತ್ತು ಬೆಳಗಾವಿಯಿಂದ ಬ್ರಿಟಿಷ ಸೈನ್ಯದ ಪಡೆಯನ್ನು ತೆಗೆದುಕೊಂಡು ಬದಾಮಿಗೆ ಮುತ್ತಿಗೆ ಹಾಕಿ ನರಸಿಂಹ ಪೇಟಕರನನ್ನು ಬಂಧಿಸಿ ಧಾರವಾಡ ಕೋರ್ಟ್‌ಗೆ ಹಾಜರು ಪಡಿಸಿದರು. ನ್ಯಾಯಾಧೀಶರು ಮೊದಲಿಗೆ ನರಸಿಂಹನಿಗೆ ಮರಣದಂಡನೆ ವಿಧಿಸಿ ಅನಂತರ ಅದನ್ನು ಬದಲಿಸಿ ಜೀವಾವಧಿ ಶಿಕ್ಷೆಗೆ ಒಳಪಡಿಸಿದರು. ಅಹಮದಾಬಾದ್ ಜೈಲಿನಲ್ಲಿ ೧೮೯೨ರಲ್ಲಿ ಅವನು ಮರಣ ಹೊಂದಿದನು."[೧೬] ಬದಾಮಿ ಬಂಡಾಯ ವಿಫಲವಾದರೂ ಸಹಿತ ಜಿಲ್ಲೆಯ ಜನರಲ್ಲಿ ಸ್ವಾತಂತ್ರ್ಯದ ಕಲ್ಪನೆ ಹಾಗೂ ದೇಶಭಕ್ತಿಯನ್ನು ಮೂಡಿಸಿತು. ಮುಂದೆ ನಡೆದ ಹೋರಾಟಗಳಿಗೆ ಈ ಬಂಡಾಯ ಸ್ಪೂರ್ತಿಯನ್ನು ನೀಡಿತು. ಈ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲೆಯು ಸ್ವಾತಂತ್ರ್ಯದ ಹೋರಾಟದಲ್ಲಿ ತನ್ನ ದಾಪುಗಾಲನ್ನು ಹಾಕಿತು.

೧೮೫೭ರಲ್ಲಿಯ ಬಂಡಾಯಗಳು

೧. ಚಾಂದಕವಟೆ ಬಂಡಾಯ (೧೮೫೭)

ದೇಶಾದ್ಯಂತ ೧೮೫೭ರಲ್ಲಿ ಬ್ರಿಟಿಷರ ವಿರುದ್ಧ ಬುಗಿಲೆದ್ದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳು ವಿಜಾಪೂರ ಜಿಲ್ಲೆಯಲ್ಲಿಯೂ ನಡೆದವು. ಚಾಂದಕವಟೆಯ ದೇಶಮುಖ ಕುಟುಂಬದ ಬಸಲಿಂಗಪ್ಪ ಹಾಗೂ ವಿಜಾಪೂರದ ಸಿರಿಶೆಟ್ಟಿಯವರು ಸುರಪುರದ ಅರಸ ವೆಂಕಟಪ್ಪ ನಾಯಕನೊಂದಿಗೆ ಸಮಾಲೋಚಿಸಿ ಬ್ರಿಟಿಷರ ವಿರುದ್ಧ ಬಂಡಾಯವೇಳುವ ಗುಪ್ತಯೋಜನೆಯನ್ನು ಹಮ್ಮಿಕೊಂಡರು.

ಬಸಲಿಂಗಪ್ಪ ಸೈನ್ಯವನ್ನು ಸಂಘಟಿಸಿಕೊಂಡಿದ್ದನು. ತನ್ನ ನೆರವಿಗೆ ನಾನಾ ಸಾಹೇಬ ಬರುವನೆಂದು ತನ್ನ ಹಿಂಬಾಲಕರ ನಡುವೆ ಉದ್ಘೋಷಿಸಿಕೊಂಡಿದ್ದನು. ಆದರೆ ದೈರಾದೃಷ್ಟವಶಾತ್ ಈ ಸಂಚು ಕಾರ್ಯಗತಗೊಳ್ಳುವ ಮೊದಲೇ ಬಯಲಾಯಿತು.

"ಬ್ರಿಟಿಷರು ಬಸಲಿಂಗಪ್ಪ ಮತ್ತು ಆತನ ಮಗನನ್ನು ಬಂಧಿಸಿ ಜಿಣಗಿಯಲ್ಲಿದ್ದ ಅವನ ಮನೆ ಹಾಗೂ ಕೊಟನಾಳದ ಕೋಟೆಗಳನ್ನು ಜಪ್ತಿ ಮಾಡಿದಾಗ ಕೆಲವು ಆಯುಧಗಳು ಸೇರಿದಂತೆ ಬೃಹತ್ ಪ್ರಮಾಣದಲ್ಲಿ ಸೀಸದ ಸಂಗ್ರಹ ಲಭಿಸಿದವು. ಕೊಟನಾಳ ಕೋಟೆಯನ್ನು ಧ್ವಂಸಗೊಳಿಸಿ ಬಸಲಿಂಗಪ್ಪನ ಜಹಗೀರನ್ನು ಮುಟ್ಟುಗೋಲು ಹಾಕಿಕೊಂಡು ಬಂಡಾಯವನ್ನು ದಮನಗೊಳಿಸಿದರು".[೧೭]

೨. ಬಾಗಲಕೋಟಯಲ್ಲಿ ಬಂಡಾಯದ ಭೀತಿ

ಬಾಗಲಕೋಟದಲ್ಲಿ ಮುಸಲ್ಮಾನರು ಸಶಸ್ತ್ರ ಬಂಡಾಯ ಹೂಡುವ ಸನ್ನಾಹದಲ್ಲಿರುವರೆಂಬ ವರದಿಯನ್ನು ಬಾಗಲಕೋಟದ ಸೇನಾಧಿಕಾರಿ ನೀಡಿದ್ದ. ಆದ್ದರಿಂದ "ಬಾಗಲಕೋಟ ಮುಂತಾದ ಪ್ರಮುಖ ಸ್ಥಳಗಳಲ್ಲಿ ಬ್ರಿಟಿಷರು ಖಡ್ಗ, ಬಂದೂಕ, ಭಲ್ಲೆ, ಮದ್ದು ಗುಂಡು ಮುಂತಾದ ಅಸ್ತ್ರಗಳನ್ನು ಜನರಿಂದ ವಶಪಡಿಸಿಕೊಂಡರು. ನಾನಾ ಸಾಹೇಬ ಸೊಲ್ಲಾಪುರಕ್ಕೆ ಬಂದಿದ್ದ, ಬಾಗಲಕೋಟಗೂ ಬರುವನೆಂಬ ಗಾಳಿಸುದ್ಧಿ ೧೮೫೭ರ ಕೊನೆಯಲ್ಲಿ ವಿಜಾಪೂರ ಜಿಲ್ಲೆಯಲ್ಲಿದ್ದ ಬ್ರಿಟಿಷ ಅಧಿಕಾರಿಗಳನ್ನು ತಲ್ಲಣಗೊಳಿಸಿತ್ತು. ಆದರೆ ಅವನು ಬಾಗಲಕೋಟಗೆ ಬರಲಿಲ್ಲ. ಬಂಡಾಯವು ಜರುಗಲಿಲ್ಲ. ಆದರೆ ಬಂಡಾಯಕ್ಕೆ ಬಾಗಲಕೋಟಯಲ್ಲಿ ತಯಾರಿ ನಡೆದ ವಾಸನೆ ಮೊದಲೇ ತಿಳಿದಿತ್ತು."[೧೮]

೩. ಹಲಗಲಿ ಬಂಡಾಯ

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿ ಬೇಡರು ವಾಸ ಮಾಡಿದ ಗ್ರಾಮ. ಇವರ ಮುಖ್ಯ ಕಸಬು ಎಂದರೆ ಬೇಟೆಯಾಡುವದು. ತಮ್ಮ ಅರಸರಿಗೆ ನಿಷ್ಠಾವಂತರಾಗಿದ್ದ ಇವರು ತಮ್ಮ ಹಕ್ಕನ್ನು ಗೌರವಿಸುವ ಸ್ವಭಾವದವರಾಗಿದ್ದರು. ಬ್ರಿಟಿಷ ಸರಕಾರವು ಸಪ್ಟೆಂಬರ್ ೧೧, ೧೮೫೭ರಂದು ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು. ಇದರ ಉದ್ದೇಶ ೧೮೫೭ರ ದಂಗೆ ಭಾರತದ ಇತರ ಕಡೆಗೆಲ್ಲಾ ಹರಡಬಾರದೆಂಬುದಾಗಿತ್ತು. ಈ ಕಾಯ್ದೆಯು ಶಸ್ತ್ರಾಸ್ತ್ರ ತಯಾರಿಸುವದು ಮಾರಾಟ ಮಾಡುವದನ್ನು ನಿಷೇಧಿಸಿತು ಹಾಗೂ ಶಸ್ತ್ರಾಸ್ತ್ರ ಹೊಂದಿದವರು ಸರಕಾರದಿಂದ ಕಡ್ಡಾಯವಾಗಿ ಪರವಾನಿಗೆ ಪಡೆಯಬೇಕೆಂದು ನಿಯಮ ಜಾರಿಗೊಳಿಸಿತು.

"ಈ ಕಾಯ್ದೆ ಮುಧೋಳ ಸಂಸ್ಥಾನದ ಮೂಲಕ ಹಲಗಲಿ ಗ್ರಾಮಕ್ಕೆ ತಲುಪಿತು. ಹಲಗಲಿಯ ಬೇಡ ಜನರ ಕುಲ ಕಸಬು ಬೇಟೆಯಾಡುವುದಾಗಿತ್ತು. ಆದ್ದರಿಂದ ಶಸ್ತ್ರಾಸ್ತ್ರಗಳು ಅವರಿಗೆ ಅವಶ್ಯಕವಾಗಿದ್ದವು. ಅವುಗಳು ಕೇವಲ ಉಪಜೀವನದ ವಸ್ತುಗಳಾಗಿರದೆ ಅವರ ಸ್ವಾಭಿಮಾನದ

ಸಂಕೇತಗಳಾಗಿದ್ದವು. ಶಸ್ತ್ರಾಸ್ತ್ರ ಹೊಂದವುದಕ್ಕೆ ತಡೆ ಉಂಟು ಮಾಡುವದೆಂದರೆ ಧರ್ಮಬಾಹಿರವೆಂದು ನಂಜಿದ್ದರು".[೧೯] ಬೇಡರು ತಮ್ಮ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸುವದು ಹಾಗೂ ಸರಕಾರದಿಂದ ಪರವಾನಗಿ ಪಡೆಯುವದು ನಿರರ್ಥಕವೆಂದು ತಿಳಿದಿದ್ದರು. ಸರಕಾರ ತಮ್ಮ ಮೇಲೆ ಕಠಿಣ ಕ್ರಮ ಕೈಗೊಳ್ಳುವದು ಗೊತ್ತಿದ್ದರೂ ಸರಕಾರದ ಕಾಯ್ದೆಯನ್ನು ಒಪ್ಪಿಕೊಳ್ಳಲು ಇವರು ಸಿದ್ಧರಾಗಲಿಲ್ಲ. ಸುರಪುರದ ರಾಜಾ ವೆಂಕಟಪ್ಪನಾಯಕ ಇದೇ ಅವಧಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ತನ್ನ ಗತವೈಭವ ಪಡೆಯುವ ವಿಚಾರವು ಹಾಗೂ ಉತ್ತರ ಭಾರತದಲ್ಲಿ ನಡೆಯುತ್ತಿರುವ ಬ್ರಿಟಿಷ ವಿರೋಧಿ ದಂಗೆ ವಿಷಯವು ಬೇಡರಿಗೆ ಅರಿವಾಗಿರಬೇಕು.

"ಮುಧೋಳ ಸಂಸ್ಥಾನದ ಕಾರಭಾರಿ ಕೃಷ್ಣರಾವ ಸಂಸ್ಥಾನದ ತುಂಬೆಲ್ಲಾ ಸರಕಾರದ ಶಸ್ತ್ರಾಸ್ತ್ರ ಕಾಯ್ದೆಯ ಸುತ್ತೋಲೆ ಕಳುಹಿಸಿದನು. ಇದನ್ನು ಮುಧೋಳದ ಜನ ವಿರೋಧಿಸಿದರು. ಮುಧೋಳದಿಂದ ಸುಮಾರು ಎರಡು ಮೈಲು ದೂರದಲ್ಲಿ ಸಭೆ ಸೇರಿ ಅಲ್ಲಿ ನಾಲ್ಕುದಿನ ತಂಗಿದರು. ಕಂಪನಿ ಸರಕಾರಕ್ಕೆ ಆಯುಧಗಳನ್ನು ಒಪ್ಪಿಸಬೇಡಿ ನಿಮಗೆ ನಾವು ಸಹಾಯ ಮಾಡುತ್ತೇವೆ ಎಂದು ಸುತ್ತಲಿನ ಗ್ರಾಮಗಳ ಬೇಡರಿಗೆ ತಿಳಿಸಿದರು".[೨೦]

ಆರಂಭದಲ್ಲಿ ಶಸ್ತ್ರಾಸ್ತ್ರವನ್ನು ಒಪ್ಪಿಸಲು ನಿರಾಕರಿಸಿದ ಬಂಟನೂರಿನ ಬೇಡರು ತಮ್ಮ ನಾಯಕ ವೀರ ಹನುಮನಾಯಕನ ಆದೇಶದಂತೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದ್ದರು. ಅದರಂತೆ ಕಾರಭಾರಿ ಕೃಷ್ಣರಾಯನು ನವೆಂಬರ್ ೧೧, ೧೮೫೭ರಂದು ಹಲಗಲಿಯ ಬೇಡನಾಯಕ ಗುದಗಿಗೆ ಶಸ್ತ್ರಾಸ್ತ್ರಗಳ ಪರವಾನಿಗೆ ನೀಡುವ ಆದೇಶ ಕಳುಹಿಸಿದನು. ಹಲಗಲಿಯ ಬೇಡರು ಇದನ್ನು ಒಪ್ಪಲಿಲ್ಲ. ಗುದಗಿ ಮುಧೋಳಕ್ಕೆ ಹೋಗಿ ಶಸ್ತ್ರಾಸ್ತ್ರ ಪರವಾನಿಗೆ ಪತ್ರವನ್ನು ಪಡೆದುಕೊಂಡು ಬಂದನು. ಸರಕಾರಕ್ಕೆ ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕೆಂದು ಸಲಹೆ ನೀಡಿದನು. ಬೇಡರು ಇದನ್ನು ವಿರೋಧಿಸಿ ಶಸ್ತ್ರಾಸ್ತ್ರಗಳನ್ನು ಹೊಂದುವದು ಅನ್ಯಾಯವಲ್ಲ ನೋಂದಣಿ ಮಾಡುವದು ಅಸಾಧ್ಯವೆಂದು ತಿರಸ್ಕರಿಸಿದರು. ಹಲಗಲಿಯ ಪಕ್ಕದ ಜನರು ಅದನ್ನು ತಿರಸ್ಕರಿಸಿದರು.

ನವ್ಹೆಂಬರ್ ೧೫ರಂದು ಲೆಪ್ಟಿನೆಂಟ್ ಕರನಲ್ ಸೆನೆಟನಿಕ್ ಮುಧೋಳ ಸಂಸ್ಥಾನದ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಬರಲು ಕಾರಭಾರಿಯ ಕಾರಕೂನ ರಾಮರಾವ್ ಬುಜಂಗನಿಗೆ ಆದೇಶಿಸಿದನು. ರಾಮರಾವ್ ಬುಜಂಗನು ಬೇಡರು ಶಸ್ತ್ರಾಸ್ತ್ರಗಳನ್ನು ನೋಂದಣಿ ಮಾಡುತ್ತಿಲ್ಲ ಹಾಗೂ ಅವುಗಳನ್ನು ಮೇಲಾಧಿಕಾರಿಗಳಿಗೆ ಒಪ್ಪಿಸುತ್ತಿಲ್ಲ ಎಂದು ತಿಳಿಸಿದನು.

ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ವಿರೋಧ ಪ್ರಬಲಗೊಂಡಿತು."ರಾಮರಾವ್ ಬುಜಂಗ್ ಹಲಗಲಿ ಬೇಡರಿಗೆ ಮುಧೋಳಕ್ಕೆ ಬಂದು ಶಸ್ತ್ರಾಸ್ತ್ರಗಳನ್ನು ನೋಂದಾಯಿಸಿಕೊಳ್ಳಲು ಎಚ್ಚರಿಸಿದ. ಇದು ಅಪಮಾನಕಾರಿ ಕಾಯ್ದೆ ನಾವು ಅದನ್ನು ಪಾಲಿಸುವದಿಲ್ಲವೆಂದು ವಿರೋಧಿಸಿದರು. ಜಡಗಣ್ಣನು

ಕಾರಕೂನನ ಕಪಾಳಕ್ಕೆ ಹೊಡೆದನು. ಕಾರಕೂನನಿಗೆ ಏಟು ಬಿದ್ದಿರುವುದನ್ನು ನೋಡಿ ಇಬ್ಬರು ಸಿಪಾಯಿಗಳು ಹೆದರಿ ಓಡಿದರು".[೨೧]

ಸೆಟನಕರ್ ಕುಂದರಗಿಯ ಗೌಡನಾದ ಕೃಷ್ಣರಾವ್‌ನನ್ನು ಹಲಗಲಿಗೆ ಕಳುಹಿಸಿದನು. "ನವ್ಹೆಂಬರ್ ೨೦ ರಂದು ಕೃಷ್ಣರಾಯ್‌ನು ಬೇಡರ ಮತ್ತೊಬ್ಬ ನಾಯಕ ವೀರಪ್ಪ ನಾಯಕನನ್ನು ಕರೆಸಿದನು. ವೀರಪ್ಪ ನಾಯಕ ಇತರೆ ಬೇಡರಂತೆ ಇರಲಿಲ್ಲ. ಬೇಡರು ಈ ಕಾಯ್ದೆಯನ್ನು ಒಪ್ಪುವದಿಲ್ಲ ಹಾಗೂ ಅವರು ತಮ್ಮ ಹಕ್ಕಿಗಾಗಿ ತಮ್ಮೆಲ್ಲದನ್ನು ತ್ಯಾಗ ಮಾಡಲು ಸಿದ್ಧರಿದ್ದಾರೆ. ಬಾಲಾಜಿ ನಿಂಬಾಳ್ಕರ ಬೇಡರನ್ನು ಸಂಘಟಿಸಿ ಅವಶ್ಯವಿದ್ದರೆ ಬ್ರಿಟಿಷರ ಮೇಲೆ ಯುದ್ಧ ಸಾರುವದಕ್ಕೂ ಅವರನ್ನು ಸಿದ್ಧಪಡಿಸಿರುವನೆಂದು ಹೇಳಿ ತನ್ನಿಂದ ಬೇಡರ ಮನವೊಲಿಸಲು ಸಾಧ್ಯವಿಲ್ಲ ಎಂದು ಹೇಳಿದನು".[೨೨]

ಮುಧೋಳದ ಅರಸ ಭೀಮರಾವ್ ಘೋರ್ಪಡೆಯ ಮಂತ್ರಿ ಕಾರಭಾರಿ ಹಾಗೂ ಇನ್ನಿಬ್ಬರನ್ನು ಹಲಗಲಿಗೆ ಕಳುಹಿಸಿದನು ನವ್ಹೆಂಬರ್ ೨೨ರಂದು ಹಲಗಲಿ ಗ್ರಾಮಕ್ಕೆ ಬಂದರು. ಬೇಡರ ಮುಖ್ಯಸ್ಥರಾದ ಜಾಮದಾರ ಗಡಗ ಮತ್ತು ಸಂದೀತ ಬಾಲಾ ಇತರ ಬೇಡರೊಂದಿಗೆ ಬಂದು "ನೀವು ಜೀವಂತವಾಗಿರಬೇಕಾದರೆ ಮರಳಿ ಹೋಗಿರಿ" ಎಂದು ಎಚ್ಚರಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗಿರುವದನ್ನು ಮನಗಂಡು ಆತುರದಿಂದ ಮರಳಿ ಹೊರಟರು. ಕೆಲವು ಬೇಡರು ಅರಸನ ಪ್ರತಿನಿಧಿಗಳು ಊರಿನಿಂದ ದೂರ ಹೋಗುವವರೆಗೆ ಹಿಂಬಾಲಿಸಿದರು. ಕಾರಭಾರಿಯು ಬೇಡರನ್ನು ಒಲಿಸಿಕೊಳ್ಳಲು ಮತ್ತೊಂದು ಪ್ರಯತ್ನ ಮಾಡಿದ. ಮರುದಿನ ನವ್ಹೆಂಬರ್ ೨೩ರಂದು ಅಪ್ಪಾ ಅರಕೇರಿ ಎಂಬುವನನ್ನು ಹಲಗಲಿಗೆ ಕಳುಹಿಸಿದನು. ಎರಡನೂರು ಬೇಡರು ಹಾಗೂ ಜಾಮದಾರ ಗದಗಿ ದಿನ ದಿನ ರಾಜಪ್ರತಿನಿಧಿಗಳನ್ನು ಮರಳಿ ಕಳುಹಿಸಿದಂತೆ ಇವರನ್ನು ಮರಳಿ ಕಳುಹಿಸಿದರು.

"ಸರಕಾರಕ್ಕೆ ಹಲಗಲಿಯ ಬಗ್ಗೆ ಸರಿಯಾದ ಮಾಹಿತಿ ದೊರೆಯಲಿಲ್ಲ. ಸದರನ್ ಮರಾಠ ಪಡೆಯ ಕಮಾಂಡರ್‌ನಾದ ಲೆಫ್ಟಿನೆಂಟ್ ಕರ್ನಲ್ ಮಾಲ್ಕಮ್ ೨೭ ರಂದು ಕಾರಭಾರಿಗೆ ಪತ್ರಬರೆದು ಹಲಗಲಿಯ ಪರಿಸ್ಥಿತಿಯನ್ನು ತಕ್ಷಣವೇ ವರದಿ ಮಾಡಲು ತಿಳಿಸಿದನು. ಕಾರಭಾರಿಯು ಹಲಗಲಿಯ ಜನರು ಸರಕಾರದ ಕಾಯ್ದೆಯನ್ನು ಪಾಲಿಸದಿರಲು ದೃಢ ನಿಶ್ಚೈಸಿದ್ದಾರೆ. ಅವರ ಚಟುವಟಿಕೆಯ ಬಗ್ಗೆ ಯಾವುದೇ ಮಾಹಿತಿ ದೊರೆಯುತ್ತಿಲ್ಲ. ಊರೊಳಗೆ ಹೊರಗಿನವರನ್ನು ಪ್ರವೇಶಿಸಲು ಅವಕಾಶ ನೀಡುತ್ತಿಲ್ಲ. ಹಲಗಲಿಯ ಸುತ್ತಲಿನ ಮಂಟೂರು, ಬುದ್ನಿ ಮತ್ತು ಅಲಗುಂಡಿಯ ಬೇಡರು ಹಲಗಲಿಯ ಬೇಡರನ್ನು ಬೆಂಬಲಿಸುತ್ತಿದ್ದಾರೆ ಎಂದು ವರದಿ ನೀಡಿದನು. ಕೃಷ್ಣರಾವ್ ಬೇಡರ ಮನವೊಲಿಸಲು ಹಲಗಲಿಗೆ ಬಂದು 'ಹಠ ಮಾಡದೆ ನಿಮ್ಮ ಹತಾರಗಳನ್ನು ಸಾಹೇಬರ ವಶಕ್ಕೆ ಕೊಟ್ಟು ಬಿಡಿ ಎಂದು ಹೇಳಿ ಸಂಧಾನಕ್ಕೆ ಮುಂದಾದನು. ಬೇಡರು ನಮ್ಮ ಆಯುಧಗಳನ್ನು ನೀವು ಯಾರು ಬಂದರೂ ನಾವು ಸರಕಾರಕ್ಕೆ ಒಪ್ಪಿಸುವದಿಲ್ಲವೆಂದು ಎಚ್ಚರಿಸಿದರು. ಹಲಗಲಿಯ ಬೇಡರು ಯುದ್ಧಕ್ಕೆ ಸನ್ನದ್ಧರಾಗಿಯೇ ಇದ್ದರು. ಊರಿನ ಸಮೀಪ ಲಾಲಗಡ ಗುಡ್ಡದ ಮೇಲೆ ತಮ್ಮ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟರು.

ಉಳಿದವರು ಗ್ರಾಮದ ರಕ್ಷಣೆಗೆ ನಿಂತರು."[೨೩]

ಸದರನ್ ಮರಾಠ ಅಶ್ವಪಡೆಯ ವಿಜಾಪೂರ ವಿಭಾಗ ಮುಖ್ಯಸ್ಥ ಸೆಕ್ಟನ್ ಕೇರಿಗೆ ಕರ್ನಲ್ ಮಲ್ಕಮ್‌ನಿಂದ ಹಲಗಲಿ ಮೇಲೆ ದಾಳಿ ಮಾಡಲು ಆದೇಶ ಬಂದಿತು. ರಾತ್ರಿ ೧೦ ಗಂಟೆಗೆ ಹಲಗಲಿ ಗ್ರಾಮವನ್ನು ತಲುಪಿದ. ಎಲ್ಲ ಬೇಡರು ಕೂಡಲೆ ಶರಣಾಗಬೇಕೆಂದು ಇಲ್ಲದಿದ್ದರೆ ನಿಮ್ಮನ್ನು ದಂಗೆಕೊರರೆಂದು ಘೋಷಿಸಲಾಗುವದೆಂದು ಎಚ್ಚರಿಸಿದನು. ಬೇಡರು ಇದಕ್ಕೆ ಮಣಿಯದಿದ್ದಾಗ ಬ್ರಿಟಿಷರು ಊರನ್ನು ಪ್ರವೇಶಿಸಲು ಗುಂಡಿನ ಮಳೆಗೈದರು. ಬೇಡರ ಪ್ರತಿದಾಳಿಗೆ ಬ್ರಿಟಿಷ ಸೈನ್ಯ ಹಿಂಜರಿಯಿತು. ಊರು ಪ್ರವೇಶಿಸಲು ಆಗಲಿಲ್ಲ.

ತಕ್ಷಣವೆ ಬಾಗಲಕೋಟದಿಂದ ಬ್ರಿಟಿಷ ಸೈನ್ಯವನ್ನು ಕರೆಸಿಕೊಳ್ಳಲಾಯಿತು. "ಊರಿನ ಮುಂದಿರುವ ಪಾದಗಟ್ಟಿ ಹತ್ತಿರದಿಂದ ಸೈನ್ಯ ನುಗ್ಗಲು ಪ್ರಯತ್ನಿಸಿದಾಗ ಕಾವಲಗಾರ ಭೀಮಣ್ಣ(ಈತನಿಗೆ ಮಂಡಗೈ ಭೀಮಣ್ಣ ಎಂದು ಕರೆಯುತ್ತಿದ್ದರು) ತನ್ನ ಹತ್ತಿರವಿದ್ದ ಒಂದೇ ಆಯುಧದಿಂದ ಏಳು ಸೈನಿಕರನ್ನು ಕೊಂದು ಹಾಕಿದ. ನಂತರ ಈತನನ್ನು ಸೆರೆ ಹಿಡಿದು ಹಲಗಲಿಯಲ್ಲಿ ಮರಣದಂಡನೆ ವಿಧಿಸಲಾಯಿತು. ಮತ್ತೊಂದು ಕಾವಲು ಕೇಂದ್ರದಲ್ಲಿ ಗುಂಡಿನ ದಾಳಿ ನಡೆಯಿತು. ಆ ಪ್ರದೇಶವನ್ನು 'ರಕ್ತ ಕಾವಲಿ' ಎಂದು ಕರೆಯುತ್ತಾರೆ."[೨೪]

ಬೇಡರನ್ನು ಸೋಲಿಸುವದು ಕಷ್ಟವಾದಾಗ ಬ್ರಿಟಿಷರು ರಾತ್ರಿ ವೇಳೆಯಲ್ಲಿ ದಾಳಿ ಮಾಡುವ ಯೋಚನೆ ಮಾಡಿದರು. ಅದರಂತೆ ನವ್ಹೆಂಬರ್ ೨೯ ರಂದು ೨೦೦ ಅಶ್ವಪಡೆಯೊಂದಿಗೆ ಹಲಗಲಿ ಮೇಲೆ ದಾಳಿ ನಡೆಸಿದರು. ಇದೇ ಸಮಯದಲ್ಲಿ ಮಾಲ್ಕಮ್ ಮುಖ್ಯ ಪಡೆಯೊಂದಿಗೆ ಆಗಮಿಸಿದನು. ಅಧಿಕ ಸಂಖ್ಯೆಯ ಬೇಡರು ಪಕ್ಕದ ಗುಡ್ಡದಲ್ಲಿ ಆಶ್ರಯ ಪಡೆದಿರುವರೆಂದು ತಿಳಿದು ತನ್ನ ಪಡೆಯೊಂದಿಗೆ ಗುಡ್ಡದ ಕಡೆಗೆ ನಡೆದನು. ಸೆಕ್ಟನ್‌ಕೇರಿ ಮತ್ತು ಉಳಿದ ಸೈನ್ಯ ಗ್ರಾಮದಲ್ಲಿ ದಾಳಿ ಮುಂದುವರೆಸಿತು. ಬೇಡರು ಪ್ರಬಲವಾಗಿ ಯುದ್ಧ ಮುಂದುವರೆಸಿದರು. ಬೇಡರ ಪ್ರತಿಯೊಂದು ಮನೆಗಳು ಕೋಟೆಯಂತಿದ್ದವು.

ಸೆಕ್ಟನ್ ಬೇಡರು ಮನೆಯಿಂದ ಹೊರಗೆ ಬರಲೆಂದು ಪ್ರತಿ ಮನೆಗೂ ಬೆಂಕಿ ಹಚ್ಚಲು ಆದೇಶಿಸಿದನು. ತಾವು ಈಗಾಗಲೇ ಮರಣ ಹೊಂದಿದಂತೆ ಎಂದು ನಂಬಿದ ಬೇಡ ಯೋಧರು ಮನೆಯೊಳಗಿನಿಂದ ಕದಲದೆ ವೈರಿಯನ್ನು ಎದುರಿಸಿದರು. ಮನೆ ಹೊರಗೆ ಕಾಲಿಟ್ಟರೇ ತಾವು ಗುಂಡಿಗೆ ಬಲಿಯಾಗುವುದೆಂದು ಅಥವಾ ಬಂಧಿಯಾಗುವೆವು ಎಂದು ಖಚಿತವಾಯಿತು. ಬ್ರಿಟಿಷರ ಬಂಧಿಗಳಾಗಲು ಒಪ್ಪದ ಬೇಡರು ಆತ್ಮಾರ್ಪಣೆ ಮಾಡುವುದೇ ಸರಿಯೆಂದು ನಿರ್ಧರಿಸಿದರು.

"ಹೆವಲಾಕ್ ಹಲಗಲಿ ಅಗಸೆಗೆ ಬಂದು ವ್ಯರ್ಥವಾಗಿ ಸಾಯಬೇಡಿರಿ ನಿಮಗೆ ಆಹಾರ ಕೊಡುತ್ತೇವೆ ಎಂದು ಕೂಗಿ ಹೇಳಿದನು. ನಾಲ್ಕು ಬೇಡ ವೀರರು ತಮ್ಮ ಆಯುಧಗಳೊಂದಿಗೆ

ಹೆವಲಾಕ್‌ನ ಮುಂದೆ ಬಂದರು ಹೆವಲಾಕ್‌ನು ಆಯುಧವನ್ನು ಕೊಡಿರಿ ಕಾನೂನು ಪಾಲಿಸಿರಿ ಎಂದು ಹೇಳಿದನು. ಜಡಗಣ್ಣ 'ಈ ಕಂಪನಿಯವರು ವಿಶ್ವಾಸ ಘಾತಕರು ಅವರನ್ನು ಹೊಡಿ ಎಂದು ಹನುಮಣ್ಣನಿಗೆ ಹೇಳಿದಾಗ ಹನುಮಣ್ಣನ ಒಂದೆ ಗುಂಡಿನ ಹೊಡತಕ್ಕೆ ಹೆವಲಕ್ ಮರಣ ಹೊಂದಿನು."[೨೫]

"ಅಸಿಸ್ಟಂಟ್ ಮ್ಯಾಜಿಸ್ಟ್ರೇಟ್ ಹೆನ್ರಿಹಾವಲಾಕನ ಕೊಲೆ ನೋಡಿದ ಸೆಟನಿಕಕಾರ್ ಹಲಗಲಿಯನ್ನು ಲೂಟಿ ಮಾಡಲು ಆದೇಶಿಸಿದನು. ಬ್ರಿಟಿಷ ಸೈನ್ಯ ಲೂಟಿಮಾಡಲು ಆರಂಭಿಸಿತು. ರಾಮವ್ವಳು ಮರಣ ಹೊಂದಿದ ಬ್ರಿಟಿಷ ಸೈನಿಕನ ಕತ್ತಿಯನ್ನು ಹಿಡಿದುಕೊಂಡು ಓಡುವ ಕುದುರೆಗಳ ಕಾಲು ಕಡೆದಳು ನೆಲಕ್ಕೆ ಬಿದ್ದ ಸೈನಿಕರ ರುಂಡ ಚಂಡಾಡುತ್ತಿದ್ದಳು."[೨೬]

"ಹನುಮಣ್ಣನಿಗೆ ಆರು ಗುಂಡುಗಳು ತಗಲಿದವು. ಆತನ ಸಹಾಯಕ್ಕೆ ರಾಮವ್ವ ಬರುವಾಗ ಎಡವಿ ಬಿದ್ದು ಕುದುರೆ ಕಾಲುಗಳಲ್ಲಿ ಸಿಕ್ಕು ಮರಣ ಹೊಂದಿದಳು. ಜಡಗಣ್ಣನು ಕುದುರೆ ಕಾಲಿಗೆ ಸಿಕ್ಕಿದ ಮಗುವನ್ನು ತಪ್ಪಿಸಲು ಹೋಗಿ ಮರಣ ಹೊಂದಿದನು."[೨೭] "ಗುಡ್ಡದಲ್ಲಿ ಬೇಡರು ಅವಿತಿರುವರೆಂದು ತಿಳಿದು ಆ ಕಡೆಗೆ ಹೋಗಿದ್ದ ಮಾಲ್ಕಮ್ ಬರಿಗೈಯಿಂದ ವಾಪಸ್ಸು ಬಂದನು. ಈತ ಮರಳಿ ಬರುವುದರೊಳಗಾಗಿ ಹಲಗಲಿ ಸುಟ್ಟು ಭಸ್ಮವಾಗಿತ್ತು. ನೂರಕ್ಕಿಂತ ಅಧಿಕ ಬೇಡರು ಬೂದಿಯಾದರೆಂದು ಮಾಲ್ಕಮನೆ ಒಪ್ಪಿಕೊಂಡಿದ್ದಾನೆ."[೨೮] ಬಂಧನಕ್ಕೆ ಒಳಗಾದವರ ಮೇಲೆ ರಾಜದ್ರೋಹದ ಅಪಾದನೆಯನ್ನು ಹೊರಿಸಲಾಯಿತು. "೧೯ ಜನರನ್ನು ಮರಣ ದಂಡನೆ ಶಿಕ್ಷೆಗೆ ಒಳಪಡಿಸಲಾಯಿತು. ಇವರಲ್ಲಿ ೧೩ ಜನರನ್ನು ಮುಧೋಳದಲ್ಲಿ ೧೧-೧೨-೧೮೫೭ರಂದು ಸಂತೆಯ ದಿನ ಬಹಿರಂಗವಾಗಿ ಗಲ್ಲಿಗೇರಿಸಲಾಯಿತು. ನಂತರ ೧೪-೧೨-೧೮೫೭ರಂದು ಉಳಿದ ೬ ಜನರನ್ನು ಹಲಗಲಿಯಲ್ಲಿ ಗಲ್ಲಿಗೇರಿಸಿದರು. ಸುಮಾರು ೩೦೦ಕ್ಕಿಂತ ಅಧಿಕ ಜನ ಬಂಧಿಗಳಾದರು."[೨೯]

ಸೆಟನಿಕರ ಬೇಡರ ಮನೆ ಸುಡಿಸಿದ ವಿಚಾರವನ್ನು ಮುಚ್ಚಿಡಲು ಹೀಗೆ ವರದಿ ನೀಡಿದ್ದಾನೆ. "೨೩ ಜನ ದ್ರೋಹಿಗಳು ಅರಳೆ ಮೂಟೆಯಲ್ಲಿ ಅಡಗಿದ್ದರು. ಆಕಸ್ಮಿಕವಾಗಿ ಮೂಟೆಗೆ ಬೆಂಕಿ ತಗಲಿ ಮರಣ ಹೊಂದಿದರು ಎಂದು ಹೇಳಿದ್ದಾನೆ. ಹಾಗೂ ಬೇಡರ ದಮನ ಉತ್ತಮ ಪರಿಣಾಮ ಬೀರಿತು ಎಂದು ವಾದಿಸಿದ್ದಾನೆ."[೩೦]ಹಗಲಗಲಿಯ ನೂರಾರು ಬೇಡರು ಮರಣ ಹೊಂದಿದರು, ಅವರಲ್ಲಿ "ಅರವತ್ತು ಜನರು ಬೆಂಕಿಗೆ ಆಹುತಿಯಾದರು. ಬಾಲಾಜಿ ನಿಂಬಾಳ್ಕರ್, ಪೂಜಾರಿ ಹನುಮ, ಜಡಗಪ್ಪ ಜಡಗಣ್ಣವರ, ಬಾಲಪ್ಪ ಕೋಳಣ್ಣವರ, ಭೀಮಣ್ಣ ಮಂಡಗ್ಯೆ, ರಾಮವ್ವ ಮುಂತಾದವರು ರಣರಂಗದಲ್ಲಿ ವೀರ ಮರಣ ಅಪ್ಪಿದರು. ಲಾಲಗಡ ಕೋಟೆಯನ್ನು ಬ್ರಿಟಿಷರು ಧ್ವಂಸ ಮಾಡಿದರು."[೩೧]ಹಲಗಲಿಯ ಕೆಲವು ಮುಖಂಡರು ಜೀವ ಉಳಿಸಿಕೊಳ್ಳಲು ಸುರಪುರಕ್ಕೆ ಓಡಿಹೋದರು. ಕಿತ್ತೂರಿನ ದೇಸಾಯಿ ಹಲಗಲಿ ಬೇಡರಿಗೆ ದಂಗೆ ಏಳಲು ಸಹಾಯ ಮಾಡಿದಕ್ಕಾಗಿ ಬ್ರಿಟಿಷ ಸರಕಾರ ಅವರನ್ನು ಬಂಧಿಸಿತು.

ಬಾಗಲಕೋಟ ಜಿಲ್ಲೆಯಲ್ಲಿ ಮೊದಲ ಬಾರಿಗೆ ಹಲಗಲಿ ಬೇಡರು ತಮ್ಮ ಹಕ್ಕುಗಳಿಗಾಗಿ ಹೋರಾಡಿದರು. ಚಿಕ್ಕ ಗ್ರಾಮ ಹಲಗಲಿಯನ್ನು ವಶಕ್ಕೆ ತೆಗೆದುಕೊಳ್ಳಲು ಬ್ರಿಟಿಷ ಅಧಿಕಾರಿಗಳು ಹರಸಾಹಸ ಪಡಬೇಕಾಯಿತು. ಹಲಗಲಿಯ ವೀರಬೇಡರನ್ನು ಸೋಲಿಸಲಾಗದೆ ಕುತಂತ್ರಿಗಳಾದ ಬ್ರಿಟಿಷರು ರಾತ್ರಿ ವೇಳೆ ದಾಳಿಮಾಡಿದಾಗಲೂ ಯಶಸ್ಸು ಕಾಣದಾದಾಗ ಊರಿಗೆ ಬೆಂಕಿ ಇಟ್ಟು ಹೇಡಿಗಳಾಗಿ ವರ್ತಿಸಿ ಬೇಡರನ್ನು ಗೆದ್ದಿರುವದು ಬ್ರಿಟಿಷರ ಕುತಂತ್ರ ಬುದ್ಧಿ ತೋರುವುದು. ಕೆಚ್ಚೆದೆಯ ಬೇಡರು ಮುಂದಿನ ಹೋರಾಟಗಾರರಿಗೆ ಸ್ಫೂರ್ತಿಯಾಗಿ ಉಳಿದರು.

ಬೇಡರ ಆಯುಧಗಳು

ಹಲಗಲಿ ಬೇಡರು ಬೇಟೆಯಾಡಲು ಬಳಸುತ್ತಿದ್ದ ಆಯುಧಗಳೆಂದರೆ "ಕೈಚೂರಿ, ಕಠಾರಿ, ಬಿಚ್ಚುಗತ್ತಿ, ಬಿಲ್ಲು-ಬಾಣ, ಚಾಪುಗೊಡಲಿ, ಖಡ್ಗ, ಬಾಕು, ದೂರದಿಂದಲೇ ಕ್ರೂರ ಮೃಗಗಳತ್ತ ಎಸೆಯಲು ಭರ್ಚಿ ಮುಂತಾದವುಗಳು. ಸ್ಥಿತಿವಂತರು ಕೋವಿಗಳನ್ನು ಇಟ್ಟುಕೊಂಡಿದ್ದರು. ಕವಣೆಗಲ್ಲುಗಳನ್ನು ಬೀಸಿ ಹಾರುವ ಹಕ್ಕಿಯನ್ನೂ, ಓಡುವ ಜಿಂಕೆಯನ್ನು ಬೀಳಿಸುವಂತವರಾಗಿದ್ದರು, ಒಂದು ನೊಗವನ್ನು ಭೂಮಿಗೆ ಲಂಬವಾಗಿ ನಿಲ್ಲಿಸಿ ನೊಗದ ರಂಧ್ರದಲ್ಲಿ ತೂರಿ ಹೋಗುವಂತೆ ಕವಣೆಗಲ್ಲು ಬೀಸುವಂತ ನಿಷ್ಣಾತ ಗುರಿಕಾರರಾಗಿದ್ದರು."[೩೨] ಇಂತಹ ಆಯುಧಗಳನ್ನಿಟ್ಟುಕೊಂಡು ಯಾರ ಗೊಡವೆಗೂ ಹೋಗದೇ ತಮ್ಮಷ್ಟಕ್ಕೆ ತಾವು ಬದುಕುತ್ತಿದ್ದ ಬೇಡ ಸಮುದಾಯದ ಸ್ವಾಭಿಮಾನವನ್ನು ೧೮೫೭ರ ಸಪ್ಟೆಂಬರ್ ೧೧ ರಂದು ಬ್ರಿಟಿಷ ಸರಕಾರ ಜಾರಿಗೆ ತಂದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ಕೆಣಕಿತಷ್ಟೇ ಅಲ್ಲ, ಸರಕಾರದ ವಿರುದ್ಧ ಬಂಡೇಳುವಂತೆ ಪ್ರಚೋದಿಸಿತು.

ಹಲಗಲಿ ಬೇಡರ ಬಂಡಾಯ ಭಾರತೀಯ ಸ್ವಾತಂತ್ರ್ಯ ಚಳವಳಿಯ ಪುಟಗಳಲ್ಲಿ ಶಾಶ್ವತ ಸ್ಥಾನ ಪಡೆದಿದೆ. ತಮ್ಮನ್ನು ಆಳುವ ಸಂಸ್ಥಾನಿಕರು ಬ್ರಿಟಿಷರ ಪರವಿದ್ದರು. ಹಲಗಲಿಯ ಬೇಡ ಜನಾಂಗ ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದರು. ಇಲ್ಲಿ ಬೇಡರು ಸಂಸ್ಥಾನಿಕರನ್ನು ಹಾಗೂ ಬ್ರಿಟಿಷರ ವಿರೋಧ ಕಟ್ಟಿಕೊಂಡು ಹೋರಾಡಿದ ಪ್ರಸಂಗ ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಸ್ವಾಭಿಮಾನದಿಂದ ಬದುಕಲು ಮಾಡಿದ ಪ್ರಯತ್ನವಾಗಿದೆ.

೩.೪. ಜಮಖಂಡಿ ಸಂಚು

ಬೆಳಗಾವಿಯ ಪೊಲಿಟಿಕಲ್ ಏಜೆಂಟ್ ಡೌನನ ವ್ಯಾಪ್ತಿಯಲ್ಲಿ ಬರುವ ಜಮಖಂಡಿ ಒಂದು ಚಿಕ್ಕ ಸಂಸ್ಥಾನ. ರಾಮಚಂದ್ರರಾವ್ ಅಲಿಯಾಸ್ ಅಪ್ಪಾಸಾಹೇಬ ಪಟವರ್ಧನ ಅದರ ಮುಖ್ಯಸ್ಥನಾಗಿದ್ದನು. ಇವನು ಜಮಖಂಡಿಯ ಅರಸ ಗೋಪಾಲರಾವ್‌ನ ದತ್ತು ಪುತ್ರ. ಗೋಪಾಲರಾವ್ ಮರಣ ಹೊಂದಿದ ನಂತರ ಜಮಖಂಡಿಯ ಅರಸನಾದನು.

೧೮೫೭ರ ದಂಗೆಯು ಮಹಾರಾಷ್ಟ್ರದಲ್ಲಿ ನಾನಾ ಸಾಹೇಬ ಮತ್ತು ತ್ಯಾತ್ಯಾಟೋಪಿಯವರ ನೇತೃತ್ವದಲ್ಲಿ ಆರಂಭಗೊಂಡಾಗ, ಅದರ ಪ್ರಭಾವವು ಅಪ್ಪಾಸಾಹೇಬನ ಮೇಲಾಯಿತು. ಸಂಸ್ಥಾನದ ದೈನಂದಿನ ಆಡಳಿತದಲ್ಲಿ ರಾಜಕೀಯ ಏಜೆಂಟ್ ಡೌನನು ಭಾಗವಹಿಸುವುದು ಅಪ್ಪಾಸಾಹೇಬನಿಗೆ ಸರಿಕಾಣಲಿಲ್ಲ. ದಂಗೆಯಲ್ಲಿ ಪಾಲ್ಗೊಳ್ಳಲು ಸಂಚುರೂಪಿಸಿ "ತನ್ನ ಸುತ್ತಲೂ ಇರುವ ನರಗುಂದ, ಸತಾರ, ಸಾಂಗ್ಲಿ, ಸುರಪುರ, ಮಿರಜ್ ಮುಂತಾದ ಸಂಸ್ಥಾನಗಳಿಗೆ ಸ್ವತಂತ್ರಗೊಳ್ಳಲು ಪತ್ರವ್ಯವಹಾರ ನಡೆಸಿದ್ದನು. ದಂಗೆಕೊರರಿಗೆ ಆಶ್ರಯ ನೀಡಲು ನಿರ್ಧರಿಸಿದ್ದ ಹಾಗೂ ಕೋಟೆಯನ್ನು ದುರಸ್ಥಿಗೊಳಿಸಿ ಸೈನ್ಯವನ್ನು ಸುಜ್ಜುಗೊಳಿಸಿದ. ಬ್ರಿಟಿಷ ಸೈನ್ಯದಲ್ಲಿ ಗುಪ್ತಚರರನ್ನು ಬಿಟ್ಟು ಭಾರತೀಯ ಬ್ರಿಟಿಷ ಸೈನಿಕರನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಆಮಂತ್ರಿಸುತ್ತಿದ್ದನು".[೩೩]

"ಅಪ್ಪಾಸಾಹೇಬನ ಸೈನ್ಯದ ಮುಖಂಡ ಭೋಟೂಸಿಂಗ್ ಬ್ರಿಟಿಷರ ವಿರುದ್ಧ ಬಂಡೇಳಲು ಶಸ್ತ್ರಾಸ್ತ್ರಗಳನ್ನು ಕಲೆ ಹಾಕಿದನು. ಅದರಂತೆ ಮಹಿಪಾಲಸಿಂಗ್ ಎಂಬ ಇನ್ನೋರ್ವ ರಜಪೂತ ಸೈನಿಕ ಜಮಖಂಡಿಯಲ್ಲಿ ಸೈನ್ಯದ ತರಬೇತಿ ಪಡೆದು ಬೆಳಗಾವಿ ೨೯ನೇ ಬ್ರಿಟಿಷ್ ಸೈನ್ಯ ತುಕಡಿಯಲ್ಲಿ ಸೈನಿಕನಾಗಿ ಸೇರಿಕೊಂಡು ಅಲ್ಲಿದ್ದ ರಜಪೂತ ಸೈನಿಕರಿಗೆ ಬ್ರಿಟಿಷರ ವಿರುದ್ಧ ಬಂಡಾಯ ಏಳುವಂತೆ ಪ್ರಚೋದಿಸುತ್ತಿದ್ದನು. ಜಮಖಂಡಿ ಪಕ್ಕದ ಮುಧೋಳ ಸಂಸ್ಥಾನದಲ್ಲಿ ಬೇಡರು ಬಂಡಾಯ ಎದ್ದಾಗ ಜಮಖಂಡಿಯಲ್ಲಿಯೂ ಬಂಡಾಯ ಏಳಬೇಕೆಂದು ಸಂಚು ರೂಪಿಸಿದ್ದರು. ಮಹಿಪಾಲಸಿಂಗನು ಬೆಳಗಾವಿಯ ೨೯ನೆ ತುಕಡಿಯಲ್ಲಿದ್ದ ರಜಪೂತ ಸೈನಿಕರೊಂದಿಗೆ ಬಂಡೇಳುವನು ಎಂಬ ಸುದ್ಧಿ ತಿಳಿದ ತಕ್ಷಣವೆ ಮಹಿಪಾಲಸಿಂಗ್‌ನನ್ನು ಬಂಧಿಸಿ ತೋಪಿನ ಬಾಯಿಗೆ ಕೊಟ್ಟು ಕೊಂದರು. ಈತನ ಜೊತೆ ಜಮಖಂಡಿಯ ಅಪ್ಪಾಸಾಹೇಬ ಪಟವರ್ಧನ ಸೇರಿರುವ ಸುಳಿವು ಸರಕಾರಕ್ಕೆ ತಿಳಿಯಿತು."[೩೪]

ಬ್ರಿಟಿಷ ಅಧಿಕಾರಿ ಮ್ಯಾನಸನ್ ಜಮಖಂಡಿಗೆ ಸೇನಾ ಸಮೇತನಾಗಿ ಬಂದು ತನಿಖೆಗೆ ಮುಂದಾದನು. ಭೋಟೂಸಿಂಗ್ ಅಪ್ಪಾಸಾಹೇಬನಿಗೆ ದಂಗೆಯ ಬಗ್ಗೆ ತಿಳಿದಿಲ್ಲವೆಂದು ಅಧಿಕಾರಿಯ ಮುಂದೆ ಹೇಳುವಂತೆ ಸೂಚಿಸಿದ ಹಾಗೂ ಮ್ಯಾನಸನ್‌ನಿಗೆ ತಿಳಿಯದಂತೆ ಶಸ್ತ್ರಾಸ್ತ್ರಗಳನ್ನು ಉಮಾರಾಮೇಶ್ವರ ಮತ್ತು ರಾಟಲ್ ಬಾವಿಗಳಲ್ಲಿ ಮುಚ್ಚಿಟ್ಟನು. ಮ್ಯಾನಸನ್ ಇದೊಂದು ರಾಜಕೀಯ ಕುತಂತ್ರವೆಂದು ಬಗೆದು ಅಪ್ಪಾಸಾಹೇಬನನ್ನು ಬಂಧಿಸಿ ಬೆಳಗಾವಿ ಜೈಲಿನಲ್ಲಿಟ್ಟನು.

"ಮ್ಯಾನಸನ್ ಜಮಖಂಡಿ ಕೋಟೆಯಲ್ಲಿದ್ದ ಸಂಪತ್ತನ್ನು ಬೆಳಗಾವಿಗೆ ರವಾನಿಸಿ ಶಸ್ತ್ರಾಸ್ತ್ರ ತೋಪುಗಳನ್ನು ವಶಪಡಿಸಿಕೊಂಡನು. ಭೋಟೂಸಿಂಗ್ ಹಾಗೂ ಇನ್ನೋರ್ವ ಸೈನಿಕ ಅಬಾದೇವಧರನನ್ನು ವಿಚಾರಣೆಗೆ ಒಳಪಡಿಸಿದಾಗ. ಬ್ರಿಟಿಷರ ವಿರುದ್ಧ ನಡೆದ ಎಲ್ಲ ಚಟುವಟಿಕೆಗೆ ಭೋಟೂಸಿಂಗ್ ತಾನೆ ಹೊಣೆ ಎಂದು ಅದರಲ್ಲಿ ಅಪ್ಪಾಸಾಹೇಬನ ಪಾತ್ರವೇನೂ ಇಲ್ಲವೆಂದು ಹೇಳಿದ. ಭೋಟೂಸಿಂಗ್‌ನನ್ನು ಜಮಖಂಡಿ-ಜಂಬಗಿ ರಸ್ತೆಯ ಬಲಬದಿಗೆ ಇದ್ದ ಬೇವಿನ ಮರಕ್ಕೆ ಗಲ್ಲಿಗೇರಿಸಲಾಯಿತು. ಅಬಾದೇವಧರನನ್ನು ಗಡಿಪಾರು ಶಿಕ್ಷೆಗೆ ಒಳಪಡಿಸಿದರು. ಭೋಟೂಸಿಂಗ್‌ನ

ತ್ಯಾಗದಿಂದ ಅಪ್ಪಾಸಾಹೇಬ ನಿರ್ದೋಷಿಯಾಗಿ ಬಿಡುಗಡೆಗೊಂಡರು."[೩೫]

ಬ್ರಿಟಿಷರು ಅಖಂಡ ವಿಜಾಪೂರ ಜಿಲ್ಲೆಯನ್ನು ಪ್ರವೇಶಿಸಿದಾಗ ಮೊದಲ ಬಾರಿಗೆ ಅವರಿಗೆ ಜಿಲ್ಲೆಯ ಜನರು ಶಸ್ತ್ರಾಸ್ತ್ರ ಬಂಡಾಯದ ಮೂಲಕ ಎಚ್ಚರಿಕೆ ನೀಡಿದರು. ಈ ಬಂಡಾಯಗಳು ಅಲ್ಪಕಾಲಿಕಗಳಾಗಿದ್ದರು ಸಹಿತ ಅವು ದೀರ್ಘಾವಧಿಯ ಪರಿಣಾಮ ಬೀರಿದವು. ಮುಂದೆ ನಡೆದ ವಿವಿಧ ಹಂತಗಳ ಹೋರಾಟಕ್ಕೆ ಪ್ರೇರಣೆ ನೀಡಿದವು.

ಅಡಿ ಟಿಪ್ಪಣಿಗಳು

೧. ನಂಜುಂಡಸ್ವಾಮಿ ಎ.ಎಸ್., ಭಾರತೀಯ ರಾಷ್ಟ್ರೀಯತೆಯ ವಿಕಾಸ, ಬೆಂಗಳೂರು, ೧೯೯೨, ಪುಟ ಸಂಖ್ಯೆ ೧

೨. ಬುರ್ಲಿ ಬಿಂದುಮಾಧವ (ಸಂ), ಸಿಂಪಿ ಲಿಂಗಣ್ಣ(ಅನು), ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ, ಧಾರವಾಡ, ೧೯೪೮, ಪುಟ ಸಂಖ್ಯೆ ೧೦೮.

೩. ರಾಮಸ್ವಾಮಿ ಎಸ್.ಆರ್(ಸಂ), ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೧೯೯೭, ಪುಟ ಸಂಖ್ಯೆ ೪.

೪. ಮಲ್ಲಿಕಾರ್ಜುನ ಮೇತ್ರಿ, ಕರ್ನಾಟಕ ಗಾಂಧಿ (ಹರ್ಡೇಕರ ಮಂಜಪ್ಪನವರ ಜೀವನ ಹಾಗೂ ಕೃತಿಗಳು), ಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಸಂಗಮ ಪ್ರಕಾಶನ, ವಿಜಾಪೂರ, ೨೦೦೨, ಪುಟ ಸಂಖ್ಯೆ ೯೭.

೫. ಹೆನ್ಸ್ಕಾನ ನ್ಯೂಯಾರ್ಕ, ದಿ ಐಡಿಯಾ ಆಫ್ ನ್ಯಾಷನ್ಯಾಲಿಸಂ ಎ ಸ್ಟಡಿ ಇನ್ ಇಟ್ಸ್ ಓರಿಜಿನ್ಸ್ ಆ್ಯಂಡ್ ಬ್ಯಾಕಗ್ರೌಂಡ್, ೧೯೫೫, ಪುಟ ಸಂಖ್ಯೆ ೩೦.

೬. ಜೋಗ್ ಎನ್.ಜಿ, (ಮೂಲ), ಗುರುಮೂರ್ತಿ(ಅನು), ಲೋಕಮಾನ್ಯ ಬಾಲಗಂಗಾಧರ ತಿಲಕ್, ೧೯೧೨, ಪುಟ ಸಂಖ್ಯೆ ೪೧, ೪೩.

೭. ಬಿಪಿನ್ ಚಂದ್ರ (ಮೂಲ), ಗೋಪಾಲರಾವ್ ಎಚ್.ಎಸ್. (ಅನು) ಆಧುನಿಕ ಭಾರತದ ಇತಿಹಾಸ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೧೨ ಪುಟ ಸಂಖ್ಯೆ ೨೬೬.

೮. .ಅದೇ, ಪುಟ ಸಂಖ್ಯೆ ೨೬೫.

೯. .ಅದೇ, ಪುಟ ಸಂಖ್ಯೆ ೧೬೬.

೧೦. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೭೧.

೧೧. ಅದೇ, ಪುಟ ಸಂಖ್ಯೆ ೧೭೨.

೧೨. ಅದೇ, ಪುಟ ಸಂಖ್ಯೆ ೧೭೨.

೧೩. ಅದೇ, ಪುಟ ಸಂಖ್ಯೆ ೧೭೨.

೧೪. ಮುರುಗೆಪ್ಪ. ಎ. (ಪ್ರ.ಸಂ) ಚಿನ್ನಸ್ವಾಮಿ ಸೊಸಲೆ. ಎನ್., ರಮೇಶ ನಾಯಕ, ಕೊಟ್ರೇಶ. ಎಮ್., (ಸಂ), ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪುಟ ಸಂಖ್ಯೆ ೪೫೨.

೧೫. ಅದೇ, ಪುಟ ಸಂಖ್ಯೆ ೪೫೨.

೧೬. ಅದೇ, ಪುಟ ಸಂಖ್ಯೆ ೪೫೨.

೧೭. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೭೩

೧೮. ಅದೇ, ಪುಟ ಸಂಖ್ಯೆ ೧೭೩.

೧೯. ಸಂದರ್ಶನ ಶ್ರೀರಾಮ ಇಟ್ಟಣ್ಣವರ, ಬೀಳಗಿ, ೨೫-೦೬-೨೦೧೨.

೨೦. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೨೨೦.

೨೧. ಶ್ರೀರಾಮ ಇಟ್ಟಣ್ಣವರ, ಹಲಗಲಿ ಗ್ರಾಮ ಜಾನಪದ ಅಧ್ಯಯನ, ನಾಗೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೫, ಪುಟ ಸಂಖ್ಯೆ ೩೧.

೨೨. ಕೃಷ್ಣರಾವ್ ಎಮ್.ವ್ಹಿ., ಹಾಲಪ್ಪ ಜಿ.ಎಸ್.(ಸಂ), ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂ.೧, ಗೌರ್ನಮೆಂಟ ಆಫ್ ಮೈಸೂರು, ಮೈಸೂರು, ೧೯೬೨, ಪುಟ ಸಂ.೨೨೧.

೨೩. ಶ್ರೀರಾಮ ಇಟ್ಟಣ್ಣವರ, ಹಲಗಲಿ ಗ್ರಾಮ ಜಾನಪದ ಅಧ್ಯಯನ, ನಾಗೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೫, ಪುಟ ಸಂಖ್ಯೆ ೬೦.

೨೪. ದಿವಾಕರ ವ್ಹಿ.ಡಿ., ಸೌತ್ ಇಂಡಿಯಾ ಇನ್ ೧೮೫೭ ವಾರ್ ಆಫ್ ಇಂಡಿಪೆಂಡೆನ್ಸ್, ಲೋಕಮಾನ್ಯ ತಿಲಕ ಸ್ಮಾರಕ ಟ್ರಸ್ಟ್ ಪುಣಾ, ೧೯೯೩, ಪುಟ ಸಂಖ್ಯೆ ೧೬೭.

೨೫. ಅದೇ, ಪುಟ ಸಂಖ್ಯೆ ೧೬೭.

೨೬. ಕೃಷ್ಣರಾವ್ ಎಮ್.ವ್ಹಿ., ಹಾಲಪ್ಪ ಜಿ.ಎಸ್. (ಸಂ),ಹಿಸ್ಟರಿ ಆಫ್ ಫ್ರಿಡಂ ಮೂಮೆಂಟ್ ಇನ್ ಕರ್ನಾಟಕ, ಸಂ.೧, ಗೌರ್ನಮೆಂಟ ಆಫ್ ಮೈಸೂರು, ಮೈಸೂರು, ೧೯೬೨, ಪುಟ ಸಂ.೨೨೩.

೨೭. ಕಿತ್ತೂರು ಆರ್.ಬಿ., ವಾಲ್ಮೀಕಿ ಕರ್ನಾಟಕ, ಸಂಚಿಕೆ ೫, ಅಗಸ್ಟ್ ೨೦೦೧, ಪುಟ ಸಂಖ್ಯೆ ೧೦.

೨೮. ಅದೇ, ಪುಟ ಸಂಖ್ಯೆ ೧೦.

೨೯. ಶರ್ಮಾ ತಿ.ತಾ., ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೭೩, ಪುಟ ಸಂಖ್ಯೆ ೧೨೨.

೩೦. ಕೃಷ್ಣರಾವ್ ಎಮ್. ಕೇಶವಭಟ್ಟ 'ಕರ್ನಾಟಕ ಇತಿಹಾಸ ದರ್ಶನ' ಸಹಕಾರಿ ಪ್ರಕಾಶನ ಬೆಂಗಳೂರು ೧೯೭೦ ಪುಟ ಸಂ. ೬೨೩.

೩೧. ಕೃಷ್ಣರಾವ್ ಎಮ್.ವ್ಹಿ., ಹಾಲಪ್ಪ ಜಿ.ಎಸ್. (ಸಂ), ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂ.೧, ಗೌರ್ನಮೆಂಟ ಆಫ್ ಮೈಸೂರು, ಮೈಸೂರು, ೧೯೬೨, ಪುಟ ಸಂ.೨೨೪.

೩೨. ಮಂಜುನಾಥ ಬೇವಿನಕಟ್ಟಿ (ಸಂ), ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯, ಪುಟ ಸಂಖ್ಯೆ ೨೦.

೩೩. ದಿವಾಕರ ವ್ಹಿ.ಡಿ., ಸೌತ್ ಇಂಡಿಯಾ ಇನ್ ೧೮೫೭ ವಾರ್ ಆಫ್ ಇಂಡಿಪೆಂಡೆನ್ಸ್, ಲೋಕಮಾನ್ಯ ತಿಲಕ ಸ್ಮಾರಕ ಟ್ರಸ್ಟ್, ಪುಣೆ, ೧೯೯೩, ಪುಟ ಸಂಖ್ಯೆ ೬೯-೭೦.

೩೪. ಮಟೋಳಿ ಎಸ್.ಬಿ., ಜಮಖಂಡಿ ಇತಿಹಾಸ ದರ್ಪಣ, ಗೆಳೆಯರ ಬಳಗ, ತುಂಗಳ, ೨೦೦೮, ಪುಟ ಸಂಖ್ಯೆ ೫೦.

೩೫. ಅದೇ, ಪುಟ ಸಂಖ್ಯೆ ೫೧-೫೨

ಅಧ್ಯಾಯ ೪

ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆಯಾದ ಅಂಶಗಳು ಮತ್ತು ಸ್ವದೇಶಿ ಚಳವಳಿ

೪.೧ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆಯಾದ ಅಂಶಗಳು

೪.೨ ಸ್ವದೇಶಿ ಚಳವಳಿ

೪.೨.೧ ರಾಷ್ಟ್ರಮಟ್ಟದಿಂದ ಸ್ಥಳೀಯ ಮಟ್ಟದವರೆಗೆ

೪.೨.೨ ತಿಲಕರ ಸಂಪರ್ಕ

೪.೨.೩ ಸ್ವದೇಶಿ ಚಳವಳಿಯ ಚಟುವಟಿಕೆಗಳು

ಅಧ್ಯಾಯ ೪

ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆಯಾದ ಅಂಶಗಳು ಮತ್ತು ಸ್ವದೇಶಿ ಚಳವಳಿಗಳು

೪.೧ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆಯಾದ ಅಂಶಗಳು

೧. ಪಾಶ್ಚಿಮಾತ್ಯ ಶಿಕ್ಷಣ

ಭಾರತೀಯರ ಮೇಲೆ ಪಾಶ್ಚಿಮಾತ್ಯ ಶಿಕ್ಷಣವು ಅಗಾಧವಾದ ಪರಿಣಾಮವನ್ನು ಬೀರಿತು. ಆಧುನಿಕ ಶಿಕ್ಷಣದ ಪ್ರಭಾವದಿಂದ ಭಾರತೀಯರಲ್ಲಿ ರಾಷ್ಟ್ರೀಯತೆ ಮನೋಭಾವ ಬೆಳೆಯಿತು. ಅನೇಕ ಭಾರತೀಯರು ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆದು ಇಂಗ್ಲೆಂಡ್ ಹಾಗೂ ಇನ್ನಿತರ ದೇಶಗಳಲ್ಲಿ ಅಭ್ಯಸಿಸಿ ಪಾಶ್ಚಿಮಾತ್ಯ ಗ್ರಂಥಗಳನ್ನು ಓದಿ ಅದರಿಂದ ಪ್ರಭಾವಿತರಾದರು. ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಸರಕಾರ ಮುಂತಾದ ವಿಷಯಗಳು ಭಾರತೀಯರ ಮೇಲೆ ಅಗಾಧ ಪ್ರಭಾವ ಬೀರಿದವು.

"ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ೧೮೧೫ರಲ್ಲಿ ಬಾಂಬೆ ಎಜ್ಯುಕೇಶನ್ ಸೊಸೈಟಿ ಸ್ಥಾಪಿಸಿದರು. ೧೮೪೦ರಲ್ಲಿ ದಿ ಬಾಂಬೆ ಬೋರ್ಡ್ ಆಫ್ ಎಜ್ಯುಕೇಶನ್ ರಚಿಸಲ್ಪಟ್ಟಿತು. ಇದರ ಮೂಲಕ ಅನೇಕ ಶಾಲೆಗಳು ಪ್ರಾರಂಭಗೊಂಡವು. ಕಲಾದಗಿಯಲ್ಲಿ ೧೮೬೦ರಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ಬಾಗಲಕೋಟದಲ್ಲಿ ಮುನ್ಸಿಪಾಲಿಟಿ ವತಿಯಿಂದ ಶಾಲೆ ಪ್ರಾರಂಭವಾಯಿತು. ೧೮೫೪ರಲ್ಲಿ ಗುಳೇದಗುಡ್ಡದಲ್ಲಿ ಬಾಲಕಿಯರಿಗಾಗಿ ಶಾಲೆಯನ್ನು ಪ್ರಥಮ ಬಾರಿಗೆ ಸ್ಥಾಪಿಸಲಾಯಿತು."[೧] ಇಂದು ಶತಮಾನೋತ್ಸವ ಆಚರಿಸುತ್ತಿರುವ ಜಿಲ್ಲೆಯ ೧೫೨ ಶಾಲೆಗಳು ಒಂದಿಲ್ಲ ಒಂದು ರೀತಿಯಿಂದ ಚಳವಳಿಗೆ ಪ್ರೇರಣೆಗಳಾಗಿದ್ದವು.

"ಬದಾಮಿ ತಾಲೂಕಿನಲ್ಲಿ ೨೯ ಶಾಲೆಗಳು, ಬಾಗಲಕೋಟ ತಾಲೂಕಿನಲ್ಲಿ ೧೬ ಶಾಲೆಗಳು, ಬೀಳಗಿ ತಾಲೂಕಿನಲ್ಲಿ ೨೧ ಶಾಲೆಗಳು, ಜಮಖಂಡಿ ತಾಲೂಕಿನಲ್ಲಿ ೩೮ ಶಾಲೆಗಳು, ಮುಧೋಳ ತಾಲೂಕಿನಲ್ಲಿ ೧೨ ಶಾಲೆಗಳು, ಹುನಗುಂದ ತಾಲೂಕಿನಲ್ಲಿ ೩೬ ಶಾಲೆಗಳು ಶತಮಾನವನ್ನು ಆಚರಿಸಿಕೊಳ್ಳುತ್ತಿವೆ. ಈ ಶಾಲೆಗಳು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹ ನೀಡುತ್ತಿದ್ದವು."[೨]

೨. ಪತ್ರಿಕೆಗಳು

ಭಾರತದ ಪತ್ರಿಕೆಗಳು ರಾಷ್ಟ್ರೀಯತೆ ಬೆಳವಣಿಗೆಗೆ ನಾಂದಿ ಹಾಡಿದವು. ರಾಷ್ಟ್ರಮಟ್ಟದಲ್ಲಿ ಅಮೃತ ಬಜಾರ ಪತ್ರಿಕೆ, ದಿ ಇಂಡಿಯನ್ ಮಿರರ್, ದಿ ಹಿಂದೂ, ಬೆಂಗಾಲಿ ಮುಂತಾದ ಪತ್ರಿಕೆಗಳು ರಾಷ್ಟ್ರೀಯತೆಯನ್ನು ದೇಶದ ಮೂಲೆ ಮೂಲೆಗೆ ಪ್ರಸರಿಸಿದವು. ಬಾಗಲಕೋಟ ಜಿಲ್ಲೆಯಲ್ಲಿ ತಿಲಕರ ಮರಾಠ ಮತ್ತು ಕೇಸರಿ ಪತ್ರಿಕೆಗಳು ಹೆಚ್ಚಿನ ಪ್ರಭಾವ ಬೀರಿದ್ದವು. ರಾಷ್ಟ್ರೀಯ ಕಾಂಗ್ರೆಸ್‌ದ ಸ್ಥಾಪನೆ,

ಕಾಂಗ್ರೆಸ್ ಸಮ್ಮೇಳನಗಳ ಕುರಿತು ವರದಿ, ಸಮ್ಮೇಳನದ ನಿರ್ಣಯ, ಬ್ರಿಟಿಷ್ ಸರಕಾರದ ಕುತಂತ್ರ ನೀತಿ ಮುಂತಾದ ವಿಷಯಗಳ ಕುರಿತಾಗಿ ಜಿಲ್ಲೆಯ ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದವು.

ಕಲಾದಗಿಯ 'ಹಿತೆಚ್ಚು' ಪತ್ರಿಕೆ ವಿಜಾಪೂರದ 'ಕರ್ನಾಟಕ ವೈಭವ' (೧೮೭೨), ಬಾಗಲಕೋಟದ 'ಚಂದ್ರಿಕಾ' ಪತ್ರಿಕೆ,(೧೮೯೮) 'ಕನ್ನಡಿಗ' ಇನ್ನಿತರ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಸ್ಫೂರ್ತಿದಾಯಕ ಕಾರ್ಯನಿರ್ವಹಿಸಿವೆ. ಸರಕಾರದ ನೀತಿಗಳನ್ನು, ಸ್ವದೇಶಿ ಪ್ರಚಾರ, ಸ್ವಾತಂತ್ರ್ಯ ಆಂದೋಲನ, ಅಸಹಕಾರ ಚಳವಳಿ ಮುಂತಾದವುಗಳ ಬಗೆಗೆ ಜನರಿಗೆ ತಿಳಿಸುವಲ್ಲಿ ಯಶಸ್ವಿಯಾದವು. "೧೯೪೨ರ ಸಂದರ್ಭದಲ್ಲಿ ಬುಲೆಟಿನ್‌ಗಳು ಜಿಲ್ಲೆಯಲ್ಲಿ ತಯಾರಾಗುತ್ತಿದ್ದವು. "ಬಾಗಲಕೋಟ ಸಮೀಪದ ಮಲ್ಲಯ್ಯನ ಗುಡ್ಡದಲ್ಲಿ ಬುಲೆಟಿನ್‌ಗಳನ್ನು ತಯಾರಿಸಿ ಹಂಚಲಾಗುತ್ತಿತ್ತು".[೩]

ಕೌಜಲಗಿ ಹಣಮಂತರಾಯರು ಪುಣೆಯಿಂದ ಹೊರಡಿಸಲಾಗುತ್ತಿದ್ದ " 'ಸಂಸ್ಥಾನಿ – ಸ್ವರಾಜ್ಯ' ಎಂಬ ಮರಾಠಿ ಪತ್ರಿಕೆಗೆ ಸುಮಾರು ೧೯೩೦ರ ದಶಕದಲ್ಲಿ ಮುಧೋಳ ಸಂಸ್ಥಾನದಲ್ಲಿ ನಡೆಯುತ್ತಿದ್ದ ಅನ್ಯಾಯಗಳ ಬಗ್ಗೆ ಅನಾಮಧೇಯ ಲೇಖನಗಳನ್ನು ಬರೆದು ಸಂಸ್ಥಾನಿಕರ ಗಮನಕ್ಕೆ ಬರುವಂತೆ ಮಾಡಿದರು".[೪] "ಶ್ರೀನಿವಾಸ ಮಂಗಳವೇಡೆಯವರು 'ಕನ್ನಡ ನವಜೀವನ' ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿ ಕಾಂಗ್ರೆಸ್ಸಿನ ಕೆಲಸವನ್ನು ಉತ್ಸಾಹದಿಂದ ನಡೆಸಿದರು".[೫] "ಯಲಗುರ್ದರಾವ್ ಧಾರವಾಡಕರರು ಒಂದು ವರ್ಷ ಕಾಲ 'ನವ ಭಾರತ'ವೆಂಬ ಸಾಪ್ತಾಹಿಕವನ್ನು ರಾಷ್ಟ್ರೀಯ ವಿಚಾರಗಳ ಪ್ರಚಾರಕ್ಕಾಗಿ ಬಾಗಲಕೋಟದಿಂದ ನಡೆಸಿದರು"[೬]

" 'ಸಚಿತ್ರ ಭಾರತ'ದಲ್ಲಿ ಬರುತ್ತಿದ್ದ ಕೆರೂರು ವಾಸುದೇವಾಚಾರ್ಯರ ಸ್ಫೂರ್ತಿದಾಯಕ ಬರಹಗಳು ಜನರ ಮೇಲೆ ಪ್ರಭಾವ ಬೀರಿದವು".[೭] ೧೯೨೧ರಲ್ಲಿ " 'ಕನ್ನಡ ನವಜೀವನ' ವಾರಪತ್ರಿಕೆ ಆರಂಭಿಸಿದರು. ಗಾಂಧೀಜಿಯವರ ನವಜೀವನ, ಯಂಗ್ ಇಂಡಿಯಾದಲ್ಲಿ ಬರುತ್ತಿದ್ದ ಬರಹಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಗೊಳ್ಳುತ್ತಿದ್ದವು"[೮] ಎಂದು ಮಂಗಳವೇಡೆ ಶ್ರೀನಿವಾಸರಾವ ಸ್ಮರಿಸಿಕೊಂಡಿದ್ದಾರೆ.

೩. ಬುದ್ಧಿಜೀವಿಗಳ ಪಾತ್ರ

ಯಾವುದೇ ಒಂದು ಕ್ರಾಂತಿ ಜರಗಬೇಕಾದರೆ ಅಥವಾ ರಾಷ್ಟ್ರೀಯತೆ ಬೆಳೆಯಲು ಬುದ್ಧಿಜೀವಿಗಳ ಪಾತ್ರ ಅಪಾರ. ಕವಿಗಳು, ನಾಟಕಕಾರರು, ಕಾದಂಬರಿಕಾರರು, ವೈಚಾರಿಕ ಮನೋಭಾವದವರ ಪ್ರಮುಖ ಪಾತ್ರ ವಹಿಸುತ್ತಾರೆ. ಇವರ ಪ್ರಭಾವ ಜನ ಸಾಮಾನ್ಯರ ಮೇಲೆ ಇತರರಿಗಿಂತ ಅಧಿಕವಾಗಿರುತ್ತದೆ.

"ಕರ್ನಾಟಕದ ಗಾಂಧಿ ಎಂದು ಹೆಸರುವಾಸಿಯಾಗಿದ್ದ ಹರ್ಡೇಕರ್ ಮಂಜಪ್ಪನವರು ಆಲಮಟ್ಟಿಯಲ್ಲಿ ಆಶ್ರಮ ಸ್ಥಾಪಿಸಿ ವೀರಶೈವ ತತ್ವ ಮತ್ತು ರಾಷ್ಟ್ರೀಯತೆ ಪ್ರಬೋಧಿಸುವ ಪುಸ್ತಕಗಳನ್ನು

ಪ್ರಕಟಿಸಿದರು. ಅವುಗಳಲ್ಲಿ ಶುದ್ಧಿ ಸಂಘಟನೆ, ಖಾದಿ, ಹರಿಜನೋದ್ಧಾರ, ಎಚ್ಚೆತ್ ಹಿಂದೂಸ್ಥಾನ ಗ್ರಂಥಗಳು ಪ್ರಮುಖವಾದವು."[೯]

"ರಾವ್ ಬಹದ್ದೂರ್ (ಆರ್.ಬಿ. ಕುಲಕರ್ಣಿ) ರವರು ಚುನಾವಣೆಯ ಸಂದರ್ಭದಲ್ಲಿ ನಡೆದ ಮಸಲತ್ತನ್ನು 'ಧೂಮಕೇತು' ಕೃತಿಯಲ್ಲಿ, ಸ್ವಾತಂತ್ರ್ಯ ಚಳವಳಿಯ ಕುರಿತು ಕನಸು – ನನಸು ಮತ್ತು ಸೂಜಿಗಲ್ಲು ಕಾದಂಬರಿಗಳನ್ನು, ಉತ್ತರ ಕರ್ನಾಟಕದ ಜಮಿನ್ದಾರಿ ವ್ಯವಸ್ಥೆಯ ಬಗ್ಗೆ 'ಗೌಡರ ಕೋಣಿ' ಕೃತಿ ರಚಿಸಿದರು".[೧೦]

"ಗಲಗಲಿಯವರಾದ ಸತ್ಯಕಾಮ ಇವರ ನಿಜವಾದ ಹೆಸರು ಬಾಬು ಅನಂತ ಕೃಷ್ಣ ಶಹಾಪೂರ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ತಮ್ಮ 'ಕಪಿಲವಸ್ತು' ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳುವಳಿ ಬಗೆಗೆ ಪ್ರಸ್ತಾಪಿಸಿದ್ದಾರೆ".[೧೧] ಹೀಗೆ ಅನೇಕ ಜನ ವೈಚಾರಿಕ ಮನೋಭಾವದವರು ಅಂದು ಜನಗಳ ಮನದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡಿಸಿದರು.

೪. ರಂಗಭೂಮಿ ಪಾತ್ರ

ಅಂದು ರಂಗಭೂಮಿ ಜನಗಳ ಮನದಲ್ಲಿ ವಿಶೇಷವಾಗಿತ್ತು. ಹಲವು ನಾಟಕಗಳು ನಾಡಿನ ಬಗೆಗೆ, ರಾಷ್ಟ್ರೀಯತೆಯ ಬಗೆಗೆ ಗಂಭೀರ ಪ್ರಭಾವ ಬೀರಿದವು. ಹಲವು ಜನ ವಿದ್ವಾಂಸರು ನಾಟಕಗಳನ್ನು ಬರೆದು ರಂಗದ ಮೇಲೆ ತೋರಿಸಿದರು. ಇವುಗಳ ಮೂಲಕ ಜನರಲ್ಲಿ ನಾಡಿನ ಕುರಿತು ಅಭಿಮಾನ ಬೆಳೆಸಿದರು. "ಸಿಂಪಿ ಲಿಂಗಣ್ಣನವರು ದೇಶದ್ರೋಹಿ ಎಂಬ ಸ್ವಾತಂತ್ರ್ಯ ಪ್ರಚೋದನೆಯ ದನಿ ಇರುವ ನಾಟಕ ರಚಿಸಿದರು"[೧೨]

"ಏಣಗಿ ಬಾಳಪ್ಪ ಮತ್ತು ಹುಕ್ಕೇರಿ ಬಾಳಪ್ಪ ನಾಟಕ ಕ್ರಾಂತಿ ಮಾಡುತ್ತಿದ್ದರು. ಸ್ವಾತಂತ್ರ್ಯ ಗೀತೆ ಹಾಡುತ್ತಿದ್ದರು. ಇವರು ಬೆಳಗಾವಿ ಜಿಲ್ಲೆಯವರು. ನಾಟಕ ಕಂಪನಿಯ ಮೂಲಕ ವೃತ್ತಿಪರ ಗಾಯಕರಾಗಿದ್ದರು. ವಿಜಾಪೂರ, ಬಾಗಲಕೋಟ, ಬದಾಮಿ, ಹುನಗುಂದಗಳಲ್ಲಿ ಇವರ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು."[೧೩]

"ಎಲ್.ಎಸ್.ಇನಾಂದಾರರ 'ಸಿಂಧೂರ ಲಕ್ಷಣ' ಮುಂತಾದ ನಾಟಕಗಳು ರಾಷ್ಟ್ರೀಯ ಚಳವಳಿಗೆ ಸ್ಫೂರ್ತಿ ನೀಡಿದವು. ಅದರೆ ಬ್ರಿಟಿಷ ಸರಕಾರ ಈ ಬಗ್ಗೆ ನಿರ್ಬಂಧ ಒಡ್ಡಿದಾಗ ನಾಟಕ ಪ್ರದರ್ಶನ ಕುಂಟಿತವಾಯಿತು".[೧೪]

"ಕಂದಗಲ್ ಹನುಮಂತರಾಯರು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕುರಿತು ಭಾರತದ ಸ್ವಾತಂತ್ರ್ಯ ಚಳವಳಿಗೆ ಪ್ರಚೋದನೆ ನೀಡುವ 'ವರಪ್ರಧಾನ' ಎಂಬ ಐತಿಹಾಸಿಕ ನಾಟಕ ಮತ್ತು ಕಿತ್ತೂರ ಚನ್ನಮ್ಮ ನಾಟಕಗಳನ್ನು ರಚಿಸಿದರು.[೧೫] "ಗರುಡ ಸದಾಶಿವರಾವ್ ಅವರ 'ಸತ್ಯ ಸಂಕಲ್ಪ' ಎಂಬುವದು

ದೇಶಭಕ್ತಿಯ ಮತ್ತು ಸಮಾಜ ಸುಧಾರಕ ನಾಟಕವಾಗಿದೆ."[೧೬] "ಈ ನಾಟಕಗಳು ನನ್ನಲ್ಲಿ ದೇಶಭಕ್ತಿ ಮೂಡಿಸಿದೆ."[೧೭] ಎಂದು ಕೂಡ್ಲೆಪ್ಪ ಮದಕಟ್ಟಿ ತಮ್ಮ ಸ್ಮೃತಿಗಳಲ್ಲಿ ಉಲ್ಲೇಖಿಸಿದ್ದಾರೆ.

೫. ತತ್ವಜ್ಞಾನಿಗಳ ಪ್ರಭಾವ

"ಪಿ.ಜಿ. ಹಲಕಟ್ಟಿ ಮತ್ತು ಹರ್ಡೀಕರ್ ಮಂಜಪ್ಪನವರು ತತ್ವಜ್ಞಾನಿ ಹಾಗೂ ಪತ್ರಕರ್ತರಾಗಿದ್ದು, ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರು ರಾಷ್ಟ್ರೀಯತೆಯ ಪರವಾಗಿದ್ದರು ಎಂಬ ವಿಚಾರ ಅವರ ಬರವಣಿಗೆಯಿಂದ ತಿಳಿಯುತ್ತದೆ."[೧೮]

ಹರ್ಡೀಕರ ಮಂಜಪ್ಪನವರು ಗಾಂಧೀಜಿಯವರ ಸಬರಮತಿ ಆಶ್ರಮದಂತೆ ಆಲಮಟ್ಟಿಯಲ್ಲಿ ಆಶ್ರಮ ಸ್ಥಾಪಿಸಿದರು. ಇವರ ಗ್ರಂಥಗಳು ಹಾಗೂ ಬರವಣಿಗೆಗಳು ರಾಷ್ಟ್ರೀಯತೆಯ ಸ್ಫೂರ್ತಿಯಿಂದ ಕೂಡಿದ್ದವು.

ಜಮಖಂಡಿಯ ಡಾ. ಆರ್.ಡಿ. ರಾನಡೆಯವರು ಪ್ರಸಿದ್ಧ ತತ್ವಜ್ಞಾನಿಗಳಾಗಿದ್ದರು. ನಿಂಬಾಳದಲ್ಲಿ ಇವರ ಆಧ್ಯಾತ್ಮಿಕ ಕೇಂದ್ರವಿತ್ತು. "ಸಾಂಗಲಿಯ ವಿಲಿಂಗ್ಟನ್ ಕಾಲೇಜಿನಲ್ಲಿ ತತ್ವಜ್ಞಾನದ ಪ್ರಾಧ್ಯಾಪಕರಾಗಿದ್ದರು. ಅಲ್ಲಿ ಸ್ವಾತಂತ್ರ್ಯ ಹೋರಾಟಗಾರ ಜೋರಾಪೂರ ಗುರುರಾಯರಂತ ಯುವಕರು ಇವರ ಪ್ರಭಾವಕ್ಕೆ ಒಳಗಾಗಿದ್ದರು"[೧೯] ಪುಣೆಯಲ್ಲಿಯೇ ರಾನಡೆಯವರು 'ಸಾರ್ವಜನಿಕ ಸಭಾ' ಆರಂಭಿಸಿದರು.

೬. ಜಾನಪದ ಗೀತೆಗಳು

"ಸ್ವಾತಂತ್ರ್ಯ ಚಳವಳಿಯ ಕಾಲಕ್ಕೆ ಸಭೆ ಸಮಾರಂಭಗಳಲ್ಲಿ ಜನರು ಸೇರುವಂತೆ ಆಕರ್ಷಿಸಲು, ಸಭೆಗೆ ನೆರೆದ ಜನರ ಮನೋಭಾವ ಭೂಮಿಕೆಯನ್ನು ಭಾಷಣಕ್ಕಾಗಿ ಸಿದ್ಧಪಡಿಸಲು, ಮೆರವಣಿಗೆ ಸಾಗಿದಾಗ ಜನರಿಗೆ ವಿಚಾರಗಳನ್ನು ತಿಳಿಸಿ ಹೇಳಲು ಅದಕ್ಕೂ ಹೆಚ್ಚಾಗಿ ಸ್ವತಃ ಚಳವಳಿಯ ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಿ ಅವರ ನಂಬಿಕೆಗಳನ್ನು ಬಲಪಡಿಸಲು 'ಗೇಯ ಗೀತೆಗಳನ್ನು ಹಾಡುತ್ತಿದ್ದರು".[೨೦]

ಜಾನಪದ ಗೀತೆಗಳು, ಗೀಗಿ ಪದಗಳು, ಲಾವಣಿಗಳು ಅನಕ್ಷರಸ್ಥ ಗ್ರಾಮೀಣ ಭಾರತೀಯರ ಮನದಲ್ಲಿ ರಾಷ್ಟ್ರೀಯ ಚಳವಳಿಯ ಸಂದೇಶಗಳನ್ನು ತುಂಬುತ್ತಿದ್ದವು. "ಹುಲಕುಂದದ ಭೀಮಕವಿ (ಬಸಪ್ಪ ಸಂಗಪ್ಪ. ಬೇಟಗೇರಿ), ಹಣಮಪ್ಪ. ಬಸಪ್ಪ. ಮಿರ್ಜಿ ಪದಗಳನ್ನು ರಚಿಸಿ ಉತ್ತರ ಕರ್ನಾಟಕದಲ್ಲಿ ಜನಪ್ರಿಯಗೊಳಿಸಿದರು".[೨೧] ರಾಷ್ಟ್ರದ ಪ್ರಮುಖ ನಾಯಕರ ಬಗೆಗೆ, ಸತ್ಯ, ಅಹಿಂಸೆ, ಖಾದಿಯ ಬಗೆಗೆ ಲಾವಣಿ ಹಾಡುಗಳನ್ನು ಕಟ್ಟಿ ಜನರನ್ನು ಹೋರಾಟಕ್ಕೆ ಅಣಿಮಾಡುತ್ತಿದ್ದರು.

೭. ಕೀರ್ತನೆಗಳು

ಹುನಗುಂದ ತಾಲೂಕಿನ ಗುಡೂರುದ ರುದ್ರಾರಾಧ್ಯ ಶಾಸ್ತ್ರಿ ಯಾವಗಲ್ಲಮಠ ಅವರು ಈ ರೀತಿ ತಮ್ಮ ಸ್ಮೃತಿ ದಾಖಲಿಸಿದ್ದಾರೆ. ಅವರ "ಗುರುಗಳಾದ ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳು ಮತ್ತು ಜಯರಾಮಾಚಾರ್ಯ ತಳಕಲ್ಲರವರು ರಾಷ್ಟ್ರೀಯ ಮುಖಂಡರನ್ನು ಬ್ರಿಟಿಷರನ್ನೂ ಅನುಕ್ರಮವಾಗಿ ಪಾಂಡವರು ಹಾಗೂ ಕೌರವರಿಗೆ ಹೋಲಿಸಿ ಕೀರ್ತನೆ ಹೇಳುತ್ತಿದ್ದರು. ಇದನ್ನು ಮೆಚ್ಚಿದ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಮುಖಂಡರ ಬಗ್ಗೆ ಅಪಾರ ಭಕ್ತಿ, ವಿಶ್ವಾಸವೂ ಬ್ರಿಟಿಷರ ಬಗ್ಗೆ ದ್ವೇಷ, ತಾತ್ಸಾರ ಭಾವನೆಯೂ ಮೂಡುತ್ತಿತ್ತು. ಕೀರ್ತನೆ ಕೇಳಲು ಹಳ್ಳಿಗಳಲ್ಲಿ ಸಾವಿರಾರು ಜನರು ಪಟ್ಟಣಗಳಲ್ಲಿ ಹತ್ತಿಪ್ಪತ್ತು ಸಾವಿರ ಜನರು ಕೂಡುತ್ತಿದ್ದರು".[೨೨] "ಹೂಲಿ ವೆಂಕಟರೆಡ್ಡಿಯವರ ಕೀರ್ತನೆಗಳು ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿದಾಯಕವಾಗಿದ್ದವು".[೨೩]

೮. ರಾಷ್ಟ್ರೀಯ ಶಿಕ್ಷಣ

ಬಂಗಾಳ ವಿಭಜನೆಯ ನಂತರ ಬ್ರಿಟಿಷರ ವಿರುದ್ಧ ಭಾರತೀಯರು ಸ್ವದೇಶಿ ಚಳವಳಿ ಪ್ರಾರಂಭಿಸಿದರು. ಇದರ ಅಂಗವಾಗಿ ಭಾರತೀಯರಲ್ಲಿ ರಾಷ್ಟ್ರದ ಬಗೆಗೆ ಭಕ್ತಿ, ಗೌರವ ಹಾಗೂ ಸ್ವಾಭಿಮಾನ ಬಿಂಬಿಸುವ ಶಿಕ್ಷಣವನ್ನು ನೀಡಲು ರಾಷ್ಟ್ರೀಯ ಶಾಲೆಗಳು ಪ್ರಾರಂಭಗೊಂಡವು. "ಬಾಗಲಕೋಟಯಲ್ಲಿ 'ಶ್ರೀಕೃಷ್ಣ ಪಾಠ ಶಾಲೆ', ಹುನಗುಂದಲ್ಲಿ ರಾಷ್ಟ್ರೀಯ ಶಾಲೆ ಆರಂಭಗೊಂಡವು."[೨೪]

೯. ವ್ಯಾಯಾಮ ಶಾಲೆಗಳು

ಹೋರಾಟದ ಸಂದರ್ಭದಲ್ಲಿಯೇ ಯುವಕರನ್ನು ಸಂಘಟಿಸಲು ದೇಶ ಸೇವೆಗೆ ಎಂತಹ ಕಷ್ಟ ಎದುರಾದರೂ ಸಹಿಸಿಕೊಳ್ಳಲು ಯುವಕರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಿದ್ಧಗೊಳಿಸಲು ವ್ಯಾಯಾಮ ಶಾಲೆಗಳು ಪ್ರಾರಂಭಗೊಂಡವು. ಬಾಗಲಕೋಟದಲ್ಲಿ ರಾಷ್ಟ್ರೀಯ ವ್ಯಾಯಾಮ ಪೀಠ ಪ್ರಾರಂಭಗೊಂಡಿತು. "ಗುಳೇದಗುಡ್ಡದ ಹೋರಾಟಗಾರರಿಗೆ ದತ್ತಾತ್ರೇಯ ವ್ಯಾಯಾಮ ಶಾಲೆ ಸ್ಫೂರ್ತಿಯಾಗಿತ್ತು".[೨೫]

ಮುಧೋಳದ ಯುವಕರು ಕೂಡಿಕೊಂಡು 'ಶಿವಾಜಿ ಪ್ಲೆಯಿಂಗ್ ಕ್ಲಬ್' ಎಂಬ ಯುವಕರ ಸಂಘವನ್ನು ಕಟ್ಟಿಕೊಂಡು ಸ್ವದೇಶಿ ಚಳವಳಿಯಲ್ಲಿ ಹಾಗೂ ಇನ್ನಿತರ ರಾಷ್ಟ್ರೀಯ ಚಳವಳಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದರು. "ಬದಾಮಿ ತಾಲೂಕಿನ ಚೋಳಚಗುಡ್ಡದಲ್ಲಿ ಒಂದು ವ್ಯಾಯಾಮಶಾಲೆ ಹಾಗೂ ತರುಣ ಸಂಘ ಸ್ಥಾಪನೆಗೊಂಡು ಎಲ್ಲ ವಿಧದ ರಾಷ್ಟ್ರೀಯ ಚಟುವಟಿಕೆ ನಡೆಸುತ್ತಿತ್ತು."[೨೬]

೧೦. ರಾಷ್ಟ್ರೀಯ ಮುಖಂಡರ ಪ್ರಭಾವ

ರಾಷ್ಟ್ರೀಯ ಮುಖಂಡರು ದೇಶಾದ್ಯಂತ ಪ್ರವಾಸ ಕೈಗೊಂಡು ತಮ್ಮ ವ್ಯಕ್ತಿತ್ವ ಹಾಗೂ ಭಾಷಣಗಳ ಮೂಲಕ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದರು. ಪ್ರಾರಂಭದಲ್ಲಿ ತಿಲಕರ ಪ್ರಭಾವ ಬಾಗಲಕೋಟ ಜಿಲ್ಲೆಯಲ್ಲಿ ತೀವ್ರವಾಗಿತ್ತು. "ಪುಣೆಗೆ ವಿದ್ಯಾಭ್ಯಾಸಕ್ಕೆ ಹೋದ ಜಿಲ್ಲೆಯ ವಿದ್ಯಾರ್ಥಿಗಳಾದ ಕೌಜಲಗಿ ಹಣಮಂತರಾಯರು, ಗುರುರಾಯ ಜೋರಾಪೂರ ಮುಂತಾದ ಯುವಕರು ಅವರ ಪ್ರಭಾವಕ್ಕೆ ಒಳಗಾಗಿ ತಮ್ಮ ಊರಿಗೆ ಮರಳಿದ ನಂತರ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಗಾಂಧಿಜೀಯವರು ೧೯೩೪ರಲ್ಲಿ ಬಾಗಲಕೋಟಗೆ ಬಂದಿದ್ದು ಅವರ ಜೊತೆ ಶೌಕತ್ ಅಲಿ ಕೂಡಾ ಇದ್ದರು ಎಂದು ಜೋರಾಪೂರ ಅವರು ಹೇಳಿದ್ದಾರೆ."[೨೭] ನಾ.ಸು. ಹರ್ಡೀಕರ ಅವರು ಸೇವಾದಳವನ್ನು ಬಾಗಲಕೋಟದಲ್ಲಿ ಪ್ರಾರಂಭಿಸಿದ್ದರಿಂದ ಅವರು ಅಗಾಗ ಬಾಗಲಕೋಟಗೆ ಭೇಟಿ ನೀಡುತ್ತಿದ್ದರು. ಇಲಕಲ್, ಗುಳೇದಗುಡ್ಡಕ್ಕೆ ರಾಷ್ಟ್ರೀಯ ಮುಖಂಡರು ಭೇಟಿ ನೀಡಿದ್ದರು".[೨೮]

ಬಾಗಲಕೋಟಯ ಜಯರಾವ್ ನರಗುಂದ ಅವರು "ತಮ್ಮ ಶಿಕ್ಷಣವನ್ನು ಪುಣೆಯಲ್ಲಿ ಮುಗಿಸಿ ೧೯೦೦ರಲ್ಲಿ ಬಾಗಲಕೋಟಗೆ ಬಂದ ನಂತರ ಪುಣೆಯಲ್ಲಿಯ ತಿಲಕರ ಸಂಪರ್ಕದ ಪರಿಣಾಮವಾಗಿ ೧೯೦೫ರಲ್ಲಿ ಸ್ವದೇಶಿ ಚಳವಳಿ ಆರಂಭಿಸಿದರು. ಅವರ ಮನೆ ರಾಷ್ಟ್ರೀಯ ಚಳವಳಿಯ ಕೇದ್ರವಾಗಿತ್ತು."[೨೯]

೧೧. ಧಾರ್ಮಿಕ ಉತ್ಸವಗಳಲ್ಲಿ ರಾಷ್ಟ್ರೀಯತೆ

ಧಾರ್ಮಿಕ ಚಟುವಟಿಕೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಕೂಡಿರುವುದರಿಂದ ಅವರಲ್ಲಿ ಸುಲಭವಾಗಿ ರಾಷ್ಟ್ರೀಯತೆ ಬೆಳೆಸಬಹುದೆಂಬ ಕಾರಣಕ್ಕೆ ಧಾರ್ಮಿಕ ಉತ್ಸವಗಳಲ್ಲಿಯೂ ರಾಷ್ಟ್ರೀಯ ಚಟುವಟಿಕೆಗಳು ಸರಾಗವಾಗಿ ನಡೆಯುತ್ತಿದ್ದವು. ಬಾಗಲಕೋಟ ಹತ್ತಿರವಿರುವ ಯಲಗೂರಿನಲ್ಲಿ ಹಣಮಂತ ದೇವರ ಉತ್ಸವದಲ್ಲಿ ರಾಷ್ಟ್ರೀಯ ಚಟುವಟಿಕೆಗಳು ನಡೆಯುತ್ತಿದ್ದವು. "ಯಲಗೂರೇಶೋತ್ಸವದಲ್ಲಿ ಸಾವಿರ, ಎರಡು ಸಾವಿರದವರೆಗೆ ಭಕ್ತ ಸಮುದಾಯವು ಕೂಡಿತ್ತು. ಪಂಡಿತ ಮೋತಿಲಾಲ್ ನೆಹರು ಅವರ ನಿಧನದ ವಾರ್ತೆಯು ಅಂದು ಮುಂಜಾನೆ ತಿಳಿದ ಕೂಡಲೆ ಎಲ್ಲರೂ ತಬ್ಬಿಬ್ಬಾದರು. ಅಲ್ಲಿ ನೆರೆದ ರಾಷ್ಟ್ರ ಸೇವಕರು ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಶೋಕವನ್ನು ವ್ಯಕ್ತಪಡಿಸಿದರು. ಮರುದಿನ ರವಿವಾರದಂದು ರಾಷ್ಟ್ರಧ್ವಜ ವಂದನೆ ಸಮಾರಂಭ ನಡೆಯಿತು. ಸಂಜೆ ಸಾರ್ವಜನಿಕ ಸಭೆಯಲ್ಲಿ ಮೊಹರೆ ಹಣಮಂತರಾಯರು ಸದ್ಯದ ದೇಶದ ಪರಿಸ್ಥಿತಿ ಕುರಿತು ಸಭಿಕರಿಗೆ ತಿಳಿಸಿಕೊಟ್ಟರು. ಧಾರವಾಡದಲ್ಲಿ ಕೂಡಿದ ಕಾರ್ಯಕರ್ತರ ಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಜನರ ಮುಂದೆ ಮಂಡಿಸಿ ರಾಷ್ಟ್ರಕಾರ್ಯ ಅವ್ಯಾಹತವಾಗಿ ಸಾಗಲು ನೆರೆದವರಿಗೆ ಕೇಳಿಕೊಂಡರು. ಜೋರಾಪೂರ ಗುರುರಾಯರು ಸ್ವಾತಂತ್ರ್ಯ ಸಮರದಲ್ಲಿ ತಂಡ ತಂಡವಾಗಿ ಬಂದು ಸೇರಿಕೊಳ್ಳಲು ತರುಣರಿಗೆ ಭಿನ್ನವಿಸಿಕೊಂಡರು. ನಂತರ 'ವಂದೆ ಮಾತರಂ' ಹಾಡಿ ಸಭೆ ಮುಕ್ತಾಯಗೊಳಿಸಿದರು."[೩೦] ಕೂಡಲ ಸಂಗಮ ಜಾತ್ರೆಯಲ್ಲಿ ಸಂಗಪ್ಪ ಕೋರಿ ಅವರು ವೈಯಕ್ತಿಕ ಸತ್ಯಾಗ್ರಹ ಕೈಗೊಂಡರು.

೧೨. ಶಿಕ್ಷಕರ ಪಾತ್ರ

ಬನಹಟ್ಟಿಯ ಕಲಕಂಬ ಮಾಸ್ತರರಿಗೆ ಮಹಾಕ್ರಾಂತಿಕಾರಿಗಳು ಎಂ.ಎನ್.ರಾಯ್, ಭಗತಸಿಂಗ್, ಸುಭಾಷಚಂದ್ರ ಭೋಸ ಮುಂತಾದರು ಆದರ್ಶ ವ್ಯಕ್ತಿಗಳಾಗಿದ್ದರು. ಎಂ.ಎನ್.ರಾಯ್‌ರ ಬರಹ ಮತ್ತು ವಿಚಾರಗಳ ಓದಿನ ಪ್ರಭಾವ ಮಾಸ್ತರರ ಮಾತುಕತೆಗಳಲ್ಲಿ, ದಿನದ ವ್ಯವಹಾರದಲ್ಲಿ ಎದ್ದು ಕಾಣುತ್ತಿತ್ತು. ಉಗ್ರ ಉಜ್ವಲ ದೇಶಾಭಿಮಾನಿಗಳ ವಿಚಾರಗಳೇ ಮಾಸ್ತರರ ಮೈ ಮನಸ್ಸುಗಳನ್ನು ತುಂಬಿಕೊಂಡಿದ್ದವು. "ರವೀಂದ್ರನಾಥ ಟ್ಯಾಗೋರರ ಕವನಗಳನ್ನು ಕಥೆಗಳನ್ನು ಓದಿದ ಈ ವ್ಯಕ್ತಿ ಸ್ವಾತಂತ್ರ್ಯ ಸಮರಕ್ಕಾಗಿ ಸ್ಫೂರ್ತಿ ಪಡೆದರು. ಈ ಎಲ್ಲ ಓದಿನ ಪ್ರಭಾವದಿಂದಾಗಿ ಇವರು ಸ್ವಾತಂತ್ರ್ಯ ಹೋರಾಟದ ಹುಚ್ಚು ಹೊಳೆಯಲ್ಲಿ ಕೊಚ್ಚಿಕೊಂಡು ಹೋದರು, ದೇಶ ಸೇವೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡ ಮಾಸ್ತರರು ತಮ್ಮ ಮನೆತನದ ಕಸಬಾದ ನೇಕಾರಿಕೆಯನ್ನೇ ಮರೆತುಬಿಟ್ಟರು."[೩೧]

ಕಲಕಂಬ ಮಾಸ್ತರರು ವಿದ್ಯಾರ್ಥಿಗಳಿಗೆ ಮನೆಪಾಠ ಮಾಡಲು ಪ್ರಾರಂಭಿಸಿದರು."ಹುಡುಗರು ಅವರಲ್ಲಿ ಇಂಗ್ಲೀಷ ಹೇಳಿಸಿಕೊಳ್ಳಲು ಬರುತ್ತಿದ್ದರು. ಮೇಲ್ನೋಟಕ್ಕೆ ಮಾಸ್ತರರು ಆಂಗ್ಲ ವಿಷಯ ಬೋಧಿಸಿದಂತೆ ಮಾಡಿದರೂ ಅವರು ನಿಜವಾಗಿಯೂ ಹೇಳಿಕೊಡುವ ವಿದ್ಯೆಯೇ ಬೇರೆ ತೆರನಾದದ್ದು ಆಗಿರುತ್ತಿತ್ತು. ಭಗತಸಿಂಗ್, ಚಂದ್ರಶೇಖರ ಆಜಾದ್, ತಿಲಕ ಮತ್ತು ಸುಭಾಷಚಂದ್ರ ಭೋಸರ ಮೊದಲಾದ ಸ್ವಾತಂತ್ರ್ಯ ಯೋಧರ ಸಾಹಸಮಯ ಕಥೆಗಳನ್ನು ಎಳೆಯ ಹೃದಯಗಳ ಮೇಲೆ ಆಳರಸರ ವಿರುದ್ಧ ಹೊತ್ತಿ ಉರಿಯುವಂತೆ ಹೇಳುತ್ತಿದ್ದರು. ಯುವಕರಿಗೆ ನೇರವಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ದುಮುಕಿರೆಂದು ಅವರೆಂದೂ ಹೇಳಲಿಲ್ಲ. ಪರೋಕ್ಷವಾಗಿ ಅವರಿಗೆ ಗೊತ್ತಾಗದ ರೀತಿಯಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಅವರ ಹೃದಯಗಳಲ್ಲಿ ಬೆಳಗಿಸುತ್ತಿದ್ದರು. ಮಾಸ್ತರರ ಮನೆಯಲ್ಲಿ ಬೋಧನೆಯ ಜೊತೆಗೆ ದೈಹಿಕ ತರಬೇತಿ ಕೆಲಸವೂ ನಡೆಯುತ್ತಿತ್ತು. ಮಾಸ್ತರರ ಮನೆಯ ಅಂಗಳವೆಂದರೆ ವಿವಿಧ ದೇಶಿ ಆಟಗಳ ಮೈದಾನ ಆಗಿರುತ್ತಿತ್ತು. ದಿನಾ ಹುತುತು ಮತ್ತು ಸರಿಗೆರಿ ಆಡುತ್ತಿದ್ದರು".[೩೨] ವಿದ್ಯಾರ್ಥಿಗಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಚಳವಳಿಗೆ ಸಿದ್ಧಗೊಳಿಸುತ್ತಿದ್ದರು.

ಇಲಕಲ್ಲ ಹತ್ತಿರದ ಗೋರಬಾಳದಲ್ಲಿ ಚಂದ್ರಶೇಖರಪ್ಪ ಕುಂಬಾರ ಮಾಸ್ತರ ಅವರು ಬಿಡುವಿನ ವೇಳೆಯಲ್ಲಿ ಜನರನ್ನು ಕಾಂಗ್ರೆಸ್‌ನ ಸದಸ್ಯರನ್ನಾಗಿ ಮಾಡಲು ವಿದ್ಯಾರ್ಥಿಗಳೊಂದಿಗೆ "ಹೆರೂರು, ಕೊಡಗಲಿ, ಶಿವನಗುತ್ತಿ, ಗುಗ್ಗಲಮರಿ ಮುಂತಾದ ಸುತ್ತಲಿನ ಗ್ರಾಮಗಳಿಗೆ ಸಂಚರಿಸುತ್ತಿದ್ದರು. ಅವರ ಪ್ರೇರಣೆಯಿಂದಲೆ ನಾನು ಚಳವಳಿಯಲ್ಲಿ ಭಾಗವಹಿಸಿದೆ."[೩೩] ಎಂದು ಮಲ್ಲಪ್ಪ ನಡಹಳ್ಳಿ ತಮ್ಮ ಸ್ಮರಣೆಯಲ್ಲಿ ದಾಖಲಿಸಿಕೊಂಡಿದ್ದಾರೆ.

೧೩. ಆರಂಭಿಕ ಸಭೆಗಳು

"ಸ್ವಾತಂತ್ರ್ಯ ಪೂರ್ವದಲ್ಲಿ ಬೆಳಗಾವಿ, ವಿಜಾಪೂರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪ್ರದೇಶ ಮುಂಬಯಿ ಪ್ರಾಂತಕ್ಕೆ ಸೇರಿತ್ತು. ೧೮೯೫ರಲ್ಲಿ ಬೆಳಗಾವಿಯಲ್ಲಿ

ದಿನಶಾವಾಚ್ಛರವರ ಅಧ್ಯಕ್ಷತೆಯಲ್ಲಿ ಮುಂಬಯಿ ಪ್ರಾಂತೀಯ ಪರಿಷತ್ ಜರುಗಿತು. ವಿಷ್ಣುಪಂತ ನಾತುರವರು ಸ್ವಾಗತಾಧ್ಯಕ್ಷರಾಗಿದ್ದರು. ಶ್ರೀಪಾದರಾವ ಛತ್ರೆ, ಸದಾಶಿವರಾವ ಭಾಟೆ ಮುಂತಾದ ನಾಯಕರು ಭಾಗವಹಿಸಿದ್ದರು."[೩೪] ಈ ಸಭೆಯು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಜನರನ್ನು ಅಣಿಗೊಳಿಸಿತು.

ಇದೇ ರೀತಿಯಾಗಿ ಮಹಾರಾಷ್ಟ್ರದಲ್ಲಿ ಲೋಕಮಾನ್ಯ ತಿಲಕರು ಜನರನ್ನು ಜಾಗೃತಗೊಳಿಸಲು ಗೋ ರಕ್ಷಣ ಚಳವಳಿ ಆರಂಭಿಸಿದರು. ಇದರಿಂದಾಗಿ ಧಾರವಾಡ, ಹುಬ್ಬಳ್ಳಿ, ಬಾಗಲಕೋಟ, ಗದಗ ಮುಂತಾದ ಕಡೆಗಳಲ್ಲಿ ಗೋ ಶಾಲೆಗಳು ಆರಂಭಗೊಂಡವು. ನಂತರ "ತಿಲಕರ ರಾಷ್ಟ್ರೀಯತೆಯನ್ನು ಇನ್ನಷ್ಟು ಜಾಗೃತಗೊಳಿಸಲು ಸಾರ್ವಜನಿಕವಾಗಿ ಶಿವಾಜಿ ಜಯಂತೋತ್ಸವ ಹಾಗೂ ಗಣಪತಿ ಉತ್ಸವಗಳನ್ನು ಆರಂಭಿಸಿದರು. ಕರ್ನಾಟಕದ ಬೆಳಗಾವಿ, ಕಿತ್ತೂರ, ಧಾರವಾಡ ಹುಬ್ಬಳ್ಳಿ, ಗದಗ, ಬಾಗಲಕೋಟ, ವಿಜಾಪೂರ, ಗುಳೇದಗುಡ್ಡ, ನವಲಗುಂದಗಳಲ್ಲಿ ಉತ್ಸವಗಳು ಆರಂಭಗೊಂಡವು."[೩೫] ಸಾರ್ವಜನಿಕ ಗಣೇಶೋತ್ಸವ ಹಾಗೂ ಶಿವಾಜಿ ಜಯಂತಿಯ ಆಚರಣೆಗಳು ಬಾಗಲಕೋಟದ ಜಿಲ್ಲೆಯ ಜನರಲ್ಲಿ ಜಾಗೃತಿ ಮೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕುವಂತೆ ಮಾಡಿದವು.

"೧೯೦೩ರಲ್ಲಿ ಮುಂಬಯಿ ಪ್ರಾಂತದ ರಾಜಕೀಯ ಪರಿಷತ್ ಧಾರವಾಡದಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ದಾಜಿ ಅಬಾಜಿ ಖರೇ ಅವರು ವಹಿಸಿದ್ದರು. ಲೋಕಮಾನ್ಯ ತಿಲಕರು, ಫಿರೋಜಶಹಾ ಮೆಹ್ತಾ ಮುಂತಾದ ಪ್ರಮುಖ ನಾಯಕರು ಭಾಗವಹಿಸಿದ್ದರು. ಸಿಂಧ್, ಗುಜರಾತ, ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಅನೇಕ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು."[೩೬]

೪.೨ ಸ್ವದೇಶಿ ಚಳವಳಿ

೪.೨.೧ ರಾಷ್ಟ್ರಮಟ್ಟದಿಂದ ಸ್ಥಳೀಯಮಟ್ಟದವರೆಗೆ

"ಸ್ವದೇಶಿ ಚಳವಳಿಯ ಯುಗವನ್ನು ನಿಜವಾಗಿ ಹಿಂದೂಸ್ಥಾನದ ರಾಷ್ಟ್ರೀಯತ್ವದ ಪ್ರಾರಂಭ"[೩೭] ಎಂದು ಆಲೂರು ವೆಂಕಟರಾಯರು ಹೇಳಿದ್ದಾರೆ. ೧೯೦೫ ರಿಂದ ೧೯೧೦ನೆಯ ಇಸ್ವಿಯವರಗಿನ ಕಾಲದಲ್ಲಿ ಹಿಂದೂಸ್ಥಾನದ ರಾಜಕಾರಣಕ್ಕೆ ಹೊಸದೊಂದು ರೂಪವು ಪ್ರಾಪ್ತವಾಯಿತು. ಈ ಕಾಲದಲ್ಲಿ ರಾಷ್ಟ್ರವು ಚಳವಳಿಗಳನ್ನು ಮಾಡಿದಷ್ಟು ಹಿಂದೆ ಎಂದೂ ಮಾಡಿರಲಿಲ್ಲ. "ಸ್ವತಂತ್ರ ಹಿಂದೂಸ್ಥಾನವು ಪರತಂತ್ರವಾಗಿ ಪರದಾಸ್ಯಕ್ಕೆ ಒಳಗಾದಾಗ ಆ ದಾಸ್ಯ ವಿಮೋಚನೆಗಾಗಿ ಶಸ್ತ್ರಾಸ್ತ್ರಗಳ ಸಹಾಯದಿಂದ ಮಾಡಿದ ಕೊನೆಯ ಪ್ರಯತ್ನವೆಂದರೆ ೧೮೫೭ನೆಯ ಇಸ್ವಿಯಲ್ಲಿ ಹೂಡಿದ ಸ್ವಾತಂತ್ರ್ಯ ಸಂಗ್ರಾಮ. ಆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರವು ಸೋತು ಅದರ ಕೈಯೊಳಗಿನ ಕೈದುಗಳು ಬಲತ್ಕಾರದಿಂದ ಕಸಿದುಕೊಳ್ಳಲ್ಪಟ್ಟ ಬಳಿಕ ಶಸ್ತ್ರಾಸ್ತ್ರಗಳಿಂದ ಸ್ವಾತಂತ್ರ್ಯವನ್ನು ದೊರಕಿಸಬೇಕೆಂದು ಬುದ್ಧಿಯು ತಾನಾಗಿಯೇ ತಣ್ಣಗಾಗುತ್ತಾ ನಡೆಯಿತು. ಆಗ ರಾಷ್ಟ್ರವು ಸ್ವಾಭಾವಿಕವಾಗಿಯೇ ಶಾಂತಿಯುದ್ಧದ ಕಡೆಗೆ ಹೊರಳಹತ್ತಿತ್ತು. ೧೯೦೫ನೆ ಇಸ್ವಿಯಲ್ಲಿ ಆ ಆಸೆ ಮಾಯವಾಯಿತು. ಆಗ ದೇಶವು ಸ್ವಾವಲಂಬನದ ಮಾರ್ಗವನ್ನು

ಅವಲಂಬಿಸಿತು. ೧೯೦೫ ರಿಂದ ೧೯೧೧ನೆಯ ಇಸ್ವಿಯ ವರೆಗೆ ಈ ಸ್ವಾವಲಂಬನೆಯ ಮಾರ್ಗವು ಅತ್ಯಂತ ಉತ್ಕಟವಾಗಿ ಅವಲಂಬಿಸಲ್ಪಟ್ಟಿತು. ೧೯೦೫ನೆ ಇಸ್ವಿಯಲ್ಲಿ ಇಡಿ ಹಿಂದೂಸ್ಥಾನದಲ್ಲಿಯ ರಾಜಕಾರಣವು ಏಕೀಕೃತವಾಗಿ ನಿಜವಾದ ರಾಷ್ಟ್ರೀಯತ್ವ ಉದಯವಾಯಿತು."[೩೮]

ಸ್ವದೇಶಿ ಚಳವಳಿಯ ಪ್ರಮುಖ ತತ್ವಗಳು

೧) ಸ್ವದೇಶಿ

೨) ಬಹಿಷ್ಕಾರ

೩) ರಾಷ್ಟ್ರೀಯ ಶಿಕ್ಷಣ

೪) ಮದ್ಯಪಾನ ನಿಷೇಧ

೧೯೦೫ನೆ ಅಗಸ್ಟ ತಿಂಗಳಿನಲ್ಲಿ ಬಂಗಾಳದಲ್ಲಿ ಸ್ವದೇಶಿ ಚಳವಳಿ ಆರಂಭಗೊಂಡಿತು. ೧೯೦೫ ಮೇ, ತಿಂಗಳದಲ್ಲಿ ಗೋಖಲೆಯವರು ಸ್ವದೇಶಿ ಉಡುಪನ್ನು ಧರಿಸಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಹಿಂದೂಸ್ಥಾನದ ಸಂಬಂಧವಾಗಿ ಉತ್ಕೃಷ್ಟ ಕೆಲಸ ಮಾಡಿ ನವ್ಹೆಂಬರ ತಿಂಗಳಲ್ಲಿ ತಿರುಗಿ ಬಂದರು. ಬನಾರಸದಲ್ಲಿ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ಉಗ್ರವಾಗಿ ಭಾಷಣ ಮಾಡಿ ಸ್ವದೇಶಿ ಹಾಗೂ ಬಹಿಷ್ಕಾರದ ಗೊತ್ತುವಳಿಗಳನ್ನು ಅಂಗೀಕರಿಸಿದರು.

ರಾಷ್ಟ್ರೀಯ ಶಿಕ್ಷಣಕ್ಕಾಗಿ ಪಂಡಿತ ಮದನಮೋಹನ ಮಾಲವೀಯ ಅವರು ಹಿಂದೂ ವಿದ್ಯಾಪೀಠದ ಕಲ್ಪನೆಯನ್ನು ೩೧-೧೨-೧೯೦೫ ರಂದು ಜನರ ಮುಂದಿಟ್ಟರು. ಪ್ರೊ. ವಿಜಾಪೂರಕರ ಮತ್ತು ಪ್ರೊ. ಭಾನು ಇವರು ರಾಷ್ಟ್ರೀಯ ಶಿಕ್ಷಣಕ್ಕಾಗಿ ಸರ್ವಸ್ವವನ್ನು ಅರ್ಪಿಸುವದಕ್ಕೆ ಸಿದ್ಧರಾದರು. "ಮುನಸಿ ಮಾಧವ ಲಾಲ ಎಂಬುವರು ಹಿಂದೂ ವಿದ್ಯಾಪೀಠಕ್ಕೆ ಮೂರು ಲಕ್ಷ ರೂಪಾಯಿ ಕೊಟ್ಟರು. ಅಲ್ಲಿಂದ ಒಂಬತ್ತು ಲಕ್ಷ ರೂಪಾಯಿ ಕೂಡಿದವು. ಅತ್ತ ಇಂಗ್ಲೆಂಡದಲ್ಲಿ ಪಂಡಿತ್ ಶ್ಯಾಮಜಿ ಕೃಷ್ಣವರ್ಮಾ ಅವರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರು. ಹೋಮ್ ರೂಲ್ ಸೊಸೈಟಿ ಇಂಡಿಯಾ ಹೌಸ್‌ಗಳನ್ನು ೧-೦೬-೧೯೦೫ರಲ್ಲಿ ತೆರೆದರು."[೩೯]

"೧೯೦೬ರಲ್ಲಿ ಬನಾರಸ್ ಕಾಂಗ್ರೆಸ್ ಅಧಿವೇಶನದಲ್ಲಿ ದಾದಾಬಾಯಿ ನವರೋಜಿಯವರು 'ಸ್ವರಾಜ್ಯ' ಘೋಷಣೆಯನ್ನು ಮಾಡಿದರು."[೪೦] ಇದರ ಮೂಲಕ ಹೋರಾಟವು ತೀವ್ರವಾಯಿತು. "೧೯೦೭ರ ಮೇ ತಿಂಗಳಲ್ಲಿ ತಿಲಕರು 'ಮುಂಬಯಿ ಸ್ವದೇಶಿ ಸ್ಟೋಟ್ಸ್' ಸ್ಥಾಪಿಸಿದರು. ಸ್ವದೇಶಿಯ ಮೇಲೆ ಲೇಖನಗಳನ್ನು ಬರೆದು ಉಪನ್ಯಾಸವನ್ನು ಕೊಟ್ಟರು. ೨೨-೦೮-೧೯೦೬ ರಂದು ಪುಣೆಯಲ್ಲಿ ಪರದೇಶಿ ವಸ್ತ್ರದ ದೊಡ್ಡ ಚಳವಳಿ ಆಯಿತು. ಸಾವರಕರ್ ಮೊದಲನೆಯ ಸಲ ಸಾರ್ವಜನಿಕವಾಗಿ ಮುಂದೆ ಬಂದದ್ದು ಅದೇ ದಿನ. ಬಂಗಾಲದಲ್ಲಿಯೇ ಮಿಕ್ಕ ಅನೇಕ ಕಡೆಗೂ ದೊಡ್ಡ ದೊಡ್ಡ ಗಿರಣಿಗಳು ಆರಂಭಗೊಂಡವು. ಹೊಸ ಉದ್ಯೋಗ ದಂಧೆಗಳು ಪ್ರಾರಂಭವಾದವು. ಬಂಗಾಳದಲ್ಲಿ ರಾಷ್ಟ್ರೀಯ

ಕಾಲೇಜು ಹೈಸ್ಕೂಲುಗಳು ಸ್ಥಾಪಿತವಾದವು. ಮಹಾರಾಷ್ಟ್ರದಲ್ಲಿ 'ಸಮರ್ಥ ವಿದ್ಯಾಲಯ' ಸ್ಥಾಪನೆಗೊಂಡಿತು. ಬರೋಡದಲ್ಲಿ ಗಂಗಾನಾಥ ಭಾರತೀಯ ವಿದ್ಯಾಲಯ ಸ್ಥಾಪಿತವಾಯಿತು. ಅರವಿಂದರು 'ವಂದೆ ಮಾತರಂ' ಎಂಬ ದೈನಿಕ ಪತ್ರಿಕೆಯ ಮೂಲಕ ಹಿಂದೂಸ್ಥಾನವನ್ನು ಖಡಬಡಿಸಿಬಿಟ್ಟರು."[೪೧]

"ಬೆಳಗಾವಿಯಲ್ಲಿ 'ಗಣೇಶ ವಿದ್ಯಾಲಯ'ವೆಂಬ ರಾಷ್ಟ್ರೀಯ ಶಾಲೆಯನ್ನು ಗುಣಾಜಿ ಮತ್ತು ಕಾಲಿಲಕರ ತೆಗೆದರು. ಇದು ಮರಾಠಿ ಶಾಲೆಯಾಗಿತ್ತು. ಧಾರವಾಡದಲ್ಲಿ ಆಲೂರು ವೆಂಕಟರಾಯರು 'ಕರ್ನಾಟಕ ನೂತನ ವಿದ್ಯಾಲಯ'ವೆಂಬ ರಾಷ್ಟ್ರೀಯ ಶಾಲೆಯನ್ನು ತೆರೆದರು. ಹುಬ್ಬಳ್ಳಿ ನವಲಗುಂದ ನರಗುಂದ ಹಾನಗಲ್ಲ ಅಗಡಿ ಬಾಗಲಕೋಟ, ಬದಾಮಿ ಮುಂತಾದ ಕಡೆಗಳಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು."[೪೨]

"೧೯೦೯ರ ಕೊನೆಯ ವೇಳೆಗೆ ರಾಷ್ಟ್ರೀಯ ಶಾಲೆಗಳು ಸರಕಾರದ ಒತ್ತಡಕ್ಕೆ ಮಣಿದು ಮುಚ್ಚಲ್ಪಟ್ಟವು. ಶಾಲೆಗಳಿಗೆ ಸರಕಾರ ಬೀಗ ಮುದ್ರೆ ಹಾಕಿತು. ರಾಷ್ಟ್ರೀಯ ಶಾಲೆಗಳಿಂದ ೧ ಫೆಬ್ರುವರಿ, ೧೯೧೦ರ ಒಳಗಾಗಿ ವಿದ್ಯಾರ್ಥಿಗಳನ್ನು ಹೊರ ಹಾಕದಿದ್ದರೆ ಅವರಿಗೆ ಮುಂದೆ ಎಲ್ಲಿಯೂ ಶಿಕ್ಷಣ ದೊರೆಯದಂತೆ ಮಾಡುವದಾಗಿ ಸರ್ಕಾರ ಬೆದರಿಸಿದ್ದರಿಂದ ಶಾಲೆಗಳು ಸಂಪೂರ್ಣ ನಿಂತು ಹೋದವು."[೪೩]

ರಾಷ್ಟ್ರೀಯ ಶಾಲೆಗಳು ವಿದ್ಯಾರ್ಥಿಗಳಿಗೆ ದೇಶಾಭಿಮಾನ ಬೆಳೆಸುವದರ ಜೊತೆಗೆ ಹಲವಾರು ವಸ್ತುಗಳನ್ನು ಸಿದ್ಧಗೊಳಿಸುವ ಶಿಕ್ಷಣ ನೀಡುತ್ತಿದ್ದವು. ಆಲೂರು ವೆಂಕಟರಾಯರು ಹೇಳುವಂತೆ ಮ್ಯಾಚ್ ಫ್ಯಾಕ್ಟರಿ, ಸೀಸ ಪೆನ್ಸಿಲ್ ಫ್ಯಾಕ್ಟರಿ, ಹೊಜೆಯರಿ ಚಿತ್ರಕಲೆ ಬಡಿಗತನ ಮುಂತಾದ ಉದ್ಯೋಗಗಳನ್ನು ಕಲಿಸುತ್ತಿದ್ದವು.

೪.೨.೨ ತಿಲಕರ ಸಂಪರ್ಕ

ವಿಜಾಪೂರ ಜಿಲ್ಲೆಯಲ್ಲಿ (ಇಂದಿನ ಬಾಗಲಕೋಟ ಜಿಲ್ಲೆ ಸೇರಿದಂತೆ) ಲೋಕಮಾನ್ಯ ತಿಲಕರ ಪ್ರಭಾವದಿಂದ ಸ್ವದೇಶಿ ಹಾಗೂ ಬಹಿಷ್ಕಾರ ಚಳವಳಿಯ ಆರಂಭಗೊಂಡಿತು. "೧೯೦೫-೦೬ರಲ್ಲಿ ಲೋಕಮಾನ್ಯ ತಿಲಕರು ಉತ್ತರ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡು ತಮ್ಮ ಪ್ರಭಾವಿತ ಭಾಷಣಗಳಿಂದ ಹಾಗೂ ಕೇಸರಿ ಮತ್ತು ಮರಾಠ ಪತ್ರಿಕೆಯಲ್ಲಿ ಲೇಖನಗಳ ಮೂಲಕ ಜಿಲ್ಲೆಯ ಹಾಗೂ ಉತ್ತರ ಕರ್ನಾಟಕದ ಜನರ ಮೇಲೆ ಅಗಾಧವಾದ ಪ್ರಭಾವ ಬೀರಿದರು. ಸರಕಾರಕ್ಕೆ ಹೆದರದೆ ನಿರ್ಭೀತಿಯಿಂದ ಬರೆಯುತ್ತಿರುವ ಅವರ ಲೇಖನಗಳು ಹಾಗೂ ಅವುಗಳ ಕನ್ನಡ ಅನುವಾದಗಳು ಜನರನ್ನು ಆಕರ್ಷಿಸಿದವು."[೪೪]

"ಅರಸೊತ್ತಿಗೆಯನ್ನು ವಿರೋಧಿಸಲು ಹಾಗೂ ವೈಭವವನ್ನು ಕಾಣಲು ಸ್ವರಾಜ್ಯದಿಂದ ಮಾತ್ರ ಸಾಧ್ಯ. ಸ್ವರಾಜ್ಯ ಪಡೆಯಬೇಕಾದರೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವದು ಹಾಗೂ ಸ್ವದೇಶಿ ವಸ್ತುಗಳನ್ನು ಪ್ರೀತಿಸಬೇಕು. ಸ್ವದೇಶಿಯ ಬಗ್ಗೆ ಅರಿತುಕೊಳ್ಳಬೇಕಾದರೆ ಪ್ರತಿಯೊಬ್ಬರು ಬ್ರಿಟಿಷರು ನೀಡುವ ಶಿಕ್ಷಣದ ಬದಲಾಗಿ ರಾಷ್ಟ್ರೀಯ ಶಿಕ್ಷಣವನ್ನು ಪಡೆಯಬೇಕು. ಕೇವಲ ಒಬ್ಬ ಗುಮಾಸ್ತನನ್ನು ತಯಾರು ಮಾಡುವ ಇಂಗ್ಲೀಷ ಶಿಕ್ಷಣ ಬದಲಾಗಿ ದೇಶಭಕ್ತಿ, ದೇಶದ ಸಾಂಸ್ಕೃತಿ ಮತ್ತು ಪರಂಪರೆ ದೇಶ ಪ್ರೇಮ ಬೆಳೆಸುವ ಹಾಗೂ ಗತವೈಭವನ್ನು ಸಾರುವ ರಾಷ್ಟ್ರೀಯ ಶಿಕ್ಷಣವನ್ನು ನೀಡುವದು ಅವಶ್ಯಕವಾಗಿದೆ."[೪೫]

ಜಿಲ್ಲೆಯು ಬಂಗಾಳ ವಿಭಜನೆಯ ವಿರೋಧಿ ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಲು ಕಾರಣಕರ್ತರೆಂದರೆ ಶ್ರೀನಿವಾಸ ಕೌಜಲಗಿಯವರು. ಇವರು ಬಾಲಗಂಗಾಧರ ತಿಲಕರ ಜೊತೆ ಉತ್ತಮ ಸಂಬಂಧ ಹೊಂದಿದ್ದರು. ಹಾಗೂ ೧೯೦೪ ರಿಂದ ಪ್ರತಿ ವರ್ಷ ಅಖಿಲ ಭಾರತ ಕಾಂಗ್ರೆಸ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದರು. "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು ನಾನು ಅದನ್ನು ಪಡೆದೆ ತಿರುತ್ತೇನೆ ಎಂದು ಸಾರಿದ ಲೋಕಮಾನ್ಯ ತಿಲಕರ ತೀವ್ರಗಾಮಿಗಳ ಗುಂಪಿಗೆ ಸೇರಿದ್ದರು. ಶ್ರೀನಿವಾಸ ಕೌಜಲಗಿ ಹಾಗೂ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕದ ತೀವ್ರಗಾಮಿ ಗುಂಪಿನ ನಾಯಕತ್ವ ವಹಿಸಿದ್ದರು.

"೧೯೦೫ರಲ್ಲಿ ಬನಾರಸದ ಅಧಿವೇಶನದ 'ಹೊಸ ವರ್ಷ, ಹೊಸ ನಾಯಕರ ಉದಯ' ಎಂಬ ಸಂದೇಶ ಗಂಗಾಧರರಾವ್ ದೇಶಪಾಂಡೆಯವರ ಮೂಲಕ ತಲುಪಿತು. ಕಲ್ಕತ್ತಾದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಚಳವಳಿಯ ನಾಲ್ಕು ತತ್ವಗಳಾದ ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯವನ್ನು ಅಂಗೀಕರಿಸಿತು. ಇದರಿಂದ ಕರ್ನಾಟಕದ ಯುವಕರು ಪ್ರೇರೇಪಿತರಾದರು. ವಿಜಾಪೂರದಲ್ಲಿ ಶ್ರೀನಿವಾಸರಾವ್ ಕೌಜಲಗಿ, ಬಾಗಲಕೋಟದಲ್ಲಿ ಜಯರಾವ್ ನರಗುಂದ, ಕೃಷ್ಣರಾವ್ ಜೋರಾಪೂರ, ಪಟವರ್ಧನ, ನರಗುಂದನಾರಿ ಹುನಗುಂದದಲ್ಲಿ ರಾಘವೇಂದ್ರರಾವ್ ದೇಸಾಯಿ ಮತ್ತು ಗುಳೇದಗುಡ್ಡದಲ್ಲಿ ಗುಂಡು ಭಟ್ಟ ಜೋಶಿ ನೇತೃತ್ವವಹಿಸಿದ್ದರು. ಹಣಮಂತರಾವ್ ಕೌಜಲಗಿ ಮತ್ತು ಕಾಕಾ ಕಾರಖಾನೀಸರು ಮುಧೋಳ ಮತ್ತು ಜಮಖಂಡಿ ಸಂಸ್ಥಾನಗಳಲ್ಲಿ ವಿದ್ಯಾರ್ಥಿಗಳ ನೇತೃತ್ವವಹಿಸಿ ಸ್ವದೇಶಿ ಅಂದೋಲನವನ್ನು ಅರಂಭಿಸಿದರು."[೪೬]

ಬಾಗಲಕೋಟಯಿಂದ ಪ್ರಕಟವಾಗುತ್ತಿದ್ದ ಚಂದ್ರಿಕಾ ಎಂಬ ಮಾಸ ಪತ್ರಿಕೆಯು ದಿನಾಂಕ: ೧೨-೦೮-೧೯೦೮ರಂದು ಸ್ವದೇಶಿ ಸಭೆ ಬಗ್ಗೆ ಈ ರೀತಿ ಉಲ್ಲೇಖಿಸಿದೆ- "ಬಂಗಾಲ ವಿಭಜನೆಯ ವಿರೋಧಿಸಿ ಬಾಗಲಕೋಟದ ಗಣೇಶ ಥೇಟರದಲ್ಲಿ ಸಭೆ ಕರೆಯಲಾಗಿತ್ತು. ನರಗುಂದ ಮತ್ತು ಧಾರವಾಡಕರ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು."[೪೭]

ಬಾಗಲಕೋಟಯ ಜನರು ತಿಲಕರಿಂದ ಬಹಳ ಪ್ರಭಾವಿತರಾಗಿದ್ದರು. ಧಾರವಾಡದ ಕರ್ನಾಟಕ ವೃತ್ತ ಪತ್ರಿಕೆಯು ೧೩-೦೮-೧೯೦೮ರ ತನ್ನ ವರದಿಯಲ್ಲಿ ಇಂತಹ ಸುದ್ದಿಯೊಂದನ್ನು ಪ್ರಕಟಿಸಿದೆ.

"ಅಲ್ಲಿಯ ಜನರು(ಬಾಗಲಕೋಟ) ವಂತಿಗೆಯನ್ನು ಕೂಡಿಸಿ ಲೋಕಮಾನ್ಯ ತಿಲಕರ ಸ್ಮರಣೆಗಾಗಿ 'ತಿಲಕಮಠ' ಹಾಗೂ ಅದರಲ್ಲಿ ತಿಲಕರ ಮೂರ್ತಿಯನ್ನು ಪ್ರತಿಷ್ಠಾಪಿಸಲು ಮುಂದಾದಾಗ ರಾಮದಾಸನೆಂಬ ವ್ಯಾಪಾರಿಯು ಉಚಿತವಾಗಿ ನಿವೇಶನವನ್ನು ನೀಡಿದನು."[೪೮]

"ತಿಲಕಮಠ ಬಾಗಲಕೋಟಯಲ್ಲಿ ಸ್ಥಾಪನೆಗೊಂಡಿತು. ಮುದುವೇಕರ, ಧಾರವಾಡದ ಲಿಂಗಯ್ಯ ಹಾಗೂ ವಿಜಾಪೂರದ ಶ್ರೀನಿವಾಸರಾವ್ ಕೌಜಲಗಿಯವರು ಗಣಪತಿ ಹಬ್ಬದಂದು ಮಠಕ್ಕೆ ಭೇಟಿ ನೀಡಿ ಅಲ್ಲಿ ತಿಲಕರ ತತ್ವಾದರ್ಶಗಳನ್ನು ಹಾಗೂ ರಾಜಕೀಯ ಕುರಿತು ಭಾಷಣಗಳನ್ನು ಮಾಡುತ್ತಿದ್ದರು."[೪೯] ಇದರಿಂದ ಬಾಗಲಕೋಟದಲ್ಲಿ ತಿಲಕರ ಪ್ರಭಾವ ಹಾಗೂ ಸ್ವದೇಶಿಚಳವಳಿಯ ಬಿಸಿ ಎಷ್ಟಿತ್ತು ಎಂಬುವದು ಅರ್ಥವಾಗುತ್ತದೆ.

೪.೨.೩ ಸ್ವದೇಶಿ ಚಳವಳಿಯ ಚಟುವಟಿಕೆಗಳು

೧. ಸ್ವದೇಶಿ ಪ್ರಚಾರ ಮತ್ತು ವಿದೇಶಿ ಬಹಿಷ್ಕಾರ

"೧೯೦೫ರಲ್ಲಿ ಜನತೆಯ ಭಾವನೆಗಳಿಂದಾಗಿ ಉದಯಿಸಿದ ಸ್ವದೇಶಿ ಹಾಗೂ ವಿದೇಶಿ ವಸ್ತುಗಳ ಬಹಿಷ್ಕಾರ ಎಂಬ ಕಲ್ಪನೆಗಳು ಹೊಸದೇನಲ್ಲ. ಅಮೇರಿಕನ್ನರು, ಐರಿಷ್ ಜನ, ಚೀನಿಯರು ಅವುಗಳನ್ನು ಮೊದಲೇ ಅನುಸರಿಸಿದ್ದರು. ಭಾರತೀಯ ಕೈಗಾರಿಕೆಯು ಅಭಿವೃದ್ಧಿಗೆ ಶುದ್ಧಾಂಗವಾಗಿ ಆರ್ಥಿಕವಾದ ಕ್ರಮ ಸ್ವದೇಶಿ. ಇದನ್ನು ಮಹಾರಾಷ್ಟ್ರದ ಗೋಪಾಲರಾವ್ ದೇಶಮುಖ್, ಜಿ.ವಿ.ಜೋಶಿ ಮತ್ತು ಎಂ.ಜಿ. ರಾನಡೆ ಬಂಗಾಳದ ರಾಜನಾರಾಯಣ ಬೋಸ್, ನಬಗೋಪಾಲಮಿತ್ರ ಮತ್ತು ಠಾಕೋರರ ಮನೆತನದವರು ಇದನ್ನು ಉಪದೇಶಿಸಿದ್ದರು. ಇದೇ ರೀತಿ ಬೋಲಾನಾಥ ಚಂದ್ರ ೧೮೭೦ರಲ್ಲಿ ಬ್ರಿಟಿಷ್ ಜನತೆಯ ಮೇಲೆ ಆರ್ಥಿಕ ಒತ್ತಡ ತರುವ ಸಲುವಾಗಿ ಬಹಿಷ್ಕಾರವನ್ನು ಶಿಫಾರಸ್ಸು ಮಾಡಿದ್ದರು. ೧೮೯೬ರಲ್ಲಿ ತಿಲಕರು ಪೂರ್ಣ ಪ್ರಮಾಣದ ಬಹಿಷ್ಕಾರ ಚಳವಳಿಯನ್ನೇ ನಡೆಸಿದ್ದರು. ಸ್ವದೇಶಿಯೂ, ವಿದೇಶಿ ವಸ್ತು ಬಹಿಷ್ಕಾರವು ಪರಸ್ಪರ ಪೂರಕವಾದವು. ಒಂದಿಲ್ಲದೆ ಇನ್ನೊಂದು ಯಶಸ್ವಿಯಾಗುತ್ತಿರಲಿಲ್ಲ."[೫೦]

ಸ್ವದೇಶಿ ಭಾವನೆಗೆ ಬಹಿಷ್ಕಾರದ ನಂಟು ಬೆಳೆದಾಗ ಅವೆರಡರ ಒಕ್ಕೂಟ ಪ್ರಬಲ ರಾಜಕೀಯ ಅಸ್ತ್ರವಾಯಿತು. ಬಹಿಷ್ಕಾರ-ಸ್ವದೇಶಿ ೧೯೪೭ರ ವರೆಗೆ ಸ್ವಾತಂತ್ರ್ಯ ಚಳವಳಿಯ ಪ್ರಬಲ ಘೋಷಣೆಗಳಾಗಿ ಉಳಿದವು. "ನೀವು ಸ್ವದೇಶಿಯನ್ನು ಇಚ್ಛಿಸುವಿರಾದರೆ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕು. ಬಹಿಷ್ಕಾರವಿಲ್ಲದೆ ಸ್ವದೇಶಿ ಅಭಿವೃದ್ಧಿಯಾಗಲಾರದು ಬಹಿಷ್ಕಾರ ಒಂದು ರಾಜಕೀಯ ಅಸ್ತ್ರ. ಸರಕಾರ ಕಂದಾಯ ವಸೂಲಿ ಮಾಡಲು ಶಾಂತಿಯನ್ನು ಕಾಪಾಡಲು ನಾವು ಅವರೊಂದಿಗೆ ಸಹಕರಿಸುವುದಿಲ್ಲ. ಅವರು ನ್ಯಾಯಾಡಳಿತ ನಡೆಸಲು ಸಹಕರಿಸುವುದಿಲ್ಲ. ನಮ್ಮದೇ ನ್ಯಾಯಾಲಯಗಳನ್ನು ಏರ್ಪಡಿಸುತ್ತೇವೆ. ಸಮಯ ಬಂದಾಗ ನಾವು ಕಂದಾಯವನ್ನು ಕಟ್ಟುವುದಿಲ್ಲ. ನೀವು ಇದನ್ನೆಲ್ಲ ಮಾಡಬಲ್ಲಿರೋ ? ಮಾಡಬಲ್ಲಿರಾದರೆ ನಾಳೆಯಿಂದ ನೀವು ಸ್ವತಂತ್ರರು"[೫೧] ಎಂದು ತಿಲಕರು ಹೇಳಿದ್ದಾರೆ.

ಬಂಗಾಳದ ವಿಭಜನೆ ಹಾಗೂ ಸರಕಾರವು ಕೈಕೊಂಡ ದಬ್ಬಾಳಿಕೆಯ ಕ್ರಮಗಳ ವಿರುದ್ಧ ವಾರಣಾಸಿಯ ಕಾಂಗ್ರೆಸ್ ಸಮ್ಮೇಳನ ತೀವ್ರ ವಿರೋಧ ವ್ಯಕ್ತಪಡಿಸಿ ಬಂಗಾಳದಲ್ಲಿ ಸ್ವದೇಶಿ ಮತ್ತು ಬಹಿಷ್ಕಾರ ಕ್ರಮಗಳು ನಡೆಯಲೆಂದು ಅನುಮೋದಿಸಿತು.

"ಬಾಗಲಕೋಟದಲ್ಲಿ ಜಯರಾವ್ ನರಗುಂದ ಅವರ ಮುಂದಾಳತ್ವದಲ್ಲಿ ೧೯೦೫ರಲ್ಲಿ ಸ್ವದೇಶಿ ಚಳವಳಿಯು ವಿದೇಶಿ ಸಕ್ಕರೆ, ಸೀಮೆ ಎಣ್ಣೆ ಮತ್ತು ಬಳೆಗಳ ವಿರುದ್ಧ ಬಹಿಷ್ಕಾರ ಹಾಕುವ ಮೂಲಕ ಆರಂಭಗೊಂಡಿತು."[೫೨] ವ್ಯಾಖ್ಯಾನಗಳನ್ನು ಕೇಳಲು ಸಾವಿರಾರು ಜನರು ನೆರೆಯುತ್ತಿದ್ದರು. ಆಗಿನ ಕಾಲದ ಅವೇಶಯುಕ್ತವಾದ ಭಾಷಣಗಳು ತರುಣರನ್ನು, ವೃದ್ಧರನ್ನೂ ಒಂದೇ ವಿಧವಾಗಿ ಸ್ಫೂರ್ತಿಗೊಳಿಸುತ್ತಿದ್ದವು. "ಬಾಗಲಕೋಟದಲ್ಲಿ ಓರ್ವ ವೃದ್ಧವರ್ತಕರು ಕೌಜಲಗಿ ಶ್ರೀನಿವಾಸರ ಆಗಿನ ಭಾಷಣದಿಂದ ಸ್ಫೂರ್ತಿಗೊಂಡು ಮೈಮೇಲಿನ ಪರದೇಶಿ ಬಟ್ಟೆಗಳನ್ನು ಸಭೆಯಲ್ಲಿಯೇ ಹರಿದೊಗೆದರು. ಇಂಥ ದೃಶ್ಯಗಳು ಸಾಮಾನ್ಯವಾಗಿದ್ದವು."[೫೩]

ಮುಧೋಳದಲ್ಲಿ ರಾಮಾಚಾರ್ಯಕಟ್ಟಿ, ಸತ್ಯವಂತರಾವ ಮಳೆಬೆನ್ನೂರು, ಎಚ್.ಸಿ. ದೇಶಪಾಂಡೆ, ಅಪ್ಪಾ ಪೋತನಿಸ, ರಾಮಚಂದ್ರ ಸಹಸ್ರಬುದ್ದೆ, ಅನಂತರಾವ್ ಬೆಳವಳಿ ಭೀಮು ದೇವಳೆ, ಗಂಗಾರಾಮ ಪೆಂಟರ, ಶಿವಪ್ಪ ಪಾಟೀಲ, ತಾತ್ಯಾ ತಾಸಗಾಂವಕರ ಇವರೆಲ್ಲ ಸ್ವದೇಶಿ ಅಂದೋಲನದ ಪ್ರಚಾರ ಕೈಗೊಂಡರು.

ಗಣಪತಿ ಉತ್ಸವದ ವೇಳೆಯಲ್ಲಿ, ಲಗ್ನ ಸಮಾರಂಭಗಳಲ್ಲಿ ಸ್ವದೇಶಿ ಪ್ರಚಾರ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಜನರ ಮನಸ್ಸಿನ ಮೇಲೆ ಸ್ವದೇಶಿ ವಸ್ತುಗಳನ್ನೇ ಕೊಳ್ಳುವ ಬಗ್ಗೆ ಬಿಂಬಿಸುವದು ಸ್ವದೇಶಿ ಕಾರ್ಯಕ್ರಮದ ಕಾರ್ಯವಾಗಿತ್ತು. ಹೈಸ್ಕೂಲ್ ವಿದ್ಯಾರ್ಥಿಗಳಿರುವಾಗ ಕೌಜಲಗಿ ಹಣಮಂತರಾಯರು ವಿದೇಶಿ ವಸ್ತು ಬಹಿಷ್ಕಾರ ಮತ್ತು ಸ್ವದೇಶಿ ವಸ್ತುಗಳ ಪುರಸ್ಕಾರದ ಬಗ್ಗೆ ಬರೆದ ಪದ್ಯಗಳು ಪ್ರಭಾವಿತವಾಗಿದ್ದವು. ೧೯೦೬ರಲ್ಲಿ ಅವರು ರಚಿಸಿದ ಹಾಡುಗಳನ್ನು ಬರೆದಿಟ್ಟಿಲ್ಲ. ಶ್ರೀ ರಾಮಾಚಾರ್ಯ ಕಟ್ಟಿಯವರ ಸ್ಮೃತಿಯಲ್ಲಿರುವ ಕೌಜಲಗಿ ಹಣಮಂತರಾಯರ ಪದ್ಯಗಳು ಸ್ವದೇಶಿ ಪ್ರಚಾರದ ಪ್ರಬಲ ಸಾಧನಗಳಾಗಿದ್ದವು.

ಭಾರತೀಯ ಸ್ತ್ರೀಯರಿಗೆ ವಿದೇಶಿ ವಸ್ತುಗಳ ವ್ಯಾಮೋಹ ಇರಬಾರದೆಂದು ಬರೆದ ಪದ್ಯ ಇಂತಿದೆ.

ಮೇಲಿ ಮೋತಿ ಸುರಕಿ । ಅಲೀ ಬೋಟೀ ಹೀತಿ ।
ದೋದಿನ್ ತೀ ಲಕಲಕತಿ । ಕಾಳಿ ಝುಣೆ ಪಡತಿ ।
ಪರದೇಶೀ ಪರಿವಸ್ತು । ಡಬ್ಬೂ ಹೀ ದಿಸಣ್ಯಾತ ।
ಮಿಳತೇ ಹೀ ಅತಿ ಸ್ವಸ್ತ । ದೇಶಾಕರಿ ಘಸ್ತ ॥
ಬಾಯಾನೋ ಅಮ್ಹಾಲಾ । ನಾಗವೇಲೇ ಸರ್ವಾನಾ ।

ಜಾಗ್ರತ ವ್ಹಾಯಾ ಕಾಲಾ । ವಿನವಿ ತುಮ್ಹಾಲಾ ॥
ಗೋ ರಕ್ತೆ ಬನಲೇಲಿ । ಸಾಖರ ಜೀ ಸ್ತ್ರೀ ಖಾಲ್ಲೀ ।
ಡಾಕಿಣ ತೀ ಜಗತಿತಲಿ । ಕ್ರೌರ್ಯಾಚೀ ಪ್ರಥಳಿ ॥
ಲುಗಡೀ ಜೀ ಸೋಡೋನಿ । ಪರಚೀಟಾ ನೆ ಸೋನಿ ।
ಶಾಹೀ ತೀ ಯಾ ಭುವನೀ । ವೇಶ್ಯಾ ಜಣುಲಸುನೀ ॥
ಹೇ ಅಣಾ ತೇ ಅಣಾ । ಮ್ಹಣುನಿಯಾ ಪುರುಷಾನಾ ।
ಪರಕೀಯ ಮಾಲಾ ನಯನಾ । ಏಳವುನಕಾ ತ್ಯಾನಾ ॥[54]

ರಾಮದಾಸ ಜಯಂತಿ ನಿಮಿತ್ತ ನಡೆದ ಉತ್ಸವದಲ್ಲಿ ಹಾಡಲು ಭಾರತದ ಪೌರಾಣಿಕ ಹಾಗೂ ಇತಿಹಾಸ ಮಹತ್ವವನ್ನು ಸಾರಿ ದೇಶಾಭಿಮಾನ ಬೆಳೆಸುವ ಪದ್ಯಗಳನ್ನು ಬರೆಯುತ್ತಿದ್ದರು.

"ವಾಯುಸುತಾ ಬಲಭೀಮಾ ಮಾರುತೇಭಕ್ತವತ್ಸಲಾ ರಘುದಾಸಾ ।
ಅಸುರಮಾರಕ ದೀನೋದ್ಧಾರಾ, ಪ್ರೇಮೆ ನಿರಖಿ ಯಾ ದಾಸಾ ॥
ಬ್ರಹ್ಮಚಾರಿಚಾ ಭಗವಾ ಝುಂಡಾ ಲಂಕೇ ಮಾಜಿ ಫಡಕ ವಿಲಾ ।
ಅಚಲ ಜರೀಗಿರಿ ಉಚಲುನಿ ಅಣುನಿ ವಿಸ್ಮತ ಕೇಲೇ ಜಗತಾಲಾ ।

ಅಪಾರ ಸಾಗರಿ ಸೇತೂ ಬಾಂಧುನ ವಾನರ ಸೇನಾ ಪೈಲ ತೀರೀ
ನೇವುನಿ ಮಾರುನಿ ರಾಕ್ಷಸ ತ್ಯಾಂಚೆ ವ್ಯಾಸ ವಾಲ್ಮೀಕಿ ಕವನಕರೀ ।
ಅಶೋಕ ಬಾಗೀ ಸೀತಾ ಸಾಧ್ವಿ ಸಚಿಂತ ಬಸಲೀ ನಿರ ಖೋನಿ ।

ಪ್ರಭು ಅಂಗಠೀ ದೇಶಿ ತೀಚಾ ಶೋಕ ಸಾಗರಾ ಸಾರೋನಿ ।
ದಶಮುಖದಾಡಿ ದಗ್ಧ ಕರೋನಿ ಅಗ್ನಿ ಲಾವಿ ದಾಹೀದಿಶೀ ।
ಧಾವಾಧಾವಿ ದೇಖನಿ ದಾನವ ಧುರನಿ ಪೋಟಾ ತೋ ಹಸಸಿ ।

ಸೀತಾ ಮಾತಾ ನೀಚಾ ಹಾತಾ ಜಾ ತಾತ್ಯಾನೆ ತಾಡಿರೂಲೇ ।
ಮತ್ತ ಸಿರೀತೂ ತಿತ್ತಾ ಹಾಣುನಿ ಯಮಸದನಾಲಾ ಧಾಡಿಯಲೇ ।

ಆಯಾ ಬಹಿಣಿ ಕೈಕು ಜನಾನಾ ಪರಕೀಯಾನಿ ಜಬರೀನೆ ।
ನಯನಾ ದೇಖತ ಓಡುನಿ ನೇಲ್ಯಾ ಅಂಬರ ಭರಲೆ ಕ್ಲೇಶಾನೆ ।

ಅಪಾಟ ತ್ಯಾಂಚೆ ಸೈನ್ಯ ಜರೀ ತೂ ಮಾವಳ ಸೇನಾಮಿಳವೋನಿ ।
ಶಿವ ಹಸ್ತಾನೆ ಅಫಜುಲ್ಲಾಲಾ ವಧಿಲೆ ಗಾತೋ ಪ್ರೇಮಾನೆ ॥

ಸೀತಾಮಾತೆಯನ್ನು ಅಶೋಕವನದಲ್ಲಿ ಒಯ್ದು ಇಟ್ಟ ದಾನವರಿಂದ ಅವಳ ವಿಮೋಚನೆ ಮಾಡಿದ ಅಸುರ ಮಾರಕ ದೀನೋದ್ಧಾರ ಭಕ್ತವತ್ಸಲ್ ರಘುದಾಸನಾದ ವಾಯುಸುತ ಬಲಭೀಮ ಮಾರುತಿಯೇ ನಮ್ಮನ್ನು ಪ್ರೇಮದಿಂದ ನೋಡು ಎಂದು ಪ್ರಾರ್ಥನೆ ಮಾಡುವ ಈ ಪದ್ಯದಲ್ಲಿ ಸೀತಾ ಮಾತೆಯ ವಿಮೋಚನೆ ಮಾಡಿದ ಮಾರುತಿಯ ದೇಶದಲ್ಲಿ ಅಪಾರ ಸೈನ್ಯ ಬಲವಿದ್ದ ಪರಕೀಯರು ಸ್ತ್ರೀಯರನ್ನು ಬಲತ್ಕಾರದಿಂದ ಅಪಹರಿಸಿದಾಗ ಮಾವಳಿ ಸೈನ್ಯ ಕೂಡಿಸಿ ಶಿವಾಜಿ ಹಸ್ತದಿಂದ ಅವರ ಪಾರುಪತ್ಯ ಮಾಡಿಸಿದ ರಾಮದಾಸರ ಮಹಿಮೆಯನ್ನು ಹೊಗಳಲಾಗಿದೆ. ಈ ಪದ್ಯದ ಮುಂದಿನ ಭಾಗದಲ್ಲಿ ಆಂಗ್ಲರು ಭಾರತ ಮಾತೆಯನ್ನು ಬಂಧನದಲ್ಲಿ ದಾನವ ರಾವಣನು ಇಟ್ಟಂತೆಯೇ ಇಟ್ಟಿರುವಾಗ ನೀನು ಅವಳ ವಿಮೋಚನೆಗಾಗಿ ತರುಣರಲ್ಲಿ ಶಕ್ತಿಯನ್ನು ನಿರ್ಧಾರವನ್ನು, ದೈರ್ಯವನ್ನು ತಂದು ಕೊಡಬೇಕು ಎಂದು ಪ್ರಾರ್ಥಿಸುತ್ತಿದ್ದರು. ಭಾರತದ ಗತವೈಭವ ಹಾಗೂ ಭಾರತೀಯರ ಸಾಹಸ ಕುರಿತು ಹೇಳುವ ಈ ಪದ್ಯದಿಂದ ಜನರನ್ನು ಜಾಗೃತಿ ಮಾಡುವ ಕೆಲಸವನ್ನು ಮಾಡುತ್ತಿದ್ದರು.

"ಪ್ರಭಾತಫೇರಿ ಹೊರಡುವಾಗ ರಾಮಾಚಾರ್ಯ ಕಟ್ಟಿಯವರು ಇದರ ಮುಂದಾಳತ್ವ ವಹಿಸಿದ್ದರು. ಸುಶ್ರಾವ್ಯವಾಗಿ ಪದ್ಯವನ್ನು ಹಾಡುತ್ತಾ ಮುಂದೆ ನಡೆದರೆ ಜನರು ಅವರ ಹಿಂದೆ ಏಕಕಂಠದಿಂದ ಅವರು ಅಂದ ಚರಣವನ್ನು ಹಾಡುವದು ಈ ಪ್ರಚಾರದ ವೈಶಿಷ್ಟ್ಯವಾಗಿತ್ತು. ಮುಧೋಳದ ಪೇಟೆಯ ಕೋಟದಲ್ಲಿ ನಿಂತು ಅಂಗಡಿಕಾರರು ಪರದೇಶಿ ವಸ್ತುಗಳ ಮಾರಾಟ ಮಾಡುವುದನ್ನು ಖಂಡಿಸುವ ಪದ್ಯಗಳನ್ನು ವಿವಾಹ, ಉಪನಯನ ಮೊದಲಾದ ಸಮಾರಂಭಗಳು ಮನೆಗಳ ಮುಂದೆ ವಿದೇಶಿ ಸಕ್ಕರೆ ಉಪಯೋಗಿಸುವದು ಹೇಯವೆಂಬ ಪದ್ಯ, ಪರದೇಶಿ ಬೆಳೆ, ಪರದೇಶಿ ಚೀಟು ಮೊದಲಾದವುಗಳನ್ನು ಉಪಯೋಗಿಸುವದು ಆರ್ಯ ಸ್ತ್ರೀಯರಿಗೆ ಶೋಭಿಸದು ಎಂಬ ಅರ್ಥಗಳು ಬರುವ ಪದ್ಯಗಳನ್ನು ಸ್ತ್ರೀಯರು ಗುಂಪು ಸೇರಿದಾಗ ಹಾಡುತ್ತಿದ್ದರು."[೫೬] ಇಂತಹ ಒಂದು ಹಾಡು ಈ ರೀತಿ ಇದೆ.

"ವಾಟೆ ಹಳು ಹಳು ಚಲಾ
ಮುಲಾನೋಂ ಜೈ ಹಿಂದ್ ಬೋಲಾ"[೫೭]

ರಾಮಾಚಾರ್ಯ ಕಟ್ಟಿಯವರು ನೆನಪಿಸಿಕೊಂಡಂತೆ "ಮಣೆಯಿಂದ ಗಣಪತಿ ಉತ್ಸವದ ಹಾಡುಗಳನ್ನು ಕೌಜಲಗಿ ಹಣಮಂತರಾಯರು ನನಗೆ ಕಳುಹಿಸಿಕೊಡುತ್ತಿದ್ದರು. ವಿಜಾಪೂರದ ಗಣಪತಿ ಮೇಳದಲ್ಲಿ ನಾನು ಆ ಹಾಡುಗಳನ್ನು ಹಾಡುತ್ತಿದ್ದೆ"[೫೮]

ಸ್ವದೇಶಿ ಪದ್ಯಗಳನ್ನು ಹಾಡುವ ಮೂಲಕ ಪ್ರಭಾತ ಫೇರಿ ಮಾಡುವದರಿಂದ ಕೆಲಮಟ್ಟಿಗೆ ಜನರಲ್ಲಿ ಜಾಗೃತಿಯು ಬೆಳೆಯಿತು. ಇದರಿಂದ ಸ್ಫೂರ್ತಿಗೊಂಡು ಪಿಕೆಟಿಂಗ್ ಮಾಡುವುದನ್ನು ಆರಂಭಿಸಿದರು. ಸಕ್ಕರೆ ಹಲವಾ ಮಿಠಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವ ಸಾಹಸದ ಕಾರ್ಯವನ್ನು ಕೈಗೊಳ್ಳಲು ಕೌಜಲಗಿ ಹಣಮಂತರಾಯರ ಆದೇಶದಂತೆ ಅವರ ಅನುಯಾಯಿಗಳಾದ

ವಿದ್ಯಾರ್ಥಿಗಳು ವಿದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರು ಇದು ವಿಶೇಷ ಜನ ಜಾಗೃತಿ ಮೂಡಿಸಿತು.

ಮುಧೋಳದಲ್ಲಿ ಕೌಜಲಗಿ ಹಣಮಂತರಾಯರ ಮುಂದಾಳತ್ವದಲ್ಲಿ ವಿದ್ಯಾರ್ಥಿಗಳು ಸ್ವದೇಶಿ ಅಂದೋಲನದ ಪ್ರಚಾರ ಕಾರ್ಯ ಕೈಕೊಂಡಿದ್ದಂತೆ ಜಮಖಂಡಿಯಲ್ಲಿಯೂ ಕಾಕಾ ಕಾರಖಾನೀಸ, ಕಾಳೊಪಂತ ಕುಲಕರ್ಣಿ, ಇವರು ವಿದ್ಯಾರ್ಥಿಗಳ ಧುರೀಣರಾಗಿ ಸ್ವದೇಶಿ ಪ್ರಚಾರ ಕಾರ್ಯ ಕೈಗೊಂಡರು. ರವಿವಾರ ಸೂಟಿಯ ದಿವಸ ಜಮಖಂಡಿಯ ವಿದ್ಯಾರ್ಥಿಗಳ ಗುಂಪು ಕಾಕಾ ಕಾರಖಾನೀಸರ ಮುಂದಾಳತ್ವದಲ್ಲಿ, ಮುಧೋಳದ ವಿದ್ಯಾರ್ಥಿಗಳ ಗುಂಪು ಕೌಜಲಗಿ ಬಂಧುಗಳ ಮುಂದಾಳತ್ವದಲ್ಲಿ ಎರಡು ಊರುಗಳ ಮಧ್ಯದಲ್ಲಿ ಒಂದು ಹಾಳು ಗುಡಿಯಲ್ಲಿ ಸಭೆ ಸೇರುವ ವಾಡಿಕೆಯನ್ನಿಟ್ಟುಕೊಂಡಿದ್ದರು. ಆ ಸಭೆಯಲ್ಲಿ ಆ ವಾರದಲ್ಲಿ ಕೈಗೊಳ್ಳುವ ಕೆಲಸದ ವಿವರಗಳು ನಿರ್ಧರಿಸಲ್ಪಟ್ಟು ಕೆಲಸವನ್ನು ಒಪ್ಪಿಸಿಕೊಡಲಾಗುತ್ತಿತ್ತು. "ದೀಪಾವಳಿಯಲ್ಲಿ ಪರದೇಶಿ ಸಕ್ಕರೆಯನ್ನು ಉಪಯೋಗಿಸ ಕೂಡದೆಂದು ಪ್ರಕಟನೆಗಳನ್ನು ಬೆಳಗಾಗುವದರೊಳಗೆ ಎಲ್ಲರ ಮನೆಗಳ ಬಾಗಿಲಿಗೆ ಹಚ್ಚಿಬಿಡುವ ನಿರ್ಣಯವು, ದೀಪಾವಳಿ ಸೂಟಿಗೆ ಕೌಜಲಗಿ ಹಣಮಂತರಾಯರು ಬಂದಾಗ ಸೇರಿದ ಸಭೆಯಲ್ಲಿ ಅಂಗಿಕರಿಸಲ್ಪಟ್ಟಿತು. ಅದರಂತೆ ನರಕ ಚತುರ್ದಶಿಯ ದಿನ ಬೆಳಿಗ್ಗೆ ಎದ್ದು ಬಾಗಿಲು ತೆರೆದಾಗ ಎಲ್ಲರ ಮನೆಯ ಬಾಗಿಲುಗಳಿಗೆ ವಿದೇಶಿ ಸಕ್ಕರೆ ಉಪಯೋಗಿಸಬೇಡಿರಿ ಎಂಬ ಪ್ರಕಟನೆಗಳು ಅಂಟಿಸಿದ್ದು ಕಂಡುಬಂದಿತು. ಈ ಪ್ರಕಟಣೆಯ ಒಕ್ಕಣಿಕೆಯು ಪರದೇಶಿ ಸಕ್ಕರೆಯನ್ನು ತಿನ್ನುವರು ನಾಚಿಕೆಯಿಂದ ತಲೆಕೆಳಗೆ ಹಾಕುವಂತೆ ಮರ್ಮ ಬೇಧಕವಾಗಿತ್ತು. ಮರುವರ್ಷ ದೀಪಾವಳಿ ಸೂಟಿಯಲ್ಲಿ ಸೇರಿ ವಿದೇಶಿ ಬಳೆಗಳನ್ನು ಇಟ್ಟುಕೊಳ್ಳುವವರಿಂದ ದೀಪಾವಳಿಯಲ್ಲಿ ಆರತಿ ಮಾಡಿಸಿಕೊಳ್ಳಬಾರದು ಎಂದು ಮುಧೋಳ–ಜಮಖಂಡಿ ವಿದ್ಯಾರ್ಥಿಗಳ ಸಂಯುಕ್ತ ಸಭೆಯ ಮುಖಂಡರು ನಿರ್ಧರಿಸಿ ತಮ್ಮ ಅನುಯಾಯಿಗಳಿಗೆ ಆದೇಶಿಸಿದರು. ದೇಶಿಬಳೆಗಳನ್ನು ಧರಿಸುವಂತೆ ಸ್ತ್ರೀಯರನ್ನು ಭಿನ್ನವಿಸುವ ಪ್ರಕಟಣೆಗಳು ಎಲ್ಲರ ಮನೆಯ ಬಾಗಿಲಿಗೆ ಅಂಟಿಸಿದರು. ಕೆಲವರು ವಿದೇಶಿ ಬಳೆ ತೊಟ್ಟವರಿಂದ ಆರತಿ ಮಾಡಿಸಿಕೊಳ್ಳಲು ನಿರಾಕರಿಸಿದರು, ಹಿರಿಯರು ಕಿರಿಯರಿಗೆ ಆರತಿ ಮಾಡಿಸಿಕೊಳ್ಳಲು ಒತ್ತಾಯಿಸಿದಾಗ ಅವರು(ಮಕ್ಕಳು) ಬಾಗಿಲಿಗೆ ಅಂಟಿಸಲ್ಪಟ್ಟ ಪ್ರಕಟಣೆಯನ್ನು ತೋರಿಸಿ ದೇಶಿ ಬಳೆಗಳನ್ನು ಇಟ್ಟುಕೊಳ್ಳದೆ ಆರತಿ ಮಾಡಿಸಿಕೊಳ್ಳುವಂತಿಲ್ಲ ಎಂಬ ತಮ್ಮ ನಿರ್ಧಾರವನ್ನು ತಿಳಿಸುತ್ತಿದ್ದರು. ಸ್ವದೇಶಿ ಪ್ರಚಾರದ ಅಂಗವಾಗಿ ವಿದೇಶಿವಸ್ತುಗಳ ಬಹಿಷ್ಕಾರ ಕಾರ್ಯಕ್ರಮದಲ್ಲಿ ಪಿಕೆಟಿಂಗ್ ಆರಂಭದಲ್ಲಿ ಮುಧೋಳದಲ್ಲಿ ಜಿರುಸಾಗಿರಲಿಲ್ಲ. ಆದರೆ ಕಾಕಾ ಕಾರಖಾನೀಸರ ಅನುಯಾಯಿಗಳು ಜಾತ್ರೆ ಉತ್ಸವಗಳಲ್ಲಿ ಮಾರಾಟವಾಗುವ ವಿದೇಶಿ ವಸ್ತುಗಳ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಲು ನಿರ್ಧರಿಸಿದರು. ಮುಧೋಳದಿಂದ ಕೌಜಲಗಿ ಬಂಧುಗಳು ತಮ್ಮ ಅನುಯಾಯಿಗಳೊಂದಿಗೆ ಕಲ್ಲಳ್ಳಿಯ ವೆಂಕಟೇಶ್ವರ ಜಾತ್ರೆ ಹಾಗೂ ಬನಹಟ್ಟಿಯ ಜಾತ್ರೆಯಲ್ಲಿ ಪಿಕೆಟಿಂಗ್ ನಡೆಸಲು ವಿದ್ಯಾರ್ಥಿಗಳು ನೆರವಿಗೆ ಹೋದರು. ಅದರಿಂದ ವಿದೇಶಿವಸ್ತು ಬಹಿಷ್ಕಾರ ದೃಷ್ಟಿಯಿಂದ ವಿಶೇಷ ಪರಿಣಾಮವಾಗುತ್ತಿದ್ದಿತು."[೨೯]

"ಸಂತೆಯಲ್ಲಿ ಸೆರೆ ಅಂಗಡಿ ಮುಂದೆ ಪಿಕೆಟಿಂಗ್ ಮಾಡುವದು ವಿದೇಶಿ ಸಕ್ಕರಿಯನ್ನು ಬಹಿಷ್ಕರಿಸುವದು, ವಿದೇಶಿ ಬಳೆ ತೊಟ್ಟ ಮಹಿಳೆಯರಿಂದ ಆರತಿ ಮಾಡಿಸಿಕೊಳ್ಳಬಾರದೆಂದು ಕೌಜಲಗಿ ಹಣಮಂತರಾಯರು ನಮಗೆ ಹೇಳುತ್ತಿದ್ದರು ಎಂದು ತಮ್ಮ ಅನುಭವಗಳನ್ನು ರಾಮಾಚಾರ ಕಟ್ಟಿಯವರು ಸಂಯುಕ್ತ ಕರ್ನಾಟಕಕ್ಕೆ ದಿನಾಂಕ: ೨೧-೦೩-೧೯೯೧ರಂದು ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ."[೬೦]

೨. ಸ್ವದೇಶಿ ಕೈಗಾರಿಕೆಗಳ ಸ್ಥಾಪನೆ

ವಿದೇಶಿವಸ್ತುಗಳನ್ನು ಬಹಿಷ್ಕರಿಸುವುದರಿಂದ ಸ್ವದೇಶಿ ಚಳವಳಿ ಯಶಸ್ವಿಯಾಗುವದಿಲ್ಲ. ಭಾರತೀಯರು ವಿದೇಶಿ ವಸ್ತುಗಳನ್ನು ತಿರಸ್ಕರಿಸುವದರ ಜೊತೆಗೆ ಸ್ವದೇಶಿ ವಸ್ತುಗಳನ್ನು ಉತ್ಪಾದಿಸಿ ಅವುಗಳನ್ನು ಖರೀದಿಸುವಂತೆ ಪ್ರಚಾರ ಮಾಡಿದಾಗ ಮಾತ್ರ ಸ್ವದೇಶಿ ಚಳವಳಿ ಸಂಪೂರ್ಣವಾಗುವದು. ಅಲ್ಲದೆ ಇದರಿಂದ ಬ್ರಿಟಿಷರ ಕೈಗಾರಿಕೆಗಳಿಗೆ ಬಲವಾದ ಪೆಟ್ಟು ಬಿದ್ದು ಅವರ ಆರ್ಥಿಕ ಸ್ಥಿತಿಯು ಕುಸಿಯುವದು ಎಂದು ತಿಳಿದು ಸ್ವದೇಶಿ ಕೈಗಾರಿಕೆಗಳಿಗೆ ಉತ್ತೇಜಿಸಿ ಹಾಗೂ ಅವುಗಳು ಸಿದ್ಧಪಡಿಸಿದ ವಸ್ತುಗಳನ್ನು ಜನರು ಕೊಳ್ಳುವಂತೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರು.

ನೂಲುವ ಗಿರಣಿಗಳು ಸಾಬೂನು ತಯಾರಿಕಾ ಕೈಗಾರಿಕೆಗಳು ಬಂಗಾಲದಲ್ಲಿ ಆರಂಭಗೊಂಡವು. ಪಂಜಾಬ್‌ದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಭಾರತ ಇನ್ಸೂರನ್ಸ್ ಕಂಪನಿಗಳು ತಲೆ ಎತ್ತಿದವು. "ಕರ್ನಾಟಕ ಕೈಗಾರಿಕಾ ಸಮ್ಮೇಳನವು ಧಾರವಾಡದಲ್ಲಿ ೧೯೦೭ರಲ್ಲಿ ಸಭೆ ಸೇರಿ ಸ್ವದೇಶ ಕೈಗಾರಿಕೆಗಳನ್ನು ಸ್ಥಾಪಿಸುವ ಹಾಗೂ ಅವುಗಳಿಗೆ ಹಣಕಾಸು ಸಹಾಯ ಮಾಡಲು ಹೊಸ ಬ್ಯಾಂಕುಗಳನ್ನು ಸ್ಥಾಪಿಸುವ ನಿರ್ಣಯವನ್ನು ಕೈಗೊಂಡಿತು. ಕರ್ನಾಟಕದಾದ್ಯಂತ ಹಲವಾರು ಕಡೆ ಕೈಗಾರಿಕೆಗಳು ಸ್ಥಾಪನೆಗೊಂಡವು. ಬದಾಮಿಯಲ್ಲಿ ನೂಲುವ ಕೈಗಾರಿಕೆ ಇತ್ತು. ಇಲ್ಲಿ ನೇಯ್ದು ಬಟ್ಟೆಗಳನ್ನು ಬಂಗಾಳಕ್ಕೆ ರಫ್ತು ಮಾಡುತ್ತಿದ್ದರು."[೬೧]

ಸ್ವದೇಶಿ ಚಳವಳಿಯ ಬಗ್ಗೆ ಕರ್ನಾಟಕ ವೃತ್ತ ಪತ್ರಿಕೆ ತನ್ನ ೧೮-೦೮-೧೯೦೮ರ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ. "ಬಾಗಲಕೋಟಯಲ್ಲಿ ಸ್ವದೇಶಿ ಚಳವಳಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರವು ಬಹು ಜೋರಾಗಿ ನಡೆಯುತ್ತಿತ್ತು. ಅಗಷ್ಟ ೮ ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಜಯರಾವ್ ನರಗುಂದ, ಜೋರಾಪೂರ, ಯಲಗುರ್ದರಾವ್ ಧಾರವಾಡಕರ ಮುಂತಾದವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. "ಸ್ವದೇಶ ವ್ಯಾಪರೊತ್ತೇಜಕ ಸಂಸ್ಥೆ', 'ಸ್ವದೇಶ ಅಂಗಡಿ' ಹಾಗೂ 'ಸ್ವರಾಜ್ಯ ಸಂಸ್ಥೆಗಳನ್ನು' ಸ್ಥಾಪಿಸಲು ನಿರ್ಧರಿಸಲಾಯಿತು."[೬೨]

'ನನ್ನ ಜೀವನದ ಸ್ಮೃತಿಗಳು' ಎಂಬ ಗ್ರಂಥದಲ್ಲಿ ಆಲೂರು ವೆಂಕಟರಾಯರು ಸ್ವದೇಶಿ ಕೈಗಾರಿಕೆಯ ಏಳು ಬೀಳಿನ ಬಗ್ಗೆ ಉಲ್ಲೇಖಿಸಿದ್ದಾರೆ. "ಆಲೂರ ಹತ್ತಿರ ಮೆಣಸಗಿಯಲ್ಲಿ ಕಬ್ಬು ಬೆಳೆದು ಸಕ್ಕರೆ ಮಾಡುವ ಉದ್ದೇಶದಿಂದ ಬಾಗಲಕೋಟದಲ್ಲಿ ಜಯರಾವ ನರಗುಂದ, ಗೋವಿಂದರಾವ ಛಬ್ಬಿ ಮುಂತಾದವರು ಕೂಡಿಕೊಂಡು ೧೯೦೮ರ ಜುಲೈಯಲ್ಲಿ 'ಕೃಷಿಕರ್ಮೋತ್ತೇಜಕ ಮಂಡಳಿ' ಎಂಬ

ಕಂಪನಿಯನ್ನು ಆರಂಭಿಸಿದರು. ಕಂಪನಿ ಆರಂಭಕಿಂತ ಮುಂಚೆ ಹಣಕಾಸಿನ ಸಮಸ್ಯೆ ಎದುರಾದಾಗ ನಾನು (ಆಲೂರ ವೆಂಕಟರಾಯರು) ಧಾರವಾಡದ ಸದರ್ನಮರಾಠ ಬ್ಯಾಂಕಿನಲ್ಲಿ ೨೦೦೦ ರೂಪಾಯಿ ಸಾಲ ತೆಗೆದು ಜಯರಾವ್ ನರಗುಂದ ಅವರಿಗೆ ನೀಡಿದೆ. ಮುಂದೆ ಅ ಕಂಪನಿ ಮುಳಗಿದಾಗ ಸಾಲ ಮರುಪಾವತಿಸುವಂತೆ ಬ್ಯಾಂಕ್ ಒತ್ತಾಯಿಸಿತು. ಅದು ನನ್ನ ಮೇಲೆ ಬರಲಿಲ್ಲ ಜಯರಾವ ನರಗುಂದ ಸಾಲವನ್ನು ತೀರಿಸಿದರು."[೬೩] ಅಂದು ನಮ್ಮ ನಾಯಕರುಗಳ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾದರೂ ಕೂಡ ಬಂಡವಾಳ ಇರುತ್ತಿರಲಿಲ್ಲ. ಹೀಗಾಗಿ ಎಷ್ಟೊ ಕೈಗಾರಿಕೆಗಳು ಮುಚ್ಚಿದವು.

ವಿದೇಶಿ ವಸ್ತುಗಳ ಬಹಿಷ್ಕಾರ ಕೇವಲ ನಕಾರಾತ್ಮಕ ಚಟುವಟಿಕೆ, ಸ್ವದೇಶಿ ವಸ್ತುಗಳನ್ನು ಜನರಿಗೆ ಲಭ್ಯವಾಗುವಂತೆ ವಿದಾಯಕ ಕಾರ್ಯ ಮಾಡದಿದ್ದರೆ ವಿದೇಶಿ ವಸ್ತುಗಳ ಬಹಿಷ್ಕಾರ ಮಾಡುವದಕ್ಕೆ ಅರ್ಥವಿರುವದಿಲ್ಲವೆಂದು ತಿಳಿದ ಕೌಜಲಗಿ ಹಣಮಂತರಾಯರು ಮುಧೋಳದಲ್ಲಿ ಸ್ವದೇಶಿ ವಸ್ತುಗಳ ಉತ್ಪಾದನಾ ಕಾರ್ಯಕ್ಕೆ ಮುಂದಾದರು. ಶಿವಾಜಿ ಪ್ಲೇಯಿಂಗ್ ಕ್ಲಬ್‌ನ ಬಕ್ಷಿಯವರ ಜಾಗೆಯ ಹತ್ತಿರ ಒಂದು ಕೋಣೆಯಲ್ಲಿ ಸ್ವದೇಶಿ ಗುಂಡಿ, ಬ್ರಶ್, ಪಂಖಾ, ಲೆಕ್ಕಣಿಕೆ, ಸೀಸದ ಕಡ್ಡಿ ತಯಾರಿಕೆಗಾಗಿ ಬೇಕಾದ ಕಚ್ಚಾ ವಸ್ತುಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಿದರು.

"ತೆಂಗಿನ ಪರಟಿ, ಸಿಂಪಿ, ಗಲಗು ಶಿಂಧಿ ಪರಕಿ, ಸೀಸದ ಮುದ್ದೆ ಮುಂತಾದ ಕಚ್ಚಾ ಸಾಮಗ್ರಿಗಳನ್ನು ದೇವಾಲಯ, ನದಿ ದಂಡೆ ಮುಂತಾದ ಕಡೆಗಳಲ್ಲಿ ತೆರಳಿ ಸಂಗ್ರಹಿಸಿ ತಂದ ನಂತರ ಗಂಗಾಧರ ಪೆಂಟರನನಿಂದ ಬ್ರಶ್, ಗುಂಡಿ ತಯಾರಿಸುವ ಹಾಗೂ ಬಡಿಗತನವನ್ನು ಇತರ ವಿದ್ಯಾರ್ಥಿಗಳು ಕಲಿತರು. ಪರಟೆಗಳನ್ನು ಹಾಗೂ ಸಿಂಪಿಗಳನ್ನು ತಿಕ್ಕಿ ನುಣುಪುಮಾಡಿ ದೇಶಿಯ ಗುಂಡಿಗಳನ್ನು ತಯಾರಿಸತೊಡಗಿದರು. ಅದರೆ ಬ್ರಶ್ ತಯಾರಿಸಲು ಕುದುರೆಗಳ ಜವೆ ಅವಶ್ಯವಿದ್ದವು. ಅವುಗಳನ್ನು ಸಂಗ್ರಹಿಸಲು ವಿದ್ಯಾರ್ಥಿಗಳು ಪರದಾಡುತ್ತಿದ್ದರು. ಮೇಯಲು ಬಿಟ್ಟ ಕುದುರೆಗಳನ್ನು ಹಿಡಿಯಲು ಹೋದರೆ ಅವು ಓಡುತ್ತಿದ್ದವು. ಮನೆಯಲ್ಲಿ ಕಟ್ಟಿದ ಕುದುರೆಯ ಜವೆ ಕತ್ತರಿಸಲು ಹೋದರೆ ಕುದುರೆಯ ಒಡೆಯರಿಂದ ಅಪಮಾನಕ್ಕೆ ಈಡಾಗಬೇಕಾಗಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ರಶ್‌ಗಳನ್ನು ತಯಾರಿಸುವದು ಒಂದು ಸವಾಲಾದಾಗ ಕೌಜಲಗಿಯವರು ತಮ್ಮ ಮನೆಗೆ ಬರುತ್ತಿದ್ದ ಕುದುರೆಗಳ ಜವೆಯನ್ನು ಕತ್ತರಿಸಿ ಬ್ರಶ್ ತಯಾರಿಕೆಯನ್ನು ಆರಂಭಿಸಿದರು. ಈ ಬ್ರಶ್‌ಗಳು ಮಾರಾಟವಾದ ನಂತರ ಜನರಿಂದ ಚೆನ್ನಾಗಿವೆ ಎಂದು ಪ್ರಶಂಸೆಗೆ ಒಳಗಾದವು. ಕೆಲವು ವೇಳೆ ಜವೆ ಕತ್ತರಿಸುವಾಗ ಕುದುರೆಯ ಒದೆತವು ತಿಂದದ್ದು ಉಂಟು. ಶ್ರೀಪತಿರಾಯರ (ಹಣಮಂತರಾಯರ ತಂದೆ) ಸೋದರಳಿಯ ೧೫ ವರ್ಷದ ಬಾಲಕ ಕುದುರೆಯಿಂದ ಒದಿಸಿಕೊಂಡು ಆತನ ತಲೆಗೆ ಪೆಟ್ಟು ಬಿದ್ದು ರಕ್ತಸುರಿದ ಘಟನೆಯು ನಡೆಯಿತು."[೬೪] ಮುಧೋಳ ಬಾಲಕರು ತಮ್ಮ ಚಿಕ್ಕ ವಯಸ್ಸಿನಲ್ಲಿ ಸ್ವದೇಶಿ ವಸ್ತುಗಳನ್ನು ತಯಾರಿಸಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವಂತೆ ಪರಿಣಾಮಕಾರಿಯಾಗಿ ಮಾಡಿದರು.

ಮುಂಬೈ ಕರ್ನಾಟಕದಲ್ಲಿ ಸ್ವದೇಶಿ ಚಳವಳಿ ಭರದಿಂದ ಹಬ್ಬಿತ್ತು. ಕಿತ್ತೂರಿನಲ್ಲಿ ಸ್ವದೇಶಿ ಬಟ್ಟೆಗಳ ನೆಯ್ಗೆ ಕಾರ್ಖಾನೆಯನ್ನು ಹೆಬ್ಬಾಳದ ವಿಠ್ಠಲರಾವ್ ದೇಶಪಾಂಡೆಯವರು ಆರಂಭಿಸಿ ಸ್ವದೇಶಿ ಬಟ್ಟೆಗಳನ್ನು ಮುಂಬೈಗೂ ರವಾನಿಸಿದರು. ಗುಳೇದಗುಡ್ಡ, ಇಲಕಲ್ಲ ಖಣ ಮತ್ತು ಸೀರೆಗಳು ಮಹಾರಾಷ್ಟ್ರದ ವರ್ಹಾಡಗಳಲ್ಲಿ ಪ್ರಚಾರಗೊಂಡವು.

೩. ರಾಷ್ಟ್ರೀಯ ಶಿಕ್ಷಣ

ಸ್ವದೇಶಿ ತತ್ವದ ಪ್ರಕಾರ ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಬೇಕಿತ್ತು. ರಾಷ್ಟ್ರೀಯ ಶಿಕ್ಷಣದ ಯೋಜನೆಯನ್ನು ೧೮೯೮ರಲ್ಲಿ ಡಾನ್ ಪತ್ರಿಕೆಯ ಸಂಪಾದಕರಾಗಿದ್ದ ಸತೀಶಚಂದ್ರ ಮುಖರ್ಜಿ ರೂಪಿಸಿದ್ದರು. ಬ್ರಿಟಿಷ್ ಮಾದರಿಯ ವಿದ್ಯಾಭ್ಯಾಸ ರಾಷ್ಟ್ರ ವಿರೋಧಿ ಎಂದು ಭಾವಿಸಲಾಯಿತು. ಭಾರತದ ಪರಿಸ್ಥಿತಿಗಳ ಮತ್ತು ಸಂಸ್ಕೃತಿಯ ಯಾವುದೇ ಸಂಬಂಧವಿಲ್ಲದ ಅನ್ಯಜ್ಞಾನವನ್ನು ಗೊತ್ತುಗುರಿಯಿಲ್ಲದೆ ಬಾಯಿ ಪಾಠ ಮಾಡುವದಾಗಿತ್ತು. ಇಂಗ್ಲೀಷ್ ಮಾಧ್ಯಮವು ಕಲಿಕೆಯ ಆನಂದವನ್ನು ಕೊಂದಿತು. ಸ್ವತಂತ್ರ ಅಲೋಚನೆಯನ್ನು ನಿರುತ್ಸಾಹಗೊಳಿಸಿತು.

ಮೆಕಾಲೆಯ ಶಿಕ್ಷಣ ಪದ್ಧತಿಯಿಂದ ಭಾರತೀಯರು ರಾಷ್ಟ್ರೀಯತೆಯನ್ನು ಮರೆಯುತ್ತಿದ್ದಾರೆ, ಪುನಃ ಭಾರತಿಯರಲ್ಲಿ ದೇಶಾಭಿಮಾನ ತುಂಬಲು ರಾಷ್ಟ್ರಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ದರಿರುವ ದೇಶಭಕ್ತರನ್ನು ನಿರ್ಮಿಸಬೇಕಾದರೆ ರಾಷ್ಟ್ರೀಯ ಶಿಕ್ಷಣದ ಅವಶ್ಯಕತೆ ಅಂದು ಭಾರತೀಯರಿಗೆ ಬೇಕಾಗಿತ್ತು. "ಕಲ್ಕತ್ತಾ ವಿಶ್ವವಿದ್ಯಾಲಯವನ್ನು ಬಹಿಷ್ಕರಿಸಿ ಬಂದ ವಿದ್ಯಾರ್ಥಿಗಳು ನವ್ಹೆಂಬರ್ ೧೦, ೧೯೦೫ ರಂದು ನಡೆದ ಸಭೆಯಲ್ಲಿ ರಾಷ್ಟ್ರೀಯ ಶಿಕ್ಷಣ ಕೌನ್ಸಿಲ್ ಸ್ಥಾಪಿಸಿ ಅದರ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಾಹಿತ್ಯಿಕ ರಾಷ್ಟ್ರೀಯ ಶಿಕ್ಷಣ ನೀಡಲು ನಿರ್ಧರಿಸಿತು."[೬೫] "ಬಂಗಾಲದಲ್ಲಿ ೧೫-೦೮-೧೯೦೬ ರಂದು ರಾಷ್ಟ್ರೀಯ ಕಾಲೇಜು ಸ್ಥಾಪನೆಗೊಂಡಿತು. ಅರವಿಂದ ಘೋಷರು ಇದರ ಪ್ರಿನ್ಸಿಪಾಲರಾದರು. ಪ್ರೊ. ವಿಜಾಪೂರಕರ ಅವರು ಮಹಾರಾಷ್ಟ್ರದಲ್ಲಿ ಸಮರ್ಥ ವಿದ್ಯಾಲಯ ಆರಂಭಿಸಿದರು... ೦೩-೦೫-೧೯೦೮ರಲ್ಲಿ ಧಾರವಾಡದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಆರಂಭಗೊಂಡಿತು."[೬೬]

ಜಯರಾವ್ ನರಗುಂದ ಅವರು ರಾಷ್ಟ್ರೀಯ ನಾಯಕರಾದ ಬಾಲಗಂಗಾಧರ ತಿಲಕ್ ಮತ್ತು ಬಿಪಿನ್ ಚಂದ್ರಪಾಲರ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರೀಯ ಶಾಲೆಯನ್ನು ಬಾಗಲಕೋಟದಲ್ಲಿ ಆರಂಭಿಸಲು ನಿರ್ಧರಿಸಿ "ಲೋಕಮಾನ್ಯ ತಿಲಕರಲ್ಲಿ ರಾಷ್ಟ್ರೀಯ ಶಿಕ್ಷಣ ನೀಡುವ ಒಬ್ಬ ವ್ಯಕ್ತಿಯನ್ನು ಕಳುಹಿಸಿಕೊಡಲು ವಿನಂತಿಸಿಕೊಂಡಾಗ ತಿಲಕರು ರಾಮದಾಸ ಪಂತ ಅವರನ್ನು ನೇಮಿಸಿದರು. ೧೯೦೮ರಲ್ಲಿ ವಿಜಯದಶಮಿ ದಿನದಂದು ಶಾಲೆ ಆರಂಭಗೊಂಡಿತು."[೬೭]

"ಕರ್ನಾಟಕ ವೈಭವ ಪತ್ರಿಕೆ ತನ್ನ ೧೯-೦೯-೧೯೦೮ ದಿನಾಂಕದಂದು ಈ ಶಾಲೆಯ ಮಾಹಿತಿಯನ್ನು ದಾಖಲಿಸಿದೆ. ಮುಂದಿನ ದಸರೆಯಲ್ಲಿ ಬಾಗಲಕೋಟದಲ್ಲಿ ರಾಷ್ಟ್ರೀಯ ಶಾಲೆ

ಆರಂಭವಾಗುವದು. ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ವಿಷಯಗಳ ಬಗ್ಗೆ ತಿಳಿಸಲಾಗಿದ್ದು ಸಾರ್ವಜನಿಕರಿಂದ ವಂತಿಕೆ ಸಂಗ್ರಹಿಸುವ ಬಗ್ಗೆ ಉಲ್ಲೇಖಿಸಿದೆ. ಹನಮಂತ ವೆಂಕಟೇಶ ಸವಣೂರು, ಜಯರಾವ್ ಶ್ರೀನಿವಾಸ ನರಗುಂದ ಮತ್ತಿತರ ಪ್ರಮುಖರ ಹೆಸರುಗಳನ್ನು ಪ್ರಕಟಿಸಿದೆ."[೧೮] "ರಾಮದಾಸ್ ದರ್ಬಾರ ಶಾಲೆಯನ್ನು ಆರಂಭಿಸಲು ಕಟ್ಟಡ ಒದಗಿಸಿದರು. ಶಾಲೆಗೆ 'ಕೃಷ್ಣ ಪಾಠಶಾಲೆ' ಎಂದು ಹೆಸರಿಸಲಾಯಿತು."[೧೯]

"ಶಾಲೆಯ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಗೋಶಾಲಾದಲ್ಲಿ ನಡೆದ ಸಮಾರಂಭದಲ್ಲಿ ಐನೂರಕ್ಕಿಂತ ಹೆಚ್ಚು ಜನ ನೆರೆದಿದ್ದರು. ವೆಂಕಟದಾಸ ಅಧ್ಯಕ್ಷತೆ ವಹಿಸಿದ್ದರು. ಕೃಷ್ಣ, ಗೂರುಜಿ, ಶ್ರೀನಿವಾಸರಾವ ಕೌಜಲಗಿ ಮತ್ತು ವೆಂಕಟೇಶ ಕುಲಕರ್ಣಿಯವರು ರಾಷ್ಟ್ರೀಯ ಶಾಲೆಯ ಮಹತ್ವ ಕುರಿತು ಮಾತನಾಡಿದರು. ಶಾಲೆಯ ದ್ವಾರವನ್ನು ಸಭೆಯ ಅಧ್ಯಕ್ಷರು ಮತ್ತು ವಸತಿ ಗೃಹದ ವಿದ್ಯಾರ್ಥಿ ಘಟಬಸಪ್ಪ ಅಣ್ಣಾ ನಿಂದ ಉದ್ಘಾಟಿಸಲಾಯಿತು. ೧೨ಜನ ವಿದ್ಯಾರ್ಥಿಗಳು ಪ್ರವೇಶ ಪಡೆದರು."[೨೦]

"ಬದಾಮಿಯಲ್ಲಿ ಇಂಥದೆ ರಾಷ್ಟ್ರೀಯ ಶಾಲೆ ಇತ್ತು. ಬಾಗಲಕೋಟಯ ಶಾಲೆ ನಾಲ್ಕು ವರ್ಷಗಳ ಕಾಲ ನಡೆಯಿತು. ಸರಕಾರದ ತೀವ್ರ ಒತ್ತಡಕ್ಕೆ ಮಣಿದು ಮುಚ್ಚಿತು."[೨೧]

ಬಂಗಾಳ ವಿಭಜನೆಯಿಂದ ಸ್ವದೇಶಿ ಚಳವಳಿ ವ್ಯಾಪಕವಾಗಿ ಆರಂಭಗೊಂಡಿತು. ಸ್ವದೇಶಿ, ಬಹಿಷ್ಕಾರ. ರಾಷ್ಟ್ರೀಯ ಶಿಕ್ಷಣ, ಮದ್ಯಪಾನ ನಿಷೇಧ, ಈ ನಾಲ್ಕು ತತ್ವಗಳು ಸ್ವದೇಶಿ ಚಳವಳಿಯ ಆಧಾರಸ್ಥಂಭಗಳಾಗಿದ್ದವು. ಅಖಂಡ ವಿಜಾಪುರ ಜಿಲ್ಲೆಯಲ್ಲಿ ಸ್ವದೇಶಿ ಚಳವಳಿಯು ತೀವ್ರಗೊಳ್ಳಲು ತಿಲಕರು ಪ್ರಮುಖ ಪಾತ್ರ ವಹಿಸಿದ್ದರು. ಅವರ ಸಂಪರ್ಕ ಪಡೆದ ಜಿಲ್ಲೆಯ ಯುವಕರು ರಾಷ್ಟ್ರೀಯ ಶಾಲೆಗಳನ್ನು ಆರಂಭಿಸಿದರು. ಸ್ವದೇಶಿ ಕೈಗಾರಿಕೆ ಸ್ಥಾಪಿಸಿ, ವಿದೇಶಿ ಕೈಗಾರಿಕೆಗಳನ್ನು ಬಹಿಷ್ಕರಿಸಿದರು. ವಿಜಾಪೂರ ಜಿಲ್ಲೆಯ ಪುಣೆಗೆ ಹೆಚ್ಚು ಸಮೀಪವಿರುವದರಿಂದ ಅಲ್ಲಿ ರಾಜಕಾರಣವು ತೀವ್ರವಾಗಿ ಸ್ವದೇಶಿ ಚಳವಳಿಯ ಸಂದರ್ಭದಲ್ಲಿ ಬೆಳೆಯಿತು.

ಅಡಿ ಟಿಪ್ಪಣಿಗಳು

೧. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೮೦೨.

೨. ಮಲ್ಲಿಕಾರ್ಜುನ ಬಂಡಿ, ಐಹೊಳೆ, ಚಾಲುಕ್ಯ ಉತ್ಸವ ಸ್ಮರಣ ಸಂಚಿಕೆ, ೨೦೧೧, ಪುಟ ಸಂಖ್ಯೆ ೩೧.

೩. ಸಂದರ್ಶನ, ವಾಮನಮೂರ್ತಿ ಕುಲಕರ್ಣಿ, ಬಾಗಲಕೋಟ, ೧೨-೫-೨೦೧೨.

೪. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್,

ಬೆಂಗಳೂರು, ೧೯೯೯, ಪುಟ ಸಂಖ್ಯೆ ೮೮೧.

೫. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ.೧೨೬೫.

೬. ಅದೇ, ಪುಟ ಸಂಖ್ಯೆ. ೧೨೬೫.

೭. ಅದೇ, ಪುಟ ಸಂಖ್ಯೆ. ೧೨೬೫

೮. ಅದೇ, ಪುಟ ಸಂಖ್ಯೆ. ೧೨೭೫.

೯. ಮುನಿಸ್ವಾಮಿ(ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೮೪೮.

೧೦. ಅದೇ, ಪುಟ ಸಂಖ್ಯೆ. ೮೫೧.

೧೧. ಸಂದರ್ಶನ, ಗುರುರಾಜ ಹಬ್ಬು , ಕಲ್ಲಳ್ಳಿ, ತಾ. ಜಮಖಂಡಿ, ೮-೩-೨೦೧೪.

೧೨. ಮುನಿಸ್ವಾಮಿ(ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೮೮೭.

೧೩. ಅದೇ, ಪುಟ ಸಂಖ್ಯೆ. ೮೮೮.

೧೪. ಅದೇ, ಪುಟ ಸಂಖ್ಯೆ. ೮೯೧.

೧೫. ಅದೇ, ಪುಟ ಸಂಖ್ಯೆ. ೯೮೨.

೧೬. ಸೂರ್ಯನಾಥ ಕಾಮತ(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ. ೧೨೫೮-೫೯.

೧೭. ಅದೇ, ಪುಟ ಸಂಖ್ಯೆ. ೧೨೬೦.

೧೮. ಸತ್ಯನ ಬಿ.ಎನ್., ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೬ ಪುಟ ಸಂಖ್ಯೆ. ೪೨೨.

೧೯. ಹಣಮಂತ ತಾಸಗಾಂವಕರ, ಜೋರಾಪೂರ ಗುರುರಾಯರು, ವಿಪ್ರ ಕಲ್ಯಾಣ ಟ್ರಸ್ಟ್, ವಿಜಾಪೂರ, ೨೦೦೦, ಪುಟ ಸಂಖ್ಯೆ ೧೫.

೨೦. ಸೂರ್ಯನಾಥ ಕಾಮತ, ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧.

೨೧. ಅದೇ, ಪುಟ ಸಂಖ್ಯೆ. ೧೨.

೨೨. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ. ೧೨೪೭.

೨೩. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ ೧೦-೦೮-೨೦೧೩.

೨೪. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೭೮.

೨೫. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ ೧೦-೦೮-೨೦೧೩.

೨೬. ಸೂರ್ಯನಾಥ ಕಾಮತ(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ. ೧೨೬೨.

೨೭. ಅದೇ, ಪುಟ ಸಂಖ್ಯೆ. ೧೧೮೬.

೨೮. ಅದೇ, ಪುಟ ಸಂಖ್ಯೆ. ೧೧೮೫.

೨೯. ಅದೇ, ಪುಟ ಸಂಖ್ಯೆ. ೧೨೬೪

೩೦. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ೧೫-೨-೧೯೩೧, ಪುಟ ಸಂಖ್ಯೆ. ೮.

೩೧. ಜಯವಂತ ಕಾಡದೇವರ, ಕಲಕಂಬ ಮಾಸ್ತರರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೪, ಪುಟ ಸಂಖ್ಯೆ. ೪, ೫.

೩೨. ಅದೇ, ಪುಟ ಸಂಖ್ಯೆ ೭.

೩೩. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ. ೫೮೫.

೩೪. ಬಿರಾದಾರ ಜಿ.ಎ., ಮುಂಬೈ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ೨೦೧೦, ಪುಟ ಸಂಖ್ಯೆ ೨.

೩೫. ಅದೇ, ಪುಟ ಸಂಖ್ಯೆ ೨.

೩೬. ಅದೇ, ಪುಟ ಸಂಖ್ಯೆ ೨.

೩೭. ಆಲೂರು ವೆಂಕಟರಾಯರು, ನನ್ನ ಜೀವನದ ಸ್ಮೃತಿಗಳು. ಮನೋಹರ ಗ್ರಂಥಮಾಲೆ, ಧಾರವಾಡ, ೧೯೭೪, ಪುಟ ಸಂಖ್ಯೆ ೧೧೫.

೩೮. ಅದೇ, ಪುಟ ಸಂಖ್ಯೆ ೧೧೫.

೩೯. ಅದೇ, ಪುಟ ಸಂಖ್ಯೆ ೧೧೬,

೪೦. ಅದೇ, ಪುಟ ಸಂಖ್ಯೆ ೧೧೭,

೪೧. ಅದೇ, ಪುಟ ಸಂಖ್ಯೆ ೧೧೮,

೪೨. ಅದೇ, ಪುಟ ಸಂಖ್ಯೆ ೧೧೮,

೪೩. ಅದೇ, ಪುಟ ಸಂಖ್ಯೆ ೧೨೬,

೪೪. ಸತ್ಯನ ಬಿ.ಎನ್., ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೬ ಪುಟ ಸಂಖ್ಯೆ. ೮೮.

೪೫. ಹಾಲಪ್ಪ. ಜಿ.ಎಸ್. ಹಿಸ್ಟರಿ ಆಫ್ ಫ್ರೀಡಂ ಮೊವ್‌ಮೆಂಟ ಇನ್ ಕರ್ನಾಟಕ, ಸಂಪುಟ ೨, ಗೌರ್ನಮೆಂಟ್ ಆಫ್ ಮೈಸೂರು, ೧೯೬೪, ಪುಟ ಸಂಖ್ಯೆ ೮೭, ೮೮.

೪೬. ದಾತಾರ ಹನಮಂತರಾವ್, ಲೋಕಮಾನ್ಯ ತಿಲಕರು ಹಾಗೂ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ., ಕರ್ನಾಟಕ ತಿಲಕ್ ಟ್ರಸ್ಟ ಫಂಡ್, ಬೆಂಗಳೂರು, ೧೯೯೦, ಪುಟ ಸಂಖ್ಯೆ ೭.

೪೭. ಚಂದ್ರಿಕಾ, ಮಾಸಪತ್ರಿಕೆ, ಬಾಗಲಕೋಟ, ೧೨-೦೮-೧೯೦೮.

೪೮. ಕರ್ನಾಟಕ ವೃತ್ತಿ, ವಾರಪತ್ರಿಕೆ, ಧಾರವಾಡ, ದಿನಾಂಕ ೧೮-೦೮-೧೯೦೮.

೪೯. ಕರ್ನಾಟಕ ಕೇಸರಿ, ವಾರಪತ್ರಿಕೆ, ಧಾರವಾಡ, ದಿನಾಂಕ ೧೧-೦೯-೧೯೦೮.

೫೦. ಬಿಪಿನ್ ಚಂದ್ರ, ಫ್ರೀಡಂ ಸ್ಟ್ರಗಲ್, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನ್ಯೂ ದೆಹಲಿ, ೧೯೭೨ ಪುಟ ಸಂಖ್ಯೆ. ೯೬.

೫೧. ಶಂಕರ ನಾರಾಯಣರಾವ್ ಎನ್.ಪಿ. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦ ಪುಟ ಸಂಖ್ಯೆ ೧೪೧.

೫೨. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ. ೧೨೬೪.

೫೩. ಶ್ರೇಷ್ಠ ಪತ್ರಿಕೋದ್ಯಮಿ ಮೊಹರೆ ಹನುಮಂತರಾಯರು, ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ ,೧೯೯೮ ಪುಟ ಸಂಖ್ಯೆ ೫೦.

೫೪. ರಂಗನಾಥ ದಿವಾಕರ, ಕರ್ಮಯೋಗಿ ಕೌಜಲಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯರ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೮೮ ಪುಟ ಸಂಖ್ಯೆ ೨೩.

೫೫. ಅದೇ, ಪುಟ ಸಂಖ್ಯೆ ೨೪.

೫೬. ಅದೇ, ಪುಟ ಸಂಖ್ಯೆ ೨೫.

೫೭. ಸಂದರ್ಶನ, ಹಣಮಂತ ತಾಸಗಾಂವಕರ, ಬಾಗಲಕೋಟ, ದಿನಾಂಕ: ೨೩-೧೦-೨೦೧೩

೫೮. ಸಂಯುಕ್ತ ಕರ್ನಾಟಕ, ಕೌಜಲಗಿ ಹಣಮಂತರಾಯರ ವಿಶೇಷ ಪುರವಣಿ ರಾಮಾಚಾರ್ಯ ಕಟ್ಟಿಯವರ ಸಂದರ್ಶನ, ದಿ: ೨೧-೦೩-೧೯೯೧.ಪ, ಪುಟ ಸಂಖ್ಯೆ ,೪.

೫೯. ರಂಗನಾಥ ದಿವಾಕರ, ಕರ್ಮಯೋಗಿ ಕೌಜಲಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯರ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೮೮ ಪುಟ ಸಂಖ್ಯೆ ೨೬.

೬೦. ಸಂಯುಕ್ತ ಕರ್ನಾಟಕ, ಕೌಜಲಗಿ ಹಣಮಂತರಾಯರ ವಿಶೇಷ ಪುರವಣಿ ರಾಮಾಚಾರ್ಯ ಕಟ್ಟಿಯವರ ಸಂದರ್ಶನ, ದಿನಾಂಕ ೨೧-೦೩-೧೯೯೧.ಪ, ಪುಟ ಸಂಖ್ಯೆ ೪.

೬೧. ಹಾಲಪ್ಪ. ಜಿ.ಎಸ್.ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ ಇನ್ ಕರ್ನಾಟಕ, ಸಂಪುಟ ೨, ಗೌರ್ನಮೆಂಟ್ ಆಫ್ ಮೈಸೂರು, ಬೆಂಗಳೂರು, ೧೯೬೪, ಪುಟ ಸಂಖ್ಯೆ ೮೮.

೬೨. ಕರ್ನಾಟಕ ವೃತ್ತಿ, ವಾರಪತ್ರಿಕೆ, ಧಾರವಾಡ, ದಿನಾಂಕ ೧೮-೦೮-೧೯೦೮.

೬೩. ಆಲೂರು ವೆಂಕಟರಾಯರು, ನನ್ನ ಜೀವನದ ಸ್ಮೃತಿಗಳು, ಮನೋಹರ ಗ್ರಂಥಮಾಲೆ, ಧಾರವಾಡ,೧೯೭೪, ಪುಟ ಸಂಖ್ಯೆ ೧೩೫.

೬೪. ರಂಗನಾಥ ದಿವಾಕರ, ಕರ್ಮಯೋಗಿ ಕೌಜಲಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯರ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೮೮ ಪುಟ ಸಂಖ್ಯೆ ೨೮.

೬೫. ಮುಜುಮದಾರ ಆರ್.ಸಿ., ಸ್ಟ್ರಗಲ್ ಫಾರ್ ಫ್ರೀಡಂ, ಭಾರತೀಯ ವಿದ್ಯಾಭವನ, ಬಾಂಬೆ, ೧೯೬೯, ಪುಟ ಸಂಖ್ಯೆ. ೪೪.

೬೬. ಆಲೂರು ವೆಂಕಟರಾಯರು, ನನ್ನ ಜೀವನದ ಸ್ಮೃತಿಗಳು, ಮನೋಹರ ಗ್ರಂಥಮಾಲೆ, ಧಾರವಾಡ, ೧೯೭೪, ಪುಟ ಸಂಖ್ಯೆ ೧೨೨.

೬೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ. ೧೨೬೪.

೬೮. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ, ದಿನಾಂಕ ೧೯-೦೯-೧೯೦೮ .

೬೯. ಮುನಿಸ್ವಾಮಿ(ಸಂ). ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೭೮.

೨೦. ಕರ್ನಾಟಕ ವೃತ್ತಿ, ವಾರಪತ್ರಿಕೆ, ಧಾರವಾಡ, ದಿನಾಂಕ ೧೦-೧೦-೧೯೦೮.

೨೧. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೨೮.

ಅಧ್ಯಾಯ ೫

ಹೋಂ ರೂಲ್ ಮತ್ತು ಅಸಹಕಾರ ಚಳವಳಿ

ಅಧ್ಯಾಯ ೫

ಹೋಂ ರೂಲ್ ಚಳವಳಿ ಮತ್ತು ಅಸಹಕಾರ ಚಳವಳಿ

೫.೧ಹೋಂರೂಲ್ ಚಳವಳಿ

೧೯೧೪ರಲ್ಲಿ ತಿಲಕರು ಆರು ವರ್ಷ ಶಿಕ್ಷೆಯನ್ನು ಅನುಭವಿಸಿ ಹೊರಬಂದರು. ಇದರಿಂದ ತೀವ್ರವಾದಿಗಳು ತಿಲಕರ ಅನುಯಾಯಿಗಳು ಉತ್ಸಾಹಗೊಂಡರು. ಕಾಂಗ್ರೆಸ್‌ನಲ್ಲಿಯ ಒಡಕು ಮುಸ್ಲಿಂ ಲೀಗಿನ ಸ್ಥಾಪನೆ ಅಭಿಪ್ರಾಯ ಎಲ್ಲರಲ್ಲೂ ಮೂಡಿತ್ತು. ೧೯೧೬ರಲ್ಲಿ ಸೌಮ್ಯವಾದಿ ಮತ್ತು ಉಗ್ರವಾದಿ ಈ ಎರಡು ಪಕ್ಷದವರಲ್ಲಿ ಹೊಂದಾಣಿಕೆ ಉಂಟಾಯಿತು.

೧೯೧೭ರ ಡಿಸೆಂಬರ್‌ನಲ್ಲಿ ಲಖನೌದಲ್ಲಿ ನಡೆದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ತಿಲಕರಿಗೆ ಅಪೂರ್ವ ಸ್ವಾಗತ ದೊರೆಯಿತು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಅಂಬಿಕಾ ಚರಣ ಮುಜುಮದಾರ ಪರಸ್ಪರರಲ್ಲಿ "ತಪ್ಪು ಅಭಿಪ್ರಾಯಗಳಿಂದ ವಾದ ವಿವಾದಗಳು ನಡೆದು, ಸುಮಾರು ಹತ್ತು ವರುಷಗಳವರೆಗೆ ಪರಸ್ಪರ ದೂರ ಉಳಿದಿದ್ದು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಈ ಎರಡು ಗುಂಪುಗಳು ಇಂದು ಒಂದಾಗಿವೆ" ಎಂದು ಭಾಷಣ ಮಾಡಿದರು. ತಿಲಕರು ಲಖನೌದಲ್ಲಿ ನಾವು ನಮ್ಮ ಭಾಗ್ಯವನ್ನು ಪಡೆದಿದ್ದೇವೆ 'We have Found Luck in Luck now' ಎಂದು ಹಾಸ್ಯ ಪೂರ್ಣವಾಗಿ ಮಾತನಾಡಿದರು."[೧]

ಲೋಕಮಾನ್ಯ ತಿಲಕರು ರಾಷ್ಟ್ರೀಯವಾದಿಗಳ ನಾಯಕತ್ವ ವಹಿಸಿ ಭಾರತದ ಸಂಕಷ್ಟಗಳನ್ನು ಒಂದೊಂದಾಗಿ ಬ್ರಿಟಿಷ ಸರಕಾರದ ಮುಂದಿಟ್ಟು ಭಾರತೀಯರಿಗೆ ಸ್ವತಂತ್ರ ಸರಕಾರ ಬೇಕೆಂದು ವಾದಿಸಿದರು.

"ಭಾರತದಲ್ಲಿ ಥಿಯೊಸೋಫಿಕಲ್ ಸೊಸೈಟಿಯವರಾದ ಐರಿಷ್ ಮಹಿಳೆ ಅನಿಬೆಸೆಂಟ್ ರಾಷ್ಟ್ರೀಯ ರಾಜಕೀಯದಲ್ಲಿ ತೀವ್ರ ಆಸಕ್ತಿ ವಹಿಸತೊಡಗಿದರು. ಇಂಗ್ಲೆಂಡಿನಲ್ಲಿ ಭಾರತದ ಆಶೋತ್ತರಗಳನ್ನು ಕುರಿತು ಬಿರುಸಾದ ಪ್ರಚಾರ ಮಾಡಿದರು. ಆಗ ಐರ್ಲೆಂಡ್ ಬ್ರಿಟನ್ನಿನ ಹಿಡಿತದಲ್ಲಿದ್ದು ಅಲ್ಲಿಯ ಜನರು ತಮ್ಮ ಆಡಳಿತವನ್ನು ತಾವೇ ನೋಡಿಕೊಳ್ಳುವ ಹಕ್ಕನ್ನು ಸಾಧಿಸಲು ಹೋಂ ರೂಲ್ ಆಂದೋಲನ ನಡೆಸುತ್ತಿದ್ದರು. ಅದರ ಪ್ರಭಾವದಿಂದ ಬೆಸೆಂಟ್‌ರು ಭಾರತದಲ್ಲಿಯೂ ಹೋಂ ರೂಲ್ ಚಳವಳಿ ಆರಂಭಿಸಲು ಇಚ್ಛಿಸಿ ಅದನ್ನು ೧೯೧೫ರಲ್ಲಿ ಘೋಷಿಸಿದರು."[೨]

"೧೯೧೭ರ ಕಲ್ಕತ್ತಾ ಕಾಂಗ್ರೆಸ ಅಧಿವೇಶನದಲ್ಲಿ ಅಧ್ಯಕ್ಷರಾದ ಅನಿಬೆಸೆಂಟರು ಹೋಂ ರೂಲ್ ಬೇಡಿಕೆಯನ್ನು ಪುರಸ್ಕರಿಸಿ ಹೀಗೆ ಮಾತನಾಡಿದರು, ಇಂದು ಎರಡು ಕಾರಣಗಳಿಂದ ಭಾರತಕ್ಕೆ ಹೋಂ

ರೂಲ್ ಅವಶ್ಯಕವಿದೆ. ಸ್ವಾತಂತ್ರ್ಯಗಳಿಸುವದು ಮೊದಲ ಮಹತ್ವದ ಕಾರಣ. ಬ್ರಿಟಿಷರು ತಮ್ಮ ಸಾಮ್ರಾಜ್ಯದ ಹಿತಕ್ಕಾಗಿ ಭಾರತೀಯರ ಹಿತಾಸಕ್ತಿಗಳನ್ನು ಅಲಕ್ಷಿಸುತ್ತಿದ್ದಾರೆ. ಭಾರತದ ಸಕಲ ಸಂಪತ್ತನ್ನು ಭಾರತೀಯರಿಗಾಗಿ ವಿನಿಯೋಗಿಸದೇ ತಮ್ಮ ಲಾಭಕ್ಕಾಗಿ ಬಳಸುತ್ತಿದ್ದಾರೆ. ಭಾರತದ ಅಪಾರ ಹಣ ಬ್ರಿಟಿಷರ ಸೈನ್ಯ ವ್ಯವಸ್ಥೆಗಾಗಿ ಖರ್ಚಾಗುತ್ತಿದೆ. ಆದರೆ ಪ್ರಾಥಮಿಕ ಶಿಕ್ಷಣಕ್ಕಾಗಿ ಆಗುತ್ತಿರುವ ವೆಚ್ಚ ತೀರ ಅಲ್ಪವಾಗಿದೆ. ಕೇವಲ ಕೆಲವು ಸವಲತ್ತುಗಳನ್ನು ಪಡೆದುಕೊಳ್ಳಲು ಭಾರತವು ಬ್ರಿಟಿಷರ ಮುಂದೆ ತಲೆಬಾಗಲಾರದು. ತನ್ನ ಹಕ್ಕನ್ನು ಪಡೆಯಲು ಅದು ಸಿದ್ಧವಾಗಿದೆ. ಇದು ಎರಡನೆ ಕಾರಣ."[೩]

೧೯೧೬ರಲ್ಲಿ ಎರಡು ಹೋಂ ರೂಲ್ ಲೀಗಗಳು ಅಸ್ತಿತ್ವಕ್ಕೆ ಬಂದವು. ಮೊದಲನೆಯದು ಪೂನಾದಲ್ಲಿ ಕೇಂದ್ರವಾಗಿದ್ದ ತಿಲಕರ ನೇತೃತ್ವದ್ದು, ಅದು ಮಹಾರಾಷ್ಟ್ರ ಉತ್ತರ ಕರ್ನಾಟಕದಲ್ಲಿ ಸಾವಿರಾರು ಸದಸ್ಯರನ್ನು ಕೂಡಿಸಿದ್ದ ಸಂಘಟನೆಯಾಗಿತ್ತು. ಇನ್ನೊಂದು ಅನಿಬೆಸೆಂಟರ ನೇತೃತ್ವದಲ್ಲಿ ಮದ್ರಾಸದಲ್ಲಿ ಆರಂಭಗೊಂಡಿತ್ತು. ಕರ್ನಾಟಕದಲ್ಲಿ ಹೋಂ ರೂಲ್ ಲೀಗ್ ೧೯೧೬ರ ಮೇ ತಿಂಗಳಿನಲ್ಲಿ ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಆರಂಭಗೊಂಡಿತು.

"ಲೋಕಮಾನ್ಯ ತಿಲಕರ ಕಟ್ಟಾನುಯಾಯಿಗಳಾದ ಶ್ರೀನಿವಾಸರಾವ ಕೌಜಲಗಿಯವರು ೧೯೧೮ ರಲ್ಲಿ ವಿಜಾಪೂರದಲ್ಲಿ ಹೋಂ ರೂಲ್ ಲೀಗಿನ ಶಾಖೆಯನ್ನು ಸ್ಥಾಪಿಸಿದರು. ಅದರ ಉದ್ದೇಶ ಭಾರತಕ್ಕೆ ಸ್ವಯಂ ಸರಕಾರವನ್ನು ಬ್ರಿಟಿಷ್ ಸಾಮ್ರಾಜ್ಯದೊಳಗಿನ ವಸಾಹತು ಮಾದರಿಯಲ್ಲಿ ಸ್ಥಾಪಿಸುವದಾಗಿತ್ತು. ೫೦ ಸದಸ್ಯರಿರುವ ವಿಜಾಪೂರ ಹೋಂ ರೂಲ್ ಲೀಗಿಗೆ ಶ್ರೀನಿವಾಸ ಕೌಜಲಗಿಯವರು ಅಧ್ಯಕ್ಷರಾದರೆ ದಾಜಿ ರಾಮಚಂದ್ರ ಲಿಮಯ ಅವರು ಕಾರ್ಯದರ್ಶಿಗಳಾದರು."[೪]

ಲೋಕಮಾನ್ಯ ತಿಲಕರು ೧೯೧೮ರಲ್ಲಿ ಇಂಗ್ಲೆಂಡಿಗೆ ಹೋಗುವದು ಗೊತ್ತಾಗಿತ್ತು. ಸಿಂಹಳಕ್ಕೆ ಹೋಗುವಾಗ ದಾರಿಯಲ್ಲಿ ಅವರ ಜೊತೆ ಜೆ.ಎಸ್. ಖಾಪರ್ಡೆ, ಬಿಪಿನ್ ಚಂದ್ರಪಾಲ್, ದಾದಾ ಸಾಹೇಬ ಕರಂಡಿಕರ ವಿಜಾಪೂರಕ್ಕೆ ಅಗಮಿಸಿದರು. ಶ್ರೀನಿವಾಸ ಕೌಜಲಗಿಯವರು ಲೋಕಮಾನ್ಯ ತಿಲಕರ ಆಗಮನ ನಿಮಿತ್ತ ಸಾರ್ವಜನಿಕ ಸಭೆ ಏರ್ಪಡಿಸಿದರು. ವಿಜಾಪೂರಕ್ಕೆ ಆಗಮಿಸಿದ ನಾಯಕರುಗಳು ಅಂದಿನ ದೇಶದ ಪರಿಸ್ಥಿತಿ ಬ್ರಿಟಿಷರ ಭ್ರಷ್ಟ ಆಡಳಿತ ಕುರಿತು ಮಾತನಾಡಿದರು. ಈ ಕುರಿತು ಮುದವೀಡು ಕೃಷ್ಣರಾಯರು ಮುಂದಿನಂತೆ ದಾಖಲಿಸಿದ್ದಾರೆ. "ಲೋಕಮಾನ್ಯ ತಿಲಕರು ೧೯೧೮ರಲ್ಲಿ ಇಂಗ್ಲೆಂಡಿಗೆ ಕೊಲಂಬೊ ಮಾರ್ಗವಾಗಿ ಹೊರಟಾಗ ವಿಜಾಪೂರಕ್ಕೆ ಬಂದು ೨೨ ಗಂಟೆಯವರೆಗೆ ಅಲ್ಲಿ ತಂಗಿ ಕರ್ನಾಟಕದ ಆತಿಥ್ಯವನ್ನು ಸ್ವೀಕರಿಸಿ ಮುಂದೆ ಸಾಗಬೇಕೆಂದು ಹಟದಿಂದ ಅವರನ್ನು ತಮ್ಮಲ್ಲಿ ಬರಮಾಡಿಕೊಂಡರು. ಉತ್ತರ ಕರ್ನಾಟಕದ ಬಾವಿ ನೀರನ್ನು ತಮ್ಮಲ್ಲಿ ಕಲೆ ಹಾಕಿ ಲೋಕಮಾನ್ಯರ ಪ್ರವಾಸ ನಿಧಿಗೆ ಕರ್ನಾಟಕದ ಪರವಾಗಿ ಹತ್ತು ಸಾವಿರ ರೂಪಾಯಿಗಳನ್ನು ಸಮರ್ಪಿಸಿ ಬೀಳ್ಕೊಟ್ಟರು."[೫]

“ಮುದ್ದೇಬಿಹಾಳದಲ್ಲಿ ಜುಲೈ ೧, ೧೯೧೮ರಂದು ಹೋಂ ರೂಲ್ ಲೀಗ್ ಗ್ರಂಥಾಲಯ ಆರಂಭಗೊಂಡಿತು. ಮುದ್ದೇಬಿಹಾಳದ ವಕೀಲರಾದ ವೆಂಕಟೇಶ ಜೋಶಿಯವರು ಅದರ ಕಾರ್ಯದರ್ಶಿಗಳಾದರು. ಮುದ್ದೇಬಿಹಾಳದ ವಕೀಲರು ಗ್ರಂಥಾಲಯದ ಸದಸ್ಯರಾಗಿದ್ದರು. ರಾಷ್ಟ್ರೀಯ ಪತ್ರಿಕೆಗಳಾದ ಯಂಗ್ ಇಂಡಿಯಾ, ನ್ಯೂ ಇಂಡಿಯಾ, ಕೇಸರಿಗಳನ್ನು ತರಿಸುತ್ತಿರುವದರಿಂದ ರಾಷ್ಟ್ರೀಯ ಚಳವಳಿಗೆ ಸ್ಫೂರ್ತಿ ಉಂಟಾಯಿತು.”[೬]

ಮುಂಬಯಿ ಪ್ರಾಂತಿಕ ರಾಜಕೀಯ ಪರಿಷತ್ತು ೧೯೧೮

ರಾಷ್ಟ್ರೀಯ ಚಳವಳಿಗೆ ಜನರನ್ನು ಸಂಘಟಿಸಲು ಆಗಾಗ ರಾಜಕೀಯ ಸಭೆಗಳು, ಅಧಿವೇಶನಗಳು ನಡೆಯುತ್ತಿದ್ದವು. ಅದರಂತೆ “೧೯೧೬ರಲ್ಲಿ ೧೬ನೆಯ ಮುಂಬಯಿ ಪ್ರಾಂತಿಯ ರಾಜಕೀಯ ಪರಿಷತ್ತು ಬೆಳಗಾವಿಯಲ್ಲಿ ಜರುಗಿತು. ಮಹಾತ್ಮಗಾಂಧಿ, ಲೋಕಮಾನ್ಯ ತಿಲಕ, ದಾದಾಸಾಹೇಬ್ ಕರಂಡಿಕರ ಮುಂತಾದವರು ಭಾಗವಹಿಸಿದ್ದರು. ಸ್ವರಾಜ್ಯ ಮತ್ತು ಸ್ವದೇಶಿ ವಸ್ತುಗಳ ಉಪಯೋಗ ಕುರಿತು ಗೊತ್ತುವಳಿಯನ್ನು ಸಭೆಯು ಅಂಗೀಕರಿಸಿತು.”[೭]

೧೯೧೮ರ ಮೇ ೫ ರಿಂದ ೮ರ ವರೆಗೆ ಮುಂಬಯಿ ಪ್ರಾಂತಿಕ ರಾಜಕೀಯ ಪರಿಷತ್ತು ಬ್ಯಾರಿಷ್ಟರ್ ವಿಠ್ಠಲ್‌ಬಾಯಿ ಪಟೇಲರ ಅಧ್ಯಕ್ಷತೆಯಲ್ಲಿ ವಿಜಾಪೂರದಲ್ಲಿ ಜರುಗಿತು. ಕೌಜಲಗಿ ಶ್ರೀನಿವಾಸರಾಯರು ಇದರ ಸ್ವಾಗತಾಧ್ಯಕ್ಷರಾಗಿದ್ದರು. ಈ ಸಭೆಗೆ ಮಹಾತ್ಮಗಾಂಧಿ, ಸರೋಜಿನಿ ನಾಯ್ಡು, ಅವರ ಪುತ್ರಿ ಪದ್ಮಜಾ ನಾಯ್ಡು, ಲೋಕಮಾನ್ಯ ತಿಲಕ, ನರಸಿಂಹ ಚಿಂತಾಮಣಿ ಕೇಳ್ಕರ್, ರಾಜಗೋಪಾಲಾಚಾರಿ ಮುಂತಾದವರು ಭಾಗವಹಿಸಿದ್ದರು. “ಗಾಂಧೀಜಿಯವರನ್ನು ಈ ಸಮ್ಮೇಳನದಲ್ಲಿ ಅಸ್ಪೃಶ್ಯತಾ ನಿವಾರಣಾ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದರು. ಅವರು ಆ ಸಮ್ಮೇಳನಕ್ಕೆ ಬಂದವರೇ ‘ಈ ಸಭೆಯಲ್ಲಿ ಯಾರಾದರೂ ಅಸ್ಪೃಶ್ಯರಿದ್ದಾರೆಯೇ ? ಎಂದು ಕೇಳಿದರು. ಯಾರು ಇಲ್ಲ ಎಂಬ ಉತ್ತರ ದೊರೆತ ಕೂಡಲೇ ‘ಈ ಸಮ್ಮೇಳನದಿಂದ ಏನೂ ಪ್ರಯೋಜನವಿಲ್ಲ’ ಎಂದು ಹೇಳಿ ಹೊರಟರು. ಸಮ್ಮೇಳನ ಪ್ರವರ್ತಕರು ಮದ್ಯಾಹ್ನ ಮತ್ತೆ ಸಭೆ ಕೂಡಿಸಿ ಊರೊಳಗಿನ ಅಂತ್ಯಜರನ್ನು ಕರೆತಂದು ಕೂಡಿಸಿದ ನಂತರ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿಕೊಂಡರು.”[೮]

“ಮುಂಬಯಿ ರಾಜಕೀಯ ಪರಿಷತ್‌ನಲ್ಲಿ ಭಾರತೀಯರಿಗಾಗಿ ಸೈನಿಕ ಮಹಾವಿದ್ಯಾಲಯ ಸ್ಥಾಪನೆ, ಉನ್ನತ ಸೈನಿಕ ಹುದ್ದೆಗಳಲ್ಲಿ ಭಾರತೀಯರ ನೇಮಕ, ಆಯುಧ ಕಾಯ್ದೆ ಮತ್ತು ಪತ್ರಿಕಾ ಕಾಯ್ದೆಗಳನ್ನು ರದ್ದುಪಡಿಸುವಂತೆ ಠರಾವುಗಳನ್ನು ಪಾಸು ಮಾಡಲಾಯಿತು. ೧೯೧೮ರಲ್ಲಿಯೇ ವಿಜಾಪೂರದಲ್ಲಿ ಕೆ. ನಟರಾಜ ಅವರ ಅಧ್ಯಕ್ಷತೆಯಲ್ಲಿ ಮುಂಬಯಿ ಪ್ರಾಂತಿಯ ಸಾಮಾಜಿಕ ಪರಿಷತ್ತು ನಡೆಯಿತು. ದೇಶ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅದರಲ್ಲಿ ಚರ್ಚಿಸಲಾಯಿತು.”[೯]

೫.೨ ಅಸಹಕಾರ ಚಳವಳಿ

ಗಾಂಧೀಜಿಯವರು ಸತ್ಯ ಅಹಿಂಸೆ ತತ್ವಗಳ ಆಧಾರದ ಮೇಲೆ ಭಾರತದಲ್ಲಿ ದೊಡ್ಡ ಪ್ರಮಾಣದ ಹೋರಾಟವನ್ನು ಅಸಹಕಾರ ಚಳವಳಿ ಆರಂಭಿಸುವ ಮೂಲಕ ಯಶಸ್ಸನ್ನು ಕಂಡರು. ಗಾಂಧೀಜಿಯವರೆ ಹೇಳಿದಂತೆ ಅಸಹಕಾರವೆಂದರೆ ಬ್ರಿಟಿಷರಿಗೆ ನಮ್ಮ ತಾಯಿನಾಡನ್ನು ಬಿಡಲು ಸಹಕರಿಸುವಂತೆ ಆಮಂತ್ರಿಸುವದು.

ಮೊದಲನೆಯ ಜಾಗತಿಕ ಯುದ್ಧದಲ್ಲಿ ಬ್ರಿಟಿಷರು ವಿಜಯಿಯಾದ ನಂತರ ಕೆಲವು ಸಂದರ್ಭಗಳು ಅಸಹಕಾರ ಚಳವಳಿಯನ್ನು ಪ್ರಾರಂಭಿಸುವಂತೆ ಪ್ರೇರೇಪಿಸಿದವು. ಅದರಲ್ಲಿ ಈಗಾಗಲೇ ಭಾರತೀಯ ರಕ್ಷಣಾ ಕಾಯ್ದೆಯ ಅವಧಿ ಮುಗಿದಿದ್ದರಿಂದ ಅದಕ್ಕಿಂತ ಪ್ರಬಲವಾದ ರೌಲತ್ ಕಾಯ್ದೆಯನ್ನು ೧೯೧೯ರ ಮಾರ್ಚ್ ತಿಂಗಳಿನಲ್ಲಿ ಜಾರಿಗೆ ತಂದರು. ಈ ಕಾಯ್ದೆಯ ಪ್ರಕಾರ ಬ್ರಿಟಿಷರು ಭಾರತೀಯರ ಮೇಲೆ ಕಠಿಣ ಕಾನೂನುಗಳನ್ನು ಹೇರಿದರು. 'ಯಾವುದೇ ವ್ಯಕ್ತಿಯ ಮೇಲೆ ಸಂದೇಹ ಬಂದರೆ ಆತನನ್ನು ವಿಚಾರಣೆಗೆ ಒಳಪಡಿಸದೆ ಅನಿರ್ಧಿಷ್ಟಾವಧಿಯವರೆಗೆ ಬಂಧಿಸಿ ಇಡಬಹುದಾಗಿತ್ತು. ಸಭೆ ಸಮಾರಂಭಗಳನ್ನು ನಡೆಸುವುದನ್ನು ಹಾಗೂ ಮೂರಕ್ಕಿಂತ ಅಧಿಕ ಜನ ಗುಂಪಾಗಿ ಅಲೆಯುವುದನ್ನು ನಿಷೇಧಿಸಿತು.

ಈ ಕಾಯ್ದೆಯನ್ನು ವಿರೋಧಿಸಲು "೧೯೧೯ರ ಏಪ್ರಿಲ್ ೧೩ರಂದು ಪಂಜಾಬದ ಅಮೃತಸರದ ಜಲಿಯನ್ ವಾಲಾಬಾಗ್‌ದಲ್ಲಿ ಒಂದು ನಿರಾಯುಧ ಜನಸ್ತೋಮ ತಮ್ಮ ಜನಪ್ರಿಯ ನಾಯಕರಾದ ಡಾ. ಸೈಪುದ್ಧೀನ್ ಕಿಚಲೂ ಮತ್ತು ಡಾ. ಸತ್ಯಪಾಲ್ ಅವರ ಬಂಧನ ಪ್ರತಿಭಟಿಸಲು ಸಭೆ ಸೇರಿದ್ದರು. ಅಮೃತಸರದ ಸೈನ್ಯಾಧಿಕಾರಿ ಜನರಲ್ ಡೈಯರ್ ಅಮೃತಸರದ ಜನರನ್ನು ಸಂಪೂರ್ಣವಾಗಿ ದಮನ ಮಾಡಿ ರೊಚ್ಚಿಗೆಬ್ಬಿಸಲು ನಿರ್ಧರಿಸಿದ್ದ. ಜಲಿಯನ್‌ವಾಲಾಬಾಗ ಮೂರು ಕಡೆ ಕಟ್ಟಡಗಳಿಂದ ಸುತ್ತುವರಿದಿತ್ತು, ಒಂದೇ ಒಂದು ಪ್ರವೇಶ ಮತ್ತು ನಿರ್ಗಮನ ದ್ವಾರವಿದ್ದು ವಿಶಾಲವಾದ ತೆರೆದ ಉದ್ಯಾನದ ಬಯಲಾಗಿತ್ತು. ಡೈಯರ್ ದ್ವಾರವನ್ನು ಮುಚ್ಚಿಸಿ ಒಳಗೆ ಬಂಧಿಗಳಾಗಿ ಉಳಿದ ಜನ ಸಮೂಹದ ಮೇಲೆ ಬಂದೂಕು ಮತ್ತು ಪಿರಂಗಿ ಹೊಡೆದು ಸುಡುವಂತೆ ತನ್ನ ಸೈನಿಕರಿಗೆ ಆದೇಶಿಸಿದ. ತಮ್ಮಲ್ಲಿದ್ದ ಗುಂಡುಗಳು ಮುಗಿಯುವವರೆಗೂ ಸೈನಿಕರು ಗುಂಡು ಹಾರಿಸಿದರು. ಸಾವಿರಾರು ಜನರು ಮರಣ ಹೊಂದಿದರು ಮತ್ತು ಗಾಯಗೊಂಡರು".[೧೦] ಜಲಿಯನ್ ವಾಲಾಬಾಗ ಘಟನೆಯನ್ನು ಭಾರತೀಯರು ತೀವ್ರವಾಗಿ ಖಂಡಿಸಿದರು.

"ಈ ಘಟನೆಯ ವಿಚಾರಣೆಗೆಂದು ಬ್ರಿಟಿಷ್ ಸರಕಾರ ಲಾರ್ಡ್ ಹಂಟರನ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಿತು. ಕ್ರಾಂಗೆಸ್ ಈ ಸಮಿತಿಯನ್ನು ಬಹಿಷ್ಕರಿಸಿತು. ಹಂಟರ ಸಮಿತಿಯು ಡೈಯರನಿಗೆ ಕ್ಷಮಾದಾನ ನೀಡಿತು. ಜನರಿಗೆ ಆಗ ಗಾಯದ ಮೇಲೆ ಬರೆ ಎಳೆದಂತಾಯಿತು."[೧೧]

"ಹಂಟರ ವರದಿ ಹೊರಬರುವದಕ್ಕೆ ಎರಡುವಾರ ಮೊದಲೇ ತುರ್ಕಿ ಸಾಮ್ರಾಜ್ಯವನ್ನು ಹರಿದು ಹಂಚಿದ ಸೆವ್ರವಸ್ ಒಪ್ಪಂದ ಹೊರಬಿತ್ತು. ಅದರ ಪ್ರಕಾರ ತುರ್ಕಿಗೆ ಸೇರಿದ ಎಲ್ಲ ಪ್ರದೇಶಗಳು ಗ್ರೀಸ್ ಮತ್ತು ಬಲ್ಗೇರಿಯಾ ದೇಶಗಳಿಗೆ ನೀಡಲ್ಪಟ್ಟವು. ಟರ್ಕಿ ಸುಲ್ತಾನ ನಾಮಮಾತ್ರ ಸುಲ್ತಾನನಾದ, ಭಾರತದ ಮುಸಲ್ಮಾನರು ಇಸ್ಲಾಂಮಿನ ಅತ್ಯುಚ್ಚ ಮತಾಧಿಕಾರಿ ಸ್ಥಾನದ ಪ್ರತಿಷ್ಠೆ ಕುಗ್ಗಿದ್ದರಿಂದ ಹಾಗೂ ಮುಸಲ್ಮಾನರ ಪವಿತ್ರ ಕ್ಷೇತ್ರಗಳು ಮುಸ್ಲಿಂ ಹತೋಟಿ ತಪ್ಪಿದ್ದರಿಂದ ಬ್ರಿಟಿಷರ ವಿರುದ್ಧ ಅಸಮಾಧಾನಗೊಂಡರು."[೧೨] ಎಲ್ಲ ಮುಸ್ಲಿಂ ರಾಷ್ಟ್ರಗಳು ಇದೇ ಕಾರಣಕ್ಕೆ ಬ್ರಿಟಿಷರ ವಿರುದ್ಧ ಖಿಲಾಫತ್ ಚಳವಳಿ ಪ್ರಾರಂಭಿಸಿದರು. ಇವರ ಜೊತೆ ಭಾರತೀಯರೂ ಸೇರಿಕೊಂಡರು.

ನವ್ಹೆಂಬರ್ ೧೯೧೯ರಲ್ಲಿ ಮಹಾತ್ಮರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಖಿಲಾಫತ್ ಸಮ್ಮೇಳನ ನಡೆಯಿತು. ಈ ಸಮಾವೇಶದಲ್ಲಿ ಮಹಾತ್ಮರು ಖಿಲಾಫತ್ ಸಮಸ್ಯೆಯನ್ನು ಮುಸ್ಲಿಂರಿಗೆ ತೃಪ್ತಿಯಾಗುವ ಹಾಗೆ ಬಗೆಹರಿಸಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಂಡರು. ಸಮಸ್ಯೆಯನ್ನು ಬಗೆಹರಿಸದಿದ್ದರೆ ಬಹಿಷ್ಕಾರ ಹಾಗೂ ಅಸಹಕಾರಗಳನ್ನು ಕೈಗೆತ್ತಿಕೊಳ್ಳುವದಾಗಿ ಬೆದರಿಕೆ ಹಾಕಿದರೂ ಸಹಿತ ಬ್ರಿಟಿಷ ಸರಕಾರ ತನ್ನ ನಿಲುವನ್ನು ಬದಲಾಯಿಸಿಕೊಳ್ಳಲಿಲ್ಲ. ಇದರಿಂದ ಮಹಾತ್ಮರು ಖಿಲಾಫತ್ ಚಳವಳಿಗಾರರಿಗೆ, ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಕೈಗೆತ್ತಿಕೊಳ್ಳುವಂತೆ ಕರೆ ನೀಡಿದರು. ೧೯೨೦ರ ಜನವರಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಮುಖಂಡರು ಬ್ರಿಟಿಷ ಪ್ರಧಾನಿ ಲಾರ್ಡ ಜಾರ್ಜರನ್ನು ಭೇಟಿ ಮಾಡಿ ಖಿಲಾಫತ್ ವಿಷಯ ಪ್ರಸ್ತಾಪಿಸಿದಾಗ ಅವರಿಂದ ಬಂದ ಪ್ರತಿಕೂಲ ಉತ್ತರದಿಂದ ಭಾರತೀಯರು ನಿರಾಶರಾದರು.

೧. ಕಲ್ಕತ್ತಾ ಕಾಂಗ್ರೆಸ್ ವಿಶೇಷ ಅಧಿವೇಶನ

"೧೯೨೦ರ ಸಪ್ಟೆಂಬರನಲ್ಲಿ ಕಲ್ಕತ್ತೆಯಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನ ಜರುಗಿತು. ಇಲ್ಲಿ ಮೋತಿಲಾಲ್ ನೆಹರು, ಲಜಪತರಾಯ್‌ರಂತಹ ಹಳೆಯ ಮುಖಂಡರು ಗಾಂಧೀಜಿಯವರ ಚಳವಳಿ ಮಾರ್ಗವನ್ನು ಬೆಂಬಲಿಸಿದರು. ಮಹ್ಮದ್‌ಅಲಿ ಜಿನ್ನಾ, ಸಿ.ಆರ್.ದಾಸ್ ಮುಂತಾದವರು ಅಸಹಕಾರ ಚಳವಳಿಯನ್ನು ವಿರೋಧಿಸಿದರು. ಈ ಅಧಿವೇಶನದಲ್ಲಿ ಚಳವಳಿ ನಿರ್ಧಾರದ ಪರವಾಗಿ ೧೮೮೮ ಮಂದಿ, ವಿರೋಧವಾಗಿ ೧೩೨ ಮಂದಿ ಮತ ನೀಡಿದರು."[೧೩]

ಅಸಹಕಾರ ಚಳವಳಿಯ ಪ್ರಮುಖ ಅಂಶಗಳನ್ನು ಅಧಿವೇಶನದಲ್ಲಿ ಚರ್ಚಿಸಿ ನಿರ್ಧರಿಸಲಾಯಿತು.

- ಬ್ರಿಟಿಷ ಸರಕಾರ ನೀಡಿದ ಬಿರುದು ಬಾವಲಿಗಳನ್ನು ತ್ಯಜಿಸುವದು.
- ಸ್ಥಳೀಯ ಸರಕಾರಗಳಲ್ಲಿ ನಾಮನಿರ್ದೇಶನಗೊಂಡವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು.

- ಸರಕಾರ ನಡೆಸುವ ಕಾರ್ಯಕ್ರಮಗಳಿಗೆ ಹಾಜರಾಗಬಾರದು.
- ಸರಕಾರಿ ಅಥವಾ ಸರಕಾರದ ಅನುದಾನ ಪಡೆಯುತ್ತಿರುವ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸುವದು, ಶಾಲೆ ಬಿಟ್ಟ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಶಾಲೆಗಳನ್ನು ಆರಂಭಿಸುವದು.
- ಸರಕಾರಿ ಕೋರ್ಟ್ ಕಛೇರಿಗಳನ್ನು ಬಹಿಷ್ಕರಿಸುವದು.
- ಚುನಾವಣೆಯನ್ನು ಬಹಿಷ್ಕರಿಸುವುದು.
- ವಿದೇಶಿ ವಸ್ತ್ರಗಳನ್ನು ಬಹಿಷ್ಕರಿಸುವುದು.

೨. ನಾಗಪೂರ ಕಾಂಗ್ರೆಸ ಅಧಿವೇಶನ

"ಕಾಂಗ್ರೆಸ ವಾರ್ಷಿಕ ಅಧಿವೇಶನವು ಡಿಸೆಂಬರ್ ತಿಂಗಳು ೧೯೨೦ರಂದು ನಾಗಪುರದಲ್ಲಿ ಜರುಗಿತು. ವಿಜಯ ರಾಘವೇಂದ್ರಚಾರಿ ಅಧ್ಯಕ್ಷತೆ ವಹಿಸಿದ್ದರು. ಹದಿನಾಲ್ಕು ಸಾವಿರ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಈ ಅಧಿವೇಶನವು ಅಸಹಕಾರ ಚಳವಳಿಯನ್ನು ಒಪ್ಪಿಕೊಂಡಿತು."[೧೪] ಅಲ್ಲದೆ ಕರ್ನಾಟಕಕ್ಕೆ ಪ್ರತ್ಯೇಕವಾದ ಪ್ರಾಂತೀಯ ಕಾಂಗ್ರೆಸ ನೀಡಲು ನಿರ್ಧರಿಸಿದ್ದರಿಂದ ಗದಗ ಪ್ರದೇಶ ಕಾಂಗ್ರೆಸ್ ಸಮಿತಿಯ ಕೇಂದ್ರವಾಯಿತು.

೫.೨.೧ ಅಸಹಕಾರ ಚಳವಳಿಯ ಪ್ರಚಾರ

"ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಕಮಿಟಿ ಗದಗದಲ್ಲಿ ಸ್ಥಾಪನೆಗೊಂಡಿತು. ಗಂಗಾಧರರಾವ್ ದೇಶಪಾಂಡೆಯವರು ಅದರ ಅಧ್ಯಕ್ಷರಾದರು. ಮಧ್ವರಾವ ಕೆಂಬಾವಿ, ವೆಂಕಟರಾವ್ ತಿಳಿಗೂಳ ಮತ್ತು ಜಯರಾವ್ ದೇಶಪಾಂಡೆಯವರು ಕಾರ್ಯದರ್ಶಿಗಳಾದರು. ಕರ್ನಾಟಕ ಕಾಂಗ್ರೆಸ್ ಜನತೆಗೆ ಅಸಹಕಾರ ಚಳವಳಿಯ ಸಂದೇಶ ತಲುಪಿಸುವ ಕಾರ್ಯಕ್ಕೆ ಮುಂದಾಯಿತು."[೧೫]

೧. ಪತ್ರಿಕೆಗಳು

ಗಾಂಧೀಜಿಯವರ ಸಂದೇಶಗಳನ್ನು ಜನರಿಗೆ ತಲುಪಿಸಲು ಪತ್ರಿಕೆಗಳು ಆರಂಭವಾದವು. ಬೆಳಗಾವಿಯಿಂದ ಕರ್ಮವೀರವು ಮಧ್ವರಾವ್ ಕಬ್ಬೂರ ಅವರಿಂದ ಪ್ರಾರಂಭಗೊಂಡಿತು. ವಿಜಾಪೂರದಿಂದ ಕರ್ನಾಟಕ ವೈಭವ ಹೊರಡುತ್ತಿತ್ತು. ಬಾಗಲಕೋಟೆಯಿಂದ ನವಜೀವನ ಮತ್ತು ನವಭಾರತ ಪತ್ರಿಕೆಗಳು ಶ್ರೀನಿವಾಸ ಮಂಗಳವೇಡೆ ಮತ್ತು ಯಲಗುರ್ದರಾವ್ ಧಾರವಾಡಕರ ಅವರಿಂದ ಪ್ರಾರಂಭಗೊಂಡವು. ಗಾಂಧೀಜಿಯವರ ಗುಜರಾತಿ ಪತ್ರಿಕೆ ನವಜೀವನದ ಕನ್ನಡದಲ್ಲಿ ಅನುವಾದ ಮಾಡಿ ಗಾಂಧೀಜಿಯವರ ಸಂದೇಶಗಳನ್ನು ಈ ಪತ್ರಿಕೆಗಳು ಸಾರುತ್ತಿದ್ದವು.

ಬ್ರಿಟಿಷರು ನಡೆಸುವ ನ್ಯಾಯ ವಿಚಾರಣೆಯಲ್ಲಿ ಭಾಗವಹಿಸಿದರೆ ಕೇವಲ ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ ಹೇಳಿಕೆ ನೀಡಬೇಕು ಮತ್ತು ಎಂಥ ಶಿಕ್ಷೆಯನ್ನಾದರೂ ನಗುಮೊಗದಿಂದ ಎದುರಿಸಬೇಕೆಂದು ಗಾಂಧೀಜಿ ತಿಳಿಸಿದ್ದರು. ಈ ಮಾತನ್ನು ಮೊಹರೆ ಹನಮಂತರಾಯರು ಅಕ್ಷರಶಃ ಪಾಲಿಸಿದರು. ಕರ್ನಾಟಕ ವೈಭವ ಪತ್ರಿಕೆಯಲ್ಲಿ 'ಕರ್ನಾಟಕದ ವೀರರೇ' ಎಂಬ ಲೇಖನವನ್ನು ಬರೆದಿದ್ದಕ್ಕಾಗಿ ಕಲೆಕ್ಟರ್ ಹೆಂಡರ್ಸ್ ಇವನ ಮೇಲೆ ರಾಜದ್ರೋಹ ಅಪಾದನೆ ಮೇಲೆ ಇಂಡಿಯನ್ ಪಿನಲ್ ಕೋಡ್ ೧೨೪(ಎ) ಕಲಂ ಅನ್ವಯ ಖಟ್ಲೆ ದಾಖಲಿಸಿದರು. ಆಗ ಹನುಮಂತರಾಯರು ಕೋರ್ಟ್‌ಗೆ ಈ ರೀತಿ ಕೈಫಿಯತ್ ಸಲ್ಲಿಸಿದರು –

೧. ಯಾವ ಲೇಖನಕ್ಕಾಗಿ ನನ್ನ ಮೇಲೆ ಖಟ್ಲೆ ಹಾಕಲಾಗಿದೆಯೋ ಆ ಲೇಖನವನ್ನು ನಾನೇ ಬರೆದು ಕರ್ನಾಟಕ ವೈಭವದಲ್ಲಿ ಮುದ್ರಿಸಿ ಪ್ರಕಟಿಸಿರುತ್ತೇನೆ.

೨. ಪ್ರಚಲಿತ ರಾಜ್ಯ ಪದ್ಧತಿ ನಿರ್ಜೀವವೂ ಬಾದರಾಯಣವೂ ಇರುವುದರಿಂದ ಈಗಿನ ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ಅಶೋತ್ತರ ಪೂರೈಸಲು ಯೋಗ್ಯವಾಗಿರುವುದಿಲ್ಲ. ಅದುದರಿಂದ ಇಂಥ ರಾಜ್ಯ ಪದ್ಧತಿಯೊಡನೆ ನಾನು ಅಸಹಕಾರ ಮಾಡುವುದಲ್ಲದೆ ಜನತೆಗೂ ಆ ರೀತಿ ಮಾಡುವಂತೆ ಹೇಳುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಹೀಗೆ ಮಾಡುವಾಗ ಪ್ರಚಲಿತ ರಾಜ್ಯ ಪದ್ಧತಿ ಸುಧಾರಿಸಬೇಕೆಂಬ ಉದ್ದೇಶದಿಂದ ಅದರ ಮೇಲೆ ನನ್ನ ಟೀಕಾಸ್ತ್ರ ಹೂಡುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ತರುಣರಿಗೆ ರಾಷ್ಟ್ರ ಸೇವಕರಾಗಲಿಕ್ಕೆ ಹೇಳುವಾಗ ಈಗಿನ ಸರಕಾರದ ನಿಜ ಸ್ವರೂಪವನ್ನು ಬಯಲಿಗೆಳೆದುದಕ್ಕೆ ನನಗೆ ಅಭಿಮಾನವೆನಿಸುತ್ತದೆ.

೩. ನನ್ನ ತಿಳುವಳಿಕೆಯ ಪ್ರಕಾರ ಈ ಅಕ್ಷೇಪಿಸಲ್ಪಟ್ಟಿರುವ ಲೇಖನವು ಇಂಡಿಯನ್ ಪಿನಲ್ ಕೋಡಿನ ೧೨೪ನೆಯ ಕಲಮಿನ ಪ್ರಕಾರ ರಾಜದ್ರೋಹಾತ್ಮಕವಾಗಲಾರದು. ಬೇರೆ ಬೇರೆ ಹೈಕೋರ್ಟಿನ ನಿರ್ಣಯಗಳು ಈ ನನ್ನ ತಿಳುವಳಿಕೆಯನ್ನು ದೃಢೀಕರಿಸುತ್ತವೆ. ಅದರೂ ಈ ೧೨೪ನೆಯ ಕಲಂವನ್ನು ನೌಕರಶಾಹಿಯವರು ಅನೇಕ ಸಲ ತಮಗೆ ಅನಕೂಲವಾಗುವಂತೆ ಜಗ್ಗಿ ಜಗ್ಗಿ ಅರ್ಥ ಮಾಡಿ ದುರುಪಯೋಗ ಮಾಡಿಕೊಂಡ ಉದಾಹರಣೆಗಳು ನನ್ನ ಕಣ್ಮುಂದೆ ಇರುವದರಿಂದ, ಹೇಳುವ ನಿರರ್ಥಕ ಗೋಜಿಗೆ ಹೋಗುವುದಿಲ್ಲ.

೪. ಈ ಖಟ್ಲೆಯಲ್ಲೂ ಸರಕಾರದ ಪರವಾಗಿ ನನ್ನ ಲೇಖನದ ತಪ್ಪು ಭಾಷಾಂತರ ಹಾಜರು ಮಾಡುವುದಲ್ಲದೆ ನನ್ನ ಹಿಂದಿನ ಸಂಪಾದಕರಿಗಾದ ಎಚ್ಚರಿಕೆ ಜಾಮೀನು ಮತ್ತು ಶಿಕ್ಷೆಯ ನಿರ್ಣಯಗಳನ್ನು ಮಂಡಿಸಿದ್ದಾರೆ. ನನ್ನ ಮೇಲಿರುವ ಖಟ್ಲೆಯಲ್ಲಿ ಇವುಗಳ ಯಾವ ಸಂಬಂಧವು ಇರುವುದಿಲ್ಲ.

೫. ನನ್ನ ಮಾತೃಭೂಮಿಯ ಉದ್ಧಾರ ಅಹಿಂಸಾತ್ಮಕ ಅಸಹಯೋಗದಿಂದಲೂ ನೌಕರ ಶಾಹಿಯಿಂದ ನಮಗಾಗುವ ಆತ್ಮಕ್ಲೇಶ ಅಗುವುದೆಂದು ನನಗೆ ಪೂರ್ಣ ವಿಶ್ವಾಸವಿರುವುದರಿಂದ ನನಗೆ ಈ ನ್ಯಾಯಾಲಯ ನೀಡುವ ಶಿಕ್ಷಯನ್ನು ಅನುಭವಿಸಲಿಕ್ಕೆ ಸಿದ್ಧನಿದ್ದೇನೆ. ಈ ನ್ಯಾಯಾಲಯದ ನಿರ್ಣಯ ಏನೇ ಆಗಲಿ ನನ್ನ ಮಾತೃಭೂಮಿಯ ಸಲುವಾಗಿ ಬೇಕಾದಂತಹ ಕ್ಲೇಶಗಳನ್ನು ಸಹಿಸುವ ಸಾಮರ್ಥ್ಯವನ್ನು ಪರಮಾತ್ಮನು ನನಗೆ ಕರುಣಿಸಲೆಂದು ಪಾರ್ಥಿಸುತ್ತೇನೆ. ನ್ಯಾಯಾಧೀಶರ ವಿಷಯದಲ್ಲಿ ಪ್ರೇಮ ಭಾವನೆಯೇ ಹೊರತು ಇನ್ನಾವುದು ಇರುವುದಿಲ್ಲ.[೧೬]

೨. ಬಾಗಲಕೋಟ ಮತ್ತು ವಿಜಾಪುರಕ್ಕೆ ಗಾಂಧೀಜಿಯವರ ಪ್ರವಾಸ

ಅಸಹಕಾರ ಹಾಗೂ ಖಿಲಾಪತ ಚಳವಳಿಯ ಆಂದೋಲನವನ್ನು ಪ್ರಚಾರಗೊಳಿಸಲು ಗಾಂಧೀಜಿಯವರು ವಿಜಾಪೂರ ಮತ್ತು ಬಾಗಲಕೋಟಗೆ ಭೇಟಿ ನೀಡಿದರು.

"೨೭ ಮೇ ೧೯೨೧ರಂದು ಗಾಂಧೀಜಿಯವರು ಬಾಗಲಕೋಟಗೆ ಮೌಲಾನ ಶೌಕತ್ ಅಲಿ ಹಾಗೂ ಗಂಗಾಧರರಾವ್ ದೇಶಪಾಂಡೆಯವರ ಜೊತೆ ಭೇಟಿ ನೀಡಿದರು. ರೈಲ್ವೆ ಸ್ಟೇಶನ್ ಹತ್ತಿರ ರಾಷ್ಟ್ರೀಯ ಶಾಲೆಯ ವರಾಂಡದಲ್ಲಿ ಸಭೆಯ ಏರ್ಪಾಡಾಗಿತ್ತು. ಹತ್ತು ಸಾವಿರ ಜನರು ಸೇರಿದ್ದರು. ಗಾಂಧೀಜಿಯವರು ಅಸಹಕಾರದ ತತ್ವಗಳಾದ ಶಾಲಾ ಕಾಲೇಜುಗಳ ಬಹಿಷ್ಕಾರ, ವಿದೇಶಿ ವಸ್ತುಗಳ ಬಹಿಷ್ಕಾರ ಮುಂತಾದ ವಿಷಯಗಳ ಕುರಿತು ಮಾತನಾಡಿದರು."[೧೭]

"ಬಾಗಲಕೋಟದಲ್ಲಿ ರಾಷ್ಟ್ರೀಯ ಧ್ವಜವನ್ನು ಖಾದಿಯ ಬದಲಾಗಿ ಕಾಗದದಲ್ಲಿ ಮಾಡಿದ್ದನ್ನು ಕಂಡು ಗಾಂಧೀಜಿಯವರು 'ಎಲ್ಲಿಯವರೆಗೆ ನಿಮ್ಮ ಧ್ವಜ ಕಾಗದದ್ದೇ ಇರುವದೋ ಅಲ್ಲಿಯವರೆಗೆ ನಮ್ಮ ಸ್ವರಾಜ್ಯ ಕಾಗದದಲ್ಲಿಯೇ ಇರುತ್ತದೆ ಎಂದು ಟೀಕಿಸಿದರು."[೧೮]

"ತಿಲಕ ಸ್ವರಾಜ್ಯ ಫಂಡಗೆ ಬಾಗಲಕೋಟದಲ್ಲಿ ೧,೦೦೦ ರೂಪಾಯಿ ಕೂಡಿಸಿ ಗಾಂಧೀಜಿಯವರಿಗೆ ಧನಸಹಾಯ ನೀಡಿದರು. ಬಾಗಲಕೋಟಯಿಂದ ವಿಜಾಪೂರಕ್ಕೆ ಗಾಂಧೀಜಿಯವರು ಮೋಟಾರ ಕಾರಿನಲ್ಲಿ ಹೋದರು. ದಾರಿಯುದ್ದಕ್ಕೂ ಜನರು ಗಂಧ ಆರತಿ ಹಿಡಿದುಕೊಂಡು ನಿಂತಿದ್ದರು."[೧೯]

"ಮೇ ೨೮, ೧೯೨೧ರಂದು ಸಾಯಂಕಾಲ ವಿಜಾಪೂರಕ್ಕೆ ಗಾಂಧೀಯವರು ಬಂದಾಗ ಶ್ರೀನಿವಾಸರಾವ ಕೌಜಲಗಿಯವರು ತಮ್ಮ ಸಹಪಾಠಿಗಳ ನೆರವಿನೊಂದಿಗೆ ಎಲ್ಲ ವ್ಯವಸ್ಥೆಯನ್ನು ಮಾಡಿದರು. ತಾಸಬಾವಡಿ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸುಮಾರು ಹನ್ನೆರಡು ಸಾವಿರ ಜನರು ಮಹಾತ್ಮರ ಭಾಷಣ ಕೇಳಲು ನೆರೆದಿದ್ದರು. ಪೌರಸಭೆ ಹಾಗೂ ವರ್ತಕ ಸಂಘದ ಪರವಾಗಿ ಭಿನ್ನವತ್ತಳೆಗಳನ್ನು ಗಾಂಧಿಯವರಿಗೆ ಅರ್ಪಿಸಲಾಯಿತು. ವಿಜಾಪೂರ ಜಿಲ್ಲೆಯಲ್ಲಿ ಬ್ರಾಹ್ಮಣ –

ಬ್ರಾಹ್ಮಣೇತರ ನಡುವೆ ಭಿನ್ನಾಭಿಪ್ರಾಯ ಇರುವದು ಗಾಂಧೀಯವರಿಗೆ ಮನವರಿಕೆ ಆಯಿತು. ಏಕೆಂದರೆ ಗುಂಡಪ್ಪ ಶಾಬಾದಿಯವರು ಮಹಾತ್ಮರ ಅಪ್ಪಣೆ ಪಡೆದು ಬ್ರಾಹ್ಮಣರನ್ನು ಕಟುವಾಗಿ ಟೀಕಿಸಿದರು. ತದನಂತರ ಮಹಾತ್ಮ ಗಾಂಧಿ ಶ್ರೀನಿವಾಸರಾವ ಕೌಜಲಗಿ ಹಾಗೂ ಗಂಗಾಧರರಾವ ದೇಶಪಾಂಡೆಯವರು, ಸಭೆಯನ್ನುದ್ದೇಶಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು."[೨೦] ಮಹಾತ್ಮ ಗಾಂಧಿಯವರು ಅಸಹಕಾರ ಚಳವಳಿ ಪ್ರಚಾರ ಮಾಡಲು ವಿಜಾಪೂರ ಜಿಲ್ಲೆಗೆ ಬಂದಿರುವ ವಿಷಯ ಕುರಿತಂತೆ ಡಾ.ಪಿ.ಆರ್. ರಂಗನಾಥ ನಾಯಕ ಅವರು ತಮ್ಮ ಸ್ಮೃತಿಯಲ್ಲಿ "ಲೋಕಮಾನ್ಯ ತಿಲಕರ ನಿಕಟವರ್ತಿಗಳೂ ಮುಂಬೈ ಕರ್ನಾಟಕದ ಮುಖಂಡರೂ ವಿಜಾಪೂರದ ಪ್ರಮುಖ ವಕೀಲರೂ ಆದ ಕೌಜಲಗಿ ಶ್ರೀನಿವಾಸರಾಯರು ಕರ್ನಾಟಕದಲ್ಲಿ ಅಸಹಕಾರ ಚಳವಳಿಯ ಮುಖಂಡತ್ವ ವಹಿಸಿದ್ದರು. ೧೯೨೦ರಲ್ಲಿ ಮಹಾತ್ಮ ಗಾಂಧೀಜಿ, ದೇಶಪಾಂಡೆ, ಗಂಗಾಧರರಾಯರು ವಿಜಾಪೂರಕ್ಕೆ ಬಂದಿದ್ದರು. ಅವರ ಬಹಿರಂಗ ಸಭೆಯನ್ನು ಮಧ್ಯಾಹ್ನ ಏರ್ಪಡಿಸಿತ್ತು."[೨೧] ಎಂದು ಬರೆದಿರುವರು.

೩. ಶ್ರೀನಿವಾಸ ಕೌಜಲಗಿಯವರ ಪ್ರವಾಸ

ಶ್ರೀನಿವಾಸರಾವ ಕೌಜಲಗಿಯವರು ವಿಜಾಪೂರ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಬ್ರಿಟಿಷ ಸರಕಾರ ವಿರುದ್ಧ ಯಾವ ರೀತಿಯಾಗಿ ಪ್ರಚೋದನಾಕಾರಿ ಭಾಷಣ ಮಾಡುತ್ತಿದ್ದರು ಎಂಬುದರ ಸರಿಯಾದ ಮಾಹಿತಿ ೧೯೨೨ರ ಸಪ್ಟೆಂಬರ್ ತಿಂಗಳಲ್ಲಿ ನ್ಯಾಯಾಲಯಕ್ಕೆ ನೀಡಿದ ಸಾಕ್ಷಿಗಳ ವಿವರಗಳಿಂದ ತಿಳಿಯುವದು. ಕೌಸಿಕ್ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ ತಿಳಿಸುವಂತೆ "ಎರಡು ವರ್ಷಗಳಿಂದ ಶ್ರೀನಿವಾಸರಾವ ಕೌಜಲಗಿಯವರ ಗುರ್ತು ಇರುವದು ಇವರು ಅಸಹಕಾರ ವಾದಿಗಳಾಗಿದ್ದು, ಅಸಹಕಾರ ತತ್ವವನ್ನು ಜಿಲ್ಲೆಯಲ್ಲಿ ಪ್ರಸಾರ ಮಾಡಿದರಲ್ಲದೇ ರಾಜದ್ರೋಹಾತ್ಮಕ ಭಾಷಣಗಳನ್ನು ಮಾಡಿರುವರು. ಬಾಗಲಕೋಟ, ಬೀಳಗಿ, ಕಲಾದಗಿ, ಗಲಗಲಿ ಮುಂತಾದ ಸ್ಥಳಗಳಲ್ಲಿ ಇವರು ಭಾಷಣ ಮಾಡಿದ್ದಾರೆ. ಭಾಷಣಗಳ ರಿಪೋರ್ಟ್‌ಗಳು ಕಾಲಾಕಾಲಕ್ಕೆ ಪೊಲೀಸ್ ಸಾಹೇಬರಿಗೆ ಕಳುಹಿಸಲಾಗಿದೆ."[೨೨]

"ಅಸಹಕಾರ ಚಳವಳಿ ಪ್ರಾರಂಭವಾದ ಒಂದೆರೆಡು ತಿಂಗಳಲ್ಲಿ ಶ್ರೀನಿವಾಸರಾವ್ ಕೌಜಲಗಿಯವರು ಚಳವಳಿ ಪ್ರಚಾರ ಮಾಡಲು ೧೯೨೧ರ ಮಾರ್ಚ ತಿಂಗಳಲ್ಲಿ ತುಳಸಿಗೇರಿಗೆ ಬಂದಿದ್ದರು, ಅಲ್ಲಿ ಅವರ ಭಾಷಣಕ್ಕಾಗಿ ೮೦೦ ಜನರು ನೆರೆದಿದ್ದರು. ತುಳಸಿಗೇರಿ ನರಸಿಂಗ. ಓಬಳಪ್ಪ. ಪಾಟೀಲ ಅವರು ಹೇಳಿರುವಂತೆ 'ನಮ್ಮ ಊರಿಗೆ ವ್ಯಾಖ್ಯಾನ ಕೊಡಲಿಕ್ಕೆ ೧೯೨೧ನೇ ಮಾರ್ಚ್ ತಿಂಗಳಲ್ಲಿ ಬಂದಿದ್ದರು. ಎಂಟನೂರು ಜನರು ನೆರೆದಿದ್ದರು ನಾನೂ ಭಾಷಣ ಕೇಳಲಿಕ್ಕೆ ಹೋಗಿದ್ದೆನು. ಈ ಸರಕಾರದವರು ಬರುವದಕ್ಕಿಂತ ಪೂರ್ವದಲ್ಲಿ ನಮ್ಮ ದೇಶವು ಸಂಪತ್ತಿನ ತವರು ಮನೆಯಾಗಿತ್ತು. ಮೊದಲಿನ ರಾಜರಿಗಿಂತ ಈ ಸರಕಾರವು ಹತ್ತುಪಟ್ಟು ತೆರಿಗೆಯನ್ನು ತೆಗೆದುಕೊಳ್ಳುತ್ತಾರೆ. ತಾರ, ಯಂತ್ರ, ರೈಲ್ವೆ ಗಾಡಿ ಮುಂತಾದವುಗಳಿಂದ ಹಣವನ್ನು ಸುಲಿದುಕೊಳ್ಳುತ್ತಾರೆ. ಆದ್ದರಿಂದ ಪರದೇಶಿ ಅರಿವೆಯನ್ನು ಉಪಯೋಗಿಸಬೇಡಿರಿ. ದೇಶಿ ಅರಿವೆಯನ್ನು ಧರಿಸಿರಿ ಸರಕಾರದವರೆಂದರೆ ನಮ್ಮ ನೌಕರರು

ಗುಲಾಮಗಿರಿ ವಿದ್ಯೆಯನ್ನು ಕಲಿಸುತ್ತಾರೆ ಆದ್ದರಿಂದ ಹುಡುಗರನ್ನು ಶಾಲೆಗೆ ಕಳಿಸಬೇಡಿರಿ, ಗಾಡಿಗಳನ್ನು ಬಿಟ್ಟುಕೊಡಬೇಡಿರಿ, ಕೋರ್ಟ್‌ಗಳು ಅನ್ಯಾಯದ ಕೋರ್ಟುಗಳಿರುತ್ತವೆ ರಾಜದ್ರೋಹಾತ್ಮಕ ಮಾತಾಡಿದ್ದರಿಂದ ನನಗೆ ಕೆಟ್ಟ ಅನಿಸಿತು. ಮಾಮಲೇದಾರರ ಕಡೆಗೆ ಭಾಷಣವನ್ನು ಬರೆದು ತಿಳಿಸಿದೆನು. ಸರಕಾರದವರು ಅನ್ಯಾಯ ಮಾಡುತ್ತಾರೆ. ಶ್ರೀನಿವಾಸರಾವ ಕೌಜಲಗಿಯವರು ಹೇಳಿದ್ದು ನಿಜವೆಂದು ಅನಿಸಿತು. ವಕೀಲಿ ಬಿಡಲಿಕ್ಕೆ ಹೇಳಿದರು. ಚಲೋ ನ್ಯಾಯ ಸಿಗುವುದಿಲ್ಲವಾದ್ದರಿಂದ ಕೋರ್ಟ್‌ಗಳಿಗೆ ಹೋಗಬೇಡಿರಿ ಸೆರೆ ಸೇಂದಿ ಕುಡಿಯಬೇಡಿರಿ, ದುಡ್ಡು ಹಾಳಾಗುತ್ತದೆ. ಸರಕಾರದವರಿಗೆ ಲಾಭವಾಗುತ್ತದೆ. ಅದರ ಉಪಯೋಗವೇನೂ ಇಲ್ಲ. ದೇಶದ ಸ್ಥಿತಿಗತಿಯ ಬಗ್ಗೆ ಮಾತನಾಡುತ್ತ ನಮ್ಮ ದೇಶದ ಸ್ಥಿತಿಯು ಮೊದಲು ಚೆನ್ನಾಗಿ ಇತ್ತು. ಈಗ ಕೆಟ್ಟಿರುತ್ತದೆ. ಸರಕಾರದವರು ಅನ್ಯಾಯ ಮಾಡುತ್ತಾರೆಂದು ಅನಿಸಿತು."[೨೩]

ಅಸಹಕಾರ ಚಳವಳಿಯ ಕಾರ್ಯಕ್ರಮಗಳನ್ನು ಜನತೆಯಲ್ಲಿ ಪ್ರಚಾರ ಮಾಡಿ ಅವರು ಬ್ರಿಟಿಷ ಸರಕಾರದ ವಿರುದ್ಧ ಹೋರಾಟಕ್ಕೆ ಇಳಿಯುವಂತೆ ಮಾಡುವಲ್ಲಿ ಶ್ರೀನಿವಾಸರಾವ್ ಕೌಜಲಗಿಯವರು ಯಾವಾಗಲೂ ಪ್ರವಾಸದಲ್ಲಿದ್ದು ಅವರು ತಮ್ಮ ಭಾಷಣದಿಂದ ಜನರನ್ನು ಬಡಿದೆಬ್ಬಿಸುತ್ತಿದ್ರು. ಹುನಗುಂದ ಭಾಗದಲ್ಲಿನ ಅವರ ಪ್ರವಾಸ ಕುರಿತಂತೆ ನರಹರಿ ಎಲ್ ಕಟ್ಟಿಯವರು. ತಮ್ಮ ಸ್ಮೃತಿಯಲ್ಲಿ ಶ್ರೀನಿವಾಸರಾವ್ ಕೌಜಲಗಿ ಅವರು "ಹುನಗುಂದದಲ್ಲಿ ಭಾಷಣ ಮಾಡಿ ಇಲಕಲ್ಲಿಗೂ ಹೋಗಿ ಬಂದರು. ಇಲಕಲ್ಲಿನಲ್ಲಿ ನೇಕಾರರೊಳಗೆ ವಿಶೇಷ ಉತ್ಸಾಹ ಕಂಡುಬರಹತ್ತಿತು. ನಾವು ಹಳ್ಳಿಗಳಿಗೆ ಹೋಗುತ್ತಿದ್ದೆವು. ಸಭೆ ಮಾಡುತ್ತಿದ್ದೆವು. ಜನರು ಭಾಷಣ ಕೇಳಲು ಬರುತ್ತಿದ್ದರು. ಆದರೆ ಕಾಂಗ್ರೆಸ್‌ಗೆ ಸದಸ್ಯರಾಗುತ್ತಿರಲಿಲ್ಲ. ಇಲಕಲ್ಲ, ಅಮೀನಗಡ, ಕಮತಗಿ ಮುಂತಾದ ನೇಕಾರರ ಊರುಗಳಲ್ಲಿ ಕಾಂಗ್ರೆಸ್ ಸದಸ್ಯರಾಗುತ್ತಿದ್ದರು ಎಂದು ಬರೆದಿರುವರು."[೨೪]

ಹೀಗೆ ಶ್ರೀನಿವಾಸ ಕೌಜಲಗಿಯವರು ಜಿಲ್ಲೆಯಾದ್ಯಂತ ಸಂಚರಿಸಿ ತಮ್ಮ ಪ್ರಭಾವಿ ಭಾಷಣಗಳ ಮೂಲಕ ಅಶಿಕ್ಷಿತರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಹಾಗೂ ಬ್ರಿಟಿಷ್ ಸರಕಾರದ ಬಗೆಗೆ ತಿರಸ್ಕಾರ ಭಾವನೆ ಮೂಡಿಸಿದರು. ಅಸಹಕಾರ ಚಳವಳಿಯಲ್ಲಿ ಭಾಗವಿಸುವಂತೆ ಪ್ರೇರೇಪಿಸಿದರು.

೪. ನಾ.ಸು. ಹರ್ಡೀಕರ ಪ್ರವಾಸ

ಬಾಗಲಕೋಟದಲ್ಲಿ ಡಾಕ್ಟರ್ ನಾರಾಯಣರಾವ್ ಹರ್ಡೀಕರ ಅವರು ೨೬-೦೯-೧೯೨೨ರಂದು ಅಸಹಕಾರ ಚಳವಳಿಯಲ್ಲಿ ಜನಸಾಮಾನ್ಯರು ಭಾಗವಹಿಸುವಂತೆ ಈ ಕೆಳಗಿನಂತೆ ಭಾಷಣ ಮಾಡಿದರು.

"ನನ್ನ ಪ್ರೀತಿಯ ಬಂಧುಗಳೇ,

ವ್ಯಾಖ್ಯಾನ ಪ್ರಾರಂಭಿಸುವದಕ್ಕಿಂತ ಪೂರ್ವದಲ್ಲಿ ರಿಪೋರ್ಟ್ ಮಾಡಲಿಕ್ಕೆ ಬಂದ ಪೋಲೀಸರು ಮುಂದೆ ಬಂದು ಕುಳಿತುಕೊಳ್ಳಬೇಕೆಂದರು. ತಮ್ಮ ಭಾಷಣದ ಪೂರ್ಣ ಪಾಠವನ್ನು ವರದಿ ಮಾಡಬೇಕೆಂದು ವಿನಂತಿಸಿದರು. ನಾವು ಖಟ್ಲೆಗಳಿಗೆ ಹೆದರುವದಿಲ್ಲ, ಮಹಾತ್ಮರು ಸತ್ಯದ ಸಲುವಾಗಿ ಬಡಿದಾಡಲಿಕ್ಕೆ ಹೇಳಿದ್ದಾರೆ. ಆತ್ಮ ಶುದ್ಧಿಯನ್ನು ಮಾಡಲು ಆದೇಶಿಸಿದ್ದಾರೆ. ಅದ್ದರಿಂದ ಎಲ್ಲರೂ ಪೂರ್ಣ ವಿಚಾರ ಮಾಡಿ ಕೆಲಸಮಾಡತಕ್ಕದ್ದು. ಇಡೀ ಮಾನವ ಜಾತಿಯೇ ಸತ್ಯದ ಸಲುವಾಗಿ ವಿಚಾರ ಮಾಡುತ್ತದೆ. ಜ್ಞಾನವಿದ್ದವರೆಲ್ಲರು ಮನುಷ್ಯರೇ, ಮನುಷ್ಯರು ಎಲ್ಲ ದೇಶಗಳಲ್ಲಿ ಇರುವರು. ಆದರೆ ಇಂಗ್ಲೀಷರು ಮಾತ್ರ ನಾವು ಕರಿಯರೆಂದು ತಿಳಿದಿದ್ದಾರೆ. ಯುರೋಪದವರು ಯೇಸುಕ್ರಿಸ್ತನನ್ನು ಪೂಜಿಸುವರು, ಮುಸಲ್ಮಾನರು ಪೈಗಂಬರನನ್ನು ಪೂಜಿಸುವರು, ಹಿಂದೂ ಜನರು ರಾಮ ಕೃಷ್ಣಾದಿಗಳನ್ನು ಪೂಜಿಸುವರು. ಚೀನ ಜಪಾನದವರು ಬುದ್ಧನನ್ನು ಪೂಜಿಸುತ್ತಾರೆ. ಆದರೆ ಎಲ್ಲ ದೇವರು ಒಬ್ಬನೇ ಇದ್ದಾನೆ. ಎರಡನೆಯವರಿಗೆ ದುಃಖವಾಗಬಾರದೆಂದು ಗಾಂಧೀಜಿಯವರ ತತ್ವವಿದೆ. ಯಾರಿಗೂ ದ್ವೇಷಮಾಡಬಾರದು. ಗಾಂಧಿಯವರು ನಮಗೆ ಅಂತಃಕರಣ ಶುದ್ಧ ಮಾಡಲಿಕ್ಕೆ ಹೇಳಿದರೂ, ನಾವು ಪೂರ್ಣ ಶುದ್ಧವಾಗಿಲ್ಲ, ಆದ್ದರಿಂದ ಮೊದಲು ನಮ್ಮ ಮನಸ್ಸು ಶುದ್ಧಮಾಡಿಕೊಂಡು ಆಮೇಲೆ ಎರಡನೆಯವರ ಮನಸ್ಸು ಶುದ್ಧ ಮಾಡಬೇಕು. ನಾನು ತುರಂಗಕ್ಕೆ ಹೆದರುವದಿಲ್ಲ. ಸರಕಾರದವರು ಸತ್ಯ ಇದ್ದಾರೋ ಅಥವಾ ಸತ್ಯಮಾತನಾಡುತ್ತಿರುವರೋ ಇದನ್ನು ನಿಮಗೆ ಹೇಳಲೆಬೇಕಾಗಿದೆ. ಅಮೆರಿಕೆಯಿಂದ ಬಂದು ೧೦ ತಿಂಗಳಾಯಿತು. ಇಷ್ಟರಲ್ಲಿ ಎಲ್ಲರನ್ನು ತರಂಗದಲ್ಲಿ ಕಳುಹಿಸಿದ್ದರಿಂದ ನನಗೆ ಬಹಳ ಖೇದವೆನಿಸುತ್ತದೆ. ನಾನು ದೇಶಸೇವೆ ಮಾಡತಕ್ಕಷ್ಟು ಮಾಡಿಲ್ಲ. ಆದ್ದರಿಂದ ಇನ್ನು ಹೊರಗೆ ಉಳಿದ್ದೀನಿ ನಾನು ತುರಂಗವಾಸ ಅನುಭವಿಸುವುದು ದೇವರ ಮನಸ್ಸಿಗೆ ಬಂದಿರಲಿಕ್ಕಿಲ್ಲ, ನಾನು ಈ ದೇಶದ ಮೇಲೆ ಕಾಲಿಟ್ಟ ಕೂಡಲೇ ಕರ್ನಾಟಕದ ಮುಖಂಡರನ್ನು ಮತ್ತು ಹಿಂದೂಸ್ತಾನದ ಮುಖಂಡರನ್ನು ತುರಂಗಕ್ಕೆ ಅಟ್ಟಿದರು. ಲೋಕಮಾನ್ಯರು ನನ್ನ ಗುರುಗಳು ಲಾಲಾಜಿಯವರು ನಾನು ಇಲ್ಲಿಗೆ ಬಂದ ಮೇಲೆ ಅವರನ್ನು ತುರಂಗಕ್ಕೆ ಕಳುಹಿಸಿದೆನು. ನಾನು ಇಲ್ಲಿಗೆ ಬಂದ ಕೂಡಲೆ ಗಂಗಾಧರರಾಯರಿಗೆ ಅರು ತಿಂಗಳ ಶಿಕ್ಷೆಯಾಯಿತು. ಗಂಗಾಧರರಾಯರು ನೀನು ಬಂದಿ ನಾನು ಹೋಗುತ್ತೇನೆ. ಈ ಪ್ರಕಾರ ನನಗೆ ಅಂದರು. ವಿಶ್ವನಾಥರಾವ್ ಜೋಶಿಯವರು ತುರಂಗಕ್ಕೆ ಹೋದರು. ನಿನ್ನೆ ಕೌಜಲಗಿಯವರಿಗೆ ಶಿಕ್ಷೆಯಾಯಿತು. ಈ ಮೂವರು ಖಟ್ಲೆಕ್ಕೆ ನಾನು ಹಾಜರ ಇದ್ದೆನು. ಮಹಾತ್ಮರು ನನಗೆ ತಾರು ಮಾಡಿ ಕಳುಹಿಸಿದರು. ನಾನು ಅಲ್ಲಿಗೆ ಹೋದ ೩ನೇ ದಿವಸ ಅವರನ್ನು ಹಿಡಿದರು. ಅವರ ಸೇವಾ ಮಾಡುವ ಪ್ರಸಂಗ ನನಗೆ ದೊರೆಯಿತು. ಅವರ ಖಟ್ಲೆಯನ್ನು ಕಿವಿಯಿಂದ ಕೇಳೀನಿ, ಕಣ್ಣಾರೆ ಕಂಡೀನಿ, ಇವೆಲ್ಲವುಗಳನ್ನು ನೋಡಿ ನನಗೆ ಬಹಳ ದುಃಖವಾಯಿತು. ನಾನು ಅಮೆರಿಕಾದಲ್ಲಿದ್ದರಿಂದ ನನ್ನ ವಿಚಾರ ಸಂಸ್ಕೃತಿಯಾದರೂ ಪಾಶ್ಚಿಮಾತ್ಯವಾಗಿರುತ್ತೇವೆ. ಈಗ ಮಾತನಾಡಬೇಕಾದರೆ ಇಂಗ್ಲೀಷದಲ್ಲಿ ವಿಚಾರ ಮಾಡಿ ನಂತರ ಭಾಷಾಂತರಿಸುತ್ತೇನೆ. ಈ ಖಟ್ಲೆಯನ್ನು ನೋಡಿ ನನ್ನ ಹೊಟ್ಟೆಯಲ್ಲಿ ಬೆಂಕಿ ಬಿತ್ತು. ೪

ಸಾವಿರ ಮೈಲುಗಳಿಂದ ಘೋರಾ ಜನರು ಬರಬೇಕು ಮತ್ತು ಅಂಥ ನೀಚ ಕೀಳ ಮನುಷ್ಯರು ನಮ್ಮಲ್ಲಿಯ ದೊಡ್ಡ ಪುಢಾರಿಗಳನ್ನು ಬಂಗ್ಲೆಕ್ಕೆ ಕರೆಯಿಸಿ ಸುಳ್ಳು ಸಾಕ್ಷಿ ಹೇಳಿಸಿ ೧, ೨, ೬ ವರ್ಷ ತುರಂಗಕ್ಕೆ ಕಳುಹಿಸಬೇಕು. ಇಷ್ಟು ದೌರ್ಭಾಗ್ಯರು ನಾವು ಗೋರಾ ಮನುಷ್ಯರು ೪ ಸಾವಿರ ೮ ಸಾವಿರವರಗೆ ತುರಂಗಕ್ಕೆ ಕಳುಹಿಸಬೇಕು ಇದೆಂಥಾ ನಾಚಿಗೇತನದ ಮಾತು ! ನಾವು ಮನುಷ್ಯರೊ ಜಗತ್ತಿನ ಶ್ರೇಷ್ಠ ಮನುಷ್ಯನನ್ನು ತುರಂಗಕ್ಕೆ ಕಳಿಸುವಾಗ ನಾವು ಸುಮ್ಮನೆ ನಿಂತು ನೋಡಬೇಕು. ಇಲ್ಲವೆ ಗಾಂಧೀಜಿ ಕಿ ಜೈ ಅಂತಾ ಒದರಬೇಕು. ಈ ಪ್ರಕಾರ ಹೀನಸ್ಥಿತಿಯು ನಮಗೆ ಬಂದಿದೆ. ಖುದ್ದ ನಮ್ಮ ಮಾಬಾಪ ಸರಕಾರದವರು ಮುಖ್ಯ ಪಟ್ಟಣದಲ್ಲಿ ಈ ಪ್ರಕಾರ ಖಟ್ಲೆಗಳು ನಡೆದಿದ್ದರೆ ಸುಳ್ಳು ಸಾಕ್ಷಿ ಹೇಳಿದಂತ ಮನುಷ್ಯನನ್ನು ಮೆಟ್ಟೀಲಿ ಹೊಡೆಯುತ್ತಿದ್ದರು. ಅಮೆರಿಕಾದಲ್ಲಿ ಸಿದ್ಧಿ ಜನರಿರುವರು ಅವರು ನಮ್ಮಂಥ ಕಪ್ಪು ಇರುವರು, ಯಾರಾದರೂ ತಮ್ಮಲ್ಲಿಯ ಗೋರಾ ಮನುಷ್ಯನ ಮೇಲೆ ಈ ಪ್ರಕಾರ ಸುಳ್ಳು ಸಾಕ್ಷಿ ಹೇಳಿಸಿ ಶಿಕ್ಷೆ ಕೊಟ್ಟಿದ್ದೇ ಆದರೆ ಜಡ್ಜನನ್ನು ಹಾಗೂ ಸುಳ್ಳು ಸಾಕ್ಷಿ ಹೇಳಿದ ಮನುಷ್ಯನನ್ನು ಕೂಡಿಯೇ ಕಂಬಕ್ಕೆ ಕಟ್ಟಿ ಜೀವಂತ ಸುಡುತ್ತಿದ್ದರು. ಇಲ್ಲವೆ ಮೂಗು, ಕಿವಿ, ಕಣ್ಣುಗಳನ್ನು ಕೊಯ್ಯುತ್ತಿದ್ದರು. ಅಸಿದ್ಧಿಯ ಹೆಂಡಿರು ಮಕ್ಕಳನ್ನು ಪೂರ್ಣ ನಾಶಮಾಡುತ್ತಿದ್ದರು. ಈ ಸುದ್ಧಿ ನಿಮಗೆ ತಿಳಿಯುವುದಿಲ್ಲ. ಮತ್ತು ನಮ್ಮ ಮಾಬಾಪ ಸರಕಾರ ತಿಳಿಯದಂತೆ ಎಚ್ಚರಿಕೆ ವಹಿಸುತ್ತದೆ. ಅಮೆರಿಕಾದಲ್ಲಿ ನಾನು ಇದ್ದಾಗ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಗಬೇಕಾದರೆ ಈ ಗೋರ ಜನರ ಹಿಂದೆ ಶಿವಾಜಿ ಮಹಾರಾಜರು ಬೆನ್ನು ಹತ್ತಿದಂತೆ ಬೆನ್ನು ಹತ್ತಿ ಹಾಣಾ ಮಾರಾ ಎನ್ನುತ್ತ ಕೆಲಸ ಮಾಡಬೇಕು. ಅಂದರೆನೇ ಸ್ವರಾಜ್ಯ ಸಿಗುವದು. ಅಮೃತಸರದಲ್ಲಿ ನಮ್ಮ ಮಕ್ಕಳನ್ನು ಯಾವ ಪ್ರಕಾರ ಅವರ ಛಾತಿ ಮೇಲೆ ಕೂತು ಒದ್ದರೋ ಅದೇ ಉಗ್ರಾಕಾರ ನಾವು ಮಾಡದ ಹೊರತು ಸ್ವರಾಜ್ಯ ಸಿಗುವದಿಲ್ಲ. ಆದರೆ ಗಾಂಧಿ ತತ್ವದಿಂದ ನನ್ನ ವಿಚಾರಗಳು ಬದಲಾಗಿರುತ್ತವೆ. ಧಾರವಾಡದಲ್ಲಿ ಗೋಲಿಬಾರ ಮಾಡಿದರು. ಗುರುಕಾಬಾಗದಲ್ಲಿ ಈ ಸದ್ಯಕ್ಕೆ ನಮ್ಮ ದೇಶ ಬಾಂಧವರಿಗೆ ಸಿಕ್ಕ ಹಾಗೆ ಹೊಡೆಯಲಿಕ್ಕೆ ಹತ್ತಿದ್ದಾರೆ. ಅರವಿ ಬಾಯಲ್ಲಿಟ್ಟು ಹೊಡೆದರು. ಬರಿ ಮೈಯಲ್ಲಿಯೇ ಚಾಬೂಕದಿಂದ ಹೊಡೆದರು. ಇಂಥ ದುಷ್ಟ ಶತ್ರು ಜನರನ್ನು ನಾವು ಕೂಡುವದು ಯೋಗ್ಯವಲ್ಲ. ನಮ್ಮಂಥ ಸತ್ಪುರುಷರು ಈ ರಾಕ್ಷಸಿ ಸರಕಾರದ ಸಂಗಡ ಸಹಕಾರ ಹೇಗೆ ಮಾಡಬೇಕು ? ೧೨ ಜನರೆದುರಿಗೆ ನಮ್ಮ ಮುಖಂಡನನ್ನು ತುರಂಗಕ್ಕೆ ಕಳುಹಿಸಬೇಕು ಇಂದೆಂಥ ನಾಚೀಕೆಗೇಡಿತನದ ಮಾತು ! ನಾವು ಸಹಕಾರ ಮಾಡದಿದ್ದರೆ ವಕೀಲರು ಅವರ ವಿರುದ್ಧ ವಕೀಲಿ ನಡೆಸದಿದ್ದರೆ ಪೊಲೀಸರು ಸುಳ್ಳು ಸಾಕ್ಷಿ ಹೇಳದಿದ್ದರೆ, ಕೌಜಲಗಿಯವರಿಗೆ ಶಿಕ್ಷೆಯಾಗುತ್ತಿದ್ದಿಲ್ಲ. ಇದರ ವಿಚಾರ ಮಾಡಿರಿ ನಾವು ೩೦ ಕೋಟಿ ಜನರು ಕುರಿಗಳಂತೆ ಇದ್ದೀವಿ ಈ ೩೦ ಕೋಟಿ ಜನರನ್ನು ಆಳಲಿಕ್ಕೆ ೨೫೦೦ ಜನರು ಸಾಕೆಂದು ಲಾರ್ಡ ಜಾರ್ಜ್‌ರು ಹೇಳುತ್ತಾರೆ. ಇದು ನಾಚಿಗೇಡುತನದ ಮಾತು ! ನಮ್ಮವರು ಸರಕಾರದ ಸಂಗಡ ಲಾಂಗೋಲ ಚಾಲನೆ ಮಾಡುತ್ತಾರೆ. ಈ ಪ್ರಕಾರ ಮಾಡಿದವರಿಗೆ ಸ್ವರಾಜ್ಯ ಸಿಗುವದಿಲ್ಲ. ಅಸಹಕಾರ ಮಾಡಲಿಕ್ಕೆ ನಮಗೆ ಮಹಾತ್ಮರು ಹೇಳಿದ್ದಾರೆ. ಶ್ರೀಕೃಷ್ಣ ಗೀತೆಯಲ್ಲಿ ಯಾವಾಗ ಧರ್ಮಜ್ಞಾನಿ ಆಗಿ ಸಾಧು ಸಂತರಿಗೆ ತ್ರಾಸ ಆಗುತಿದೆ ಆಗ ನಾನು ಹುಟ್ಟುತಿನಿ

ಅಂತ ಹೇಳಿದ್ದಾನೆ. ಪರಮಾತ್ಮನಿಗೆ ಈ ಮಾತು ನೆನಪಿನಲ್ಲಿದೆ. ಆದ್ದರಿಂದ ಎಲ್ಲಾ ಕುಲದಲ್ಲಿ ಸಾಧುಗಳು ಹುಟ್ಯಾರ ಅದು ನಮ್ಮ ಏಶಿಯಾದಲ್ಲಿ ಹುಟ್ಯಾರ ನಮ್ಮ ಹಿಂದೂಸ್ತಾನವು ಪರಮಾತ್ಮನಿಗೆ ಪ್ರಿಯವಾಗಿದೆ. ನಾವಾದರೂ ಪ್ರೀಯರಾಗಿದ್ದೇವೆ. ನಮ್ಮ ಕಡೆಯಿಂದ ರಕ್ತಪಾತ ಮಾಡಿಸಬಾರದು. ಧರ್ಮ ಪ್ರಸಾರ ಮಾಡಬೇಕು ಅಂತಾ ಲೋಕಮಾನ್ಯ ಗಾಂಧಿಯವರು ಮೇಲಿಂದ ಮೇಲೆ ಹುಟ್ಟುತ್ತಾರೆ. ಮಹಾತ್ಮರು ದೇವಾಂಶ ಹೊಂದಿದದರಿಂದ ಅವರು ಹೇಳಿದ ಅಹಿಂಸಾಮಯ ಅಸಹಕಾರವನ್ನೇ ನಾವು ಮಾಡಬೇಕು. ಇದರಿಂದಲೇ ನಮಗೆ ಸ್ವರಾಜ್ಯ ಸಿಗುವದು. ಮನಸ್ಸಿನಲ್ಲಿದ್ದದ್ದು ಹೇಳಿರಿ ಗುಪ್ತವಾಗಿ ಇಡಬೇಡಿರಿ. ನಾವು ಹೇಳಿದಂತೆ ಕೇಳದಿದ್ದರೆ ನಿಮ್ಮ ಲುಕ್ಸಾನ ಆಗುತ್ತದೆ. ನಿಮ್ಮ ಮಕ್ಕಳಂತೂ ಭೀಕ್ಷೆ ಬೇಡತಾರ ಈ ಪ್ರಕಾರ ಅಸಹಕಾರ ಮಾಡಿದ್ದಕ್ಕೆ ೨೫೦೦೦ ಸಾವಿರ ಜನರು ತುರಂಗಕ್ಕೆ ಹೋಗಿದ್ದಾರೆ. ಎಷ್ಟೋ ಕಡೆಗೆ ಗೋಲಿಬಾರ ಮಾಡಿ ಜನರನ್ನು ಕೊಂದಿದ್ದಾರೆ. ವಿಜಾಪೂರಕ್ಕೆ ಈ ಮಾತು ಈಗ ಗೊತ್ತಾಗ ಹತ್ತಿದೆ. ಬಾಗಲಕೋಟಗಾದರೂ ಈ ಗಾಳಿಯೂ ಬೀಸಿತು. ನಾವು ಸೇವಾ ಮಾಡಿಲ್ಲ ಅಂತಾ ತಿಳಿದು ಇನ್ನು ನಾನು ಹೊರಗೆ ಇದ್ದೀನಿ ನೀವಾದರೂ ಬೇರೆ ಸೇವಾ ಮಾಡಿರಿ ನಿಮಗಾದರೂ ದಾಳಿ ಬರತದ ಅಸಹಕಾರ ವ್ಯಾಖ್ಯಾನ ಕೊಟ್ಟರೆ ಸರಕಾರದ ವಿರುದ್ಧ ಆದಂತಾಯಿತು. ನೀವೂ ತಯಾರ ಇದ್ದೀರೋ ? ನನಗೆ ಹಿಂಸಾಬೇಡ. ನಿಮ್ಮ ಮನಸ್ಸು ಶುದ್ಧ ಮಾಡಿರಿ. ಹುಲಿ ಗವಿಯನ್ನು ಸೇರಿದೆ. ಅಲ್ಲಿಯ ಜನರು ಒಂದುಗೂಡಿ ಅವರ ಕಾರ್ಯಮಾಡದಿದ್ದರೆ ಭಗಿನಿಯರು ಕೆಲಸ ಮಾಡುವರು. ಆದ್ದರಿಂದ ನೀವು ಕೆಲಸ ಮಾಡಿರಿ ಅಂತಾ ನಾನು ಹೇಳ್ತಿನಿ. ಅಲ್ಲಿಯ ಅಧಿಕಾರಸ್ಥರಿಗೆ ಕೌಜಲಗಿಯವರಲ್ಲದಿದ್ದರೆ, ಕೆಲಸ ನಿಲ್ಲುವದಿಲ್ಲ, ನಾನು ಕೆಲಸ ಮಾಡುತ್ತಿನಿ ಅಂತಾ ಮಾಡಿದ್ದೇನೆ. ೨೧ನೇ ತಾರೀಖಿಗೆ ಖಟ್ಲೆಯು ನಡೆಯಿತು. ಜನ ಸಮುದಾಯ ಬಹಳ ಇತ್ತು. ಸಾಕ್ಷಿಗಳಾದವು. ಗುಳೇದಗುಡ್ಡದ ಕೌಜಲಗಿಯವರ ಭಾಷಣ ಮಾಡಿದರು. ಬ್ರಿಟಿಷರು ಬರುವದಕ್ಕಿಂತ ಪೂರ್ವದಲ್ಲಿ ನಮ್ಮ ದೇಶ ಚೆನ್ನಾಗಿತ್ತು. ಈಗ ಕೆಟ್ಟಿದೆ. ನಮ್ಮ ಜನರು ಶ್ರೀಮಂತವಿದ್ದರು ಈಗ ಬಡವರಾಗಿದ್ದಾರೆ. ನಾವು ಸುಖದಿಂದ ಇರುತ್ತಿದ್ದೇವು. ಈಗ ಬಹಳ ದುಃಖದಲ್ಲಿದ್ದೇವೆ. ಕರ್ನಾಟಕದ ಪೂರ್ವ ಇತಿಹಾಸ ನೋಡಿದರೆ ನಮ್ಮಲ್ಲಿ ಮೊದಲಿಗಿಂತ ಧಾರಣೆ ಹೆಚ್ಚಾಗಿದೆ. ನಮ್ಮಲ್ಲಿ ಮೊದಲು ಉತ್ತಮ ನೂಲು ಹೊರಡುತ್ತಿತ್ತು. ಲಂಡನ್ನಿನ ಮ್ಯೂಜಿಯಂದಲ್ಲಿ ಒಂದು ಸಣ್ಣ ಡಬ್ಬಿಯಲ್ಲಿ ೧೨ ಯಾರ್ಡ್ ಉದ್ದ ಇದ್ದ ಮಲಮಲ್ಲನ್ನು ಇಟ್ಟಿದ್ದಾರೆ. ಇದನ್ನು ನಾನು ಸ್ವತಃ ನೋಡಿದ್ದೇನೆ. ಆ ಕಾಲ ಹೋಯಿತು ಸರಕಾರದವರು ನಮ್ಮ ಜನರ ಬಟ್ಟು ಕತ್ತರಿಸುತ್ತಿದ್ದರು. ಅವರಿಂದ ನಮ್ಮ ವ್ಯಾಪಾರ ಕುಗ್ಗಿ ಬಡವರಾದೆವು ಎಂದು ಕೌಜಲಗಿಯವರು ಹೇಳಿದರೆಂದು ಅವರ ಮೇಲೆ ಅರೋಪವಿದೆ ಹಾಗೂ ನಮ್ಮ ಪೂರ್ವಜರು ಕಟ್ಟಿಸಿದ ಈ ಮೂರ್ತಿಗಳನ್ನು ದುರಸ್ತೆ ಮಾಡುವದು ಈಗಿನವರಿಗೆ ಆಗುವದಿಲ್ಲ. ಈಗಿನ ಶಾಸ್ತ್ರದ ಉಪಯೋಗವನ್ನು ಅವರು ಬೇಕಾದಷ್ಟು ಮಾಡಲಿ ಆದರೆ ಅದರಿಂದ ಏನು ಉಪಯೋಗ ಬೀಳುವದಿಲ್ಲ. ೪ನೇ ಶತಕೆಯಲ್ಲಿ ಕಟ್ಟಿದ ಒಂದು ಕಬ್ಬಿಣದ ಕಂಬವು ಪಾಟಣಾದಲ್ಲಿ ಮೊನ್ನೆ ಮೊನ್ನೆ ಸಿಕ್ಕಿರುತ್ತದೆ. ಆದರೆ ಅದಕ್ಕೆ ಸ್ವಲ್ಪವಾದರು ಜಂಗು ಹತ್ತಿರುವುದಿಲ್ಲ. ಈ ಪ್ರಕಾರ ನಮ್ಮ ಕಲೆಯು ಬಹಳ ಉತ್ತಮವಾಗಿತ್ತು. ಈಗ ಅದೆಲ್ಲ ಹಾಳಾಗಿ ಹೋಗಿದೆ ಎಂದು

ಹೇಳುವದು ಸರಕಾರದ ವಿಷಯವಾಗಿ ಅಪ್ರೀತಿಯನ್ನು ಹುಟ್ಟಿಸಿದಂತಾಯಿತೋ ? (ಇಲ್ಲ) ಹಾಗಾದರೆ ನೀವು ವ್ಯಾಖ್ಯಾನದಲ್ಲಿ ಈ ಪ್ರಕಾರ ಹೇಳಲಿಕ್ಕೆ ಸಿದ್ಧರಿದ್ದಿರೋ ? (ಸಿದ್ಧ ಸಿದ್ಧ) ಈ ಪ್ರಕಾರ ಹೇಳಿದರೆ ರಾಜದ್ರೋಹ ಮಾಡಿದಂತಾಗುತ್ತದೆ ಎಂದು ಸರಕಾರದವರು ಅಂದರೆ ಯಾರ ಹೊಟ್ಟೆಯಲ್ಲಿ ಬೆಂಕಿ ಬೀಳಲಿಕ್ಕಿಲ್ಲ. ಈ ಪ್ರಕಾರ ಹೇಳಿದರೆ ಗುನ್ಹೆ ಮಾಡಿದಂತಾಗುವದು. ನೀವು ಈ ಪ್ರಕಾರ ಗುನ್ಹೆ ಮಾಡಲಿಕ್ಕೆ ಸಿದ್ಧರಿದ್ದಿರೋ ? (ಇದ್ದೀವಿ) ಇದರ ಸಲುವಾಗಿ ಸತ್ಯಾಗ್ರಹ ಮಾಡಲಿಕ್ಕೆ ತಯಾರ ಇದ್ದೀರೋ ? (ಇದ್ದೀವಿ) ಶ್ರಮ ಮಾಡಿದರೆ ಅ ಪ್ರೀತಿಯನ್ನು ಹುಟ್ಟಿಸಿದ್ದಂತಾಯಿತೋ ? (ಇಲ್ಲಾ) ಕೌಜಲಗಿಯವರು ಈ ನೌಕರ ಶಾಹಿಯವರು ಎಂಜಲವನ್ನು ತಿನ್ನುವ ನಾಯಿಯಂತೆ ಇದ್ದಾರೆ ಎಂದಿದ್ದಾರೆ. ಕೌಜಲಗಿಯವರು ತಮ್ಮ ತತ್ವಗಳಿಗೆ ವಿರುದ್ಧ ಇದ್ದವರನ್ನು ಕೂಡಾ ಪ್ರೀತಿಸುತ್ತಿದ್ದರು. ವಿಜಾಪೂರದಲ್ಲಿ ಅವರು(ಕೌಜಲಗಿಯವರು) ಮಾಡಿದ ಭಾಷಣವೆಂದರೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಐಕ್ಯವೇ ಆಗಿದೆ. ಹಾಗೂ ಮೊನ್ನೆ ಅವರು ಅಥಣಿಗೆ ಹೋಗಿ ಅಲ್ಲಿ ಬೆಳೆದಿದ್ದ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರವಾದವನ್ನು ನಿಕಾಲೆ ಮಾಡಿದ್ದಾರೆ. ಈ ಊರಿಗಾದರೂ ಬಂದು ಈ ಪ್ರಶ್ನೆಯನ್ನು ಬಿಡಿಸುವವರಿದ್ದರು. ಆದರೆ ಖಟ್ಲೇದ ಮುದ್ದತ್ತು ಸಮೀಪಿಸಿದಿದ್ದರಿಂದ ಬರುವದಾಗಲಿಲ್ಲ. ಇಂಥ ಮನುಷ್ಯರು ಎಂದಾದರೂ ಎರಡನೆಯವರಿಗೆ ಬಯ್ಯಬಹುದೊ? ಕೆಲವು ಸಾಕ್ಷಿದಾರರು ಸಾಕ್ಷಿ ಕೊಡಬೇಡಿರಿ ಅಂತಾ ಕೌಜಲಗಿಯವರು ಹೇಳಿದರು. ತಮ್ಮ ಸಾಕ್ಷಿಯಲ್ಲಿ ಹೇಳಿದ್ದರು ಇದಂತೂ ಸುಳ್ಳು ಇರುತ್ತವೆ. ಯಾಕೆಂದರೆ ಅವರು ಪ್ರಾಂತಿಕ ಕಮಿಟಿಯ ಸಭೆಯಲ್ಲಿ ಎಷ್ಟೋ ಸರತೆ ನಮ್ಮ ಪ್ರಾಂತವು ಸಿವ್ಹಿಲ್ ಡಿಸ್‌ಓಬಿಡಿಯನ್ಸ್ ಮಾಡಲಿಕ್ಕೆ ತಯಾರು ಇಲ್ಲ ಅಂತಾ ಹೇಳಿದ್ದಾರೆ. ಇದರಿಂದ ಸಾಕ್ಷಿದಾರರು ಎಷ್ಟು ಸತ್ಯ ಮಾತಾಡುವರೆಂಬುವದು ತಾನೇ ಗೊತ್ತಾಗುವದು. ಸಾಹೇಬರು ಮೊದಲು ೪ ತಿಂಗಳ ಶಿಕ್ಷಾ ಅಂದರು ಅದರಂತೆ ಕೌಜಲಗಿಯವರು ಹೊರಗೆ ಬಂದು ೪ ತಿಂಗಳು ಶಿಕ್ಷೆ ಆಗಿದೆ ಏನೂ ಕಾಳಜಿ ಮಾಡಬೇಡಿರಿ ತೀವ್ರವೇ ಬರುತ್ತೀನಿ ಅಂತಾ ಹೇಳಿದರು. ಆದರೆ ತುರಂಗಕ್ಕೆ ಹೋದ ಮೇಲೆ ಕಾರಕೂನರು ಜಡ್ಜ್‌ಮೆಂಟ್ ಓದಿ ಹೇಳಿದ ಮೇಲೆ ಒಂದು ವರ್ಷ ಶಿಕ್ಷೆ ಎಂಬುವದು ತಿಳಿಯಿತು. ಕೂಡಲೇ ಕೌಜಲಗಿಯವರು ಅದರಂತೆ ಎಲ್ಲರಿಗೂ ಹೇಳಿ ಕಳುಹಿಸಿದರು. ಖಟ್ಲೆ ನಡೆದದ್ದಲ್ಲ ಒಂದು ನಾಟಕವಾಗಿತ್ತು. ಮೊದಲನೆಯ ದಿನ ಜನರಿಗೆ ಒಳಗೆ ಪ್ರವೇಶ ದೊರಕುತಿತ್ತು. ಆದರೆ ಆ ಹೊತ್ತು ಜನರ ಗದ್ದಲವಾಯಿತೆಂದು ತಿಳಿದು ನಿನ್ನೆ ದಿವಸ ಕಂಪೌಂಡಿನಲ್ಲಿ ಯಾರನ್ನೂ ಬಿಡಲಿಲ್ಲ. ಆದರೆ ಜನರು ಮಾತ್ರ ಬಹಳ ನೆರೆದಿದ್ದರು. ನಾಯಕ ವಕೀಲರು ತಮ್ಮ ರಂಗತಾಲೀಮು ಚೆನ್ನಾಗಿ ಮಾಡಿದರು. ಹಂಡರಸನ್ ಸಾಹೇಬರು ಬಹಳ ಸಿಟ್ಟಿನಿಂದ ಇದ್ದರು. ಆದ್ದರಿಂದ ನಿನ್ನೆ ಖಟ್ಲೆಗೆ ಯಾರನ್ನೂ ಬಿಡಲಿಲ್ಲ. ನಾವು ಹೊರಗೆ ಲಾವಣಿ ಪದ ಹಾಡ ಹತ್ತಿದ್ದೆವು. ಕಟ್ಟ ಕಡೆಗೆ ಕೌಜಲಗಿಯವರನ್ನು ತುರಂಗಕ್ಕೆ ಕಳುಹಿಸುವವರೆಗೆ ಜನರು ಹಾಗೆ ನೆರೆದಿದ್ದರು. ಈ ಪ್ರಕಾರ ಖಟ್ಲೆಯ ಸ್ವರೂಪವಿತ್ತು. ಆದ್ದರಿಂದ ಬಂಧುಗಳೇ ನೀವು ಯಾವ ತರಹದಿಂದಲೂ ಅಂಜದೇ ಕೌಜಲಗಿಯವರು ಕೈಗೊಂಡ ಕಾರ್ಯವನ್ನು ಪೂರ್ಣವಾಗಿ ಮಾಡಿದರೆ ಮಾತ್ರ ನಿಜವಾಗಿ ಅವರನ್ನು ನೀವು ಅನುಸರಿಸಿದಂತೆ ಆಗುವದು. ಅದಾವ ಅರೋಪದ ಮೇಲೆ

ತುರಂಗಕ್ಕೆ ಹೋದರೂ ಅವೇ ಆರೋಪಗಳು ತಮ್ಮ ಮೇಲೆ ಬರಬಹುದು. ಅದಕ್ಕೆ ಎಳ್ಳಷ್ಟೂ ಹೆದರ ಬೇಡಿರಿ. ಅಂದರೆ ಸ್ವರಾಜ್ಯವು ಶೀವ್ರವೇ ದೊರೆಯುವದು ಇದರಲ್ಲಿ ಏನೂ ಹುರುಳಿಲ್ಲ"[೨೫] ಎಂದು ಸುದೀರ್ಘ ಭಾಷಣ ಮಾಡಿ ಬ್ರಿಟಿಷ್ ಆಡಳಿತ ವ್ಯವಸ್ಥೆ ಹಾಗೂ ಗಾಂಧಿಜೀಯವರ ಅಹಿಂಸಾತ್ಮಕ ಚಳವಳಿಯ ತತ್ವಗಳನ್ನು ಕಾರ್ಯರೂಪಕ್ಕೆ ತರುವಂತೆ ಕರೆನೀಡಿದರು. ಜೊತೆಗೆ ಬಾಗಲಕೋಟ ಜನರು ಚಳವಳಿಯಲ್ಲಿ ತೊಡಗುವಂತೆ ಪ್ರೇರೇಪಿಸಿದರು.

೫. ಗಂಗಾಧರರಾವ ದೇಶಪಾಂಡೆಯವರ ಪ್ರವಾಸ

ಅಸಹಕಾರ ಮತ್ತು ಖಿಲಾಫತ್ ಚಳವಳಿಯ ಪ್ರಚಾರಕ್ಕಾಗಿ ಗಂಗಾಧರರಾವ್ ದೇಶಪಾಂಡೆಯವರು ತಮ್ಮ ಶಿಷ್ಯರಾದ ಮಜಲಿಯವರು ಹಾಗೂ ಕೌಜಲಗಿ ಹಣಮಂತರಾಯರು ಬಾಗಲಕೋಟಗೆ ಭೇಟಿ ನೀಡಿರುವದು ಚಳವಳಿಗಾರರಿಗೆ ಎಲ್ಲಿಲ್ಲದ ಉತ್ಸಾಹ ತುಂಬಿತು. ಏಕೆಂದರೆ ರಾಷ್ಟ್ರೀಯ ಕೌನ್ಸಿಲ್ ಕಾಂಗ್ರೆಸ್‌ಗೆ ಸೇರಬೇಕೋ ಬೇಡವೊ ಎಂಬುದಕ್ಕೆ ಭಿನ್ನಮತ ಉಂಟಾಗಿದ್ದವು. ದೇಶ ಬಂಧು ದಾಸ, ಪಂಡಿತ ಮೊತಿಲಾಲ್ ನೆಹರು, ಹಕ್ಕಿಕ ಅಜಮಲಖಾನ ಮುಂತಾದವರು ಕೌನ್ಸಿಲ್‌ಗಳನ್ನು ನಾಶ ಪಡಿಸುವದಕ್ಕಾಗಿ, ಸ್ವರಾಜ್ಯವನ್ನು ಸಂಪಾದಿಸುವದಕ್ಕಾಗಿ ಕೌನ್ಸಿಲ್‌ಗಳಲ್ಲಿ ರಾಷ್ಟ್ರೀಯ ಪಕ್ಷದವರು ಒಂದಾಗಬೇಕೆಂದು ಅಭಿಪ್ರಾಯ ತಾಳಿದರು. ಇತ್ತ ಮಹಾತ್ಮರ ಶಿಷ್ಯರಾದ ರಾಜಗೋಪಾಲಚಾರ್ಯ ಮತ್ತು ಅನ್ಸಾರಿ ಮುಂತಾದವರು ಹಾಗೆ ಮಾಡುವದು ಯೋಗ್ಯವಲ್ಲವೆಂದು ಹೇಳುತ್ತಿದ್ದರು. ಇಂಥ ಸಮಯದಲ್ಲಿ ರಾಷ್ಟ್ರವು ಯಾರನ್ನು ಹಿಂಬಾಲಿಸಬೇಕು ಎಂಬ ವಿಚಾರಿಸುವ ಕಾಲದಲ್ಲಿ ಗಂಗಾಧರರಾವ್ ದೇಶಪಾಂಡೆಯವರು ಲೋಕಮಾನ್ಯರ ಪಟ್ಟದ ಶಿಷ್ಯರು ಹಾಗೂ ಮಹಾತ್ಮರ ಪ್ರೀತಿಗೆ ಪಾತ್ರರಾದವರಾಗಿದ್ದರು. ಗಂಗಾಧರರಾಯರು ಮಹಾತ್ಮರ ಸ್ವರಾಜ್ಯ ಸ್ಥಾಪನೆಗೆ, ರಾಮರಾಜ್ಯ ಸ್ಥಾಪನೆಗೆ ಅಸಹಕಾರ ಮಾರ್ಗವನ್ನು ಅನುಸರಿಸುವದು ಅವಶ್ಯವೆಂದು ಸ್ಪಷ್ಟಪಡಿಸಿದರು.

ಈ ಮಹಾನ ವ್ಯಕ್ತಿಗಳು ಬಾಗಲಕೋಟಗೆ ಬರುತ್ತಿರುವ ವಿಷಯವನ್ನು ಬಾಗಲಕೋಟ ತಾಲೂಕಾ ಕಾಂಗ್ರೆಸ್ ಕಮೀಟಿಯ ಕಾರ್ಯದರ್ಶಿಗಳಾದ ತಮ್ಮಣ್ಣಾಚಾರ್ಯ ಪುರೋಹಿತ ಅವರು ೨೬ ಅಕ್ಟೋಬರ್ ೧೯೨೧ರ ನವಜೀವನ ಪತ್ರಿಕೆಯಲ್ಲಿ 'ಬಾಗಲಕೋಟಗೆ ದೇಶಭಕ್ತರ ಆಗಮನ' ಎಂಬ ಶೀರ್ಷಿಕೆ ಅಡಿಯಲ್ಲಿ ಹೀಗೆ ಜಾಹೀರಾತು ನೀಡಿದರು. "ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳಾದ ಗಂಗಾಧರರಾವ್ ದೇಶಪಾಂಡೆ, ಮಜಲಿ ಹಾಗೂ ಹಣಮಂತರಾವ ಕೌಜಲಗಿಯವರು ಇಲ್ಲಿಗೆ ಇದೇ ತಿಂಗಳಲ್ಲಿ ಬರುತ್ತಿರುವರು. ಸ್ವರಾಜ್ಯ ಮಂದಿರದಲ್ಲಿ ಅಷ್ಟೈಶ್ವರ್ಯವನ್ನು ಮಾಡಿ ಸ್ವರಾಜ್ಯದೇವಿಯ ಅನುಗ್ರಹವನ್ನು ಪಡೆದು ಅಪರಿಮಿತ ಉತ್ಸಾಹದಿಂದ ಕರ್ನಾಟಕ ಮುಖಾಂತರವಾಗಿ ಹಿಂದೂ ಮಾತೆಯ ಸೇವೆಯನ್ನು ಮಾಡಲು ಕಂಕಣಬದ್ಧವಾಗಿರುವರು. ಈ ತ್ರಿಮೂರ್ತಿಗಳು ಪವಿತ್ರದರ್ಶನದ ಲಾಭವನ್ನು ಹೊಂದಿ ಅವರು ಹೇಳುವ ನಾಲ್ಕು ಉಪದೇಶದ ಮಾತುಗಳನ್ನು ಕೇಳಿಕೊಂಡು ಧನ್ಯರಾಗಬೇಕೆಂದು ಎಲ್ಲರಿಗೂ ಸವಿನಯ ಪ್ರಾರ್ಥನೆಯಾಗಿದೆ. ಇವರು ಯಾವ ದಿವಸ ಯಾವ ಗಾಡಿಗೆ

ಬರುತ್ತಾರೆಂಬುದನ್ನು ಹಸ್ತ ಪತ್ರಿಕೆಗಳ ಮುಖಾಂತರವಾಗಿ ತೀವ್ರ ತಿಳಿಸಲಾಗುವದು ಈ ಸುಸಂಧಿಯನ್ನು ಯಾರೂ ಕಳೆದುಕೊಳ್ಳಕೂಡದು."[೨೬]

"ಗಂಗಾಧರರಾಯರು ಮಜಲಿ ಮತ್ತು ಹಣಮಂತರಾಯ ಕೌಜಲಗಿಯವರು ಬರುವರೆಂದು ಗುರುವಾರ ೯ ನವ್ಹೆಂಬರ್ ೧೯೨೨ರಂದು ತಂತಿ ಬಂದ ಕೂಡಲೇ ಎಲ್ಲರಿಗೂ ಅತ್ಯಂತ ಆನಂದವಾಯಿತು. ಹಸ್ತ ಪ್ರತಿಗಳ ಮೂಲಕ ಎಲ್ಲ ಕಡೆಗಳಲ್ಲಿ ಆನಂದದಾಯಕ ಸುದ್ಧಿಯನ್ನು ಹರಡಿಸಲಾಯಿತು."[೨೭]

ತಾರೀಖು ೧೦-೧೧-೧೯೨೨ ರಂದು ಸಾಯಂಕಾಲ ೬:೦೦ ಗಂಟೆಗೆ ಗಂಗಾಧರರಾವ್ ದೇಶಪಾಂಡೆ; ಮಜಲಿ ಮತ್ತು ಕೌಜಲಗಿ ಹಣಮಂತರಾಯರು ಬಾಗಲಕೋಟಗೆ ಬಂದರು. ಸ್ಟೇಷನಿನಲ್ಲಿಯೇ ಅವರನ್ನು ಸ್ವಾಗತ ಮಾಡಲು ಪ್ರಮುಖ ಸ್ವಯಂಸೇವಕರು ನೆರೆದಿದ್ದರು. ೭:೦೦ ಗಂಟೆಗೆ ಶೇಠರಾಮದಾಸ ದರಬಾರ ಇವರ ಬಂಗ್ಲೆಯಲ್ಲಿ ಸಭೆ ಸೇರಿತು. ಸುಮಾರು ೨೫೦೦೦ ಜನರು ಕೂಡಿದ್ದರು. ಮೊದಲ ಇಲ್ಲಿಯ ಕಾಂಗ್ರೆಸ್ ಕಮಿಟಿ ಮತ್ತು ಖಿಲಾಫತ್ ಕಮಿಟಿ ವತಿಯಿಂದ ದೇಶಭಕ್ತರಿಗೆ ಮಾನ ಪತ್ರವನ್ನು ಅರ್ಪಿಸಿತು.

ಮಾನ ಪತ್ರ

ವಂದೇ ಮಾತರಂ ಅಲ್ಲಾ ಹೋ ಅಕ್ಬರ್

ದೇಶಭಕ್ತ ಮಹಾಶಯರೇ –

ಸ್ವಾರ್ಥ ತ್ಯಾಗದ ಮೂರ್ತಿಗಳಾದ ತಮ್ಮ ಸ್ವಾಗತವನ್ನು ಇಲ್ಲಿಯ ಖಿಲಾಫತ್ ಮತ್ತು ಕಾಂಗ್ರೆಸ್ ಕಮಿಟಿಗಳ ವತಿಯಿಂದ ಬಾಗಲಕೋಟೆಯ ನಿವಾಸಿಗಳಾದ ನಾವು ಅತೀ ವಿಜೃಂಭಣೆಯಿಂದ ಮಾಡಬೇಕೆಂದು ಕುತೂಹಲವನ್ನು ತಾಳಿದ್ದರೂ ತಮ್ಮ ಯೋಗ್ಯತೆಗೆ ಸರಿಯಾಗಿ ಅತಿಥ್ಯವನ್ನು ಮಾಡುವ ಸಾಮರ್ಥ್ಯವು ನಮ್ಮಲ್ಲಿ ಇರುವುದಿಲ್ಲ. ನಮ್ಮ ಊರಲ್ಲಿ ಅಸಹಕಾರದ ಸ್ಫೂರ್ತಿಯನ್ನು ಹುಟ್ಟಿಸಿದ ದೇ. ಭ. ಜಯರಾಯರ ನಿಧನದಿಂದ ನಮಗುಂಟಾದ ಹಾನಿಯನ್ನು ತಮ್ಮ ಮುಂದೆ ನಿವೆದಿಸದೆ ಇರಲಾರೆವು. ನವಕರಶಾಹಿಯ ಕುತಂತ್ರದಿಂದ ಕಾರಾಗೃಹಕ್ಕೆ ಕಳಿಸಲ್ಪಟ್ಟ ನಮ್ಮ ಜಿಲ್ಲೆಯ ಮುಖಂಡರಾದ ದೇ.ಭ. ಶ್ರೀನಿವಾಸರಾಯರು ಉಜ್ವಲ ಬಾಲ ಮೂರ್ತಿಗಳಾದ ಜಯರಾಯರು ಈ ಸಮಯದಲ್ಲಿದ್ದರೆ ತಮ್ಮ ಸ್ವಾಗತಕ್ಕೆ ವಿಶೇಷವಾದ ಶೋಭೆ ಬರುತ್ತಿತ್ತು. ಉಭಯತರ ಸಹಾಯವು ನಮಗೆ ತಪ್ಪಿದ್ದರಿಂದ ತಮ್ಮ ಸ್ವಾಗತದಲ್ಲಿ ಏನಾದರೂ ಕುಂದು ಕೊರತೆಗಳು ಉಂಟಾದರೆ ಉದಾರ ಅಂತಃಕರಣಿಗಳಾದ ತಾವು ಅವುಗಳನ್ನು ಕ್ಷಮಿಸುವಿರಿ ಎಂದು ನಂಬಿದ್ದೇವೆ.

ತಮ್ಮಂಥ ಆಗರ್ಭ ಶ್ರೀಮಂತರು ದೇಶ ಹಿತಕ್ಕಾಗಿ ನಾನಾ ತರಹದ ಕಷ್ಟಗಳನ್ನು ಅನುಭವಿಸುವದನ್ನು ನೋಡಿ ನಮಗೆ ಅತೀ ವ್ಯಸನವಾಗುತ್ತಿದ್ದರೂ ತಮ್ಮಂಥ ಸತ್ಪುರುಷರಲ್ಲಿ ಪರಮಾತ್ಮನು ದೇಶ ಸೇವೆಯ ವ್ರತದ ಪ್ರೇರಣೆಯನ್ನು ಮಾಡಿ ತಮ್ಮ ಮುಖಾಂತರವಾಗಿ ಕರ್ನಾಟಕದ ಹೆಸರನ್ನು ಇಡಿ ಹಿಂದೂಸ್ಥಾನದಲ್ಲೆಲ್ಲ ಮುಂದೆ ತಂದದ್ದಕ್ಕಾಗಿ ವಿಶೇಷ ಆನಂದವೂ ಅಭಿಮಾನವೂ ಅನಿಸುತ್ತಿರುವುದು ಕರ್ನಾಟಕವು ಮೊದಲೆ ಹಿಂದುಳಿದ ಪ್ರಾಂತ, ಜಾತಿ, ದ್ವೇಷ ಮತ್ತು ಸ್ವಾರ್ಥಗಳಿಂದ ಸಂಪೂರ್ಣವಾದದ್ದು, ಇಂಥ ಕರ್ನಾಟಕದಲ್ಲಿ ಅಸಹಕಾರ ಚಳವಳಿಯನ್ನು ಯಶಸ್ವಿಯಾಗಿ ಮಾಡುವದೆಂದರೆ ಸಾಮಾನ್ಯ ಕೆಲಸವಲ್ಲ. ಇದನ್ನು ಕರ್ನಾಟಕದಲ್ಲಿ ಯಶಸ್ವಿಯಾಗಿ ಮಾಡಿದ್ದರ ಕೀರ್ತಿಯು ತಮಗೆ ಸಂಪೂರ್ಣವಾಗಿ ಇರುವುದು. ತಾವು ಲೋಕಮಾನ್ಯರ ಮುಖ್ಯ ಶಿಷ್ಯರು ಅವರ ಚಳವಳಿಯ ರಹಸ್ಯವನ್ನು ಚೆನ್ನಾಗಿ ಅರಿತವರು ಮಹಾತ್ಮರ ಪಟ್ಟ ಶಿಷ್ಯರು ಅವರ ಚಳವಳಿಯ ರಹಸ್ಯವನ್ನಾದರೂ ಪೂರ್ಣವಾಗಿ ತಿಳಿದವರು. ಉಭಯ ಮಹಾವಿಭೂತಿಗಳ ಪರಮನುಗ್ರಹಕ್ಕೆ ಪಾತ್ರರಾದ ತಮಗೆ ಕರ್ನಾಟಕ ಧುರೀಣತ್ವವನ್ನು ವಹಿಸುವ ಸದ್ಬುದ್ಧಿಯನ್ನು ಪರಮೇಶ್ವರನು ಕೊಡುವದೆಂದರೆ ಕರ್ನಾಟಕದ ಭಾಗ್ಯವಂತಲೇ ತಿಳಿಯುವದು. ತಮ್ಮಲ್ಲಿ ಅಲೌಕಿಕವಾದ ಧೈರ್ಯವಿದ್ದು ತಾವು ಸ್ಥಿರ ಬುದ್ಧಿಗಳಾಗಿರುವಿರಿ. ಇದರಿಂದ ತಮ್ಮಲ್ಲಿ ಆತ್ಮವಿಶ್ವಾಸವು ದೃಢವಾಗಿರುವುದು. ನಮ್ಮಲ್ಲಿ ಕಂಡುಬರುವ ಜಾತಿ ಜಾತಿಗಳಲ್ಲಿಯ ದ್ವೇಷವೂ ಮತಭೇದಗಳೂ ಮುಖಂಡರ ಸ್ವಾರ್ಥ ತ್ಯಾಗದಿಂದ ಸ್ವಲ್ಪ ಅವಧಿಯಲ್ಲಿಯೇ ನಾಶ ಹೊಂದುವದೆಂದು ತಮಗೆ ವಿಶ್ವಾಸವಿರುವದು, ಆದ್ದರಿಂದ ಉಳಿದ ಎಷ್ಟೋ ಪ್ರಾಂತಗಳು ಹಿಂದು ಮುಂದೆ ನೋಡುತ್ತಿರುವಾಗ ಮಹಾತ್ಮರ ಚಳವಳಿಗೆ ಕರ್ನಾಟಕವು ಉತ್ಕೃಷ್ಟವಾದ ಭೂಮಿಕೆಯಾಗಿರುವದೆಂಬ ನಂಬಿಕೆಯಿಂದ ಧೈರ್ಯ ಮಾಡಿ ಈ ಪ್ರಾಂತದಲ್ಲಿ ಮಹಾತ್ಮರ ಸಂಚಾರಮಾಡಿಸಿ ಕರ್ನಾಟಕದ ಪ್ರತಿಯೊಂದು ಸ್ಥಳದಲ್ಲಿ ಅಸಹಕಾರ ಚಳವಳಿಯು ಫಲಪ್ರದವಾಗಿ ಮಾಡಲಿಕ್ಕೆ ಸಹಾಯಕರಾದವರೂ ತಾವೇ ಇದಕ್ಕಾಗಿ ಕರ್ನಾಟಕವು ತಮಗೆ ತುಂಬಾ ಋಣಿಯಾಗಿರುವದು.

ತಮ್ಮಂಥ ಮುಖಂಡರ ಪ್ರಯತ್ನದಿಂದ ಅಸಹಕಾರ ರಹಸ್ಯವು ಹಿಂದೂಸ್ಥಾನದಲ್ಲೆಲ್ಲ ತಿಳಿದು ಹೋಗಿದ್ದು ಅಲ್ಪಾವಧಿಯಲ್ಲಿಯೇ ರಾಷ್ಟ್ರದಲ್ಲಿ ಉಂಟಾದ ಜಾಗೃತಿಯು ಈ ಚಳವಳಿಯ ಪ್ರಭಾವ ದ್ಯೋತಕವಾಗಿರುವುದು. ಆದರೆ ಇತ್ತಲಾಗಿ ರಾಷ್ಟ್ರದ ಮುಖಂಡರಲ್ಲಿ ಮತಭೇದ ಉಂಟಾಗ ಹತ್ತಿದ್ದು ನಮ್ಮ ವೈರಿಗಳು ಇದರ ಲಾಭವನ್ನು ತೆಗೆದುಕೊಳ್ಳಬೇಕೆಂದು ನಿರೀಕ್ಷಿಸುತ್ತಿರುವರು. ಇಂಥ ಪ್ರಸಂಗದಲ್ಲಿ ಜಾತಿ ಭೇಧ ಉಂಟಾಗದಂತೆ ಜಾಗೃತಿಯಿಂದ ನಡೆಯುವದು ಅವಶ್ಯಕವಾಗಿರುವದು. ಅವತಾರಿ ಪುರುಷರಾದ ಮಹಾತ್ಮರ ಪ್ರಭಾವದಿಂದಲೂ ಅಲಿ ಬಂಧುಗಳ ಪ್ರಯತ್ನದಿಂದಲೂ ರಾಷ್ಟ್ರದಲ್ಲಿ ಇಷ್ಟು ಅದ್ಭುತವಾದ ಜಾಗೃತಿ ಉಂಟಾಗಿರುವದು ಆದರ ಮೂಲ ಕಾರಣವನ್ನು ಎಡದಲ್ಲಿಟ್ಟು ಮಹಾತ್ಮರ

ಅಸಹಕಾರ ತತ್ವಕ್ಕೆ ಬಾಧೆ ಬರದಂತೆ ಕಾಂಗ್ರೆಸ ಕಾರ್ಯಕ್ರಮದಲ್ಲಿ ಏನಾದರೂ ಕಡಿಮೆ ಮಾಡುವದು ಕಂಡರೆ ಹಾಗೆ ಮಾಡಬಹುದು. ಆದರೆ ಕಾಂಗ್ರೆಸದಲ್ಲಿ ಮತ ಭೇದವಾಗದಂತೆ ತಾವೆಲ್ಲ ಮುಖಂಡರು ಪ್ರಯತ್ನಪಟ್ಟು ಏಕಮತದಿಂದ ನಿರ್ಣಯಿಸುವಿರೆಂದು ನಂಬಿದ್ದೇವೆ. ಗಂಗಾಧರರಾಯರೇ ತಮ್ಮ ಮೇಲೆ ಕರ್ನಾಟಕದ ಪೂರ್ಣ ನಂಬಿಕೆ ಇದೆ. ತಾವು ತೋರಿಸಿದ ಮಾರ್ಗದಿಂದ ನಡೆಯಲಿಕ್ಕೆ ನಾವು ಸಿದ್ಧರಿರುವೆವು.

ದೇಶಭಕ್ತ ದತ್ತೋಪಂತ ಮಜಲಿಯವರೇ

ಕರ್ನಾಟಕದ ಜನರು ತಮಗೆ ವಿಶೇಷವಾಗಿ ಉಪಕೃತರಾಗಿರುವರು. ಚಿಕ್ಕ ವಯಸ್ಸಿನಲ್ಲಿ ಐಹಿಕ ಸುಖವನ್ನು ದುರ್ಲಕ್ಷಿಸಿ ಇಂಥ ಕಷ್ಟಮಯವಾದ ವ್ರತವನ್ನು ಸ್ವೀಕರಿಸುವದೆಂದರೆ ಸಣ್ಣ ಕೆಲಸವಲ್ಲ. ತಮ್ಮಲ್ಲಿ ಮಹಾತ್ಮರ ತತ್ವಗಳು ಸಂಪೂರ್ಣವಾಗಿ ಭೇದಿಸಿದ್ದು ಕರ್ನಾಟಕದಲ್ಲಿ ವಿಚಾರ ಕ್ರಾಂತಿಯನ್ನುಂಟು ಮಾಡಿದ ಶ್ರೇಯಸ್ಸು ತಮಗಿರುವದು. ವಕೀಲಿಯನ್ನು ಬಿಟ್ಟು ಆಯುಷವನ್ನೆಲ್ಲ ದೇಶ ಸೇವೆಯಲ್ಲಿಯೇ ಕಳೆಯುವದೆಂಬ ದೃಡ ನಿಶ್ಚಯವನ್ನು ಮಾಡಿ ತರುಣ ಜನರಿಗೆ ಸ್ವಾರ್ಥ ತ್ಯಾಗದ ಉದಾಹರಣೆಯನ್ನು ಹಾಕಿಕೊಟ್ಟಿದ್ದಕ್ಕಾಗಿ ನಿಮ್ಮನ್ನು ಎಷ್ಟು ಹೊಗಳಿದರೂ ತೀರದು.

ದೇಶಭಕ್ತ ಹಣಮಂತರಾಯರೇ

ವಿಜಾಪೂರ ಜಿಲ್ಲೆಯಲ್ಲಿ ವಿಶೇಷತಃ ನಮ್ಮ ಭಾಗದಲ್ಲಿ ಕಂಡು ಬರುವ ಜಾಗೃತಿಯು ಖಾದಿ ಪ್ರಸಾರವು ತಮ್ಮ ಸಾಹಸದ ಫಲವೆಂಬುವದು ಬೇರೆ ಹೇಳಬೇಕಾಗಿಲ್ಲ. ವಕೀಲಿಯಂತ ಮೋಹಕ ವ್ಯವಸಾಯವನ್ನು ಬಿಟ್ಟು ಕಾರಾಗೃಹದ ಯಾತನೆಗಳನ್ನು ಅನುಭವಿಸಲಿಕ್ಕೆ ಸಿದ್ಧರಾಗುವದೆಂದರೆ ನಿಮ್ಮ ಉಜ್ವಲವಾದ ದೇಶಾಭಿಮಾನವನ್ನು ವ್ಯಕ್ತಪಡಿಸುತ್ತದೆ. ಇಂಗ್ಲಿಷ ಶಿಕ್ಷಣವನ್ನು ಪಡೆಯುವದೆಂದರೆ ದ್ರವ್ಯ ಸಂಪಾದನೆಯ ಸಾಧನವೆಂಬ ನಮ್ಮ ಜನರಲ್ಲಿ ಬೇರೊಂದು ತಿಳವಳಿಕೆಯು ತಪ್ಪಾಗಿದ್ದು ಸುಶಿಕ್ಷಿತರ ಕರ್ತವ್ಯವು ಅಶಿಕ್ಷಿತರನ್ನು ಉದ್ಧಾರ ಮಾಡುವದೇ ಆಗಿದೆ ಎಂದು ತಾವು ಎಲ್ಲರ ನಿದರ್ಶನಕ್ಕೆ ತಂದು ಕೊಟ್ಟಿರುವಿರಿ. ತಾವು ಮತ್ತು ದತ್ತೋಪಂತ ಅವರು ಅಶಿಕ್ಷಿತರನ್ನು ಉದ್ಧಾರ ಮಾಡುವದೇ ಆಗಿದೆ ಎಂದು ತಾವು ಎಲ್ಲರ ನಿದರ್ಶನಕ್ಕೆ ತಂದು ಕೊಟ್ಟಿರುವಿರಿ. ತಾವು ಮತ್ತು ದತ್ತೋಪಂತರು ಸ್ವರಾಜ್ಯವನ್ನು ತೀವ್ರ ದೊರಕಿಸಲಿಕ್ಕೆ ತಮ್ಮ ಗುರುವರ್ಯ ಗಂಗಾಧರರಾಯರಿಗೆ ಸಹಾಯಕರಾಗುವಿರೆಂದು ನಂಬಿದ್ದೇವೆ. ತಮ್ಮಂಥ ಮುಖಂಡರನ್ನು ಹಿಂಬಾಲಿಸುವಷ್ಟು ಧೈರ್ಯವನ್ನು ನಮಗೆ ಕೊಡಲೆಂತಲೂ ಕರ್ನಾಟಕದ ಜಾಗೃತಿಯ ತ್ರಿಮೂರ್ತಿಗಳಾದ ತಮಗೆ ಆಯುರಾರೋಗ್ಯವನ್ನು ಕೊಡಲೆಂತಲೂ ಪರಮೇಶ್ವರನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ."[೨೮]

ಬಾಗಲಕೋಟ

ತಮ್ಮ ಅನುಯಾಯಿಗಳಾದ

ಬಾಗಲಕೋಟೆಯ ನಿವಾಸಿಗಳು

೧೦-೧೧-೧೯೨೨

ಮಾನಪತ್ರ ಸ್ವೀಕರಿಸಿ ಮೂವರು ನಾಯಕರು ಮಾತನಾಡಿದರು. ಕೌಜಲಗಿ ಹಣಮಂತರಾಯರು ಭಾಷಣ ಪ್ರಾರಂಭ ಮಾಡಿ "ತಾವು ಜೈಲಿನಲ್ಲಿದಾಗ ಬಹಳ ಸ್ವತಂತ್ರ ಇದ್ದೇವು. ಅಲ್ಲಿ ತಮಗೆ ಎಂದು ಅಂಜಿಕೆ ಇದ್ದಿಲ್ಲ. ಆದರೆ ಈಗ್ಗೆ ಹೊರಗೆ ಬಂದ ಮೇಲೆ ಪೋಲೀಸರ ಅಂಜಿಕೆ, ಮಾಮಲೇದಾರರ ಅಂಜಿಕೆ, ಈ ಪ್ರಕಾರ ನಾವು ಎಲ್ಲರಿಗೂ ಅಂಜಬೇಕಾಗುತ್ತದೆ. ಆದ್ದರಿಂದ ಈ ಅಂಜಿಕೆಯನ್ನು ಹೋಗಲಾಡಿಸುವ ಕುರಿತು ನೀವು ಜೈಲಿಗೆ ಹೋಗಿರಿ ಮತ್ತು ಜೈಲಿನಲ್ಲಿದ್ದಾಗ ಹೊರಗಿನವರು ಅಂಜಿ ಕೆಲಸ ಮಾಡುವದನ್ನು ಬಿಟ್ಟಿರುವರೋ ಹೇಗೆ ಎಂಬದೊಂದೆ ಚಿಂತೆ ಇತ್ತು ಹೊರತು ಉಳಿದ ಯಾವ ಕಾರಣ ಸಲುವಾಗಿಯೂ ನಾವು ಚಿಂತೆ ಮಾಡುತ್ತಿದ್ದಿಲ್ಲ ಮತ್ತು ಮಹಾತ್ಮರನ್ನು ಭೇಟಿಯಾದಾಗ ಈ ಚಳವಳಿಯಿಂದಲೇ ಸ್ವರಾಜ್ಯ ಸಿಗುವದು ಆದ್ದರಿಂದ ಈ ಚಳವಳಿಯನ್ನು ವಿಶೇಷ ಜೋರಿನಿಂದ ನಡೆಸಲಿಕ್ಕೆ ಉಪದೇಶಿಸಲಿಕ್ಕೆ ಹೇಳಿದ್ದಾರೆ ಎಂದು ಹೇಳಿದರು. ನಂತರ ದೇಶಭಕ್ತ ಮಜಲಿಯವರು ಭಾಷಣ ಮಾಡಿ 'ತಾವು ಜೇಲಿಗೆ ಹೋಗಿ ಬಂದದ್ದಕ್ಕೆ ನೀವು ನನಗೆ ಮಾನ ಪತ್ರವನ್ನು ಕೊಡದೇ ಅಸಹಕಾರತ್ವಕ್ಕೆ ಮಾನ ಮಾಡುತ್ತಿದ್ದೀರಿ. ಇದರ ಮೇಲಿಂದಲೆ ಅಸಹಕಾರ ಚಳವಳಿಯ ಮಹತ್ವವು ಎಷ್ಟು ಇರುವದೆಂಬುವದು ತಿಳಿಯುತ್ತದೆ. ಅಸಹಯೋಗ ಚಳಚಳಿಯ ಮುಖ್ಯಾಂಗವಾದ ಖಾದಿ ಚಳವಳಿಯನ್ನು ಎಲ್ಲರೂ ಬಹಳ ಜೋರಿನಿಂದ ಮಾಡತಕ್ಕದ್ದು, ಅದರಿಂದಲೆ ಹಿಂದೂಸ್ಥಾನವು ಸ್ವರಾಜ್ಯವನ್ನು ಗಳಿಸುತ್ತದೆ. ಎರಡು ವರ್ಷಗಳವರೆಗೆ ನಾವು ಅಖಂಡ ಉಪದೇಶ ಮಾಡುತ್ತಿದ್ದರೂ ಇನ್ನು ಎಷ್ಟೋ ಜನರು ಗಿರಣಿ ನೂಲಿನ ಅರಿವೆಯನ್ನು ಉಪಯೋಗಿಸುತ್ತಾರೆ. ಇದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಇನ್ನು ಮೇಲಾದರೂ ನೀವೆಲ್ಲರೂ ಕೈನೂಲಿನ ಖಾದಿಯನ್ನು ಉಪಯೋಗಿಸಿರಿ. ಹಾಗೂ ಎಲ್ಲರು ಈ ಹೊತ್ತಿನಿಂದ ನೂಲಹತ್ತಿರಿ ಎಂದು ಹೇಳಿದರು. ಗಂಗಾಧರರಾವ ದೇಶಪಾಂಡೆಯವರು ತಮ್ಮ ಮಾತನ್ನು ಆರಂಭಿಸಿ 'ಈಗ ದೇಶದಲ್ಲಿ ಕೌನ್ಸಿಲ್‌ದಲ್ಲಿ ಸೇರಬೇಕೋ ಸೇರಬಾರದೋ ಎಂಬುವ ಪ್ರಶ್ನೆ ಉಪಸ್ಥಿತವಾಗಿರುವದು. ಎಷ್ಟೋ ಜನರು ಲೋಕಮಾನ್ಯರ ಮಾರ್ಗವನ್ನೇ ಅನುಸರಿಸುತ್ತಿದ್ದಾರೆ. ಹಾಗೂ ಮಹಾತ್ಮರ ಮತದಲ್ಲಿಯೂ ಲೋಕಮಾನ್ಯರ ಮತದಲ್ಲಿಯೂ ವೈಷಮ್ಯ ಊಂಟು ಎಂದು ಹೇಳುತ್ತಾರೆ. ಇದು ಶುದ್ಧ ಭ್ರಮೆಯಾಗಿದೆ. ಮಹಾತ್ಮರಲ್ಲಿ ಹಾಗೂ ಲೋಕಮಾನ್ಯರಲ್ಲಿ ಯಾವತರಹದ ಭೇದವು ನನಗಂತೂ ಕಂಡು ಬರುವದಿಲ್ಲ. ನಾನು ನಿಮ್ಮ ಮಾನಪತ್ರದಲ್ಲಿ ಅಂದಂತೆ ಲೋಕಮಾನ್ಯರ ಶಿಷ್ಯ ಇದ್ದದ್ದು ನಿಜ. ಲೋಕಮಾನ್ಯರ ಸಂಗಡ ಎಷ್ಟೋ ದಿವಸಗಳವರೆಗೆ ಕೂಡಿ ಇರುವ ಭಾಗ್ಯವು ನನ್ನ ಪಾಲಿಗೆ ಬಂದಿದೆ. ಆದ್ದರಿಂದಲೇ ಲೋಕಮಾನ್ಯರ ಚಳವಳಿ ರಹಸ್ಯವು ನನಗೆ ಗೊತ್ತಿದೆ. ನೀವು ಮಾನಪತ್ರದಲ್ಲಿ ಅಂದಂತೆ ಕಾಂಗ್ರೆಸದಲ್ಲಿ ಮತಭೇದವಾಗದಂತೆ ನಾವೆಲ್ಲರೂ ಪ್ರಯತ್ನ ಮಾಡುತ್ತೇವೆ. ಮತ್ತು ಆತರಹದ ಮತಭೇದವಾಗುವ ಸಂಬಂಧವಾದರೂ ಇರುವದಿಲ್ಲ. ಕಾಂಗ್ರೆಸ್ಸಿನ ಠರಾವಿನಂತೆ ಮುಂದೆ ಎಲ್ಲ ಜನರು ಕೂಡಿಯೇ ಕೆಲಸ ಮಾಡಹತ್ತುತ್ತಾರೆ. ಇದರಲ್ಲಿ ಏನೂ ಸಂದೇಹವಿಲ್ಲ. ಆದ್ದರಿಂದ ನೀವು ಈಗ್ಗೆ ಯಾವತರಹದ ಭಯವನ್ನು ಮನಸ್ಸಿನಲ್ಲಿ ತರದೇ ವಿಧಾಯಕ ಕಾರ್ಯಕ್ರಮವನ್ನು ಅಮಲಿನಂತೆ ತರಬೇಕು ಮತ್ತು ವರ್ಕಿಂಗ್ ಕಮಿಟಿ

ಹಾಗೂ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಕೌನ್ಸಿಲದ ಬಹಿಷ್ಕಾರದ ವಿಷಯವಾಗಿ ಕರ್ನಾಟಕದ ಅಭಿಪ್ರಾಯವೇನಿರುವದನ್ನು ನನಗೆ ಹೇಳಬೇಕಾಗುತ್ತದೆ. ಆದ್ದರಿಂದ ನೀವೆಲ್ಲರೂ ನನಗೆ ಯಾವ ರೀತಿಯಿಂದ ಹೇಳಲು ಆಜ್ಞಾಪಿಸುವಿರೋ ಅದರಂತೆ ಹೇಳುತ್ತೇನೆ. ಎಲ್ಲರೂ ಹೇಳಿ ತಮ್ಮ ಭಾಷಣ ಮುಗಿಸಿದರು. ನೆರೆದ ಎಲ್ಲ ಜನರು ಕೌನ್ಸಿಲ್‌ಗಳಿಗೆ ಸಂಪೂರ್ಣವಾಗಿ ಬಹಿಷ್ಕಾರ ಹಾಕುವದೇ ದೇಶಕ್ಕೆ ಹಿತಕರವಾದದ್ದು ಎಂದು ತಮ್ಮ ಅಭಿಪ್ರಾಯ ತಿಳಿಸಿದರು."[೨೯] ಜಿಲ್ಲೆಯಾದ್ಯಂತ ಶ್ರೀನಿವಾಸ ಕೌಜಲಗಿ, ಹರ್ಡೇಕರ್, ಗಂಗಾಧರರಾವ್ ದೇಶಪಾಂಡೆ, ಮಜಲಿ ಮುಂತಾದವರು ಅಸಹಕಾರ ಚಳವಳಿಯ ಕುರಿತು ಪ್ರಚಾರ ಕೈಗೊಂಡರು.

"ಬಾಗಲಕೋಟದಲ್ಲಿ ಕಾಂಗ್ರೆಸ ಮತ್ತು ಖಿಲಾಫತ್ ಸಮಿತಿ ವತಿಯಿಂದ ಅಲಿ ಬಂಧುಗಳ ಭಾವಪಟಗಳ ಮೆರವಣಿಗೆ ಮಾಡಿ ಆಗ ೧೫೭೨ ರೂಪಾಯಿಗಳನ್ನು ಕೂಡಿಸಿ ಹಣವನ್ನು ಕೇಂದ್ರ ಖಿಲಾಫತ್ ಕಮಿಟಿಗೆ ಕಳುಹಿಸಲಾಯಿತು".[೩೦]

"ರಂಗರಾವ್ ತಿಳಿಗೋಳ ಸಿಂದಗಿ ತಾಲೂಕಿನಲ್ಲಿ ಪ್ರಥಮವಾಗಿ ಎಲ್.ಎಲ್.ಬಿ. ಪದವಿಧರ ವಕೀಲರಾಗಿದ್ದರು. ಇವರು ಖಿಲಾಫತ್ ಚಳವಳಿಯ ಪ್ರವರ್ತಕರಾದ ಅಲಿ ಸಹೋದರರ ಜೊತೆ ಚಳವಳಿಯಲ್ಲಿ ಭಾಗವಹಿಸಿದ್ದರು. ಅವರ ಜೊತೆ ಸಂಚರಿಸುತ್ತಿದ್ದರು".[೩೧]

೫.೨.೨ ರಚನಾತ್ಮಕ ಕಾರ್ಯಗಳು

ಅಸಹಕಾರ ಚಳವಳಿಯ ಸಮಯದಲ್ಲಿ ಬ್ರಿಟಿಷ ಸರಕಾರಕ್ಕೆ ಆಡಳಿತದಲ್ಲಿ ಅಸಹಕಾರ ತೋರಿಸುವ ಜೊತೆಗೆ ಖಾದಿಪ್ರಸಾರ ಮದ್ಯಪಾನ ನಿಷೇದ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

೧. ಖಾದಿ ಪ್ರಸಾರ

ಬಾಗಲಕೋಟವು ನೂಲುವ ಕೇಂದ್ರವಾಗಿತ್ತು. ಚರಖಾ ಸಂಘಗಳನ್ನು ಸ್ಥಾಪಿಸುವ ಮೂಲಕ ನೇಕಾರರ ಸಂಖ್ಯೆ ೩೦ಕ್ಕೆ ಏರಿತು. ಬಾಗಲಕೋಟದಲ್ಲಿ ಖಾದಿ ಅಂಗಡಿಗಳು ಆರಂಭಗೊಂಡವು. ಅನವಟ್ಟಿ ಮತ್ತು ತಮ್ಮಣ್ಣಾಚಾರ್ಯ ಪುರೋಹಿತರು ಅವುಗಳ ವ್ಯವಸ್ಥಾಪಕರಾಗಿ ನೇಮಕಗೊಂಡರು."[೩೨]

"ರಾಘವೇಂದ್ರರಾವ್ ದೇಸಾಯಿಯವರು ಹುನಗುಂದ ಸುತ್ತಲಿನ ಹಳ್ಳಿಗಳಲ್ಲಿ ಸಂಚರಿಸಿ ಖಾದಿ ಪ್ರಸಾರ ಮಾಡಿದರು. ಟಗ್ಗರಸಿ ವಕೀಲರು ಜೋರಾಪುರ ಗುರುರಾಯರು ನೆರವಿನಿಂದ ನಾರಾಯಣ ದೇಸಾಯಿಯವರು ಬಾಗಲಕೋಟದಲ್ಲಿ ಹಾಗೂ ಭಜ್ಜಿ ಗ್ರಾಮದಲ್ಲಿ ಚರಕಾ ಸಂಘ ತೆರೆದು ನೂಲುವ, ನೇಯುವ ಕಾರ್ಯವನ್ನು ಆರಂಭಿಸಿದರು."[೩೩]

"ಹುನಗುಂದ ನರಹರಿ ಕಟ್ಟಿಯವರ ಕಕ್ಕಂದಿರ ಮಿತ್ರರು ಸಾಬರಮತಿ ಆಶ್ರಮದಿಂದ ಖಾದಿ ಬಟ್ಟೆಯನ್ನು ತರಿಸಿದ್ದರು. ಸ್ವಲ್ಪ ಅರಿವೆಯನ್ನು ಕೊಂಡು ಕಟ್ಟಿಯವರಿಗೆ ಎರಡು ಪೈಜಣ, ಎರಡು ಗಾಂಧಿ ಟೊಪ್ಪಿಗೆಯನ್ನು ಹೊಲಿಸಿ ಕೊಟ್ಟರು. ರಾಟೆಯಿಂದ ನೂಲು ತಗೆಯಲು ಹಣವಿಲ್ಲದಿದಾಗ ನಾಲ್ಕೆಂಟು ರಾಟೆಗಳನ್ನು ಹುನಗುಂದದಲ್ಲಿ ಪ್ರಾರಂಭಿಸಿದರು. ತಕಲಿ ನೂಲುವುದು ಹಲವರು ಪ್ರಾರಂಭಿಸಿದರು. ಕೌಜಲಗಿ ಹಣಮಂತರಾಯರು ಪ್ರಾಣೇಶಾಚಾರ್ಯ ಗುಡ್ಡದ ಅವರ ಜೊತೆ ಸೇರಿಕೊಂಡು ಹಳ್ಳಿಗಳಿಗೆ ಸಂಚರಿಸಿ ಖಾದಿ ಪ್ರಸಾರ ಮಾಡುತ್ತಿದ್ದರು ಗುಡೂರಗೆ ಹೋಗಿ ೬೦೦೦ ರೂಪಾಯಿಗಳನ್ನು ತಂದು ಖಾದಿ ಪ್ರಚಾರಕ್ಕೆ ನೀಡಲಾಯಿತು."[೩೪]

೨. ರಾಷ್ಟ್ರೀಯ ಶಾಲೆಗಳ ಸ್ಥಾಪನೆ

"ಶ್ರೀನಿವಾಸ ಕೌಜಲಗಿಯವರು ರಾಷ್ಟ್ರೀಯ ಶಿಕ್ಷಣದ ಪ್ರಸಾರಕ್ಕಾಗಿ 'ಸದರ್ನ ಮರಾಠ ಹೈಸ್ಕೂಲ್' ಎಂಬ ಶಿಕ್ಷಣ ಸಂಸ್ಥೆಯನ್ನು ವಿಜಾಪೂರದಲ್ಲಿ ಸ್ಥಾಪಿಸಿದರು. ತಮ್ಮ ಚಿರಂಜೀವಿ ಕೃಷ್ಣರಾಯರನ್ನು ಸರಕಾರಿ ಶಾಲೆಗೆ ಕಳುಹಿಸದೆ ರಾಷ್ಟ್ರೀಯ ಶಾಲೆಗೆ ಕಳುಹಿಸಿದರು. ಲಿಂಗಾಯತ, ಬ್ರಾಹ್ಮಣ, ಮರಾಠ, ಮುಸಲ್ಮಾನ್ ಮೊದಲಾದ ಜಾತಿಗಳ ಪ್ರತಿಷ್ಠಿತ ಗೃಹಸ್ಥರೊಂದಿಗೆ ಸೇರಿ ರಾಷ್ಟ್ರೀಯ ಶಿಕ್ಷಣ ಕಮಿಟಿಯನ್ನು ಸ್ಥಾಪಿಸಿದರು. ಈ ಕಮಿಟಿಯ ಪರವಾಗಿ ವಿಜಾಪೂರದಲ್ಲಿ ಒಂದು ಅಸ್ಪೃಶ್ಯ ವರ್ಗದವರಿಗಾಗಿ ಶಾಲೆಯನ್ನು ತೆರೆದರು. ಈ ಶಾಲೆಯಲ್ಲಿ ಸುಮಾರು ೭೦ ವಿದ್ಯಾರ್ಥಿಗಳಿದ್ದರು. ಹಾಗೂ ತಾವು ಗಾಂಧೀಜಿಯವರ ಆಶ್ರಮಕ್ಕೆ ಹೋಗುವಾಗ ಕಮಿಟಿಯ ಸದಸ್ಯರಿಗೆ ತಾವು ಹಿಂದಿರುಗುವದರವೊಳಗಾಗಿ ೨೦-೨೫ ಶಾಲೆಗಳನ್ನು ಸ್ಥಾಪಿಸಬೇಕೆಂದು ಸೂಚಿಸಿದರು."[೩೫]

"ಬಾಗಲಕೋಟದ ರಾಮದಾಸ ದರಬಾರ ಅವರು ಬಾಗಲಕೋಟ ರಾಷ್ಟ್ರೀಯ ಶಾಲೆಗೆ ಸ್ಥಳ ನೀಡಿದಂತೆ ವಿಜಾಪೂರದ ರಾಷ್ಟ್ರೀಯ ಶಾಲೆಗೂ ತಮ್ಮ ಬಂಗಲೆಯನ್ನು ನೀಡಿದರು. ಎಮ್.ಎ. ಓದಿದ್ದ ಹಣಮಂತರಾವ್ ಕೊಣ್ಣೂರು ಅವರು ಆ ಶಾಲೆಯ ಹೆಡ್ ಮಾಸ್ತರ ಆದರು."[೩೬]

ಬಾಗಲಕೋಟದಲ್ಲಿ ಸರಕಾರಿ ಶಾಲೆಗಳನ್ನು ವಿದ್ಯಾರ್ಥಿಗಳು ತ್ಯಜಿಸಿದ್ದರಿಂದ. ಸರಕಾರಿ ಶಾಲೆಗಳು ಮುಚ್ಚಿ ಹೋದವು. ರಾಷ್ಟ್ರೀಯ ಶಾಲೆ ತೆರೆದಾಗ ಕಾಲೇಜು ತ್ಯಜಿಸಿ ಬಂದ ತರುಣರೇ ಅದನ್ನು ನಡೆಸುವ ಜವಾಬ್ದಾರಿ ವಹಿಸಿಕೊಂಡರು. ವ್ಯಾಪಾರಿಗಳಾದ ರಾಮದಾಸ ದರಬಾರ ಅವರು ಹಣಕಾಸಿನ ಸಹಾಯ ಮಾಡುವದಲ್ಲದೆ ತಮ್ಮ ಫ್ಯಾಕ್ಟರಿಯ ವಖಾರದಲ್ಲಿ ಅದನ್ನು ನಡೆಸಲು ಸ್ಥಳಾವಕಾಶ ನೀಡಿದರು. "ತಮ್ಮಣ್ಣ ನಾಯಕ ಸವಣೂರು, ಕೃಷ್ಣರಾವ್ ಮಂಗಳವೇಡೆ, ರಾಮಣ್ಣ ನಾಯಕ, ಕೃಷ್ಣರಾವ ವಡವಡಗಿ ಮುಂತಾದ ದೇಶಭಕ್ತರು ಶಾಲೆಗೆ ಆರ್ಥಿಕ ಬೆಂಬಲ ನೀಡಿದರು. ಈ ಶಾಲೆಯ ಅಧ್ಯಾಪಕರಾಗಿ ಆರ್.ಎಸ್. ಪಂಚಮುಖಿ, ಆರ್.ಎಸ್. ಬೆಣ್ಣೂರು, ಜಿ.ವಿ. ಜೋರಾಪೂರ, ಎನ್.ವಿ. ಜೋರಾಪುರ, ಎಸ್.ಬಿ. ಸವಣೂರು, ಟಿ.ಎಸ್. ದಾತಾರ ಹಿರೇಕೆರೂರ, ಎನ್.ಆರ್. ಕಡಪಿ, ಜಿ.ಡಿ. ಕಟ್ಟಿ, ಎ.ಎಸ್.

ಮಳಗಿ ಮುಂತಾದವರು ದುಡಿದರು. ಈ ಶಾಲೆ ಧಾರವಾಡದ ಕೇಂದ್ರ ರಾಷ್ಟ್ರೀಯ ಶಿಕ್ಷಣ ಸಮಿತಿಯ ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು".[೩೭] "ಹುನಗುಂದದಲ್ಲಿ ರಾಷ್ಟ್ರೀಯ ಶಾಲೆಯನ್ನು ರಾಮಲಿಂಗನ ಗುಡಿಯಲ್ಲಿ ಆರಂಭವಾಯಿತು. ಜಯರಾವ್ ದೇಶಪಾಂಡೆಯವರು ಅಲ್ಪವೇತನದ ಮೇಲೆ ಶಿಕ್ಷಕರಾದರು. ೮-೧೦ ವಿದ್ಯಾರ್ಥಿಗಳು ಕಲಿಯುತ್ತಿದ್ದರು."[೩೮]

ರಾಷ್ಟ್ರೀಯ ಶಾಲೆಗಳಲ್ಲಿ ನೂಲುವದು ನೇಯುವದು ಗೃಹ ಕೈಗಾರಿಕೆ ಕಾರ್ಯಗಳನ್ನು ಆಟ ವ್ಯಾಯಾಮಗಳನ್ನು ಕಲಿಸುವ ಮೂಲಕ ದೈಹಿಕ ಹಾಗೂ ಮಾನಸಿಕವಾಗಿ ವಿದ್ಯಾರ್ಥಿಗಳನ್ನು ಸದೃಢ ಪಡಿಸುವ ಕಾರ್ಯಗಳನ್ನು ಮಾಡಲಾಗುತ್ತಿತ್ತು.

೩. ವಿದೇಶಿ ವಸ್ತುಗಳ ಬಹಿಷ್ಕಾರ

ಹೂವಿನ ಹಿಪ್ಪರಗಿಯಲ್ಲಿ ಹನುಮಂತ ಜೋಶಿಯವರ ಮನೆಗೆ ಮೂವರು ಖಾದಿದಾರಿಗಳು ಚಳವಳಿಯ ಪ್ರಚಾರಕ್ಕೆ ೧೯೨೧ರ ಜನವರಿ ೧೩ರಂದು ಬಂದಾಗ ಜೋಶಿಯವರ ಮನೆಯಲ್ಲಿ ಮಕರ ಸಂಕ್ರಮಣ ನಿಮಿತ್ಯ ಶ್ರೀ ಸತ್ಯನಾರಾಯಣ ಪೂಜೆ ಕಾರ್ಯಕ್ರಮವಿತ್ತು. ನಂತರ ಪ್ರಸಾದ ವಿತರಿಸಿದಾಗ "ಮೂವರು ಅತಿಥಿಗಳು ಪ್ರಸಾದ ಸ್ವೀಕರಿಸದೆ ಹಿಂದುರುಗಿಸಿ ಪ್ರಸಾದದಲ್ಲಿ ಪರದೇಶಿ ಸಕ್ಕರೆಯನ್ನು ಹಾಕಿ ಮಾಡಿದ್ದರಿಂದ ನಾವು ಪ್ರಸಾದವನ್ನು ತೆಗೆದುಕೊಳ್ಳುವದಿಲ್ಲ ಎಂದು ಹೇಳಿ ಮಹಾತ್ಮ ಗಾಂಧಿಯವರು ಪರದೇಶಿ ವಸ್ತುಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಅಲ್ಲದೆ ಈ ಪರದೇಶಿ ಸಕ್ಕರೆಯಲ್ಲಿ ಎಲುಬಿನ ಅಂಶ ಕೂಡಿರುತ್ತದೆ. ಇಂಥ ಹಿಂಸಾತ್ಮಕವಾದ ಸಕ್ಕರೆಯಿಂದ ಮಾಡಿದ ಪದಾರ್ಥಗಳನ್ನು ನಾವು ಮುಟ್ಟಲಾರೆವು ಎಂದು ಹೇಳಿದರು. ನಿಮಗೆ ಸತ್ಯನಾರಾಯಣ ವ್ರತಕ್ಕಿಂತಲೂ ಗಾಂಧೀಯವರ ಬಹಿಷ್ಕಾರವೆ ಶ್ರೇಷ್ಠವೇ ? ಎಂದು ಕೇಳಿದಾಗ ಶ್ರೀ ಸತ್ಯನಾರಾಯಣ ಪೂಜೆ ಕಥೆಗಳಲ್ಲಿ ನಮಗೆ ಅನಾದಾರವಾಗಲಿ ಅವಿಶ್ವಾಸವಾಗಲಿ ಇಲ್ಲ. ಆದರೆ ಪ್ರಸಾದದಲ್ಲಿ ಪರದೇಶಿ ಸಕ್ಕರೆ ಹಾಕಿದ್ದರಿಂದ ನಾವು ತೆಗೆದುಕೊಳ್ಳುವದಿಲ್ಲ. ಊಟಕ್ಕೆ ಕುಳಿತಾಗಲೂ ಸಕ್ಕರೆಯುಕ್ತ ಖಾದ್ಯವನ್ನು ಮುಟ್ಟಲಿಲ್ಲ. ಇಂದು ಹನಮಂತ ಜೋಶಿಯವರಿಗೆ ಅತಿಥಿಗಳ ಬಗ್ಗೆ ಪವಿತ್ರ ಭಾವನೆ ಮೂಡಿತು."[೩೯]

"ಅಂದು ಸಾಯಂಕಾಲ ಸಂಜೆ ೭:೦೦ ಗಂಟೆಗೆ ಗುಡಿಯ ವಿಶಾಲ ಪಟಾಂಗಳದಲ್ಲಿ ಸಾರ್ವಜನಿಕ ಸಭೆ ಏರ್ಪಟ್ಟಿತು. ನೂರಾರು ಜನರು ಭಾಗವಹಿಸಿದ್ದರು. ಬಂದ ಅತಿಥಿಗಳಲ್ಲಿ ಒಬ್ಬರಾದ ದೇಶಪಾಂಡೆ ಎಂಬುವವರು ಸ್ವರಾಜ್ಯ ಪ್ರಾಪ್ತಿಗಾಗಿ ಲೋಕಮಾನ್ಯ ತಿಲಕರು ಹಾಗೂ ಗಾಂಧೀಜಿಯವರು ತಳೆದ ನಿಲುವನ್ನು ಹಾಗೂ ಅಖಿಲ ಭಾರತ ಕಾಂಗ್ರೆಸ ಕಮೀಟಿಯ ಆದೇಶ ತಿಳಿಸಿದರು. ಪರದೇಶಿ ವಸ್ತುಗಳನ್ನು, ಅರಿವೆ ಗಿರಣಿಗಳನ್ನು ಬಹಿಷ್ಕರಿಸಿ ಕೈಯಿಂದ ನೂತ ನೂಲಿನ ಅರಿವೆಯನ್ನು ಎಲ್ಲರು ಉಡಬೇಕು. ಪ್ರತಿಯೊಬ್ಬರು ದಿನಕ್ಕೆ ಒಂದು ತಾಸಾದರೂ ನೂಲಬೇಕು. ನೂತ ನೂಲಿನ ಅರಿವೆ ತೊಡಬೇಕು ಇದು ಸ್ವರಾಜ್ಯ ತಳಹದಿ ಆಗಿದೆ. ಅರವತ್ತು ಕೋಟಿ ರೂಪಾಯಿ ನಮ್ಮ ದೇಶದಿಂದ

ಪರದೇಶಕ್ಕೆ ಹೋಗುತ್ತಿದೆ. ನಾವೆಲ್ಲ ನೂತ ಅರಿವೆಯನ್ನು ತಯಾರಿಸಿದರೆ ನಮ್ಮ ದೇಶದ ಸಂಪತ್ತು ದೇಶದಲ್ಲಿಯೇ ಉಳಿಯುತ್ತದೆ. ದೇಶದಲ್ಲಿಯ ಬಡತನ ನೀಗುತ್ತದೆ. ದೇಶದ ಜನರು ದರಿದ್ರತೆಯಿಂದ ಬಳಲುತ್ತಿದ್ದಾಗ ನಾವು ಸುಖಲೋಲುಪರಾಗಿರುವದು ಒಳಿತಲ್ಲವೆಂದು ಗಾಂಧೀಜಿಯವರು ಹೇಳಿದ್ದಾರೆ. ನಾವು ಕೂಡಾ ಇಷ್ಟರಲ್ಲಿ ಉಪಜೀವಿಸಲು ಬಯಸುತ್ತೇನೆಂದು ಹೇಳಿ ದಿನಾಲು ಶೇಂಗಾ, ಒಂದು ಲೋಟ ನೀರು, ಹಾಲು ಕುಡಿದು ಜೀವಿಸುತ್ತಿದ್ದಾರೆ. ನಾವು ಅವರ ತತ್ವಗಳನ್ನು ತಿಳಿಸಲು ಇಲ್ಲಿಗೆ ಬಂದಿದ್ದೇವೆ. ಸತ್ಯ, ಅಹಿಂಸೆ, ತ್ಯಾಗಗಳಿಗೆ ಸಿದ್ಧರಾಗಬೇಕೆಂದು ಅಂಥವರು ಇಂದೆ ಪ್ರತಿಜ್ಞೆ ಮಾಡಿ ಈ ತತ್ವದ ಪ್ರಕಾರ ನಡೆಯಬೇಕೆಂದು ಹೇಳಿದಾಗ ಐದಾರು ಜನ ಮುಂದೆ ಬಂದು ಪ್ರತಿಜ್ಞೆ ಮಾಡಿದರು."[೪೦]

೪. ಶಾಲಾ ಕಾಲೇಜುಗಳ ಬಹಿಷ್ಕಾರ

ಗಾಂಧೀಜಿಯವರು ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಬ್ರಿಟಿಷ ಸರಕಾರದ ಹಾಗೂ ಅವರ ಅನುದಾನದಲ್ಲಿ ನಡೆಯುತ್ತಿರುವ ಶಾಲಾ ಕಾಲೇಜುಗಳನ್ನು ತೊರೆಯುವಂತೆ ಕರೆ ನೀಡಿದರು. ಗಾಂಧೀಜಿಯವರು ಅಸಹಕಾರ ಚಳವಳಿ ಆರಂಭಿಸಿದಾಗ ಬೇರೆ ಊರುಗಳಿಗೆ ಕಾಲೇಜು ಶಿಕ್ಷಣಕ್ಕೆ ಹೋದ ಬಾಗಲಕೋಟದ ಅನೇಕ ತರುಣರು ಶಿಕ್ಷಣವನ್ನು ತ್ಯಜಿಸಿ ಮರಳಿ ಬಂದರು. ಊರಲ್ಲಿಯು ಸರಕಾರಿ ಶಾಲೆಗಳನ್ನು ಅನೇಕರು ತ್ಯಜಿಸಿದರು. ಸರಕಾರಿ ಶಾಲೆ ಮುಚ್ಚಿ ಹೋಯಿತು. ಹ.ರಾ. ಪುರೋಹಿತರು ತಮ್ಮ ಸ್ಮೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ. "ಅಸಹಕಾರ ಚಳವಳಿ ಆರಂಭಗೊಂಡಾಗ ನಾನು ಬಾಗಲಕೋಟದಲ್ಲಿ ಇಂಗ್ಲೀಷ ಆರನೆಯ ವರ್ಗದಲ್ಲಿ ಕಲಿಯುತ್ತಿದ್ದೆ. ನಮ್ಮ ಅಣ್ಣ ಟಿ.ಬಿ. ಪುರೋಹಿತ ಮುಂಬಯಿಯಲ್ಲಿ ಎರಡನೆ ವರ್ಷ ಎಲ್.ಎಲ್.ಬಿ. ಓದುತ್ತಿದ್ದರು. ಆಗ ಮುಂಬೈ ಶಾಂತಾರಾಮ ಚಾಳಿನಲ್ಲಿ ಗಾಂಧೀಜಿ ಮತ್ತು ಗಂಗಾಧರರಾವ್ ದೇಶಪಾಂಡೆ ಅಸಹಕಾರಕ್ಕೆ ಕರೆ ನೀಡಿ ಭಾಷಣ ಮಾಡಿದಾಗ ಹಾಜರಿದ್ದರು. ಗಂಗಾಧರರಾವ್ ದೇಶಪಾಂಡೆಯವರು ಇಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿದ್ದರೆ ಅವರು ಕಾಲೇಜು ಬಹಿಷ್ಕರಿಸಬೇಕೆಂದು ಕರೆ ನೀಡಿದಾಗ ಇನ್ನು ಟರ್ಮ್‌ದಿನ ತುಂಬಲು ಐದಾರು ದಿನವಿದ್ದ ನನ್ನ ಅಣ್ಣ ಕಾಲೇಜಿಗೆ ಶರಣು ಹೊಡೆದರು. ಕೊನೆಯ ತನಕ ರಾಷ್ಟ್ರ ಕಾರ್ಯವನ್ನೆ ಮಾಡಿದರು. ಪುಣೆ ಡೆಕ್ಕನ್ ಕಾಲೇಜಿನಲ್ಲಿ ಓದುತ್ತಿದ್ದ ನಮ್ಮ ಊರಿನ ಕೆಲವರು ಕಾಲೇಜು ತ್ಯಜಿಸಿದರು. ಹಿರಿಯ ವಿದ್ಯಾರ್ಥಿಗಳು ಕಾಲೇಜು ಬಿಟ್ಟ ನಂತರ ಶಾಲಾ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟರು. ಇನ್ನೊಂದು ವಾರದಲ್ಲಿ ಪರೀಕ್ಷೆ ಎಂದು ಹೇಳಿದರೂ ಕೇಳಲಿಲ್ಲ ಹತ್ತು ಇಪತ್ತು ಜನರನ್ನು ಬಿಟ್ಟು ಎರಡುನೂರು ಮೂನ್ನೂರು ಜನರು ಶಾಲೆ ಬಿಟ್ಟರು."[೪೧]

"ವಿಜಾಪೂರ ಶಿಕ್ಷಕರಾದ ಭೀಮಾಚಾರ್ಯ ಚಿಮ್ಮಲಗಿಯವರು ತಮ್ಮ ಮನೆಯಲ್ಲಿ ಲೋಕಮಾನ್ಯ ತಿಲಕರ ಭಾವಚಿತ್ರ ಇಟ್ಟುಕೊಂಡಿದ್ದರು. ಅಲ್ಲದೆ ದೇಶದ ಪ್ರಮುಖ ನಾಯಕರ ಭಾವಚಿತ್ರಗಳನ್ನು ಮಾರಾಟ ಮಾಡುತ್ತಿದ್ದರು. ಪೊಲೀಸರು ಆಕ್ಷೇಪಿಸಿದಾಗ ತಮ್ಮ ಹುದ್ದೆಗೆ ರಾಜೀನಾಮೆ

ನೀಡಿದರು."[೪೨] "ವಿಜಾಪೂರ ಕಾಕಾ ಕಾರಖಾನೀಸರು ಕೂಡಾ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದರು."[೪೩]

೫. ಬಿರುದು ಬಾವಲಿಗಳ ಮತ್ತು ಗೌರವ ಸ್ಥಾನಗಳನ್ನು ತ್ಯಜಿಸುವದು

ಬ್ರಿಟಿಷ ಸರಕಾರಕ್ಕೆ ಅಸಹಕಾರ ತೋರಿಸುವದಕ್ಕಾಗಿ ಗಾಂಧೀಜಿಯವರು ತಮ್ಮ ಕೈಸರ - ಎ - ಹಿಂದ್ ಬಿರುದನ್ನು ಹಾಗೂ ಜೂಲು ಯುದ್ಧ ಪದಕವನ್ನು ಮರಳಿಸಿದರು. ರವೀಂದ್ರನಾಥ ಟ್ಯಾಗೋರ ಅವರು ತಮಗೆ ದೊರೆತ ನೈಟ್ ಹುಡ್ ಪದವಿಯನ್ನು ಮರಳಿಸಿದರು."೧೯೨೦ರಲ್ಲಿ ಅಸಹಕಾರ ಚಳವಳಿಯ ಸಮಯದಲ್ಲಿ ಸಿದ್ದುರಾವ್ ಪೂಜಾರಿಯವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು."[೪೪] "ಗಾಂಧೀಜಿಯವರು ೨೭-೦೫-೧೯೨೧ರಂದು ಬಾಗಲಕೋಟದಲ್ಲಿ ಹತ್ತು ಸಾವಿರ ಜನರನ್ನು ಉದ್ದೇಶಿಸಿ ಮಾತನಾಡುವಾಗ ಸೇಠ ರಾಮದಾಸ ದರಬಾರ ಅವರು ತಮ್ಮ ರಾವ್‌ಸಾಹೇಬ ಬಿರುದನ್ನು ತ್ಯಜಿಸಿದರು."[೪೫]

೬. ಕೋರ್ಟ್‌ಗಳಿಗೆ ಬಹಿಷ್ಕಾರ

ಅಸಹಕಾರ ಚಳವಳಿಯ ಅಂಗವಾಗಿ ಗಾಂಧೀಜಿಯವರ ಕೋರ್ಟ ಕಲಾಪಗಳನ್ನು ಬಹಿಷ್ಕರಿಸುವಂತೆ ವಕೀಲರಿಗೆ ಕರೆ ನೀಡಿದಾಗ ದೇಶಾದ್ಯಂತ ವಕೀಲರು ಕಲಾಪಗಳನ್ನು ಬಹಿಷ್ಕರಿಸಿ ಬ್ರಿಟಿಷ ಸರಕಾರಕ್ಕೆ ಅಸಹಕಾರ ತೋರಿಸಿದರು.

"ವಿಜಾಪೂರದಲ್ಲಿ ಶ್ರೀನಿವಾಸರಾವ ಕೌಜಲಗಿ, ಜಯರಾವ ದೇಶಪಾಂಡೆ, ರಂಗರಾವ್ ತಿಳಿಗೊಳ ಅವರು ಸಾರ್ವಜನಿಕರ ಸಭೆಯಲ್ಲಿ ತಾವು ವಕೀಲಿ ವೃತ್ತಿಗೆ ಶರಣು ಹೊಡೆದು ಅಸಹಕಾರ ಆಂದೋಲನದಲ್ಲಿ ಸೇರಿರುವದಾಗಿ ಸಾರಿದರು. ಹಣಮಂತರಾವ ಕೌಜಲಗಿಯವರು ಅಂದು ಊರಲ್ಲಿ ಇರಲಿಲ್ಲ. ಹುನಗುಂದ ತಾಲೂಕಿನ ಫೌಜದಾರಿ ಖಟ್ಲೆ ನಡೆಸಲು ಹೋಗಿದ್ದರು. ಬಾಗಲಕೋಟಗೆ ಬಂದ ನಂತರ ಅವರಿಗೆ ಈ ಸುದ್ದಿ ತಿಳಿದ ನಂತರ ಅಂದೇ ಸಂಜೆ ಸಾರ್ವಜನಿಕ ಸಭೆಯಲ್ಲಿ ತಮ್ಮ ವಕೀಲಿ ವೃತ್ತಿಗೆ ಶರಣು ಹೊಡೆದರು."[೪೬]

"ಬಾಗಲಕೋಟದಲ್ಲಿ ಕಿರೇಸೂರ ಮತ್ತು ಬಾಡಗಂಡಿ, ಮುದ್ದೇಬಿಹಾಳದಲ್ಲಿ ದೊಡ್ಡಿಹಾಳ ಅಣ್ಣಾರಾವ್, ಹುನಗುಂದದಲ್ಲಿ ರಾಘವೇಂದ್ರರಾವ್ ದೇಸಾಯಿ, ಬದಾಮಿಯಲ್ಲಿ ಕಟ್ಟಿ ಶ್ರೀನಿವಾಸಚಾರ್ಯರು ವಕೀಲಿ ವೃತ್ತಿಯನ್ನು ಬಹಿಷ್ಕರಿಸಿದರು."[೪೭] "ಬಾಗಲಕೋಟದ ಪ್ರಸಿದ್ಧ ವಕೀಲರಾದ ಜಯರಾವ್ ನರಗುಂದ ಎಸ್.ಜಿ. ಕಿರಸೂರ ಕಟ್ಟಿ ಬಾಳಾಚಾರ್ಯ ಕೆರೂರ, ಬಾಡಗಂಡಿ ಮುಂತಾದ ವಕೀಲರು ತಮ್ಮ ವೃತ್ತಿಗೆ ರಾಜೀನಾಮೆ ನೀಡಿದರು."[೪೮]

೫.೨.೩ ಅಸಹಕಾರ ಚಳವಳಿಯ ಹಿಂತೆಗೆತ

ಸರಕಾರವು ಚಳವಳಿಗಾರರ ಮೇಲೆ ಉಗ್ರಕ್ರಮ ಕೈಗೊಳ್ಳ ಹತ್ತಿತ್ತು. ಕಾಂಗ್ರೆಸ್ ಮತ್ತು ಖಿಲಾಪತ್ ಕಾರ್ಯಕರ್ತರು ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯ ಚೌರಿ ಚೌರಾ ಎಂಬ ಗ್ರಾಮದಲ್ಲಿ ರೈತರನ್ನು ಸಂಘಟಿಸಿ ಚಳವಳಿ ಹೂಡಿದ್ದರು. ಪೊಲೀಸರು ಆ ಗುಂಪಿನ ಮೇಲೆ ಗುಂಡು ಹಾರಿಸಿದರು. ಇದರಿಂದ ಉದ್ರಿಕ್ತಗೊಂಡ ಜನತೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದರು. ಠಾಣೆಯಲ್ಲಿ ಅಡಗಿಕೊಂಡಿದ್ದ ೨೨ ಮಂದಿ ಪೊಲೀಸರು ಜೀವಂತವಾಗಿ ಭಸ್ಮವಾದರು. ಈ ಹಿಂಸಾಕೃತ್ಯ ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂತೆಗೆಯುವಂತೆ ಮಾಡಿತು. ಮುಂದೆ ಹಿಂಸಾಕೃತ್ಯ ನಡೆಯಬಾರದೆಂದು ಫೆಬ್ರುವರಿ ೧೧, ೧೯೨೨ ರಂದು ಗಾಂಧೀಜಿಯವರು ಚಳವಳಿ ಕೈ ಬಿಟ್ಟರು. ಆದರೆ ರಾಷ್ಟ್ರೀಯ ಕಾರ್ಯವನ್ನು ಮುಂದುವರೆಸಿದರು. ಜಿಲ್ಲೆಯಲ್ಲಿ ಅಸಹಕಾರ ಚಳವಳಿಯನ್ನು ಪತ್ರಿಕೆಗಳು, ಶ್ರೀನಿವಾಸರಾವ್ ಕೌಜಲಗಿ, ನಾ.ಸು. ಹರ್ಡೀಕರ, ಗಂಗಾಧರರಾವ ದೇಶಪಾಂಡೆಯವರು ವ್ಯಾಪಕವಾಗಿ ಪ್ರಚಾರಗೊಳಿಸಿದ ಪರಿಣಾಮವಾಗಿ ಖಾದಿಪ್ರಸಾರ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಾಲೆಗಳ ಸ್ಥಾಪನೆಯ ಚಟುವಟಿಕೆಗಳು ಆರಂಭಗೊಂಡವು. ಜಿಲ್ಲೆಯ ನಾಯಕರ ಬಂಧನದ ನಂತರ ಚಳವಳಿಯ ಕಾವು ಕಡಿಮೆಯಾಯಿತು. ಆದರೆ ಈ ಚಳವಳಿ ಬಹುಬೇಗನೆ ಜನಗಳ ಮನವನ್ನು ಗೆದ್ದಿತು.

ಅಡಿ ಟಿಪ್ಪಣಿಗಳು

೧. ಪ್ರಧಾನ ಗ.ಪ.(ಮೂಲ) ಸರಸ್ವತಿ, ರಿಸಬೂಡ, (ಅನು) ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಕನ್ನಡ ಮರಾಠಿ ಸ್ನೇಹವರ್ಧಕ ಕೇಂದ್ರ, ಪುಣೆ, ೧೯೯೪, ಪುಟ ಸಂಖ್ಯೆ ೯೪.

೨. ಶಂಕರ ನಾರಾಯಣರಾವ್ ಎಸ್.ಪಿ, ಸ್ವಾಂತತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦, ಪುಟ ಸಂಖ್ಯೆ ೧೫೧.

೩. ಪ್ರಧಾನ ಗ.ಪ.(ಮೂಲ) ಸರಸ್ವತಿ, ರಿಸಬೂಡ, (ಅನು) ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಕನ್ನಡ ಮರಾಠಿ ಸ್ನೇಹವರ್ಧಕ ಕೇಂದ್ರ, ಪುಣೆ, ೧೯೯೪, ಪುಟ ಸಂಖ್ಯೆ ೯೫.

೪. ಜಿರಾದಾರ ಜಿ.ಎ., ಕರ್ನಾಟಕ ಭೂಷಣ ಶ್ರೀನಿವಾಸರಾವ್ ಕೌಜಲಗಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨ ಪುಟ ಸಂಖ್ಯೆ ೧೭.

೫. ಅದೇ, ಪುಟ ಸಂಖ್ಯೆ ೧೭.

೬. ಕ್ಷೇತ್ರ ಕಾರ್ಯದಿಂದ

೭. ಹಾಲಪ್ಪ ಜಿ.ಎಸ್., ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂ.೨, ಗೌರ್ನಮೆಂಟ್ ಆಫ್ ಮೈಸೂರು, ಮೈಸೂರು, ೧೯೬೪, ಪುಟ ಸಂಖ್ಯೆ ೧೦೮.

೮. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೨೮೬.

೯. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦, ಪುಟ ಸಂಖ್ಯೆ ೯.

೧೦. ಗೋಪಾಕೃಷ್ಣ ಎಸ್., ಪೋಲಿಟಿಕಲ್ ಮೂವ್‌ಮೆಂಟ್ ಇನ್ನ ಸೌತ್ ಇಂಡಿಯಾ, ಮದ್ರಾಸ್, ೧೯೮೭, ಪುಟ ಸಂಖ್ಯೆ ೯೧.

೧೧. ಶಂಕರ ನಾರಾಯಣರಾವ್ ಎನ್.ಪಿ, ಸ್ವಾಂತತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೦, ಪುಟ ಸಂಖ್ಯೆ ೧೬೦.

೧೨. ಗೋಪಾಲ ಕೃಷ್ಣ ಎಸ್., ಪೋಲಿಟಿಕಲ್ ಮೂವ್‌ಮೆಂಟ್ ಇನ್ ಸೌತ್ ಇಂಡಿಯಾ ೧೯೧೪–೧೯೨೯, ಮದ್ರಾಸ್ ಪುಟ ಸಂಖ್ಯೆ ೯೧.

೧೩. ಅದೇ, ಪುಟ ಸಂಖ್ಯೆ ೧೬೧.

೧೪. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಸಂಪುಟ ೧, ಪುಟ ಸಂಖ್ಯೆ ೩೬೦.

೧೫. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೨೬೫.

೧೬. ರಂಗನಾಥ ದಿವಾಕರ, ಕರ್ಮಯೋಗಿ ಕೌಜಲಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯರ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೮೮ ಪುಟ ಸಂಖ್ಯೆ ೫೦.

೧೭. ಸೂರ್ಯನಾಥ ಕಾಮತ(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೧೭೬.

೧೮. ಅದೇ ಪುಟ ಸಂಖ್ಯೆ ೧೧೭೬.

೧೯. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೧೮೭.

೨೦. ಬಿರಾದಾರ ಜಿ.ಎ., ಕರ್ನಾಟಕ ಭೂಷಣ ಶ್ರೀನಿವಾಸರಾವ್ ಕೌಜಲಗಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨ ಪುಟ ಸಂಖ್ಯೆ ೨೮.

೨೧. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೩೦೬.

೨೨. ಬಿರಾದಾರ ಜಿ.ಎ., ಕರ್ನಾಟಕ ಭೂಷಣ ಶ್ರೀನಿವಾಸರಾವ್ ಕೌಜಲಗಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨ ಪುಟ ಸಂಖ್ಯೆ ೩೦.

೨೩. ಅದೇ, ಪುಟ ಸಂಖ್ಯೆ ೩೦–೩೧.

೨೪. ಅದೇ, ಪುಟ ಸಂಖ್ಯೆ ೩೬.

೨೫. ಕನ್ನಡ ನವಜೀವನ, ವಾರಪತ್ರಿಕೆ, ಬಾಗಲಕೋಟ ೨೬-೧೦-೧೯೨೨, ಪುಟ ಸಂಖ್ಯೆ ೮-೯.

೨೬. ಅದೇ, ಪುಟ ಸಂಖ್ಯೆ ೮-೯.

೨೭. ಅದೇ, ಪುಟ ಸಂಖ್ಯೆ ೧೦.

೨೮. ಅದೇ, ಪುಟ ಸಂಖ್ಯೆ ೧೨.

೨೯. ಅದೇ, ಪುಟ ಸಂಖ್ಯೆ ೧೩.

೩೦. ಕನ್ನಡಿಗ, ವಾರಪತ್ರಿಕೆ, ಬಾಗಲಕೊಟ ೦೨-೧೧-೧೯೨೨, ಪುಟ ಸಂಖ್ಯೆ. ೭.

೩೧. ನಾಡಗೌಡ ಬಿ.ಆರ್., ಮೊಹರೆ ಹಣಮಂತರಾಯರು, ನೆಲೆ ಪ್ರಕಾಶನ, ಸಿಂದಗಿ, ೨೦೦೧, ಪುಟ ಸಂಖ್ಯೆ.೮.

೩೨. ಕ್ಷೇತ್ರ ಕಾರ್ಯದಿಂದ,

೩೩. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೨೩೯.

೩೪. ಅದೇ ಸಂಪುಟ ೩, ಪುಟ ಸಂಖ್ಯೆ ೫೭೧-೫೭೨.

೩೫. ಬಿರಾದಾರ ಜಿ.ಎ., ಕರ್ನಾಟಕ ಭೂಷಣ ಶ್ರೀನಿವಾಸರಾವ್ ಕೌಜಲಗಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨ ಪುಟ ಸಂಖ್ಯೆ ೨೫.

೩೬. ಕ್ಷೇತ್ರಕಾರ್ಯದಿಂದ,

೩೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೨೬೫.

೩೮. ಅದೇ, ಸಂಪುಟ ೩, ಪುಟ ಸಂಖ್ಯೆ ೫೭೧.

೩೯. ಅದೇ, ಸಂಪುಟ ೧, ಪುಟ ಸಂಖ್ಯೆ ೧೨೨೭.

೪೦. ಅದೇ, ಪುಟ ಸಂಖ್ಯೆ ೧೨೨೭.

೪೧. ಅದೇ, ಪುಟ ಸಂಖ್ಯೆ ೧೨೭೨.

೪೨. ಸಿದ್ದವ್ವನಹಳ್ಳಿ ಕೃಷ್ಣಶರ್ಮಾ, ಗಾಂಧಿ ಮತ್ತು ಕರ್ನಾಟಕ, ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ೧೯೬೯ ಪುಟ ಸಂಖ್ಯೆ ೪೪

೪೩. ವಡವಿ ರಾಮಚಂದ್ರ (ಸಂ), ಕರ್ನಾಟಕದಲ್ಲಿ ಖಾದಿ ಇತಿಹಾಸ, ಕರ್ನಾಟಕ ರಾಜ್ಯ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು, ೧೯೮೩, ಪುಟ ಸಂಖ್ಯೆ ೧೩೫.

೪೪. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೨೪೦.

೪೫. ಸಂದರ್ಶನ, ದೊರೆಸ್ವಾಮಿ ಎಚ್.ಎಸ್., ೫-೩-೨೦೧೩, ಬೆಂಗಳೂರು.

೪೬. ರಂಗನಾಥ ದಿವಾಕರ, ಕರ್ಮಯೋಗಿ ಕೌಜಲಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯರ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೮೮ ಪುಟ ಸಂಖ್ಯೆ ೫೭.

೪೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪುಟ ಸಂಖ್ಯೆ ೧೧೮೯.

೪೮. ಅದೇ, ಪುಟ ಸಂಖ್ಯೆ ೧೨೬೭.

ಅಧ್ಯಾಯ ೬

ಜನಾಂದೋಲನದ ಪೂರ್ವ ಸಿದ್ಧತೆ

೬.೧ ಹಿಂದೂಸ್ಥಾನಿ ಸೇವಾದಳ

೬.೨ ಕರ್ನಾಟಕ ಸರ್ವ ಪಕ್ಷಗಳ ಸಭೆ

೬.೩ ಬೆಳಗಾವಿ ಕಾಂಗ್ರೆಸ್ ಅಧಿವೇಶನ

೬.೪ ಸೈಮನ್ ಆಯೋಗಕ್ಕೆ ಬಹಿಷ್ಕಾರ

೬.೫ ವಿಜಾಪೂರ ಜಿಲ್ಲೆ ರಾಜಕೀಯ ಕೈದಿಗಳ ಪರಿಷತ್ತು

ಅಧ್ಯಾಯ ೬

ಜನಾಂದೋಲನದ ಪೂರ್ವ ಸಿದ್ಧತೆ

೬.೧ ಹಿಂದೂಸ್ಥಾನಿ ಸೇವಾದಳ

ರಾಷ್ಟ್ರೀಯ ಆಂದೋಲನದಲ್ಲಿ ಜನಸಾಮಾನ್ಯರನ್ನು ಸೇರಿಸಿಕೊಳ್ಳುವುದು ಮತ್ತು ಅವರಿಗೆ ಸೂಕ್ತ ರೀತಿ ತರಬೇತಿ ನೀಡಲು ಒಂದು ಸಂಘಟನೆಯ ಅವಶ್ಯಕತೆವಿತ್ತು. ಅಸಹಕಾರ ಚಳವಳಿಯಲ್ಲಿ ಬಂಧನಕ್ಕೆ ಒಳಗಾದ ಭಾರತೀಯ ಯುವಕರು ಪೊಲೀಸರ ಹಿಂಸೆಗೆ ಹೆದರಿ ತಾವು ಮಾಡಿದ ಚಳವಳಿ ತಪ್ಪೆಂದು ಇನ್ನುಮುಂದೆ ಇಂತಹ ಚಳವಳಿಗಳಲ್ಲಿ ಭಾಗವಹಿಸುವುದಿಲ್ಲವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟು ಬಿಡುಗಡೆಯಾದರು. ಭಾರತೀಯರ ದುಸ್ಥಿತಿಯನ್ನು ಕಂಡ ಹರ್ಡೀಕರ ಅವರು ಯುವಕರಲ್ಲಿ ದೇಶಾಭಿಮಾನ ಬೆಳಸಿ ಅವರಿಗೆ ಸೂಕ್ತ ರೀತಿಯ ದೈಹಿಕ ಮತ್ತು ಮಾನಸಿಕ ತರಬೇತಿಯನ್ನು ಪ್ರಾರಂಭಿಸಲು ಅಹಮದಾಬಾದಿನ ಕಾಂಗ್ರೆಸ್‌ನಲ್ಲಿ ಠರಾವು ಪಾಸು ಮಾಡಿದರು.

ಗಯಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕಾಯ್ದೆಭಂಗದ ಸಲುವಾಗಿ ಐವತ್ತುಸಾವಿರ ಸ್ವಯಂ ಸೇವಕರನ್ನು ಹಿಂದೂಸ್ಥಾನದಲ್ಲಿ ತಯಾರಿಸಬೇಕೆಂದು ಠರಾವು ಆಯಿತು. ಆದರೆ ಠರಾವು ಕಾಗದಲ್ಲಿಯೇ ಉಳಿಯಿತು. ಕರ್ನಾಟಕದಲ್ಲಿ ಡಾ. ಹರ್ಡೀಕರ ಅವರು ಎರಡು ಸಾವಿರ ಸ್ವಯಂ ಸೇವಕರನ್ನು ಕೂಡಿಸುವ ಪ್ರತಿಜ್ಞೈದಿದ್ದರು ಆದರೆ ಅದು ಕೂಡಾ ಯಶಸ್ವಿಯಾಗಲಿಲ್ಲ.

೧. ಸೇವಾದಳಕ್ಕಿಂತ ಮುಂಚಿನ ಸಭೆಗಳು

“೧೯೨೩ರ ನಾಗಪೂರ ಸತ್ಯಾಗ್ರಹ ಆರಂಭಗೊಂಡಾಗ ವರ್ಕಿಂಗ್ ಕಮಿಟಿಯ ಸೂಚನೆ ಮೆರೆಗೆ ಪ್ರತಿಯೊಂದು ಪ್ರಾಂತ್ಯದಿಂದ ಸ್ವಯಂ ಸೇವಕರು ಬಂದಿದ್ದರು. ಅಲ್ಲಿಯ ತೊಂದರೆಗಳನ್ನು ಸಹಿಸಿಕೊಳ್ಳಲಾರದೆ ಅನೇಕ ಸ್ವಯಂ ಸೇವಕರು ಕ್ಷಮಾಪಣೆ ಬೇಡಿ ಮರಳಿ ಹೋದರು. ಇದೆ ಸಮಯದಲ್ಲಿ ಜೈಲಿನಿಂದ ಬಿಡುಗಡೆಗೊಂಡ ನಾ.ಸು.ಹರ್ಡೀಕರ ಅವರು ಸ್ವಯಂ ಸೇವಕರಿಗೆ ಸೂಕ್ತ ತರಬೇತಿ ನೀಡಬೇಕೆಂದು ನಿರ್ಧರಿಸಿ ಪ್ರತಿಯೊಂದು ಪ್ರಾಂತದ ಸ್ವಯಂ ಸೇವಕರ ಸಭೆ ನಡೆಸಿದರು. ಇದೇ ಹಿಂದೂಸ್ಥಾನಿ ಸೇವಾದಳದ ಹುಟ್ಟಿಗೆ ಕಾರಣವಾಯಿತು”.[೧]

೧೯೨೩ರಲ್ಲಿ ದೆಹಲಿಯಲ್ಲಿ ನಡೆದ ಸ್ಪೆಶಲ್ ಕಾಂಗ್ರೆಸ ಅಧಿವೇಶನದಲ್ಲಿ ಸೇವಾದಳದ ತಾತ್ಕಾಲಿನ ಮಂಡಲವನ್ನು ಕೂಡಿಸಿದರು. ಹಾಗೂ ಕಾಕಿನಾಡು ಕಾಂಗ್ರೆಸ ಅಧಿವೇಶನದ ಸಮಯದಲ್ಲಿ ಆಲ್ ಇಂಡಿಯಾ ವಾಲೆಂಟರ್ ಪರಿಷತ್ತು ಕೂಡಿಸಬೇಕೆಂದು ನಿರ್ಣಯ ಪಾಸು ಮಾಡಲಾಯಿತು.

ಆಲ್ ಇಂಡಿಯಾ ವಾಲೆಂಟರ್ ಪರಿಷತ್ತು (ಅಖಿಲ ಭಾರತ ಸೇವಾ ಮಂಡಲಕ್ಕೆ) ಹಿಂದೂಸ್ಥಾನಿ

ಸೇವಾದಳವೆಂದು ಹೆಸರಿಸಿದರು. ಸೇವಾದಳದ ನಿಯಮಗಳನ್ನು ಮಾಡಿ ದೇಶದ ಎಲ್ಲಾ ಭಾಗಗಳಲ್ಲಿ ಸೇವಾದಳದ ಶಾಖೆ ಆರಂಭಿಸಲು ನಿರ್ಧರಿಸಿದ್ದರಿಂದ ಕರ್ನಾಟಕದಲ್ಲಿ ಸೇವಾದಳದ ಶಾಖೆ ಆರಂಭಗೊಂಡಿತು. ಬೆಳಗಾವಿಯ ಕಾಂಗ್ರೆಸ ಅಧಿವೇಶನದಲ್ಲಿ ಸೇವಾದಳದ ಮೊದಲನೆ ಪರಿಷತ್ತ ಸಭೆ ಸೇರಿತು. ಈ ಸಭೆಯ ಠರಾವುಗಳನ್ನು ಆಧರಿಸಿ ಕಾನಪುರದಲ್ಲಿ ತುಳಸಿದಾಸ ಗೋಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇವಾದಳದ ಪದಾಧಿಕಾರಿಗಳನ್ನು ನೇಮಿಸಿದರು.

೨. ಹಿಂದೂಸ್ಥಾನಿ ಸೇವಾದಳದ ಪದಾಧಿಕಾರಿಗಳು

೧. ಸರೋಜಿನಿ ನಾಯ್ಡು
೨. ಎಮ್.ಎ. ಅನ್ಸಾರಿ
೩. ಶ್ರೀನಿವಾಸ ಅಯ್ಯಂಗಾರ
೪. ಬಾಬು ರಾಜೇಂದ್ರ ಪ್ರಸಾದ
೫. ಆಚಾರ್ಯ ಗಿಡವಾಗಿ
೬. ಬಾಬಾ ಸಾಹೇಬ ದೇಶಮುಖ
೭. ಮಖನಲಾಲ ಚತುರ್ವೇದಿ
೮. ಮೌಲಾನ ಶೌಕತ ಅಲಿ
೯. ಮಣಲಾಲ ಕೊಠಾರಿ
೧೦. ಜವಹರಲಾಲ್ ನೆಹರು (ಖಜಾಂಚಿ)
೧೧. ನಾ.ಸು. ಹರ್ಡೀಕರ (ಜನರಲ್ ಸೆಕರೆಟರಿ)[೨]

೩. ಕರ್ನಾಟಕದ ಸೇವಾದಳದ ಗುರಿ ಉದ್ದೇಶಗಳು

ಕಾನ್ಪುರ ಸಮ್ಮೇಳನದ ಠರಾವಿನಂತೆ ಕರ್ನಾಟಕದಲ್ಲಿ ಹಿಂದೂಸ್ಥಾನಿ ಸೇವಾದಳದ ಸ್ಥಾಪನೆಗೆ ಕೆಲವು ಗುರಿ ಉದ್ದೇಶಗಳನ್ನು ನಿರ್ಧರಿಸಲಾಯಿತು.

೧. ಒಂದು ಸಾವಿರ ಹಿಂದೂಸ್ಥಾನಿ ಸೇವಾದಳದ ಸದಸ್ಯರನ್ನು ಕೂಡಿಸುವುದು.

೨. ಹಿಂದೂಸ್ಥಾನಿ ಸೇವಾದಳದ ಶಾಖೆಗಳನ್ನು ಜಿಲ್ಲೆ, ತಾಲೂಕ, ಗ್ರಾಮಗಳಲ್ಲಿ ಆರಂಭಿಸುವದು.

೩. ಕನಿಷ್ಠಪಕ್ಷ ಹತ್ತಾದರೂ ವ್ಯಾಯಾಮ ಮಂದಿರಗಳನ್ನು ಕರ್ನಾಟಕದಲ್ಲಿ ಯೋಗ್ಯಕಂಡ ಸ್ಥಳಗಳಲ್ಲಿ ಸ್ಥಾಪಿಸುವದು ಮತ್ತು ಅದಕ್ಕೆ ಬೇಕಾದ ವ್ಯವಸ್ಥೆ ಕಲ್ಪಿಸುವದು.

೪. ನಮ್ಮ ಪ್ರಾಂತದಲ್ಲಿ ಕನಿಷ್ಠಪಕ್ಷ ೫೦೦ ಜನರಿಗಾದರೂ ಕ್ಯಾಂಪಿನ ತರಬೇತಿ ಕೊಟ್ಟು ಸಿದ್ಧಗೊಳಿಸುವದು.

೫. ಅಖಿಲ ಭಾರತ ಹಿಂದೂಸ್ಥಾನಿ ಸೇವಾದಳದಿಂದ ಬಂದ ಆಜ್ಞೆಗಳನ್ನು ಪರಿಪಾಲಿಸುವದು.[೨]

ಸೇವಾದಳದ ನೀತಿ ನಿಯಮಗಳ ಸದಸ್ಯತ್ವ ಪಡೆಯುವ ಬಗ್ಗೆ, ಪ್ರತಿಜ್ಞೆ ಸ್ವಯಂ ಸೇವಕರ ಮಾಹಿತಿಗಳ ಬಗ್ಗೆ ಹಲವಾರು ನಿರ್ಧಾರಗಳನ್ನು ಕೈಗೊಳ್ಳಲಾಯಿತು.

೪. ಸೇವಾದಳದ ಸದಸ್ಯತ್ವ

ಸೇವಾದಳದ ಸದಸ್ಯರಾಗಬೇಕಾದವರು ಸದಸ್ಯತ್ವದ ಶುಲ್ಕ ನಾಲ್ಕಾಣೆಯನ್ನು ಮತ್ತು ವಾಲೆಂಟೆಯರ ಮಾಸಿಕ ಪತ್ರಿಕೆ ವಾರ್ಷಿಕ ಚಂದಾ ೧ ರೂಪಾಯಿಯನ್ನು ಕೊಡಬೇಕು. ಸದಸ್ಯರಲ್ಲದವರಿಗೆ ಮಾಸಿಕ ಪತ್ರಿಕೆ ಚಂದಾ ೩ ರೂಪಾಯಿ.

೫. ಸೇವಾದಳದ ಪ್ರತಿಜ್ಞೆ

"ನಾನು .... ಊರು .... ಜಿಲ್ಲಾ .... ಪ್ರಾಂತ.................. ಶಾಂತ ಮತ್ತು ಯೋಗ್ಯ ಉಪಾಯಗಳಿಂದ ಹಿಂದೂಸ್ಥಾನಕ್ಕೆ ಸ್ವರಾಜ್ಯ ದೊರಕಿಸುವ ಸಲುವಾಗಿ ನಾನು ಪ್ರಯತ್ನ ಮಾಡುತ್ತೇನೆಂದು ಪ್ರತಿಜ್ಞಾ ಪೂರ್ವಕವಾಗಿ ಹೇಳುತ್ತೇನೆ. ಹಿಂದೂಸ್ಥಾನದ ಎಲ್ಲ ಜಾತಿ ಪಂಗಡಗಳ ಜನರಲ್ಲಿ ಶಾಂತತೆಯನ್ನು ಮತ್ತು ಪ್ರೇಮ ಭಾವವನ್ನು ಹೆಚ್ಚಿಸಲು ನನ್ನ ಶಕ್ತಿಯನ್ನು ಮೀರಿ ಪ್ರಯತ್ನ ಮಾಡುವೆನು. ನಾನು ಸದಸ್ಯನಾಗಿರುವ ಹಿಂದೂಸ್ಥಾನಿ ಸೇವಾದಳದ ನಿಯಮಗಳನ್ನು ಅಕ್ಷರಶಃ ಪಾಲಿಸುವೆನು ನನ್ನ ಸದಸ್ಯತ್ವದ ಬಗ್ಗೆ ನಾಲ್ಕಾಣೆ ಫೀ ಹಣವನ್ನು ಇಸ್ವಿ ಸನ್ ೧೯೨೩ನೇ ವರ್ಷ ಬಾಬತ್ತು ವ್ಹಾಲೆಂಟಯರ್ ಮಾಸ ಪತ್ರಿಕೆಯ ವರ್ಗಾವಣೆಯ ಬಗ್ಗೆ ೧ ರೂಪಾಯಿ ಕೊಟ್ಟಿರುವೆನು."[೪]

೬. ಸದಸ್ಯರ ವೈಯಕ್ತಿಕ ಮಾಹಿತಿ

ಸೇವಾದಳದ ಸದಸ್ಯನಾಗಬಯಸುವವನು ಕೆಲವು ವೈಯಕ್ತಿಕ ಮಾಹಿತಿಗಳನ್ನು ಕಛೇರಿಗೆ ನೀಡಬೇಕಿತ್ತು. ಅವುಗಳೆಂದರೆ

೧. ಮದುವೆ ಆಗಿದುದರ ಬಗ್ಗೆ

೨. ತಾನು ತಿಳಿದುಕೊಂಡ ಭಾಷೆಗಳ ಬಗ್ಗೆ

೩. ತನ್ನ ಶಿಕ್ಷಣ

೪. ವೃತ್ತಿ

೫. ಆರ್ಥಿಕ ಸ್ಥಿತಿಗತಿ

೬. ಅಭಿರುಚಿ

೭. ಸ್ವತಂತ್ರನೇ ಪರಾವಲಂಬಿಯೇ

೮. ಸ್ವಯಂ ಸೇವಕ ತರಬೇತಿ ಪಡೆದಿರುವ ಬಗ್ಗೆ

೯. ಧರ್ಮ ಮತ್ತು ಜಾತಿ

೧೦. ರಾಷ್ಟ್ರೀಯ ಕಾರ್ಯಕ್ಕೆ ವೇಳೆ ದೊರೆಯುವದರ ಬಗ್ಗೆ.[೫]

೭. ಬಾಗಲಕೋಟದಲ್ಲಿ ಸೇವಾದಳ ಶಾಖೆ ಸ್ಥಾಪನೆ

"ಬಾಗಲಕೋಟದಲ್ಲಿ ಸೇವಾದಳದ ಶಾಖೆಯ ೨೨-೧೧-೧೯೨೭ರಂದು ಮಧ್ಯಾಹ್ನ ೪ ಗಂಟೆಗೆ ಧರ್ಮ ಶಾಲೆಯಲ್ಲಿ ತಾತ್ಕಾಲಿಕ ಕಛೇರಿ ಆರಂಭಗೊಂಡಿತು. ಶಾಶ್ವತ ಕಟ್ಟಡಕ್ಕೆ ನರಗುಂದ ಬಿಂದೂರಾಯರು ಸೇವಾದಳದ ಕಟ್ಟಡಕ್ಕೆ ಭೂದಾನ ನೀಡಿದರು. ೮-೧೧-೧೯೨೭ರಂದು ಸೇವಾದಳದ ಕಟ್ಟಡದ ಅಡಿಗಲ್ಲು ಸಮಾರಂಭ ನಡೆಯಿತು. ನಗರದ ಎಲ್ಲ ಜಾತಿ ಪಂಗಡಗಳ ನಾಗರಿಕರು ಕಟ್ಟಡದ ಥರ ಹಾಕಿದರು. ರಂಗನಾಥ ದಿವಾಕರ, ವಾಮನ ನಾಯಕ, ನಾ.ಸು. ಹರ್ಡೀಕರ, ಫ.ಗು. ಹಳಕಟ್ಟಿಯವರು ಸಭೆಯಲ್ಲಿ ಭಾಗವಹಿಸಿದ್ದರು."[೬]

೮. ಸೇವಾದಳದ ಕಟ್ಟಡದ ಉದ್ಘಾಟನೆ

"ಬಾಗಲಕೋಟ ಸೇವಾದಳದ ಕಟ್ಟಡವನ್ನು ಅಗಸ್ಟ್ ೧, ೧೯೨೮ರಂದು ಹೈದ್ರಾಬಾದಿನ ರಾಜಾಧನರಾಜ ಗಿರಿಜೆ ಉದ್ಘಾಟಿಸಿದರು. ಈ ಸಭೆಯಲ್ಲಿ ಹೈದ್ರಾಬಾದಿನ ವಾಮನನಾಯಕ, ಬೆಂಗಳೂರಿನ ಕೆ.ಟಿ.ಭಾಷ್ಯಂ, ತುಮಕೂರಿನ ಟಿ.ಸುಬ್ರಮಣ್ಯ, ಗಂಗಾಧರರಾವ್ ದೇಶಪಾಂಡೆ, ಮುದವೀಡು ಕೃಷ್ಣರಾವ್, ವೀರನಗೌಡ ಪಾಟೀಲ, ಡಿ.ವ್ಹಿ. ಗುಂಡಪ್ಪನವರು ಭಾಗವಹಿಸಿದ್ದರು."[೭]

೯. ವಸ್ತು ಪ್ರದರ್ಶನ

ಕಟ್ಟಡದ ಉದ್ಘಾಟನೆಯ ನಿಮಿತ್ಯ ಖಾದಿ ಮತ್ತು ಆಯುರ್ವೇದ ಉತ್ಪನ್ನಗಳ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು "ಹಣಮಂತರಾವ ಕೌಜಲಗಿಯವರು ಜುಲೈ ೩೦, ೧೯೨೮ರಂದು ಸಂಜೆ ೫ ಗಂಟೆಗೆ ಖಾದಿ ಪ್ರದರ್ಶನವನ್ನು ಉದ್ಘಾಟಿಸಿದರು. ಆರು ಖಾದಿಕೇಂದ್ರಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಹಣಮಂತರಾವ ಕೌಜಲಗಿ ಹಾಗೂ ಗಲಗಲಿಯ ಕುಮಾರ ಸ್ವಾಮಿಯವರು ರಾಷ್ಟ್ರೀಯತೆಯೊಂದಿಗೆ ಖಾದಿಯ ಸಂಬಂಧ ಬೆಳೆದು ಬಂದಿರುವ ಬಗ್ಗೆ ಮಾತನಾಡಿದರು."[೮]

"ಮರುದಿನ ಜುಲೈ ೩೧ ರಂದು ಬೆಳಗಾವಿಯ ಡಾ. ಹಣಮಂತರಾವ ಸವಣೂರು ಅವರು ಆಯುರ್ವೇದ ಪ್ರದರ್ಶನವನ್ನು ರಾತ್ರಿ ೮ ಗಂಟೆಗೆ ಉದ್ಘಾಟಿಸಿ ಆಯುರ್ವೇದ ಮಹತ್ವದ ಬಗ್ಗೆ

ಮಾತನಾಡಿದರು. ಕರ್ನಾಟಕದಲ್ಲಿ ತಯಾರಿಸಿದ ವಿವಿಧ ಬಗೆಯ ಆಯುರ್ವೇದ ಔಷಧಿಗಳನ್ನು ಒಣ ಹಾಗೂ ಹಸಿರು ಔಷಧಿ ಗಿಡಗಳನ್ನು ಪ್ರದರ್ಶನದಲ್ಲಿ ಇಡಲಾಗಿತ್ತು. ಕೃಷಿ ವಸ್ತು ಪ್ರದರ್ಶನವನ್ನು ವಿಜಾಪೂರದ ಪ್ರಸಿದ್ಧ ವಕೀಲ ಪಂಡಿತ ರಾಮರಾವ್ ದೇಸಾಯಿಯವರು ಉದ್ಘಾಟಿಸಿದರು."[೯]

ಪಂಡಿತ ಜವಹರಲಾಲ್ ನೆಹರು ಅವರು ಅಲಹಬಾದ ಪ್ರಾಂತಿಯ ಕಾಂಗ್ರೆಸ್ ಕಮಿಟಿಯ ಸೆಕರೆಟರಿಯವರಿಗೆ ಬಾಗಲಕೋಟ ಸೇವಾದಳಕ್ಕೆ ಭೇಟಿ ನೀಡಿದರ ಬಗ್ಗೆ ಜೂನ್ ೮, ೧೯೨೮ರಂದು ವಿಸ್ತಾರವಾದ ಒಂದು ಪತ್ರವನ್ನು ಬರೆದರು.

"ನಾನು ಇತ್ತೀಚೆಗೆ ಕರ್ನಾಟಕ ಪ್ರಾಂತದ ಬಾಗಲಕೋಟ ವ್ಯಾಯಾಮ ಶಾಲೆಗೆ ಭೇಟಿ ನೀಡಿದೆನು. ೭ನೇ ವಯಸ್ಸಿನ ಮೇಲ್ಪಟ್ಟ ಎಲ್ಲ ತರುಣರಿಗೆ ಇಲ್ಲಿ ಶಿಸ್ತಿನಿಂದ ತರಬೇತಿ ಕೊಡುತ್ತಾರೆ. ಇದು ಸೇವಾದಳಕ್ಕೆ ಹೆಮ್ಮೆಯ ವಿಷಯವಾಗಿದೆ. ಇಂತಹ ತರಬೇತಿಗಳು ದೇಶಾದ್ಯಂತ ನಡೆದರೆ ಅಸಂಖ್ಯಾತ ಯುವಕರನ್ನು ತರಬೇತಿಗೊಳಿಸಬಹುದು. ಸೇವಾದಳವು ಕಾಂಗ್ರೆಸ ಸದಸ್ಯರಿಗೆ ಪ್ರೋತ್ಸಾಹಿಸುತ್ತದೆ. ಬಾಗಲಕೋಟ ವ್ಯಾಯಾಮ ಮಂದಿರವು ಭಾರತದ ಎಲ್ಲ ಯುವಕರಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಹೊಂದಿದೆ. ಅಗಸ್ಟ ೧ ರಂದು ಸೇವಾದಳದ ಪ್ರಾರಂಭವಾಯಿತು. ಸಮಾರಂಭದಲ್ಲಿ ೫೦೦ ಜನ ತರಬೇತಿ ಹೊಂದಿದ ಯುವಕರು ನೆರೆದಿದ್ದರು. ಸೇವಾದಳದ ಪ್ರಾಂತಿಯ ಕೇಂದ್ರಗಳು ಮುಖ್ಯ ಕಛೇರಿಯಂತೆ ಎಲ್ಲ ಕಡೆಗೂ ತರಬೇತಿಯನ್ನು ನೀಡಬೇಕು".[೧೦] ಬಾಗಲಕೋಟದಲ್ಲಿದ್ದ ಸೇವಾದಳದ ಕುರಿತಾಗಿ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.

೧೦. ಸೇವಾದಳದ ತರಬೇತಿ

ಸೇವಾದಳವು ಯುವಕರಿಗೆ ತರಬೇತಿ ನೀಡಲು ಶಿಬಿರಗಳನ್ನು ಏರ್ಪಡಿಸುತ್ತಿತ್ತು. ಯುವಕರನ್ನು ದೈಹಿಕವಾಗಿ ಮಾನಸಿಕವಾಗಿ ರಾಷ್ಟ್ರಸೇವೆಗೆ ಸಿದ್ಧಗೊಳಿಸುವುದೆ ಈ ಶಿಬಿರಗಳ ಮುಖ್ಯ ಉದ್ದೇಶವಾಗಿತ್ತು. ಬಾಗಲಕೋಟದಲ್ಲಿ ಒಂದು ತಿಂಗಳ ಕಾಲ ನಡೆಯುವ ತರಬೇತಿಯ ಕುರಿತು ಕನ್ನಡಿಗ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡಿತ್ತು. ಬಾಗಲಕೋಟದಲ್ಲಿ ಕೆ.ವ್ಹಿ. ಜೋರಾಪುರ ಅವರ ನಾಯಕತ್ವದಲ್ಲಿ ತರಬೇತಿ ಶಿಬಿರ ಅಕ್ಟೋಬರ್ ೩೦ ರಿಂದ ಒಂದು ತಿಂಗಳ ಕಾಲ ನಡೆಯುವದು.

೧. ಪ್ರವೇಶ ತುರ್ತುಗಳು

(ಅ) "ಈ ಮೊದಲು ಸೇವಾದಳದ ನಿಯಮಗಳಿಗನುಸಾರವಾಗಿ ಶಿಕ್ಷಣ ಹೊಂದಿದವರಲ್ಲಿ ಇನ್ನು ಮುಂದಾದರೂ ಸೇವಾದಳಕ್ಕಾಗಿ ಕೆಲಸ ಮಾಡಲು ಸಿದ್ಧಗೊಳಿಸಬೇಕು.

(ಬ) ಈ ಮೊದಲು ಸೇವಾದಳದ ಶಿಕ್ಷಣವನ್ನು ಪಡೆಯದೆ ಇರುವವರು ಯಾರೇ ಆದರೂ ತಮ್ಮೂರಿನ ಒಬ್ಬಿಬ್ಬರ ಪ್ರಮುಖ ಗೃಹಸ್ಥರ ಶಿಫಾರಸ್ಸು ಪತ್ರಗಳೊಂದಿಗೆ ಅರ್ಜಿ ಸಲ್ಲಿಸಬೇಕು, ಹೀಗೆ ಅರ್ಜಿ ಸಲ್ಲಿಸಿದವರಲ್ಲಿ ಸೇವಾದಳದಿಂದ ಆರಿಸಲ್ಪಟ್ಟು ತಾವು ಶಿಕ್ಷಣವನ್ನು ಹೊಂದಿ

ತಮ್ಮೂರಿಗೆ ಹೋದ ಮೇಲೆ ಅಲ್ಲಿ ವ್ಯಾಯಾಮ ಶಾಲೆಗಳನ್ನು ಆರಂಭಿಸಲು ಒಪ್ಪಿಗೆ ಕೊಡುವವರು ಈ ಶಿಬಿರ ಪ್ರವೇಶಿಸಲು ಅರ್ಹರರಾಗಿರುತ್ತಾರೆ.

೧. ಶಿಬಿರಕ್ಕೆ ಸೇರುವವರೆಲ್ಲರೂ ತಮ್ಮ ತಮ್ಮ ಪ್ರವಾಸದ ಹಾಗೂ ಇತರ ಖರ್ಚುಗಳನ್ನು ತಾವೇ ನೋಡಿಕೊಳ್ಳತಕ್ಕದ್ದು ಮತ್ತು ಶಿಬಿರದಲ್ಲಿ ಊಟ ಮತ್ತಿತರ ಖರ್ಚಿನ ಬಗ್ಗೆ ೩೦ ರೂಪಾಯಿಗಳನ್ನು ಮುಂಗಡವಾಗಿ ಕಳುಹಿಸಿಕೊಡತಕ್ಕದ್ದು.

೨. ಶಿಬಿರದಲ್ಲಿ ಕಲಿಸುವ ವಿಷಯಗಳು

೧. ಲಾಠಿ

೨. ದಾಂಡಪಟಾ

೩. ಬಾಲಾ

೪. ಫರೀರದಕಾ

೫. ಮಲ್ಲಕಂಬ

೬. ಕುಸ್ತಿ ಹಿಡಿಯುವದು

೭. ಪ್ರಥಮ ಚಿಕಿತ್ಸೆ

೮. ರಾಷ್ಟ್ರೀಯ ಸಭೆಯ ಇತಿಹಾಸ

೯. ಹಿಂದಿ ಡ್ರಿಲ್

೧೦. ಈಜುವದು

೧೧. ಗದೆ ತಿರುಗಿಸುವುದು

೧೨. ಲೇಝಿಮ್

೧೩. ಹಿಂದೂಸ್ತಾನದ ಇತಿಹಾಸ

೧೪. ವ್ಯಾಯಾಮ ಶಾಲೆಯನ್ನು ನಡೆಸುವ ಮತ್ತು ನಿರ್ವಹಿಸುವ ವಿಷಯದ ಮಾಹಿತಿ

೧೫. ನಿಶಾನೆಗಳ ಕುರಿತು ಮಾಹಿತಿ.

ಈ ಶಿಬಿರಕ್ಕೆ ಸೇರಲಿಚ್ಛಿಸುವವರು ತಮ್ಮ ಅರ್ಜಿಗಳನ್ನು ೨೦ ರೂಪಾಯಿಗಳೊಂದಿಗೆ ಹುಬ್ಬಳ್ಳಿಯಲ್ಲಿರುವ ಸೇವಾದಳದ ಮುಖ್ಯ ಕಾರ್ಯಾಲಯಕ್ಕೆ ಅಕ್ಟೋಬರ್ ೨೦ನೇ ತಾರೀಖಿನೊಳಗಾಗಿ ಮುಟ್ಟುವಂತೆ ಕಳುಹಿಸಿ ಕೊಡತಕ್ಕದ್ದು. ಪ್ರತಿ ಉಮೇದವಾರನು ತನ್ನ ಸಂಗಡ ಖಾಕಿ ಖಾದಿಯಿಂದ ಮಾಡಿದ ಎರಡು ಸ್ವಯಂ ಸೇವಕರ ಪೋಷಾಕು ಮಲಗಿಕೊಳ್ಳಲು ಹಾಸಿಗೆ ನೀರು ಕುಡಿಯಲು ತಂಬಿಗೆ ತರತಕ್ಕದ್ದು."[೧೧]

ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಬಾಗಲಕೋಟ ತನ್ನದೆ ಆದ ಕಾಣಿಕೆಯನ್ನು ಸಲ್ಲಿಸಿದೆ. ಸೇವಾದಳದ ಕಟ್ಟಡಕ್ಕೆ ಬಿಂದುರಾವ್ ನರಗುಂದ, ಭೂಮಿ ನೀಡಿದರು. ಜಯರಾವ್ ನರಗುಂದ, ರಾಮಣ್ಣ ನಾಯಕ ಸೊಲ್ಲಾಪಟ್ಟಿ, ಕಿರಸೂರ ವಕೀಲರು ಯಲಗುರ್ದರಾವ ಧಾರವಾಡಕರ ಕೃಷ್ಣರಾವ ಜೋರಾಪೂರ ಮರುಗಯ್ಯ ಜಂಗಿನ, ಕಟ್ಟಡ ನಿರ್ಮಾಣಕ್ಕೆ ವಿಶೇಷ ಆರ್ಥಿಕ ನೆರವು ನೀಡಿದರು. ಭಾರತದ ಪ್ರಖ್ಯಾತ ಕ್ರಾಂತಿಕಾರಿಗಳಾದ ರಾಜಗುರು ಬಾಗಲಕೋಟಗೆ ಬಂದು ಸೇವಾದಳದ ಚಟುವಟಿಕೆಯಲ್ಲಿ ಪ್ರಮುಖ ಕಾರ್ಯಕರ್ತರಾಗಿದ್ದರು. ಇಲ್ಲಿಗೆ ತರಬೇತಿಗಾಗಿ ಕರ್ನಾಟಕದ ಮೂಲೆ ಮೂಲೆಗಳಿಂದಲೂ ಭಾರತದ ಅನ್ಯ ಪ್ರಾಂತಗಳಿಂದಲೂ ತರುಣರು ಬರುತ್ತಿದ್ದರು. ಡಾ.ಹರ್ಡೀಕರರ ನೆಚ್ಚಿನ ಸಹಾಯಕರಾದ ಶ್ರೀನಿವಾಸರಾವ ನೀರಲಕೇರಿ, ಕೃಷ್ಣರಾವ್ ಜೋರಾಪೂರ, ಕೃಷ್ಣರಾವ ಪದಕಿ, ಸುಗಣೇಂದ್ರ ಕೆರೂರ ಕೇಂದ್ರದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಹಣಮಂತರಾವ ಕೌಜಲಗಿಯವರು ತರುಣರಿಗೆ ಸ್ಫೂರ್ತಿ, ಉತ್ಸಾಹ ನೀಡುತ್ತಿದ್ದರು. ೧೯೩೦ ರಿಂದ ಬ್ರಿಟಿಷರಿಗೆ ಸೇವಾದಳ ತಲೆನೋವಾಗಿ ಪರಿಣಮಿಸಿ ೧೯೩೧ ರಿಂದ ಅದರ ಶಿಬಿರದಲ್ಲಿ ಸರಕಾರದ ದಾಳಿಗಳು ಆರಂಭವಾಗಿ ಸ್ವಯಂ ಸೇವಕರ ಬಂಧನ, ಅದರ ಸಾಮಾನು, ಸರಂಜಾಮುಗಳ ಜಪ್ತಿ ಆರಂಭವಾದರೂ ಕಾರ್ಯಕರ್ತರು ಜನಧನ ಪರಿಕರಣಗಳನ್ನು ಒದಗಿಸಿ ವೈಸರಾಯರ ವಿಶೇಷಾಜ್ಞೆಯಿಂದ ಸಂಸ್ಥೆ ನಿರ್ಬಂಧಿಸಲ್ಪಡುವವರೆಗೆ ಅದರ ಚಟುವಟಿಕೆ ನಡೆಸಿದರು. ಕಮತಗಿ, ಅಮೀನಗಡ, ಗುಡೂರು ಮತ್ತು ಇಲಕಲ್ಲದಲ್ಲಿ ಹಿಂದೂಸ್ಥಾನಿ ಸೇವಾದಳದ ಶಾಖೆಗಳಿದ್ದವು. ಸೇವಾದಳದ ತರಬೇತಿಯನ್ನು ಪಡೆದು ಬಂದ ಬಾಲಪ್ಪ ಬಿಳೆಹಿಂಡಿ ಮತ್ತು ಬಾಳಸಿಂಗ ರಜಪೂತರು, ಚಡಚಣದಲ್ಲಿ ಒಂದು ಸೇವಾದಳದ ಘಟಕ ತೆರೆದು ನೂರಾರು ತರುಣರಿಗೆ ಸೇವಾದಳದ ತರಬೇತಿಯನ್ನು ಕೊಟ್ಟರು.

"ನಾಗತಾಣದಲ್ಲಿ ೧೯೩೯ರಲ್ಲಿ ಸೇವಾದಳ ಸ್ಥಾಪಿಸಲಾಯಿತು. ಗುರುಬಸಪ್ಪ ಅರಕೇರಿ, ಹಣಮಂತಪ್ಪ ವಾಡೆ, ಕೃಷ್ಣಾಜಿ ಸಿಂಪಿ, ಭೀಮಾ ಕೃಷ್ಣಾಜಿ ಸಿಂಪಿ, ಚನ್ನಪ್ಪಾ ಹುಣಶ್ಯಾಳ, ಮುತ್ತಣ್ಣ ಪೂಜೇರಿ, ಸಾಬಣ್ಣ ಸಿರಿಕನಹಳ್ಳಿ, ಕರಬಸಪ್ಪ ಅರಕೇರಿ ಮುಂತಾದ ೨೦ ಜನ ಸೇವಾದಳದ ಕಮಿಟಿ ಮಾಡಿ ನೂರಾರು ರೂಪಾಯಿ ಖರ್ಚು ಮಾಡಿ ಎಲ್ಲರಿಗೂ ಸ್ವಯಂ ಸೇವಕರಿಗೆ ಸಮವಸ್ತ್ರ ಹೊಲಿಸಿದರು."[೧೨]

೧೧. ಸೇವಾದಳ ಮತ್ತು ಅಹಿಂಸೆ

ಬಾಗಲಕೋಟದಲ್ಲಿ ನಡೆದ ಸೇವಾದಳದ ಒಂದು ಸಮಾರಂಭದ ಕಾಲಕ್ಕೆ ಸಂಭವಿಸಿದ ದುರ್ಘಟನೆಯ ವಿವರಗಳು ಉಲ್ಲೇಖನೀಯವಾಗಿದೆ. "೧೯೨೯ರ ಜುಲೈ ೨೧ರ ರಂದು ಅಪರಾಹ್ನ ೪:೦೦ ಗಂಟೆಗೆ ಸೇವಾದಳದ ಕೆಲವು ಜನ ಸ್ವಯಂ ಸೇವಕರು ತಮ್ಮ ಸ್ವಂತದ ಬ್ಯಾಂಡ ವಾದ್ಯ ವೃಂದದೊಂದಿಗೆ ಒಂದು ಮೆರವಣಿಗೆಯನ್ನು ಹೊರಡಿಸಿ ದಾರಿಯಲ್ಲಿ ಕರಪತ್ರಗಳನ್ನು ಹಂಚುತ್ತ ಸಾಗಿದ್ದರು. ಈ ಸ್ವಯಂ ಸೇವಕರಲ್ಲಿ ಬಹುಸಂಖ್ಯಾತರು ಪರಸ್ಥಳದಿಂದ ಬಂದವರಿದ್ದುದರಿಂದ ಅವರಿಗೆ ಬಾಗಲಕೋಟಯಲ್ಲಿಯ ಓಣಿ ಕೇರಿಗಳಾಗಲಿ ಅಲ್ಲಿಯ ಸ್ಥಾನಿಕ ರೂಢಿ ಪದ್ಧತಿಗಳಾಗಲಿ ಪರಿಚಯವಿದ್ದಿಲ್ಲ, ಸ್ವಯಂ ಸೇವಕರು ಮಸೀದಿಯ ಮುಂದೆ ಬ್ಯಾಂಡ ವಾದ್ಯ ಬಾರಿಸಿದರೆಂಬ ನೆಪ ಮುಂದೆ ಮಾಡಿ ಆ ಮಸೀದಿಯಲ್ಲಿದ್ದ ಮತ್ತು ಸುತ್ತ ಮುತ್ತಲಿನ ಪುಂಡ ಪೋಕರಿಗಳು ಕೈಯಲ್ಲಿ ಬಡಿಗೆ, ಗುದ್ದಲಿ, ಸಲಿಕೆ, ಚಪಗೊಡಲಿ ಮೊದಲಾದ ಆಯುಧಗಳಿಂದ ಸುಸಜ್ಜಿತರಾಗಿ ಬಂದು ಈ ಸ್ವಯಂ ಸೇವಕರ ಮೇಲೆ ಮುಗಿಬಿದ್ದು ಥಳಿಸಲಾರಂಭಿಸಿದರು. ಸ್ವಯಂ ಸೇವಕರಿಗೆ ಇದು ಅನಿರೀಕ್ಷಿತ ದಾಳಿಯಾಗಿತ್ತು. ಅದರಲ್ಲಿ ಅನೇಕರು ಇನ್ನೂ ಎಳೆ ಪ್ರಾಯದವರು. ಈ ಪುಂಡ ಪೋಕರಿಗಳು ಆ ಎಳೆ ಪ್ರಾಯದ ಹುಡುಗರ ಮೇಲೆ ಎರಗಿ ಅವರ ಕೈಯಲ್ಲಿದ್ದ ಬ್ಯಾಂಡ್, ಡ್ರಮ್, ಮೊದಲಾದ ವಾದ್ಯಗಳನ್ನು ಕಸಿದುಕೊಂಡು ಅವುಗಳನ್ನು ಕಾಲ್ಕೆಳಗೆ ಹಾಕಿ ಮುರಿದೊಗೆದರು. ಸೇವಾದಳದ ಅಧಿಕಾರಿಗಳು ಆ ಹುಡುಗರನ್ನು ಕೂಡಲೆ ಸುರಕ್ಷಿತ ಸ್ಥಳಕ್ಕೆ ಕರೆದುಕೊಂಡು ಹೋದರು. ಆದರೆ ವಯಸ್ಕರಾದ ಸ್ವಯಂ ಸೇವಕರು ತಮ್ಮ ಸ್ಥಳ ಬಿಟ್ಟು ಕದಲಲಿಲ್ಲ. ಅವರು ತಮ್ಮ ಮೇಲೆ ಎರಗಿದ ಆಘಾತಗಳನ್ನೆಲ್ಲ ಸಹಿಸಿ, ಅಲ್ಲಿಯ ರೂಢಿಯನ್ನು ಮುರಿದುದಕ್ಕೆ ಕ್ಷಮೆ ಕೋರಿದರು. ಆದರೂ ಆ ಪುಂಡರು ತಮ್ಮ ಕಾಯಕವನ್ನು ನಿಲ್ಲಿಸಲಿಲ್ಲ. ಈ ಸ್ವಯಂ ಸೇವಕ ತಂಡದ ನಾಯಕರಾಗಿದ್ದ ಎಲ್.ಆರ್.ಎಸ್. ಶರ್ಮಾ ಅವರು ಸ್ವಯಂ ಸೇವಕರಿಗೆ ಪ್ರತಿ ಹಲ್ಲೆ ಮಾಡಕೂಡದೆಂದೂ ಅಹಿಂಸೆಗೆ ಅಂಟಿಕೊಳ್ಳತಕ್ಕದ್ದೆಂದೂ ಕಟ್ಟಪ್ಪಣೆ ವಿಧಿಸಿದರು. ಅಷ್ಟರೊಳಗಾಗಿ ಅಲ್ಲಿ ದೊಡ್ಡ ಜನಸಮೂಹವೇ ನೆರೆಯಿತು. ಅದರಲ್ಲಿ ಕೆಲ ಜನ ವೃದ್ಧ ಮುಸಲ್ಮಾನ ಮಹಿಳೆಯರಿದ್ದರು. ಸ್ವಯಂ ಸೇವಕರ ಮೇಲೆ ಈ ರೀತಿಯಾಗಿ ಹೇಡಿತನದ ಹಲ್ಲೆ ಮಾಡಿದುದಕ್ಕಾಗಿ ಆ ವೃದ್ಧ ಮಹಿಳೆಯರು ಆ ಪುಂಡ ಪೋಕರಿಗಳಿಗೆ ಛೀಮಾರಿ ಹಾಕಿ ಇಂಥ ಹೇಯ ಕೆಲಸ ಮಾಡಕೂಡದೆಂದು ಕೇಳಿಕೊಂಡದ್ದರಿಂದ ಮೋರೆ ಕೆಳಗೆ ಹಾಕಿ ಆ ತುಂಟರು ಕಾಲ್ದೆಗೆದರು. ಮತ್ತೆ ಅಲ್ಲಿ ಶಾಂತಿ ನೆಲೆಸಿತು. ಆ ಸ್ವಯಂ ಸೇವಕರಲ್ಲಿ ಅನೇಕರಿಗೆ ಮುಂದೆ ಹೆಜ್ಜೆ ಇಡಲಿಕ್ಕೆ ಕೂಡ ಬಾರದಷ್ಟು ಪೆಟ್ಟು ಬಿದ್ದು ಗಾಯಗಳಾಗಿದ್ದರೂ ಅತ್ತ ಲಕ್ಷ್ಯ ಕೊಡದೆ ಆ ಸ್ವಯಂ ಸೇವಕರು ಹಾಗೇ ಮುಂದೆ ಸಾಗಿದರು. ಈ ಘಟನೆಯ ಸಮಾಚಾರ ಡಾ.ಹರ್ಡೀಕರರಿಗೆ ತಿಳಿದ ಕೂಡಲೆ ಅವರು ಸ್ವಯಂ ಸೇವಕರ ಮುಖ್ಯಾಧಿಕಾರಿಗಳನ್ನು ಸಂಗಡ ಕರೆದುಕೊಂಡು ಅಲ್ಲಿಯ ಪೊಲೀಸ ಅಧಿಕಾರಿಗಳ ಮುಂದೆ ನಿಲ್ಲಿಸಿ ನಡೆದ ಘಟನೆಯನ್ನು ಇದ್ದಕಿದ್ದಂತೆ ವಿವರಿಸಿದರು. ಸ್ವಯಂ ಸೇವಕರ ಮೇಲೆ ಅತ್ಯಾಚಾರ ಮಾಡಿದವರ ವಿರುದ್ಧ ದೂರು ಕೊಡಬೇಕೆಂಬ ಇಚ್ಛೆ ಏನೂ ಅವರಿಗಿದಿಲ್ಲ. ಅನಂತರ ಅದೇ ದಿನ ಸಂಜೆಗೆ ಸೇರಿದ

ಸಾರ್ವಜನಿಕ ಸಭೆಯಲ್ಲಿ ಈ ಘಟನೆಯ ವಿವರಗಳೆಲ್ಲವನ್ನೂ ಜನತೆಗೆ ವಿವರಿಸಲಾಯಿತು. ಹಿಂದೂಸ್ತಾನಿ ಸೇವಾದಳದ ಸ್ವಯಂ ಸೇವಕರು ನ್ಯಾಷನಲ್ ಕಾಂಗ್ರೆಸ್ಸಿನ ಶಿಸ್ತು ಮತ್ತು ಧ್ಯೇಯಗಳಿಗೆ ಒಳಪಟ್ಟಿವರಿದ್ದುದರಿಂದ ಅವರು ಅಹಿಂಸೆಗೆ ಅಂಟಿಕೊಂಡಿರಬೇಕೆಂದು ನಿಖರವಾಗಿ ಆಜ್ಞಾಪಿಸಲ್ಪಟ್ಟಿದ್ದರು."[೧೩]

ಅಹಿಂಸೆಯೇ ಶೂರರ, ವೀರರ, ಶಕ್ತಿವಂತರ ಅಸ್ತ್ರವೆಂದು ಗಾಂಧೀಜಿ ಅವರು ಮೇಲಿಂದ ಮೇಲೆ ತೆಗೆಯುತ್ತಿದ್ದ ಉದ್ಗಾರಕ್ಕೆ ಇದೊಂದು ಉತ್ಕೃಷ್ಟ ನಿದರ್ಶನವಾಗಿದೆ. ಸೇವಾದಳದ ಸ್ವಯಂ ಸೇವಕರ ಇಂಥ ಅನೇಕ ಧೀರ ವೀರರ ಅಹಿಂಸೆಯ ನಿದರ್ಶನಗಳು ಮುಂದೆ ಬಂದೇ ಬಂದವು ಮತ್ತು ೧೯೩೦-೩೧ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಪ್ರಸಂಗದಲ್ಲಿ ಸ್ಫೂರ್ತಿದಾಯಕವಾಗಿ ಪರಿಣಮಿಸಿದವು. ಬಾಗಲಕೋಟದಲ್ಲಿ ನಡೆದ ಘಟನೆಯು ಮುಂದೆ ಒದಗಬಹುದಾದ ಘಟನೆಗಳ ಪೂರ್ವ ಸೂಚಿಕೆಯಾಗಿತ್ತಲ್ಲದೆ. ತರಬೇತಿ ಹೊಂದಿದ ಸೇವಾದಳ ಸ್ವಯಂ ಸೇವಕರ ಸಂಯಮ, ಸಹನಶೀಲತೆಗಳ ಒಂದು ಉತ್ಕೃಷ್ಟ ಉದಾಹರಣೆಯೂ ಆಗಿತ್ತು.

೬.೨ ಕರ್ನಾಟಕ ಸರ್ವಪಕ್ಷಗಳ ಸಭೆ

ಕರ್ನಾಟಕದಲ್ಲಿ ಸರ್ವಪಕ್ಷೀಯ ಪರಿಷತ್ತು ಕೂಡುವುದು ಅತ್ಯವಶ್ಯವಿದ್ದಿತು. ಅಲ್ಲದೇ ಕರ್ನಾಟಕದಲ್ಲಿ ಎಲ್ಲ ಜಾತಿ ಎಲ್ಲ ಪಂಗಡ, ಎಲ್ಲ ಪಕ್ಷಗಳು ಮತ್ತು ದೇಶಿಯ ಸಂಸ್ಥಾನಗಳ ನಾಯಕರುಗಳು ಒಂದೇ ಕಡೆ ಸೇರಿ ವಿಚಾರ ವಿನಿಮಯ ಮಾಡುವುದರಿಂದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮತ್ತು ಏಕೀಕರಣ ಚಳವಳಿಗೆ ಬಹಳಷ್ಟು ಬಲ ಬರುತ್ತಿದ್ದಿತು. ಈ ಸಮಯದಲ್ಲಿ ಕರ್ನಾಟಕದಲ್ಲಿ ಮುಖ್ಯವಾಗಿ ಕಾಂಗ್ರೆಸ್ ಪಕ್ಷ ಅದರಲ್ಲಿಯೂ ಕೆಲವರು ಪೂರ್ಣ ಸ್ವಾತಂತ್ರ್ಯವಾದಿಗಳು ಮತ್ತು ಕೆಲವು ಡೊಮಿನಿಯನ್ ಸ್ಟೇಟಸ್‌ನವು. ಬ್ರಾಹ್ಮಣೇತರ ಪಕ್ಷ ಹಿಂದುಳಿದವರ ಪಕ್ಷ, ಉದಾರ ಮತವಾದಿಗಳ ಪಕ್ಷ ಹೀಗೆ ರಾಜಕೀಯ ಪಕ್ಷಗಳಿದ್ದವು. ಹೀಗಾಗಿ ಸರ್ವ ಪಕ್ಷಗಳ ಪ್ರತಿನಿಧಿಗಳನ್ನು ಒಂದೇ ವೇದಿಕೆ ಮೇಲೆ ತರುವುದು ಕರ್ನಾಟಕದ ದೃಷ್ಟಿಯಿಂದ ಬಹಳ ಅವಶ್ಯವಿದ್ದಿತು.

"ಬೆಳಗಾವಿ ಮತ್ತು ವಿಜಾಪೂರದ ಸರ್ವಪಕ್ಷೀಯ ಮುಖಂಡರು ೧೯೨೮ರ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕ ಪ್ರಾಂತದೊಂದು ಪ್ರತ್ಯೇಕವಾದ ಸರ್ವಪಕ್ಷೀಯ ಪರಿಷತ್ತನ್ನು ಸಂಘಟಿಸುವ ಕುರಿತು ವಿಚಾರ ಮಾಡಿದರು. ಅದರಂತೆ ಮೊದಲನೆಯ ಪರಿಷತ್ತು ವಿಜಾಪುರದಲ್ಲಿ ನಡೆಸಲು ನಿರ್ಧರಿಸಲಾಯಿತು. ೧೧-೧೧-೧೯೨೮ ರಂದು ವಿಜಾಪೂರ ನಾಗರಿಕರು ಸಭೆಸೇರಿ ಕರ್ನಾಟಕ ಸರ್ವಪಕ್ಷೀಯ ಪರಿಷತ್ತಿನ ಸಮಿತಿಯನ್ನು ರಚಿಸಲಾಯಿತು. ಪಾಂಡುರಂಗರಾವ್ ದೇಸಾಯಿ ಚೇರಮನ್ನರಾಗಿ ಮತ್ತು ಶಂಕರಗೌಡ ಪಾಟೀಲ, ಮಧ್ವರಾವ ಕೆಂಭಾವಿ ಅವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಪರಿಷತ್ತಿನಲ್ಲಿ ಭಾಗವಹಿಸಲು ಬಳ್ಳಾರಿ, ಧಾರವಾಡ, ವಿಜಾಪೂರ, ಉತ್ತರ ಕನ್ನಡ, ದಕ್ಷಿಣ

ಕನ್ನಡ, ಕೊಡಗು, ಮೈಸೂರು ಹಾಗೂ ಉಳಿದ ದೇಶಿಯ ಸಂಸ್ಥಾನಗಳ ಎಲ್ಲ ಜಾತಿ ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಸಂಪೂರ್ಣವಾದ ಒಪ್ಪಿಗೆಯನ್ನು ನೀಡಿದರು."[೧೪]

೧೭-೧೨-೧೯೨೮ ರಂದು ಕರ್ನಾಟಕ ಸರ್ವಪಕ್ಷೀಯ ಪರಿಷತ್ತು ಮಧ್ಯಾಹ್ನ ೧೨ ಗಂಟೆಗೆ ಸೇರಿತು. ಅನಿಬೇಸೆಂಟರ ಅಧ್ಯಕ್ಷೀಯ ಭಾಷಣ ಮುಗಿದ ನಂತರ ಕರ್ನಾಟಕ ಸರ್ವಪಕ್ಷೀಯ ಪರಿಷತ್ತಿನಲ್ಲಿ ೧೧ ನಿರ್ಣಯಗಳನ್ನು ಮಂಡಿಲಾಯಿತು. ಎಲ್ಲ ನಿರ್ಣಯಗಳು ಸರ್ವಾನುಮತದಿಂದ ಪಾಸಾದವು.

೧. ಭಾರತದ ದೇಶಭಕ್ತ ಮತ್ತು ಕಾಂಗ್ರೆಸಿಗರಾದ ಲಾಲಾ ಲಜಪತರಾಯರ ಅಕಾಲಿಕ ನಿಧನದಿಂದ ಈ ಪರಿಷತ್ತಿಗೆ ಅತ್ಯಂತ ವ್ಯಸನವಾಗಿರುತ್ತದೆ. ಮತ್ತು ಅವರ ಕುಟುಂಬದವರಿಗಾದ ಅಪಾರ ದುಃಖದಲ್ಲಿ ತಾನು ಸಹಭಾಗಿಯಾಗಿದೆಯೆಂದೂ ಈ ಪರಿಷತ್ತು ಅವರಿಗೆ ತಿಳಿಸುತ್ತದೆ.

೨. ಸ್ವಯಂ ನಿರ್ಣಯ ತತ್ವದಲ್ಲಿ ಈ ಪರಿಷತ್ತಿನ ಸಂಪೂರ್ಣ ವಿಶ್ವಾಸವಿದ್ದು ಭಾರತದ ರಾಜಕೀಯ ಭವಿತವ್ಯತೆಯನ್ನೂ ಅದರ ರಾಜ್ಯ ಘಟನೆಯನ್ನೂ ಗೊತ್ತುಪಡಿಸಲು ಭಾರತ ವಾಸಿಗಳು ಸಮರ್ಥರಾಗಿರುವರೆಂದು ಈ ಪರಿಷತ್ತು ಸಾರುತ್ತದೆ.

೩. ಭಾರತದ ಭಾವೀ ರಾಜ್ಯ ಘಟನೆಯನ್ನು ಬರೆದು ಮಹತ್ವದ ರಾಷ್ಟ್ರ ಸೇವೆಯನ್ನು ಮಾಡಿದ್ದಕ್ಕೆ ಪಂಡಿತ ಮೊತಿಲಾಲ ನೆಹರು ಹಾಗೂ ಅವರ ಮಂಡಲದವರಿಗೆ ಈ ಪರಿಷತ್ತು ಅತ್ಯಂತ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

೪. ಕರ್ನಾಟಕವು ಸ್ವತಂತ್ರ ಪ್ರಾಂತ್ಯವಾಗಲು ಯೋಗ್ಯವಾಗಿರುವುದೆಂಬ ತತ್ವಕ್ಕೆ ನೆಹರು ಮಂಡಲದವರೂ ಲಖನೌದಲ್ಲಿಯ ಸರ್ವಪಕ್ಷಿಯ ಪರಿಷತ್ತಿನವರು ತಮ್ಮ ಮನ್ನಣೆಯನ್ನಿತ್ತಿದ್ದಕ್ಕಾಗಿ ಈ ಪರಿಷತ್ತು ಅವರಿಗೆ ತನ್ನ ಆಭಾರವನ್ನು ವ್ಯಕ್ತಪಡಿಸುತ್ತದೆ. ಮತ್ತು ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ನೆಹರು ಮಂಡಲದ ಮುಂದೆ ಪರಿಣಾಮಕಾರಿಯಾಗುವಂತೆ ಮಂಡಿಸಿದ್ಧಕ್ಕಾಗಿ ಶ್ರೀಮಾನ್ ರಂಗರಾವ್ ದಿವಾಕರ ಅವರಿಗೆ ಆಭಾರವನ್ನು ಮನ್ನಿಸುತ್ತದೆ.

೫. ಸಂಪೂರ್ಣ ಸ್ವಾತಂತ್ರ್ಯವೇ ಧ್ಯೇಯವೆಂದು ಸಾರಿ ಅದಕ್ಕಾಗಿ ಪ್ರಯತ್ನ ಮಾಡುವವರ ಮಾರ್ಗದಲ್ಲಿ ಯಾವ ಅಡ್ಡಿಯನ್ನು ತಾಗದೆ ಪೂರ್ಣ ಜವಾಬ್ದಾರಿ ರಾಜ್ಯ ಪದ್ಧತಿ ಅಂದರೆ ಕಾರ್ಯಕಾರಿ ಮಂಡಲವು ಲೋಕನಿಯುಕ್ತ ಸಭಾಸದರ ಬಹುಮತಕ್ಕೆ ಸಂಪೂರ್ಣ ಅಧೀನವಾಗಿರುವಂಥ ರಾಜ್ಯ ಪದ್ಧತಿಯನ್ನು ಅದು ತೀರ ಕಡಿಮೆಯಾದ ಏಕಮತದ ಬೇಡಿಕೆಯೆಂದು ಭಾರತಕ್ಕೆ ತೀವ್ರವಾಗಿಯೇ ಕೊಟ್ಟ ವಸಾಹತಿನ ಸ್ವರಾಜ್ಯವನ್ನು ಅನುಭೋಗಿಸುತ್ತಿರುವ ಎಲ್ಲ ವಸಾಹತುಗಳಿಗೆ ಸಮಾನವಾದ ಸ್ಥಾನವನ್ನು ಅದಕ್ಕೆ ತಂದು

ಕೊಡಬೇಕೆಂದು ಈ ಪರಿಷತ್ತು ನಿರ್ಣಯಿಸುತ್ತದೆ.

೬. ನೆಹರು ವರದಿಯಲ್ಲಿಯ ಎಲ್ಲ ವಿವರಗಳಿಗೂ ಬದ್ಧವಾಗಿರದೆ ಸಾಮಾನ್ಯವಾಗಿ ಆ ವರದಿಗೂ ಅದರಲ್ಲಿಯ ಕೆಳಗಿನ ಶಿಫಾರಸ್ಸುಗಳಿಗೂ ಈ ಪರಿಷತ್ತು ತನ್ನ ಮನ್ನಣೆಯನ್ನಿಯುತ್ತದೆ. (ಅ) ಅಧಿಕಾರಗಳ ಪ್ರಸ್ಥಾಪನೆ (ಬ) ಪ್ರಾಂತಗಳ ಪುನರಚನೆ (ಕ) ಜಾತಿ ತತ್ವವಿಚಾರದ ನಿರ್ಣಯ ಹಾಗೂ (ಡ) ಸಂಸ್ಥಾನಗಳು ಹಾಗೂ ಬ್ರಿಟಿಷ ಭಾರತದ ನಡುವಿನ ಸಂಬಂಧ.

೭. ಬ್ರಿಟಿಷ ಪ್ರಜೆಗಳಿಗಿದ್ದ ಹಕ್ಕು ಬಾಧ್ಯತೆಗಳು ತಮಗೆ ಇರಬೇಕೆಂದೂ ತಮ್ಮ ತಮ್ಮ ಸಂಸ್ಥಾನಗಳಲ್ಲಿ ಪೂರ್ಣ ಹೊಣೆಗಾರ ರಾಜ್ಯ ಪದ್ಧತಿಯು ಸ್ಥಾಪಿಸಲ್ಪಡಬೇಕೆಂದೂ ದೇಶಿಯ ಸಂಸ್ಥಾನಗಳ ಪ್ರಜೆಗಳು ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ಪರಿಷತ್ತು ತನ್ನ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

೮. ನೆಹರು ವರದಿಯಲ್ಲಿ ನಿರ್ಧಿಷ್ಟವಾದ ಮೈಸೂರು ಸಂಸ್ಥಾನದ ಆಚೆಗಿರುವ ಕರ್ನಾಟಕದ ಸಣ್ಣ ಭಾಗಗಳನ್ನು ಭಾವೀ ಕರ್ನಾಟಕ ಪ್ರಾಂತದಿಂದ ಹೊರದೂಡಬಾರದೆಂಬುದಾಗಿ ಈ ಪರಿಷತ್ತು ನಿರ್ಣಯಿಸುತ್ತದೆ.

೯. ಈ ಅತ್ಯಂತ ಕಠಿಣವಾದ ರಾಜಕೀಯ ಪ್ರಸಂಗದಲ್ಲಿ ಭಾರತದ ಎಲ್ಲ ರಾಜಕೀಯ ಪಂಗಡಗಳು ಮತ್ತು ಜಾತಿಗಳು ತಮ್ಮ ತಮ್ಮಲ್ಲಿಯ ಭೇದ ಭಾವನೆಗಳನ್ನೆಲ್ಲ ಮರೆತು ನೆಹರು ವರದಿಯೇ ಸರ್ವಸಮ್ಮತವಾಗುವಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂದು ಈ ಪರಿಷತ್ತು ಎಲ್ಲರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತದೆ.

೧೦. ನೆಹರು ವರದಿಯಲ್ಲಿಯ ಹಾಗೂ ಸರ್ವಪಕ್ಷೀಯ ಪರಿಷತ್ತಿನಲ್ಲಿ ಗೊತ್ತಾದ ಬೇಡಿಕೆಗಳು ಕೊಡಲ್ಪಡದಿದ್ದರೆ ಕಲ್ಕತ್ತೆಯಲ್ಲಿ ಕೂಡಲಿರುವ ಸರ್ವಪಕ್ಷೀಯ ಪರಿಷತ್ತಿನವರು ಆ ಬೇಡಿಕೆಗಳನ್ನು ಸಂಪಾದಿಸಲಿಕ್ಕೆ ಬೇಕಾಗುವ ಸಾಮಾರ್ಥ್ಯವನ್ನುಂಟು ಮಾಡುವುದಕ್ಕಾಗಿ ಕೆಳಗಿನ ಉಪಾಯಗಳನ್ನು ಯೋಚಿಸಬೇಕೆಂದು ಈ ಪರಿಷತ್ತು ನಿರ್ಣಯಿಸುತ್ತದೆ. (ಅ) ಆ ಕಾಲಕ್ಕೆ ಅಮಲಿನಲ್ಲಿರುವ ರಾಜ್ಯ ಘಟನೆಯಲ್ಲಿ ಯಾವ ರೀತಿಯಿಂದಲೂ ಭಾಗತಕ್ಕೊಳ್ಳದಿರುವುದು ಮತ್ತು (ಬ) ಎಲ್ಲ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ಖಾದಿ ಪ್ರಚಾರವನ್ನು ಮಾಡುವದು.

೧೧. ಲಾಹೋರದಲ್ಲಿ ಪೊಲೀಸರು ಪಾಶವೀ ಕೃತ್ಯದಿಂದ ಶಾಂತವಾದ ಮೆರವಣಿಗೆಯ ಮೇಲೆ ಏರಿಹೋಗಿ ಲಾಲಾಜಿಯವರ ಮರಣಕ್ಕೆ ಕಾರಣವಾಗುವಂತೆ ಮುಖಂಡರನ್ನು ಹೊಡೆದದ್ದಕ್ಕಾಗಿಯೂ ಅದರಂತೆ ಲಖನೌದಲ್ಲಿ ಬಲು ಶಾಂತವಾದ ಮೆರವಣಿಗೆಯಲ್ಲಿ ಪಂಡಿತ್ ಜವಾಹರಲಾಲ ನೆಹರು ಮುಂತಾದವರ ಮೇಲೆ ಸಂಯುಕ್ತ ಪ್ರಾಂತದ ಪೊಲೀಸರು ಆಚರಿಸಿದ ಪಾಶವೀ ಕೃತ್ಯಕ್ಕಾಗಿಯೂ ಈ ಪರಿಷತ್ತು ತನ್ನ ತೀವ್ರವಾದ ನಿಷೇಧವನ್ನು ವ್ಯಕ್ತಪಡಿಸುತ್ತದೆ.[೨೫]

ಕರ್ನಾಟಕ ಸರ್ವಪಕ್ಷೀಯ ಪರಿಷತ್ತು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರಮುಖ ನಾಯಕರುಗಳು ಪರಿಷತ್ತಿನಲ್ಲಿ ಭಾಗವಹಿಸಿದರು. ಪಿ.ಜೆ. ಹಳಕಟ್ಟಿಯವರು, ಸೂಚಿಸಿದ ಸ್ವಯಂ ನಿರ್ಣಯ ತತ್ವದಲ್ಲಿ ನಮ್ಮ ವಿಶ್ವಾಸವಿದೆ. ಮತ್ತು ಭಾರತಿಯರೇ ಭಾರತದ ರಾಜ್ಯ ಘಟನೆಯನ್ನು ಮಾಡಲು ಯೋಗ್ಯರು ಎಂಬ ತೀರ್ಮಾನವು ವಿಶೇಷವಾಗಿದೆ. ಹಾಗೂ ರಾಷ್ಟ್ರೀಯ ಬೇಡಿಕೆಯನ್ನು ಬ್ರಿಟಿಷ ಪಾರ್ಲಿಮೆಂಟು ಪೂರೈಸದಿದ್ದರೆ ಅವರು ಸಲ್ಲಿಸಿದ ರಾಜ್ಯ ಘಟನೆಯಲ್ಲಿ ಭಾಗವಹಿಸದೇ ಖಾದಿ ಪ್ರಚಾರ ಹಾಗೂ ಪರದೇಶಿ ಬಟ್ಟೆಗಳ ಬಹಿಷ್ಕಾರವನ್ನು ಮಾಡುವುದು ಮತ್ತೊಂದು ಮಹತ್ವದ ತೀರ್ಮಾನವಾಗಿದೆ.

೬.೩ ಬೆಳಗಾವಿ ಕಾಂಗ್ರೆಸ ಅಧಿವೇಶನ

ಕಾಕಿನಾಡದಲ್ಲಿ ನಡೆದ ಕಾಂಗ್ರೆಸ ಅಧಿವೇಶನದಲ್ಲಿ ಕರ್ನಾಟಕದವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದಲ್ಲಿ ಮುಂದಿನ ಕಾಂಗ್ರೆಸ ಅಧಿವೇಶನ ನಡೆಯಬೇಕೆಂದು ಆಮಂತ್ರಣ ಬಂದಾಗ ಕಾಕಿನಾಡ ಕಾಂಗ್ರೆಸ ಅಧ್ಯಕ್ಷರಾದ ಮೌಲಾನ ಮಹಮ್ಮದ ಅಲಿ ಅದನ್ನು ಪುಷ್ಠೀಕರಿಸಿದ್ದರಿಂದ ಸರ್ವಾನುಮತಿ ದೊರೆಯಿತು. ವಿಜಾಪೂರದ ಕಾಂಗ್ರೆಸ ಮುಖಂಡರಾದ ಶ್ರೀನಿವಾಸರಾವ ಕೌಜಲಗಿ ಅವರು ಆಮಂತ್ರಣದ ಸೂಚನೆಯನ್ನು ಮಂಡಿಸಿ ಒಪ್ಪಿಗೆ ಪಡೆದರು.

"ಕರ್ನಾಟಕದ ಯಾವ ಸ್ಥಳಗಳಲ್ಲಿ ಅಧಿವೇಶನ ನಡೆಯಬೇಕು ಎಂಬುವದನ್ನು ನಿರ್ಧಾರ ಮಾಡಲು ಕರ್ನಾಟಕ ಪ್ರಾಂತಿಯ ಕಾಂಗ್ರೆಸ ಸಮಿತಿಯ ಸಭೆ ಹುಬ್ಬಳ್ಳಿಯಲ್ಲಿ ಜರುಗಿತು. ಮಂಗಳೂರಿನ ಪರ ಕಾರ್ನಾಡ ಸದಾಶಿವರಾಯರು, ವಿಜಾಪೂರ ಪರ ಶ್ರೀನಿವಾಸ ಕೌಜಲಗಿ, ಬೆಳಗಾವಿ ಪರ ಗಂಗಾಧರಾವ್ ದೇಶಪಾಂಡೆ ವಾದಿಸಿದರು. ಅಂತಿಮವಾಗಿ ಸಭೆಯನ್ನು ಬೆಳಗಾವಿಯಲ್ಲಿ ನಡೆಸಲು ನಿರ್ಧರಿಸಿತು."[೧೬]

ಬೆಳಗಾವಿ ಕಾಂಗ್ರೆಸ ಅಧಿವೇಶನವು ಅಖಿಲ ಭಾರತದ ಕಾಂಗ್ರೆಸ ಅಧಿವೇಶನಗಳಲ್ಲಿ ವಿಶೇಷ ಮಹತ್ವವನ್ನು ಪಡೆದಿದೆ. ಮಹಾತ್ಮಗಾಂಧಿಯವರು ಅಧ್ಯಕ್ಷತೆ ವಹಿಸಿದ ಏಕೈಕ ಸಮ್ಮೇಳನವಾಗಿದೆ. ಕನ್ನಡಿಗರಿಗೆ ಈ ಸಮ್ಮೇಳನದಿಂದ ನವೋತ್ಸಾಹ ತುಂಬಿತು. ಬಾಗಲಕೋಟ ಜಿಲ್ಲೆಯ ಚಳವಳಿಗಾರರು ಗಾಂಧೀಜಿಯವರ ದರ್ಶನ ಪಡೆದು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಮತ್ತಷ್ಟು ಪ್ರೇರಣೆ ಹೊಂದಿದರು.

ವಿಜಾಪೂರ ಜಿಲ್ಲೆಯ ಅನೇಕ ಚಳವಳಿಗಾರರು ಅಧಿವೇಶನದಲ್ಲಿ ಭಾಗವಹಿಸಿದ್ದರು. ಶ್ರೀನಿವಾಸರಾವ್ ಕೌಜಲಗಿ, ಹಣಮಂತರಾವ್ ಕೌಜಲಗಿ, ಕಾಕಾ ಕಾರಖಾನೀಸ, ಗಣಪತಚಂದ ಶಹಾ, ಕಲ್ಲಯ್ಯ ಡೊಣೂರ ವಿಜಾಪೂರದಿಂದ, ನಾಗಠಾಣದಿಂದ ಎಚ್.ಜಿ.ಕಟನಳ್ಳಿ, ಕಾಖಂಡಕಿಯಿಂದ ಜಿ.ಡಿ. ಗೊಸಾವಿ, ಬಾಗಲಕೋಟಯಿಂದ ಶ್ರೀನಿವಾಸ ನೀರಲಕೇರಿ. ಕೃಷ್ಣರಾವ್ ಜೋರಾಪೂರ, ಕೃಷ್ಣ ಪದಕಿ.

ಸುಗಣೇಂದ್ರ ಕೆರೂರ, ಶ್ರೀನಿವಾಸರಾವ್ ಮಂಗಳವೇಡೆ, ವಾಸುದೇವ ಡಂಬಳ, ಸುಬ್ಬಣ್ಣಾಚಾರ್ಯ ಗೋಕೆ, ಗಲಗಲಿಯಿಂದ, ಭೀಮಪ್ಪ ಬೇವೂರ, ಗುಳೇದಗುಡ್ಡದಿಂದ ಗುಂಡುಭಟ್ಟ ಜೋಶಿ, ಸಾಬಣ್ಣಶಿಂಧೆ, ಹುನಗುಂದದಿಂದ ಮಧ್ವರಾಜ ಪ್ಯಾಟಿ, ವ್ಹಿ.ಆರ್.ದೇಸಾಯಿ, ಡಿ.ಕೆ. ಜೋಶಿ, ಪಾಪಣ್ಣ ಮತ್ತು ಪಂಚಾಲ ಡವಳಗಿಯಿಂದ ತಮ್ಮಾಜಿ ಮಿರಜಕರ್ ಸೊನ್ನದಿಂದ ಕೃಷ್ಣಾಜಿ ಕೊಲ್ಹಾರ ಮುಂತಾದವರು ಭಾಗವಹಿಸಿದ್ದರು.

ಬೆಳಗಾವಿ ಕಾಂಗ್ರೆಸ ಅಧಿವೇಶನದಲ್ಲಿ ಹಣಮಂತರಾವ್ ಕೌಜಲಗಿಯವರು ಮಹತ್ವದ ಪಾತ್ರ ವಹಿಸಿದ್ದರು. ಖಾದಿ ಮತ್ತು ಗುಡಿ ಕೈಗಾರಿಕೆಗಳ ವಸ್ತು ಪ್ರದರ್ಶನದ ನೇತೃತ್ವವನ್ನು ಹಣಮಂತರಾವ್ ಕೌಜಲಗಿ ಮತ್ತು ಸಿದ್ದುರಾವ್ ಪೂಜಾರಿ ವಹಿಸಿದ್ದರು. ಇವರಿಬ್ಬರೂ ವಿಜಾಪೂರ ಜಿಲ್ಲೆಯವರು. ಕೆ.ಎ. ವೆಂಕಟರಮಯ್ಯನವರು ಹೇಳುವಂತೆ "ನಾನು ಸೇವಾದಳದ ಸ್ವಯಂ ಸೇವಕನಾಗಿ ವಸ್ತುಪ್ರದರ್ಶನದಲ್ಲಿದ್ದೆ ಹಣಮಂತರಾವ ಕೌಜಲಗಿಯವರು ವಸ್ತು ಪ್ರದರ್ಶನದ ಕಾರ್ಯದರ್ಶಿಯಾಗಿದ್ದರು. ಸಹ ಕಾರ್ಯದರ್ಶಿಯಾಗಿ ಸಿದ್ದುರಾವ್ ಪೂಜಾರಿಯವರಿದ್ದರು. ಕರ್ನಾಟಕ ಚರಕಾ ಸಂಘಕ್ಕೆ ಹಣಮಂತರಾವ್ ಕೌಜಲಗಿಯವರೆ ಮುಖ್ಯಸ್ಥರಾಗಿದ್ದರು... ಕಲಾದಗಿ ಹುಬ್ಬಳ್ಳಿ ಮತ್ತು ಧಾರವಾಡದಿಂದ ನೇಕಾರರು ಬಂದಿದ್ದರು."[೧೭]

೬.೪ ಸೈಮನ್ ಆಯೋಗಕ್ಕೆ ಬಹಿಷ್ಕಾರ

"ಭಾರತದಲ್ಲಿ ಸಂವಿಧಾನಿಕ ಬೆಳವಣಿಗೆಗೆ ಹಲವಾರು ಕಾನೂನುಗಳು ಜಾರಿಗೆ ಬಂದವು. ಅದರಂತೆ ೧೯೧೯ರ ಕಾಯ್ದೆಯ ಪರಾಮರ್ಶೆಯನ್ನು ಮಾಡಲು ೧೯೨೭ರ ನವ್ಹೆಂಬರದಲ್ಲಿ ಲಂಡನ್ನಿನ ಬ್ರಿಟಿಷ ಮಂತ್ರಿ ಮಂಡಲವು ಒಂದು ಘೋಷಣೆಯನ್ನು ಹೊರಡಿಸಿತು. ಮುಂದಿನ ಸುಧಾರಣೆಗಳನ್ನು ಮಾಡಲು ಮತ್ತು ಸಂವಿಧಾನಿಕ ಪ್ರಜಾಸತ್ತೆಯನ್ನು ವಿಸ್ತರಿಸಲು ಭಾರತವು ಎಷ್ಟರ ಮಟ್ಟಿಗೆ ಅರ್ಹವಾಗಿದೆ ಎಂಬುದನ್ನು ಪರಿಶೀಲಿಸಲು ಒಂದು ರಾಯಲ್ ಕಮೀಷನ್ ನೇಮಿಸುವುದಾಗಿ ಘೋಷಣೆ ಹೊರಡಿಸಿತು. ಬ್ರಿಟಿಷ ರಾಜಕಾರಣಿಯಾದ ಸರ್ ಜಾನ್ ಸೈಮನ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಅದರಲ್ಲಿಯ ಏಳು ಜನ ಸದಸ್ಯರಲ್ಲಿ ಭಾರತೀಯರು ಒಬ್ಬರೂ ಇರಲಿಲ್ಲ."[೧೮]

ಆಯೋಗದಿಂದ ಭಾರತೀಯರನ್ನು ಹೊರಗಿಟ್ಟಿದ್ದು ಮತ್ತು ಸ್ವರಾಜ್ಯಕ್ಕೆ ಭಾರತವು ಅರ್ಹವಾಗಿದೆಯೇ ಎಂಬುದನ್ನು ವಿದೇಶಿಯರು ಚರ್ಚಿಸಿ ನಿರ್ಧರಿಸುತ್ತಾರೆ ಎಂಬ ಅಭಿಪ್ರಾಯ. ಬ್ರಿಟಿಷರ ಈ ಕ್ರಮವು ಭಾರತೀಯರ ಸ್ವ ನಿರ್ಧಾರದ ಹಕ್ಕಿನ ಮೇಲೆ ನಡೆದ ಆಕ್ರಮಣ ಮತ್ತು ಭಾರತೀಯರ ಸ್ವಾಭಿಮಾನದ ಮೇಲಿನ ಉದ್ದೇಶ ಪೂರಕ ಅವಮಾನ ಎಂದು ಆಯೋಗವನ್ನು ಭಾರತೀಯರು ಬಹಿಷ್ಕರಿಸಿದರು.

"೧೯೨೭ರಲ್ಲಿ ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ ಅಧಿವೇಶನದ ಅಧ್ಯಕ್ಷರಾದ ಶ್ರೀನಿವಾಸ

ಅಯ್ಯಂಗಾರ, ಕಮಿಷನ್ನಿನ ವಿಚಾರಣಾ ಕಾರ್ಯಕ್ರಮವನ್ನು ಕಾಂಗ್ರೆಸ್ ಬಹಿಷ್ಕರಿಸಬೇಕೆಂದು ಕರೆ ನೀಡಿದರು. ಭಾರತೀಯರಿಗೆ ತಮ್ಮದೆ ಆದ ಸಂವಿಧಾನವನ್ನು ಒಂದು ದುಂಡು ಮೇಜಿನ ಪರಿಷತ್ತಿನ ಮೂಲಕವೋ ಇಲ್ಲವೇ ಸಾಂಪ್ರದಾಯಿಕವಾದ ಪಾರ್ಲಿಮೆಂಟಿನಲ್ಲೋ ನಿರ್ಧರಿಸಿ ರೂಪಿಸಿಕೊಳ್ಳುವ ಹಕ್ಕಿದೆ. ಕಮಿಷನನ್ನು ನೇಮಿಸಿ ಆ ಹಕ್ಕನ್ನು ಸ್ಪಷ್ಟವಾಗಿ ವಂಚಿಸಲಾಗಿದೆ. ಸ್ವರಾಜ್ಯಕ್ಕೆ ಅಥವಾ ಯಾವುದೇ ಬಗೆಯ ಜವಾಬ್ದಾರಿ ಸರಕಾರಕ್ಕೆ ನಮಗೆ ಅರ್ಹತೆಯಿದೆಯೋ ಇಲ್ಲವೋ ಎಂಬ ವಿಚಾರಣೆ ನಡೆಸುವುದಕ್ಕೆ ನಾವು ಭಾಗಿಗಳಾಗುವದು ಸಾಧ್ಯವಿಲ್ಲದ ಮಾತು. ಕಮಿಷನ್‌ದಲ್ಲಿ ಭಾರತೀಯರು ಯಾರೂ ಇಲ್ಲದಂತೆ ಮಾಡಿ ಉದ್ದೇಶಪೂರ್ವಕವಾಗಿ ಭಾರತೀಯರ ಆತ್ಮಗೌರವಕ್ಕೆ ಚ್ಯುತಿತಂದು, ಅವಮರ್ಯಾದೆ ಮಾಡಲಾಗಿದೆ"[೧೯] ಎಂದು ಹೇಳಿದರು.

ಕಾಂಗ್ರೆಸ, ಲಿಬರಲ್ ಫೆಡರೇಷನ್ ಮತ್ತು ಮುಸ್ಲಿಂ ಲೀಗ್ ಸೇರಿಕೊಂಡು ಸೈಮನ್ ಆಯೋಗವನ್ನು ಬಹಿಷ್ಕರಿಸತಕ್ಕದೆಂದು ನಿರ್ಧರಿಸಿದವು. ಸೈಮನ್ ಕಮಿಷನ್ ಎಲ್ಲೆ ಹೋದರೂ ಎದುರಾದದ್ದು 'ಸೈಮನ್ ಹಿಂತಿರುಗು' ಎಂಬ ಘೋಷವಾಕ್ಯ. ಇದು ರಾಷ್ಟ್ರೀಯ ಹೋರಾಟದಲ್ಲಿ ಐಕ್ಯತೆಯನ್ನು ಮೂಡಿಸಿತು."ಬಾಗಲಕೋಟದಲ್ಲಿ ಡಿಸೆಂಬರ್ ೫, ೧೯೨೭ರಂದು ಹಿಂದೂಸ್ಥಾನಿ ಸೇವಾದಳದ ಬೈಲಿನಲ್ಲಿ ಸೈಮನ್ ಕಮಿಷನಕ್ಕೆ ಬಹಿಷ್ಕಾರ ಹಾಕಲು ರಾವಸಾಹೇಬ ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಕಿರಸೂರ ವಕೀಲರು ಸಭೆಯ ಠರಾವನ್ನು ಪ್ರತಿಯೊಂದು ರಾಷ್ಟ್ರದ ಜನ್ಮಸಿದ್ಧ ಹಕ್ಕಾದ ಸ್ವಯಂ ನಿರ್ಣಯ ರದ್ಧಾಗಿಯೂ ಅಸೆಂಬ್ಲಿಯವರು ಸಾದರಪಡಿಸಿದ ರಾಷ್ಟ್ರೀಯ ಬೇಡಿಕೆಗಳನ್ನು ಧಿಕ್ಕರಿಸಿಯೂ ಬ್ರಿಟಿಷ ಪಾರ್ಲಿಮೆಂಟ್‌ನವರು ನಿಯಮಿಸಿದ ಸೈಮನ್ ಕಮೀಷವನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಈ ಸಭೆಯು ಖಂಡಿತವಾಗಿ ಅಭಿಪ್ರಾಯ ಪಡುತ್ತದೆ ಮತ್ತು ರಾಷ್ಟ್ರದಲ್ಲಿರುವ ಎಲ್ಲ ಪಂಗಡಗಳು ಒಗ್ಗಟ್ಟಾಗಿ ಈ ಕಮಿಷನ್‌ವನ್ನು ಬಹಿಷ್ಕರಿಸಬೇಕೆಂದು ಎಲ್ಲರಲ್ಲಿ ಪ್ರಾರ್ಥಿಸುತ್ತದೆ ಎಂದು ಓದಿದರು."[೨೦] ಹಾಗೂ ೧೯೧೯ರ ಕಾಯ್ದೆಯ ಸುಧಾರಣೆಯ ಇತಿಹಾಸವನ್ನು ಹೇಳಿ ಬ್ರಿಟಿಷ ಪಾರ್ಲಿಮೆಂಟಿನ ಕಪಟತನವನ್ನು ಉದಾಹರಣೆಗಳಿಂದ ತೋರಿಸಿಕೊಟ್ಟರು. ಬ್ರಿಟಿಷರಿಂದ ಯಾವ ಹಕ್ಕನ್ನು ಪಡೆಯುವದು ಶಕ್ಯವಿಲ್ಲ ಎಂದು ಹೇಳಿದರು.

"ಡಾ. ಬಸಪ್ಪ ಪಾಟೀಲರು ಠರಾವುವನ್ನು ಸಮರ್ಥಿಸುತ್ತಾ ಕೇವಲ ಬಾಯಾಳಿತನದಿಂದ ಸ್ವರಾಜ್ಯವು ಎಂದೂ ಸಿಗಲಾರದು ಅಥವಾ ವಿನಂತಿ ಅರ್ಜಿಗಳಿಂದಲೂ ಸಿಗಲಾರದು. ನಾವೆಲ್ಲರೂ ಕೂಡಿ ಕೆಲಸವನ್ನು ಮಾಡಿದರೆ ಮಾತ್ರ ಸಿಗುವುದು. ಚುನಾವಣೆಗಳಲ್ಲಿ ಮೂರು ವರ್ಷಕ್ಕೊಮ್ಮೆ ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡುವದರಿಂದ ಲಾಭವೂ ಆಗದು ಈಗ ಕಮಿಷನ್‌ಕ್ಕೆ ಬಹಿಷ್ಕಾರ ಹಾಕಬೇಕೆಂದು ದೇಶದಲ್ಲೆಲ್ಲಾ ಚಳವಳಿ ಎದ್ದಿದೆ. ಅದನ್ನು ಪರಿಣಾಮಕಾರಿಯಾಗಿ ಮಾಡುವದೆ ನಮ್ಮ ಕೆಲಸ ನಾವು ಕೇವಲ ಮಾತನಾಡಿದರೆ ಸರಕಾರ ನಮ್ಮ ಮಾತಿಗೆ ಬೆಲೆ ಕೊಡುವುದಿಲ್ಲ. ಮಾತನಾಡಿದಂತೆ ನಡೆದರೆ ಮಾತ್ರ ನಮ್ಮ ಉದ್ದೇಶ ಸಾಧಿಸುತ್ತದೆ. ಈ ಸೈಮನ್ ಕಮಿಷನ್‌ವನ್ನು ನಾವೆಲ್ಲರು

ಬಹಿಷ್ಕರಿಸುವದು ಅಗತ್ಯವಿದೆ ಎಂದು ಮಾತನಾಡಿದರು."[೨೧]

"ಬಾಗಲಕೋಟದಲ್ಲಿ ಕರ್ನಾಟಕ ಕಾಂಗ್ರೆಸ ಕಮೀಟಿಯ ಅಧಿವೇಶನ ಡಿಸೆಂಬರ್ ೩-೦೪-೧೯೨೭ ರಂದು ನಡೆದಾಗ ಪಾರ್ಲಿಮೆಂಟನಿಂದ ಸೈಮನ್ ಕಮಿಷನ್ ಸ್ವಯಂ ನಿರ್ಣಯಕ್ಕೆ ಸಂಪೂರ್ಣ ವಿರುದ್ಧ ವಾದುದರಿಂದ ಹಿಂದಿಯವರು ಅದಕ್ಕೆ ಬಹಿಷ್ಕಾರ ಹಾಕಬೇಕೆಂಬ ನಿರ್ಣಯ ಸರ್ವಾನುಮತದಿಂದ ಅಂಗಿಕರಿಸಲ್ಪಟ್ಟಿತು."[೨೨]

ವಿಜಾಪೂರ ಜಿಲ್ಲೆಯಲ್ಲಿ ಹರತಾಳಗಳನ್ನು ನಡೆಸುವಂತೆ ಪತ್ರಿಕೆಗಳು ಪ್ರಕಟಿಸುತ್ತಿದ್ದವು. ಸೈಮನ್ ಕಮಿಷನ್‌ವನ್ನು ಬಹಿಷ್ಕರಿಸುವದು ಭಾರತೀಯರಿಗೆ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಲು ಒಂದು ಉತ್ತಮ ಅವಕಾಶ ದೊರಕಿಸಿಕೊಟ್ಟಿದೆ. ಭಾರತವು ಪಾಶ್ಚಿಮಾತ್ಯರ ವಿರುದ್ಧ ಹೋರಾಡಿ ತಮ್ಮ ಆತ್ಮಗೌರವ ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸಿದವು.

ಸೈಮನ್ ಕಮಿಷನ್‌ದ ವಿರುದ್ಧ ಹರತಾಳ ಮಾಡುವದು ಯಶಸ್ವಿಯಾಗಿದ್ದು, ೧೯೨೧ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಭೇಟಿ ನೀಡಿದ ಸಮಯದಲ್ಲಿ. ಫೆಬ್ರುವರಿ ೩ ರಂದು ನಡೆಯುವ ಸಂಪೂರ್ಣ ಹರತಾಳ ದಿನಕ್ಕೆ ಕರ್ನಾಟಕದವರು ನೀರಿಕ್ಷಿಸುತ್ತಿರುವರೆಂದು ಕರ್ನಾಟಕ ವೈಭವ ಪತ್ರಿಕೆ ವರದಿ ಮಾಡಿದೆ.

"೫-೦೭-೧೯೩೦ ರಂದು ವಿಜಾಪೂರದಲ್ಲಿ ಗಾಂಧಿದಿನವನ್ನು ಆಚರಿಸಿ ಸೈಮನ್‌ನ ಗೊಂಬೆಯನ್ನು ಸಿದ್ಧಪಡಿಸಿ ಅದರ ಕೈಯಲ್ಲಿ ಸೈಮನ್ ವರದಿಯನ್ನು ಕೊಟ್ಟು ಗೊಂಬೆಯ ಕೊರಳಿಗೆ ಉಳ್ಳಾಗಡ್ಡಿಯ ಸರಗಳನ್ನು ಹಾಕಿ ಊರಲ್ಲಿ ಮೆರೆಸಲಾಯಿತು. ಸಂಜೆ ಆರು ಗಂಟೆಗೆ ನಡೆದ ಸಭೆಯಲ್ಲಿ ಮರುಳಾರಾಧ್ಯ ಶಾಸ್ತ್ರಿಗಳು ಭಾಷಣ ಮಾಡಿದರು."[೨೩] ಹೀಗೆ ಸೈಮನ್ ಕಮಿಷನ್ ವಿರುದ್ಧ ಬಾಗಲಕೋಟದಲ್ಲಿ ವ್ಯವಸ್ಥಿತವಾದ ಮಾದರಿಯಲ್ಲಿ ಕರ್ನಾಟಕ ಕಾಂಗ್ರೆಸ್ ಹರತಾಳವನ್ನು ನಡೆಸಿತು.

೬.೫ ವಿಜಾಪೂರ ಜಿಲ್ಲಾ ರಾಜಕೀಯ ಕೈದಿಗಳ ಪರಿಷತ್ತು

"ವಿಜಾಪೂರ ಜಿಲ್ಲಾ ರಾಜಕೀಯ ಕೈದಿಗಳ ಪರಿಷತ್ ೨೭-೦೨-೧೯೩೧ರಂದು ಬೆಳಗಾವಿಯ ಕಾಂಗ್ರೆಸ್ ಮುಖಂಡರಾದ ಜೋಶಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜೈಲಿನಲ್ಲಿ ಶಿಸ್ತಿನಿಂದ ನಡೆದುಕೊಳ್ಳಲು ಹಾಗೂ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಕಷ್ಟನಷ್ಟಗಳನ್ನು ಸಹಿಸಲಿಕ್ಕೆ ಸಿದ್ಧರಾಗಿ ಮುಂದೆ ಬರಲು ಪ್ರತಿನಿಧಿಗಳಿಗೆ ಕೇಳಿಕೊಂಡರು. ರಾಜಕೀಯ ಕೈದಿಗಳ ಸಂಬಂಧವಾಗಿ ಸೆರೆಮನೆ ಅಧಿಕಾರಿಗಳ ವರ್ತನೆ, ಪೋಲೀಸ್ ಅತ್ಯಾಚಾರ, ಮ್ಯಾಜಿಸ್ಟ್ರೇಟರ್‌ರ ಅನ್ಯಾಯದ ಪರಮಾವಧಿ ಇವುಗಳ ನಿಷೇದಾರ್ಥಕವಾಗಿ ಸಭೆಯಲ್ಲಿ ಗೊತ್ತುವಳಿ ಸ್ವೀಕೃತಗೊಂಡವು. ಅವುಗಳಲ್ಲಿ ಮುಖ್ಯವಾದವುಗಳು ಎಂದರೆ ಕೆಲ ಅಧಿಕಾರಿಗಳು ರಾಜಕೀಯ ಕೈದಿಗಳೊಡನೆ ಸೇಡು ತೀರಿಸಿಕೊಳ್ಳುವ ಬುದ್ಧಿಯಿಂದಲೂ ಹಾಗೂ ಕಠೋರತನದಿಂದಲೂ ವರ್ತಿಸುತ್ತಿರುವದರಿಂದ ಅವರ

ವರ್ತನೆಯನ್ನು ಸಭೆಯು ನಿಷೇಧಿಸುತ್ತದೆ. ರಾಜಕೀಯ ಖೈದಿಗಳ ವರ್ಗೀಕರಣವು ಮತ್ಸರ ಬುದ್ಧಿಯಿಂದ ಮಾಡಲ್ಪಟ್ಟಿರುವ ಕಾರಣ ಈ ಸಭೆಯು ಅದನ್ನು ನಿಷೇಧಿಸುವ ಹಾಗೂ ವರ್ಗೀಕರಣವನ್ನು ರದ್ದುಪಡಿಸಬೇಕಾಗಿ ಕೇಳಿಕೊಳ್ಳುತ್ತಿದೆ."[೨೪] ೧೯೨೨ರ ನಂತರ ದೇಶದಲ್ಲಿ ಯಾವುದೇ ಚಳವಳಿ ನಡೆಯದೆ ಕೇವಲ ಸಂಘಟನೆಗಳಿಗೆ ಹೆಚ್ಚಿನ ಒತ್ತು ನೀಡಿ ಮುಂಬರುವ ಚಳವಳಿಗೆ ಜನರನ್ನು ಸಿದ್ಧಗೊಳಿಸಿದರು. ಸೇವಾದಳವು ಸ್ಥಾಪನೆಗೊಂಡಿರುವುದರಿಂದ ಭಾರತೀಯ ಯುವಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ರಾಷ್ಟ್ರೀಯ ಆಂದೋಲನಕ್ಕೆ ಸಿದ್ಧರಾದರು. ಸೇವಾದಳದ ಮೂಲಕ ಚಳವಳಿಯ ಸಂದೇಶಗಳನ್ನು ಬಾಗಲಕೋಟ ಜಿಲ್ಲೆಯ ಮೂಲೆ ಮೂಲೆಗಳಿಗೂ ತಲುಪಿಸಿದರು.

ಅಡಿ ಟಿಪ್ಪಣಿಗಳು

೧. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೨-೦೮-೧೯೨೭, ಪುಟ ಸಂಖ್ಯೆ ೪.

೨. ಅದೇ, ಪುಟ ಸಂಖ್ಯೆ ೪

೩. ಅದೇ, ಪುಟ ಸಂಖ್ಯೆ ೪

೪. ಅದೇ, .ಪುಟ ಸಂಖ್ಯೆ ೪

೫. ಅದೇ, .ಪುಟ ಸಂಖ್ಯೆ ೪

೬. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೭-೧೧-೧೯೨೭, ಪುಟ ಸಂಖ್ಯೆ ೭.

೭. ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ, ದಿನಾಂಕ ೩-೮-೧೯೨೮ ಪುಟ ಸಂಖ್ಯೆ ೫

೮. ಅದೇ, ಪುಟ ಸಂಖ್ಯೆ ೫

೯. ಅದೇ, ಪುಟ ಸಂಖ್ಯೆ ೬.

೧೦. ಗೋಪಾಲ ಎಸ್.(ಸಂ), ಸೆಲೆಕ್ಟೆಡ್ ವರ್ಕ ಆಫ್ ಜವಹರಲಾಲ್ ನೆಹರು, ಸಂಪುಟ ೩ ಸಂಗಮ ಬುಕ್ಸ, ನ್ಯೂದಿಲ್ಲಿ, ೧೯೭೫, ಪುಟ ಸಂಖ್ಯೆ ೧೬೫.

೧೧. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೫-೯-೧೯೨೭, ಪುಟ ಸಂಖ್ಯೆ ೪.

೧೨. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೦೨.

೧೩. ಮನಗೂಳಿ ಶಂ.ಬಾ., ಮಾಗಿದರೂ ಮೊಗ್ಗು, ಹಿಂದ್ ಸೇವಾ ಟ್ರಸ್ಟ್, ಹುಬ್ಬಳ್ಳಿ, ೧೯೬೬, ಪುಟ ಸಂಖ್ಯೆ ೨೨೬-೨೨೭.

೧೪. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦, ಪುಟ ಸಂಖ್ಯೆ, ೩೫

೧೫. ಅದೇ, ಪುಟ ಸಂಖ್ಯೆ ೪೦-೪೧.

೧೬. ಅದೇ, ಪುಟ ಸಂಖ್ಯೆ ೫೦.

೧೭. ವೆಂಕಟರಮಣಯ್ಯ, ಕೆ.ಎ., ದಿ ಸ್ಟೋರಿ ಅಫ್ ಸತ್ಯಾಗ್ರಹಿ, ಸರದಾರ ಕೆ.ಎ. ವೆಂಕಟರಮಣಯ್ಯ ಸ್ಮಾರಕ ಸಮಿತಿ, ಬೆಂಗಳೂರು, ೧೯೭೬, ಪುಟ ಸಂಖ್ಯೆ ೩೮.

೧೮. ಬಿಪಿನ್ ಚಂದ್ರ, ಫ್ರೀಡಂ ಸ್ಟ್ರಗಲ್, ನ್ಯಾಷನಲ್ ಬುಕ್ ಟ್ರಸ್ಟ, ನ್ಯೂದಿಲ್ಲಿ, ೧೯೭೨, ಪುಟ ಸಂಖ್ಯೆ ೧೬೫.

೧೯. ಅದೇ, ಪುಟಸಂಖ್ಯೆ ೧೬೫.

೨೦. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೦೬-೧೨-೧೯೨೭, ಪುಟ ಸಂಖ್ಯೆ ೩.

೨೧. ಅದೇ, ಪುಟ ಸಂಖ್ಯೆ ೩.

೨೨. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ, ದಿನಾಂಕ ೧೫-೧-೧೯೨೭, ಪುಟ ಸಂಖ್ಯೆ ೨

೨೩. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೧-೭-೧೯೩೦, ಪುಟ ಸಂಖ್ಯೆ ೩.

೨೪. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧-೩-೧೯೩೧, ಪುಟ ಸಂಖ್ಯೆ ೪.

ಅಧ್ಯಾಯ ೭

ಕಾನೂನು ಭಂಗ ಚಳವಳಿ

ಅಧ್ಯಾಯ ೭

ಕಾನೂನು ಭಂಗ ಚಳವಳಿ

ಭಾರತದಲ್ಲಿ ಸ್ವಾತಂತ್ರ್ಯವನ್ನು ಗಳಿಸಲು ಅಂದು ಹಲವು ಮಾದರಿಯ ಚಳವಳಿಗಳು ನಡೆದವು. ಅವು ದೇಶದ ಹಾಗೂ ಜನತೆಯ ಒಳಿತಿಗಾಗಿ ನಡೆದವುಗಳಾಗಿವೆ. ನಾಡಿನ ಹಿರಿಯರು ಚಳವಳಿ ಮಾಡಿ ಅನೇಕ ತೊಂದರೆಗಳನ್ನು ಅನುಭವಿಸಿದ ಉದಾಹರಣೆಗಳಿವೆ. ಅಸಹಕಾರ ಚಳವಳಿಯ ನಂತರ ಕಾಂಗ್ರೆಸನ ಮೊತಿಲಾಲ್ ನೆಹರು, ಚಿತ್ತರಂಜನದಾಸ ಮುಂತಾದ ಮುಖಂಡರು ಕಾಂಗ್ರೆಸನಿಂದ ಹೊರ ಬಂದು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ಇದಕ್ಕೆ ಮುಖ್ಯ ಕಾರಣವೆಂದರೆ ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂಪಡೆದಿದ್ದು, ಮತ್ತು ಚಳವಳಿಗಾರರಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರು ಎಂಬ ಎರಡು ಭಾಗಗಳು ಉಂಟಾಗಿದ್ದವು. ಮತ್ತೊಮ್ಮೆ ಬೃಹತ್ ಮಟ್ಟದ ಹೋರಾಟವನ್ನು ಸಂಘಟಿಸುವ ಜವಾಬ್ದಾರಿ ಗಾಂಧೀಜಿಯವರ ಮೇಲೆ ಇತ್ತು. ರಚನಾತ್ಮಕ ಕಾರ್ಯಗಳ ಮೂಲಕ ಚಳವಳಿಗೆ ಮತ್ತೊಮ್ಮೆ ಜೀವ ತುಂಬಲು ಕಾನೂನು ಭಂಗ ಚಳವಳಿಯನ್ನು ಆರಂಭಿಸಲಾಯಿತು.

೭.೧. ರಾಷ್ಟ್ರ ಮಟ್ಟದಲ್ಲಿ ಕಾನೂನುಭಂಗ ಚಳವಳಿ

೧. ಪೂರ್ಣ ಸ್ವರಾಜ್ಯ ಘೋಷಣೆ

"ಸ್ವರಾಜ್ಯದತ್ತ ಸಾಗುವ ದಾರಿ ದುಸ್ತರವಾಗಿದೆ. ಗುರಿ ಮುಟ್ಟಲು ಸಂಘಟನೆಯ ಕುಶಲತೆ ಅವಶ್ಯವಾಗಿದೆ. ಸ್ವರಾಜ್ಯ ಪಡೆಯಲು ನಾವು ಹಳ್ಳಿಗಳನ್ನು ತಲುಪಬೇಕು. ಅಲ್ಲಿ ನಮ್ಮ ಸೇವೆ ಸಲ್ಲಿಸಿ ಸಾಮಾನ್ಯರಲ್ಲಿ ತಿಳುವಳಿಕೆಯನ್ನು ಮೂಡಿಸಬೇಕು, ರಾಷ್ಟ್ರೀಯ ಭಾವನೆ ತಲೆದೋರುವಂತೆ ಜನರಿಗೆ ಶಿಕ್ಷಣ ಕೊಡಬೇಕು ಎಂದು ಗಾಂಧೀಜಿಯವರು ೧೯೨೫ರ ಮೇ, ೨೧ ರ ಹರಿಜನ ಸಂಚಿಕೆಯಲ್ಲಿ ಪ್ರಕಟಿಸಿದರು".[೧] ಹಾಗೂ ಚೌರಿ ಚೌರಾದಲ್ಲಿ ಆದಂತೆ ಚಳವಳಿಯನ್ನು ರದ್ದು ಮಾಡುವುದಿಲ್ಲ. ಅಥವಾ ಹಿಂತೆಗೆದುಕೊಳ್ಳುವದಿಲ್ಲ ಎಂದು ಗಾಂಧೀಜಿಯವರು ಭರವಸೆ ಕೊಟ್ಟರು.

೧೯೨೮ರ ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ ಅಧಿವೇಶನದಲ್ಲಿ ಗಾಂಧಿಜೀಯವರು ಪುನಃ ರಾಜಕೀಯಕ್ಕೆ ಮರಳಿದರು. ಆಗ ರಾಷ್ಟ್ರೀಯವಾದಿಗಳು ಹಾಗೂ ಇತರ ವರ್ಗದವರನ್ನು ಒಗ್ಗೂಡಿಸಲು ಆರಂಭಿಸಿದರು. ಇದರ ಮೊದಲ ಹೆಜ್ಜೆ ಎಂದರೆ ಕಾಂಗ್ರೆಸನ ಎಡಪಂಥಿಯ ಕ್ರಾಂತಿಕಾರಿಗಳನ್ನು ಸಮಾಧಾನಗೊಳಿಸುವದಕ್ಕಾಗಿ ೧೯೨೯ರ ಐತಿಹಾಸಿಕ ಲಾಹೋರ ಕಾಂಗ್ರೆಸ ಅಧಿವೇಶನದಲ್ಲಿ ಅಧ್ಯಕ್ಷರನ್ನಾಗಿ ಜವಹರಲಾಲ್ ನೆಹರು ಅವರನ್ನು ಆಯ್ಕೆ ಮಾಡಿದರು. ಈ ಅಧಿವೇಶನ ಕಾಂಗ್ರೆಸನ ಧ್ಯೇಯ 'ಪೂರ್ಣ ಸ್ವರಾಜ್ಯ' ಆಗಿರಬೇಕೆಂದು ನಿರ್ಣಯ ಮಾಡಿತು. ೧೯೨೯ ಡಿಸೆಂಬರ್

೩೧ ರಂದು ತ್ರಿವರ್ಣ ಧ್ವಜವನ್ನು ಆರೋಹಣ ಮಾಡಲಾಯಿತು. ೧೯೩೦ ಜನವರಿ ೨೬ ರಂದು ಮೊದಲ ಸ್ವಾತಂತ್ರ್ಯ ದಿನವೆಂದು ಮತ್ತು ಪ್ರತಿವರ್ಷ ಆ ದಿನವನ್ನು ಜನತೆಯೊಂದಿಗೆ 'ಇನ್ನು ಮುಂದೆ ಬ್ರಿಟಿಷರ ಆಳ್ವಿಕೆಗೆ ಗುಲಾಮರಾಗಿರುವುದು ಮನುಷ್ಯ ಮತ್ತು ದೇವರ ವಿರುದ್ಧ ಅಪರಾಧ' ಎಂದು ಪ್ರತಿಜ್ಞೆಯೊಂದಿಗೆ ಆಚರಿಸಬೇಕೆಂದು ನಿರ್ಧರಿಸಲಾಯಿತು. ಕಾಂಗ್ರೆಸ ಅಧಿವೇಶನವು ನಾಗರಿಕ ಕಾನೂನು ಭಂಗ ಚಳವಳಿಯನ್ನು ಆರಂಭಿಸುವ ವಿಚಾರ ಪ್ರಕಟಿಸಿ ಅದರ ಜವಾಬ್ದಾರಿಯನ್ನು ಗಾಂಧೀಜಿಯವರಿಗೆ ವಹಿಸಿ ಕೊಟ್ಟಿತು.

ಲಾಹೋರ ಕಾಂಗ್ರೆಸ ಅಧಿವೇಶನದ ನಿರ್ಣಯದಂತೆ ೧೯೩೦ ಜನವರಿ ೨೬ ರಂದು ದೇಶದ ಎಲ್ಲ ಪ್ರಮುಖ ನಗರ ಪಟ್ಟಣಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಜನರು ಸೇರಿ ಧ್ವಜಾರೋಹಣ ಮಾಡಿ ದೇಶದ ಸ್ವಾತಂತ್ರ್ಯಕ್ಕೆ ಯಾವುದೇ ತ್ಯಾಗಕ್ಕೂ ಸಿದ್ಧರಾಗಿದ್ದೇವೆ ಎಂದು ಪ್ರತಿಜ್ಞೆಗೈದರು.

ವಿಜಾಪೂರದಲ್ಲಿ ೧೯೩೦ ಜನವರಿ ೨೬ ರಂದು ಮುಂಜಾನೆ ೮ ಗಂಟೆಗೆ ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳಾದ ಹಣಮಂತರಾಯ ಮೊಹರೆಯವರು ರಾಷ್ಟ್ರಧ್ವಜ ಹಾರಿಸಿದರು. ಅಂದು ಸಂಜೆ ೬ ಗಂಟೆಗೆ ಹಣಮಂತರಾವ್ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು. ಸಭೆಯಲ್ಲಿ ಪೂರ್ಣ ಸ್ವರಾಜ್ಯ ಗುರಿ ಸಾಧಿಸಲು ನಿರ್ಣಯಿಸಲಾಯಿತು.

"ಹನಮಂತ ಜೋಶಿಯವರು ತಮ್ಮ ನೆನಪುಗಳನ್ನು ಹೀಗೆ ದಾಖಲಿಸಿದ್ದಾರೆ. ೧೯೩೦ರಲ್ಲಿ ನಾನು ವಿಜಾಪೂರದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯುತ್ತಲಿದ್ದೆ ಜನವರಿ ೨೬ನೇ ದಿನಾಂಕ ಶಾಲೆ ಬಿಟ್ಟು ಮರಳುವಾಗ ಟೆನಿಸ್ ಕೋರ್ಟ್‌ನಲ್ಲಿ ತುಂಬಾ ಜನರು ಸೇರಿದ್ದರು. ಕೌಜಲಗಿ ಶ್ರೀನಿವಾಸರಾಯರು ಎತ್ತರದ ದನಿಯಲ್ಲಿ ಸರಕಾರದ ನೀತಿಯನ್ನು ಖಂಡಿಸಿ ಮಾತನಾಡುತ್ತಿದ್ದರು. ರಾಷ್ಟ್ರೀಯ ಚಳವಳಿ ಪ್ರಾರಂಭವಾದಂದಿನಿಂದ ಸರಕಾರವು ಯಾವ ರೀತಿ ದಬ್ಬಾಳಿಕೆ ಹಾಗೂ ವಂಚನೆಯನ್ನು ಮಾಡುತ್ತಿದೆ ಎಂಬುದನ್ನು ಹೇಳಿದರು. ಜಲಿಯನ್‌ವಾಲಾಬಾಗ ದುರಂತವನ್ನು ಬಣ್ಣಿಸಿದರು. ಇಂದಿಲ್ಲ ನಾಳೆ ಈ ಸರಕಾರವು ಅಳಿಯಲೇಬೇಕು ಇದು ಈ ದುರಂತದ ಶಾಪವಾಗಿದೆ ಎಂದು ಹೇಳಿದರು. ಪೂರ್ಣ ಸ್ವರಾಜ್ಯವೇ ಚಳವಳಿಯ ಗುರಿಯಾಗಿ ಸತ್ಯಾಗ್ರಹವನ್ನು ನಡೆಸಬೇಕಾಗಿದೆ. ಹೈಸ್ಕೂಲ್ ಹಾಗೂ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಬೇಕೆಂದು ಕರೆ ಇತ್ತರು."[೨] ಬದಾಮಿ ತಾಲೂಕಿನ ಗುಳೇದಗುಡ್ಡದಲ್ಲಿ ಚಳವಳಿಗಾರರು ಮದ್ಯಾಹ್ನ ೩ ಗಂಟೆಗೆ ಊರಲ್ಲಿ ಪ್ರಭಾತ ಫೇರಿ ಮಾಡಿದ ನಂತರ ಸಂಜೆ ೫ ಗಂಟೆಗೆ ಸಾರ್ವಜನಿಕ ಸಭೆ ಸೇರಿದರು. ಬಾಬುರಾವ್ ಬಾಸುತ್ಕರ್ ಅವರು ಸರ್ವಾನುಮತದಿಂದ ಪೂರ್ಣ ಸ್ವರಾಜ್ಯದ ನಿರ್ಣಯ ಪಾಸು ಮಾಡಿದರು.

"ಬಾಗಲಕೋಟದಲ್ಲಿ ಮುಂಜಾನೆ ೮:೧೦ ನಿಮಿಷಕ್ಕೆ ಧ್ವಜ ಹಾರಿಸಿ ೧೪೦ ರೂಪಾಯಿ ಖಾದಿ ಮಾರಾಟ ಮಾಡಲಾಯಿತು. ಸಂಜೆಯ ಸಾರ್ವಜನಿಕ ಸಭೆಯಲ್ಲಿ ೨೫೦ ಜನರು ಸೇರಿದ್ದ ಪೂರ್ಣ ಸ್ವರಾಜ್ಯ ಗುರಿಯನ್ನು ನಿರ್ಣಯಿಸಿದರು."[೩]

೨. ಸಬರಮತಿ ನಿರ್ಣಯ

ಕಾಂಗ್ರೆಸ ಕಾರ್ಯಕಾರಿ ಸಮಿತಿಯು ಫೆಬ್ರುವರಿ ೧೪, ೧೫ ಮತ್ತು ೧೬ರಲ್ಲಿ ಸಬರಮತಿಯಲ್ಲಿ ಸೇರಿ ಸಾಮೂಹಿಕ ಕಾಯ್ದೆಭಂಗವನ್ನು ಪ್ರಾರಂಭಿಸಲು ಮಹಾತ್ಮ ಗಾಂಧಿಯವರಿಗೆ ಅಧಿಕಾರ ನೀಡಿತು.

"ಕರ್ನಾಟಕದಿಂದ ನಾ.ಸು. ಹರ್ಡೀಕರ, ಗಂಗಾಧರರಾವ್ ದೇಶಪಾಂಡೆ ಮುಂತಾದವರು ಸಬರಮತಿಯಲ್ಲಿ ನಡೆದ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು. ಮರಳಿಬಂದ ನಂತರ ಫೆಬ್ರುವರಿ ೨೩ರಂದು ಆರ್.ಆರ್. ದಿವಾಕರ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ. ಸತ್ಯಾಗ್ರಹ ಸಮಿತಿಯನ್ನು ರಚಿಸಿದರು. ಆರ್.ಆರ್.ದಿವಾಕರ ಅವರು ವಿಜಾಪೂರ ಜಿಲ್ಲೆಯಲ್ಲಿ, ಕಾರ್ನಾಡ ಸದಾಶಿವರಾಯರು ಮಂಗಳೂರು ಜಿಲ್ಲೆಯಲ್ಲಿ, ಹಣಮಂತರಾವ ಕೌಜಲಗಿಯವರು ಸ್ಥಳೀಯ ನಾಯಕರಾದ ಗುಲವಾಡಿ ಮತ್ತು ತಿಮ್ಮಪ್ಪ ನಾಯಕರೊಂದಿಗೆ ಉತ್ತರ ಕನ್ನಡದಲ್ಲಿ ಪ್ರವಾಸ ಕೈಗೊಂಡು ಕಾಂಗ್ರೆಸದ ಧ್ಯೇಯೊದ್ದೇಶಗಳನ್ನು ಜನರಿಗೆ ತಿಳಿಸಿಕೊಟ್ಟರು. ನಂತರ ೧೬-೦೩-೧೯೩೦ ರಂದು ಧಾರವಾಡದಲ್ಲಿ ನಡೆದ ಪ್ರಾಂತೀಯ ಕಾಂಗ್ರೆಸ ಕಮೀಟಿಯಲ್ಲಿ ತಮ್ಮ ಪ್ರವಾಸದ ವರದಿಯನ್ನು ಒಪ್ಪಿಸಿದರು."[೪]

೩. ದಂಡಿ ಯಾತ್ರೆ

"ಗಾಂಧೀಜಿಯವರು ಕಾಯ್ದೆಭಂಗ ಮಾಡುವುದಕ್ಕಿಂತ ಮೊದಲು ಒಟ್ಟು ೧೧ ಬೇಡಿಕೆಗಳನ್ನು ವೈಸರಾಯರ ಮುಂದೆ ಮಂಡಿಸಿದ್ದರು. ಅವು ನಿರಾಕರಿಸಲ್ಪಟ್ಟಿದ್ದರಿಂದ ಮುಂಬರುವ ಚಳವಳಿಗೆ ಚಾಲನೆ ಕೊಟ್ಟಂತಾಯಿತು. ನಂತರ ಗಾಂಧೀಜಿಯವರು ಸ್ವಲ್ಪವೂ ತಡಮಾಡದೆ ಸತ್ಯಾಗ್ರಹದ ರೂಪರೇಷೆಗಳನ್ನು ಮೆಲುಕು ಹಾಕುವ ಮತ್ತು ಸುತ್ತಲಿನವರಿಗೆ ಅವುಗಳನ್ನು ತಿಳಿಸಲು ಪ್ರಾರಂಭಿಸಿದರು. ಉಪ್ಪಿನ ಕರವನ್ನು ಮುರಿಯುವದನ್ನು ಮುಖ್ಯ ಗುರಿಯನ್ನಾಗಿಸಿಕೊಂಡರು. ಅದರಂತೆ ಮತ್ತು ಸತ್ಯಾಗ್ರಹದ ತತ್ವಗಳನ್ನು ಅನುಸರಿಸಿ ಮಾರ್ಚ್ ೨ನೇ ದಿನ ಸಬರಮತಿ ಆಶ್ರಮದಿಂದ ವೈಸರಾಯ್ ಇರ್ವಿನ್‌ರಿಗೆ ದೀರ್ಘ ಪತ್ರ ಬರೆದು ತಮ್ಮ ಯೋಜನೆಯನ್ನು ತಿಳಿಸಿದರು. ಹಾಗೂ ಸತ್ಯಾಗ್ರಹ ಮಾಡುವದು ನಿಲ್ಲಿಸಬೇಕಾದರೆ ಹಿಂದಿನ ಬೇಡಿಕೆಗಳನ್ನು ಒಪ್ಪಿಕೊಂಡರೆ ಮಾತ್ರ ಸಾಧ್ಯವೆಂದು ಹೇಳಿದರು. ಸಬರಮತಿ ಆಶ್ರಮದಲ್ಲಿದ್ದ ಇಂಗ್ಲೆಂಡ ವ್ಯಕ್ತಿ ರೆಜಿನಾಲ್ಡ ರೆನಾಲ್ಡಸ್ ಎಂಬುವವರು ಸ್ವತಃ ವೈಸರಾಯರಿಗೆ ಪತ್ರ ತಲುಪಿಸಿದರು. ಮುಂದೆ ಎರಡು ದಿನಗಳ ನಂತರ ಇದಕ್ಕೆ ನಿರಾಶಾದಾಯಕ ಉತ್ತರ ಬಂದಿತು. 'ರೊಟ್ಟಿ ಕೊಡಿರೆಂದು ನಾನು ಅಂಗಲಾಚಿ ಬೇಡಿಕೊಂಡೆ. ಆದರೆ ಕಲ್ಲು ಕೊಟ್ಟರು' ಎಂದು ಮಹಾತ್ಮರು ಉದ್ಗಾರ ತೆಗೆದರು."[೫]

ಕೂಡಲೇ ಸತ್ಯಾಗ್ರಹದ ಸಿದ್ಧತೆ ನಡೆಸಿದ ಮಹಾತ್ಮರು ಸಬರಮತಿಯಿಂದ ಸಮುದ್ರ ತೀರದಲ್ಲಿರುವ ದಂಡಿ ಎಂಬ ಹಳ್ಳಿಗೆ ನಡೆದುಕೊಂಡು ಹೋಗಿ ಉಪ್ಪಿನ ಕಾಯ್ದೆ ಮುರಿಯುವ ಸಿದ್ಧತೆ ಮಾಡಿದರು. ತಮಗಿಂತ ಮೊದಲು ರಾಷ್ಟ್ರದಲ್ಲಿ ಎಲ್ಲಿಯೂ ಕಾಯ್ದೆಭಂಗ ಮಾಡತಕ್ಕದಲ್ಲವೆಂದು ಕಟ್ಟಳೆ ವಿಧಿಸಿದರು. ತಮ್ಮ ಜೊತೆ ೭೮ ಸದಸ್ಯರನ್ನು ಮಾತ್ರ ಕರೆದುಕೊಂಡು ಹೋಗಲು ನಿಶ್ಚಯಿಸಿದರು.

"ನಾಗರಿಕ ಕಾನೂನುಭಂಗ ಚಳವಳಿಯು ೧೯೩೦ ಮಾರ್ಚ್ ೧೨ ರಂದು ಗಾಂಧಿಯವರ ಪ್ರಸಿದ್ಧ ದಂಡಿ ಯಾತ್ರೆಯೊಂದಿಗೆ ಆರಂಭವಾಯಿತು. ಆಯ್ದ ೭೮ ಜನ ಅನುಯಾಯಿಗಳೊಂದಿಗೆ ಗಾಂಧಿ ಸಬರಮತಿ ಆಶ್ರಮದಿಂದ ದಂಡಿಯವರಗೆ ಸುಮಾರು ೩೭೫ ಕಿ.ಮೀ. ದೂರ ನಡೆದರು. ಅವರು ಹಾದು ಹೋದ ಮಾರ್ಗದಲ್ಲಿನ ಅನೇಕ ಗ್ರಾಮಗಳ ಅಧಿಕಾರಿಗಳು ತಮ್ಮ ಕೆಲಸಗಳಿಗೆ ರಾಜೀನಾಮೆ ನೀಡಿದರು. ಏಪ್ರಿಲ್ ೬ ರಂದು ದಂಡಿ ತಲುಪಿದ ಗಾಂಧೀಜಿಯವರು ಬ್ರಿಟಿಷರು ಮಾಡಿದ್ದ ಕಾನೂನುಗಳ ಅಡಿಯಲ್ಲಿ ಅಂದರೆ ಬ್ರಿಟಿಷ ಆಳ್ವಿಕೆಯಲ್ಲಿ, ಜೀವಿಸಲು ಭಾರತೀಯರು ನಿರಾಕರಿಸುತ್ತಾರೆ ಎಂಬುದರ ಸಂಕೇತವಾಗಿ ಒಂದು ಹಿಡಿ ಉಪ್ಪನ್ನು ಕೈಗೆತ್ತಿಕೊಂಡು ಕಾಯ್ದೆಭಂಗ ಮಾಡಿದರು."[೬]

"ಭಾರತದಲ್ಲಿ ಬ್ರಿಟಿಷ ಆಳ್ವಿಕೆಯು ಈ ದೊಡ್ಡ ದೇಶದ ನೈತಿಕ, ಭೌತಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿನಾಶವನ್ನು ತಂದಿದೆ. ಈ ಆಳ್ವಿಕೆಯನ್ನು ನಾನು ಶಾಪ ಎಂದು ಪರಿಗಣಿಸುತ್ತೇನೆ. ಇಂತಹ ಸರ್ಕಾರಿ ವ್ಯವಸ್ಥೆಯನ್ನು ನಾಶ ಮಾಡಲು ನಾನು ಹೊರಟಿದ್ದೇನೆ. ಸರಕಾರವನ್ನು ಉರುಳಿಸುವ ಸಂಚು ನನ್ನ ಧರ್ಮವಾಗಿದೆ. ನಮ್ಮದು ಅಹಿಂಸಾತ್ಮಕ ಯುದ್ಧ ನಾವು ಯಾರನ್ನೂ ಕೊಲ್ಲುವುದಿಲ್ಲ; ಆದರೆ ಈ ಸರ್ಕಾರದ ಶಾಪದ ಕಪ್ಪು ಚುಕ್ಕೆಯನ್ನು ತೊಡೆದು ಹಾಕುವದು ನಮ್ಮ ಧರ್ಮ"[೭] ಎಂದು ಗಾಂಧೀಜಿಯವರು ಘೋಷಿಸಿದರು.

"ಅಮರಸಿಂಗ್ ಠಾಕೂರ ಅವರು ತಮ್ಮ ಸ್ವ ಅನುಭವಗಳನ್ನು ದಾಖಲಿಸಿದಂತೆ 'ನಾನು ಜೀವರಾಜ್ ದೋಶಿ, ರಾಯಣ್ಣ ಯಂಕಂಚಿ ಮೂವರು ಆ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕೆಂದು ನಿಶ್ಚಯಿಸಿ ರೈಲಿನಿಂದ ಸೂರತ್‌ಗೆ ೧೫ ಮೈಲು ದೂರದ ಸಾಯಿನ್ ಸ್ಟೇಷನ್ ತಲುಪಿ ಅಲ್ಲಿಂದ ನಾಲ್ಕು ಮೈಲಿ ನಡೆದು ಯಾತ್ರೆಯ ಹಾದಿಯಲ್ಲಿ ಏಡಥಾಣ ಎಂಬಲ್ಲಿ ಗಾಂಧೀಜಿಯವರನ್ನು ಕೂಡಿಕೊಂಡು ಮುಂದೆ ಮೂರು-ನಾಲ್ಕು ದಿನ ಅವರ ಯಾತ್ರೆಯ ಜೊತೆ ಸಾಗಿ ಅವರ ಕಾರ್ಯಕ್ರಮಗಳು, ಜನರ ಉತ್ಸಾಹ, ಗಾಂಧೀಜಿಯವರ ಭಾಷಣಗಳಿಂದ ಪ್ರಭಾವಿತರಾದೆವು. ಅವರ ಜೊತೆ ಇದ್ದ ಯಾತ್ರಿಕರಲ್ಲಿ ಮೈಲಾರ ಮಹಾದೇವಪ್ಪನವರು ಒಬ್ಬರೇ ಕನ್ನಡಿಗರು. ಗಾಂಧೀಜಿಯವರ ಜೊತೆ ಸಂಭಾಷಣೆಯು ಆಯಿತು. ಮುಂದೆ ಸಬರಮತಿ ಆಶ್ರಮಕ್ಕೆ ಹೋಗಿ ಅಲ್ಲಿ ಕೆಲವು ಸಾಧನಗಳನ್ನು ಕೊಂಡು ಊರಿಗೆ ಮರಳಿದೆವು."[೮] ಹೀಗೆ ಅಮರಸಿಂಗ್ ಠಾಕೂರ ಅವರು ತಮ್ಮ ಚಳವಳಿಯ ಕುರಿತು ತಿಳಿಸಿದರು.

೭.೨ ಬಾಗಲಕೋಟ ಜಿಲ್ಲೆಯಲ್ಲಿ ಕಾನೂನು ಭಂಗ ಚಳವಳಿ

ದಂಡಿಯಲ್ಲಿ ಗಾಂಧೀಜಿಯವರು ಕಾನೂನು ಭಂಗ ಮಾಡಿದ ನಂತರ ಬಾಗಲಕೋಟ ಜಿಲ್ಲೆಯಲ್ಲದೇ ದೇಶದ ಹಲವು ಭಾಗಗಳಲ್ಲಿ ಕಾನೂನು ಭಂಗ ಚಳವಳಿ ಆರಂಭಗೊಂಡಿತು. ಅಂದು ಬಾಗಲಕೋಟದ ಜನರ ಮನದಲ್ಲಿಯೂ ಸಹ ರಾಷ್ಟ್ರೀಯತೆಯ ಪರಿಕಲ್ಪನೆ ಮೂಡಿ ದೇಶಕ್ಕಾಗಿ ಚಳವಳಿಯಲ್ಲಿ ಭಾಗವಹಿಸಿದ್ದಾರೆ.

೧. ಗಾಂಧೀಜಿಯವರ ಬಂಧನ ವಿರೋಧಿಸಿ ಹರತಾಳ

ಮೇ ೪, ೧೯೩೦ ರಂದು ಗಾಂಧೀಜಿಯವರನ್ನು ಬಂಧಿಸಿ ಪುಣೆಯ ಯರವಾಡ ಜೈಲಿನಲ್ಲಿ ಇಡಲಾಯಿತು. ಬಂಧನಕ್ಕೂ ಮುಂಚೆ ದೇಶದ ಜನತೆಗೆ ಗಾಂಧೀಜಿಯವರು ಉಪ್ಪನ್ನು ತಯಾರಿಸುವಂತೆ, ಮದ್ಯಪಾನ, ಅಫೀಮು ಹಾಗೂ ವಿದೇಶಿ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಬೇಕು ಹಾಗೂ ಪ್ರತಿಯೊಂದು ಮನೆಯಲ್ಲಿಯೂ ನೂಲು ತೆಗೆಯಬೇಕು, ಹಿಂದೂಗಳು ಅಸ್ಪೃಶ್ಯತೆಯನ್ನು ಆಚರಿಸಕೂಡದು, ವಿದ್ಯಾರ್ಥಿಗಳು ಸರಕಾರಿ ಶಾಲೆಗಳನ್ನು ಬಹಿಷ್ಕರಿಸಬೇಕು. ಸರಕಾರಿ ನೌಕರರು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಕರೆ ನೀಡಿದರು. ಗಾಂಧೀಜಿಯವರ ಬಂಧನ ವಿರೋಧಿಸಿ ಜಿಲ್ಲೆಯಾದ್ಯಂತ ಹರತಾಳಗಳು ಆರಂಭಗೊಂಡವು.

“ಗಲಗಲಿಯಲ್ಲಿ ಸಂಪೂರ್ಣ ಹರತಾಳ ಆಚರಿಸಲಾಯಿತು. ಸಾಯಂಕಾಲ ಜರುಗಿದ ಸಭೆಯಲ್ಲಿ ಗೋರೆ ತಮ್ಮಣ್ಣಾಚಾರ್ಯ ಹಾಗೂ ಪಂಚ್ಚಣ್ಣವರ ಅವರ ಭಾಷಣ ಮುಗಿದ ಮೇಲೆ ವಿದೇಶಿ ಬಟ್ಟೆಗಳ ಹೋಳಿ ಆಡಲಾಯಿತು. ಗಣಿಯ ಶಂಕರ ಮತ್ತು ಹಣಮಂತ ಎಂಬುವವರು ಕುಲಕರ್ಣಿ ಹಾಗೂ ಗೌಡಕಿ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಅವರ ಸ್ಥಾನದಲ್ಲಿ ನೇಮಿಸಲ್ಪಟ್ಟ ಗೋವಿಂದಪ್ಪಾ ಚಿಕ್ಕಲಕಿ ಮತ್ತು ಶಿವಪ್ಪ ತೆಗ್ಗಿಯವರು ಸಹಿತ ರಾಜೀನಾಮೆ ನೀಡಿದರು. ಸುಬ್ಬಣ್ಣಾಚಾರ್ಯ ಗೋರೆಯವರನ್ನು ಪಿನಲ್ ಕೋಡ ಎ. ೧೧೭ ಮತ್ತು ಉಪ್ಪಿನ ಕಾಯ್ದೆ ೪೭ನೇ ಕಲಮ್‌ಗಳನ್ವಯ ಬಂಧಿಸಲಾಯಿತು.”[೯]

ಇಲಕಲ್ಲದಲ್ಲಿ ನೇಕಾರರೆಲ್ಲ ಸೇರಿ ಗಾಂಧಿಯವರ ಬಂಧನ ವಿರೋಧಿಸಿ ಹರತಾಳ ಆರಂಭಿಸಿದರು. ಅಂದು ಊರಲ್ಲಿ ಒಂದು ನೇಯುವ ಶಬ್ಧವೂ ಕೇಳಲಿಲ್ಲ. ಮಹಾತ್ಮರ ಭಾವಚಿತ್ರವನ್ನು ಊರ ತುಂಬೆಲ್ಲಾ ಮೆರೆಸಿದರು. ಕಟ್ಟಿ ಆಚಾರ್ಯರು ಹಾಗೂ ಜಹಗೀರದಾರರು ಜನರನ್ನು ಉದ್ದೇಶಿಸಿ ಮಾತನಾಡಿದರು.

“೦೬-೦೫-೧೯೩೦ ರಂದು ಗುಳೇದಗುಡ್ಡದ ನಗರಸಭೆ ಹತ್ತಿರದ ಬಯಲಿನಲ್ಲಿ ಏಳು ಎಂಟು ಸಾವಿರ ಜನ ಸಭೆ ಸೇರಿ ಗಾಂಧಿಯವರ ಬಂಧನ ವಿರೋಧಿಸಿದರು. ಸಭೆಯಲ್ಲಿ ತಿಪ್ಪಣ್ಣ ಶಾಸ್ತ್ರಿಯವರು ಮಾತನಾಡಿದರು. ನಗರಸಭೆಯ ಹತ್ತಿರವಿದ್ದ ಬಯಲಿಗೆ ‘ಮಹಾತ್ಮಗಾಂಧಿ ಚೌಕ’ ಎಂದು ಹೆಸರಿಡಲು

ಜಾಸೂತ್ಕರ್ ಅವರು ಸೂಚಿಸಿದಾಗ ಸಭೆಯ ಒಮ್ಮತದಿಂದ ಅದನ್ನು ಒಪ್ಪಿತು."[೧೦] ಜೀಳಗಿಯಲ್ಲಿ ಅಂಗಡಿಗಳನ್ನು ಮುಚ್ಚಿ ಸಂಜೆಯವರೆಗೂ ಮಹಾತ್ಮರ ಭಾವಚಿತ್ರವನ್ನು ಮರೆವಣಿಗೆ ಮಾಡಿದರು, ವೀರಶೈವರು ಖಾದಿ ಧರಿಸುವಂತೆ ನಿಶ್ಚಯಿಸಿದರು.

"ಹುನಗುಂದದ ನಾಗರಿಕರು ೦೬-೦೫-೧೯೩೦ ರಂದು ಹರತಾಳ ಆರಂಭಿಸಿ ಎಲ್ಲ ಗಿರಿಣಿ, ಮೋಟಾರ, ಅಂಗಡಿಗಳನ್ನು ಬಂದ್ ಮಾಡಿದರು. ಅಬಾಲವೃದ್ಧರು, ಸಾಹುಕಾರರು ಸ್ತ್ರೀಯರು ಹರತಾಳದಲ್ಲಿ ಭಾಗವಹಿಸಿದರು. ರಾಜವ್ವಳೆಂಬ ವೇಶ್ಯೆಯೊಬ್ಬಳು ಪ್ರತಿ ಅಂಗಡಿಗೆ ಹೋಗಿ ಬಂದ್ ಮಾಡಿಸಿದಳು. ಸಾಯಂಕಾಲ ಮಹಾತ್ಮ ಗಾಂಧಿಜೀಯವರ ಭಾವಚಿತ್ರದ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಮದ್ವರಾವ್ ಪ್ಯಾಟಿಯವರು ಭಾಷಣ ಮಾಡಿದರು. ಸಭೆಯಲ್ಲಿ ೫೦ ಉಪ್ಪಿನ ಚೀಟಿಗಳು ಮಾರಲ್ಪಟ್ಟವು".[೧೧]

"ವಿಜಾಪೂರದ ನಗರಸಭೆಯಲ್ಲಿ ಸಭೆ ನಡೆದಾಗ ಮಹಾತ್ಮರ ಬಂಧನದ ಸಂದೇಶ ಬಂದಿತು. ಆಗ ಸಭೆಯನ್ನು ಸದಸ್ಯರು ರದ್ದುಗೊಳಿಸದೆ ಇದ್ದಾಗ ಅವರ ವಿರುದ್ಧ ಸಾರ್ವಜನಿಕರು ಅವಿಶ್ವಾಸ ಗೊತ್ತುವಳಿ ಹೊರಡಿಸಿದರು. 'ಸಭೆಯು ನಡೆದ ಸಮಯದಲ್ಲಿ ಮಹಾತ್ಮರ ಗೌರವಾರ್ಥವಾಗಿ ಸಭೆಯನ್ನು ರದ್ದುಗೊಳಿಸಬೇಕೆಂಬ ಸೂಚನೆಯು ಬಂದಾಗ ೫ ಮತಗಳು ಪರ ಹಾಗೂ ೭ ಮತಗಳು ವಿರುದ್ಧ ಬಿದ್ದು ನಿರಾಕರಿಸಲ್ಪಟ್ಟಿತು. ಸದಸ್ಯರು ಸಭೆಯನ್ನು ನಿಲ್ಲಿಸದಿರಲು ನಿರ್ಧರಿಸಿದರು. ಇದನ್ನು ವಿರೋಧಿಸಿದ ನೌಕರರು ತಾವು ಕಛೇರಿಗೆ ಬರುವದಿಲ್ಲವೆಂದು ಅರ್ಜಿ ಬರೆದು ಕರ್ತವ್ಯಕ್ಕೆ ಹಾಜರಾಗಲಿಲ್ಲ. ನಗರಸಭೆಯು ಅಂಗಡಿಯವರ ನೇತೃತ್ವದಲ್ಲಿ ಸಭೆ ಸೇರಿ ನೌಕರರಿಗೆ ಕ್ಷಮೆ ಬೇಡಲು ಕೇಳಿಕೊಂಡರು. ಕುಲಕರ್ಣಿ ಗೋವಿಂದರಾಯರು ಕ್ಷಮೆ ಕೇಳುವದನ್ನು ನಿರಾಕರಿಸಿದ್ದರಿಂದ ಅವರಿಗೆ ಎರಡು ರೂಪಾಯಿ ದಂಡ ವಿಧಿಸಿದರು. ಕರ್ತವ್ಯ ತಪ್ಪಿಸಿದ ದಿನ ನೌಕರರಿಗೆ ಸಂಬಳವಿಲ್ಲವೆಂದು ಗೊತ್ತುವಳಿ ಮಾಡಿತು. ಇದನ್ನು ವಿರೋಧಿಸಿದ ವಿಜಾಪೂರದ ನಾಗರಿಕರು ಸಾರ್ವಜನಿಕ ಸಭೆಯನ್ನು ಧನಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿಸಿ ನಗರಸಭೆಯ ಮೇಲೆ ತಮ್ಮ ವಿಶ್ವಾಸವಿಲ್ಲವೆಂದು ಈಗಿದ್ದ ಸಭಾಸದರು ತಮ್ಮ ನಿಜವಾದ ಪ್ರತಿನಿಧಿಗಳಲ್ಲ ಹಾಗೂ ತಕ್ಷಣವೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು."[೧೨]

"ಜಮಖಂಡಿ ಸಂಸ್ಥಾನದಲ್ಲಿ ಗಾಂಧಿಯವರ ಬಂಧನದ ದಿನವನ್ನು ಗಾಂಧಿದಿನವನ್ನಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ಮುಂಜಾನೆ ನಗರ ಸಂಕೀರ್ತನೆ ಮುಗಿಸಿದ ನಂತರ ಶಾಲೆಗೆ ತೆರಳಿ ಪಿಕೆಟಿಂಗ್ ಮಾಡಿದರು. ಯಾರೊಬ್ಬರು ಶಾಲೆಯೊಳಗೆ ಕಾಲಿಡಲಿಲ್ಲ. ಶಾಲೆ ಬಾಗಿಲುಗಳಿಗೆ ಕೀಲಿ ಹಾಕಿದರು. ಸಂಜೆ ದ್ವಾರಕನಾಥ ದೇವಾಲಯದಲ್ಲಿ ಸಾರ್ವಜನಿಕರ ಸಭೆ ಸೇರಿ ಬಾಬುರಾಯರು ಭಾಷಣ ಮಾಡಿದ ನಂತರ ಪರದೇಶಿ ಬಟ್ಟೆಗಳನ್ನು ಸುಟ್ಟರು."[೧೩] ಬಾಗಲಕೋಟೆಯ ಜನರು ಗಾಂಧಿ ಬಂಧನ ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಿದರು. ಲಕ್ಷ್ಮೀ ಚಿತ್ರಮಂದಿರ ಹಾಗೂ ದತ್ತಾತ್ರೇಯ ನಾಟ್ಯ ಸಂಘದವರು ಪ್ರದರ್ಶನವನ್ನು ನಿಲ್ಲಿಸಿ ಹರತಾಳದಲ್ಲಿ ಭಾಗವಹಿಸಿದರು. ಶೆಟ್ಟರು(ವ್ಯಾಪಾರಸ್ಥರು) ಎಲ್ಲರೂ

ಕೂಡಿ ಸಂಪೂರ್ಣ ಹರತಾಳ ಕೈಗೊಂಡಿರುವದನ್ನು ಬೆಂಬಲಿಸಲು ನಿರ್ಣಯಿಸಿದರು. ಹೀಗೆ ಬಾಗಲಕೋಟದ ಜನರು ದೇಶದ ಒಳಿತಿಗಾಗಿ ಮಹತ್ವದ ಸೇವೆ ಸಲ್ಲಿಸಿದ್ದಾರೆ.

೨. ಮೊತಿಲಾಲ್ ನೆಹರು ಬಂಧನ ವಿರೋಧಿಸಿ ಹರತಾಳ

ಅಖಿಲ ಭಾರತ ಕಾಂಗ್ರೆಸನ ಅಧ್ಯಕ್ಷರಾದ ಮೊತಿಲಾಲ್ ನೆಹರು ಅವರನ್ನು ಬಂಧಿಸಿದಾಗ ದೇಶದಾದ್ಯಂತ ಹರತಾಳಗಳು ಆರಂಭಗೊಂಡವು. ಅದರಂತೆ ವಿಜಾಪೂರ ಜಿಲ್ಲಾ ಕಾಂಗ್ರೆಸ್‌ದ ನಿರ್ಣಯದಂತೆ ಬಾಗಲಕೋಟದ ಸತ್ಯಾಗ್ರಹ ಮಂಡಳಿಯು ೦೨-೦೭-೧೯೩೦ ರಂದು ಕನ್ನಡಿಗ ಪತ್ರಿಕೆಯಲ್ಲಿ ಹರತಾಳ ಪಾಲಿಸಿರಿ ಎಂದು ಹೀಗೆ ಪ್ರಕಟಣೆ ನೀಡಿತು.

"ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾದ ಪಂಡಿತ ಮೊತಿಲಾಲ್ ನೆಹರು ಅವರನ್ನು ಸರಕಾರ ಸೆರೆ ಹಿಡಿದುಕೊಂಡು ಹೋಗಿ ಉಡಿಯಲಿ ಮತ್ತೆ ಕೆಂಡವನ್ನು ಕಟ್ಟಿಕೊಂಡು ತಮ್ಮ ಮುತ್ಸದ್ದಿತನದ ದಿವಾಳಿಯನ್ನು ಹೊರಗೆಡವಿದ್ದಾರೆ. ಸರಕಾರದ ದಬ್ಬಾಳಿಕೆಗೆ ಸರಿಯಾದ ಉತ್ತರವನ್ನು ಕೊಡುವದು ಪ್ರತಿಯೊಬ್ಬ ಭಾರತೀಯನಿಗೆ ಬಿಡಲಾರದ ಕರ್ತವ್ಯವಾಗಿದ್ದರಿಂದ ಅಲಹಬಾದ, ಮುಂಬಯಿ, ದಿಲ್ಲಿ ಮೊದಲಾದ ದೊಡ್ಡ ದೊಡ್ಡ ಪಟ್ಟಣದವರು ಈ ಬಗ್ಗೆ ಹರತಾಳ ನಡೆಸಿ ತಮ್ಮ ನಿಷೇಧವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಅದರಂತೆ ಕರ್ನಾಟಕದ ಗಂಡು ಮೆಟ್ಟಿನ ಸ್ಥಳವೆಂದೆನಿಸಿಕೊಳ್ಳುವ ಬಾಗಲಕೋಟೆಯವರಾದ ನಾವು ಇಂದು ಹರತಾಳವನ್ನು ಪಾಲಿಸಿ ತಾವು ಭಾರತೀಯರಿದ್ದೇವೆ ಎಂಬುದನ್ನು ವ್ಯಕ್ತಪಡಿಸಬೇಕಾಗಿದೆ. ಆದುದರಿಂದ ವಿದ್ಯಾರ್ಥಿಗಳೇ ಇಂದು ಶಾಲೆಗೆ ಶರಣು ಹೊಡೆಯಿರಿ. ವರ್ತಕರೇ ಇಂದು ನಿಮ್ಮ ನಿಮ್ಮ ಅಂಗಡಿಗಳಿಗೆ ಕೀಲಿಗಳನ್ನು ಜಡಿದು ವ್ಯವಹಾರವನ್ನು ನಿಲ್ಲಿಸಿ ಬಿಡಿರಿ, ಸಿನಿಮಾ, ನಾಟಕ, ಚಹಾ, ಫಳಾರದ ಅಂಗಡಿ ಮೊದಲಾದ ಇನ್ನಿತರ ಉದ್ಯೋಗಗಳನ್ನು ಕೈಕೊಂಡವರೇ, ಇಂದು ನಿಮ್ಮ ನಿಮ್ಮ ಉದ್ಯೋಗಗಳನ್ನು ಮಾಡಬೇಡಿರಿ, ಹಿಂದೂ ಸ್ಥಾನದಲ್ಲಿಯೇ ಹುಟ್ಟಿ, ಹಿಂದೂಸ್ಥಾನದಲ್ಲಿಯೇ ಬೆಳದು, ಹಿಂದೂಸ್ಥಾನದಲ್ಲಿಯೇ ಮಣ್ಣುಪಾಲಾಗಿ ಹೋಗುವರಾದ ನಾವು ನಮ್ಮ ತನುಮನ ಧನಗಳನ್ನೆ ರಾಷ್ಟ್ರಕ್ಕೆ ಧಾರೆಯರೆದ ಜನಪದ ಚಕ್ರವರ್ತಿಗಳಿಗಾಗಿ ಇಷ್ಟೂ ಮಾಡದಿದ್ದರೆ ಹಿಂದೂಗಳನ್ನೆಸಿಕೊಳ್ಳಲು ಅರ್ಹರೇ ಆಗುವದಿಲ್ಲ, ಆದ್ದುದರಿಂದ ಬಾಗಲಕೋಟ ನಾಗರಿಕರೇ ಎದ್ದೇಳಿರಿ ಇಂದು ನಿಮ್ಮ ಎಲ್ಲ ವ್ಯವಹಾರಗಳನ್ನು ಬದಿಗಿಟ್ಟು ಹರತಾಳವನ್ನು ಯಶಸ್ವಿಯಾಗಿ ಮಾಡಿರಿ ಮತ್ತು ಸಂಜೆಗೆ ಲಾಲಾಜಿ ಬೈಲಿನಲ್ಲಿ ಈ ಬಗ್ಗೆ ಸೇರುವ ಸಭೆಗೆ ತಂಡ ತಂಡವಾಗಿ ಬಂದು ನಿಷೇಧಕ್ಕೆ ಬೆಂಬಲವನ್ನು ಕೊಡಿರಿ"[೧೪] ಎಂದು ವಿನಂತಿಸಿಕೊಂಡಿತು.

"ಗಲಗಲಿಯಲ್ಲಿ ೦೩-೦೭-೧೯೩೦ ರಂದು ಮೊತಿಲಾಲ ನೆಹರು ಮತ್ತು ಡಾ॥ ಸೈಯ್ಯದ ಅಹಮ್ಮದ್ ಅವರ ಬಂಧನವನ್ನು ಖಂಡಿಸಿ ಊರಲೆಲ್ಲಾ ಸಂಪೂರ್ಣ ಹರತಾಳ ಆಚರಿಸಲ್ಪಟ್ಟಿತು. ಅಂದು ಚಹಾದ ಅಂಗಡಿಗಳು ಮುಚ್ಚಿದ್ದರಿಂದ ಪೊಲೀಸರಿಗೆ ಒಂದು ಗುಟುಕ ಚಹಾ ಕೂಡಾ ಸಿಗಲಿಲ್ಲ.

ಉದ್ಯೋಗಸ್ಥರು, ವ್ಯಾಪಾರಸ್ಥರು ತಮ್ಮ ವ್ಯವಹಾರನ್ನು ನಿಲ್ಲಿಸಿ ಬಿಟ್ಟರು. ಮಹಿಳೆಯರು ಶಾಲೆಗಳ ಮುಂದೆ ಪಿಕೆಟಿಂಗ್ ಮಾಡಿದರು. ಸಾಯಂಕಾಲ ಶಂಕರರಾವ್ ಪಂಡಿತ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ನಾಗೇಶ ಭಟ್ಟರು ಮೊತಿಲಾಲ ನೆಹರು ಮತ್ತು ಡಾ॥ ಸೈಯ್ಯದ ಅಹಮ್ಮದ ಅವರ ಕುರಿತು ಅಭಿನಂದನ ಪರ ಭಾಷಣ ಮಾಡಿದರು. ಸರಕಾರ ದಬ್ಬಾಳಿಕೆಯ ನಿಷೇಧವೆಂದು ಚಿಕ್ಕ ಬಾಲಕರು ೫ ರಾಟಿಗಳನ್ನು ಬಿಟ್ಟೂ ಬಿಡದೆ ನಡೆಸಬೇಕೆಂದು ನಿಶ್ಚಯಿಸಿ ಮುಂಜಾನೆಯಿಂದ ಸಂಜೆಯವರೆಗೆ ನೂಲನ್ನು ತೆಗೆದರು.”[೧೫]

ಸತ್ಯಾಗ್ರಹದ ಮುಖಂಡರನ್ನು ಸರಕಾರ ಸೆರೆಯಲ್ಲಿಟ್ಟು ಸತ್ಯಾಗ್ರಹವನ್ನು ನಿಲ್ಲಿಸಲು ಸಂಚು ರೂಪಿಸಿರುವದನ್ನು ಖಂಡಿಸಿ ಕೌಜಲಗಿ ಹಣಮಂತರಾಯರು ಜನಸಾಮಾನ್ಯರು ನಾಯಕರಾಗಿ ಸತ್ಯಾಗ್ರಹ ಮುಂದುವರೆಸಲು ಕರೆ ನೀಡಿದರು. ‘ಮುಂದಾಳುಗಳನ್ನು ಹಿಡಿದು ಹಾಕಿದರೆ ಸತ್ಯಾಗ್ರಹಿಗಳು ಮಾರ್ಗದರ್ಶಕರಿಲ್ಲದಂತಾಗಿ ಚಳವಳಿಯನ್ನು ಸಾಗಿಸಲಾರರೆಂದು ಸರಕಾರವು ಅಶೀಸುತ್ತದೆ. ಆದರೆ ನನ್ನ ಎಲ್ಲ ಸಮರ ಸಹಪಾಠಿಗಳಿಗೆ ನಾನು ಹೇಳುವದೇನೆಂದರೆ, ಇನ್ನು ಮುಂದೆ ಮುಖಂಡರೂ ನೀವೇ, ಸೈನಿಕರೂ ನೀವೇ ಎಂದು ಹೊಣೆ ಹೊತ್ತು ಮುಂದೆ ಸಾಗಿರಿ ಮಹಾತ್ಮರ ಈ ಚಳವಳಿಯು ಸರಳವೂ ಸ್ಪಷ್ಟವೂ ಆಗಿದೆ. ಅದಕ್ಕಾಗಿ ಮುಖಂಡರ ಅವಶ್ಯಕತೆಯೇ ಇಲ್ಲ. ಶಾಂತಿಯೊಂದೇ ಅವಶ್ಯಕವಾಗಿ ಬೇಕಾಗಿರುವದು ಎಂದು ಹೇಳಿದರು.

೩. ಬಾಗಲಕೋಟ ಕೊತ್ತಲಪ್ಪನ ಬಯಲಿಗೆ ಲಾಲಾಜಿಯವರ ನಾಮಕರಣ

ಬಾಗಲಕೋಟದಲ್ಲಿ ಸ್ವಾತಂತ್ರ್ಯ ಚಳವಳಿಯ ಕೇಂದ್ರ ಪ್ರದೇಶ ಕೊತ್ತಲ ಹನಮಂತನ ಮಂದಿರದ ಬಯಲು ಜಾಗವು ನಗರದಲ್ಲಿಯ ಚಳವಳಿಯ ಕೇಂದ್ರ ಪ್ರದೇಶವಾಗಿತ್ತು. ಈ ಜಾಗೆಗೆ ಲಾಲಾ ಲಜಪತರಾಯರ ಹೆಸರು ಇಡಲಾಯಿತು. “೨೮-೦೬-೧೯೩೦ರಂದು ಕೊತ್ತಲ ಹನಮಂತ ಮಂದಿರದ ಬಯಲಿನಲ್ಲಿ ಕಣಬೂರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಈ ಸಭೆಯಲ್ಲಿ ಧಾರವಾಡ ನಗರ ಸಭೆಯ ಸಭಾಸದರೂ ಹಾಗೂ ಮರಾಠ ಸಮಾಜದ ಮುಂದಾಳುಗಳಾದ ಬಿಸೆಯವರು ಮದ್ಯಪಾನ ನಿಷೇಧ, ವಿದೇಶಿ ಬಟ್ಟೆಗಳ ಬಹಿಷ್ಕಾರ ಕುರಿತು ಹಾಗೂ ಬಾಗಲಕೋಟ ನಗರಸಭೆಯ ಮೇಲೆ ರಾಷ್ಟ್ರ ಧ್ವಜ ಹಾರಿಸಬೇಕೆಂದು ಮಾತನಾಡಿದರು. ಕಣಬೂರರ ಭಾಷಣವಾದ ನಂತರ ನೀರಲಕೇರಿ ಶೀನಪ್ಪನವರು ಸಭೆಯ ಮುಂದೆ ಕೊತ್ತಲಪ್ಪನ ಬಯಲಿಗೆ ವಿದ್ಯಾರಣ್ಯ, ಲಾಲಾಜಿ ಮತ್ತು ನೆಹರು ಈ ಮೂರು ಹೆಸರಿನಲ್ಲಿ ಒಂದು ಹೆಸರಿಡುವಂತೆ ಪ್ರಸ್ತಾಪಿಸಿದಾಗ ಎಲ್ಲರೂ ಒಮ್ಮತದಿಂದ ಲಾಲಾ ಲಜಪತರಾಯರ ಹೆಸರು ಇಡಲು ಸೂಚಿಸಿದರು. ಅದರಂತೆ ಕೊತ್ತಲಪ್ಪನ ಬಯಲಿಗೆ ಲಾಲಾಜಿ ಎಂದು ಹೆಸರಿಡಲಾಯಿತು.”[೧೬]

೪. ಬಿಸನಾಳ ಉಪ್ಪಿನ ಸತ್ಯಾಗ್ರಹ

ಉಪ್ಪಿನ ಸತ್ಯಾಗ್ರಹ – ದುಷ್ಟ ಮತ್ತು ಅನ್ಯಾಯದ ಕಟ್ಟಳೆಗಳನ್ನು ಸವಿನಯವಾಗಿ ಮುರಿದು ಕಷ್ಟಗಳನ್ನು ಸಹಿಸಲು ಸಿದ್ಧರಾಗುವದೇ ಸತ್ಯಾಗ್ರಹವೆನಿಸುವದು. ಉಪ್ಪಿನ ಸತ್ಯಾಗ್ರಹವನ್ನು ಈ ಕೆಳಕಂಡ ರೀತಿಯಲ್ಲಿ ಮಾಡಲು ಅವಕಾಶಗಳಿವೆ.

೧. ಸರಕಾರಕ್ಕೆ ಕರ ಕೊಡದೆ ಉಪ್ಪನ್ನು ತಯಾರಿಸಬಹುದು.

೨. ಅಂತಹ ಉಪ್ಪನ್ನು ಎತ್ತಿ ಒಯ್ದು ಎರಡನೆಯವರಿಗೆ ಕೊಡಬಹುದು ಇಲ್ಲವೆ ಮಾರಬಹುದು.

೩. ತನ್ನಷ್ಟಕ್ಕೆ ತಾನೇ ಸಮುದ್ರದಡದಲ್ಲಿ ಆದ ಉಪ್ಪನ್ನು ಕರ ಕೊಡದೆ ಎತ್ತಿ ತರಬಹುದು.

೪. ಅದನ್ನು ಮಾರಬಹುದು.

೫. ಉಪ್ಪಿನ ಮಣ್ಣನ್ನು ಕರ ಕೊಡದೆ ಒಯ್ಯುವದು.

೬. ಸರಕಾರದ ಮಾಲ್ಕಿಯ ಉಪ್ಪನ್ನು ತೆಗೆದುಕೊಂಡು ಬರಬಹುದು.

೭. ಇವುಗಳಲ್ಲಿ ಯಾವುದಾದರು ಒಂದನ್ನು ಮಾಡಲು ಯತ್ನಿಸುವದು.

ಇವೆಲ್ಲವುಗಳನ್ನು ಮಾಡಿದರೆ ಗುನ್ನೆಗಳೆ ಅಗುವವು. ಆದರೆ ಸತ್ಯಾಗ್ರಹಿಯ ಈ ಕಾರ್ಯವನ್ನು ನಾನು ಮಾಡುವೆನೆಂದು ಮೊದಲು ಅಧಿಕಾರಿಗಳಿಗೆ ತಿಳಿಸಿ ಇದು ಗುನ್ನೆ ಅಲ್ಲ ಇದು ನನ್ನ ನೈತಿಕ ಕರ್ತವ್ಯ ಎಂದು ಸಾರಿ ಆ ಮೇಲೆ ಸತ್ಯಾಗ್ರಹ ಮಾಡಬೇಕು, ಇಲ್ಲದಿದ್ದರೆ ಕಳ್ಳತನದಿಂದ ಹೊಟ್ಟೆ ಪಾಡಿಗಾಗಿ ಉಪ್ಪ ಮಾಡುವವನಿಗೂ ಸತ್ಯಾಗ್ರಹಿಗೂ ಭೇದವೆ ಉಳಿಯುವದಿಲ್ಲ.

ಸಾಮೂಹಿಕ ಶಾಸನ ಭಂಗವನ್ನು ವಿಜಾಪೂರ ಜಿಲ್ಲೆಯ ಯಾವುದಾದರೊಂದು ಸ್ಥಳದಲ್ಲಿ ಕೈಗೊಳ್ಳಬೇಕೆಂದು ಜಿಲ್ಲೆಯ ಯುದ್ಧ ಮಂಡಳದವರು ಬಾಗಲಕೋಟದಲ್ಲಿ ಸಭೆ ಸೇರಿ ನಿರ್ಣಯಿಸಿದರು. ಮಂಡಳದ ಅಧ್ಯಕ್ಷರಾದ ಹಣಮಂತರಾವ್ ಮೊಹರೆಯವರು ಗಲಗಲಿಯ ಸಮೀಪವಿದ್ದ ಬಿಸನಾಳ ಗ್ರಾಮವನ್ನು ಆಯ್ಕೆ ಮಾಡಿಕೊಂಡರು.

ಬಾಗಲಕೋಟ ಸ್ವಾತಂತ್ರ್ಯ ಹೋರಾಟಗಾರರಾದ ಎನ್.ಆರ್. ಮಳಗಿಯವರು ತಮ್ಮ ಸತ್ಯಾಗ್ರಹದ ನೆನಪನ್ನು ದಾಖಲಿಸಿದಂತೆ "ಬಾಗಲಕೋಟದಿಂದ ೨೦ ಮೈಲು ದೂರದ ಬಿಸನಾಳ ಹಳ್ಳದಲ್ಲಿ ಓಂದೆ ಉಪ್ಪು ತಯಾರಿಸುತ್ತಿದ್ದರು. ಇದನ್ನೆ ಸತ್ಯಾಗ್ರಹದ ಸ್ಥಳವೆಂದು ಆರಿಸಲಾಯಿತು. ಕೃಷ್ಣ ಪದಕಿಯವರನ್ನು ಡಾ॥ ಹರ್ಡೀಕರವರು ಈ ಕೆಲಸದ ನಾಯಕರನ್ನಾಗಿ ಆರಿಸಿ ಬಾಗಲಕೋಟದ ಹತ್ತು ತರುಣರನ್ನು ಅವರ ಜೊತೆ ಕಳುಹಿಸಿದರು. ಅಲ್ಲಿ ಗೋಲಿಬಾರ ಕೂಡಾ ಆದಿತೆಂದು ಡಾಕ್ಟರರು

ಎಚ್ಚರಿಸಿದ್ದರು. ಯಾವದಕ್ಕೂ ಹಿಂಜರಿಯದ ತರುಣರು ಮೂರು ತಿಂಗಳ ಕಾಲ ಉಪ್ಪಿನ ಸತ್ಯಾಗ್ರಹ ಶಿಬಿರ ನಡೆಸಿದರು."[೧೭]

ವಿಜಾಪೂರ ಜಿಲ್ಲೆಯ ಸತ್ಯಾಗ್ರಹಿಗಳ ಮೊದಲನೆ(ಲಾಲಾಜಿಯವರ) ಪಥಕವು ಉಪ್ಪಿನ ಸತ್ಯಾಗ್ರಹಕ್ಕಾಗಿ ಬಿಸನಾಳಕ್ಕೆ ಹೋಗಲು ನಿರ್ಧರಿಸಿದ್ದು ತಾಲೂಕಾ ಕಾಂಗ್ರೆಸ ಕಮಿಟಿಯು ಅದರ ಜಾಹೀರಾತನ್ನು ಕನ್ನಡಿಗ ಪತ್ರಿಕೆಯಲ್ಲಿ ಹೀಗೆ ಪ್ರಕಟಿಸಿತು.

ಬಿಸನಾಳಿಗೆ ನಡೆದು ಹೋಗುವ ಮಾರ್ಗ ವಿಜಾಪೂರ ಜಿಲ್ಲೆಯ ಮಂಡಳವು ನಿಶ್ಚಯಿಸಿದ ಪ್ರಕಾರ ಮೊದಲನೆ ಪಥಕವು ತಾರೀಖು: ೦೫-೦೫-೧೯೩೦ರಂದು ಮುಂಜಾನೆ ಬಾಗಲಕೋಟಯಿಂದ ಕೆಳಗೆ ನೀಡಿದ ಊರುಗಳಲ್ಲಿ ಪ್ರಚಾರ ಕಾರ್ಯ ಮಾಡುತ್ತಾ ಬಿಸನಾಳಿಗೆ ಹೋಗುವದು.

ಲಾಲಾಜಿ ಪಥಕದ ವೇಳಾಪಟ್ಟಿ

ದಿನಾಂಕ	ಹೊರಡುವ ವೇಳೆ	ಮುಟ್ಟುವ ವೇಳೆ	ಯಾವ ಊರಿಗೆ	ಪ್ರತಿದಿನ ಪ್ರಯಾಣ ಮೈಲು
೦೫/೦೫/೧೯೩೦	ಬಾಗಲಕೋಟೆಯಿಂದ ಮುಂಜಾನೆ ೮ ಗಂಟೆಗೆ	೧೦ ಗಂಟೆಗೆ	ಗದ್ದನಕೇರಿ	
	ಸಾಯಂಕಾಲ ೭ ಗಂಟೆಗೆ	೭ ಗಂಟೆಗೆ	ಅನಗವಾಡಿ	೧೦ ಮೈಲು
೦೬/೦೫/೧೯೩೦		ಮುಂಜಾನೆ ೧೦ ಗಂಟೆಗೆ	ಬೂದಿಹಾಳ,ಬಾವಲತ್ತಿ, ಕುಂದರಗಿ,ಕಾತರಕಿ	೬ ಮೈಲು
		ಸಂಜೆ ೭ ಗಂಟೆಗೆ	ಕೊಪ್ಪ, ಆಲಗುಂಡಿ	೫ ಮೈಲು
೦೭/೦೫/೧೯೩೦		ಮದ್ಯಾಹ್ನ, ಸಾಯಂಕಾಲ	ಅರಕೇರಿ, ಬೀಳಗಿ	೬ ಮೈಲು ೮ ಮೈಲು
೦೮/೦೫/೧೯೩೦		ಮದ್ಯಾಹ್ನ, ಸಾಯಂಕಾಲ	ಸೊನ್ನ, ಸಿದ್ದಾಪೂರ	೬ ಮೈಲು ೪ ಮೈಲು
೦೯/೦೫/೧೯೩೦		ಮದ್ಯಾಹ್ನ, ಸಾಯಂಕಾಲ	ತೆಗ್ಗಿ,ಬಾಡಗಿ ಗಲಗಲಿ	೬ ಮೈಲು ೬ ಮೈಲು
೧೦/೦೫/೧೯೩೦		ಮುಂಜಾನೆ ೮ ಗಂಟೆಗೆ	ಬಿಸನಾಳ	೪ ಮೈಲು
			ಒಟ್ಟು	೬೧ ಮೈಲು

"ಬಿಸನಾಳಗೆ ಹೊರಟ ಸತ್ಯಾಗ್ರಹಿಗಳ ಮೊದಲನೆ ಪಥಕಕ್ಕೆ ಬಾಗಲಕೋಟದಲ್ಲಿ ಅದ್ಧೂರಿಯಾಗಿ ಬೀಳ್ಕೊಡಲಾಯಿತು. 'ಬಿಸನಾಳ ಉಪ್ಪಿನ ಸತ್ಯಾಗ್ರಹಕ್ಕೆ ತೆರಳಬೇಕಾದ ಪಥವು ಮುಂಜಾನೆ ಬಾಗಲಕೋಟಯಿಂದ ಹೊರಟಿತು. ಬೆಳಗಿನ ಆರು ಗಂಟೆಯ ಪ್ರಶಾಂತ ಸಮಯದಲ್ಲಿ ಧ್ವಜ

ವಂದನೆಯನ್ನು ಮಾಡಿ ೧೨ ಸ್ವಯಂ ಸೇವಕರ ಪಥಕವು ಸೇವಾದಳದಲ್ಲಿರುವ ಶಿಕ್ಷಣದ ಶಿಬಿರದಿಂದ ಹೊರಟಿತು. ಊರೊಳಗಿನ ಬೀದಿಗಳಲ್ಲಿ ಹಾಯ್ದು ಗದ್ದನಕೇರಿಯ ಮಾರ್ಗವಾಗಿ ಪ್ರಯಾಣ ಬೆಳೆಸಿತು. ಊರ ನಾಗರಿಕರು ತಮ್ಮ ಮನೆ ಅಂಗಡಿಗಳ ಮುಂದೆ ಬೀದಿಗಳಲ್ಲಿ ತಳಿರು ತೋರಣಗಳಿಂದ ಅಲಂಕರಿಸಿದ್ದಲ್ಲದೆ. ಓಣಿಗಳಲ್ಲಿ ಕಸಗುಡಿಸಿ ಥಳಿ ಹೊಡೆದು ರಂಗವಲ್ಲಿಗಳಿಂದ ಅಲಂಕರಿಸಿ ಹಬ್ಬದ ವಾತಾವರಣವನ್ನು ನಿರ್ಮಿಸಿದರು. ಜನರು ಉತ್ಸಾಹಭರಿತವಾಗಿ ಸತ್ಯಾಗ್ರಹಿ ತಂಡವನ್ನು ಹಿಂಬಾಲಿಸುತ್ತಿದ್ದರು. ಮೆರವಣಿಗೆ ಮುಂದೆ ಸಾಗಿದಂತೆ ಹಿಂಬಾಲಿಸುವ ಜನರ ಸಂಖ್ಯೆ ಅಧಿಕವಾದರೂ ಶಿಸ್ತಿನಲ್ಲಾಗಲಿ, ಶಾಂತತೆಯಲ್ಲಾಗಲಿ, ಗಾಂಭೀರ್ಯದಲ್ಲಾಗಲಿ ನ್ಯೂನ್ಯತೆ ಉಂಟಾಗಲಿಲ್ಲ. ಅಲ್ಲದೆ ಎಲ್ಲರ ಮೊರೆಯ ಮೇಲೆ ಮಹಾತ್ಮರು ಕೈಗೊಂಡಿರುವ ಶಾಂತಿ ಯುದ್ಧದ ಗಂಭೀರ ವೃತ್ತಿಯ ಭಾವನೆಯು ಒಡೆದು ಕಾಣುತ್ತಿತ್ತು. ಸುಮಂಗಲೆಯರಾದ ಗೃಹಿಣಿಯರು ತಮ್ಮ ತಮ್ಮ ಮನೆಗಳ ಮುಂದೆ ಈ ಸತ್ಯಾಗ್ರಹಿಗಳಿಗೆ ಅರಿಶಿನ ಕುಂಕುಮ, ಗಂಧ ಮಂಗಲ ದ್ರವ್ಯಗಳಿಂದ ಆರತಿ ಅಕ್ಷತೆಗಳೊಂದಿಗೆ ವೀರರ ಹಣೆಗೆ ಕುಂಕುಮವನ್ನು ಇಟ್ಟು ಹೂ ಹಾರಿಸಿ ಸಮರದಲ್ಲಿ ವಿಜಯಶಾಲಿಗಳಾಗಿ ಬನ್ನಿರೆಂದು ಬೀಳ್ಕೊಟ್ಟರು. ಇದೇ ಸಮಯದಲ್ಲಿ ಜವಳಿ ವ್ಯಾಪಾರಸ್ಥರು ತಮ್ಮ ಸಂಘದ ವತಿಯಿಂದ ೨೫ ರೂಪಾಯಿ ದೇಣಿಗೆ ಕೊಟ್ಟರು. ಅನೇಕರು ಉದಾರ ಹಸ್ತದಿಂದ ದಾನ ಮಾಡಿದರು".[೧೮] ಸತ್ಯಾಗ್ರಹಿ ಪಥಕದ ಮುಖ್ಯಸ್ಥನಿಗೆ ಸೇನಾಪತಿ ಎಂದು ಕರೆಯುತ್ತಿದ್ದರು. ಸತ್ಯಾಗ್ರಹಿಗಳ ಪ್ರಥಮ ಪಥಕದ ವರದಿಯಲ್ಲಿ ಸೇನಾಪತಿಯು ತಾವು ಕ್ರಮಿಸಿದ ದೂರ ಹಾಗೂ ಸ್ಥಳಗಳ ಬಗ್ಗೆ ವರದಿ ಮಾಡಿದ್ದಾರೆ. "ಕುಂದರಗಿಯಿಂದ ಬುಧವಾರ ತಾರೀಖು: ೦೭-೦೫-೧೯೩೦ರಂದು ಮುಂಜಾನೆ ೭ ಗಂಟೆಗೆ ಮೆರವಣಿಗೆಯೊಂದಿಗೆ ಹೊರಟೆವು, ಅಲ್ಲಿಂದ ಬಾವಲತ್ತಿಗೆ ಬಂದೆವು. ಇಲ್ಲಿಯ ಜನರು ಕೊಂಚ ಮಟ್ಟಿಗೆ ಉತ್ಸಾಹವನ್ನು ತೋರಿಸಿದ್ದರು. ವ್ಯಾಖ್ಯಾನವಾದ ನಂತರ ಪ್ರಯಾಣ ಬೆಳೆಸಿದೆವು. ಸಂಜೆ ೭ ಗಂಟೆಗೆ ಬೀಳಗಿ ತಲುಪಿದೆವು. ಬೀಳಗಿಯಲ್ಲಿ ಮೆರವಣಿಗೆಯಾಯಿತು. ಬಜಾರ್ ಮದ್ಯದಲ್ಲಿ ಧ್ವಜಾರೋಹಣ ಮಾಡಿ ಭಾಷಣವಾಯಿತು. ನೇಟಿವ್ಹ್ ಜನರಲ್ ಲೈಬ್ರರಿಯಲ್ಲಿ ರಾತ್ರಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ೮ನೆ ತಾರೀಖು ಮುಂಜಾನೆ ಸೊನ್ನಕ್ಕೆ ಹೋಗಿ ಸಂಜೆ ಬಾಡಿಗೆಗೆ ಬಂದೆವು."[೧೯] '೫ನೇ ತಾರೀಖಿನ ದಿನ ಬಾಗಲಕೋಟದಿಂದ ಬಿಸನಾಳಕ್ಕೆ ಉಪ್ಪಿನ ಕಾಯ್ದೆ ಭಂಗಮಾಡಲು ಹೊರಟ ಲಾಲಾಜಿ ಪಥಕದ ವೀರರು ಅಲ್ಲಲ್ಲಿಗೆ ಹಾದಿ ಹಾದಿಗಳಲ್ಲಿ ಜನರಿಂದ ಸನ್ಮಾನ ಸತ್ಕಾರಗಳನ್ನು ಸ್ವೀಕರಿಸಿ ಬಿಸನಾಳಕ್ಕೆ ತಲುಪಿದರು,

ಬಿಸನಾಳದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಓರ್ವ ಪ್ರತ್ಯಕ್ಷದರ್ಶಿಯು ಕಾಯ್ದೆ ಭಂಗದ ಬಗ್ಗೆ ಅಂದಿನ ಘಟನೆ ಕುರಿತು ಕನ್ನಡಿಗ ಪತ್ರಿಕೆಯಲ್ಲಿ ವರದಿ ಮಾಡಿದ್ದಾನೆ. "೧೦ನೇ ತಾರೀಖು ಮದ್ಯಾಹ್ನ ೨ ಗಂಟೆಗೆ ಸ್ವಯಂ ಸೇವಕರು ಸಕಲ ವಾದ್ಯ ವೈಭವದೊಡನೆ ಬಿಸನಾಳಿಗೆ ಬಂದರು ಸಾಪಿರಾರು ಜನರು ಅವರನ್ನು ಹಿಂಬಾಲಿಸಿದರು. ಈ ಮೊದಲೆ ಬಿಸನಾಳಿಗೆ ಬಾಗಲಕೋಟದ ಪೋಲೀಸ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಮತ್ತು ೪-೬ ಸಿಪಾಯಿಯವರು ಬಂದಿದ್ದರು. ಬಿಸನಾಳದ ಜನರು ಸತ್ಯಾಗ್ರಹದ ಯಶಸ್ವಿಗಾಗಿ ನಾಲ್ಕಾರು ದಿವಸಗಳ ಮುಂಚಿತವಾಗಿ ಪೂರ್ವ ಸಿದ್ಧತೆಯನ್ನು ಮಾಡಿದ್ದರು.

ಅಲ್ಲದೆ ಪಕ್ಕದ ಊರು ಗಲಗಲಿಯ ಅಬಾಲ ವೃದ್ಧರಾದಿಯಾಗಿ ಸ್ತ್ರೀಯರು ಸಹಿತ ಪಾಲ್ಗೊಂಡಿದ್ದರು. ಸ್ವಯಂ ಸೇವಕರು ಗಲಗಲಿಯಿಂದ ರಣಕ್ಷೇತ್ರಕ್ಕೆ ಹೊರಡುವ ಕಾಲಕ್ಕೆ ರಸ್ತೆಗಳು ತಳಿರು ತೋರಣಗಳಿಂದ ಶೋಭಿಸಿದವು ಓಣಿಗಳಲ್ಲಿ ಹಾಯ್ದು ಹೋಗುವ ಸತ್ಯಾಗ್ರಹಿಗಳಿಗೆ ಅಲ್ಲಿಯ ವೀರ ಪತ್ನಿಯರು ವೀರ ವನಿತೆಯರು, ವೀರ ಭಗಿನಿಯರು, ವೀರ ಮಾತೆಯವರು ಆರತಿ ಮಾಡಿದರು. ಅಲ್ಲಿಯ ಹಿರಿಯರು ಯಶದೊರೆಯಲೆಂದು ಅನುಗ್ರಹಿಸಿದರು. ಗಲಗಲಿಯ ಸತ್ಯಾಗ್ರಹಿಗಳು ೩ ಗಂಟೆಗೆ ಬಿಸನಾಳಿಗೆ ಬಂದಾಗ ಅಲ್ಲಿ ನೆರದಿದ್ದ ಮೂರು ಸಾವಿರ ಜನರು ಕೂಡಿ ಅವರನ್ನು ಸ್ವಾಗತಿಸಿದರು. ಬಿಸನಾಳದಲ್ಲಿಯು ಓಣಿಗಳು ತಳಿರು, ತೋರಣಗಳಿಂದ ಶೋಭಿಸುತ್ತಿದ್ದವು. ಸ್ವಯಂ ಸೇವಕರ ಮೆರವಣಿಗೆಯು ಊರೊಳಗೆ ಹಾಯ್ದು ಆರತಿ ಮುಗಿದ ಬಳಿಕ ಒಂದು ಮೈಲು ದೂರ ಇರುವ ರಣಕ್ಷೇತ್ರಕ್ಕೆ ಹೊರಟರು. ಕಲ್ಲು ಮುಳ್ಳಿನ ಹಾದಿಯಲ್ಲಿ ಮೂರು ಸಾವಿರ ಜನರು ಕಾಯ್ದೆ ಭಂಗಕ್ಕೆ ಸಾಗಿದರು. ರಣಕ್ಷೇತ್ರದಲ್ಲಿ ಮೊದಲು ರಾಷ್ಟ್ರಧ್ವಜ ಹಾರಿಸಿ ರಾಷ್ಟ್ರಗೀತೆಗಳನ್ನು ಹಾಡಿದರು. ಮೊದಲು ಐದು ಸ್ವಯಂ ಸೇವಕರು ಉಪ್ಪಿನ ಮಣ್ಣನ್ನು ಹಳ್ಳದೊಳಗಿಂದ ಕೆದರಿ ಗಡಿಗೆಗಳಲ್ಲಿ ತುಂಬಿಟ್ಟರು. ನಂತರ ನೆರೆದ ಜನರೆಲ್ಲರು ಉಪ್ಪಿನ ಮಣ್ಣನ್ನು ಟೊಪ್ಪಿಗೆಗಳಲ್ಲಿ, ಕಂಬಳಿಯಲ್ಲಿ, ಮುಷ್ಟಿಯಲ್ಲಿ, ಬೊಗಸೆಯಲ್ಲಿ ಮನಸ್ಸು ತಣಿವುವಂತೆ ತುಂಬಿಕೊಂಡರು. ನಂತರ ಪುನಃ ಬಿಸನಾಳಕ್ಕೆ ಬಂದು ಅಗಸಿಯ ಮುಂದೆ ಒಲೆಗಳನ್ನು ಹೂಡಿ ತಾವು ತಂದ ಮಣ್ಣಿನಿಂದ ಶುದ್ಧವಾದ ಉಪ್ಪನ್ನು ಸಿದ್ಧಪಡಿಸಿ ಹಂಚಿದರು. ನಂತರ ಧ್ವಜಾರೋಹಣ ಭಾಷಣಗಳಾದವು ರಾಷ್ಟ್ರಗೀತೆಯಾದ ಬಳಿಕ ಸಭೆ ವಿಸರ್ಜನೆಗೊಂಡಿತು. ಪವಿತ್ರವಾದ ಮಾತೃಭೂಮಿಯ ಪ್ರಸಾದವೆಂದು ಜನರು ಉಪ್ಪಿನ ರುಚಿ ನೋಡಿದರು. ಕೆಲವರು ಉಪ್ಪನ್ನು ವಿಜಯದ ಚಿನ್ಹೆ ಎಂದು ಭಾವಿಸಿ ಕಿಸೆಯಲ್ಲಿ ತುಂಬಿಕೊಂಡರು. ಜಯ ಜಯಕಾರ ಪ್ರಚಂಡವಾಗಿ ಕೇಳಿ ಬರುತಿತ್ತು. ಶಾಂತತೆಗೆ ಎಲ್ಲಿಯೂ ದಕ್ಕೆ ಬರಲಿಲ್ಲ. ೧೧ ಜನ ಸ್ವಯಂ ಸೇವಕರ ಗುಂಪು ಬಿಸನಾಳದಲ್ಲಿಯೇ ಬೀಡು ಬಿಟ್ಟಿತ್ತು. ಇದರಲ್ಲಿ ಯಾರಾದರೂ ಬಂಧನಕ್ಕೆ ಒಳಗಾದರೆ ಅವರ ಸ್ಥಾನದಲ್ಲಿ ಹೊಸ ಸ್ವಯಂ ಸೇವಕರನ್ನು ಕಳಿಸುವ ವ್ಯವಸ್ಥೆ ಮಾಡಲಾಗಿದೆ."[೨೦]

ಸತ್ಯಾಗ್ರಹದ ಶಿಭಿರಾರ್ಥಿಗಳಾದ ಸಾ. ಗೋವರ್ಧನದಾಸರು ಬಿಸನಾಳದ ಉಪ್ಪಿನ ಸತ್ಯಾಗ್ರಹದ ಬಗ್ಗೆ ಕನ್ನಡಿಗದಲ್ಲಿ ದಿನಾಂಕ ೨೫-೦೫-೧೯೩೦ರಂದು ಉಲ್ಲೇಖಿಸುತ್ತಾ "ಬಿಸನಾಳದ ಹವೆಯು ಆರ್ದ್ರವಾಗಿರುವದರಿಂದ ಮಣ್ಣಿನಲ್ಲಿರುವ ಉಪ್ಪು ಕರಗಿ ಕಪ್ಪು ಬಣ್ಣದಲ್ಲಿ ಬರುತ್ತಿದೆ. ಸಂಜೆ ಹೊತ್ತು ಸಿಂದಗಿಯವರು ಕೀರ್ತನೆ ಮಾಡಿ ಬಿಸನಾಳದ ಜನರು ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಿದರು. ಊರಿನ ಅಸ್ಪೃಶ್ಯ ಭಗಿನಿಯರು ಸಿಂಧೂರ ಲಕ್ಷ್ಮಣ ಮತ್ತು ಕಟ್ಟೆಯ ಚನ್ನಪ್ಪ ಇವರ ಜೀವಮಾನದೊಳಗಿನ ಹಲವು ಸಂಗತಿಗಳ ಕುರಿತು ಲಾವಣಿಯನ್ನು ಹಾಡಿ ಮತ್ತಷ್ಟು ಜನರು ಕಾಯ್ದೆ ಭಂಗದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಬಿಸನಾಳದಿಂದ ೨ ಮೈಲಿ ಅಂತರದಲ್ಲಿದ್ದ ಬೂದಿಹಾಳ ಗ್ರಾಮದಲ್ಲಿ ೧೩ನೇ ತಾರೀಖದಂದು ಜಾತ್ರೆ ಇದ್ದು ಲಾಲಾಜಿ ಪಥಕದ ಸ್ವಯಂ ಸೇವಕರು ಅಂದು ಉಪ್ಪಿನ ನೀರನ್ನು ಹಾಗೂ ಉಪ್ಪಿನ ಮಣ್ಣನ್ನು ತೆಗೆದುಕೊಂಡು ಹೋಗಿ ಸ್ವದೇಶಿ ಉಪ್ಪಿನ ಪ್ರಚಾರ ಮಾಡಿದರು. ನೆರೆದಿದ್ದ

ಒಂದು ಸಾವಿರ ಜನರಿಗೆ ಉಪ್ಪನ್ನು ತಯಾರಿಸುವ ವಿಧಾನವನ್ನು ಕಲಿಸಿದರು. ಸಂಜೆ ವೇಳೆಯಲ್ಲಿ ಮಹಾತ್ಮರ ಬಂಧನ ಹಾಗೂ ಉಪ್ಪಿನ ಕಾಯ್ದೆ ಭಂಗದ ವಿಷಯವಾಗಿ ಸ್ವಯಂ ಸೇವಕರು ಭಾಷಣ ಮಾಡಿದರು."[೨೧]

೧೪ನೇ ತಾರೀಖು ಬೀಳಗಿಯ ಫೌಜದಾರ ಜಮಾದಾರ ಹಾಗೂ ಇಬ್ಬರು ಸಿಪಾಯಿಗಳು ಬಿಸನಾಳಕ್ಕೆ ಹೋಗಿ ಸತ್ಯಾಗ್ರಹಿ ಶಿಬಿರದ ಹತ್ತಿರದಲ್ಲಿಯೇ ಇಳಿದುಕೊಂಡಿದ್ದರು ಸಹಿತ ಲಾಲಾಜಿ ಪಥಕದವರು ಪ್ರತಿ ದಿವಸದಂತೆ ಆ ದಿನವು ಉಪ್ಪನ್ನು ಸಿದ್ಧಪಡಿಸಿದರು. ಫೌಜದಾರ ಯಾರನ್ನೂ ಬಂಧಿಸಲಿಲ್ಲ ಆದರೆ ಚಳವಳಿ ತೀವ್ರಗೊಂಡಾಗ ಪೊಲೀಸರು ಸತ್ಯಾಗ್ರಹಿಗಳನ್ನು ಬಂಧಿಸತೊಡಗಿದರು. ಇದರಿಂದ ಸ್ಫೂರ್ತಿ ಪಡೆದ ಗಲಗಲಿಯ ಜನರು ಸತ್ಯಾಗ್ರಹವನ್ನು ತೀವ್ರಗೊಳಿಸಲು ನಿರ್ಣಯಿಸಿದರು. "ಯಾವ ಸ್ಥಳದಲ್ಲಿ ಯಾವ ಮಣ್ಣಿನ ಸಲುವಾಗಿ ಅವರು ಸೆರೆ ಹಿಡಿಯಲ್ಪಟ್ಟಿದ್ದರೂ ಅಲ್ಲಿಗೆ ಹೋಗಿ ಪುನಃ ಸತ್ಯಾಗ್ರಹ ಮಾಡಬೇಕು ಸತ್ಯಾಗ್ರಹಿಗಳನ್ನು ಹಿಡಿದರೆ ಪುನಃ ಮರು ದಿವಸ ಕೆಲವು ಜನರು ಹೋಗಿ ಅದೇ ಕೃತಿಯನ್ನು ಮಾಡಬೇಕು ಎಂದು ನಿರ್ಧರಿಸಿದರು. ೨೦ನೆ ತಾರೀಖಿನಂದು ಐದು ಮಂದಿ ಒಂದೊಂದು ಚೀಲವನ್ನು ತಕ್ಕೊಂಡು ಬಿಸನಾಳಕ್ಕೆ ಹೋಗಿ ಅದೇ ಸ್ಥಳದಲ್ಲಿ ಮಣ್ಣನ್ನು ತುಂಬಿಕೊಂಡು ಬಂದರು. ಫೌಜಧಾರ ಮತ್ತು ಹವಾಲ್ದಾರರು ಸತ್ಯಾಗ್ರಹಿಗಳನ್ನು ತಡೆದು ಮಣ್ಣಿನ ಹರಕತ್ತು ಇದೆ, ಒಯ್ಯಬೇಡಿರಿ ಎಂದು ಹೇಳಿದಾಗ ಸತ್ಯಾಗ್ರಹಿಗಳು ನಾವು ಒಯ್ಯುವವರು ನೀನು ಮಾಡತಕ್ಕದ್ದು ಮಾಡು ಎಂದು ಹೇಳುತ್ತಾ ಶಾಂತ ರೀತಿಯಿಂದ ಚೀಲವನ್ನು ತೆಗೆದುಕೊಂಡು ಗಲಗಲಿಗೆ ಹೋದಾಗ ಈ ಐದು ಜನರನ್ನು ಗಲಗಲಿಯ ಜನರು ಭಜಂತ್ರಿಯೊಂದಿಗೆ ರಾತ್ರಿ ಗ್ಯಾಸಿನ ಬೆಳಕಿನಲ್ಲಿ ಭವ್ಯವಾಗಿ ಸ್ವಾಗತಿಸಿದರು".[೨೨]

ಗಲಗಲಿಯ ಮಹಾದೇವಪ್ಪ ಕತ್ತಿಯವರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಬಿಸನಾಳ ಗ್ರಾಮದ ಜನತೆಯ ಸಹಕಾರ ಕುರಿತು "ಸತ್ಯಾಗ್ರಹಿಗಳಿಗೆ ಗ್ರಾಮದ ಜನರು ಊಟದ ವ್ಯವಸ್ಥೆ ಮಾಡಿದ್ದರು. ನಾಗರಿಕ ಕಾರ್ಯಕರ್ತರು ಅಡುಗೆಗಾಗಿ ಪ್ರತಿಮನೆಯಿಂದ ಇಂತಿಷ್ಟು ಅಕ್ಕಿ, ಜೋಳ, ಬೆಲ್ಲವನ್ನು ಸಂಗ್ರಹಿಸಿ ಕೊಡುತ್ತಿದ್ದರು. ಶಿವಬಸಪ್ಪ ಉಪ್ಪಿನ ಅವರ ಮನೆಯಲ್ಲಿ ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಇರುತ್ತಿತ್ತು ಹಾಗೂ ಪ್ರತಿದಿನ ಇವರ ಮನೆಯ ಮುಂದಿನ ಕಟ್ಟೆಯ ಮೇಲೆ ಸತ್ಯಾಗ್ರಹಿಗಳು ಸಭೆ ಸೇರುತ್ತಿದ್ದರು. ಬಿಸನಾಳದ ಭಾಷಾಸಾಬ್ ಅಲ್ಲಾಡಿ, ಹಣಮಂತ ಹಣಮಾರ, ಲಕ್ಷ್ಮಪ್ಪ ಕುಬಕಡ್ಡಿ, ಬಸಪ್ಪ ಕೊಪ್ಪದ, ಸಂಗಪ್ಪ ತುಪ್ಪದ ಗಂಗಯ್ಯ ಹಿರೇಮಠ ಮುಂತಾದವರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಶಿವಬಸಪ್ಪನವರು ಉಪ್ಪಿನ ಸತ್ಯಾಗ್ರಹದಲ್ಲಿ ಮುಂದಾಳುಗಳಾಗಿರುವದರಿಂದ ಇವರ ಮನೆತನಕ್ಕೆ 'ಉಪ್ಪಿನ' ಎಂದು ಹೆಸರು ಬಂದಿತು."[೨೩] ಬಿಸನಾಳದಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಿರುವದರಿಂದ ಈ ಊರಿಗೆ ಉಪ್ಪಿನ ಬಿಸನಾಳ ಎಂದು ಕರೆಯುತ್ತಿದ್ದರು.

"೧೯-೦೬-೧೯೩೦ ರಂದು ಕೆರೂರದಲ್ಲಿ ಬೀಳಗಿ ಪಟ್ಟದ ದೇವರ ನೇತೃತ್ವದಲ್ಲಿ ಸಭೆ ಜರುಗಿತು. ಇಂಗಳಗಿ ಮಠದ ಮೃತ್ಯುಂಜಯ ಸ್ವಾಮಿಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯು

ಮುಕ್ತಾಯಗೊಂಡ ನಂತರ ಸಿಂದಗಿ ಎಂಬುವವರು ಬಿಸನಾಳದಲ್ಲಿ ತಾವೇ ಸ್ವತಃ ತಯಾರಿಸಿದ ಉಪ್ಪನ್ನು ಮಾರಿದರು."[೨೪]

ಪ್ರಾಂತಿಕ ಕಾಂಗ್ರೆಸ ಕಮಿಟಿಯು ಬಿಸನಾಳದಲ್ಲಿ ಬಂಧಿಸಿದ ಸ್ವಯಂ ಸೇವಕರಿಗೆ ಅಭಿನಂದನೆ ಮಾಡಿತು. ಗಲಗಲಿಯ ಸ್ವಯಂ ಸೇವಕರಿಗೆ ಶಾಂತ ರೀತಿಯಿಂದಲೂ ಮತ್ತು ಸತ್ಯಾಗ್ರಹ ಮಂಡಲದವರು ಹಾಕಿಕೊಟ್ಟ ನಿಯಮಗಳಿಗೆ ಅನುಸರಿಸಿಯೂ ಉಪ್ಪು ತಯಾರಾಗಬಹುದಾದ ಎಲ್ಲ ಸ್ಥಳಗಳಲ್ಲಿ ಉಪ್ಪಿನ ಕಾಯ್ದೆ ಭಂಗ ಮಾಡಲು ಧಾರವಾಡದಿಂದ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅಪ್ಪಣೆ ಕೊಟ್ಟರು. ಬಾಗಲಕೋಟದಲ್ಲಿ ಲಿಂಗಾಪೂರ ಎಂಬ ಸ್ವಯಂ ಸೇವಕನು ಬಿಸನಾಳ ಭೂಮಿಯಲ್ಲಿ ತಯಾರಿಸಿಕೊಂಡ ಉಪ್ಪು ಐದು ರೂಪಾಯಿಗೆ ಲೀಲಾವು ಮಾಡಿದರು. ಕೃಷ್ಣಾಜಿ ಗೋಪಾಲ ನಾಯಕ ಗಣಿ ಎಂಬುವರು ಅದನ್ನು ಖರೀದಿಸಿದರು. ಸಬ್ ಇನ್‌ಸ್ಪೆಕ್ಟರ್ ಇವರನ್ನು ಬಂಧಿಸಿದ. ಶ್ರೀನಿವಾಸರಾಯರು ನೂರು ಇನ್ನೂರು ಚೀಟಿಗಳನ್ನು ಸ್ವಯಂ ಸೇವಕರ ಸಹಾಯದಿಂದ ಸಭೆಯಲ್ಲಿ ಮಾರಿಸಿದರು."[೨೫]

ಹಣಮಂತ ಜೋಶಿಯವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ "ದಿವಾಕರರ ನೇತೃತ್ವದಲ್ಲಿ ೨೫ – ೩೦ ಜನರು ಹೊನಗನಹಳ್ಳಿಯ ಹತ್ತಿರ ದೋಣಿ ನದಿಯಲ್ಲಿ ಉಪ್ಪು ತಯಾರಿಸಿದೆವು. ಸಂಜೆಯ ಸಭೆಯಲ್ಲಿ ಲೀಲಾವು ಮಾಡಲಾಗಿ ೩೫ ರೂಪಾಯಿ ಬಂದವು. ಇದೇ ಪ್ರಕಾರ ಪ್ರತಿ ದಿನ ಒಬ್ಬೊಬ್ಬರ ಡಿಕ್ಟೇಕಟರ್‌ಶಿಪ್ಪಿನಲ್ಲಿ ಉಪ್ಪು ತಯಾರಿಸಲಾಯಿತು. ಹಣಮಂತರಾವ ಮೊಹರೆ, ಶೀನಿವಾಸರಾವ ಕೌಜಲಗಿ, ಕಾಕಾ ಕಾರಖಾನೀಸ ಮೊದಲಾದವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಯಿತು."[೨೬]

ಬದಾಮಿ ಮತ್ತು ಗುಳೇದಗುಡ್ಡಗಳಲ್ಲಿನ ಸ್ಥಳೀಯರು ಗೋವಾದಿಂದ ಉಪ್ಪನ್ನು ತರಿಸಿ ಕಾನೂನು ಭಂಗ ಮಾಡಿದರು. ಸಿಂದಗಿಯಲ್ಲಿ ಎಸ್.ವೈ. ಪಾಟೀಲ, ವೆಂಕೂಬಾಯಿ ಕೆರೂರು, ತುಳಸಿಬಾಯಿ ಬುರ್ಲಿ ಮತ್ತು ಗಂಗವ್ವ ಅಂಬಲಿ ಇನ್ನು ಕೆಲವು ಮಹಿಳೆಯರು ಸೇರಿದಂತೆ ಉಪ್ಪಿನ ಸತ್ಯಾಗ್ರಹ ನೆರವೇರಿಸಿದ್ದಕ್ಕಾಗಿ ಬಂಧನಕ್ಕೆ ಒಳಗದರು.

ಉಪ್ಪಿನ ಸತ್ಯಾಗ್ರಹ ಬಾಗಲಕೋಟ, ವಿಜಾಪೂರ ಜಿಲ್ಲೆಗಳಲ್ಲಿ ಮಹತ್ವ ಪಡೆಯಿತು ಉಪ್ಪಿನ ಸತ್ಯಾಗ್ರಹದಿಂದ ಮನೆಮನೆಗಳಲ್ಲಿ ಉಪ್ಪು ನೀರಿನ ಬಾವಿಗಳಿಗೆ ಬೆಲೆ ಬಂತು. ಅದರಲ್ಲಿನ ನೀರನ್ನೆ ಕುದಿಸಿ ತಯಾರಿಸಿದ ಚಿಟಗಿ ಉಪ್ಪಿಗೆ ದೇವರ ಪ್ರಸಾದದಷ್ಟು ಮಹತ್ವ, ಕಡಲ ತೀರದಿಂದ ತಂದ ಉಪ್ಪಿನ ಚೀಟಿಗಳು ನೂರಾರು ರೂಪಾಯಿಗಳಿಗೆ ಹರಾಜಾದವು. ಸತ್ಯಾಗ್ರಹಿಗೆ ಹಾಕಿದ ಹಾರಕ್ಕೆ ಅತಿ ಹೆಚ್ಚಿನ ಬೆಲೆ ರಾಷ್ಟ್ರೀಯ ಚಳವಳಿಯ ನಿಧಿ ಹೀಗೆ ವೃದ್ಧಿಯಾಯಿತು. ಬಯಲು ಪ್ರದೇಶವಾದ ಬಾಗಲಕೋಟ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹವು ಅತ್ಯಂತ ಯಶಸ್ವಿಯಾಗಿ ನಡೆಯಿತು.

೭.೩ ಪ್ರಭಾತ ಫೇರಿ

ಸವಿನಯ ಕಾನೂನು ಭಂಗ ಚಳವಳಿಯ ಕಾರ್ಯಕ್ರಮಗಳು ಬ್ರಿಟಿಷ ಆಳರಸರ ಹಾಗೂ ಅಧಿಕಾರಿಗಳ ದಬ್ಬಾಳಿಕೆ, ರಾಷ್ಟ್ರೀಯ ನಾಯಕರುಗಳ ಭಾಷಣ, ಮೊದಲಾದವುಗಳನ್ನು ಜನರಿಗೆ ವಿವರಿಸಲು ಪ್ರಭಾತ ಫೇರಿ ಹಾಗೂ ಪ್ರಚಾರದಂತಹ ಕಾರ್ಯಕ್ರಮಗಳನ್ನು ಚಳವಳಿಗಾರರು ಹಮ್ಮಿಕೊಂಡರು. ಪ್ರಭಾತ ಫೇರಿಯನ್ನು ನಗರ ಸಂಕೀರ್ತನವೆಂದೂ ಕರೆಯಲಾಗುವದು. ಇದರ ಉದ್ದೇಶ ಸಾಮಾನ್ಯ ಜನರಲ್ಲಿ ರಾಷ್ಟ್ರೀಯತೆ ಪ್ರಸಾರ ಮಾಡುವದಾಗಿದ್ದಿತು.

ಪ್ರತಿ ದಿನವು ಪ್ರಭಾತ ಫೇರಿಗಳು ಮುಂಜಾನೆಯಲ್ಲಿ ರಾಷ್ಟ್ರಗೀತೆಗಳೊಂದಿಗೆ ಪ್ರಾರಂಭವಾಗುತ್ತಿದ್ದವು ಈ ಸಂಕೀರ್ತನೆಗಳು ಎಂತಹ ಭಾವ ಶೂನ್ಯನೂ ಸಹ ಸ್ಫೂರ್ತಿಗೊಂಡು ದೇಶಸೇವೆಗೆ ತನ್ನ ಪಾಲಿನ ಕರ್ತವ್ಯವನ್ನು ಪೂರೈಸಲು ಮುಂದು ಬರುವಂತಿತ್ತು. ಪ್ರತಿಯೊಬ್ಬರು ಜಾತಿ, ಮತ, ಭೇದಗಳಿಲ್ಲದೆ ಈ ಸಂಕೀರ್ತನೆಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದ ಜನರಲ್ಲಿ ಸುಪ್ತವಾಗಿದ್ದ ದೇಶಾಭಿಮಾನವು ಜಾಗೃತವಾಯಿತು.

"ಪ್ರಭಾತ ಫೇರಿ ಹೊರಡುವ ವೇಳೆಯಲ್ಲಿ ಸತ್ಯಾಗ್ರಹಿಗಳು ದೇಶಭಕ್ತಿಗೀತೆಗಳಾದ 'ಝುಂಡಾ ಊಂಛಾ ರಹೇ ಹಮಾರಾ', 'ರಾಷ್ಟ್ರಧ್ವಜಕ್ಕೆ ಜೈ ಜೈ', 'ಗಾಂಧೀಕಾ ಚರಕಾ ಚಲನಾ ಪಡೆಗಾ.,' 'ಬ್ರಿಟಿಷಕೋ ಲಂಡನ್ ಭಗಾನಾ', 'ಕಾಯದೇ ಭಂಗ ಕರನ್ಯಾಲಾ,' ಚಲೋ ತಯ್ಯಾರ ಮರನ್ಯಾಲಾ' ಮುಂತಾದ ಹಾಡುಗಳನ್ನು ಹಾಡುತ್ತಿದ್ದರೆ ಅಬಾಲವೃದ್ಧರು ಎದ್ದು ಪ್ರಭಾತ ಫೇರಿಗೆ ಓಡಿ ಬರುತ್ತಿದ್ದರು."[೨೭]

ಗುಳೇದಗುಡ್ಡದಲ್ಲಿ ಪ್ರಭಾತಫೇರಿಯು ಎರಡು ಗಂಟೆಗಳಕಾಲ ನಡೆಯುತ್ತಿತ್ತು. ಊರಿನ ಪ್ರತಿಯೊಂದು ಕೇರಿಗಳನ್ನು ಸುತ್ತಿ ಬರುವದು ದೈನಂದಿನ ಚಟುವಟಿಕೆಯಾಗಿತ್ತು. ಗುಂಡಭಟ್ಟ ಜೋಶಿ, ಮಡಿವಾಳಪ್ಪ ಪಟ್ಟಣಶೆಟ್ಟಿ, ತಿಪ್ಪಣ್ಣಶಾಸ್ತ್ರಿ ಕಳ್ಳಿ ಮುಂತಾದವರು ನಾಯಕತ್ವ ವಹಿಸುತ್ತಿದ್ದರು. ಈ ವೇಳೆ ರಾಷ್ಟ್ರಾಭಿಮಾನ ಹುಟ್ಟಿಸುವ ಗೀತೆಗಳನ್ನು ಹಾಡುತ್ತಿದ್ದರು.

'ರಾಷ್ಟ್ರ ಧ್ವಜಕೆ ಜೈ ಜೈ
ಏರಿಸಿ ಹಾರಿಸಿ ರಾಷ್ಟ್ರಧ್ವಜವ
ಬೀರಿರಿ ಶಾಂತಿ ತ್ಯಾಗದ ಬಲವ
ಸೇರಿರಿ ಧ್ವಜದಡಿ ಹಿರಿ ಕಿರಿ ಛಲವ
ರಾಷ್ಟ್ರ ಧ್ವಜಕೆ ಜೈ ಜೈ :: ೧ ::

ಸ್ವತಂತ್ರ ಭಾರತದ ಧೀರರು ನಾವು
ಸ್ವತಂತ್ರ ದೇಶದ ಮಕ್ಕಳು ನಾವು
ಸ್ವತಂತ್ರ ದೇಶದಿ ಬಾಳುವೆವು ನಾವು
ರಾಷ್ಟ್ರ ಧ್ವಜಕೆ ಜೈ ಜೈ :: ೨ :: [೨೮]

ವಿಜಾಪೂರದಲ್ಲಿ ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾದ ಮೊಹರೆ ಹಣಮಂತರಾವ್, ಕಾಕಾ ಕಾರಖಾನೀಸ, ವಿಠೋಭ ನಿಕ್ಕಂ ಹಾಗೂ ಇನ್ನು ಕೆಲವು ಪ್ರಮುಖ ಮುಖಂಡರ ನೇತೃತ್ವದಲ್ಲಿ ವಿಜಾಪೂರದ ಎಲ್ಲ ತರುಣ ಮಂಡಳಿಯೂ ಹಾಗೂ ಸ್ತ್ರೀಯರು ಬೆಳಗು ಮುಂಜಾವಿನಲ್ಲಿ ರಾಷ್ಟ್ರ ಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ರಾಷ್ಟ್ರಪ್ರೇಮ ಗೀತೆಗಳೊಂದಿಗೆ ಅಂದರೆ, 'ಕರ್ನಾಟಕ ವೀರರೇಳಿ ರಣಭೇರಿ ಕೊಂಬ ಕೇಳಿ', ನಹಿ ರಖನಾ, ನಹಿ ರಖನಾ ಬ್ರಿಟಿಷ ಸರಕಾರ ನಹಿ ರಖನಾ, ಮುಂತಾದ ಗೀತೆಗಳೊಂದಿಗೆ ಪ್ರಭಾತ ಫೇರಿ ಮಾಡುತ್ತಿದ್ದರು ಹಾಗೂ ಬೆಳಿಗ್ಗೆ ಧ್ವಜಾರೋಹಣ ಮಾಡುವ ಚಟುವಟಿಕೆ ಮಾಡುತ್ತಿದ್ದರು.

"ಇಲಕಲ್ಲ, ಹುನಗುಂದ, ಕಮತಗಿ, ಸೂಳಿಭಾವಿ ಮುಂತಾದ ಕಡೆಗಳಲ್ಲಿ ಪ್ರಭಾತ ಫೇರಿ ನಡೆಯುತ್ತಿತ್ತು. ಚೋಳಚಗುಡ್ಡದಲ್ಲಿ ಸಿದ್ದಪ್ಪ ಮಾಳವಾಡ ಮತ್ತು ಮಹಾರುದ್ರಪ್ಪ ಪಟ್ಟಣಶೆಟ್ಟಿಯವರು ಪ್ರಭಾತ ಫೇರಿಯ ಮುಖಂಡತ್ವ ವಹಿಸಿ ಕಾಯ್ದೆಭಂಗ ಚಳವಳಿಯನ್ನು ತೀವ್ರಗೊಳಿಸಿದರು."[೨೯]

ಸಿಂಪಿ ಲಿಂಗಣ್ಣನವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ ಪ್ರಭಾತಫೇರಿ ಮಾಡುವಾಗ " 'ರಾಟಿಯ ತಿರುಗಿಸಿರಿ ಬಡತನ ಕಾಟವ ನೀಗಿಸಿರಿ', 'ಚರಕಾ ಚಲಾ ಚಲಾಕೇ ಲೇಂಗೇ ಸ್ವರಾಜ್ಯ ಲೇಂಗೇ','ಏಳಿರಿ, ಏಳಿರಿ ಬಲುಬೇಗ ಬೆಳಗಾಗಿದೆ ಏಳಿರಿ ಬಲುಬೇಗ', 'ನಹಿ ರಖನಾ ನಹಿ ರಖನಾ ಚಂಡಾಲ ಸರ್ಕಾರಕೋ ನಹಿ ರಖನಾ', 'ಯವ್ವಾ ನನಗೊಂದು ತಕಲಿಯ ಕೊಂಡು ಕೊಡ', 'ಝುಂಡಾ ಊಂಚಾ ರಹೇ ಹಮಾರಾ' ಮುಂತಾದ ಹಾಡುಗಳನ್ನು ಹಾಡುತ್ತಾ ಚಡಚಣದಲ್ಲಿ ಸುತ್ತುತ್ತಿದ್ದರು."[೩೦]

"ಬಾಗಲಕೋಟದಲ್ಲಿ ಎಂದಿನಂತೆ ಸಂಕೀರ್ತನೆ ಜರುಗಿದಾಗ ಪೊಲೀಸರು ತಡೆದು ನಿಲ್ಲಿಸಿ ಸ್ವಯಂ ಸೇವಕರ ಹೆಸರುಗಳನ್ನು ಬರೆದುಕೊಂಡು ಅವರ ಹಿಂದೆಯೇ ಸಂಚರಿಸಿದರು. ಸ್ವಯಂ ಸೇವಕರು ಲಾಲಾಜಿ ಚೌಕಿನಲ್ಲಿ ಸಭೆ ಸೇರಿ ರಾಘವೇಂದ್ರರಾಯರಿಗೆ ಸನ್ಮಾನ ಮಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ರಾಘವೇಂದ್ರರಾಯರು ನಾನೊಬ್ಬ ಹಳ್ಳಿಯ ರಾಷ್ಟ್ರ ಸೇವಕ ಬಹಳ ಜನರನ್ನು ಕಾಂಗ್ರೆಸಗೆ ಸೇರಿಸಿದ್ದರಿಂದ ಸರಕಾರ ನನ್ನನ್ನು ತುರಂಗದಲ್ಲಿಟ್ಟು ಮಾನ ಮಾಡಿತು. ಆದರೆ ನಾನು ಬಹಳ ದಿನಗಳ ಕಾಲ ತುರಂಗದಲ್ಲಿರುವದು ಪರಮೇಶ್ವರನ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಅವನು ನಮ್ಮನ್ನು ಬೇಗನೆ ಬಿಡುಗಡೆ ಮಾಡಿದನು. ಇನ್ನು ಮುಂದೆಯೂ ರಾಷ್ಟ್ರ ಸೇವೆಗೆ ನನ್ನ ಪ್ರಾಣ ಸವೆಸುವೆನು ಎಂದು ಹೇಳಿದರು. ಕೆಲವು ದಿನಗಳ ನಂತರ ಪ್ರಾತಃ ಸಂಕೀರ್ತನೆ ಬಾಗಲಕೋಟ ಕೋರ್ಟಿನ ಮುಂದೆ

ಹೋಗುವಾಗ ಪೊಲೀಸ್ ಅಧಿಕಾರಿಗಳು ನಾರಾಯಣ ಜೋಶಿ, ವ್ಹಿ.ಜಿ. ಕುಲಕರ್ಣಿ, ನೀಲಕಂಠಯ್ಯ ಬೆಟ್ಟದಪುರ, ಶಿವಯ್ಯ ಹಿರೇಮಠ, ವೆಂಕಟ ಸುಬ್ಬರಾವ, ಗುಂಡಪ್ಪ ಜೀರಿಗೆ ಎಂಬ ಆರು ಜನ ಸ್ವಯಂ ಸೇವಕರನ್ನು ಬಂಧಿಸಿದರು."[೩೧]

ಬಾಗಲಕೋಟ ಊರ ತುಂಬೆಲ್ಲಾ ಪ್ರತಿದಿನ ಪ್ರಭಾತ ಫೇರಿಗೆ ಹೊರಡುತ್ತಿದ್ದೆವು. ಯಂಡಿಗೇರಿ ಮಲ್ಲಪ್ಪ ಕಹಳೆಯನ್ನು ಊದಿ ಮಲಗಿದ ಜನರನ್ನು ಎಚ್ಚರಗೊಳಿಸುತ್ತಿದ್ದನು. ಸ್ತ್ರೀಯರು ಹಾಗೂ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು ಎಂದು ಹಿರಿಯರಾದ ಎಸ್.ಎಸ್. ಪಟ್ಟಣಶೆಟ್ಟಿಯವರು ಸ್ಮರಿಸುವರು.

ವಿಠ್ಠಲ್‌ರಾಮಚಂದ್ರ ಕುಲಕರ್ಣಿಯವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ "ಬಾಗಲಕೋಟದಲ್ಲಿ ಪ್ರಭಾತ ಫೇರಿಯನ್ನು ಪ್ರತಿಬಂಧಿಸಿದ್ದರು ೧೯-೧೨-೧೯೩೦ ರಂದು ನಿಷೇದಾಜ್ಞೆ ಮುರಿದು ಹೊರಡಿಸಿದ್ದ ಪಥಕದಲ್ಲಿ ನಾನು ಇದ್ದೆ. ನಮ್ಮನ್ನು ಬಂಧಿಸಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರ ಮಾಡಿದಾಗ ನೀವಿನ್ನೂ ಚಿಕ್ಕವರಿದ್ದಿರಿ, ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುವ ವಯಸ್ಸಿನಲ್ಲಿ ಚಳವಳಿ ಸೇರುವದಿಲ್ಲವೆಂದರೆ ಬಿಡುತ್ತೇನೆ ಎಂದರು. 'ನಾನು ನನ್ನ ಕರ್ತವ್ಯ ಮಾಡಿದ್ದೇನೆ. ನೀವು ನಿಮ್ಮ ಕರ್ತವ್ಯ ಮಾಡಿರಿ' ಎಂದೆ ಮೂರು ತಿಂಗಳು ನನಗೆ ಸಶ್ರಮ ಕಾರಾವಾಸ ವಿಧಿಸಿದರು."[೩೨]

"ಹುನಗುಂದದಲ್ಲಿ ಪ್ರಭಾತ ಫೇರಿ ಹನುಮಂತ ದೇವರ ಗುಡಿಯಿಂದ ಪ್ರಾರಂಭವಾಗಿ ಊರಲ್ಲೆಲ್ಲ ಸುತ್ತಾಡಿ ಬರುತ್ತಿತ್ತು. ಇಲಕಲ್ಲ ಸಾಹುಕಾರರಾದ ಸಕ್ಕರಿಯವರು ಬ್ಯೂಗಲ್ ಕೊಟ್ಟಿದ್ದರು ಬ್ಯೂಗಲ್‌ದ ಧ್ವನಿಯಾದೊಡನೆ ಜನ ಪ್ರಭಾತ ಫೇರಿಗೆ ಬರುತ್ತಿದ್ದರು"[೩೩] ಎಂದು ನರಹರಿ ಕಟ್ಟಿ ತಮ್ಮ ಸ್ಮೃತಿಯಲ್ಲಿ ದಾಖಲಿಸಿದ್ದಾರೆ.

ವಿಜಾಪೂರ ಜಿಲ್ಲೆಯಲ್ಲಿ ಪ್ರಭಾತಫೇರಿಗಳು ದಿನನಿತ್ಯದ ಕಾರ್ಯಕ್ರಮಗಳಾಗಿದ್ದವು. ಪ್ರಭಾತ ಫೇರಿಯಲ್ಲಿ ಮುಂಜಾವಿನ ನಸುಕಿನಲ್ಲಿ ಮಾತೃ ಭೂಮಿಗಾಗಿ ಬಲಿದಾನ ಹೋದವರ ವೀರ ಪರಂಪರೆಯ ಬಗ್ಗೆ ಇರುವ ಅತ್ಯಂತ ಸ್ಫೂರ್ತಿಪ್ರದ ಪದಗಳನ್ನು ಹಾಡುತ್ತ ತಂಡವು ಓಣಿಯಲ್ಲಿ ಮುಂದುವರೆದಂತೆ ಹಾಸಿಗೆಯಲ್ಲಿ ಇನ್ನು ಬಿದ್ದುಕೊಂಡಿದ್ದ ಆಲಸಿಗಳು ತಡವರಿಸುತ್ತಾ ಎದ್ದು ಬಂದು ತಂಡದಲ್ಲಿ ತಾವು ಸೇರಿ ಹಾಡುತ್ತಿದ್ದರು. ಊರ ಊರಿಗೆ ಕೇರಿ ಕೇರಿಗೆ ಇಂಥ ಪ್ರಭಾತ ಫೇರಿ ನಡೆಯುತ್ತಾ ಒಟ್ಟು ಅಂದಿನ ಭಾರತೀಯ ವಾತಾವರಣದ ಕಣ ಕಣಗಳೂ ದೇಶಾಭಿಮಾನದ ವೀರಾವೇಶದಿಂದ ತುಳುಕಾಡುತ್ತಿದ್ದವು.

೭.೪ ಪ್ರಚಾರಾಂದೋಲನ

ಪ್ರಭಾತ ಫೇರಿಯನ್ನು ಊರಲ್ಲಿರುವ ಜನರನ್ನು ಚಳವಳಿಗೆ ಸನ್ನದ್ದಗೊಳಿಸಲು ಮಾಡಿದರೆ ಗ್ರಾಮ ಗ್ರಾಮಗಳಿಗೆ ತೆರಳಿ ಗಾಂಧಿಯವರ ತತ್ವಗಳನ್ನು ಬೋಧಿಸಲು ಚಳವಳಿಗಾರರು ಆಗಾಗ ತಂಡಗಳನ್ನು ಕಟ್ಟಿಕೊಂಡು ಪ್ರಚಾರ ಕೈಗೊಳ್ಳುತ್ತಿದ್ದರು. ಇದರ ಮುಖ್ಯ ಗುರಿ ಎಂದರೆ ಭಾರತ ರಾಷ್ಟ್ರೀಯ ಕಾಂಗ್ರೆಸ ಕಾರ್ಯಕಾರಿ ಸಮಿತಿಯು ಕಾನೂನು ಭಂಗ ಚಳವಳಿಯ ಕುರಿತು ಆಗಾಗ ಹೊರಡಿಸುವ ಗೊತ್ತುವಳಿ ಮತ್ತು ನಾಯಕರ ಹೇಳಿಕೆಗಳು ಮುಂತಾದವುಗಳನ್ನು ಸ್ಥಳೀಯವಾಗಿ ಸಭೆ ಸಮಾರಂಭ ಏರ್ಪಡಿಸಿ ಜನರಿಗೆ ತಿಳಿಸುವದಾಗಿತ್ತು. ಅದರಂತೆ ಕರ್ನಾಟಕ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ನಾಯಕರ ಹೇಳಿಕೆಗಳು ಹಾಗೂ ಅವುಗಳ ಅನುಷ್ಠಾನ ಕುರಿತು ವಿಚಾರವಿನಿಮಯ ಮಾಡಲಾಗುತ್ತಿತ್ತು.

೧. ಸತ್ಯಾಗ್ರಹಿಗಳು ಪಥಕ

ಬಿಜಾಪೂರ ಜಿಲ್ಲೆಯಲ್ಲಿ 'ದೇಶ ಬಂಧು ಪಥಕ' ಎಂಬ ಹೆಸರಿನಲ್ಲಿ ಚಳವಳಿಗಾರರು ತಂಡ ರಚಿಸಿಕೊಂಡು ಬೇರೆ ಬೇರೆ ಗ್ರಾಮಗಳಿಗೆ ಹೋಗಿ ಪ್ರಚಾರ ಕೈಗೊಳ್ಳುತ್ತಿದ್ದರು.

ಬಾಗಲಕೋಟದಿಂದ ಹೊರಟ ಮೊದಲ ಸತ್ಯಾಗ್ರಹಿಗಳ ಪಥಕವು ಕುಂದರಗಿಯಿಂದ ದಿನಾಂಕ ೦೭-೦೫-೧೯೩೦ ರಂದು ಬಾವಲತ್ತಿಗೆ ಬಂದಾಗ ಅಲ್ಲಿಯ ಜನರು ಊಟದ ವ್ಯವಸ್ಥೆ ಮಾಡಿಸಿದರು. ಮದ್ಯಾಹ್ನ ೨ ಗಂಟೆಗೆ ಬೀಳಗಿಗೆ ಮೆರವಣಿಗೆಯೊಂದಿಗೆ ಬಂದು ಬಜಾರ ಮಧ್ಯದಲ್ಲಿ ಧ್ವಜಾರೋಹಣ ಮಾಡಿದರು. ಮರುದಿನ ೮ನೇ ತಾರೀಖು ಸೊನ್ನ ಹಾಗೂ ಬಾಡಗಿ ಗ್ರಾಮಕ್ಕೆ ಭೇಟಿ ನೀಡಿದರು.

ವಿಜಾಪೂರ ಜಿಲ್ಲೆಯ ಎರಡನೆ ಪಥಕದ ಕಾರ್ಯಕ್ರಮ.

ದಿನಾಂಕ	ಹೊರಡುವ ಊರು	ಮುಟ್ಟುವ ವೇಳೆ	ಯಾವ ಊರಿಗೆ
೧೮/೦೫/೧೯೩೦	ಹುನಗುಂದದಿಂದ	ಸಾಯಂಕಾಲ	ಇಲಕಲ್ಲ
೧೯/೦೫/೧೯೩೦	ಇಲಕಲ್ಲ ದಿಂದ	ಮದ್ಯಾಹ್ನ	ಹುನಗುಂದ
	ಹುನಗುಂದ ದಿಂದ	ಸಾಯಂಕಾಲ	ಸಂಗಮ
೨೦/೦೫/೧೯೩೦	ಸಂಗಮ ದಿಂದ	ಮದ್ಯಾಹ್ನ	ಬೇವೂರ
೨೦/೦೫/೧೯೩೦	ಬೇವೂರಿನಿಂದ	ಸಾಯಂಕಾಲ	ಬಾಗಲಕೋಟ

ಬಿಜಾಪೂರ ಜಿಲ್ಲೆಯ ಎರಡನೆಯ ಪಥಕದ ವೀರರು ಮೇಲಿನ ಕಾರ್ಯಕ್ರಮದ ಅನುಸಾರವಾಗಿ ಆಯಾ ಹಳ್ಳಿಗಳಿಗೆ ಬರವರು. ಅವರಿಗೆ ಎಲ್ಲರೂ ತ್ರಿಕರಣಪೂರಕವಾಗಿ ಸಹಾಯ ಮಾಡಬೇಕೆಂದು ಕಾಂಗ್ರೆಸ ಕಮಿಟಿಯು ವಿನಂತಿಸಿಕೊಂಡಿತು.[illegible]

ಬಾಗಲಕೋಟದ ದೇಶಬಂಧು ಪಥಕದ ಪ್ರವಾಸದ ಬಗ್ಗೆ ಅದರ ನಾಯಕ ಕನ್ನಡಿಗ ಪತ್ರಿಕೆಯಲ್ಲಿ ಹೀಗೆ ವರದಿ ನೀಡಿದ್ದಾನೆ.

"ಬಾಗಲಕೋಟನಿಂದ ನಾವು ೬ ಜನ ಸ್ವಯಂ ಸೇವಕರು ಹಳ್ಳಿ ಹಳ್ಳಿಗಳಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮಗಳ ಬಗ್ಗೆ ಜನಜಾಗೃತಿನ್ನುಂಟು ಮಾಡಲು ೨೭-೦೫-೧೯೩೦ರಂದು ಶಿರೂರಿಗೆ ಹೊರಟು ೯ ಗಂಟೆಗೆ ತಲುಪಿದೆವು. ಅಲ್ಲಿ ಮೊದಲು ನಗರ ಸಂಕೀರ್ತನೆಯನ್ನು ಜರುಗಿಸಿ ಸಭೆ ಮಾಡಿದೆವು. ಸಿದ್ಧಾಂತಿ ಮತ್ತು ಸಿಂದಗಿಯವರು ಭಾಷಣಗಳು ಮುಗಿದ ನಂತರ ಸಭೆಯಲ್ಲಿ ಸ್ವತಂತ್ರ ಉಪ್ಪನ್ನು ಮಾರಿದರು, ಕೆಲವರು ಸತ್ಯಾಗ್ರಹ ನಿಧಿಗೆ ಸಹಾಯ ಮಾಡಿದರು. ಶಿರೂರಿನಿಂದ ಗುಳೇದಗುಡ್ಡಕ್ಕೆ ಹೊರಟು ಸಾಯಂಕಾಲ ಗುಳೇದಗುಡ್ಡ ತಲುಪಿದೆವು. ಅಲ್ಲಿ ವೀರಭದ್ರ ದೇವಾಲಯದಲ್ಲಿ ಇಳಿದುಕೊಂಡು ಧ್ವಜಾರೋಹಣ ಮಾಡಿದೆವು. ಸಭೆಯಲ್ಲಿ ಎರಡು ಸಾವಿರ ಜನ ಸೇರಿದ್ದರು. ಖಾದಿರಸಾಬ ದೇವರಮನಿ ಎಂಬುವರು ನಮ್ಮ ಜೊತೆ ಬಂದರು. ಮರುದಿನ ಬದಾಮಿಗೆ ತೆರಳಿ ಸಭೆಯನ್ನು ನೆಡೆಸಿದೆವು. ಸ್ವತಂತ್ರ ಉಪ್ಪನ್ನು ಇಲ್ಲಿ ಮಾರಲಾಯಿತು."[೩೫]

ದೇಶಬಂಧು ಪಥಕವು ೦೩-೦೭-೧೯೩೦ರಂದು ಕೆರೂರು ಹಾಗೂ ಅದರ ಸುತ್ತಲಿನ ಗ್ರಾಮಗಳಲ್ಲಿ ಸಂಚರಿಸಿದಾಗ ಊರಿನ ಗೌಡ ಮತ್ತು ಫೌಜಲದಾರರು ಸತ್ಯಾಗ್ರಹಿಗಳಿಗೆ ತೊಂದರೆ ನೀಡಿದರು. "ಕೆರೂರಿನಿಂದ ೪ ಜನ ಸ್ವಯಂ ಸೇವಕರ ತಂಡ ಹೊರಟಿತು. ೯ ಗಂಟೆಗೆ ನರೇನೂರಿಗೆ ತಲುಪಿ ನಗರ ಸಂಕೀರ್ತನೆ ಮಾಡಿಕೊಂಡು ಊರ ಮಧ್ಯದಲ್ಲಿರುವ ಮಸೀದಿಯೊಳಗೆ ಸಭೆ ಸೇರಿದರು. ದಿವಾಣಜೀಯವರು ಲಾವಣಿ ಪದಗಳನ್ನು ಹಾಡಿದರೆ, ಸಿಂದಗಿಯವರು ಸದ್ಯದ ದೇಶದ ಸ್ಥಿತಿಯ ಬಗ್ಗೆ ಭಾಷಣ ಮಾಡಿದರು. ನಂತರ ಊರ ಜನರು ನೂಲುವದಾಗಿ ವಚನ ಕೊಟ್ಟರು. ಮುಂದೆ ನಾಗನೂರು ಮತ್ತು ಬೂದಿಹಾಳ ಗ್ರಾಮಗಳಿಗೆ ಹೋಗಿ ಸಭೆ ಕೂಡಿಸಿ ಭಾಷಣ ಮಾಡಿದರು. ದಿನಾಂಕ ೦೪-೦೭-೧೯೩೦ ರಂದು ಹೊಸಕೋಟೆಗೆ ಹೋಗಿ ಭಾಷಣ ಮಾಡಿದರು. ನಂತರ ಅನವಾಲ ಗ್ರಾಮಕ್ಕೆ ಹೋಗಿ ದ್ಯಾಮವ್ವನ ಗುಡಿಯಲ್ಲಿ ಬೀಡು ಬಿಟ್ಟಾಗ ಆ ಊರಿನ ಗೌಡನು ಸತ್ಯಾಗ್ರಹಿಗಳನ್ನು ಅಲ್ಲಿಂದ ಹೊರ ದಬ್ಬಲು ಯೋಜನೆ ಹಾಕಿ ಒಬ್ಬ ಸ್ತ್ರೀಯನ್ನು ಕರೆಯಿಸಿ ಗುಡಿಯನ್ನು ಸಾರಿಸಲು ಹೇಳಿ ಕಳುಹಿಸಿದ. ಆ ಸ್ತ್ರೀಯು ಸಾರಿಸುವದಿದೆ ಇಲ್ಲಿಂದ ಹೊರಡಿರಿ ಎಂದು ಪಥಕದವರಿಗೆ ಹೇಳಿದಾಗ ಪಥಕದವರು ನಿನ್ನೆ ಮೊನ್ನೆ ಸಾರಿಸಿದಂತೆ ಇದೆ ಎಂದು ಎಂದಾಗ ಸಾರಿಸಲು ಅಪ್ಪಣೆಯಾಗಿದೆ ಎಂದಳು, ಸತ್ಯಾಗ್ರಹಿಗಳಿಗೆ ಗೌಡನ ಕುಚೇಷ್ಟೆ ತಿಳಿದು ಬಸವಣ್ಣನ ಗುಡಿಗೆ ಹೋದರು, ಅಲ್ಲಿಯ ಪೂಜಾರಿಯು ಗುಡಿ ಸಾರಿಸುವದು ಇದೆ ಏಳಿರಿ ಎಂದು ಹೇಳಿದಾಗ ಸತ್ಯಾಗ್ರಹಿಗಳು ಅದಕ್ಕೆ ಒಪ್ಪಲಿಲ್ಲ ಪೂಜಾರಿಯು ಗುಡಿಯನ್ನು ಸಾರಿಸಿ ರೊಜ್ಜು ಮಾಡಿದ ಸತ್ಯಾಗ್ರಹಿಗಳು ಅದನ್ನು ಗೀರಿ ಸ್ವಚ್ಚಗೊಳಿಸಿದರು, ಸಂಜೆ ಅಲ್ಲಿಯೇ ಸಭೆ ನಡೆಯಿತು. ದಿವಾಣಜಿಯವರು ಲಾವಣಿಗಳನ್ನು ಹಾಡಿದರೆ ಉಳಿದ ಪ್ರಮುಖರು ಭಾಷಣ ಮಾಡಿದರು. ನಂತರ ನಂದ್ಯಾಳಕ್ಕೆ ತೆರಳಿ ಸಭೆ ನಡೆಸಿ ಮದ್ಯಾಹ್ನ ಜಂಗವಾಡಕ್ಕೆ ತೆರಳಿ ಅಲ್ಲಿ ಬಸವಣ್ಣನವರ ಗುಡಿಯಲ್ಲಿ

ಇಳಿದುಕೊಂಡಾಗ ಬಟಕುರ್ಕಿ ಠಾಣೆಯ ಹವಾಲ್ದಾರ ಸತ್ಯಾಗ್ರಹಿಗಳಿಗೆ ಹೆಸರು ಕೇಳಿದ ಸತ್ಯಾಗ್ರಹಿಗಳು ನಿನ್ನ ಹೆಸರು ಮೊದಲು ಹೇಳು ನಂತರ ನಮ್ಮ ಹೆಸರು ಹೇಳುತ್ತೇವೆ ಎಂದು ಉತ್ತರಿಸಿದರು. ಪೌಜದಾರ 'ಇಲ್ಲಿ ಸಭೆ ನಡೆಸಿ ಕೊಡುವದಿಲ್ಲ ರಾಷ್ಟ್ರ ಧ್ವಜವನ್ನು ಕಿತ್ತಿ ಒಗೆಯುತ್ತೇನೆ ಎಂದು ತಿಳಿಸಿದನು. ರಾಷ್ಟ್ರಧ್ವಜವನ್ನು ಕಿತ್ತಿದಲ್ಲಿ ಏನಾಗುವದು ನಿನಗೆ ಗೊತ್ತಿಲ್ಲ ಎನಿಸುತ್ತದೆ. ಬೇಕಾದರೆ ಪರೀಕ್ಷಿಸಿ ನೋಡು' ಎಂದು ಸತ್ಯಾಗ್ರಹಿಗಳು ಉತ್ತರಿಸಿದರು. ನೆರೆದಿದ್ದ ಜನರು ಪೌಜಧಾರನನ್ನು ಬೆದರಿಸಿ ಕಳುಹಿಸಿದರು. ಮಧ್ಯರಾತ್ರಿ ಬೇರೊಬ್ಬ ಸಿಪಾಯಿ ಅಲ್ಲಿಗೆ ಬಂದು ಸತ್ಯಾಗ್ರಹಿಗಳ ಹೆಸರು ಕೇಳಲು ಮುಂದಾದ ಹಾಗೂ ಗೌಡನನ್ನು ಕರೆಯಿಸಿ ಬೈದನು. ಸತ್ಯಾಗ್ರಹಿಗಳು ಪೌಜಧಾರನಿಗೆ ನಿನ್ನ ಹೆಸರೇನೆಂದು ಕೇಳಿದಾಗ ಅವನು ತನ್ನ ಹೆಸರು ಎಸ್.ಹೆಚ್. ಇನಾಮದಾರ ಎಂದು ತಿಳಿಸಿದ. ಸತ್ಯಾಗ್ರಹಿಗಳು ತಮ್ಮ ಹೆಸರನ್ನು ತಿಳಿಸಿದರು, ಮರುದಿನ ಸತ್ಯಾಗ್ರಹಿಗಳು ಸಭೆ ನಡೆಸಿ ಕೆರೂರಿಗೆ ಹಿಂದುರುಗಿದರು."[೩೬]

ಸ್ಥಳೀಯ ಮುಖಂಡರಾದ ಗೌಡ, ಕುಲಕರ್ಣಿಯರು ಅಧಿಕಾರಶಾಹಿಗಳ ಜೊತೆ ಕೈ ಜೋಡಿಸಿ ಸತ್ಯಾಗ್ರಹಿಗಳಿಗೆ ಸಹಕಾರ ನೀಡದೆ ಪೊಲೀಸರ ಮೂಲಕ ಬೆದರಿಸುವ ಹಾಗೂ ಕಿರುಕುಳ ಕೊಡುತ್ತಿದ್ದರು. ಸತ್ಯಾಗ್ರಹಿಗಳು ಇದಾವುದಕ್ಕು ಜಗ್ಗದೆ ದೇಶಾಭಿಮಾನದಿಂದ ಪ್ರಚಾರಾಂದೋಲನ ಮುಂದುವರೆಸುತ್ತಿದ್ದರು. ಇದು ದೇಶಾಭಿಮಾನದ ಸಂಕೇತವಾಗಿದೆ.

೭.೫ ಪಾನ ನಿಷೇದ

ಪಾನ ನಿರೋಧವು ಮತ್ತೊಂದು ರಚನಾತ್ಮಕ ಅಂಶವಾಗಿದೆ. ಇದು ಭಾರತದ ದುಷ್ಟ ಪದ್ಧತಿಗಳಲ್ಲಿ ಒಂದು. ಗಾಂಧಿಯವರ ದೃಷ್ಟಿಯಲ್ಲಿ ಮದ್ಯಪಾನ ಸೇವನೆಯು ವೈಭಿಚಾರಕ್ಕಿಂತಲೂ ಹೇಯವಾದುದೂ. ಮದ್ಯಪಾನ ವ್ಯಸನಕ್ಕೆ ತುತ್ತಾದ ರಾಷ್ಟ್ರವು ಆತ್ಮನಾಶವಿಲ್ಲದೆ ಗತಿ ಇಲ್ಲ ಎಂದಿರುವರು.

ಪಾನ ನಿರೋಧದಿಂದ ಒಂದು ಬಲಿಷ್ಠ ಸಮಾಜವನ್ನು ನಿರ್ಮಿಸಬಹುದು. ಬಹಳಷ್ಟು ಹಣವನ್ನು ಮದ್ಯಪಾನ ಸೇವನೆಗೆ ವೆಚ್ಚ ಮಾಡುತ್ತಾರೆ. ಮಿಲಿಯನ್‌ಗಟ್ಟಲೇ ಜನ ಹಸಿವು, ಬಡತನದ ಜೀವನವನ್ನು ಅನುಭವಿಸುತ್ತಾರೆ. ಈ ಕಾರಣದಿಂದ ಗಾಂಧೀಜಿಯವರು ಪಾನ ನಿರೋಧ ಜಾರಿಗೆ ತರುವಂತೆ ಕಾಂಗ್ರೆಸನ್ನು ಒತ್ತಾಯಿಸುತ್ತಿದ್ದರು. ಇದರಿಂದಾಗಿ ಕಾಂಗ್ರೆಸ್ ಪಾನ ನಿರೋಧವನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿತು. ಪಾನ ನಿರೋಧಕ್ಕೆ ಸೇಂಧಿ ಗಿಡ ಕಡಿಯುವ ಹಾಗೂ ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

"ಗಾಂಧಿ ಪೂರ್ವ ಕಾಲದಲ್ಲಿ ತಿಲಕರು ಪಾನ ನಿರೋಧಕ್ಕೆ ಕರೆ ನೀಡಿದಾಗ ಬೆಳಗಾವಿಯಲ್ಲಿ ಗೋವಿಂದರಾವ್ ಯಾಳಗಿ ಮತ್ತು ಜೋಶಿ ಕರ್ನಾಟಕದಲ್ಲಿ ಪ್ರಥಮವಾಗಿ ಪಾನ ನಿರೋಧ ಚಳವಳಿ ನಡೆಸಿ ದಂಡ ನೀಡದೆ ಜೈಲು ಶಿಕ್ಷೆ ಅನುಭವಿಸಿದರು."[೩೭]

೧. ಸೇಂಧಿಗಿಡ ಕಡಿಯುವ ಕಾರ್ಯ

“೨೦-೦೭-೧೯೩೦ ರಂದು ವಿಜಾಪೂರದ ಸತ್ಯಾಗ್ರಹ ಶಿಬಿರದ ಸ್ವಯಂ ಸೇವಕರು ಅಲಿಯಾಬಾದಕ್ಕೆ ಹತ್ತು ಸದಸ್ಯರಂತೆ ಆರು ತಂಡಗಳಾಗಿ ಹೋದರು. ಊರಿನ ಜನರು ಸತ್ಯಾಗ್ರಹಿಗಳಿಗೆ ಊಟ ಮಾಡಿಸಿದ ನಂತರ ಶ್ರೀಪಾದ ಭಟ್ಟರ ಹೊಲದಲ್ಲಿದ್ದ ೨೫೦ ಸೇಂಧಿಗಿಡಗಳನ್ನು ನಾಶ ಮಾಡಿದ ಬಳಿಕ ನಾಗಠಾಣಕ್ಕೆ ತೆರಳಿದರು. ಅಲ್ಲಿಯ ಜನ ಅಭೂತ ಪೂರ್ವವಾಗಿ ಸ್ವಾಗತಿಸಿ ಸಭೆ ನಡೆಸಿದರು. ದೇಶಪಾಂಡೆ ನಿಕ್ಕಮ್ ಮತ್ತು ಮರುಳಾರಾಧ್ಯ ಶಾಸ್ತ್ರಿಗಳು ಜನರನ್ನು ಉದ್ದೇಶಿಸಿ ಮಾತನಾಡಿದರು. ಮರುದಿನ ಮುಂಜಾನೆ ಹಳ್ಳದಲ್ಲಿರುವ ೨೫೦ ಸೇಂಧಿಗಿಡಗಳನ್ನು ಕಡಿದು ಹಾಕಿದರು.”[೩೮]

ಶಿರೂರದಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಬಾಗಲಕೋಟದಿಂದ ಮಲ್ಲಪ್ಪ ಯಂಡಿಗೇರಿ, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಗುರುರಾವ್ ಜೋರಾಪುರ, ಹಣಮಂತ ವಡ್ಡರ, ಭೀಮಪ್ಪ ನಾಯಕ, ರಂಗಪ್ಪ ಮಾದರ ಮುಂತಾದ ೧೦೦ಕಿಂತ ಅಧಿಕ ಜನರು ಹೋಗಿದ್ದೆವು. ಊರಿನ ಜನರು ಸತ್ಯಾಗ್ರಹಿಗಳನ್ನು ಸ್ವಾಗತಿಸಿ ಸತ್ಕರಿಸಿದರು. ಮದ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಗುರುರಾವ್ ಜೋರಾಪೂರ ಅವರು ಮಾತನಾಡಿದ ನಂತರ ಸೇಂಧಿ ಗಿಡಗಳನ್ನು ನಾಶಪಡಿಸಿದೆವು ಎಂದು ಎಸ್.ಎಸ್. ಪಟ್ಟಣಶೆಟ್ಟಿಯವರು ಸ್ಮರಿಸಿಕೊಳ್ಳುವರು.

ಗುರುರಾವ್ ಜೋರಾಪುರ ಅವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ “೧೯೩೦ ಅಕ್ಟೋಬರನಲ್ಲಿ ಶಿರೂರಿಗೆ ಹೋಗಿ ಬಾಗಲಕೋಟದವರು ಜಂಗಲ್ ಸತ್ಯಾಗ್ರಹ ನಡೆಸಿದರು. ಮೊದಲ ಬಾರಿಗೆ ಹಣಮಂತರಾವ್ ಕೌಜಲಗಿ ಮತ್ತು ಮಂಗಳವೇಡೆಯವರ ಬಂಧನವಾಯಿತು. ಮುಂದೆ ಕೃಷ್ಣರಾವ್ ಜೋರಾಪುರ, ಶ್ರೀನಿವಾಸರಾವ ನೀರಲಕೇರಿ, ಸುಗಣೇಂದ್ರ ಕೆರೂರ ಅವರು ನಾಯಕತ್ವ ವಹಿಸಿ ಜಂಗಲ್ ಸತ್ಯಾಗ್ರಹವನ್ನು ಯಶಸ್ವಿಯಾಗಿ ಮುಂದುವರೆಸಿ ಬಂಧಿತರಾಗಿ ಶಿಕ್ಷೆಗೆ ಒಳಗಾದರು.”[೩೯] ‘೦೭-೦೭-೧೯೩೦ ರಂದು ಬಾಗಲಕೋಟಯಿಂದ ಮಮಟಗೇರಿಗೆ ಸೇಂಧಿ ಗಿಡ ಕಡಿಯಲು ನೂರಾರು ಜನ ಸ್ವಯಂ ಸೇವಕರು ಹೋಗಿ ಅಲ್ಲಿ ಸಾವಿರಾರು ಸೇಂಧಿ ಗಿಡಗಳನ್ನು ಕಡಿದು ಹಾಕಿದರು. ೦೯-೦೭-೧೯೩೦ರಂದು ಕೆರೂರು ಉಗಲವಾಟ ಮತ್ತು ಗುಳೇದಗುಡ್ಡಗಳಲ್ಲಿ ೩೦೦ ಜನ ಮೆರವಣಿಗೆ ಹೋಗಿ ಒಂದೇ ದಿನದಲ್ಲಿ ೫೦೦ ರಿಂದ ೬೦೦ ಸೇಂಧಿ ಗಿಡಗಳನ್ನು ಸಂಹರಿಸಿದರು.”[೪೦] “ಸಿದ್ದಪ್ಪಣ್ಣ ಅಕ್ಕಿ ಮತ್ತು ಐದು ಜನ ಸ್ವಯಂ ಸೇವಕರು ಬದಾಮಿ ತಾಲೂಕಿನ ಮಮಟಗೇರಿ ಹಾಗೂ ಕೆರೂರಿನಲ್ಲಿ ೬೦ ಈಚಲಗಿಡಗಳನ್ನು ಕಡಿದು ಹಾಕಿದರು. ಒಟ್ಟು ತಾಲೂಕಿನಲ್ಲಿ ೭೦೦ ಈಚಲಗಿಡಗಳು ಸಂಹಾರ ಆದವು.”[೪೧]

ಕೆರೂರಿನ ಸುತ್ತಮುತ್ತಲಿನ ೬೦೦ ಈಚಲು ಗಿಡಗಳನ್ನು ಗುಳೇದಗುಡ್ಡದ ಮತ್ತು ಕೆರೂರಿನ ಸ್ವಯಂ ಸೇವಕರು ಕಡಿದು ಹಾಕಿದರು. ಗಲಗಲಿಯ ಹಬ್ಬು ಅವರ ನೇತೃತ್ವದ ತಂಡ ಬದಾಮಿ

ತಾಲೂಕಿನೊಳಗೆ ಈಚಲು ಗಿಡಗಳನ್ನು ಕಡಿದು ಹಾಕಿತು."ಕೆರೂರಿನ ಸುತ್ತ ಮುತ್ತಲಿರುವ ೩೦೦೦ ಸೇಂಧಿ ಗಿಡಗಳನ್ನು ನಾಶಗೊಳಿಸಬೇಕೆಂದು ಅವುಗಳ ಒಡೆಯರು ಸತ್ಯಾಗ್ರಹ ಮಂಡಳಿಗೆ ಒಪ್ಪಿಸಿದರು."[೬೨]

ಕೆರೂರಿನ ಜನರು ಸೇಂಧಿಗಿಡಗಳನ್ನು ಸಂಹಾರ ಮಾಡಲು ಹೆಚ್ಚು ಉತ್ಸಾಹ ತೋರಿ ದೇವಾಂಗ ಸಮಾಜದ ಗುರುಗಳು ನಾಲ್ಕು ಸಾವಿರ ಸೇಂಧಿ ಗಿಡಗಳನ್ನು ಸಮೂಲವಾಗಿನಾಶಪಡಿಸಲು ಪ್ರತಿಜ್ಞೆಗೈದರು. "೧೦-೦೭-೧೯೩೦ರಂದು ಕೆರೂರಿನ ೩೦೦ ಜನ ಪುರುಷರು ೪ ಜನ ಹೆಣ್ಣು ಮಕ್ಕಳು ಹಾಗೂ ಬೇರೆ ಬೇರೆ ಗ್ರಾಮದ ೩೦೦ ಜನರೊಂದಿಗೆ ಕೂಡಿಕೊಂಡು ಮಮಟಗೇರಿಯಲ್ಲಿ ಒಂದೆ ತಾಸಿನಲ್ಲಿ ೨೦೦೦ ಈಚಲು ಗಿಡಗಳನ್ನು ಸಮೂಲವಾಗಿ ನಾಶಪಡಿಸಿದರು. ಬಾಗಲಕೋಟದ ಮಹಿಳೆಯರಾದ ಸೀತಾಬಾಯಿ ಬಳ್ಳೊಳ್ಳಿ ಯಂಕೂಬಾಯಿ ಪರ್ವತೀಕರ, ತುಂಗಾಬಾಯಿ ಮಿರ್ಜಿ, ಚಂಪಾಬಾಯಿ ಬಾಟೆ, ಪದ್ಮಾವತಿಬಾಯಿ ಶಿವಮೊಗ್ಗಿ, ಲಕ್ಷ್ಮೀಬಾಯಿ ಪದಕಿ, ಹಲವಾರು ಗಿಡಗಳನ್ನು ನೆಲಕ್ಕೆ ಉರುಳಿಸಿದರು. ಹಣಮವ್ವ ನೀರಲಕೇರಿಯವರು ಸೇಂಧಿ ಗಿಡಗಳನ್ನು ಕಡೆಯುವದರ ಜೊತೆಗೆ ಅಗಾಗ್ಗೆ ಇತರರನ್ನು ಹುರಿದುಂಬಿಸುತ್ತಿದ್ದರು. ಸಂಜೆ ಎಲ್ಲರೂ ಕೆರೂರಿಗೆ ಮರಳಿದಾಗ ಮೆರವಣಿಗೆ ಮಾಡಿ ರಾತ್ರಿ ೧೦ ಗಂಟೆಗೆ ಸಭೆ ಸೇರಿದರು. ಮರುದಿನ ೧೧-೦೭-೧೯೩೦ ರಂದು ಅಗಸನಕೊಪ್ಪ ಗ್ರಾಮದ ೭೩ ಜನರು ಕೆರೂರಿನ ನೂರಿನ್ನೂರು ಜನರು ಮಮಟಗೇರಿಗೆ ಬಂದು ೨೦೦೦ ಸೇಂಧಿ ಗಿಡಗಳನ್ನು ಕಡಿದರು. ಈ ಕಾರ್ಯದಿಂದ ಹುರುಪುಗೊಂಡ ಪಕ್ಕದ ಗ್ರಾಮಗಳ ಜನರು ರೊಟ್ಟಿಬುತ್ತಿ ಕಟ್ಟಿಕೊಂಡು ಬಂದು ಸತ್ಯಾಗ್ರಹಿಗಳಿಗೆ ಉಣಿಸುತ್ತಿದ್ದರು. ಕೆಲವರು ಬಂಡಿಗಳಲ್ಲಿ ಮೋಟಾರಗಳಲ್ಲಿ, ಕಾಲನಡಿಗೆ ಮೂಲಕ ಬಂದರು ಸತ್ಯಾಗ್ರಹಿಗಳಿಂದ ಸ್ಫೂರ್ತಿ ಪಡೆದು ತಾವು ಸೇಂಧಿ ಗಿಡಗಳನ್ನು ಕಡಿದು ಹಾಕಿದರು. ಸಂಜೆ ಕೆರೂರಿಗೆ ಬಂದಾಗ ವಾದ್ಯ ವೈಭವದೊಂದಿಗೆ ಸತ್ಯಾಗ್ರಹಿಗಳನ್ನು ಸತ್ಕರಿಸಿ ಮೆರವಣಿಗೆ ಮಾಡಲಾಯಿತು. ದೇವಾಂಗ ಸಮಾಜದ ಗುರುಗಳು ಈ ಕಾರ್ಯ ಮಾಡುತ್ತಿರುವಾಗ ಬೇಕಾದಷ್ಟು ಸಂಕಟಗಳು ಬಂದರೂ ಅವುಗಳನ್ನು ಎದುರಿಸುತ್ತೇವೆ ಎಂದು ಸಾರಿದರು."[೬೩]

ಬದಾಮಿ ತಾಲೂಕಿನ ಕೆರೂರು ಜಂಗಲ್ ಸತ್ಯಾಗ್ರಹದ ಕೇಂದ್ರವಾಯಿತು. ಬಾಗಲಕೋಟದ ಮಲ್ಲಪ್ಪ ಯಂಡಿಗೇರಿ ಅಲ್ಲಿ ಸ್ವಯಂ ಸೇವಕರ ಜೊತೆ ಹನುಮಾನ ಗುಡಿಯಲ್ಲಿ ಶಿಬಿರ ಹೂಡಿ ಡಾ. ಶಂಕರಾವ್ ಮತ್ತು ಚಂದ್ರಣ್ಣ ಭಟ್ಟ ಜೋಶಿ ಎಂಬ ಸ್ಥಳೀಕರ ನೆರವಿನಿಂದ ಭಾರಿ ಜನರ ಜೊತೆ ಸತ್ಯಾಗ್ರಹ ನಡೆಸಿದರು. ಇಲ್ಲಿನ ಸಾನಿಯರ ಮನೆತನದ ಇಬ್ಬರು ತರುಣಿಯರು ಸತ್ಯಾಗ್ರಹದಲ್ಲಿ ಭಾಗವಹಿಸಿ ತಲಾ ನಾಲ್ಕು ತಿಂಗಳು ಶಿಕ್ಷೆ ಅನುಭವಿಸಿದರು. ಬಾಗಲಕೋಟದ ಮೋಟಾರ ಕಂಪನಿಯವರು ಈ ಕೆಲಸದಲ್ಲಿ ನೀಡುತ್ತಿದ್ದ ಕ್ರಿಯಾಶೀಲ ಸಹಕಾರದಿಂದ ಬೀಡಕರ್ ಅವರ ಬಸ್ಸಿನ ಲೈಸನ್ಸ್ ರದ್ದಾಗಿ ಎರಡು ಬಸ್ಸಗಳನ್ನು ಸರಕಾರ ಜಪ್ತಿ ಮಾಡಿತು. ಲೋಕಮಾನ್ಯ ಮೋಟಾರ ಸರ್ವಿಸನ ಅನಂತರಾವ್ ದೇಶಪಾಂಡೆಯವರು ಸತ್ಯಾಗ್ರಹಕ್ಕೆ ತೆರಳುವ ಸ್ವಯಂ ಸೇವಕರ ಯಾತ್ರೆಗೆ ಬಾಗಲಕೋಟಯಿಂದ ಸತ್ಯಾಗ್ರಹ ಸ್ಥಳಕ್ಕೆ ಒಯ್ಯುವ ಊಟದ ಪ್ಯಾಕೇಟ್‌ಗಳ ಸಾರಿಗೆಗೆ ನೆರವಾದರು.

"ಗುಳೇದಗುಡ್ಡದ ಗೋಪಾಲ ರಾಮಚಂದ್ರ ದಾಬಡೆಯವರು ತಮ್ಮ ೨೦೦ ಸೇಂಧಿ ಗಿಡಗಳನ್ನು ಕಡಿಯಲು ಕಾಂಗ್ರೆಸ್‌ನವರಿಗೆ ಒಪ್ಪಿಸಿದರು. ಈ ಕಾರ್ಯಕ್ಕೆ ೨೦ ಸ್ವಯಂ ಸೇವಕರು ಸಿದ್ಧರಾದರು."[೪೪] "ಗುಳೇದಗುಡ್ಡದ ಕಾರ್ಯಕರ್ತರಾದ ಬಾಪೂರಾವ್ ಬಾಸುತ್ಕರ್, ವೀರಭದ್ರಪ್ಪ ಕದಾಂಪೂರ, ಗುಂಡ ಭಟ್ಟ ಜೋಶಿ, ನಿಜಪ್ಪ ನಿಡಗುಂದಿ, ಸಾಬಣ್ಣ ಸಿಂಧೆ, ತೀರ್ಥಭಟ್ಟ ಜೋಶಿ, ರಾಘವಭಟ್ಟ ಜೋಶಿ. ಜೀವನ ಭಟ್ಟ ಜೋಶಿ, ಶ್ರೀನಿವಾಸರಾವ ದೇವಗಿರಿಕರ, ಲಕ್ಷ್ಮಣ ಸಂಗಾ, ಶಿವಲಿಂಗಪ್ಪ ಸಿಂಗದ, ಅನ್ವರಸಾಬ ದಂಡಾವತಿ, ಕೊಬ್ಬಣ್ಣಾ ಶೇಖಾ, ಶಿವನಪ್ಪ ಝಳಕಿ, ವೀರಪ್ಪ ಹಾಗೂ ಚಾಡಂಗಿ ಮೊದಲಾದವರು ಕೆರೂರ, ಮಮದಾಪೂರ, ಗುಳೇದಗುಡ್ಡ ಹಾಗೂ ಸುತ್ತಲಿನ ಊರುಗಳಲ್ಲಿ ಈಚಲು ಗಿಡಗಳನ್ನು ಕಡಿದು ಹಾಕಿದರು."[೪೫]

ಈಚಲಗಿಡ ಸಂಹಾರ ಕಾರ್ಯವು ಬದಾಮಿ ತಾಲೂಕಿನಲ್ಲಿ ಉಗ್ರವಾಗಿದೆ ಎಂದು ಅರಿವುವಾಗುತ್ತದೆ. ಬಾಗೇವಾಡಿ ತಾಲೂಕಿನ ಸಂಕನಾಳ ಗ್ರಾಮಕ್ಕೆ ಬಾಗಲಕೋಟನಿಂದ ಸತ್ಯಾಗ್ರಹಿಗಳು ಬಂದಾಗ ಆ ಊರಿನ ಕುಲಕರ್ಣಿ ಸತ್ಯಾಗ್ರಹಿಗಳು ತಂದ ಸರ್ವೇ ನಂಬರ ಸಂಕನಾಳದಲ್ಲಿ ಇಲ್ಲವೆಂದು ಅಸಹಕಾರ ತೋರಿದ. ರಾತ್ರಿ ಹಣಮಂತ ದೇವಾಲಯದಲ್ಲಿ ಸತ್ಯಾಗ್ರಹಿಗಳು ಬಿಡು ಬಿಟ್ಟಾಗ ಊರಿನ ಒಬ್ಬ ವ್ಯಕ್ತಿ ಆ ಸರ್ವೆ ನಂಬರಿನ ಹೊಲವನ್ನು ತೋರಿಸುವದಾಗಿ ಹೇಳಿದ. ತಡ ರಾತ್ರಿ ಊರಿನ ಗೌಡ ಬಂದು ಸತ್ಯಾಗ್ರಹಿಗಳಿಗೆ ಸೇಂಧಿ ಗಿಡಗಳನ್ನು ಕಡೆಯದಂತೆ ಎಚ್ಚರಿಕೆ ನೀಡಿದ. ಮರುದಿನ ಪೊಲೀಸರನ್ನು ಕರೆಸುವ ಒಳಗಾಗಿ ಸತ್ಯಾಗ್ರಹಿಗಳು ಹೊಲಕ್ಕೆ ಹೋಗಿ ಸೇಂಧಿ ಗಿಡಗಳನ್ನು ಸಂಹರಿಸಿದರು. ಸ್ಥಳೀಯ ಅಧಿಕಾರಿಗಳು ಸರಕಾರದ ಪರವಿದ್ದರೂ ಜನಸಾಮಾನ್ಯರು ಚಳವಳಿಯ ಬೆಂಬಲಿಗರಾಗಿದ್ದರು.

"ಬಾಗೇವಾಡಿಯಲ್ಲಿ ಸತ್ಯಾಗ್ರಹಿಗಳು ಸೇಂಧಿಗಿಡ ಕಡಿಯುವದನ್ನು ತಡೆಯಲು ಬೆಳಗಾವಿಯಿಂದ ಪೊಲೀಸರು ಬಂದು ಲಿಂಗಾಯತ ಮಠಾಧೀಶರಾದ ಶಂಕರಯ್ಯನವರನ್ನು ಬಂಧಿಸಿದಾಗ ಊರಲ್ಲಿ ಗಲಾಟೆಗಳಾಗಿ ಕೆಲವು ಜನರು ಧಾರವಾಡ ಮತ್ತು ಬೈಲಹೊಂಗಲ ಮಾರ್ಗದ ತಂತಿಯನ್ನು ಕಡಿದು ಹಾಕಿದರು."[೪೬] "ಸೇಂಧಿ ಗಿಡಗಳನ್ನು ಕಡಿಯಲು ಹುನಗುಂದದ ೧೧ ಜನ ಇಲಕಲ್ಲದಲ್ಲಿ ಕ್ಯಾಂಪ್ ಮಾಡಿ ಅಲ್ಲಿಯ ಸೇಂಧಿ ಬನಗಳನ್ನು ನಾಶಮಾಡಲು ಶುರು ಮಾಡಿದರು. ಒಂದೇ ಸಮನೆ ನಾಲ್ಕಾರು ವರ್ಷ ಕಳೆದರೂ ನಾಶವಾಗದಂತಹ ಗಿಡಗಳ ಗುಂಪು ಒಂದೆರಡು ತಿಂಗಳಿನಲ್ಲಿಯೇ ನಿರ್ನಾಮವಾದವು. ಪ್ರತಿದಿನ ಸೇಂಧಿ ಗಿಡ ಕಡಿದು ಬಂದ ಬಳಿಕ ಸಂಜೆ ವೇಳೆಗೆ ಸಭೆ ಕರೆದು ಮಹಾತ್ಮಾ ಗಾಂಧಿಯವರ ಸಂದೇಶವನ್ನು ತಿಳಿಸಿ ಹೇಳುತ್ತಿದ್ದರು."[೪೭]

೨. ಸರಾಯಿ ಅಂಗಡಿ ಮುಂದೆ ಪಿಕೆಟಿಂಗ್

ಪಿಕೆಟಿಂಗ್ ಎಂಬುವದು ಪ್ರತಿರೋಧವನ್ನು ವ್ಯಕ್ತಪಡಿಸಲು ಬಳಕೆಯಲ್ಲಿರುವ ಇಂಗ್ಲೀಷ ಶಬ್ದವಾಗಿದ್ದು, ಇದನ್ನು 'ಸರ್ಪಗಾವಲು' ಎಂದು ಕನ್ನಡದಲ್ಲಿ ಕರೆಯುತ್ತಾರೆ. ಸೇಂಧಿ ಗಿಡಗಳನ್ನು

ಕಡಿಯುವದರ ಜೊತೆಗೆ ಸರಾಯಿಯನ್ನು ಯಾರು ಕುಡಿಯಬಾರದು ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಸರಕಾರಕ್ಕೆ ಆಗುವ ಲಾಭದ ಬಗ್ಗೆ ಜನರಿಗೆ ತಿಳಿ ಹೇಳಿ ಅವರ ಮನವೊಲಿಸಿ ಕುಡಿಯುವದನ್ನು ಬಿಡಿಸುವದೆ ಪಿಕೆಟಿಂಗ್ ಆಗಿದೆ. ಜಿಲ್ಲೆಯಾದ್ಯಂತ ಅನೇಕ ಕಡೆಗಳಲ್ಲಿ ಪಿಕೆಟಿಂಗ್ ನಡೆಯಿತು.

"ಗುಳೇದಗುಡ್ಡ, ಗಲಗಲಿ, ಕೆರೂರಗಳಲ್ಲಿ ಮದ್ಯದಂಗಡಿಗಳ ಎದುರು ಸರ್ವಗಾವಲು ಇಟ್ಟಿತ್ತು. ಗುಳೇದಗುಡ್ಡದಲ್ಲಿ ಕೃಷ್ಣಭಟ್ಟ ಜೋಶಿ ಮುಂತಾದ ತರುಣರ ಪ್ರಯತ್ನದಿಂದ ಮದ್ಯದಂಗಡಿಯವರು ತಮ್ಮ ಅಂಗಡಿಗಳನ್ನು ಒಂದು ತಿಂಗಳುಗಳ ಕಾಲ ಮುಚ್ಚಿದರು. ಕೆರೂರಿನಲ್ಲಿ ಕಾವಲು ನಿಂತ ಸಲುವಾಗಿ ೩೫ ಜನರಿಗೆ ಶಿಕ್ಷೆ ಆಯಿತು. ಸೇಂಧಿ ಅಂಗಡಿಯ ಲೀಲಾವು ಕಾರ್ಯದಲ್ಲಿ ಸರ್ವಗಾವಲು ಇಡಬೇಕೆಂದು ನಿರ್ಧರಿಸಿ ಸುಮಾರು ೧೦೦ ಜನ ಸ್ವಯಂ ಸೇವಕರು ಸೇವಕಿಯರೂ ಸುತ್ತಲು ನಿಂತು ಗುತ್ತಿಗೆದಾರರಿಗೆ ಭಿನ್ನವಿಸಿದರು. ಸರಕಾರಕ್ಕೆ ಪ್ರತಿವರ್ಷ ಸಿಕ್ಕುವ ೧,೪೦,೦೦೦ ರೂಪಾಯಿಗಳ ಆದಾಯ ೮೦,೦೦೦ ರೂಪಾಯಿಗೆ ಇಳಿಯಿತು. ವಿಜಾಪೂರದ ೭ ಅಂಗಡಿಗಳಲ್ಲಿ ದೇಶಿಯ ಸೆರೆ ಮಾರಾಟ ೨೦% ಮತ್ತು ಸೆಂಧಿಯು ೩೬% ರಷ್ಟು ಇಳಿಯಿತು. ೧೯೨೯ ರಲ್ಲಿ ವಿಜಾಪೂರದಲ್ಲಿ ೬೮೪ ಗ್ಯಾಲನ್ ದೇಶಿಯ ಸೆರೆ ಮಾರಾಟವಾದರೆ ೧೯೩೦ ರಲ್ಲಿ ೫ ದೇಶಿ ಸೆರೆಯ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ್ದರಿಂದ ೧೪೦ ಗ್ಯಾಲನ್ ಮಾರಾಟ ಕಡಿಮೆ ಆಯಿತು. ಅದರಂತೆ ೧೯೨೯ರಲ್ಲಿ ೧೪.೬೦೪ ಸೆಂಧಿ ಮಾರಾಟವಾದರೆ ೧೯೩೦ ರಲ್ಲಿ ೮ ಸೇಂಧಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡಿದ್ದರಿಂದ ೫,೨೪೯ ಗ್ಯಾಲನ್ ಸೆಂಧಿ ಮಾರಾಟ ಕಡಿಮೆ ಆಯಿತು."[೪೮] ಎಂದು ಜಿ.ಎ. ಬಿರಾದಾರ ಅವರು ಮುಂಬೈ ಕನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿ ಕೃತಿಯಲ್ಲಿ ಉಲ್ಲೇಖಿಸುವರು.

ಗುಳೇದಗುಡ್ಡದಲ್ಲಿ ಸೆರೆ ಸೇಂಧಿ ಅಂಗಡಿ ಮುಂದೆ ೦೨-೦೭-೧೯೩೦ ರಂದು ಪಿಕೆಟಿಂಗ್ ಆರಂಭವಾಯಿತು. ಪ್ರತಿದಿನ ೮ ರಿಂದ ೧೦ ಸ್ವಯಂ ಸೇವಕರು ಊರಿನ ಪ್ರಮುಖರೊಂದಿಗೆ ಸೇರಿಕೊಂಡು ಮುಂಜಾನೆ ೮ ರಿಂದ ಸಂಜೆಯವರಗೆ ಅತ್ಯಂತ ಶಾಂತತೆಯಿಂದ ಪಿಕೆಟಿಂಗ್ ಮಾಡಿದರು. ನಗರಸಭೆಯ ಸದಸ್ಯರಾದ ನಿಜಪ್ಪ ಗದಿಗೆಪ್ಪ ನಿಡಗುಂದಿಯವರೂ ಇದರಲ್ಲಿ ಭಾಗವಹಿಸಿದ್ದರು. ಸೇಂಧಿ ವ್ಯಾಪಾರವು ಸಂಪೂರ್ಣವಾಗಿ ನಿಂತಿತು. ಸೇಂಧಿಯನ್ನು ಪುಕಟ್ಟೆ ಕೊಡುವೆನು ಕುಡಿಯುವವರು ಕುಡಿದು ಹೋಗಬೇಕು ಎಂದು ಅಂಗಡಿಕಾರನು ಬೇಡಿಕೊಂಡರೂ ಕುಡಿಯುವವರೆ ಇರಲಿಲ್ಲ.

ಗುಳೇದಗುಡ್ಡದಲ್ಲಿ ಗಾಂಧಿ ದಿನವನ್ನು ಆಚರಿಸಿ ಅಂದು ಸಾಯಂಕಾಲ ಮಹಾತ್ಮರ ಭಾವಚಿತ್ರದ ಮೆರವಣಿಗೆಯಾದ ನಂತರ ಅದೇ ಭಾವಚಿತ್ರದ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಮೂವರು ಸ್ವಯಂ ಸೇವಕರು ಮದ್ಯಪಾನ ನಿಷೇದ ಬಗ್ಗೆ ಮಾತನಾಡಿದರು.

ಕನ್ನಡಿಗ ಪತ್ರಿಕೆ ೧೪-೭-೧೯೩೦ ರ ಸಂಚಿಕೆಯಲ್ಲಿ ವರದಿ ಮಾಡಿದಂತೆ "ಗುಳೇದಗುಡ್ಡದಲ್ಲಿ ಪಿಕೆಟಿಂಗ್ ಬಹಳ ಪರಿಣಾಮಕಾರಿಯಾಗಿ ನಡೆದಿತ್ತು. ಯಾರಾದರೂ ಕುಡಿದವರು ಕಂಡುಬಂದರೆ ಊರಿನ ಜನರು ಅಂಥವರ ವಿರುದ್ಧ ಸಾಮಾಜಿಕ ಬಹಿಷ್ಕಾರ ಮಾಡಲು ಗೊತ್ತುವಳಿ ಮಾಡಿದ್ದರಿಂದ ಕುಡುಕರು ಕುಡಿಯುವದನ್ನು ಬಿಟ್ಟರು. ಸೇಂಧಿ ಕುಡಿಯುವದು ಗುಳೇದಗುಡ್ಡದಲ್ಲಿ ಸಂಪೂರ್ಣವಾಗಿನಿಂತ ಮೇಲೆ ಮುಕ್ತೆದಾರರು ಊರಲ್ಲಿನ ಕುಡುಕರಿಗೆ ಉಚಿತವಾಗಿ ಸೇಂಧಿ ನೀಡುವದಾಗಿ ಹೇಳಿದ್ದರಿಂದ ಎಂಟು - ಹತ್ತು ಜನ ಹೋಗಿ ಕುಡಿದು ಬಂದ ಸುದ್ಧಿ ತಿಳಿದ ತಕ್ಷಣ ಆ ಊರಿನ ದೈವದವರು ಅಲ್ಲಿಗೆ ಹೋಗಿ ಕುಡುಕರಿಂದ ಇನ್ನು ಮುಂದೆ ಕುಡಿಯುವದಿಲ್ಲವೆಂದು ಆಣೆ ಮಾಡಿಸಿಕೊಂಡು ೧೦೦ ರೂಪಾಯಿ ಬಾಂಡ ಬರೆಸಿಕೊಂಡರು ಹಾಗೂ ೫ ರೂಪಾಯಿ ದಂಡ ಹಾಕಿದರು. ಸೀತಾಬಾಯಿ ಬಳ್ಳೊಳ್ಳಿಯವರು ಚಹಾದ ದುಷ್ಪರಿಣಾಮ ಕುರಿತು ಭಾಷಣ ಮಾಡಿದರು. ಪಕೀರವ್ವ ಹಂಪಿಹೊಳಿ ದೇಶ ಸೇವೆಗಾಗಿ ಪ್ರತಿದಿನ ಪಿಕೆಟಿಂಗ್ ಮಾಡಬೇಕೆಂದು ಹೇಳಿದರು."[೨೯]

ಮಹಾತ್ಮರ ಪಾನ ವಿರೋಧ ನೀತಿಯನ್ನು ಜಾರಿಗೆ ತರಲು ಪ್ರತಿಯೊಂದು ಸಮುದಾಯಗಳು ತಮ್ಮದೇಯಾದ ಚೌಕಟ್ಟಿನಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದವು. "ತಾಳಿಕೋಟೆಯಲ್ಲಿ ದಿನಾಂಕ ೨೬-೦೪-೧೯೩೦ ರಂದು ರಜಪೂತ ಸಮುದಾಯದವರು ಸಭೆ ಸೇರಿ ಸೇಂಧಿಯನ್ನು ಕುಡಿಯಬಾರದೆಂದು, ಮಾಂಸಾಹಾರ ಸೇವಿಸಬಾರದೆಂದು, ಸಿಗರೇಟ್ ಸೇದಬಾರದೆಂದು ಠರಾವು ಮಾಡಿದವು. ಇದಕ್ಕೆ ವಿರುದ್ಧ ಹೋಗುವದಿಲ್ಲವೆಂದ ಪ್ರಮಾಣ ಮಾಡಿದರು. ಯಾರಾದರೂ ಇದಕ್ಕೆ ತಪ್ಪಿ ನಡೆದರೆ ಮೊದಲನೆ ಬಾರಿ ೫-೫-೩ ರಂತೆ ದಂಡಕ್ಕೆ ಪಾತ್ರನಾಗುವದಾಗಿಯೂ ಮತ್ತು ಎರಡನೆ ಬಾರಿ ತಪ್ಪಿದರೆ ಆ ವ್ಯಕ್ತಿಯನ್ನು ಸಮುದಾಯದಿಂದ ಬಹಿಷ್ಕರಿಸುವದಾಗಿ ನಿರ್ಣಯಿಸಿದರು."[೩೦]

"ಹುನಗುಂದ ತಾಲೂಕಿನಲ್ಲಿ ಸೆರೆ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಕಾರ್ಯ ಎಡಬಿಡದೆ ನಡೆಯಿತು. ಅಮೀನಗಡದಲ್ಲಿ ಪಿಲ್ಲಪ್ಪ ಮತ್ತು ಬಸಪ್ಪ ಕಮತಗಿಯಲ್ಲಿ ನಾಗಪ್ಪ ದಿಡ್ಡಿಮನಿ, ಮಹಾಂತಪ್ಪ ಮತ್ತು ಯಾದವಾಡ, ಗುಡೂರನಲ್ಲಿ ಅನಂತರಾವ ದಂಡಿನ, ಅಚ್ಚುತರಾವ ದಂಡಿನ, ಗಣೇಶಭಟ್ಟ ಕೊಸರಿ ಮತ್ತು ಜಿತೂರಿಯವರು ಸೆರೆ - ಸೇಂಧಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದರು. ಇಂಡಿ ತಾಲೂಕಿನ ಚಡಚಣದಲ್ಲಿ ಹೀರಾಚಂದ ದೋಶಿಯವರು ಸೇಂಧಿ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದ್ದಕ್ಕಾಗಿ ಪ್ರಪ್ರಥಮವಾಗಿ ಬಂಧಿಸಲ್ಪಟ್ಟರು."[೩೧]

"ಬಾಗಲಕೋಟದಲ್ಲಿ ಕೃಷ್ಣರಾವ್ ಜೋರಾಪೂರರು ವೆಂಕುಬಾಯಿ ಪರ್ವತಿ ಮುಂತಾದ ಮಹಿಳೆಯರನ್ನು ಸೇರಿಸಿ ಮದ್ಯದ ಅಂಗಡಿ ಮುಂದೆ ಪಿಕೆಟಿಂಗ್ ಸಂಘಟಿಸಿದರು. ಬಾಗಲಕೋಟ ತಾಲೂಕಿನ ಶಿರೂರ ಸೆರೆ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಲಾಯಿತು. ಬಿಜಾಪೂರ ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ೨೫-೦೫-೧೯೩೦ರ ವರದಿಯಂತೆ ಶಾಂತ ರೀತಿಯಿಂದ ಸೆರೆ ಮತ್ತು ಸೇಂಧಿ ಅಂಗಡಿಗಳ ಪಿಕೆಟಿಂಗ್ ನಡೆಯುತ್ತಿದೆ. ಬಾಗಲಕೋಟ ತಾಲೂಕಿನ ಶಿರೂರ ಮತ್ತು ಅಮೀನಗಡಗಳ

ಅಂಗಡಿಗಳ ಮುಂದೆ ಪಿಕೆಟಿಂಗಗಳಾಗುತ್ತಿದೆ. ಪಿಕೆಟಿಂಗರು ಅಂಗಡಿಗಳಿಂದ ೨೦೦ ಫೂಟ ಅಂತರದಲ್ಲಿ ನಿಂತು ಅಂಗಡಿಗಳಿಗೆ ಕುಡಿಯಲು ಬರುವ ಜನರನ್ನು ಕುಡಿಯದಂತೆ ಅಂಗಲಾಚುವರು. ನಾನು ಡಿಸ್ಟ್ರಿಕ್ಟ್ ಪೊಲೀಸ ಆಕ್ಟ್ ಸೆಕ್ಷನ್ ೫೩ರ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ನಿರ್ದೇಶನ ನೀಡಿರುವೆನು. ಪ್ರಮುಖ ಪಿಕೆಟಿಂಗಗಾರರ ಮೇಲೆ ಕಾನೂನು ಕ್ರಮ ಜರುಗಿಸಲಾಗುವದು ಮತ್ತು ಕಠಿಣ ಶಿಕ್ಷೆ ವಿಧಿಸಲಾಗುವದು."[೫೨]

ವಿಜಾಪೂರ ಜಿಲ್ಲೆಯಲ್ಲಿ ಸೇಂಧಿ ಸೆರೆ ಅಂಗಡಿಗಳ ಲೀಲಾವುವನ್ನು ವಿರೋಧಿಸಿ ದೇಶಪಾಂಡೆ ವಕೀಲರು ಬಾಜೀರಾವ್ ಮತ್ತು ಮರುಳಾರಾಧ್ಯ ಸ್ವಾಮಿಗಳು ತೀವ್ರವಾಗಿ ಪ್ರಚಾರ ಮಾಡತೊಡಗಿದ್ದರು. ೨೫-೦೬-೧೯೩೦ ರಂದು ವಿಜಾಪೂರದಲ್ಲಿ ಸೇಂಧಿಯ ಲೀಲಾವು ಆರಂಭಗೊಂಡಿತು. ಅಂದು ಮುಂಜಾನೆ ೬ಗಂಟೆಗೆ ಪ್ರಚಂಡ ಮೆರವಣಿಗೆಯೊಂದಿಗೆ ಕಛೇರಿಗೆ ಹೋದರು. ಬಾಗಲಕೋಟೆಯಿಂದಲೂ ಸ್ವಯಂ ಸೇವಕರು ಬಂದಿದ್ದರು. ಸ್ತ್ರೀ ಸ್ವಯಂ ಸೇವಕರು ಮಧ್ಯಪಾನ ವ್ಯಾಪಾರದ ದುಷ್ಟತನವನ್ನು ತಿಳಿ ಹೇಳಲು ಸೆರಗೊಡ್ಡಿ ಬೇಡಿದ್ದರಿಂದ ಎಷ್ಟೋ ವ್ಯಾಪಾರಸ್ಥರು ಹಿಂತಿರುಗಿದರು. ಒಬ್ಬ ವ್ಯಕ್ತಿಯು ಪಿಕೆಟಿಂಗ್‌ನ್ನು ಮೆಚ್ಚಿ ವ್ಯಾಪಾರ ಮಾಡದೆ ಸ್ವಯಂ ಸೇವಕರಿಗೆ ೧೧೦ ರೂಪಾಯಿಗಳನ್ನು ಸೇಂಧಿ ಅಂಗಡಿ ಲೀಲಾವು ಹಿಡಿಯುವದಿಲ್ಲವೆಂದು ಮಾತು ಕೊಟ್ಟು ಹೋದನು. ಅದೇ ವ್ಯಕ್ತಿ ೧೨ ಗಂಟೆಗೆ ಲೀಲಾವು ಆರಂಭಗೊಂಡಾಗ ಪುನಃ ಬಂದು ಹಲವಾರು ಅಂಗಡಿಗಳನ್ನು ಹಿಡಿದನು. ಸತ್ಯಾಗ್ರಹಿಗಳ ಪಿಕೆಟಿಂಗ್‌ದಿಂದ ಸರಕಾರಕ್ಕೆ ೧ ರೂಪಾಯಿ ೬ ಆಣೆಯಂತೆ ಉತ್ಪನ್ನವಾದರೆ ಈ ವರ್ಷ ಪಿಕೆಟಿಂಗ್‌ದಿಂದ ಕೇವಲ ೭೫೦೦೦ ರೂಪಾಯಿ ಉತ್ಪನ ಬಂದಿತು.

"೧೧-೦೭-೧೯೩೦ ರಂದು ಶಿರೂರನಲ್ಲಿ ಸೇಂಧಿ ಅಂಗಡಿಯು ಮುಂದೆ ಪಿಕೆಟಿಂಗ್ ಆರಂಭಗೊಂಡಾಗ ಸೇಂಧಿ ಕುಡಿಯಲು ಯಾರೂ ಹೋಗಲಿಲ್ಲ. ಗುಳೇದಗುಡ್ಡದಿಂದ ಸೇಂಧಿ ಕುಡಿಯಲು ಬಂದಿದ್ದ ನೂರಾರು ಜನರು ಸ್ವಯಂ ಸೇವಕರ ಮಾತು ಕೇಳಿ ಕುಡಿಯುವದನ್ನು ಬಿಟ್ಟು ಹಿಂದೆ ಹೋದರು. ಪಿಕೆಟಿಂಗ್‌ದಲ್ಲಿ ಇಮಾಮು ಸಾಹೇಬ ಹಾವರಗಿ, ವೇಂಕಟೇಶ, ರಾಘವೇಂದ್ರ ಕುಲಕರ್ಣಿ ನಿಂಗಯ್ಯ ಗಣಾಚಾರಿ, ಸಿದ್ದಯ್ಯ ಗಣಾಚಾರಿ ಮುಂತಾದವರು ಭಾಗವಹಿಸಿದ್ದರು."[೫೩]

ಜಿಲ್ಲೆಯಾದ್ಯಂತ ಮದ್ಯಪಾನ ಪ್ರತಿಬಂಧಕ ಸತ್ಯಾಗ್ರಹ ಫಲಪ್ರದವಾಗಿರುವದನ್ನು ಕನ್ನಡಿಗ ಪತ್ರಿಕೆ ೧೮-೦೭-೧೯೩೦ ರ ಸಂಚಿಕೆಯು ವಿಜಾಪೂರ ಜಿಲ್ಲೆಯಲ್ಲಿ ಈಗ ಸೇಂಧಿಗಿಡ ಕಡಿಯೊದು ಮತ್ತು ಸೆರೆ ಸೇಂಧಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುವದು ಜೋರಾಗಿ ನಡೆದಿದ್ದರಿಂದ ಕೆಲವು ಕಡೆ ಮದ್ಯಪಾನ ನಿಂತು ಹೋಯಿತು. ಗುಳೇದಗುಡ್ಡ ಹಾಗೂ ಗಲಗಲಿಯಲ್ಲಿ ಮದ್ಯಪಾನ ನಿಂತೇ ಹೋಗಿದೆ. ತಾಳಿಕೋಟೆಯಲ್ಲಿಯೂ ಈಗ ಪಿಕೆಟಿಂಗ್ ಸಮಯವಾಗಿದ್ದರಿಂದ ಕುಡಿತ ಬಹಳ ಕಡಿಮೆ ಆಗಿದೆ. ಶಿರೂರ, ಅಮೀನಗಡ, ಹುನಗುಂದಗಳಲ್ಲಿಯೂ ಸೇಂಧಿ ಅಂಗಡಿಗಳ ಮುಂದೆ ಕಾವಲು ಬಲವತ್ತಾಗಿದೆ. ಬದಾಮಿ ಮತ್ತು ವಿಜಾಪೂರ ತಾಲೂಕುಗಳಲ್ಲಿ ಈವರೆಗೆ ೮ ರಿಂದ ೯ ಸಾವಿರ ಸೇಂಧಿ ಗಿಡಗಳು

ನೆಲಕ್ಕುರಳಿವೆ. ಹುನಗುಂದ ತಾಲೂಕದಲ್ಲಿ ೯೦೦ ಈಚಲ ಗಿಡಗಳು ಮುಕ್ತದಾರರಿಗೆ ದೊರೆತಂತಾಗಿದೆ ಎಂದು ವರದಿ ಮಾಡಿದೆ.

೭.೬ ಶಾಸನಸಭೆಯ ಚುನಾವಣೆ ಬಹಿಷ್ಕಾರ

ಶಾಸನ ಸಭೆಗಳಿಗೆ ಚುನಾವಣೆಯನ್ನು ಸೆಪ್ಟೆಂಬರ್ ೧೯೩೦ ರಂದು ನಡೆಸಲು ಸರಕಾರ ನಿರ್ಧರಿಸಿದಾಗ ಕಾಂಗ್ರೆಸ ಕಾನೂನು ಭಂಗ ಚಳವಳಿ ಮಾಡುತ್ತಿತ್ತು. ಸರಕಾರದ ಈ ಕ್ರಮವನ್ನು ಅಖಿಲ ಭಾರತ ಕಾಂಗ್ರೆಸ ಕಮಿಟಿಯು ಕಾನೂನು ಭಂಗ ಚಳವಳಿಯ ಅಂಗವಾಗಿ ಚುನಾವಣೆಯನ್ನು ಬಹಿಷ್ಕರಿಸುವಂತೆ ಕರೆ ನೀಡಿದಾಗ ದೇಶಾದ್ಯಂತ ಚುನಾವಣೆ ಬಹಿಷ್ಕರಿಸಲು ಪಿಕೆಟಿಂಗ್‌ಗಳು ನಡೆಯತೊಡಗಿದವು.

ವಿಜಾಪೂರ ಜಿಲ್ಲೆಯಲ್ಲಿ ಚುನಾವಣೆ ಬಹಿಷ್ಕಾರ ಆರಂಭಗೊಂಡಿದ್ದುದರಿಂದ ಕೇವಲ ೨೦% ರಷ್ಟು ಮಾತ್ರ ಮತದಾನವಾಯಿತು. ೧೪೪ ಕಾಲಂ ಜಾರಿಯಲ್ಲಿದ್ದರೂ ಕೂಡಾ ಮತದಾನದ ಕೇಂದ್ರದ ಸುತ್ತಲು ಜನರು ನೆರೆದರು. ಮತದಾನ ಮಾಡಲು ಬಂದವರಿಗೆ ಮತ ಹಾಕದಂತೆ ಮನವೊಲಿಸುತ್ತಿದ್ದರು. ಚುನಾವಣೆಗೆ ನಿಂತ ವ್ಯಕ್ತಿಗಳು ತಮ್ಮ ಪ್ರತಿನಿಧಿಗಳಲ್ಲವೆಂದು ಸಾಕಷ್ಟು ಜನರ ಸಹಿ ಮಾಡಿದರು. ಕೆಲವು ಹಳ್ಳಿಗಳಲ್ಲಿ ಮತ ಹಾಕದೆ ಖಾಲಿ ಡಬ್ಬಿಗಳನ್ನು ಮರಳಿಸಲಾಯಿತು.

ಬಾಗಲಕೋಟದಲ್ಲಿ ನಡೆದ ಚುನಾವಣೆ ಬಹಿಷ್ಕಾರ ಕುರಿತಂತೆ ಸಂಯುಕ್ತ ಕರ್ನಾಟಕವು ವರದಿ ಮಾಡಿದೆ '೧೦-೦೯-೧೯೩೦ರಂದು ಚುನಾವಣೆ ಬಹಿಷ್ಕರಿಸಲು ಬಾಗಲಕೋಟದಲ್ಲಿ ಪಿಕೆಟಿಂಗ್ ನಡೆಯಿತು. ನಗರದಲ್ಲಿ ೧೪೪ ಕಲಂ ಜಾರಿಯಲ್ಲಿದ್ದರೂ ಕೂಡಾ ಸಾಕಷ್ಟು ಪುರುಷರು ಮತ್ತು ಮಹಿಳೆಯರು ನೆರೆದಿದ್ದರು. ವೆಂಕಟಪೇಟೆಯ ಮತದಾನ ಕೇಂದ್ರದಲ್ಲಿ ಪುರುಷರು, ಮಹಿಳೆಯರು, ಮಕ್ಕಳು ಪಿಕೆಟಿಂಗ್ ಮಾಡುವಾಗ ಪೊಲೀಸರು ಹಲವರನ್ನು ಬಂಧಿಸಿದರು. ೧೩೦ ಜನರನ್ನು ಬೇರೆಕಡೆಗೆ ಕರೆದೊಯ್ದು ನಂತರ ಬಿಡುಗಡೆಗೊಳಿಸಿದರು. ಉಳಿದವರನ್ನು ಸ್ವರಾಜ್ಯ ಆಶ್ರಮದಲ್ಲಿಟ್ಟರು. ಕೆಲವು ಮಹಿಳೆಯರು ತಮ್ಮ ಚಿಕ್ಕ ಮಕ್ಕಳ ಜೊತೆಯಲ್ಲಿ ಬಂಧನಕ್ಕೆ ಒಳಗಾದರು. ಜಯರಾವ್ ನರಗುಂದ ಕೃಷ್ಣ ಪದಕಿ, ಮುರುಗಯ್ಯ ಜಂಗಿನ, ಶೀನಪ್ಪ ನೀರಲಕೇರಿ ಮುಂತಾದ ಪ್ರಮುಖ ನಾಯಕರ ಮನೆಯ ಸ್ತ್ರೀ ಪುರುಷರು ಜೈಲು ಸೇರಿದರು. ಚುನಾವಣೆ ಮುಗಿದ ಬಳಿಕ ನಗರದ ಜನರು ಪೊಲೀಸ ಠಾಣೆಯ ಮುಂದೆ ಬಂಧಿತರನ್ನು ಬಿಡುಗಡೆಗೊಳಿಸುವಂತೆ ಧರಣಿ ಆರಂಭಿಸಿದರು. ಜನರ ಒತ್ತಾಯಕ್ಕೆ ಮಣಿದು ರಾತ್ರಿ ೯ ಗಂಟೆಗೆ ಎಲ್ಲ ಬಂಧಿತರನ್ನು ಬಿಡುಗಡೆಗೊಳಿಸಲಾಯಿತು. ನಂತರ ಸುಮಾರು ನಾಲ್ಕು ಐದು ಸಾವಿರ ಜನ ಸೇರಿ ಸಾರ್ವಜನಿಕ ಸಭೆ ನಡೆಸಿದರು. ಮುರಗಯ್ಯ ಜಂಗಿನ ಕಣಬೂರು, ಕಿರಸೂರ ಮುಂತಾದವರು ಮಾತನಾಡಿದರು.

"ಗುಳೇದಗುಡ್ಡದಲ್ಲಿ ಚುನಾವಣೆ ಬಹಿಷ್ಕಾರ ಕಾರ್ಯ ಆರಂಭಗೊಂಡಿತು. ಸ್ವಯಂ ಸೇವಕರು ಮತದಾನ ಮಾಡಲು ಬಂದ ಜನರಿಗೆ ಮತ ಹಾಕದಿರಲು ವಿನಂತಿಸಿಕೊಳ್ಳುತ್ತಿದ್ದರು. ಸ್ವಯಂ ಸೇವಕರ ಮಾತಿಗೆ ಬೆಲೆ ನೀಡದಿದ್ದರೆ ಅವರ ಕಾಲುಗಳಿಗೆ ಅಡ್ಡ ಬೀಳುತ್ತಿದ್ದರು. ಹೀಗಾಗಿ ಮತ ಪೆಟ್ಟಿಗೆಯಲ್ಲಿ ಒಂದೆ ಒಂದು ಮತ ಬೀಳದಂತೆ ನೋಡಿಕೊಂಡಿದ್ದರಿಂದ ಅಂದಿನ ಸರಕಾರವು ಬರಿದಾಗಿದ್ದ ಮತಪೆಟ್ಟಿಗೆಗಳನ್ನ ತೆಗೆದುಕೊಂಡು ಹೋಗಬೇಕಾಯಿತು. ಇದರಿಂದ ಗುಳೇದಗುಡ್ಡವು ಎರಡನೆ ಬಾರ್ಡೋಲಿ ಎಂಬ ಖ್ಯಾತಿಯನ್ನು ಪಡೆಯಿತು."[೩೪]

೭.೭ ಧ್ವಜಾರೋಹಣ

ಬ್ರಿಟಿಷ ಸರಕಾರವು ಸರಕಾರಿ ಕಛೇರಿ ಮೇಲೆ ಧ್ವಜಾರೋಹಣ ಮಾಡಕೂಡದೆಂದು ಕಾಯ್ದೆ ಹೊರಡಿಸಿದಾಗ ಅದನ್ನು ವಿರೋಧಿಸಿ ಜಿಲ್ಲೆಯ ಜನರು ಹಲವಾರು ಕಡೆ ಧ್ವಜಾರೋಹಣ ಮಾಡಿದರು.

೧. ಬಾಗಲಕೋಟ ನಗರಸಭೆ ಮೇಲೆ ಧ್ವಜಾರೋಹಣ

"ಬಾಗಲಕೋಟದ ನಗರ ಸಭೆಯ ಮೇಲೆ ರಾಷ್ಟ್ರಧ್ವಜ ಹಾರಿಸುವಂತೆ ಒತ್ತಾಯಿಸಲು ನಾಗರಿಕರು ಮೆರವಣಿಗೆಯೊಂದಿಗೆ ನಗರದ ಪ್ರಮುಖ ಓಣಿಗಳಾದ ಹೊಸಪೇಟೆ, ಹಳೆಪೇಟೆ ಮತ್ತು ಜೈನಪೇಟೆಗಳಲ್ಲಿ ಸಂಚರಿಸಿ ಸಂಜೆ ೬ ಗಂಟೆಗೆ ನಗರಸಭೆ ತಲುಪಿದರು. ಮೆರವಣಿಗೆ ಬರುವದಕ್ಕಿಂತ ಪೂರ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ನಗರಸಭೆಯ ಮೇಲೆ ರಾಷ್ಟ್ರಧ್ವಜ ಏರಿಸಬೇಕೆಂದು ಒತ್ತಾಯಿಸಿದಾಗ ನಗರಸಭೆಯ ಸದಸ್ಯರಾದ ಜಂಗಿನ ಮುರಗಯ್ಯನವರು ದೊರೆ ಜಾರ್ಜನ ಜನ್ಮದಿನದ ನಿಮಿತ್ಯವಾಗಿ ನಗರಸಭೆಯ ಸಭೆ ರದ್ದುಗೊಂಡಿದ್ದು ಮುಂದಿನ ಸಭೆಯಲ್ಲಿ ರಾಷ್ಟ್ರಧ್ವಜ ಹಾರಿಸುವ ಬಗ್ಗೆ ಚರ್ಚಿಸಲಾಗುವದೆಂದು ಹೇಳಿ ಕಳುಹಿಸಿದರು."[೩೫] ನಗರಸಭೆ-ಪುರಸಭೆಗಳ ಮೇಲೆ ಧ್ವಜಾರೋಹಣ ಮಾಡುವ ಕಾರ್ಯವು ಬಾಗಲಕೋಟೆಯಲ್ಲಿ ೧೯೩೦ ಜೂನ್ ೩ರಂದು ಆರಂಭವಾಯಿತು. ಸ್ವಾತಂತ್ರ್ಯ ಚಳವಳಿಗಾರರು ರಾತ್ರಿ ಧ್ವಜವನ್ನು ಏರಿಸುತ್ತಿದ್ದರು ಮರುದಿನ ಅಧಿಕಾರಿಗಳು ಅದನ್ನು ಕಿತ್ತೊಗೆಯುತ್ತಿದ್ದರು. ಅದರಂತೆ ಅಗಸ್ಟ ೧೧ನೇ ತಾರೀಖು ರಾಷ್ಟ್ರಧ್ವಜ ಸತ್ಯಾಗ್ರಹ ಮಂಡಳಿಯವರಿಂದ ನಗರಸಭೆ ಕಟ್ಟಡದ ಮೇಲೆ ಹಾರಿಸಿದ್ದನ್ನು ಕಿತ್ತೊಗೆದು ರಾಷ್ಟ್ರದ್ರೋಹ ಎಸಗಿದರು. ಅದನ್ನು ಕಿತ್ತೊಗೆದವರು ಯಾರೇ ಇದ್ದರು ಅದರ ಹೊಣೆಗಾರಿಕೆ ನಗರಸಭಾ ಅಧ್ಯಕ್ಷರು ಹಾಗೂ ನಗರಸಭೆಯ ಸಭಾಸದಸ್ಯರ ಮೇಲೆ ಇರುವದು. ಏಕೆಂದರೆ, ಮತದಾರರೆಲ್ಲರೂ ಕೂಡಿಕೊಂಡು ಅದನ್ನು ರಕ್ಷಿಸಲು ಅವರ ಕಡೆಗೆ ಒಪ್ಪಿಸಿದ್ದರು. ನಗರಸಭೆಯ ಸಭಾಸದರು ಈ ವಿಷಯದಲ್ಲಿ ತಮ್ಮ ಸ್ವಾಭಿಮಾನವನ್ನು ಕಾಯ್ದುಕೊಳ್ಳುವರು ಇಲ್ಲವೆ ಅದಕ್ಕೆ ತಿಲಾಂಜಲಿ ಕೊಟ್ಟು ಸುಮ್ಮನೆ ಕುಳಿತುಕೊಳ್ಳುವರು ಎಂದು ಕನ್ನಡಿಗ ಪತ್ರಿಕೆ ಟೀಕಿಸಿದೆ. ನಂತರ ಅಗಸ್ಟ ೩೦ನೇ ತಾರೀಖಿನಂದು ಬಹಿರಂಗವಾಗಿ ನಗರಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಲಾಯಿತು.

೨. ವಿಜಾಪುರ ನಗರ ಸಭೆಯ ಮೇಲೆ ಧ್ವಜಾರೋಹಣ

"ವಿಜಾಪುರದ ಮುನಿಸಿಪಲ್ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜ ಹಾರಿಸುವ ಯತ್ನಗಳು ನಡೆದವು. ೧೯೩೦ರ ಜುಲೈ ೨೬ ರಂದು ಅಗಸ್ಟ ೧೬ ಮತ್ತು ಸಪ್ಟೆಂಬರ್ ೩ ರಂದು ರಾಷ್ಟ್ರಧ್ವಜ ಹಾರಿಸಲಾಯಿತು. ಸುಮಾರು ೩೦೦ ಮಹಿಳೆಯರು ಸಹಿ ಮಾಡಿದ ಮನವಿಯನ್ನು ಮುನಿಸಿಪಾಲಟಿಗೆ ಸಾದರಪಡಿಸಿದರು. ಅಗಸ್ಟ ೧೬ ರಂದು ಚಳವಳಿಗಾರರು ಪಾದಯಾತ್ರೆ ಹೊರಟು ಮುನಿಸಿಪಲ್ ಕಟ್ಟಡದ ಮೇಲೆ ಧ್ವಜ ಹಾರಿಸಲು ಪ್ರಯತ್ನಿಸಿದರು. ನಗರವಾಸಿಗಳ ಸಹಿ ಸಂಗ್ರಹವನ್ನು ಮಾಡಲಾಯಿತು. ಸೆಪ್ಟೆಂಬರ್ ೩ ರಂದು ಸೂರ್ಯೋದಯದ ಹೊತ್ತಿಗೆ ವಿಜಾಪೂರ ಮುನಿಸಿಪಾಲಟಿ ಮೇಲೆ ರಾಷ್ಟ್ರೀಯ ಧ್ವಜ ಹಾರಿಸಿದರು."[೫೬]

೩. ಗುಳೇದಗುಡ್ಡದ ನಗರ ಸಭೆಯ ಮೇಲೆ ಧ್ವಜಾರೋಹಣ

"ಬದಾಮಿ ತಾಲೂಕಿನ ಗುಳೇದಗುಡ್ಡ ಪುರಸಭೆಯ ಮೇಲೆ ೦೨-೧೦-೧೯೩೦ರಂದು ರಾಷ್ಟ್ರೀಯ ಧ್ವಜವನ್ನು ಹಾರಿಸಲಾಯಿತು. ಆಗಿನ ಕಾಲದಲ್ಲಿ ನಗರಸಭೆ, ಜಿಲ್ಲಾ ಲೋಕಲ್ ಬೋರ್ಡ, ಮುಂತಾದ ಸಾರ್ವಜನಿಕ ಸ್ಥಳಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬಾರದೆಂದು ಬ್ರಿಟಿಷ ಸರಕಾರ ನಿರ್ಬಂಧ ಹೇರಿತ್ತು. ಈ ನಿರ್ಬಂಧವನ್ನು ಮುರಿದು ಓರ್ವ ಮುಸ್ಲಿಂ ಮಹಿಳೆ ಫಕೀರವ್ವ ಹಂಪಿಹೊಳಿ ಧೈರ್ಯ ಉತ್ಸಾಹದಿಂದ ತನ್ನ ಸೀರೆಗೆ ಕಚ್ಚೆ ಹಾಕಿಕೊಂಡು ಪೊಲೀಸರ ಕಾವಲಿನಲ್ಲಿಯೆ ನಗರಸಭೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿದಳು."[೫೭]

ಕಾಂಗ್ರೆಸ ಸ್ವಯಂ ಸೇವಕರು ೦೨-೧೦-೧೯೩೦ರಂದು ಹಾರಿಸಿರುವ ರಾಷ್ಟ್ರೀಯ ಧ್ವಜವನ್ನು ತೆಗೆದು ಹಾಕುವ ಗೊತ್ತುವಳಿಯನ್ನು ೦೬-೧೦-೧೯೩೦ರಂದು ಮುನಿಸಿಪಾಲಿಟಿ ಅನುಮೋದಿಸಿ ಅದನ್ನು ತೆಗೆದು ಹಾಕಿತು. ಮರುದಿನ ೦೭-೧೦-೧೯೩೦ರಂದು ಕಾಂಗ್ರೆಸ ಹೋರಾಟಗಾರರು ಮತ್ತು ಇತರರು ಮತ್ತೊಂದು ಧ್ವಜವನ್ನು ಮುನಿಸಿಪಾಲಿಟಿ ಕಛೇರಿಯ ವಠಾರದಲ್ಲಿ ಹಾರಿಸಿದರು. ಇದಕ್ಕೆ ೨೦೦೦ ಜನರು ಕೂಡಿದ್ದರು."[೫೮]

ಗುಳೇದಗುಡ್ಡದ ಮುನಿಸಿಪಾಲಿಟಿ ಕಟ್ಟಡದ ಮುಂದೆ ನಿಯಮಿತ ಫ್ಲ್ಯಾಗ್ ಸ್ಟಾಫ್ ವಿನಿಯೋಗಿಸಲಾಯಿತು. ಗುಳೇದಗುಡ್ಡದ ಧ್ವಜಾರೋಹಣ ತಡೆಗಟ್ಟಲು ಸರಕಾರ ಹರ ಸಹಾಸ ಪಡಬೇಕಾಯಿತು. ಕೇವಲ ವಿಜಾಪೂರ ಜಿಲ್ಲೆಯಲ್ಲಿ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸದೆ ಸೊಲ್ಲಾಪೂರದಲ್ಲಿ ನಡೆದ ರಾಷ್ಟ್ರಧ್ವಜ ಸತ್ಯಾಗ್ರಹದಲ್ಲಿ ಬಾಗಲಕೋಟೆಯ ಗದ್ದನಕೇರಿ, ಹುಂಡೇಕಾರ ಬೀರಪ್ಪ ಮತ್ತು ಲಕ್ಷ್ಮಣ ಗುಳವಾಡಿಯವರು ಭಾಗವಹಿಸಿದ್ದು ಹೆಮ್ಮೆಯ ವಿಷಯವಾಗಿದೆ.

೪. ಹುನುಗುಂದ ಸಹಕಾರಿ ಸಂಘದ ಮೇಲೆ ಧ್ವಜಾರೋಹಣ

"೦೬-೦೭-೧೯೩೦ ರಂದು ರಾಷ್ಟ್ರಧ್ವಜದ ಮೆರವಣಿಗೆ ಹುನಗುಂದದ ತುಂಬೆಲ್ಲ ನಡೆಯಿತು. ರಾಷ್ಟ್ರಧ್ವಜ ಸಹಕಾರಿ ಸಂಘಕ್ಕೆ ಬರುವದರಲ್ಲಿಯೇ ಸಾಕಷ್ಟು ಜನ ಸ್ತ್ರೀ ಪುರುಷರು ಜಮಾಯಿಸಿದ್ದರು. ಧ್ವಜ ತಲುಪಿದ ನಂತರ ರಾಷ್ಟ್ರಗೀತೆ ಹಾಡಲಾಯಿತು. ಹಣಮಂತಾಚಾರ್ಯ ಜೋಶಿ ಮತ್ತು ರಾಘವೇಂದ್ರರಾವ ದೇಸಾಯಿಯವರು ಪರದೇಶಿ ಬಟ್ಟೆಗಳ ಬಹಿಷ್ಕಾರ ಮತ್ತು ಪಾನನಿಷೇಧ ಕುರಿತು ಮಾತನಾಡಿದ ನಂತರ ದೇಸಾಯಿ ರಾಘವೇಂದ್ರರಾಯರ ಹಸ್ತದಿಂದ ರಾಷ್ಟ್ರಧ್ವಜ ಕಟ್ಟಡದ ಮೇಲೆ ಏರಿಸಲ್ಪಟ್ಟಿತು."[೫೯]

೨.೮ ಅರಣ್ಯ ಸತ್ಯಾಗ್ರಹ

ಸರಕಾರಿ ಅರಣ್ಯಗಳನ್ನು ಗುರುತಿಸುವ ೧೮೬೮ರ ಕಾನೂನು ಮತ್ತು ೧೮೭೮ರ ಭಾರತೀಯ ಅರಣ್ಯ ಕಾನೂನುಗಳ ಕಾಯ್ದಿಟ್ಟ ಅರಣ್ಯಗಳಿಗೆ ಜನ ಸಾಮಾನ್ಯರು ಪ್ರವೇಶಿಸುವಂತಿರಲಿಲ್ಲ. ಆದರೆ ರಕ್ಷಿತ ಅರಣ್ಯದಲ್ಲಿ ಕೆಲ ಸವಲತ್ತುಗಳನ್ನು ಜನ ಸಾಮಾನ್ಯರಿಗೆ ನೀಡಲಾಗುತ್ತಿತ್ತು. ಬಾಂಬೆ ಸರಕಾರವು ಅರಣ್ಯ ರಕ್ಷಣೆಗಾಗಿ ಹುಲ್ಲು ಬನ್ನಿ ಕರ ಎಂಬ ತೆರಿಗೆಯನ್ನು ವಿಧಿಸಿತು. ಈ ಕಾಯ್ದೆ ಮೂಲಕ ಜನರು ಅರಣ್ಯಗಳಲ್ಲಿ ತಮ್ಮ ದನಕರಗಳನ್ನು ಮೇಯಿಸಿದರೂ ಕರವನ್ನು ಕೊಡಬೇಕಾಯಿತು. ಹುಲ್ಲುಬನ್ನಿ ಕರವನ್ನು ಕೊಡುವದು ಹಾಗೂ ಅರಣ್ಯಗಳಿಗೆ ಪ್ರವೇಶ ನಿಷೇಧಿಸಿರುವದನ್ನು ಖಂಡಿಸಿ ಅರಣ್ಯ ಸತ್ಯಾಗ್ರಹ ಆರಂಭಗೊಂಡಿತು. ಗಲಗಲಿಯ ಜನರು ತಮ್ಮ ಧನಕರಗಳನ್ನು ಅರಣ್ಯಕ್ಕೆ ಮೇಯಿಸಲು ಬಿಟ್ಟು ಯಾವುದೆ ತೆರಿಗೆಯನ್ನು ನೀಡದೆ ಸರಕಾರದ ಕಾಯ್ದೆಯನ್ನು ಮುರಿದರು. ಬದಾಮಿ ತಾಲೂಕಿನ ಕೆರೂರದಲ್ಲಿ ಸ್ವಯಂ ಸೇವಕರು ಗಂಧದ ಮರಗಳನ್ನು ಕಡಿದು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರು.

೨೧-೦೩-೧೯೩೧ರಂದು ಗಲಗಲಿಯಲ್ಲಿ ೩೦೦ ಸ್ವಯಂ ಸೇವಕರು ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಸರಕಾರ ಅರಣ್ಯದ ಮೇಲೆ ತೆರಿಗೆ ಹಾಕುತ್ತಿರುವದು ಅನ್ಯಾಯದ ಕ್ರಮವಾಗಿದೆ. ದನಗಳನ್ನು ಮೇಯಿಸಿದ್ದಕ್ಕಾಗಿ ಏಕೆ ತೆರಿಗೆ ನೀಡಬೇಕು, ತಾವೆಲ್ಲರು ಹುಲ್ಲುಬನ್ನಿ ತೆರಿಗೆ ಹಾಗೂ ಚಹಾ ಕುಡಿಯಬಾರದೆಂದು ನಿರ್ಧರಿಸಿದರು. "ಶಿರೂರ, ಗುಳೇದಗುಡ್ಡ, ಕೆರೂರಗಳಲ್ಲಿ ಶ್ರೀನಿವಾಸ ಮಂಗಳವೇಡೆಯವರ ನೇತೃತ್ವದಲ್ಲಿ ಅರಣ್ಯ ಸತ್ಯಾಗ್ರಹವು ನಡೆಯಿತು. ಬಾಗಲಕೋಟೆಯ ಸಮೀಪ ಮಲ್ಲಾಪೂರದಲ್ಲಿ ಪ್ರತಿದಿನ ಊರಿನ ಜನರು ತಮ್ಮ ದನಕರಗಳನ್ನು ಅರಣ್ಯ ಪ್ರದೇಶದಲ್ಲಿ ಮೇಯಿಸಿ ಕಾನೂನು ಭಂಗಗೊಳಿಸಿದರು."[೬೦]

೧೯೩೧ರಲ್ಲಿ ವಿಜಾಪೂರ ಜಿಲ್ಲೆಯ ಪಟ್ಟಣ ಹಾಗೂ ಗ್ರಾಮಗಳಲ್ಲಿ ಚಳವಳಿ ತೀವ್ರಗೊಂಡಿತು ಬದಾಮಿ, ಗುಳೇದಗುಡ್ಡ, ಕೇದಗಿ ಮುಂತಾದ ಕಡೆಯಲ್ಲಿ ನಡೆಯಿತು. ನಾಗಠಾಣದ ಕೇದಗಿ ಎಂಬಲ್ಲಿ

ಸುಮಾರು ೧೫ ದಿನಗಳ ಕಾಲ ಸೇರೆ ಸೇಂಧಿ ಗಿಡಗಳನ್ನು ಕಡಿಯುವ ಚಳವಳಿ ನಡೆಯಿತು. ನಾಗತಾಣದ ವಾಸಿಯಾದ ಹನುಮಂತಪ್ಪ ಮತ್ತಿತರರು ಸತ್ಯಾಗ್ರಹಿಗಳಿಗೆ ಊಟದ ವ್ಯವಸ್ಥೆ ಮಾಡಿದರು.

೭.೯ ಸ್ವದೇಶಿ ಪ್ರಚಾರ

ಸ್ವದೇಶಿ ಎಂದರೆ ನಮ್ಮ ದೇಶದ್ದು ಅಥವಾ ಸ್ವಂತ ದೇಶದ್ದು ಎಂದರ್ಥ, ಸ್ಥಳೀಯವಾಗಿ ಉತ್ಪಾದನೆಗೊಂಡ ವಸ್ತುಗಳ ಉಪಯೋಗ ಮಾಡುವದರಿಂದ ದೇಶಕ್ಕೆ ಆದಾಯ ಅಧಿಕಗೊಳ್ಳುವದು ಎಂಬ ತತ್ವದ ಆಧಾರದ ಮೇಲೆ ಸ್ವದೇಶಿ ಚಳವಳಿ ಆರಂಭಗೊಂಡಿತು. ಸ್ವದೇಶಿ ಚಳವಳಿಯ ಅಂಗವಾಗಿ ವಿದೇಶಿ ಬಟ್ಟೆಗಳನ್ನು ದಹನ ಮಾಡುವ ಕಾರ್ಯ ಬಹು ಜೋರಾಗಿ ನಡೆಯಿತು. ಹಾಗೂ ಸ್ವದೇಶಿ ವಸ್ತುಗಳನ್ನು ಉಪಯೋಗಿಸಲು ಪ್ರೋತ್ಸಾಹಿಸಿ ದೇಶದ ಆರ್ಥಿಕ ಹಿತ ಕಾಪಾಡಲು ಸತ್ಯಾಗ್ರಹಿಗಳು ಮುಂದಾದರು.

ಸ್ವದೇಶಿ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ಮೂಲಕ ರಾಷ್ಟ್ರ ಪ್ರೇಮ ಬೆಳೆಸುವದು ರಾಷ್ಟ್ರೀಯ ಚಳವಳಿಯ ಒಂದು ಅಂಗವಾಗಿತ್ತು. ಅದರಂತೆ ದೇಶದಲ್ಲಿ ಸ್ವದೇಶಿ ಮತ್ತು ಬಹಿಷ್ಕಾರ ಗಾಳಿ ಬಿಸುತ್ತಿರುವದರಿಂದ ಜನರ ಒಲವು ಸ್ವದೇಶಿ ವಸ್ತುಗಳ ಕಡೆಗೆ ಹೊರಳಿತು. ಅಷ್ಟೆ ಆದರೆ ನಿಜವಾದ ಸ್ವದೇಶಿ ವಸ್ತು ಯಾವುದು ಎಂಬುವದು ತಿಳಿಯುವದು ಸಾಮಾನ್ಯ ಜನರಿಗೆ ದುಸ್ಥರದ ಮಾತು. ಇದಲ್ಲದೆ ಬೇಳೆ ಬೇಯಿಸಿಕೊಳ್ಳಲು ಇದೇ ಸಮಯವೆಂದು ಕೆಲ ವರ್ತಕರು ವಿದೇಶಿ ಸಾಮಾನುಗಳಿಗೆ ಸ್ವದೇಶಿ ಎಂದು ಸುಳ್ಳು ಹೇಳಿ ಠಕ್ಕಿಸುತ್ತಿದ್ದರು. ಇದನ್ನು ತಡೆಯಲು ಗಿರಾಕಿಗಳಿಗೆ ಸ್ವದೇಶಿ ವಸ್ತುಗಳು ಸುಲಭವಾಗಿ ದೊರೆಯುವಂತೆ ಅಲ್ಲಲ್ಲಿ ಸ್ವದೇಶಿ ಅಂಗಡಿಗಳನ್ನು ತೆರೆಯಲಾಯಿತು. ದೇಶ ಪ್ರೇಮ ಹೊಂದಿರುವವರು ಈ ಉದ್ಯಮದಲ್ಲಿ ಮುಂದುವರೆದಿದ್ದರಿಂದ ಆ ಅಂಗಡಿಗಳಿಗೆ ಜನರ ಮನ್ನಣೆಯು ಹೆಚ್ಚಿತು. ಅಂಥದೆ ಒಂದು ಅಂಗಡಿಯನ್ನು ಬಾಗಲಕೋಟದಲ್ಲಿ ಪ್ರಾರಂಭಿಸಲು ಯೋಚಿಸಲಾಗಿತ್ತು. ಅದು ಊರ ಜನರ ವಿಶ್ವಾಸ ಪಡೆಯಬೇಕಾದರೆ ಒಬ್ಬಿಬ್ಬರ ಒಡೆತನದಲ್ಲಿರಬಾರದೆಂದು ನಿರ್ಧರಿಸಿ ಷೇರ್ ಪದ್ಧತಿಯ ಮೇಲೆ ತೆರೆಯಲು ನಿರ್ಧರಿಸಲಾಯಿತು. ಇದರಿಂದ ಊರೊಳಗಿರುವ ದೇಶಪ್ರೇಮಿಗಳೆಲ್ಲರು ಇದರಲ್ಲಿ ಭಾಗವಹಿಸಲು ಆಸ್ಪದ ದೊರೆಯಿತು. "ಸ್ವದೇಶಿ ಸ್ಟೋರ್ ಸೋಮವಾರ ಮಾಘ ಶುದ್ಧ ೧ ತಾರೀಖು ೧೯-೦೧-೧೯೩೧ ರಂದು ಮುಂಜಾನೆ ೧೦ಗಂಟೆಗೆ ಪೋಸ್ಟ್ ಆಫೀಸ್ ಹತ್ತಿರವಿರುವ ಅಂಗಡಿಯಲ್ಲಿ ಉದ್ಘಾಟನೆಗೊಂಡಿತು. ಷೇರ್ಸ್ ಕೊಳ್ಳತಕ್ಕವರು ಪರ್ವತಿ ವೆಂಕುಬಾಯಿವರಿಗೆ (ಯೂನಿಯನ್ ಬ್ಯಾಂಕ್) ಸಮಕ್ಷಮ ಭೇಟಿಯಾಗಬೇಕು ಎಂದು ಜೋರಾಪೂರ ಕೃಷ್ಣರಾಯರು ಪ್ರಕಟಿಸಿದರು."[೬೧]

"ಬಾಗಲಕೋಟದಲ್ಲಿ ಪರದೇಶಿ ಬಟ್ಟೆಗಳ ಬಹಿಷ್ಕಾರ ಮಾಡಲು ಸ್ವಯಂ ಸೇವಕರ ಮೆರವಣಿಗೆ ಹೊರಟಿತು. ಇದರಲ್ಲಿ ಲಕ್ಷ್ಮೀಬಾಯಿ ಪದಕಿ, ಯಮುನಾಬಾಯಿ ಕಣಬೂರ, ಅಂಬಾಬಾಯಿ ಕಾಥೋಜಿ, ಯಂಕೂಬಾಯಿ ಪರ್ವತಿ, ಚಂಪಾಬಾಯಿ ಮುಂತಾದ ಮಹಿಳೆಯರು ಭಾಗವಹಿಸಿದ್ದರು. ಹೊಸಪೇಟೆ,

ಹಳೆಪೇಟೆ, ಜೈನಪೇಟೆ, ಕಿಲ್ಲೆ ಮುಂತಾದ ಓಣಿಗಳಲ್ಲಿ ಮೆರವಣಿಗೆ ಹಾಯ್ದು ಬಂದಿತು. ಊರಿನ ಜನರು ಇವರಿಗೆ ಪರದೇಶಿ ಬಟ್ಟೆಗಳನ್ನು ಸಂಪೂರ್ಣ ಬಹಿಷ್ಕರಿಸುವುದಾಗಿ ವಚನವಿತ್ತರು"[೬೨] ವಿಜಾಪೂರ ಹಾಗೂ ಇಂಡಿಯ ಜವಳಿ ವ್ಯಾಪಾರಿಗಳು ಇನ್ನು ಮುಂದೆ ಪರದೇಶಿ ಹಾಗೂ ಬಹಿಷ್ಕೃತ ಗಿರಣಿಗಳಲ್ಲಿ ತಯಾರಾದ ಬಟ್ಟೆಯನ್ನು ತರಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿದರು.

"ಬಾಗಲಕೋಟದ ಡಾಕ್ಟರಗಳು ಸಭೆ ಸೇರಿ ಕೆಲವು ತೀರ್ಮಾನ ಕೈಗೊಂಡರು.

೧. ಬಾಗಲಕೋಟ ಡಾಕ್ಟರ್‌ಗಳು ಬ್ರಿಟಿಷ ಕೌನ್ಸಿಲ್‌ನ ನಿರ್ಣಗಳನ್ನು ತೀವ್ರವಾಗಿ ನಿಷೇಧಿಸಿರುತ್ತೇವೆ.

೨. ಬ್ರಿಟಿಷ ಔಷಧಿಗಳನ್ನು ಕೊಡಬಾರದು

೩. ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ಸ್ವದೇಶಿ ಖಾದಿ ಬಟ್ಟೆಗಳನ್ನು ಉಪಯೋಗಿಸಬೇಕೆಂದು ಖಾದಿಗೆ ವಿಶೇಷ ಮಹತ್ವ ನೀಡಬೇಕೆಂದು ನಿರ್ಣಯಿಸಿದರು."[೬೩]

ಇಲಕಲ್ಲ ಮಹಾಂತೇಶ ಶಾಲೆಯ ಶಿಕ್ಷಕರಾದ ಗುರುಪಾದಪ್ಪ ಸಜ್ಜನ ಅವರು ಕನ್ನಡಿಗ ಪತ್ರಿಕೆಯಲ್ಲಿ ಬಸವ ಜಯಂತಿ ಆಚರಿಸಿ ಸ್ವದೇಶಿ ಆಂದೋಲನ ಮಾಡಬೇಕೆಂದು ಲೇಖನ ಬರೆದರು. "ಶ್ರೀ ಬಸವಜಯಂತಿ ವೈಶಾಖ ಶುದ್ಧ ೩ ಗುರುವಾರ ದಿವಸ ವೀರಶೈವರೆಲ್ಲರು ದೇಶೋದ್ಧಾರಕ್ಕಾಗಿ ಆಚರಿಸಬೇಕು. ಇಂದು ಮಹಾತ್ಮಗಾಂಧಿಯವರು ಯಾವ ಸತ್ಯಾಗ್ರಹವನ್ನು ಕೈಗೊಂಡಿರುವರೋ ಅದೇ ಸತ್ಯಾಗ್ರಹ ವ್ರತದಿಂದ ಬಸವೇಶ್ವರರು ಸುಮಾರು ಎಂಟುನೂರು ವರ್ಷಗಳ ಪೂರ್ವದಲ್ಲಿ ಅಖಿಲ ಕರ್ನಾಟಕವನ್ನೆ ಉದ್ಧಾರ ಮಾಡಿದರು. ಅವರ ಸ್ವದೇಶಿ ವ್ರತವು ಅಸಾಧಾರಣವಾದದ್ದು. ಪ್ರತಿಯೊಂದು ಸಮಾಜವು ಸ್ವಯಂ ಪೂರ್ಣವಾಗಿರಬೇಕೆಂದು ಅವರ ತತ್ವ, ಇದೇ ಉದ್ದೇಶದಿಂದಲೇ 'ಕಾಯಕವೇ ಕೈಲಾಸ' ಎಂದು ಹೇಳಿ ಬೇರೆ ಬೇರೆ ಉದ್ಯೋಗ ಮಾಡುವರಲ್ಲಿ ಉಚ್ಚ ನೀಚ ಎಂಬ ಭೇದಗಳನ್ನು ತೆಗೆದು ಹಾಕಿದರು, ಅಂತೆಯೇ ವೀರಶೈವರೆಲ್ಲರು ಪ್ರತಿಯೊಂದು ಉದ್ಯೋಗವನ್ನು ಮಾಡುವರು. ಈ ಸಮಾಜವು ಸ್ವಯಂ ಪರಿಪೂರ್ಣವಾಗಿರುವದು. ಇದೇ ತತ್ವವನ್ನು ಬ್ರಾಹ್ಮಣ, ಜೈನ, ಮುಸಲ್ಮಾನ ಮುಂತಾದ ಸಮಾಜದವರು ಅನುಕರಣೆ ಮಾಡಬೇಕು. ಶ್ರೀ ಬಸವ ಜಯಂತಿ ಉತ್ಸವದಲ್ಲಿ ಕರ್ನಾಟಕದ ಪ್ರತಿಯೊಂದು ಸಮಾಜದವರು ಭಾಗ ತೆಗೆದುಕೊಂಡು ಅವರು ಬೋಧಿಸುವ ಸ್ವದೇಶಿ ವ್ರತದ ಒಂದು ಭಾಗವಾಗಿ ಖಾದಿಯನ್ನೆ ಯಾವತ್ತು ಧರಿಸಬೇಕೆಂದು ನನ್ನ ವಿನಂತಿ."[೬೪] ವೀರಶೈವರಲ್ಲಿ ಈ ಲೇಖನವು ಜಾಗೃತಿಯನ್ನು ಮೂಡಿಸಿತು.

"ಗುಳೇದಗುಡ್ಡದಲ್ಲಿ ೧೩-೦೬-೧೯೩೦ರಂದು ಶಿವಬಸಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಎಂಟು ಹತ್ತು ಸಾವಿರ ಜನ ಸಭೆ ಸೇರಿದರು. ಉಮಾಬಾಯಿ ಕುಂದಾಪೂರ ಅವರು ಸ್ವದೇಶಿ ವಸ್ತುಗಳ ಕುರಿತು ಮಾತನಾಡಿದರೆ ಡಾ. ಹರ್ಡೀಕರ ಅವರು ಸದ್ಯದ ಚಳವಳಿ ಕುರಿತು ಮಾತನಾಡಿದರು.

ಗುಳೇದಗುಡ್ಡದಲ್ಲಿಯೇ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಯುತ್ತಿದ್ದು ಸಿಂಗದ ಎಂಬುವವರು ವ್ಯಾಪಾರಿಗಳನ್ನು ಭೇಟಿಯಾಗಿ ಪರದೇಶಿ ಬಟ್ಟೆಗಳನ್ನು ಮಾರಾಟ ಮಾಡಬಾರದೆಂದು ವಚನ ಪಡೆದುಕೊಂಡರು ಹಾಗೂ ನಗರಸಭೆಯ ತಮ್ಮ ಸೇವಕರಿಗೆ ಖಾದಿ ಉಡುಪುಗಳನ್ನು ತೊಡತಕ್ಕದ್ದು ಮತ್ತು ಖಾದಿಯ ಮೇಲೆ ಕರ ಹೇರತಕ್ಕದಲ್ಲವೆಂದೂ ಗೊತ್ತುವಳಿ ಮಾಡಿತು."[೬೫]

ಖಾದಿ ಪ್ರಚಾರ

ಖಾದಿಯು ಶೀಲ ಸ್ವಾತಂತ್ರ್ಯ, ಅಹಿಂಸೆ, ಅಶೋಷಣೆಯ ಕುರುಹಾಗಿದೆ. ಸ್ವರಾಜ್ಯದ ಸಲುವಾಗಿ ನೂಲಿರಿ, ಖಾದಿಯ ಮುಖಾಂತರ ಸ್ವರಾಜ್ಯದ ಸಲುವಾಗಿ ಬೇಕಾಗುವ ಗುಣಗಳನ್ನು ಆತ್ಮಸಾಕ್ಷಿ ಮಾಡಿಕೊಂಡು ಅದನ್ನು ಕೃತಿಯಲ್ಲಿ ತನ್ನಿರಿ ಎಂದು ಗಾಂಧೀಜಿಯವರು ಹೇಳಿದ್ದಾರೆ.

ಖಾದಿ ತತ್ವಗಳು

೧. ಅಹಿಂಸೆ
೨. ಸಾದಾ ಮತ್ತು ಸರಳ ಜೀವನ
೩. ಕಾಯಕ
೪. ಎಲ್ಲ ಕಾಯಕದ ಬಗ್ಗೆ ಸಮಭಾವ
೫. ಮಾನವೀಯ ಜೀವನದ ಮೌಲ್ಯ
೬. ಜೀವನ ವೇತನ
೭. ಸ್ವದೇಶಿ

ಈ ಸಪ್ತ ತತ್ವಗಳು ಮೇಲೆ ಖಾದಿಯ ಅವಿಷ್ಕೃತವಾಗಿದೆ."[೬೬]

"೦೬-೦೬-೧೯೩೦ರಂದು ಗಲಗಲಿಯ ಮುಸಲ್ಮಾನ ನಾಯಕರಾದ ಹುಸೇನಸಾಬ ಭಗವಾನ, ಅಬ್ದುಲ್ಲಾ ನಡಗಡ್ಡಿ, ಇಮಾಮಸಾಬ ಮೊಟಗಾರ ಮತ್ತು ಲಾಡ್ಲೆಸಾ ಮುಂತಾದವರು ಹುಸೇನ ಪೀರನ ಮಸೀದಿಯಲ್ಲಿ ಸಭೆ ಸೇರಿ ಖಾದಿ ಬಟ್ಟೆ ಧರಿಸುವೆವು ಹಾಗೂ ಸೆರೆಸೇಂಧಿ ಕುಡಿಯುವದನ್ನು ಬಿಡುವೆವು ಎಂದು ಅಲ್ಲಾನ ಹೆಸರಿನಲ್ಲಿ ಪ್ರಮಾಣ ಮಾಡಿದರು. "ಮುದ್ದೇಬಿಹಾಳದಲ್ಲಿ ಸಂಪೂರ್ಣವಾಗಿ ಖಾದಿ ಧರಿಸಿದವರಿಗೆ ಬೆಂಬಲಿಸಲು ಸಾರ್ವಜನಿಕ ಮೋಟಾರ ವ್ಯವಸ್ಥಾಪಕರು ಟಿಕೀಟಿನ ಅರ್ಧ ಬೆಲೆ ನಿಗದಿಪಡಿಸಿದರು."[೬೭]

ಗುಳೇದಗುಡ್ಡದಲ್ಲಿ ೧೦-೦೭-೧೯೩೦ರಂದು ರಾತ್ರಿ ೧೦ ಗಂಟೆಗೆ ಶಿವಬಸಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಗಾಂಧಿ ಚೌಕಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಗುಳೇದಗುಡ್ಡದ ನೇಕಾರರು ಖಾದಿ ಇಲ್ಲದೆ ದೇಶಿ ಗಿರಣಿಯ ನೂಲಿನಿಂದ ಬಟ್ಟೆಗಳನ್ನು ತಯಾರಿಸಿದರೆ ಅವರ

ಉದ್ಯೋಗಕ್ಕೆ ದಕ್ಕೆ ಬರುವದಿಲ್ಲವೆಂದು ಊರಲ್ಲಿ ಒಂದು ಖಾದಿ ಭಂಡಾರ ತೆರೆಯಬೇಕು ಹಾಗೂ ಎಲ್ಲ ನೇಕಾರರು ಸ್ವದೇಶಿ ಬಟ್ಟೆಗಳನ್ನೆ ತಯಾರಿಸಬೇಕೆಂದು ನಿರ್ಣಯಿಸಿದರು. "ಹುನಗುಂದ ತಾಲೂಕಿನಲ್ಲಿ ಸುಮಾರು ೫೦೦ ರಾಟಿಗಳು ಕಾರ್ಯನಿರ್ವಹಿಸುತ್ತಿದ್ದು ಪ್ರತಿವಾರ ೧೫ ತಾಗೆ ಖಾದಿಯನ್ನು ಹೊರಡಿಸುತ್ತದೆ. ಮುಂದಿನವಾರ ೨೫ ತಾಗೆ ಖಾದಿ ಹೊರಡಿಸಬೇಕೆಂದು ಅಲ್ಲಿಯ ಸಿಂಪಿಗರು ತಮ್ಮದೊಂದು ಸಂಘವನ್ನು ಮಾಡಿಕೊಂಡು ಪರದೇಶಿ ಬಟ್ಟೆಗಳನ್ನು ಹೊಲಿಯುವದಿಲ್ಲವೆಂದು ನಿರ್ಧರಿಸಿದರು."[೬೮]

ಗಾಂಧಿಜೀಯವರು ಸ್ವದೇಶಿ ವ್ರತಕ್ಕೆ ಕರೆ ನೀಡಿದಾಗ ವಿಜಾಪೂರ ಜಿಲ್ಲೆಯಲ್ಲಿ ಖಾದಿ ಪ್ರಚಾರದ ತೀವ್ರಗತಿಯಲ್ಲಿ ಸಾಗಿತು. ಈ ಪ್ರದೇಶದಲ್ಲಿ ನೆಲೆಸಿರುವ ವೀರಶೈವ ಜನಾಂಗವು ಹೆಚ್ಚಾಗಿ ವ್ಯಾಪಾರ ವೃತ್ತಿಯಲ್ಲಿ ತೊಡಗಿರುವದರಿಂದ ಅವರು ಖಾದಿ ವ್ಯಾಪಾರ ಮಾಡುವಂತೆ ಹರ್ಡೇಕರ ಮಂಜಪ್ಪನವರು ತಮ್ಮ ಲೇಖನದ ಮೂಲಕ ಒತ್ತಾಯಿಸಿದ್ದಾರೆ. "ಕರ್ನಾಟಕದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಅಧಿಕ ಖಾದಿಯ ಮಾರಾಟ ಮಾಡಲ್ಪಡುತ್ತದೆ. ಈ ದೇಶದಲ್ಲಿ ಖಾದಿ ಹಟ್ಟುವಳಿ ೭೫ ರಿಂದ ೮೦ ಸಾವಿರ ರೂಪಾಯಿಗಳಷ್ಟಿದೆ. ಈ ಪ್ರಮಾಣವು ಇನ್ನು ಹೆಚ್ಚಾಗಲಿದೆ ಆದರೆ ಈ ಅವಧಿಯಲ್ಲಿ ಕರ್ನಾಟಕದ ಎಲ್ಲ ಖಾದಿ ಕಾರ್ಯದ ಧುರೀಣರು ಕಾರಾಗೃಹವಾಸಿಗಳಾಗಿರುವದರಿಂದ ಈ ಕಾರ್ಯ ಕುಂಠಿತಗೊಳ್ಳುತ್ತಿದೆ. ಖಾದಿಯ ಉಪಯೋಗ ಹೆಚ್ಚಾದಂತೆ ಅದರ ಹುಟ್ಟುವಳಿಯು ಕಡಿಮೆಯಾಗುತ್ತ ಹೋಗುತ್ತದೆ. ಆದ್ದರಿಂದ ವೀರಶೈವರು ಮುಂದೆ ಬಂದು ಒಂದು ಸ್ವತಂತ್ರವಾದ ವೀರಶೈವ ಖಾದಿ ಭಂಡಾರವನ್ನು ದೊಡ್ಡ ಪ್ರಮಾಣದಲ್ಲಿ ಪ್ರಾರಂಭಿಸುವದು ದೇಶಕ್ಕೂ ಮತ್ತು ಸಮಾಜಕ್ಕೂ ಒಳ್ಳೆಯದು. ಖಾದಿಯ ಹುಟ್ಟುವಳಿ ಮತ್ತು ಮಾರಾಟ ಕಾರ್ಯವು ಪರಸ್ಪರ ಸಹಾಯಕ ಸಂಘಗಳ ಪದ್ಧತಿಗಳನ್ನು ಅನುಸರಿಸಿ ಕ್ರಮಬದ್ಧವಾಗಿ ನಡೆಯುವುದೇ ಕ್ಷೇಮಕರವಾದದು. ೫ ರೂಪಾಯಿಗಳಿಗೆ ಒಂದು ಭಾಗ(ಷೇರ್) ದಂತೆ ೨೦ ಸಾವಿರ ಭಾಗಗಳನ್ನು ಕೂಡಿಸಿ ಹುಟ್ಟುವಳಿಯ ಮತ್ತು ವಿಕ್ರಯ ಬೇರೆ ಬೇರೆ ಕೇಂದ್ರ ಸ್ಥಾನಗಳನ್ನು ಗೊತ್ತುಪಡಿಸಿ ಅಖಿಲ ಭಾರತೀಯ ರಾಟಿ ಸಂಘದ ಸಹಾಯ ಸಲಹೆಗಳನ್ನು ಹೊಂದಬೇಕಾಗುತ್ತದೆ. ಈ ಪವಿತ್ರವಾದ ಕಾರ್ಯದ ಸಂಬಂಧವಾಗಿ ಮಹಾನುಭಾವರಾದ ಬಸವಣ್ಣವರ ಜಯಂತಿ ದಿವಸ ತಮ್ಮಲ್ಲಿ ಸಭೆ ಸೇರಿ ಚರ್ಚಿಸಿ ಈ ವಿಷಯದಲ್ಲಿ ತಮ್ಮ ಸ್ಥಳದಿಂದಾಗಬಹುದಾದ ಸಹಾಯ ಸೌಲಭ್ಯಗಳನ್ನು ನೀಡಬೇಕು."[೬೯] ಎಂದು ತಿಳಿಸಿದರು.

ಮಂಗಳವೇಡೆ ಶ್ರೀನಿವಾಸರಾಯರು ಕೂಡಾ ವೀರಶೈವರಿಗೆ ಖಾದಿ ವ್ಯಾಪಾರದ ಬಗ್ಗೆ ಮನವಿ ಮಾಡಿಕೊಂಡಿದ್ದಾರೆ. "ವೀರಶೈವರೆಲ್ಲರು ದೊಡ್ಡ ದೊಡ್ಡ ವ್ಯಾಪಾರಿಗಳು ವ್ಯಾಪಾರದಲ್ಲಿ ಅವರು ಬಹಳ ನುರಿತವರು. ದೇಹಕ್ಕೆ ಜಿಗಳಿ ಹತ್ತಿ ರಕ್ತವನ್ನು ಹೀರುವಂತೆ ದೇಶಕ್ಕೆ ಜಿಗಳಿ ಹತ್ತಿ ಸಂಪತ್ತನ್ನು ಹೀರುತ್ತದೆ. ಈ ಜಿಗಳಿಯನ್ನು ಕಿತ್ತೊಗೆಯುವವರೆಗೆ ನಮಗೆ ಗತ್ಯಂತರವಿಲ್ಲ. ವಿದೇಶಿ ಬಟ್ಟೆಯೇ ಈ ಜಿಗುಳಿ ನಮ್ಮದೇಶದಿಂದ ೫೦-೬೦ ಕೋಟಿ ರೂಪಾಯಿಗಳನ್ನು ಪರದೇಶದವರ ಕಿಸೆಯಲ್ಲಿ ಹಾಕುತ್ತಿದ್ದೇವೆ. ಈ

ಜಿಗಳಿಯನ್ನು ಬಹಿಷ್ಕರಿಸಬೇಕಾಗಿದೆ. ಇದಕ್ಕೆ ಖಾದಿ ಬಟ್ಟೆಯಿಂದ ಮಾತ್ರ ದೇಶದ ಉದ್ಧಾರವಾಗಬಲ್ಲದು. ಕರ್ನಾಟಕದಲ್ಲಿ ನೂರಕ್ಕೆ ಅರವತ್ತು ಜನರು ವೀರಶೈವರು ಮೇಲಾಗಿ ಉದ್ಯೋಗಶೀಲರು ಅವರು ಈ ಕಾರ್ಯವನ್ನು ಕೈಗೊಂಡರೆ ಕರ್ನಾಟಕವೆಲ್ಲವೂ ಖಾದಿಯಿಂದ ಹೊಚ್ಚಿದಂತೆ ಬೆಳ್ಳಗೆ ಶೋಭಿಸುತ್ತದೆ. ವೀರಶೈವರಿಗೆ ಖಾದಿಯನ್ನು ಧರಿಸಲು ಧರ್ಮದ ಆಜ್ಞೆಯುಂಟು ತಮ್ಮ ಬಾಂಧವರನ್ನು ಉದ್ಯೋಗಕ್ಕೆ ಹಚ್ಚಿಕೊಟ್ಟಂತಾಗುತ್ತದೆ. ಹಾಗೂ ರಾಷ್ಟ್ರದ ಸಂಪತ್ತನ್ನು ಉಳಿಸಿ ರಾಷ್ಟ್ರದ ಉನ್ನತಿಯನ್ನು, ಭಾರತ ಮಾತೆಯ ಸೇವೆಯನ್ನು ಮಾಡಿದಂತಾಗುವದು. ಖಾದಿಯಿಂದ ಇಷ್ಟೆಲ್ಲ ಲಾಭಗಳಿದ್ದರೂ ಇನ್ನಾದರೂ ವಿಚಾರಮಾಡಿ ಈ ಕಾರ್ಯಮಾಡಬೇಕು. ಹಾಗೂ ವೀರಶೈವ ಸಮಾಜದ ಧರ್ಮಗುರುಗಳು ಸಮಾಜದ ಸೇವಕರೂ ಈ ಕೆಲಸಕ್ಕೆ ಟೊಂಕ ಕಟ್ಟಿ ನಿಂತರೆ ಇದು ಯಶಸ್ವಿಯಾಗುವದು. ಬಾಗಲಕೋಟ ವೀರಶೈವರಿಗೆ ಊರಲ್ಲಿ ಒಂದು ಖಾದಿ ಅಂಗಡಿಯನ್ನು ಆರಂಭಿಸಬೇಕು"[೨೦] ಎಂದು ಒತ್ತಾಯಿಸಿದರು.

೭.೧೦. ಕರ್ನಾಟಕ ರಾಜಕೀಯ ಪರಿಷತ್ತು

ಕಾನೂನು ಭಂಗ ಚಳವಳಿಯ ಸಮಯದಲ್ಲಿ ಕಾಂಗ್ರೆಸ ರಾಜಕೀಯ ಪರಿಷತ್ತು ಸಭೆಯನ್ನು ನಡೆಸಲು ನಿರ್ಧರಿಸಿತು. ಅದರಂತೆ ಮೇ ೨೬ ಮತ್ತು ೨೭, ೧೯೩೧ ರಂದು ಹುಕ್ಕೇರಿಯಲ್ಲಿ ಜಮನಾಲಾಲ ಬಜಾಜ್ ಅವರ ಅಧ್ಯಕ್ಷತೆಯಲ್ಲಿ ಆರನೆ ಕರ್ನಾಟಕ ರಾಜಕೀಯ ಪರಿಷತ್ತು ನಡೆಯಿತು. ಅದು ರಾಜಕೀಯ ವಿಷಯಗಳನ್ನು ಚರ್ಚಿಸಿ ಜನರಲ್ಲಿ ಜಾಗೃತಿಯನ್ನುಂಟು ಮಾಡಬೇಕೆಂದು ನಿರ್ಣಯಿಸಿತು.

೧. ಏಳನೆಯ ಕರ್ನಾಟಕ ರಾಜಕೀಯ ಪರಿಷತ್ತು

ಕಾನೂನು ಭಂಗ ಚಳವಳಿಯಲ್ಲಿ ಕರ ನಿರಾಕರಣೆ, ಅರಣ್ಯ ಸತ್ಯಾಗ್ರಹ, ಸಭೆ ಸಮಾರಂಭಗಳ ನಿರ್ಬಂಧಗಳಿಂದ ಕರ್ನಾಟಕದಲ್ಲಿ ೨೦೦೦ದಷ್ಟು ಜನರು ಜೈಲು ಸೇರಿದರು. ಈ ಚಳವಳಿಯನ್ನು ಸದೆಬಡಿಯಲು ಬ್ರಿಟಿಷ ಸರಕಾರವು ಕಠಿಣ ಕ್ರಮ ಕೈಗೊಂಡಿತು. ಕಾಂಗ್ರೆಸನ್ನು ಅಕ್ರಮಕೂಟವೆಂದು ಸಾರಿ ಅದರ ಪ್ರಮುಖ ನಾಯಕರನ್ನು ಬಂಧಿಸತೊಡಗಿದರು. ಕಾಂಗ್ರೆಸನ ಅಧಿವೇಶನವನ್ನು ಪ್ರತಿಬಂಧಿಸಲಾಯಿತು. ಇಂಥ ಸಮಯದಲ್ಲಿ "ಬಾಗಲಕೋಟದಲ್ಲಿ ಏಳನೆಯ ಕರ್ನಾಟಕ ಪ್ರಾಂತಿಯ ಪರಿಷತ್ತು ನಡೆಸಬೇಕೆಂದು ಕಾಂಗ್ರೆಸ ಅಧ್ಯಕ್ಷರಾದ ಕಾರ್ನಾಡ ಸದಾಶಿವರಾಯರ ನಿರ್ಧರಿಸಿದರು. ಈ ಸಭೆಯು ೧೯೩೨ ಮೇ ೨೮ ರಂದು ಜರುಗಬೇಕೆಂದು ನಿಗದಿ ಪಡಿಸಲಾಯಿತು. ಮಂಗಳವೇಡೆ ಶ್ರೀನಿವಾಸರಾವ್ ಅವರು ಸ್ವಾಗತಾಧ್ಯಕ್ಷರಾದರು. ಈ ಸಭೆಯು ಜರುಗಬಾರದೆಂದು ಪೋಲೀಸರು ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಂಡರು. ಮುಂಜಾಗ್ರತವಾಗಿ ಬಾಗಲಕೋಟ ಮತ್ತು ವಿಜಾಪೂರದ ಅನೇಕ ಕಾರ್ಯಕರ್ತರನ್ನು ಬಂಧಿಸಿದರು. ೨೮ರಂದು ಹೊರಗಿನಿಂದ ಬಾಗಲಕೋಟಗೆ ಯಾರೂ ಬರದಂತೆ ದಿಗ್ಬಂದನೆ ಹೇರಲಾಯಿತು. ಊರಲೆಲ್ಲ ಪೋಲೀಸರ ಸರ್ಪಗಾವಲಿತ್ತು. ರೈಲ್ವೆ ನಿಲ್ದಾಣ, ಬಸ್

ನಿಲ್ದಾಣಗಳಲ್ಲಿ ಬಲವಾದ ಕಾವಲಿತ್ತು, ಊರಿಗೆ ಹೊರಗಿನವರು ಬಂದ ಕೂಡಲೆ ಅವರನ್ನು ನೇರವಾಗಿ ಪೊಲೀಸ ಸ್ಟೇಷನಿಗೆ ಕರೆತರಬೇಕೆಂದು ಟಾಂಗಾ ಮತ್ತು ವಾಹನ ಚಾಲಕರಿಗೆ ತಿಳಿಸಲಾಯಿತು. ಗುಡಿ, ಮಠ, ಭೋಜನಾಲಯಗಳಲ್ಲಿನ ವ್ಯವಸ್ಥಾಪಕರಿಗೆ ಹೊಸದಾಗಿ ಬಂದವರ ಹೆಸರು ಪೊಲೀಸ ಅಧಿಕಾರಿಗಳಿಗೆ ಒಪ್ಪಿಸಬೇಕೆಂದು ಕಟ್ಟಪ್ಪಣೆಯಾಯಿತು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ, ಡಿಸ್ಟ್ರಿಕ್ಟ್ ಪೊಲೀಸ್, ಸುಪರಿಂಟೆಂಡೆಂಟ್ ಮತ್ತು ಉಳಿದ ಪೊಲೀಸ ಅಧಿಕಾರಿಗಳು ಬಾಗಲಕೋಟಯಲ್ಲಿಯೆ ತಳವೂರಿ ಪರಿಷತ್ತು ನಡೆಯಬಾರದೆಂದು ಸರ್ವ ವಿಧದ ಸಿದ್ಧತೆ ನಡೆಸಿದರು."[೨೧] "ಪರಿಷತ್ತು ಜರುಗುವ ದಿನ ೧೪೪ನೆಯ ಕಲಂನ್ನು ಜಾರಿ ಮಾಡಲಾಯಿತು. ಪರಿಷತ್ತಿನ ಅಧ್ಯಕ್ಷರೆಂದು ಆಯ್ಕೆಗೊಂಡಿದ್ದ ತಾಳಕೆರೆ ಸುಬ್ರಮಣ್ಯಂ ಅವರು ಬಾಗಲಕೋಟ ರೈಲ್ವೆ ಸ್ಟೇಷನಿಗೆ ಬಂದ ಕೂಡಲೆ ಬಂಧನವಾಯಿತು. ಬೆಂಗಳೂರಿನ ರಜ್ವಿಯವರನ್ನು ದ್ವಿತೀಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ರಜ್ವಿಯವರು ಮಾರು ವೇಷದಲ್ಲಿ ಬಂದರು ಕೂಡಾ ಬಂಧನಕ್ಕೆ ಒಳಗಾದರು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದ ಅನೇಕರ ಬಂಧನವಾದರೂ ಕೂಡಾ ಹಲವಾರು ಜನರು ಗುಪ್ತವಾಗಿ ಪೊಲೀಸರ ಕಣ್ಣು ತಪ್ಪಿಸಿ ಉಳಿದುಕೊಂಡರು. ಗೋವಿಂದಾಚಾರ್ಯ ಗುಡಿ ಹಾಗೂ ತಿರುಮಲರಾವ್ ಕೌಜಲಗಿ ಅವರು ಪೊಲೀಸರಿಗೆ ಸಂಶಯ ಬಾರದ ಹಾಗೆ ಭೂಗತರಾಗಿದ್ದ ಚಳವಳಿಗಾರರು ಹಾಗೂ ಹೊರಗಿನ ಸಾರ್ವಜನಿಕರ ನಡುವೆ ಸಂಪರ್ಕ ಸಾಧನವಾಗಿ ಕೆಲಸ ಮಾಡುತ್ತಿದ್ದರು. ಪರಿಷತದ ಸಿದ್ಧತೆಯ ಕುರಿತು 'ಬಹಿಷ್ಕಾರ' ಎಂಬ ಬುಲೆಟನ್ ಹೊರಡಿಸುತ್ತಿದ್ದರು. ಇದನ್ನು ಗೋಪಾಲರಾವ್ ಕೋರಾ ಎಂಬುವರು ಪೊಲೀಸರ ಕಣ್ಣು ತಪ್ಪಿಸಿ ಗೋಡೆಗೆ ಅಂಟಿಸುತ್ತಿದ್ದರು. ಇವರಲ್ಲದೆ ಚಾಪ್ಲಿಬಾಯಿ, ಥೇಕರ್ಸಿಬಾಯಿ ಹಾಗೂ ಅವರ ಕುಟುಂಬದವರು ಭೂಗತವಾಗಿ ಕಾರ್ಯ ಮಾಡುತ್ತಿದ್ದರು."[೨೨]

ಹ.ರಾ. ಪುರೋಹಿತರನ್ನು ಅದ್ಯಕ್ಷರನ್ನಾಗಿ ನೇಮಿಸಲಾಯಿತು. ಪುರೋಹಿತರು ಧಾರವಾಡದಿಂದ ಬಾಗಲಕೋಟಗೆ ಪೊಲೀಸರ ಕಣ್ಣು ತಪ್ಪಿಸಿ ಬಂದಿರುವದು ಒಂದು ಸಾಹಸ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

"ಧಾರವಾಡದಲ್ಲಿ ನಾನು ಕರ್ಮವೀರ ಪತ್ರಿಕೆಯ ಕೆಲಸ ಮಾಡುತ್ತಿರುವಾಗ ೧೯೩೭ರಲ್ಲಿ ನಿರ್ಬಂಧಾಜ್ಞೆ ಹಾಕಿ ನಾನು ಧಾರವಾಡ ಬಿಟ್ಟು ಹೋಗಬಾರದೆಂದು ನೋಟಿಸು ಬಜಾಯಿಸಿದರು. ನಾನು ಹೋದಲೆಲ್ಲಾ ಪೊಲೀಸರು ಹಿಂಬಾಲಿಸುತ್ತಿದ್ದರು. ಇಂಥ ಸಮಯದಲ್ಲಿ ಬಾಗಲಕೋಟ ರಾಜಕೀಯ ಪರಿಷತ್ತಿಗೆ ಹೋಗಬೇಕೆಂದು ಕುತೂಹಲ ಹೊಂದಿದ್ದೆ. ಇದನ್ನು ಎಸ್.ಆರ್. ನರಸಾಪೂರ ಅವರಿಗೆ ಹೇಳಿದೆ 'ರಾತ್ರಿ ನಮ್ಮ ಮನೆಗೆ ಬನ್ನಿ ನೋಡೋಣ' ಎಂದರು. ರಾತ್ರಿ ಮನೆಯಲ್ಲಿಯೇ ಮಲಗಿದೆ. ಬೆನ್ನು ಹತ್ತಿದ್ದ ಪೊಲೀಸ್ ಮನೆಗೆ ಹೋದ ನಂತರ ಮಂಗಳವಾರ ಪೇಟೆಯಲ್ಲಿದ ನಮ್ಮ ಮನೆಯಿಂದ ರಾತ್ರಿ ಹೊರಟು ಶುಕ್ರವಾರ ಪೇಟೆ ಮಾರ್ಗದಿಂದ ಮಾಳಮಡ್ಡಿಯಲ್ಲಿನ ನರಸಾಪೂರರ ಮನೆಗೆ ಹೋದೆ. ಅಲ್ಲಿ ಅವರು ನನಗೆ ಪರದೇಶಿ ಕೋಟು ತೊಡಿಸಿ, ಜರದ ರುಮಾಲು ತಲೆಗೆ ಕೊಟ್ಟರು. ಅವರು ಅದೇ ವೇಷ

ಧರಿಸಿದರು. ರೈಲಿನಲ್ಲಿ ಬೆಳಗಾವಿಗೆ ಟಿಕೇಟು ಕೊಂಡು ಪರಸ್ಪರ ಮಾತನಾಡದೆ ದೂರ ಕುಳಿತೆವು. ಬೆಳಗಾವಿ ಸ್ಟೇಷನಿಗೆ ಇಳಿದು ಬಾಗಲಕೋಟ ಬಸ್ಸು ಹತ್ತಿದೆವು ನಮ್ಮ ಹಿಂದೆಯೇ ನಾಲ್ಕು ಜನ ಪೊಲೀಸರು ಬಸ್ಸು ಹತ್ತಿದರು. ಆದರೆ ಸುದೈವದಿಂದ ಅವರು ನನ್ನನ್ನು ಗಮನಿಸಲಿಲ್ಲ. ಲೋಕಾಪೂರದಲ್ಲಿ ಇಳಿದು ಪರಿಚಿತರ ಮನೆಯೊಂದರಲ್ಲಿ ಉಂಡು ನಡೆಯುತ್ತಲೇ ಕಲಾದಗಿಗೆ ಹೋಗಿ ಅಲ್ಲಿಂದ ಟಾಂಗಾದ ಮೂಲಕ ಬಾಗಲಕೋಟಗೆ ಎರಡು ಮೈಲು ದೂರದಲ್ಲಿ ಇಳಿದು ನಡೆಯುತ್ತ ಸಾಗಿದೆವು. ವೆಂಕಟಪೇಟೆ ವೆಂಕಟೇಶ ದೇವರ ಗುಡಿ ಬಳಿ ಎದುರಿಗೆ ಒಬ್ಬ ಗುರುತಿನ ಪೊಲೀಸ್ ಬಂದ 'ಮೊರೆ ಕೆಳ ಮಾಡಿ ಹೋದೆ ಜರಿ ಪಟಕಾಸುತ್ತಿದ್ದ ನನ್ನ ಗುರುತು ಆತನಿಗೆ ಸಿಗಲಿಲ್ಲ. ನರಸಾಪೂರ ಅವರು ತಮ್ಮ ಹಾದಿ ಹಿಡಿದರು. ಆಗ ರಾತ್ರಿ ಹನ್ನೊಂದು ಗಂಟೆ. ಪರಿಚಿತರ ಮನೆಗೆ ಹೋಗಿ ಹೆಸರು ಹೇಳಿದರೂ ಅವರು ಬಾಗಿಲು ತೆರೆಯಲಿಲ್ಲ. ಮುಂದೆ ಒಬ್ಬ ಸ್ನೇಹಿತರು ಬಾಗಿಲು ತೆರೆದರೂ ಆಶ್ರಯ ನೀಡಲು ಒಪ್ಪಲಿಲ್ಲ. ಹೇಗೋ ಅವರ ಮನ ಒಲಿಸಿ ಬೆಳಗ್ಗೆ ಐದರ ತನಕ ಅಲ್ಲಿದ್ದು, ಮುಂಜಾನೆ ಸ್ನಾನಾದಿ ತೀರಿಸಿ ಚೋಳಪ್ಪನ ಮನೆಯೆಂದು ಪ್ರಸಿದ್ಧವಾದ ದೆವ್ವದ ಮನೆಗೆ ಹೋದೆ ಅಲ್ಲಿ ಪರಿಚಿತರಾದ ಕೆಲವು ಕಾಂಗ್ರೆಸ ಸ್ವಯಂ ಸೇವಕರಿದ್ದರು. ಅವರು ಮದ್ಯಾಹ್ನದ ಊಟದ ವ್ಯವಸ್ಥೆ ಮಾಡಿದರು. ನಂತರ ನಿಯೋಜಿತ ಸಭಾ ಸ್ಥಾನಕ್ಕೆ ಬಂದೆ ನಿಯೋಜಿತವಾದ ಇಬ್ಬರು ಅಧ್ಯಕ್ಷರ ಬಂಧನ ಆಗಿದ್ದರಿಂದ ನನ್ನನ್ನೇ ಅಧ್ಯಕ್ಷರನ್ನಾಗಿ ಆರಿಸಿದರು. ಪರಿಷತ್ತು ಯಶಸ್ವಿ ಆಯಿತು."[೨೩]

"ಪರಿಷತ್ತನ್ನು ಆಯೋಜಿಸುವ ಕಾರ್ಯಕರ್ತರು ಪೊಲೀಸರ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದರು. ಬಿಗಿ ಭದ್ರತೆಗಳಿಲ್ಲದ ಗುಪ್ತಜಾಗೆಯನ್ನು ಸಭೆಗೆ ಅಯೋಜಿಸಿದ್ದರು. ಬಾಗಲಕೋಟಯಲ್ಲಿ ೨೦೦ ಜನರನ್ನು ಮೊದಲೆ ಸೆರೆ ಹಿಡಿಯಲಾಗಿತ್ತು. ಅಷ್ಟರಲ್ಲಿ ರಜ್ವೆ ಸಾಹೇಬರ ಅಧ್ಯಕ್ಷ ಭಾಷಣದ ಹಾಗೂ ಗೊತ್ತುವಳಿಗಳ ಮುದ್ರಿತ ಪ್ರತಿಗಳು ಸಭೀಕರಲ್ಲೆಲ್ಲ ಹಂಚಲ್ಪಟ್ಟಿದ್ದವು. ಎಲ್ಲ ಕಾರ್ಯಕರ್ತರನ್ನು ಸೆರೆ ಹಿಡಿದಿದ್ದೇವೆ ಪರಿಷತ್ತು ಸೇರುವುದೇ ಇಲ್ಲ, ಒಂದು ವೇಳೆ ಸೇರಿದರೂ ಬ್ರಾಹ್ಮಣರ ವಸತಿ ಸ್ಥಾನವಾದ ಕಿಲ್ಲೆಯ ಬಯಲಿನಲ್ಲಿ ಸೇರಬಹುದೆಂದು ಪೊಲೀಸರು ಅಲ್ಲಿ ಬಲವಾದ ಕಾವಲನ್ನು ಇಟ್ಟರು. ಸಭೆ ಗೊತ್ತು ಪಡಿಸಿದ ಸ್ಥಳದಲ್ಲಿ ಪೊಲೀಸರ ಕಾವಲು ಇರಲಿಲ್ಲ."[೨೪]

ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀನಿವಾಸ ಮಂಗಳವೇಡೆಯವರು ಆಯ್ಕೆಗೊಂಡರು. ಕರ್ನಾಟಕದ ಹಿರಿಯ ಕಾರ್ಯಕರ್ತರಾದ ಮಾಗಡಿ, ಹಳ್ಳಿಕೇರಿ, ಚಿನ್ನಯಸ್ವಾಮಿ, ಓಂಕಾರಮಠ ಮುಂತಾದವರು ಬಾಗಲಕೋಟಗೆ ಬಂದರು. ೨೮-೦೫-೧೯೩೨ ರಂದು ಮದ್ಯಾಹ್ನ ೨ ಗಂಟೆಗೆ ಸರಾಫಗಟ್ಟಿ ಕೂಟದಲ್ಲಿ ಪರಿಷತ್ತು ಸಭೆ ಸೇರಿತು. ನಿಯೋಜಿತ ಜಾಗೆಯಲ್ಲಿ ಭೂಗತರಾಗಿದ್ದ ಚಳವಳಿಗಾರರು ಭಾರತ ಮಾತೆಯ ಜಯ ಜಯಕಾರ ಹಾಕಿದಾಗ ಸುತ್ತಲು ಅಂಗಡಿಗಳಲ್ಲಿ ಸಂತೆಯ ದಿನ ವ್ಯಾಪಾರಕ್ಕೆ ಬಂದವರಂತೆ ನಟಿಸುತ್ತಲಿದ್ದ ನೂರಾರು ಪ್ರತಿನಿಧಿಗಳು ಹೊರಬಂದರು. ಒಂದು ಸಾವಿರ ಜನ ಸೇರಿದ್ದರು. ಮಂಗಳವೇಡೆಯವರು ಸ್ವಾಗತ ಭಾಷಣ ಮಾಡಿದರು ಸುಗಣೇಂದ್ರ ಕೆರೂರ

ಪಕ್ಕದ ಕಟ್ಟಡ ಮೇಲೆ ನಿಂತು ಠರಾವು ಓದಿ ಜನರಿಂದ ಮಂಜೂರು ಪಡೆದರು. ಪುರೋಹಿತರ ಅಧ್ಯಕ್ಷ ಭಾಷಣ ನಡೆಯುತ್ತಿದ್ದಂತೆ ಪೊಲೀಸ ಪಡೆ ಮುತ್ತಿತ್ತು. ಪರಿಷತ್ತು ಯಶಸ್ವಿಯಾಯಿತು. ೨೦೦ ಜನ ಕಾರ್ಯಕರ್ತರನ್ನು ಬಂಧಿಸಿ ತಾಲೂಕ ಕಛೇರಿ ಆವರಣದಲ್ಲಿ ಇರಿಸಿದರು.

೬.೧೧. ವಿಜಾಪೂರ ಜಿಲ್ಲಾಧಿಕಾರಿ ಹಿರೇಮಠರ ದರ್ಪ ಪ್ರದರ್ಶನ

ಕಾಯ್ದೆಭಂಗ ಚಳವಳಿ ತೀವ್ರಗೊಂಡಿರುವದನ್ನು ಗಮನಿಸಿದ ಅಂದಿನ ವಿಜಾಪೂರ ಜಿಲ್ಲೆಯ ಕಲೆಕ್ಟರ್ ಹಿರೇಮಠ ಅವರು ಹಲವಾರು ಯತ್ನಗಳನ್ನು ಮಾಡಿದರು. ದಿನಾಂಕ ೧೨-೦೬-೧೯೩೦ ರಂದು ಬಾಗಲಕೋಟದಲ್ಲಿ ಶಾಂತತಾ ಸಭೆ ಕರೆದರು. ಸುತ್ತಲಿನ ಗ್ರಾಮಗಳಿಂದ ಗೌಡರು, ಕುಲಕರ್ಣಿಯವರು ಹಾಗೂ ಬಾಗಲಕೋಟದ ಡಾ॥ ಜಹಾಗೀರದಾರರು, ಮಹಂತಪ್ಪ ಶರಶೆಟ್ಟಿ, ವೀರಬಸಪ್ಪ ಮೊಕಾಸಿ, ಲೂತಿಮಠ, ದೇವೂ, ಕಿಣಗಿ ಮುಂತಾದವರು ಭಾಗವಹಿಸಿದ್ದರು. ಹಿರೇಮಠ ಸಾಹೇಬರು ನೆರೆದವರನ್ನು ಕುರಿತು ಕಾಯ್ದೆಭಂಗದ ವಿರುದ್ಧ ಚಳವಳಿ ಮಾಡಿರಿ ಎಂದು ಉಪದೇಶಿಸಿ ಬೆಳಗಾವಿಯಿಂದ ಹೊರಡುವ 'ಪ್ರಜಾಧ್ವನಿ' ಎಂಬ ಸರಕಾರದ ಪರವಾಗಿರುವ ವಾರಪತ್ರಿಕೆ ತರಿಸುವಂತೆ ಕೇಳಿದರು. ಸಭೆಯಲ್ಲಿಯ ಓರ್ವರು ನಾವು 'ಕನ್ನಡಿಗ' ಪತ್ರಿಕೆಯನ್ನು ತರಿಸುತ್ತೇವೆ. ಪ್ರಜಾಧ್ವನಿ ಪತ್ರಿಕೆ ನಮಗೆ ಬೇಕಿಲ್ಲ ಎಂದು ಹೇಳಿದರು. ಇದಕ್ಕೆ ಹಿರೇಮಠರು 'ಕನ್ನಡಿಗ' ಪತ್ರಿಕೆಯಲ್ಲಿ ಕೇವಲ ರಾಷ್ಟ್ರೀಯ ಸುದ್ಧಿಗಳಿರುತ್ತವೆ. ಆದರೆ 'ಪ್ರಜಾಧ್ವನಿ' ಪತ್ರಿಕೆಯಲ್ಲಿ ಸರಕಾರಿ ಹಾಗೂ ರಾಷ್ಟ್ರೀಯ ಎರಡು ಸುದ್ಧಿಗಳಿರುತ್ತವೆ ಎಂದಾಗ ಮತ್ತೊಬ್ಬರು 'ಪ್ರಜಾಧ್ವನಿ' ಪತ್ರಿಕೆ ತರಿಸಲಾಗುವದಿಲ್ಲ ಎಂದಾಗ ಹಿರೇಮಠರು ತರಿಸಲಾಗದಿದ್ದರೆ ಬಿಡಿ 'ಪ್ರಜಾಧ್ವನಿ' ಪತ್ರಿಕೆಯನ್ನು ಜನರು ತರಿಸುವಂತೆ ಚಳವಳಿಯನ್ನಾದರು ಮಾಡಿ ಎಂದು ಹೇಳಿದರು. ಸಭೆಯು ಮುಗಿದ ನಂತರ ಎಲ್ಲ ಗೌಡ, ಕುಲಕರ್ಣಿಯವರು ಹೋದ ನಂತರ ಬಾಗಲಕೋಟದ ಕೆಲ ಮಹಾಶಯರು ಕುಳಿತು ಸಾಹೇಬರೊಡನೆ ಕಾಯ್ದೆ ಭಂಗ ಚಳವಳಿಯ ವಿರುದ್ಧ ಯಾವ ಯಾವ ಉಪಾಯಗಳನ್ನು ಯೋಚಿಸಬೇಕೆಂದು ಚರ್ಚಿಸಿದರು.

ಬ್ರಿಟಿಷ ಸರಕಾರದ ದುರಾಡಳಿತವನ್ನು ವಿರೋಧಿಸಿ ಹಲವಾರು ಗೌಡರು ಮತ್ತು ಕುಲಕರ್ಣಿಯವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಅದರಂತೆ ದೊಡ್ಡಿಹಾಳ ಗ್ರಾಮದ ಕುಲಕರ್ಣಿಯವರಾಗಿದ್ದ ಹಣಮಂತ ರಾಮಚಂದ್ರ ದೇಶಪಾಂಡೆಯವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಾಗ ಅವರಿಗೆ ನೋಟಿಸ್ ನೀಡಿರುವ ಬಗ್ಗೆ ಕನ್ನಡಿಗ ಪತ್ರಿಕೆಯು ವಿವರವಾಗಿ ಉಲ್ಲೇಖಿಸಿದೆ –

೧. ನೀವು ತಾರೀಖು ೨೫-೦೪-೧೯೩೦ನೆಯ ದಿವಸ ನಮ್ಮ ಕಡೆಗೆ ಕಳುಹಿಸಿದ ರಾಜೀನಾಮೆಯಲ್ಲಿ ಒಂದು ಮಜಕುರ ಬರದಿರಿ ಈಗ ನನ್ನ ೧೮ – ೨೦ ವರ್ಷಗಳ ನೌಕರಿ ಅನುಭವದ ಮೇಲಿಂದ ಈಗಿನ ರಾಜಕೀಯ ಆಂದೋಲನದ ಮೂಲಕ ಪ್ರಾಮಾಣಿಕ ಮತವುಳ್ಳ ಮನುಷ್ಯನಿಂದ ನೌಕರಿಯಲ್ಲಿ ಉಳಿಯುವದು ಶಕ್ಯವಿಲ್ಲ. ಪ್ರಜಾಹಿತದ ದೃಷ್ಟಿಯಿಂದಲೂ ಗ್ರಾಮಸ್ಥರಿಂದ ಮಾಡತಕ್ಕ ಕೆಲಸಗಳು

ಬಹುವಿದ್ದು ಅವು ಅವರಿಂದಾಗಲಿಕ್ಕೆ ಶಕ್ಯವಿಲ್ಲ. ಈಗ ರಾಜಕೀಯ ವಾತಾವರಣವು ಹಳ್ಳಿ ಹಳ್ಳಿಗಳಲ್ಲಿಯೂ ಸಂಪೂರ್ಣ ಸೇರಿದ್ದು ಪರಿಸ್ಥಿತಿ ಮೇರೆಗೆ ಗ್ರಾಮಸ್ಥರಿಗೆ ಒಂದೆ ಧೋರಣೆಯಿಂದ ನಡೆಯಲಿಕ್ಕೆ ಬರಲಾರದು. ಪರಿಸ್ಥಿತಿಯ ಅವಲೋಕನೆಯ ಮೇಲಿಂದ ಸರಕಾರ ಮತ್ತು ಪ್ರಜಾ ಉಭಯ ಬಾಜೂದಿಂದಲೂ ಮಹತ್ವದ ಜವಾಬ್ದಾರಿ ಗ್ರಾಮಸ್ಥರ ಮೇಲೆ ಬೀಳುವದರಿಂದ ದಿನೆ ದಿನೆ ನಡೆಯುವ ದಬ್ಬಾಳಿಕೆಯಿಂದ ಪ್ರಜಾಕ್ಷೋಭೆ ಹೆಚ್ಚುತ್ತಿರುವದರಿಂದ ಇಂಥಹ ಪರಿಸ್ಥಿತಿಯಲ್ಲಿ ನೌಕರಿಯ ಮೇಲೆ ಉಳಿಯಲಿಕ್ಕೆ ಶಕ್ಯವಿಲ್ಲ, ಎಂಥ ನೌಕರನಿದ್ದರು ದೇಶಪ್ರೇಮ ಯಾರಿಗೂ ಬಿಡಲಾಗದು. ಕಾರಣ ನಾನು ನನ್ನ ನೌಕರಿಯಿಂದ ಮುಕ್ತನಾಗಲು ಇಚ್ಛಿಸಿದೇನೆ.

೨. ತಾರೀಖು ೦೧-೦೫-೧೯೩೦ನೆಯ ದಿವಸ ಗಲಗಲಿಯಲ್ಲಿ ಕೂಡಿದ ಸಭೆಯಲ್ಲಿ ಸೈತಾನಿ ಸರಕಾರದ ನೌಕರಿ ಬಿಟ್ಟು ರಾಜೀನಾಮೆ ಕೊಟ್ಟು ಬಂದೀನಿ ಅಂತ ಜಾಹೀರು ಮಾಡಿ ಇದರಂತೆ ಸಭೆಯಲ್ಲಿ ಹಾಜರಿದ್ದ ಉಳಿದ ಗೌಡ, ಕುಲಕರ್ಣಿಯವರು ನೀವಾದರೂ ರಾಜೀನಾಮೆ ಕೊಡಿರಿ ಅಂತಾ ಉಪದೇಶ ಮಾಡೀರಿ ಮತ್ತು ಸತ್ಯಾಗ್ರಹ ವ್ಯಾಲೆಂಟ್‌ರ ಸಂಗಡ ಹಳ್ಳಿಗಳಿಗೆ ಹೋಗಿ ನೀನು ಅವರಿಗೆ ಸಹಾಯ ಮಾಡಿದಿ. ಇವುಗಳ ಮೇಲಿಂದ ನೀನು ಸರಕಾರ ವಿರುದ್ಧ ನಡೆದ ಚಳವಳಿಯಲ್ಲಿ ಕಾಂಗ್ರೆಸ್ ಜನರೊಂದಿಗೆ ಕೂಡಿಕೊಂಡಿದಿ ಅಂತಾ ಮತ್ತು ಅವರಿಗೆ ಪುಷ್ಕಳ ಸಹಾಯ ಮಾಡಿದಿ ಅಂತ ಸಿದ್ಧವಾಗುತ್ತದೆ. ಕಾರಣ ನೀನು ಬಾರೀ ದುರ್ನಡತೆ ಹೊಂದಿದ್ದೆ ನೀನು ನಾಲಾಯಕ ಇದ್ದು, ಈ ಬಗ್ಗೆ ನೀನು ೦೯-೦೬-೧೯೩೦ ದಿವಸ ಹಗಲು ೧೧ ಗಂಟೆಗೆ ಬದಾಮಿ ಮುಕ್ಕಾಮಿಗೆ ಹಾಜರಿರಬೇಕು ತಪ್ಪಿದರೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.[೭೫]

೨೭-೦೫-೧೯೩೦ ಸಹಿ/-

ಆರ್.ಎಸ್. ಹಿರೇಮಠ

ಡಿ.ಸಿ

೧೫-೦೬-೧೯೩೦ ರಂದು ಹಿರೇಮಠ ಸಾಹೇಬರು ಶಾಂತಿ ಸಂಘ ಸ್ಥಾಪನೆಯ ಸಲುವಾಗಿ ಗಲಗಲಿಯಲ್ಲಿ ಸಭೆ ಕರೆದಿದ್ದರು. ಸಂಭೆಯಲ್ಲಿ ೫೦ - ೬೦ ಜನ ಸತ್ಯಾಗ್ರಹಿಗಳು ಭಾಗವಹಿಸಿದ್ದರು. ಅವರಲ್ಲಿ ಹಲವರು ಒತ್ತಾಯಪೂರ್ವಕವಾಗಿ ಬಂದಿದ್ದರು. ಹಿರೇಮಠರು ತಮ್ಮ ಭಾಷಣದಲ್ಲಿ ಈಗಿನ ಚಳವಳಿಯು ಸೋಟರ ಚಳವಳಿಯೆಂದು, ಉಪ್ಪಿನ ವಖಾರದ ಮೇಲಿನ ದಾಳಿ, ದರೋಡೆ ಕಲಿಸುವ ಮಾರ್ಗವೆಂದೂ, ಸೇಂಧಿಗಿಡಗಳನ್ನು ಕಡಿದರೆ ಮಳೆ ಕಡಿಮೆಯಾಗುವುದೆಂದೂ ಮತ್ತು ಸೊಲ್ಲಾಪುರ, ಪೇಶಾವರ ದಂಗೆಗಳಿಗೆ ಈ ಚಳವಳಿ ಮೂಲವೆಂದು, ಚಳವಳಿಯನ್ನು ಯಾರೂ ಮಾಡಬಾರದೆಂದು ಹೇಳಿದರು. ಡಿ.ಸಿ. ಹಿರೇಮಠ ಅವರು ವಿಜಾಪೂರ ಜಿಲ್ಲೆಯಲ್ಲಿಯ ಪ್ರಮುಖ ಪಂಗಡವಾದ ಲಿಂಗಾಯತ ಮುಖಂಡರನ್ನು ತಮ್ಮತ್ತ ಸೇಳೆದುಕೊಂಡು ಚಳವಳಿಗಾರರ ಒಗಟ್ಟನ್ನು ಒಡೆಯಲು ಯತ್ನಿಸಿದ್ದರು. ಅವರ ತಂತ್ರದ ಫಲವಾಗಿ ಬನಹಟ್ಟಿಯ ಲಿಂಗಾಯತ ಮುಖಂಡರಾದ ಪಂಡಿತಪ್ಪ

ಚಿಕ್ಕೋಡಿಯವರು ಹಿರೇಮಠರ ಜೊತೆ ಸಹಕರಿಸಿ ಲಿಂಗಾಯತ ಸಮಾಜವು ಮಹಾತ್ಮಾಗಾಂಧಿಯವರ ಸ್ವರಾಜ್ಯ ಚಳವಳಿಗೆ ವಿರುದ್ಧವಿದೆ ಎಂದು ಹೇಳಿಕೆ ನೀಡಿರುವದನ್ನು ಜಿಲ್ಲೆಯ ಇತರ ಲಿಂಗಾಯತ ಮುಖಂಡರು ಖಂಡಿಸಿ. "೧೦-೦೬-೧೯೩೦ರಂದು ಇಲಕಲ್ಲನ ಲಿಂಗಾಯತ ಸಮಾಜದವರು ರುದ್ರಪ್ಪಣ್ಣ ಕಂಠಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಂಡಿತಪ್ಪ ಚಿಕ್ಕೋಡಿಯವರು ನಮ್ಮ ಲಿಂಗಾಯತ ಸಮಾಜದ ಮುಖಂಡರಲ್ಲ ಹಾಗೂ ಲಿಂಗಾಯತ ಸಮಾಜ ಮಹಾತ್ಮಾಗಾಂಧಿಯವರ ಸ್ವರಾಜ್ಯ ಚಳವಳಿಗೆ ವಿರುದ್ಧವಾಗಿದೆ ಎಂಬ ಹೇಳಿಕೆ ತಪ್ಪು ಮತ್ತು ಅನಧಿಕಾರ ಮಾಡಿದ್ದು ಇರುತ್ತದೆ. ಕಾರಣ ಸಭೆಯು ಚಿಕ್ಕೋಡಿಯವರ ವಿಧಾನವನ್ನು ಸಭೆಯು ಸಂಪೂರ್ಣ ನಿಷೇಧಿಸಿದೆ. ಮಹಾತ್ಮರು ಕೈಕೊಂಡ ದೇಶೋದ್ಧಾರದ ಕೆಲಸಕ್ಕೆ ನಮ್ಮ ಲಿಂಗಾಯತ ಸಮಾಜ ಪೂರ್ಣ ಬೆಂಬಲಿಸುತ್ತದೆ"[೨೬] ಎಂದು ನಿರ್ಣಯಿಸಿದರು.

ಅಧಿಕಾರಿ ವರ್ಗದವರು ಮಹಾತ್ಮರ ಚಳವಳಿಯನ್ನು ದಾರಿತಪ್ಪಿಸಲು ಹಲವಾರು ಉಪಾಯಗಳನ್ನು ಮಾಡುತ್ತಿದ್ದರು. "೦೮-೦೨-೧೯೩೦ರಂದು ಹುನಗುಂದದ ಮಾಮಲೇದಾರ ಕಮತಗಿಯ ಬಂಗಲೆಯಲ್ಲಿ ರಾಜನಿಷ್ಠರ ಸಭೆ ಸೇರಿಸಿದನು. ಅದರಲ್ಲಿ ೮-೧೦ ಜನ ಗೌಡ, ಕುಲಕರ್ಣಿಯವರು ಬಂದಿದ್ದರು. ಮಾಮಲೇದಾರನು ಮಹಾತ್ಮಗಾಂಧಿಯವರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯ ವಿರುದ್ಧವಾಗಿ ಭಾಷಣ ಮಾಡಿ ಮಹಾತ್ಮಗಾಂಧಿಯವರಿಗೆ ಏನೂ ತಿಳಿಯುವದಿಲ್ಲ, ಸೇಂಧಿಗಿಡಗಳನ್ನು ಕಡೆಯುವದು ಬಹಳ ಮುರ್ಖತನದ್ದು ಹಾಗೂ ಅಹಿಂಸಾ ತತ್ವಕ್ಕೆ ವಿರುದ್ಧವಾದದ್ದು"[೨೨] ಎಂದು ಹೇಳಿದನು.

೧೩-೦೨-೧೯೩೦ರಂದು ವಿಜಾಪೂರ ಜಿಲ್ಲಾ ಕಲೆಕ್ಟರ್ ಹಿರೇಮಠ ಅವರು ತಾಳಿಕೋಟೆಯಲ್ಲಿ ಶಾಂತತಾ ಸಭೆಯನ್ನು ನಡೆಸಿ ಚಳವಳಿಗೆ ಬೆಂಬಲಿಸಬಾರದೆಂದು ಹೀಗೆ ಹೇಳಿದರು. "ಈಗಿನ ಸರಕಾರ ಬಹಳ ದಯಾಳು ಸರಕಾರ ಅಲ್ಪಸಂಖ್ಯಾತರಾದ ಗಾಂಧಿ ಪಕ್ಷದವರು ಚಳವಳಿ ಮಾಡಹತ್ತಿದ್ದಾರೆ. ಅದನ್ನು ನೀವು ನಂಬಬೇಡಿರಿ. ನಿಮ್ಮನ್ನು ಅವರು ಚಳವಳಿಗೆ ನೂಕಿ ತಾವು ಪಾರಾಗುತ್ತಾರೆ. ಈಚಲು ಗಿಡ ಕಡೆಯಿರಿ ಎಂದು ನಿಮಗೆ ಹೇಳುತ್ತಾರೆ. ಈಚಲಗಿಡ ಕಡಿದರೆ ಮಳೆ ಬರುವದಿಲ್ಲ. ಸ್ವತಂತ್ರವಾಗಿ ಸಿದ್ಧ ಮಾಡಲ್ಪಟ್ಟ ಉಪ್ಪು ತಿಂದರೆ ಹೊಟ್ಟೆ ಝಾಡಿಸುತ್ತದೆ"[೨೮] ಎಂದು ಬೋಧಿಸಿದರು. "ವಿಜಾಪೂರ ಸತ್ಯಾಗ್ರಹ ಶಿಬಿರದಿಂದ ತೊರವಿಯವರ ನೇತೃತ್ವದಲ್ಲಿ ೩ ಜನ ಸ್ವಯಂ ಸೇವಕರು ಹೊನ್ನುಟಗಿ ಗ್ರಾಮಕ್ಕೆ ಹೋದಾಗ ಅಲ್ಲಿನ ಸರ್ಕಲ್ ಇನ್‌ಸ್ಪೆಕ್ಟರ್ ಸ್ವಯಂ ಸೇವಕರನ್ನು ಊರಿಂದ ಹೊರಗೆ ಹಾಕಲು ಆದೇಶಿಸಿದ. ವಾಲಿಕಾರ ತೊರವಿಯವರನ್ನು ಹೆಗಲ ಮೇಲೆ ಹೊತ್ತುಕೊಂಡು ಊರ ಹೊರಗೆ ೨ ಮೈಲು ದೂರ ಬಿಟ್ಟು ಬಂದ. ಇದನ್ನು ಕಂಡು ರೊಚ್ಚಿಗೆದ್ದ ಊರ ಜನರು ವಾಲಿಕಾರನನ್ನು ದಬ್ಬಿ ಮತ್ತೆ ಸ್ವಯಂ ಸೇವಕರನ್ನು ಊರೊಳಗೆ ಕರೆದುಕೊಂಡು ಬಂದು ಸಭೆ ನಡೆಸಿದರು."[೨೯] ಜನರು ಚಳುವಳಿಯ ಪರವಾಗಿರುವರು ಎಂಬುವದನ್ನು ಈ ಘಟನೆ ದೃಢಪಡಿಸುತ್ತದೆ.

ವಿಜಾಪೂರ ಜಿಲ್ಲೆಯಲ್ಲಿ ಪಿಕೆಟಿಂಗ್‌ನ್ನು ತಡೆಗಟ್ಟಬೇಕೆಂದು ಜಿಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ತಾರೀಖು ೧೭-೦೭-೧೯೩೦ ರಂದು ಪಿಕೆಟಿಂಗ್ ಮಾಡುವವರ ವಿರುದ್ಧ ಒಂದು ಕಟ್ಟಳೆಯನ್ನು ಹೊರಡಿಸಿದರು. "ಈ ಜಿಲ್ಲೆಯಲ್ಲಿಯ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಇರುವ ಸೇಂಧಿ, ಸೆರೆ, ಅಫೀಮು ಮತ್ತು ಗಾಂಜಾ ಅಂಗಡಿಗಳ ಮುಂದೆ ಇರುವ ಬೈಲು ಮತ್ತು ತೆರವಿದ್ದ ಸ್ಥಳಗಳಲ್ಲಿ ಮತ್ತು ಓಣಿಗಳಲ್ಲಿ ಜನರು ತಿರುಗಾಡುವದಾಗಿ ಅಥವಾ ತಿರುಗಾಡುತ್ತಿರಬಹುದಾಗಿ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರಿಗೆ ಕಂಡು ಬಂದಿದೆ. ಈ ರೀತಿ ತಿರುಗಾಡುತ್ತಿರುವದರಿಂದ ಸಾರ್ವಜನಿಕರಿಗೆ ಅನಾನುಕೂಲತೆ ಆಗುತ್ತಿರುವದಾಗಿ ಕಂಡು ಬಂದಿದೆ. ಮೇಲೆ ತೋರಿಸಿದ ಕಾರಣಗಳ ಮೂಲಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಜಿಲ್ಲಾ ವಿಜಾಪೂರ ಇವರು ಮುಂಬಯಿ ಡಿಸ್ಟ್ರಿಕ್ಟ್ ಪೋಲೀಸ್ ಆ್ಯಕ್ಟ್ (೧೮೯೦ನೇ ಇಸ್ವಿ ೧ನೆ ಕಾಯ್ದೆ) ಕಲಂ ೩೯ (೧) (ಎಮ್) ಇದರ ಅನ್ವಯ ಅಪ್ಪಣೆ ಮಾಡುವದೇನೆಂದರೆ, ಸೆರೆ, ಸೇಂಧಿ, ಗಾಂಜಾ ಮತ್ತು ಅಫೀಮು ಮಾರುವ ಅಂಗಡಿಗಳ ಮುಂದೆ ಇರುವ ಬೈಲು ಮತ್ತು ತೆರವಿದ್ದ ಸ್ಥಳಗಳಲ್ಲಿ ಅಥವಾ ಓಣಿಗಳಲ್ಲಿ ಯಾರೂ ಅಂಗಡಿಗಳಿಗೆ ಹೋಗಲಿಚ್ಚಿಸುವರಿಗೆ ಅಡ್ಡಿ ಮಾಡುವ ಉದ್ದೇಶದಿಂದ ಅಥವಾ ಇತರ ಯಾವ ಕಾರಣದಿಂದಲೂ ತಿರುಗಾಡಕೂಡದು. ಈ ಹುಕುಮಿನ ಅಮಲಬಜಾವಣೆಯನ್ನು ಪೋಲೀಸರು ಮುಂಬಯಿ ಡಿಸ್ಟ್ರಿಕ್ಟ್ ಪೋಲೀಸ್ ಆ್ಯಕ್ಟ್ ಕಲಂ ೫೩(೧) (ಎ)ದ ಪ್ರಕಾರ ತಮ್ಮ ಕರ್ತವ್ಯ ಮಾಡುವರು. ಇವತ್ತಿನಿಂದ ಒಂದು ತಿಂಗಳವರೆಗೆ ಈ ಕಾಯ್ದೆ ಜಾರಿಯಲ್ಲಿರುತ್ತದೆ ಎಂದು ಕಠಿಣ ಕಾಯ್ದೆ ಹಾಕಿದರು."[೬೦] ಕಾನೂನು ಭಂಗ ಚಳವಳಿಯು ಗಾಂಧೀಜಿಯವರ ಪ್ರೇರಣೆಯಂತೆ ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ಯಶಸ್ವಿಯಾಯಿತು. ಬಿಸನಾಳದಲ್ಲಿ ಉಪ್ಪಿನ ಸತ್ಯಾಗ್ರಹವು ಸರಕಾರದ ಕಾಯ್ದೆ ಮುರಿಯುವಂತೆ ಮಾಡಿತು. ಪ್ರಭಾತಪೇರಿ ಪ್ರಚಾರಾಂದೋಲನಗಳು ಜಾಗೃತಿವುಂಟು ಮಾಡಿದರೆ, ಪಾನ ನಿಷೇಧ ನೈತಿಕ ಶಿಕ್ಷಣವನ್ನು ಒದಗಿಸಿತು. ಸರಕಾರಿ ಕಟ್ಟಡದ ಮೇಲೆ ಧ್ವಜಾ ಹಾರಿಸುವ ಘಟನೆಗಳು ಚಳವಳಿಗಾರರಲ್ಲಿ ದೇಶಪ್ರೇಮವನ್ನುಂಟು ಮಾಡಿತು. ಸರಕಾರಿ ಅಧಿಕಾರಿಗಳ ದೇಶವಿರೋಧಿ ನೀತಿಗೆ ಜಿಲ್ಲೆಯ ಜನರು ಜಗ್ಗದೆ ಚಳವಳಿಯನ್ನು ಮುಂದುವರೆಸಿದರು.

ಅಡಿ ಟಿಪ್ಪಣಿಗಳು

೧. ಪ್ರಧಾನ ಗ.ಪ. (ಮೂಲ), ರಿಸಬೂಡ (ಅನು), ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಮರಾಠಿ ಕನ್ನಡ ಸ್ನೇಹವರ್ಧಕ ಕೇಂದ್ರ, ಪುಣೆ. ೧೯೯೪, ಪುಟ ಸಂಖ್ಯೆ. ೧೨೬.

೨. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೯.

೩. ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ , ದಿನಾಂಕ ೩೧-೦೧-೧೯೩೦, ಪುಟ ಸಂಖ್ಯೆ ೪.

೪. ಹಾಲಪ್ಪ. ಜಿ.ಎಸ್. ಹಿಸ್ಟರಿ ಆಫ್ ಫ್ರೀಡಂ ಮೂವಮೆಂಟ ಇನ್ ಕರ್ನಾಟಕ, ಸಂಪುಟ ೨, ಗೌರ್ನಮೆಂಟ್ ಆಫ್ ಮೈಸೂರು, ಬೆಂಗಳೂರು, ೧೯೬೪, ಪುಟ ಸಂಖ್ಯೆ ೧೭೪.

೫. ವಡವಿ ರಾಮಚಂದ್ರ, ಕಾಂಗ್ರೆಸ ರನ್ನ ಮಹೋತ್ಸವ, ೧೯೪೮, ಪುಟ ಸಂಖ್ಯೆ ೨೭.

೬. ಬಿಪಿನ್ ಚಂದ್ರ (ಮೂಲ), ಗೋಪಾಲರಾವ್ ಎಚ್.ಎಸ್. (ಅನು), ಅಧುನಿಕ ಭಾರತ ಇತಿಹಾಸ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪, ಪುಟ ಸಂಖ್ಯೆ ೩೭೮.

೭. ಅದೇ, ಪುಟ ಸಂಖ್ಯೆ ೩೭೮.

೮. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೧೪.

೯. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೧-೦೫-೧೯೩೦, ಪುಟ ಸಂಖ್ಯೆ ೯.

೧೦. ಅದೇ, ಪುಟ ಸಂಖ್ಯೆ ೯.

೧೧. ಅದೇ, ಪುಟ ಸಂಖ್ಯೆ ೧೦.

೧೨. ಕನ್ನಡಿಗ , ವಾರ ಪತ್ರಿಕೆ, ಬಾಗಲಕೋಟ, ದಿನಾಂಕ ೨-೭-೧೯೩೦, ಪುಟ ಸಂಖ್ಯೆ ೧

೧೩. ಅದೇ, ಪುಟ ಸಂಖ್ಯೆ ೨.

೧೪. ಅದೇ, ಪುಟ ಸಂಖ್ಯೆ ೧.

೧೫. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೮-೭-೧೯೩೦, ಪುಟ ಸಂಖ್ಯೆ ೨.

೧೬. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೩-೮-೧೯೩೦, ಪುಟ ಸಂಖ್ಯೆ ೮.

೧೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೬೮.

೧೮. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೬-೫-೧೯೩೦, ಪುಟ ಸಂಖ್ಯೆ ೩.

೧೯. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೦-೫-೧೯೩೦, ಪುಟ ಸಂಖ್ಯೆ ೧.

೨೦. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೨-೫-೧೯೩೦, ಪುಟ ಸಂಖ್ಯೆ ೧,೨.

೨೧. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೫-೫-೧೯೩೦, ಪುಟ ಸಂಖ್ಯೆ ೧.

೨೨. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೩-೪-೧೯೩೦, ಪುಟ ಸಂಖ್ಯೆ ೮.

೨೩. ಸಂದರ್ಶನ, ಮಹಾದೇವಪ್ಪ ಕತ್ತಿ ಕುಟುಂಬ ಸದಸ್ಯರು, ಗಲಗಲಿ, ತಾ.ಬೀಳಗಿ ೨೦-೩-೨೦೧೩.

೨೪. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೩-೬-೧೯೩೦, ಪುಟ ಸಂಖ್ಯೆ ೩.

೨೫. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೬-೪-೧೯೩೦, ಪುಟ ಸಂಖ್ಯೆ ೭.

೨೬. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೩೦.

೨೭. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ ದಿನಾಂಕ ೧೮-೧೨-೨೦೧೩.

೨೮. ಅದೇ,

೨೯. ಸಂದರ್ಶನ, ಸಂಗಪ್ಪ ನಾಯನೇಗಲಿ, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೧೯-೧೨-೨೦೧೩.

೩೦. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೫೬೨.

೩೧. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೧-೧೨-೧೯೩೦, ಪುಟ ಸಂಖ್ಯೆ ೪.

೩೨. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೬೧೯.

೩೩. ಅದೇ, ಪುಟ ಸಂಖ್ಯೆ ೫೭೨.

೩೪. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೧-೫-೧೯೩೦, ಪುಟ ಸಂಖ್ಯೆ ೧೦.

೩೫. ಕನ್ನಡಿಗ , ವಾರಪತ್ರಿಕೆ, ಬಾಗಲಕೋಟ, ದಿನಾಂಕ ೪-೬-೧೯೩೦, ಪುಟ ಸಂಖ್ಯೆ ೩.

೩೬. ಅದೇ, ಪುಟ ಸಂಖ್ಯೆ ೪.

೩೭. ಸೂರ್ಯನಾಥ ಕಾಮತ (ಸಂ), ಧಾರವಾಡ ಜಿಲ್ಲಾ ಗ್ಯಾಸೆಟಿಯರ, ಬೆಂಗಳೂರು, ೧೯೬೫, ಪುಟ ಸಂಖ್ಯೆ ೨೦.

೩೮. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ, ೨೪-೭-೧೯೩೦, ಪುಟ ಸಂಖ್ಯೆ ೫.

೩೯. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೬೮.

೪೦. ಶರಣ ಸಂದೇಶ, ವಾರಪತ್ರಿಕೆ, ಆಲಮಟ್ಟಿ, ದಿನಾಂಕ ೧೦-೭-೧೯೩೦, ಪುಟ ಸಂಖ್ಯೆ ೪.

೪೧. ಶರಣ ಸಂದೇಶ, ವಾರಪತ್ರಿಕೆ, ಆಲಮಟ್ಟಿ, ದಿನಾಂಕ ೨೬-೭-೧೯೩೦, ಪುಟ ಸಂಖ್ಯೆ ೨.

೪೨. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೭-೭-೧೯೩೦, ಪುಟ ಸಂಖ್ಯೆ ೪.

೪೩. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೩-೭-೧೯೩೦, ಪುಟ ಸಂಖ್ಯೆ ೩.

೪೪. ಅದೇ, ಪುಟ ಸಂಖ್ಯೆ ೧.

೪೫. ಮಡಿವಾಳಪ್ಪ ಪಟ್ಟಣಶೆಟ್ಟಿ, ನಾನು ನಡೆದು ಬಂದ ದಾರಿ, ಚಿತ್ತರಗಿ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೮೮. ಈ ಗ್ರಂಥಕ್ಕೆ ಪುಟ ಸಂಖ್ಯೆ ಇಲ್ಲ.

೪೬. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೫-೬-೧೯೩೦, ಪುಟ ಸಂಖ್ಯೆ ೭.

೪೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ೧೨೪೨.

೪೮. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦, ಪುಟ ಸಂಖ್ಯೆ ೧೬೬.

೪೯. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೪-೭-೧೯೩೦, ಪುಟ ಸಂಖ್ಯೆ ೩.

೫೦. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ, ೩೦-೪-೧೯೩೦, ಪುಟ ಸಂಖ್ಯೆ ೨.

೫೧. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦, ಪುಟ ಸಂಖ್ಯೆ ೧೬೬.

೫೨. ಅದೇ, ಪುಟ ಸಂಖ್ಯೆ ೧೬೬.

೫೩. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೬-೭-೧೯೩೦, ಪುಟ ಸಂಖ್ಯೆ ೪.

೫೪. ಮಡಿವಾಳಪ್ಪ ಪಟ್ಟಣಶೆಟ್ಟಿ, ನಾನು ನಡೆದು ಬಂದ ದಾರಿ, ಚಿತ್ತರಗಿ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೮೮. ಈ ಗ್ರಂಥಕ್ಕೆ ಪುಟ ಸಂಖ್ಯೆ ಇಲ್ಲ.

೫೫. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೮-೬-೧೯೩೦, ಪುಟ ಸಂಖ್ಯೆ ೫.

೫೬. ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ ದಿನಾಂಕ. ೭-೯-೧೯೩೦, ಪುಟ ಸಂಖ್ಯೆ ೮.

೫೭. ಅದೇ, ಪುಟ ಸಂಖ್ಯೆ ೮

೫೮. ಮಡಿವಾಳಪ್ಪ ಪಟ್ಟಣಶೆಟ್ಟಿ, ನಾನು ನಡೆದು ಬಂದ ದಾರಿ, ಚಿತ್ತರಗಿ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೮೮. ಈ ಗ್ರಂಥಕ್ಕೆ ಪುಟ ಸಂಖ್ಯೆ ಇಲ್ಲ.

೫೯. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೦-೭-೧೯೩೦, ಪುಟ ಸಂಖ್ಯೆ ೪.

೬೦. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೨-೩-೧೯೩೧, ಪುಟ ಸಂಖ್ಯೆ ೮.

೬೧. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೦-೧-೧೯೩೧, ಪುಟ ಸಂಖ್ಯೆ ೫.

೬೨. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೮-೫-೧೯೩೦, ಪುಟ ಸಂಖ್ಯೆ ೬.

೬೩. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೩೦-೪-೧೯೩೦, ಪುಟ ಸಂಖ್ಯೆ ೮.

೬೪. ಅದೇ, ಪುಟ ಸಂಖ್ಯೆ ೧೦.

೬೫. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೬-೬-೧೯೩೦, ಪುಟ ಸಂಖ್ಯೆ ೨.

೬೬. ವಡವಿ ರಾಮಚಂದ್ರ, ಖಾದಿ ಇತಿಹಾಸ, ಕರ್ನಾಟಕ ರಾಜ್ಯ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ೧೯೮೩ ಪುಟ ಸಂಖ್ಯೆ ೨.

೬೭. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೨-೬-೧೯೩೦, ಪುಟ ಸಂಖ್ಯೆ ೪.

೬೮. ಶರಣ ಸಂದೇಶ, ವಾರಪತ್ರಿಕೆ, ಆಲಮಟ್ಟಿ, ದಿನಾಂಕ ೨೨-೭-೧೯೩೦, ಪುಟ ಸಂಖ್ಯೆ ೨.

೬೯. ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ ದಿನಾಂಕ. ೨೮-೮-೧೯೩೦, ಪುಟ ಸಂಖ್ಯೆ ೪.

೭೦. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೩೦-೮-೧೯೩೦, ಪುಟ ಸಂಖ್ಯೆ ೬.

೭೧. ವಡವಿ ರಾಮಚಂದ್ರ, ಕಾಂಗ್ರೆಸ ರನ್ನಮಹೋತ್ಸವ, ೧೯೪೮, ಪುಟ ಸಂಖ್ಯೆ ೪೮.

೭೨. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೧, ಪುಟ ಸಂಖ್ಯೆ ೧೧೨.

೭೩. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೨೭-೧೨೨೮.

೭೪. ವಡವಿ ರಾಮಚಂದ್ರ, ಕಾಂಗ್ರೆಸ ರನ್ನಮಹೋತ್ಸವ, ೧೯೪೮, ಪುಟ ಸಂಖ್ಯೆ ೪೬.

೭೫. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೫-೬-೧೯೩೦, ಪುಟ ಸಂಖ್ಯೆ ೮.

೭೬. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೮-೬-೧೯೩೦, ಪುಟ ಸಂಖ್ಯೆ ೮.

೭೭. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೧೪-೭-೧೯೩೦, ಪುಟ ಸಂಖ್ಯೆ ೨.

೭೮. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೧-೭-೧೯೩೦, ಪುಟ ಸಂಖ್ಯೆ ೧.

೭೯. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ದಿನಾಂಕ ೨೬-೭-೧೯೩೦, ಪುಟ ಸಂಖ್ಯೆ ೨.

೮೦. ಅದೇ, ಪುಟ ಸಂಖ್ಯೆ ೩.

ಅಧ್ಯಾಯ ೮

ಅಸ್ಪೃಶ್ಯತೆ ನಿವಾರಣಾ ಚಳವಳಿ ಮತ್ತು ವೈಯಕ್ತಿಕ ಸತ್ಯಾಗ್ರಹ

೮.೧ ಅಸ್ಪೃಶ್ಯತೆ ನಿವಾರಣಾ ಚಳವಳಿಗಳು

೮.೧.೧ ಅಸ್ಪೃಶ್ಯತೆ ನಿವಾರಣೆಗಾಗಿ ಬಿಜಾಪೂರಕ್ಕೆ ಗಾಂಧಿ ಭೇಟಿ.

- ಅಸ್ಪೃಶ್ಯತಾ ನಿವಾರಣಾ ಸಮ್ಮೇಳನ
- ಹರಿಜನ ಪ್ರವಾಸ

೮.೧.೨. ಹರ್ಡೇಕರ ಮಂಜಪ್ಪನವರ ಆದಿ ಜನ ಸುಧಾರಣಾ ಕ್ರಮಗಳು

೮.೧.೩. ಕೌಜಲಗಿ ಹಣಮಂತರಾವ ಅವರ ಅಸ್ಪೃಶ್ಯತೆ ನಿವಾರಣಾ ಕ್ರಮಗಳು

೮.೧.೪. ಅಸ್ಪೃಶ್ಯತೆ ನಿವಾರಣೆಯ ಕಾರ್ಯಗಳು

೮.೨ ವೈಯಕ್ತಿಕ ಸತ್ಯಾಗ್ರಹ

೮.೨.೧ ರಾಷ್ಟ್ರಮಟ್ಟದಲ್ಲಿ

೮.೨.೨ ಬಾಗಲಕೋಟ ಜಿಲ್ಲೆಯಲ್ಲಿ ವೈಯಕ್ತಿಕ ಸತ್ಯಾಗ್ರಹ

ಅಧ್ಯಾಯ ೮

ಅಸ್ಪೃಶ್ಯತೆ ನಿವಾರಣಾ ಚಳವಳಿ ಮತ್ತು ವೈಯಕ್ತಿಕ ಸತ್ಯಾಗ್ರಹ

೮.೧. ಅಸ್ಪೃಶ್ಯತೆ ನಿವಾರಣಾ ಚಳವಳಿಗಳು

ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಅಂಟಿದ ಬಹುದೊಡ್ಡ ಅಸಮಾನತೆಯ ಪದ್ಧತಿಯಾಗಿದೆ. ಆರಂಭದಲ್ಲಿ ವ್ಯಕ್ತಿಯ ವೃತ್ತಿಗಳಿಗೆ ತಕ್ಕಂತೆ ವರ್ಣಾಶ್ರಮಗಳು ಆರಂಭಗೊಂಡವು. ಕಾಲಾಂತರದ ನಂತರ ಪುರೋಹಿತಶಾಹಿಗಳ ಸ್ವಾರ್ಥದಿಂದ ಜಾತಿ ವ್ಯವಸ್ಥೆಗಳಾಗಿ ಪರಿಣಮಿಸಿದವು. ಶತ ಶತಮಾನಗಳಿಂದಲು ಶೂದ್ರ ಜನಾಂಗವನ್ನು ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಅಂದಿನಿಂದ ಪ್ರಾರಂಭವಾದ ದಲಿತ ಜನರ ಶೋಷಣೆ ಇಂದಿಗೂ ಬಗೆಹರಿಯದಂತಾಗಿದೆ. ಅಷ್ಟರ ಮಟ್ಟಿಗೆ ಜನಸಮುದಾಯದಲ್ಲಿ ಜಾತೀಯತೆ ಬೇರೂರಿದೆ.

ಮಹಾವೀರ, ಗೌತಮಬುದ್ಧ, ಕಬೀರ, ರಾಮಾನುಜಾಚಾರ್ಯರು, ಗುರುನಾನಕ, ಸಮರ್ಥ ರಾಮದಾಸರು ಮುಂತಾದವರು ಅಸ್ಪೃಶ್ಯತೆಯ ವಿರುದ್ಧ ಹೋರಾಡಿ ಸಮಾಜ ಸುಧಾರಣೆಗೆ ಕಾರಣಿಕರ್ತರಾದರು. ಆಧುನಿಕ ಭಾರತದಲ್ಲಿ ರಾಜಾರಾಮ ಮೋಹನರಾಯರು ಬ್ರಹ್ಮಸಮಾಜ ಸ್ಥಾಪಿಸುವ ಮೂಲಕ ದಯಾನಂದ ಸರಸ್ವತಿಯವರ ಆರ್ಯ ಸಮಾಜದ ಮೂಲಕ ಅಸ್ಪೃಶ್ಯತೆಯನ್ನು ತಡೆಗಟ್ಟಲು ಪ್ರಯತ್ನಿಸಿದರು. ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಗಾಂಧೀಜಿಯವರು ಸ್ವರಾಜ್ಯಕ್ಕೆ ಅಸ್ಪೃಶ್ಯತೆ ತಡೆಯಾಗಿದೆ ಎಂದು ಮನಗಂಡು ರಾಷ್ಟ್ರೀಯ ಚಳವಳಿಯ ಜೊತೆಯಲ್ಲಿಯೇ ಹರಿಜನ ಚಳವಳಿಯನ್ನು ಆರಂಭಿಸಿದರು. ದೇಶಾದ್ಯಂತ ಸಂಚರಿಸಿ ಜಾಗೃತಿಗೊಳಿಸಿದರು, ಇದಕ್ಕೂ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ಅದರಲ್ಲಿಯೂ ಅಖಂಡ ವಿಜಾಪೂರ ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ವಿರುದ್ಧ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿಯೇ ತೀವ್ರವಾಗಿ ಪ್ರತಿಭಟಿಸಿದರು. ಅಸ್ಪೃಶ್ಯರೊಡನೆ ಸಹಭೋಜನ ಮಾಡುವದರ ಮೂಲಕ ಸಮಾನತೆಯನ್ನು ಸಾರಿದರು.

೧೯೧೭ರ ಕಲ್ಕತ್ತಾ ಕಾಂಗ್ರೆಸ ಅಧಿವೇಶನವು ಹರಿಜನ ಚಳವಳಿಯನ್ನು ಕಾಂಗ್ರೆಸ್ಸಿನ ಒಂದು ಭಾಗವೆಂದು ಅಂಗೀಕರಿಸಿತು. ಗಾಂಧೀಜಿಯವರು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ದೇಶಾದ್ಯಂತ ಹರಿಜನ ಪ್ರವಾಸ ಕೈಗೊಂಡರು ಹಾಗೂ ತಮ್ಮ ಭಾಷಣಗಳ ಮೂಲಕ ಬರವಣಿಗೆಯ ಮೂಲಕ ಜಾಗೃತಿ ಮೂಡಿಸತೊಡಗಿದರು. ಅಸ್ಪೃಶ್ಯರಿಗೆ 'ಹರಿಜನ' ಎಂದು ಕರೆದು ಅದೇ ಹೆಸರಿನಿಂದ ಪತ್ರಿಕೆಯನ್ನು ಆರಂಭಿಸಿದರು.

೮.೧.೧ ಅಸ್ಪೃಶ್ಯತೆ ನಿವಾರಣೆಗಾಗಿ ವಿಜಾಪೂರಕ್ಕೆ ಗಾಂಧೀಜಿಯವರ ಭೇಟಿ

ಅಸ್ಪೃಶ್ಯತಾ ನಿವಾರಣಾ ಸಮ್ಮೇಳನ

"ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮ್ಮೇಳನಕ್ಕೆ ಗಾಂಧೀಜಿಯವರು ವಿಜಾಪೂರಕ್ಕೆ ಬಂದಾಗ ಅವರನ್ನು ಅಸ್ಪೃಶ್ಯತಾ ನಿವಾರಣಾ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಲಾಯಿತು. ಅವರು ಈ ಸಮ್ಮೇಳನಕ್ಕೆ ಬಂದವರೇ 'ಈ ಸಭೆಯಲ್ಲಿ ಯಾರಾದರೂ ಅಸ್ಪೃಶ್ಯರಿದ್ದಾರೆಯೇ?' ಎಂದು ಕೇಳಿದರು. 'ಯಾರು ಇಲ್ಲ'ವೆಂದು ಉತ್ತರ ದೊರೆತ ಕೂಡಲೇ, ಈ ಸಮ್ಮೇಳನದಿಂದ ಏನು ಪ್ರಯೋಜನವಿಲ್ಲ ಎಂದು ಹೇಳಿ ಹೊರಟು ಹೋದರು. ಸಮ್ಮೇಳನದ ಪ್ರವರ್ತಕರು ಮಧ್ಯಾಹ್ನ ಮತ್ತೆ ಸಭೆ ಕೂಡಿಸಿ ಊರೊಳಗಿನ ಅಂತ್ಯಜರನ್ನು ಕರೆದನಂತರ ಗಾಂಧೀಜಿಯವರು ಸಭೆಯ ಅಧ್ಯಕ್ಷತೆ ವಹಿಸಿಕೊಂಡರು."[೧]

ಸಭೆಯನ್ನು ಉದ್ದೇಶಿಸಿ ಗಾಂಧೀಜಿಯವರು 'ನಾನು ಕಾಂಗ್ರೆಸನ ಠರಾವು ಓದಿದಾಗ ಅದು ಅಂತ್ಯಜನರಿಗೆ ಸಹಕಾರಿಯಾಗುತ್ತದೆ ಎಂದು ನಂಬಿದ್ದೆನು. ಆದರೆ ಇಲ್ಲಿ ಅವರಾರೂ ಇಲ್ಲ. ಠರಾವು ಪಾಸು ಮಾಡಿದ್ದರ ಉದ್ದೇಶವಾದರು ಏನು ? ಈ ಸಮ್ಮೇಳನ ಅಂತಹ ಠರಾವುಗಳನ್ನು ಪಾಸು ಮಾಡುವ ಹಕ್ಕನ್ನು ಹೊಂದಿಲ್ಲ... ವರ್ಣಾಶ್ರಮವನ್ನು ನೀವು ಗಮನಿಸಿದಾಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಕೊನೆಗೆ ತಮ್ಮ ಧರ್ಮವನ್ನು ಬಿಡುತ್ತಾರೆ. ನಾವು ಸ್ವರಾಜ್ಯ ಪಡೆಯಲು ಇನ್ನು ಸಿದ್ಧರಿಲ್ಲ. ಅಂತ್ಯಜರಿಗೆ ಯಾರು ಸ್ವರಾಜ್ಯ ನೀಡುತ್ತಾರೆ ? ಯಾರು ಸ್ವರಾಜ್ಯಕ್ಕೆ ಬೇಡಿಕೆ ಇಡುತ್ತಾರೆಯೊ ಅವರು ಮತ್ತೊಬ್ಬರಿಗೆ ಮೊದಲು ಸ್ವರಾಜ್ಯ ನೀಡಬೇಕು. ಯಾರು ನ್ಯಾಯಕ್ಕಾಗಿ ಪರಿತಪಿಸುವರೋ ಅವರು ಮೊದಲು ಮತ್ತೊಬ್ಬರಿಗೆ ನ್ಯಾಯ ದೊರಕಿಸಿ ಕೊಡಬೇಕೆಂಬ ನಿಯಮವಿದೆ. ನಾನು ನಿಮ್ಮಲ್ಲಿ ಇಂತಹ ಡಾಂಭಿಕ ಆಚರಣೆ ಬಿಡುವಂತೆ ಕೇಳಿಕೊಳ್ಳುತ್ತೇನೆ[೨] ಎಂದು ಮಾತನಾಡಿದರು. ಜಿಲ್ಲೆಯ ಜನರು ಅಸ್ಪೃಶ್ಯತೆ ಆಚರಿಸದಂತೆ ಸೂಚಿಸಿದರು.

ಹರಿಜನ ಪ್ರವಾಸ

ಮಹಾತ್ಮ ಗಾಂಧಿಯವರು ಹರಿಜನರ ಏಳಿಗೆಗಾಗಿ ಕರ್ನಾಟಕದಲ್ಲಿ ಪ್ರವಾಸದಲ್ಲಿದ್ದಾಗ ೮ ಮಾರ್ಚ್ ೧೯೩೪ ರಂದು ಮುಂಜಾನೆ ೧೧ ಗಂಟೆಗೆ ವಿಜಾಪೂರಕ್ಕೆ ಭೇಟಿ ನೀಡಿದರು. ೫೦ ಮಹಿಳಾ ಸ್ವಯಂ ಸೇವಕರು ಸೇರಿದಂತೆ ಸುಮಾರು ೧೦೦ ಜನರು ಮಹಾತ್ಮರನ್ನು ಬರಮಾಡಿಕೊಂಡರು. ಮಧ್ಯಾಹ್ನ ವೇಳೆಗೆ ಕಾಂಗ್ರೆಸ ಚಳವಳಿಗಾರರಿಗೆ, ವಕೀಲರಿಗೆ ವಿಜಾಪೂರ ಪೌರಸಭೆಯ ಮುಸಲ್ಮಾನ ಅಧ್ಯಕ್ಷರಿಗೆ, ಸನಾತನ ಪಂಡಿತರಿಗೆ ಸಂದರ್ಶನ ನೀಡಿದರು. ಸನಾತನಿಗಳಾದ ಅನಂತಶಯನಾಚಾರ್ಯ ಡಂಬಳ, ಶ್ರೀನಿವಾಸಾಚಾರ್ಯ ಬುರ್ಲಿ, ತಮ್ಮಣ್ಣಾಚಾರ್ಯ ಕಟ್ಟಿ ಮೊದಲಾದವರು ಗಾಂಧಿಯವರ ಜೊತೆ

ಅಸ್ಪೃಶ್ಯತೆಗೆ ಶಾಸ್ತ್ರಾಧಾರವಿದೆ ಎಂದು ಚರ್ಚೆ ಆರಂಭಿಸಿದರು ಹಾಗೂ ಶಾಸ್ತ್ರೀಯ ದೃಷ್ಟಿಯಿಂದ ಹರಿಜನ ಸಮಸ್ಯೆಯನ್ನು ಚರ್ಚಿಸಬೇಕೆಂದರು. ಶೃತಿ ಸ್ಮೃತಿಗಳ ಏಕವಾಕ್ಯತೆ ಇಲ್ಲದಿರುವದನ್ನು ಗಾಂಧಿಯವರಿಗೆ ತೋರಿಸಿಕೊಟ್ಟರು. ಸನಾತನಿಗಳ ಪರವಾಗಿ ಸುಧಾರಕರನ್ನು ಒಳಗೊಂಡ ಒಂದು ಪ್ರಾತಿನಿಧಿಕ ಪರಿಷತ್‌ನ್ನು ಕರೆಯಬೇಕು ಅದರಲ್ಲಿ ತಾವು ಭಾಗವಹಿಸುವದಾಗಿ ತಿಳಿಸಿದರು. ಗಾಂಧೀಜಿಯವರು ತಾವು ಪಂಡಿತರಲ್ಲ ಶಾಸ್ತ್ರ ಪುರಾಣಗಳನ್ನು ಪೂರ್ಣವಾಗಿ ಅಭ್ಯಾಸ ಮಾಡಿಲ್ಲ, ಆದರೆ ಹರಿಜನ ಸಮಸ್ಯೆಯು ಯಾವ ಶಾಸ್ತ್ರ ಪುರಾಣಕ್ಕೆ ಸಮ್ಮತವಾದುದಲ್ಲ. ಈಗ ಅಸ್ಪೃಶ್ಯತೆಯು ಸ್ವರಾಜ್ಯಕ್ಕೆ ಅಡ್ಡಗಾಲಾಗಿ ನಿಂತಿದೆ ಎಂದು ಅರುಹಿದರು.”[೩]

ಛತ್ರೆ ಥೇಯಟರದಲ್ಲಿ ಶಂಕರಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ಜಿಲ್ಲಾ ಹರಿಜನ ಪರಿಷತ್ತು ಸಂಘಟಿಸಲಾಯಿತು. ಆಗ ಶಂಕರಗೌಡ ಪಾಟೀಲರು ಜಿಲ್ಲಾ ಹರಿಜನ ಸಂಘದ ಅಧ್ಯಕ್ಷರಾಗಿದ್ದರು. ೮೦೦ ಜನ ಸಭೆಯಲ್ಲಿ ಭಾಗವಹಿಸಿದ್ದರು. ಗಾಂಧೀಜಿಯವರು ಹರಿಜನರಿಗೂ ಹಾಗೂ ಸುವರ್ಣಿಯರಿಗೂ ತಮ್ಮ ಭಾಷಣದಲ್ಲಿ ಬುದ್ಧಿವಾದ ಹೇಳಿದರು. ಕೆಲವರು ಹರಿಜನ ಎಂಬ ಹೆಸರಿಗೆ ತಕರಾರು ಮಾಡಿದ ಪ್ರಶ್ನೆಯನ್ನು ಮಹಾತ್ಮರು ಎತ್ತಿಕೊಂಡು ಹರಿಜನ ಎಂಬ ಹೆಸರಿನ ಬಗ್ಗೆ ವ್ಯರ್ಥವಾಗಿ ಬಡಿದಾಡುವದು ಬೇಡ. ಅವರಿಗೆ ಹರಿಜನವೆನ್ನಿ, ಶಂಕರಜನವೆನ್ನಿ, ಶಿವಜನವೆನ್ನಿ ಯಾವ ಜನವೇ ಅನ್ನಿ ಅವರು ದೇವರ ಮಕ್ಕಳು, ನಮ್ಮ ಸರಿಸಮಾನರು, ಅಣ್ಣ ತಮ್ಮಂದಿರು ಮಾನವೀಯತೆಯಿಂದ ನಡೆದುಕೊಳ್ಳಬೇಕು ವೀರಶೈವರು ಎಲ್ಲರೊಂದಿಗೆ ಪ್ರೇಮದಿಂದ ನಡೆದು ತಾಳ್ಮೆಯಿಂದ ಇರಬೇಕೆಂದು ಬುದ್ಧಿವಾದ ಹೇಳಿ ಹದಿನೈದು ನಿಮಿಷಗಳ ಕಾಲ ಮಾತನಾಡಿದರು. ಹರಿಜನ ಒಳಪಡಂಗಡಗಳಲ್ಲಿಯ ಪರಸ್ಪರ ಅಸ್ಪೃಶ್ಯತೆ ನಿಲ್ಲಬೇಕೆಂದೂ ಸಾರ್ವಜನಿಕ ಜಲಾಶಯಗಳಲ್ಲಿ ಎಲ್ಲರಿಗೂ ಸಮಾನ ಹಕ್ಕು ಇರಬೇಕೆಂದು ಸತ್ತ ದನದ ಮಾಂಸ ತಿನ್ನಬಾರದೆಂದು ಹೆಂಡ ಕುಡಿಯಬಾರದೆಂದು ಪರಿಷತ್ತು ತೀರ್ಮಾನಿಸಿತು.

“ಸಾಯಂಕಾಲ ಎಡ್ವರ್ಡ ಹಾಲಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ೮೦೦೦ ಜನರು ನೆರೆದಿದ್ದರು. ಅವರಲ್ಲಿ ೫೦೦ ಜನ ಮಹಿಳೆಯರು ಇದ್ದರು. ಗಾಂಧಿಯವರಿಗೆ ನಗರ ಸಭೆಯ ಪರ, ಜಿಲ್ಲಾ ಲೋಕಲ್ ಬೋರ್ಡಿನ ಪರ, ಹರಿಜನ ಸಂಘದ ಪರ, ಇಲಕಲ್ಲ ದೇವಾಂಗ ಸಮಾಜದ ಪರ ಭಿನ್ನವತ್ತಳೆಗಳನ್ನು ಅರ್ಪಿಸಲಾಯಿತು. ಹರಿಜನ ನಿಧಿಗಾಗಿ ೧೯೮೨ ರೂಪಾಯಿಗಳನ್ನು ಅರ್ಪಿಸಲಾಯಿತು. ನಂತರ ಗಾಂಧೀಜಿವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಅಸ್ಪೃಶ್ಯತಾ ನಿವಾರಣಾ ಚಳವಳಿ ವಿಶ್ವಭ್ರಾತೃತ್ವದ ದಿಶೆಯಲ್ಲಿ ದೊಡ್ಡ ಆತಂಕ, ಆದ್ದರಿಂದ ಸುವರ್ಣಿಯ ಹಿಂದೂಗಳು ಪ್ರಾಮಾಣಿಕವಾಗಿ ತಾವೇ ತಾವಾಗಿ ಅಸ್ಪೃಶ್ಯತೆಯನ್ನು ಬಿಟ್ಟು ಬಿಟ್ಟರೆ ಮಾನವ ಜಾತಿಯ ಭ್ರಾತೃತ್ವ ಸಾಧನೆಯ ದೃಷ್ಟಿಯಿಂದ ಇತಿಹಾಸದ ಎಲ್ಲ ಕಾಲಕ್ಕಿಂತಲೂ ಈ ಕಾಲ ಅನುಕೂಲವಾಗಬಲ್ಲದು. ಈ ಚಳವಳಿಯು ರಾಜಕೀಯ ಉದ್ದೇಶವಾಗಿರದೇ ಕೇವಲ ಆತ್ಮಶುದ್ಧಿಯ ಚಳವಳಿಯಾಗಿದೆ. ಇಡೀ ಮಾನವ ಕುಟುಂಬದಲ್ಲಿ ಹಿಂದೂಗಳು ಒಂದು ಶಾಖೆ. ಅದಕ್ಕೆ ಅಸ್ಪೃಶ್ಯತೆಯ ಹುಳ ಹಿಡಿದಿದ್ದರೆ ಆ ಕೊಂಬೆ ಒಣಗಿ

ಕಡಿಮೆ ಬೀಳುವದು ಖಂಡಿತ. ಒಂದು ವೇಳೆ ಅಸ್ಪೃಶ್ಯತೆಯನ್ನು ಕಳೆದುಕೊಂಡು ಈ ಸಮಾಜ ಅಭಿವೃದ್ಧಿಗೊಂಡರೆ ಇಡೀ ಮಾನವ ಕುಟುಂಬದ ಆರೋಗ್ಯಕ್ಕೆ ಸಾಧಕ. ಆದ್ದರಿಂದಲೇ ತಾವು ಇದನ್ನು ಧಾರ್ಮಿಕ ಚಳವಳಿ ಎಂದು ಕರೆದದ್ದು ಆ ಕಾರ್ಯಕ್ಕೆ ಇಡೀ ಜಗತ್ತಿನ ನೆರವು ಅಗತ್ಯ ಎಂದು ಹೇಳಿದರು."[೪]

ವಿಜಾಪೂರದಲ್ಲಿ ಗಾಂಧೀಜಿಯವರಿಗೆ ಹರಿಜನ ದತ್ತಿನಿಧಿಗಾಗಿ ಹಣಕೂಡಿಸಿ ಕೊಡದೆ ಅನೇಕರು ತಮ್ಮಲ್ಲಿದ್ದ ಆಭರಣಗಳನ್ನು ನೀಡಿದರು. ಮಹಿಳೆಯರು ತಮ್ಮ ಕೊರಳಲ್ಲಿನ ಸರ ಹಾಗೂ ಕೈಬಳೆಗಳನ್ನು ದತ್ತಿನಿಧಿಗೆ ನೀಡಿದರು. "ಮುಧೋಳ ತಾಲೂಕಿನ ಮಂಟೂರು ಗ್ರಾಮದ ಸೀತಾಬಾಯಿ ತಿಮಸಾನಿ ಎಂಬ ಮಹಿಳೆ ತನ್ನ ಕೈಯಲ್ಲಿದ್ದ ಐದು ತೊಲೆ ತೂಕದ ಬಂಗಾರದ ಬಳೆಗಳನ್ನು ಗಾಂಧಿಜೀಯವರಿಗೆ ಅರ್ಪಿಸಿದಳು. ಗಾಂಧಿಯವರು ಸೀತಾಬಾಯಿಯನ್ನು ಕರೆದು 'ಈಗ ಬಂಗಾರದ ಬಳೆ ಕೊಟ್ಟಿರುವ ನೀನು ಮುಂದೆ ನಿನ್ನ ಪತಿಗೆ ಬಳೆಬೇಕೆಂದು ಕೇಳಬಾರದು' ಎಂದು ಹೇಳಿದಾಗ ಸೀತಾಬಾಯಿ 'ನಾನು ಎಂದೂ ನನ್ನ ಗಂಡನಿಗೆ ಬಳೆಬೇಕೆಂದು ಕೇಳುವದಿಲ್ಲ'ವೆಂದು ವಚನ ನೀಡಿದಳು".[೫] ಹೀಗೆ ಹರಿಜನರ ಸಮಾನತೆಗಾಗಿ ಗಾಂಧಿಜೀಯವರು ಜನರ ಮನಸ್ಸನ್ನು ಬದಲಾಯಿಸಲು ಹೋರಾಟವನ್ನೆ ಮಾಡಿದರು.

೮.೧.೨ ಹರ್ಡೇಕರ ಮಂಜಪ್ಪ ಮತ್ತು ಆದಿಜನ ಸುಧಾರಣೆ

ಹರ್ಡೇಕರ ಮಂಜಪ್ಪನವರು ಅಸ್ಪೃಶ್ಯತೆಯ ನಿವಾರಣೆಗಾಗಿ ತಮ್ಮದೆಯಾದ ಕೆಲವು ಯೋಚನೆಗಳನ್ನು ಹೊಂದಿದ್ದರು. ಮೊದಲು ಗಾಂಧೀಜಿಯವರು ಅಸ್ಪೃಶ್ಯರನ್ನು ಹರಿಜನ ಎಂದು ಕರೆದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಹರಿಜನ ಎಂದು ಕರೆಯುವ ಬದಲಾಗಿ 'ಆದಿಜನ' ಎಂದು ಕರೆಯಬೇಕೆಂದು ಸೂಚಿಸಿದರು. ಗಾಂಧೀಜಿಯವರು ಹರಿಜನ ಪ್ರವಾಸ ಕೈಗೊಂಡು ಬೆಳಗಾವಿಗೆ ಬಂದಾಗ ಮಂಜಪ್ಪನವರು ಗಾಂಧೀಜಿಯವರಲ್ಲಿ ಅಸ್ಪೃಶ್ಯರನ್ನು ಹರಿಜನ ಎಂದು ಹೆಸರಿಟ್ಟು ಕರೆಯಬೇಡಿ 'ಆದಿಜನ' ಎಂದು ಕರೆಯಬೇಕು ಎಂದು ಕೇಳಿಕೊಂಡರು. ಗಾಂಧೀಜಿಯವರು ನಾವು ಹರಿಜನ ಎಂದು ಕರೆಯುತ್ತೇವೆ ನೀವು ಆದಿಜನ ಎಂದು ಹೇಳಿದರೆ ನನ್ನದೇನು ಅಡ್ಡಿಯಿಲ್ಲ ಎಂದು ಹೇಳುವ ಮೂಲಕ ಆದಿಜನರೆಂದು ಕರೆಯಲು ಸಮ್ಮತಿಸಿದರು.

'ಆದಿಜನ ಸುಧಾರಣೆ ಎಂಬ ಗ್ರಂಥವನ್ನೆ ಮಂಜಪ್ಪನವರು ಬರೆದರು. ಅದರಲ್ಲಿ ಆದಿಜನರೆಂದರೆ ಯಾರು? ಅವರ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿಸಿದರು. ಮಂಜಪ್ಪನವರ ವಿಚಾರದಲ್ಲಿ "ಆದಿ ಜನರೆಂದರೆ ನಾವು ವಾಸವಾಗಿರುವ ಈ ದೇಶದಲ್ಲಿ ಮೊದಲು ಯಾವ ಜನರಿದ್ದರೋ ಅವರ ವಂಶಜರೇ ಈ ದೇಶಕ್ಕೆ ಆದಿಜನರು. ನಾವು ಯಾವ ಜನರನ್ನು ಮುಟ್ಟಿಸಿಕೊಳ್ಳದೆ ದೂರದಲ್ಲಿಟ್ಟಿದ್ದೇವೆಯೋ ಮತ್ತು ಈಗ ಹರಿಜನರೆಂದು ಗಾಂಧಿಜೀಯವರು ಯಾವ ಜನರನ್ನು ಪ್ರೇಮಾದಾರಗಳಿಂದ ಕಾಣುತ್ತಿದ್ದಾರೆಯೋ ಅವರೇ ಈ ದೇಶದ ಮೂಲ ನಿವಾಸಿಗಳ ವಂಶಜರು

ಆದುದರಿಂದ ಅವರೇ ಆದಿಜನರು ಎಂದು ಕರೆದರು.[೬]"

ಅಸ್ಪೃಶ್ಯರನ್ನು ಮುಟ್ಟಿದರೆ ದೋಷವಲ್ಲವೇ ? ಎನ್ನುವವರಿಗೆ ಊರ ಹೊರಗಿರತಕ್ಕವರೆಲ್ಲಾ ಕೀಳು ಕುಲದವರೆಂದು ತಿಳಿಯಬಾರದು ನಾವೇ ಅವರನ್ನು ಹೊರಗಿಟ್ಟಿದ್ದೇವೆ. ಮುಟ್ಟಬಾರದೆಂದು ನಮ್ಮ ಧರ್ಮ ಶಾಸ್ತ್ರದಲ್ಲಿ ಬರೆದುಕೊಂಡೆವು. ಹೀಗಿರುವಾಗಿ ಅವರನ್ನು ಮುಟ್ಟಿದರೆ ಹೇಗೆ ದೋಷವಾಗುತ್ತದೆ ? ಎಂದು ಪ್ರಶ್ನಿಸಿ ಅಸ್ಪೃಶ್ಯ ಆಚರಣೆಯನ್ನು ವಿರೋಧಿಸಿದರು.

ಆದಿಜನರ ಸುಧಾರಣೆಗಾಗಿ ಮಾಡಬೇಕಾದ ೧೧ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ.

ಆದಿಜನರ ಸುಧಾರಣೆಗಾಗಿ ಮಾಡತಕ್ಕ ಕಾರ್ಯಕ್ರಮಗಳು

೧. ಅಸ್ಪೃಶ್ಯತೆಯನ್ನು ಮೊದಲು ತೆಗೆದು ಹಾಕಬೇಕು.

೨. ಬಾವಿ, ಹೊಂಡ, ಮೊದಲಾದ ಜಲಾಶಯಗಳಲ್ಲಿ ಅನ್ಯರಂತೆ ಆದಿಜನರಿಗೆ ಪ್ರವೇಶಕ್ಕೆ ಅವಕಾಶವನ್ನು ನೀಡಬೇಕು.

೩. ವಿದ್ಯಾಶಾಲೆ, ಧರ್ಮಶಾಲೆ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ಆದಿಜನರಿಗೆ ಅನ್ಯರಂತೆ ಕೂಡಿರಲು ಅವಕಾಶವಿರಬೇಕು.

೪. ಆದಿಜನರ ಕೇರಿಗಳನ್ನು ಬೇರೆಯಾ ಗಿಡುವದನ್ನು ಕಡಿಮೆ ಮಾಡಬೇಕು.

೫. ದನಗಳನ್ನು ಕೊಯ್ಯುವ, ಚರ್ಮಕ್ಕೆ ಹದಹಾಕುವ, ಅಶುಚಿಯಾಗತಕ್ಕ ಕಾರ್ಯಗಳಿಗಾಗಿಯೇ ಊರ ಹೊರಗೆ ಕೆಲವು ಮನೆಗಳನ್ನು ನಗರಸಭೆಯವರಾಗಲಿ, ಆದಿಜನ ಸುಧಾರಕರಾಗಲಿ ಕಟ್ಟಿಕೊಡಬೇಕು.

೬. ಬೇರೆ ಕೆಲಸ ಮಾಡುವವರೆಲ್ಲಾ ಆದಷ್ಟು ಜನ ಬಳಕೆಯ ಸ್ಥಳಗಲ್ಲಿಯೇ ವಾಸಿಸುವಂತೆ ನಗರ ಸಭೆಯವರು ಒಳ್ಳೆಯ ಸ್ಥಳಗಳನ್ನು ಏರ್ಪಡಿಸಿಕೊಡಬೇಕು.

೭. ಆದಿಜನರ ಕೇರಿಯಲ್ಲಿ ನೀರಿನ ಸೌಲಭ್ಯವನ್ನು ಮಾಡಿಕೊಟ್ಟು ಅವರಿಗೆ ಶುಚಿಯಾಗಿರಲು ಆಗಾಗ್ಗೆ ಸದುಪದೇಶ ಮಾಡಬೇಕು.

೮. ಆದಿಜನರಲ್ಲಿ ವಿದ್ಯಾಪ್ರಸಾರವಾಗಲು ವಸತಿಗೃಹ, ಶಿಷ್ಯವೃತ್ತಿ, ಬಹುಮಾನ ಏರ್ಪಾಟವನ್ನು ಮಾಡಬೇಕು.

೯. ಕೂಲಿ ಕೆಲಸ ಮೊದಲಾದವುಗಳಿಗೆ ಈ ಜನರನ್ನೇ ಹೆಚ್ಚಾಗಿಟ್ಟುಕೊಂಡು ಅವರ ಸಾಂಪತ್ತಿಕ ಸ್ಥಿತಿ ಸುಧಾರಿಸುವಂತೆ ಸಹಾಯ ಮಾಡಬೇಕು.

೧೦.ಮುಖ್ಯವಾಗಿ ವಿದ್ಯಾಪ್ರಸಾರ ಮತ್ತು ಸಾಂಪತ್ತಿಕ ಅಭಿವೃದ್ಧಿಕಡೆಗೆ ಹೆಚ್ಚು ಲಕ್ಷಿಸಬೇಕು.

೧೧.ದೇವಾಲಯ ಪ್ರವೇಶಕ್ಕೆ ಹೆಚ್ಚು ಅವಕಾಶ ಕೊಟ್ಟು, ಹಿಂದೂ ಧರ್ಮದ ವಿಷಯದಲ್ಲಿ ಅಭಿಮಾನಿಗಳಾಗುವಂತೆ ಮಾಡಬೇಕು.[೭]

೮.೧.೩ ಕೌಜಲಗಿ ಹಣಮಂತರಾವ ಅವರ ಅಸ್ಪೃಶ್ಯತೆ ನಿವಾರಣಾ ಕ್ರಮಗಳು

"ಅಖಂಡ ವಿಜಾಪೂರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮುಂದಾಳುಗಳಾದ ಕೌಜಲಗಿ ಹಣಮಂತರಾವ ಅವರು ಗಾಂಧಿಜೀಯವರಂತೆ ಅಸ್ಪೃಶ್ಯ ನಿವಾರಣೆಗಾಗಿ ಜಿಲ್ಲೆಯ ಜನರು ಕೆಲವು ನಿಯಮಗಳನ್ನು ಪಾಲಿಸುವಂತೆ ಸೂಚಿಸಿದರು, ಅವುಗಳೆಂದರೆ –

೧. ಶಕ್ಯವಿದ್ದಲ್ಲಿ ನಾವು ಕಾನೂನಿನ ಸಹಾಯ ಪಡೆಯಲೇ ಬೇಕು.

೨. ಹರಿಜನರ ಆರ್ಥಿಕ ಸ್ಥಿತಿ ಸುಧಾರಿಸಲು ನಾವು ಯಾವಾಗಲೂ ಪ್ರಯತ್ನ ಪಡತಕ್ಕದ್ದು

೩. ಹರಿಜನರಲ್ಲಿ ಸ್ವಾಭಿಮಾನವನ್ನು ಜಾಗೃತಗೊಳಿಸಬೇಕು.

೪. ವೇಶ್ಯಾವೃತ್ತಿಯಿಂದ ಗಳಿಸಿದ ಹಣದ ಮೇಲೆ ಉಪಜೀವನ ಸಾಗಿಸುವದು ಅಸಂಸ್ಕೃತಿಯ ಲಕ್ಷಣ ಹಾಗೂ ಇದು ಅಧಃಪತನದ ದ್ಯೋತಕ ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು.

೫. ವೇಶ್ಯಾವೃತ್ತಿಯ ಉಚ್ಚಾಟನೆಯ ಕಾರ್ಯವನ್ನು ಆಸ್ಥೆಯಿಂದ ಕೈಗೊಳ್ಳುವಂತೆ ಹರಿಜನ ಧುರೀಣರ ಮನವೊಲಿಸಲು ಪ್ರಯತ್ನ ಮಾಡತಕ್ಕದ್ದು.

೬. ಹರಿಜನರೂ ಮನುಷ್ಯರು, ಅವರು ನಮ್ಮ ಸರಿ ಸಮಾನರು ಎಂಬ ದೃಷ್ಟಿಯಿಂದ ನಾವು ಅವರೊಡನೆ ನಡೆದುಕೊಳ್ಳಬೇಕು.

೭. ಜಗತ್ತಿನ ಭವಿತವ್ಯ ರೂಪಿಸುವಲ್ಲಿ ತಾವೂ ಮಹತ್ವದ ಪಾತ್ರ ವಹಿಸಬೇಕಾಗಿದೆ ಎಂಬ ಭಾವನೆ ಹರಿಜನರಲ್ಲಿ ಮೂಡಬೇಕು."[೮]

೮.೧.೪ ಅಸ್ಪೃಶ್ಯತಾ ನಿವಾರಣೆಯ ಕಾರ್ಯಗಳು

ಅಸ್ಪೃಶ್ಯತೆ ನಿವಾರಣೆಗಾಗಿ ರಂಗಭೂಮಿಯು ಕೈ ಜೋಡಿಸಿರುವದು ವಿಶೇಷವಾದ ಸಂಗತಿಯಾಗಿದೆ. ಅಶಿಕ್ಷಿತರಾದ ಜನರಿಗೆ ಗಾಂಧೀಜಿಯವರ ತತ್ವಗಳನ್ನು ಸುಲಭವಾಗಿ ತಿಳಿಸಿಕೊಡುವ ಸಾಧನವಾಗಿ ರಂಗಭೂಮಿ ಸೇವೆ ಸಲ್ಲಿಸಿತು. ವಿಜಾಪೂರ ಬಾಗಲಕೋಟ, ಗುಳೇದಗುಡ್ಡ, ಬದಾಮಿ, ಜಮಖಂಡಿ, ಮುಧೋಳ ಮುಂತಾದ ಪ್ರದೇಶಗಳಲ್ಲಿ ರಂಗಭೂಮಿ ಪ್ರದರ್ಶನಗಳು ನಡೆಯುತ್ತಿದ್ದವು.

“ಗರುಡ ಸದಾಶಿವರಾಯರು ‘ಸತ್ಯ ಸಂಕಲ್ಪ’ ಎಂಬ ನಾಟಕ ರಚಿಸಿ ಪ್ರದರ್ಶನ ಮಾಡುವ ಮೂಲಕ ಗಾಂಧೀಜಿಯವರ ತತ್ವಗಳಲ್ಲೊಂದಾದ ಅಸ್ಪೃಶ್ಯತೆ ನಿವಾರಣೆ ಮಾಡುವ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಈ ನಾಟಕದ ವಿಷಯ ವಸ್ತು ಜಮೀನ್ದಾರ ಮಾಧವರಾಯನ ಹೆಂಡತಿ ಮನೋರಮೆಯು ಮಹಾರೋಗಿಯಾದ ತನ್ನ ಪತಿಯನ್ನು ಉಪಚರಿಸದೇ ಭಗೀರಥ ಎಂಬುವನನ್ನು ಪ್ರೀತಿಸುವಳು. ಆಕೆ ಒಂದು ಸಲ ಊರಿನ ಸಭೆಯ ಅಧ್ಯಕ್ಷತೆ ವಹಿಸಿಕೊಂಡಾಗ ಹಿರಣ್ಯಗರ್ಭಾಚಾರ್ಯರು ಎಂಬ ಊರಿನ ಗಣ್ಯವಕ್ತಿಯು ಮನೋರಮೆಯನ್ನು ಪರಿಚಯಿಸುವಾಗ ‘ಈಕೆ ಆದರ್ಶ ವಿದುಷಿ, ಸ್ವದೇಶಿ ಪ್ರೇಮಿ, ಮಹಾರೋಗದಿಂದ ಪೀಡಿತನಾದ ಪತಿಯ ಸೇವೆಯನ್ನು ನಿಸ್ವಾರ್ಥವಾಗಿ ಮಾಡಿದ ಆಧುನಿಕ ಸಾವಿತ್ರಿ, ಕನ್ನಡ ನಾಡಿನ ಸರೋಜಿನಿದೇವಿ’ ಎಂದು ವ್ಯಂಗ್ಯವಾಗಿ ಹೊಗಳಿದ್ದರಿಂದ ಮನೋರಮೆಗೆ ನಾಚಿಗೆ ಬಂದು ಅವಳ ಮನ ಪರಿವರ್ತನೆಯಾಯಿತು. ತಾನೇ ಎದ್ದು ನಿಂತು ತನ್ನಲ್ಲಿ ಹಿರಣ್ಯಗರ್ಭಾಚಾರ್ಯರು ಹೇಳಿದ ಯಾವ ಗುಣವೂ ಇಲ್ಲ. ನಾನು ಹಾದಿ ತಪ್ಪಿದವಳು, ಭಗೀರಥನ ಜಾರಿಣಿ ಎಂದು ನಾನೇ ಅಸ್ಪೃಶ್ಯಳು, ನಾನೇ ತಿಪ್ಪೆ ಕಸ, ಭಂಗಿ ಬಳಿಯುವವಳು ಎಂದು ಊರ ತುಂಬ ತಿರುಗಾಡುತ್ತಾ ತನ್ನ ಆತ್ಮಶುದ್ಧಿಗಾಗಿ ಊರ ಕಸವನ್ನು ಬಳಿಯುತ್ತಾ ತನ್ನ ಜೀವನವನ್ನು ಸಾಗಿಸುತ್ತಾಳೆ. ತನ್ನ ಜಾರ ಭಗಿರಥನಿಗೂ ಅದೇ ಕೆಲಸ ಹಚ್ಚಿದಳು”[೯] ಈ ನಾಟಕದ ಮೂಲಕ ಗರುಡ ಸದಾಶಿವರಾಯರು ಮನ ಶುದ್ಧವಿಲ್ಲದವರು ಹಾಗೂ ನೈತಿಕತೆ ಇಲ್ಲದವರು ನಿಜವಾದ ಅಸ್ಪೃಶ್ಯರು ಎಂದು ಮಾರ್ಮಿಕವಾಗಿ ಸಮಾಜಕ್ಕೆ ಸಂದೇಶ ನೀಡಿದ್ದಾರೆ.

“ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಬಸವಣ್ಣನವರು ಅಸ್ಪೃಶ್ಯರಿಗೆ ಲಿಂಗದೀಕ್ಷೆ ನೀಡಿ ಅವರ ಮನೆಯಲ್ಲಿ ಸಹಭೋಜನ ಮಾಡುವ ದೃಶ್ಯವನ್ನು ಕಂಡು ಜನರು ಕೂಡಾ ಅಸ್ಪೃಶ್ಯರೊಂದಿಗೆ ಸಹಭೋಜನ ಮಾಡಲಾರಂಭಿಸಿದರು.”[೧೦] ಕನ್ನಡದ ಸಾಹಿತಿಗಳು ಹಾಗೂ ಸ್ವಾತಂತ್ರ್ಯ ಚಳವಳಿಗಾರರು ಆದ ಸಿಂಪಿ ಲಿಂಗಣ್ಣನವರು ತಮ್ಮ ಸ್ಮೃತಿಯಲ್ಲಿ ದಾಖಲಿಸಿದಂತೆ ‘೧೯೨೩ರಲ್ಲಿ ಯುಗಾದಿ ದಿನದಂದು ಚಡಚಣ ಗ್ರಾಮದ ಯುವಕರು ಸೇರಿಕೊಂಡು ಊರ ಮಧ್ಯದಲ್ಲಿರುವ ಮಾರುಕಟ್ಟೆ ಪ್ರವೇಶದಲ್ಲಿ ‘ಮರೆ ಮುಚ್ಚುಕ’ ಎಂಬ ಅಸ್ಪೃಶ್ಯ ನಿವಾರಣೆ ಕುರಿತು ನಾಟಕವನ್ನಾಡಿದರು. ನಾಟಕದ ದೃಶ್ಯ ಒಂದರಲ್ಲಿ ಅಸ್ಪೃಶ್ಯರೊಡನೆ ಸಹಭೋಜನ ಮಾಡುವ ಪ್ರಸಂಗ ಬಂದಾಗ ನಾಟಕ ನೋಡಲು ಬಂದ ಅಸ್ಪೃಶ್ಯರನ್ನು ರಂಗ ಸಜ್ಜಿಕೆಯ ಮೇಲೆ ಕರೆತಂದು ಅವರ ಜೊತೆ ಸಹಭೋಜನ ಮಾಡಿದರು.”[೧೧]

ಬಾಗಲಕೋಟಯಲ್ಲಿ ಮಂದಾಕಿನಿ ಮಂಗಳವೇಡೆ ಹಾಗೂ ಇತರ ತರುಣಿಯರು ಪ್ರತಿದಿನ ಹರಿಜನ ಕೇರಿಗಳಿಗೆ ಭೇಟನೀಡಿ ಸ್ವಚ್ಛತಾ ಕಾರ್ಯ ಮಾಡುವದು, ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವದು, ಹೆಣ್ಣು ಮಕ್ಕಳನ್ನು ಬಸವಿಯಾಗಿ ಬಿಡುವದನ್ನು ತಡೆಗಟ್ಟಲು ಅವರ ಪಾಲಕರಿಗೆ ತಿಳುವಳಿಕೆ ನೀಡುವ ಕಾರ್ಯವನ್ನು ಮಾಡುತ್ತಿದ್ದರು.[೧೨] ಪ್ರತಿದಿನ ಮುಂಜಾನೆ ಪ್ರಭಾತಫೇರಿಗೆ ಹೋದಾಗ ಬಾಗಲಕೋಟದ ಹರಿಜನಕೇರಿಗೆ ಭೇಟಿ ನೀಡಿ ಅದನ್ನು ಸ್ವಚ್ಛಗೊಳಿಸುತ್ತಿದ್ದೆವು ಹಾಗೂ ಇತರರಂತೆ

ಸಮಾನವಾಗಿ ಬಾಳುವ ಅಧಿಕಾರ ಹರಿಜನರಿಗೂ ಇದೆ ಎಂಬ ಗಾಂಧಿ ತತ್ವವನ್ನು ಸಾರುತ್ತಿದ್ದೆವು. ಚರಕದಿಂದ ನೂಲು ತೆಗೆಯುವದನ್ನು ಕಲಿಸುತ್ತಿದ್ದೆವು ಎಂದು ಶಿವಪುತ್ರಪ್ಪ ಪಟ್ಟಣಶೆಟ್ಟಿಯವರು ತಮ್ಮ ಹಿಂದಿನ ನೆನಪುಗಳನ್ನು ಮೆಲುಕು ಹಾಕುವರು.

"ಗಲಗಲಿಯ ಸಂಪ್ರದಾಯಸ್ಥ ಬ್ರಾಹ್ಮಣರಾದ ರಾಮಾಚಾರ್ಯ ಕಾಖಂಡಕಿಯವರು ಬ್ರಾಹ್ಮಣ ಸಂಪ್ರದಾಯವನ್ನು ಮುರಿದು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅಸ್ಪೃಶ್ಯತೆಯ ನಿವಾರಣೆಗಾಗಿ ತಾವೆ ಸ್ವಯಂ ತಿಗುಳರ ಕನ್ಯೆಯನ್ನು ವಿವಾಹವಾದರು."[೧೩] "ಗಲಗಲಿಯ ಮತ್ತೊಬ್ಬ ಕ್ರಾಂತಿಕಾರಿಗಳಾದ ಬಾಬುರಾವ ಗಣಿಯವರು ಲೋಕಮಾನ್ಯ ತಿಲಕರು ಮರಣ ಹೊಂದಿದಾಗ ಅವರ ಶ್ರಾದ್ಧ ಕಾರ್ಯವನ್ನು ಬ್ರಾಹ್ಮಣರ ಓಣಿಯಲ್ಲಿ ಆಚರಿಸಿ ೧೫೦ ರಿಂದ ೨೦೦ ಜನ ಹರಿಜನರಿಗೆ ಬ್ರಾಹ್ಮಣರ ಜೊತೆಯಲ್ಲಿಯೇ ಸಹಪಂಕ್ತಿಭೋಜನ ಮಾಡಿಸಿ ಅಸ್ಪೃಶ್ಯರು ಬ್ರಾಹ್ಮರಷ್ಟೆ ಪವಿತ್ರರಾದವರು ಎಂದು ಸಾರಿದರು."[೧೪]

"ಹಣಮಂತರಾವ್ ಕೌಜಲಗಿಯವರು ಹರಿಜನ ಸಮಸ್ಯೆಗಳ ಬಗ್ಗೆ ವಿಶೇಷವಾಗಿ ಗಮನಹರಿಸಿ ಬಸವಿ ಬಿಡುವ ಪದ್ಧತಿಯನ್ನು ವಿರೋಧಿಸಿದರು. ಅಸ್ಪೃಶ್ಯಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿಜಾಪೂರದಲ್ಲಿ ಹರಿಜನ ಕನ್ಯಾ ಮಂದಿರ ಸ್ಥಾಪನೆಗೆ ಕಾರಣಿಕರ್ತರಾದರು. ಅಲೆಮಾರಿಗಳಾದ ಲಮಾಣಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಬಾಗಲಕೋಟಯಲ್ಲಿ ಲಮಾಣಿಗಳ ಪರಿಷತ್ತು ೧೯೩೯ರಲ್ಲಿ ಆಯೋಜಿಸಿದರು."[೧೫]

ಕಾಕಾ ಖಾರಕಾನೀಸರು(ಗಣಪತರಾವ್ ಕಾರಖಾನೀಸ) ೧೯೩೩ರಲ್ಲಿ ವಿಜಾಪೂರದಲ್ಲಿ ಹರಿಜನ ಬಾಲಕರಿಗಾಗಿ ವಸತಿ ಶಾಲೆಯೊಂದನ್ನು ಸ್ಥಾಪಿಸಿದರು. ಹರಿಜನ ಮಕ್ಕಳಿಗೆ ಉಚಿತ ಉಟೋಪಚಾರದ ವ್ಯವಸ್ಥೆ ಮಾಡಿ ವಿದ್ಯಾವಂತರನ್ನಾಗಿ ಮಾಡಿದರು. ೧೯೩೭ ರಲ್ಲಿ ರಾಧಾಬಾಯಿ ಕಬ್ಬೂರ ಅವರು ಹರಿಜನ ಕನ್ಯಾ ಮಂದಿರ ಸ್ಥಾಪಿಸಿದರು. ಬಸವಿಯವರಿಗಾಗಿ ಹಾಗೂ ಅನ್ಯ ನಿರ್ಗತಿಕರಾದ ಕನ್ಯೆಯರಿಗೆ ಆಶ್ರಯ ನೀಡಲು, ಅವರನ್ನು ಸ್ವಾವಲಂಬಿಯನ್ನಾಗಿ ಮಾಡಲು ಉದ್ಯೋಗ ತರಬೇತಿ ನೀಡಲು ಹಣಮಂತರಾವ ಕೌಜಲಗಿಯವರು 'ಅಹಲ್ಯೋದ್ಧಾರ ಮಂದಿರ' ಎಂಬ ತರಬೇತಿ ಶಾಲೆಯನ್ನು ಸ್ಥಾಪಿಸಿದರು. "ಕಲ್ಲಯ್ಯ ಡೋಣೂರ ಅವರು ೧೯೩೪ರಲ್ಲಿ ಅಥರ್ಗಾ ಗ್ರಾಮಕ್ಕೆ ತೆರಳಿ ಅಲ್ಲಿಯ ಹರಿಜನರ ಕೇರಿಯಲ್ಲಿ ಸ್ವಚ್ಛತಾ ಕಾರ್ಯ ಆರಂಭಿಸಿದರು. ಬಚ್ಚಲು ನೀರು ಇಂಗಿಸುವ ತರಬೇತಿಯನ್ನು ನೀಡಿ ನೈರ್ಮಲ್ಯದ ಬಗ್ಗೆ ತಿಳುವಳಿಕೆ ನೀಡಿದರು. ಮುಲ್ಕಿ ಪರೀಕ್ಷೆ ಪಾಸಾದ ಯುವಕರನ್ನು ಪ್ರೋತ್ಸಾಹಿಸಿ ಅವರಿಂದ ಲಮಾಣಿ ತಾಂಡಾಗಳಲ್ಲಿ ಗಾವಟಿ ಶಾಲೆಗಳನ್ನು ಆರಂಭಿಸಿದರು. ಕಾಲರಾ ಆರಂಭಗೊಂಡಾಗ ಹರಿಜನ ಓಣಿಯಲ್ಲಿ ಮನೆ ಮನೆಗೆ ತೆರಳಿ ಔಷದೋಪಚಾರ ಮಾಡಿದರು. ಕಾಲರಾ ಬಂದಿರುವದು ದೇವಿಯ ಮುನಿಸಿನಿಂದ ಎಂದು ತಿಳಿದು ಕೋಣವನ್ನು ಬಲಿಕೊಡಲು ಮುಂದಾದವರಿಗೆ ತಿಳಿ ಹೇಳಿ ಬಲಿ ನೀಡುವದನ್ನು ನಿಲ್ಲಿಸಿದರು."[೧೬] ಗಾಂಧೀಜಿ ಅವರ ಪ್ರಭಾವದಿಂದ ಅಸ್ಪೃಶ್ಯತಾ ನಿವಾರಣಾ ಕಾರ್ಯಗಳು ಜಿಲ್ಲೆಯಲ್ಲಿ ನಿರಂತರವಾಗಿ ನಡೆದವು. ಹಾಗೂ ಅಸ್ಪೃಶ್ಯರು ಕೂಡಾ ಇತರರಂತೆ ಸರಿಸಮವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತಾಯಿತು.

೮.೨ ವೈಯಕ್ತಿಕ ಸತ್ಯಾಗ್ರಹ

೮.೨.೧ ರಾಷ್ಟ್ರಮಟ್ಟದಲ್ಲಿ

ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸಿ ೧೯೩೯ ಸೆಪ್ಟೆಂಬರ್ ತಿಂಗಳಿನಲ್ಲಿ ಪೋಲೆಂಡಿನ ಮೇಲೆ ದಾಳಿ ಆರಂಭಿಸಿದ್ದರಿಂದ ಎರಡನೆ ಜಾಗತಿಕ ಯುದ್ಧ ಆರಂಭಗೊಂಡಿತು. ಬ್ರಿಟನ್ ಪೋಲೆಂಡಿನ ನೆರವಿಗಾಗಿ ರಣರಂಗಕ್ಕೆ ಇಳಿಯಿತು. ಅದರಂತೆ ಭಾರತೀಯ ಕಾಂಗ್ರೆಸದ ಜೊತೆ ಸಮಾಲೋಚಿಸದೆ ಭಾರತವು ಯುದ್ಧದಲ್ಲಿ ಪಾಲ್ಗೊಂಡಿದೆ ಎಂದು ಘೋಷಿಸಿತು. ಭಾರತೀಯರ ಅನುಮತಿ ಇಲ್ಲದೆ ಭಾರತವನ್ನು ಯುದ್ಧದಲ್ಲಿ ತೊಡಗಿಸಿದ್ದರಿಂದ ಕಾಂಗ್ರೆಸ ಪ್ರತಿಭಟಿಸಲು ಮುಂದಾಯಿತು. ಈ ಸಾರಿ ಸತ್ಯಾಗ್ರಹವನ್ನು ಸಾಮೂಹಿಕ ಮಟ್ಟದಲ್ಲಿ ನಡೆಸಬಾರದು, ಅದು ವೈಯಕ್ತಿಕವಾಗಿ ನಿರ್ಧಿಷ್ಟ ಕಾರ್ಯ ಚಟುಚಟಿಕೆಯ ಮೂಲಕ ನಡೆಯಬೇಕು ಎಂದು ಗಾಂಧೀಜಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಅಹಿಂಸಾತ್ಮಕ ವ್ಯಕ್ತಿಗಳು ಒಬ್ಬೊಬ್ಬರೇ ನಿಲ್ಲಲು ಧೈರ್ಯ ಹೊಂದಿರಬೇಕೆಂದು ಗಾಂಧೀಜಿಯವರ ವಾದವಾಗಿತ್ತು. ವೈಯಕ್ತಿಕ ಸತ್ಯಾಗ್ರಹ ಮಾಡಲು ಮತ್ತೊಂದು ಕಾರಣವೆಂದರೆ ಸಾಮೂಹಿಕ ಕಾರ್ಯಾಚರಣೆ ಸರಕಾರದ ಪ್ರಚೋದನೆಯಿಂದ ಹಿಂಸೆಗೆ ತಿರುಗಿ, ಚಳವಳಿ ವಿಫಲವಾಗಬಾರದೆಂಬುದಾಗಿತ್ತು.

"ಮೌಲಾನಾ ಅಬ್ದುಲ್ ಕಲಾಂ ಅಜಾದ್ ಅವರ ಅಧ್ಯಕ್ಷತೆಯಲ್ಲಿ ದಿನಾಂಕ ೧೯೪೦ರ ಮಾರ್ಚ್ ೧೯ ಮತ್ತು ೨೦ ರಂದು ರಾಮಘರದಲ್ಲಿ ಕಾಂಗ್ರೆಸ ಅಧಿವೇಶನ ಜರುಗಿತು. ಭಾರತೀಯರ ಅನುಮತಿ ಇಲ್ಲದೆ ಭಾರತವು ಯುದ್ಧದಲ್ಲಿ ಪಾಲ್ಗೊಳ್ಳುವ ರಾಷ್ಟ್ರವೆಂದು ಘೋಷಿಸಿದ್ದರ ವಿರುದ್ಧ ನಿರ್ಣಯ ಕೈಗೊಂಡಿತು. ಭಾರತೀಯರು ತಮ್ಮ ಸಂವಿಧಾನವನ್ನು ರಚಿಸಿಕೊಳ್ಳುವ ಹಾಗೂ ವಿದೇಶಗಳೊಂದಿಗಿನ ಸಂಬಂಧವನ್ನು ನಿರ್ಧರಿಸುವ ಅಧಿಕಾರ ಶಾಸನಸಭೆಗೆ ಆರಿಸಿ ಕಳುಹಿಸಿದ ಪ್ರತಿನಿಧಿಗಳು ಹೊಂದಿರುವರು ಎಂದು ನಿರ್ಣಯಿಸಿತು."[೧೭]

ಗಾಂಧೀಜಿಯವರು ರಾಮಘರ ಸಭೆಯಲ್ಲಿ ಎಲ್ಲ ಕಾಂಗ್ರೆಸ ಕಮಿಟಿಗಳು ಸತ್ಯಾಗ್ರಹ ಕಮಿಟಿಗಳಾಗಬೇಕು. ಕಾಂಗ್ರೆಸ ಕಮಿಟಿಗಳು ಯಾವುದೇ ರೀತಿ ಅಸ್ಪೃಶ್ಯತೆಯನ್ನು ಆಚರಿಸದ ಉತ್ತಮ ವ್ಯಕ್ತಿತ್ವ ಹೊಂದಿದವರನ್ನು, ಪ್ರತಿದಿನ ನೂಲುವವರನ್ನು ಹಾಗೂ ಖಾದಿ ಧರಿಸುವವರನ್ನು ನೇಮಿಸಿಕೊಳ್ಳಬೇಕು. ಹೀಗೆ ನೇಮಕಗೊಂಡವರು ತಮ್ಮ ಎಲ್ಲ ಸಮಯವನ್ನು ರಚನಾತ್ಮಕ ಕಾರ್ಯದಲ್ಲಿ ತೊಡಗಿಸುವರು ಎಂದು ನನಗೆ ನಂಬಿಕೆ ಇದೆ. ಸತ್ಯಾಗ್ರಹ ಕಮಿಟಿಯಲ್ಲಿ ನೇಮಿಸಿಕೊಳ್ಳುವದು ಸ್ವಯಂ ಪ್ರೇರಿತವಾದದು ಎಂದು ಮಾತನಾಡಿದರು. "ಕಾಂಗ್ರೆಸ ಕಾರ್ಯಕಾರಿ ಸಮಿತಿ ೧೭ ಜೂನ್ ೧೯೪೦ರಂದು ವಾರ್ಧಾದಲ್ಲಿ ಸಭೆ ಸೇರಿತು. ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯ ನೀಡಿದರೆ ಮಾತ್ರ ಮಹಾಯುದ್ಧದಲ್ಲಿ ಇಂಗ್ಲೆಂಡಿನ ಪರವಾಗಿ ಪಾಲ್ಗೊಳ್ಳುವದಾಗಿ ಘೋಷಿಸಿದರು. ಆದರೆ ಸರಕಾರ

ಗಾಂಧಿಯವರ ಮಾತನ್ನು ಪರಿಗಣಿಸದೆ ಕಾಂಗ್ರೆಸ ನಾಯಕರನ್ನು ಬಂಧಿಸತೊಡಗಿತು. ಗಾಂಧೀಜಿಯವರು ವೈಸರಾಯನಿಗೆ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿ ವ್ಯಕ್ತಿಗೆ ಮಾತನಾಡುವ ಹಕ್ಕಿದೆ ಎಂದು ಹೇಳಿದರು."[೨೮]

ಸರಕಾರ ಕಾಂಗ್ರೆಸನ ಬೇಡಿಕೆಯಾದ ಸ್ವಾತಂತ್ರ್ಯವನ್ನು ತಿರಸ್ಕರಿಸಿದ್ದರಿಂದ ಗಾಂಧೀಜಿಯವರು ದೇಶದಾದ್ಯಂತ ವೈಯಕ್ತಿಕ ಸತ್ಯಾಗ್ರಹ ಮಾಡುವಂತೆ ಕರೆ ನೀಡಿದರು. ಸತ್ಯಾಗ್ರಹ ಮಾಡಲು ಕೆಲವೊಂದು ನಿಯಮಗಳನ್ನು ಹಾಕಿದರು. ನರಸಿಂಹ ದಾಬಡೆಯವರಿಗೆ ಮಹಾತ್ಮರ ಅಪ್ತಕಾರ್ಯದರ್ಶಿ ಮಹಾದೇವ ದೇಸಾಯಿಯವರು ವೈಯಕ್ತಿಕ ಸತ್ಯಾಗ್ರಹದ ನಿಯಮಗಳನ್ನು ಹೀಗೆ ವಿವರಿಸಿದರು.

"ಗಾಂಧೀಜಿಯವರಿಗೆ ಸತ್ಯಾಗ್ರಹಿಗಳ ಸಂಖ್ಯೆ ಮುಖ್ಯವಲ್ಲ ನೀತಿವಂತ ಸಚ್ಚಾರಿತ್ರ್ಯಯ, ಸತ್ಯ ಅಹಿಂಸೆ ವಿಧಾಯಕ ಕಾರ್ಯಗಳಲ್ಲಿ ಅಚಲ ಶ್ರದ್ಧೆ ಇರುವ, ಸತತ ಖಾದಿಧಾರಿ ಮತ್ತು ತಪ್ಪದೇ ನೂಲವ ಸತ್ಯಾಗ್ರಹಿಗಳು ಬೇಕು."[೨೯]

ಸ್ವತಃ ಗಾಂಧೀಜಿಯವರು ನನಗೆ ಶುದ್ಧ ಸತ್ಯಾಗ್ರಹವು ಬೇಕು. ಸಂಖ್ಯೆ ಬರಲಿ ಬಿಡಲಿ ಶುದ್ಧ ಚಿನ್ನವನ್ನು ಈ ಸಾರೆ ನಾನು ಬಯಸುವೆನು ಎಂದು ಹೇಳುವ ಮೂಲಕ ಶುದ್ಧ ಚಾರಿತ್ರ್ಯ ಉಳ್ಳವರಿಗೆ ಮಾತ್ರ ಸತ್ಯಾಗ್ರಹ ಮಾಡಲು ಅವಕಾಶ ನೀಡುವದಾಗಿ ಸಾರಿದರು. ಸ್ವತಃ ತಾವು ಸತ್ಯಾಗ್ರಹ ಮಾಡಿದರೆ ಸರಕಾರಕ್ಕೆ ತೊಂದರೆಯಾಗಬಹುದೆಂದು ನಿರ್ಧರಿಸಿ ವಿನೋಭಾ ಭಾವೆಯವರನ್ನು ಪ್ರಥಮ ಸತ್ಯಾಗ್ರಹಿಯಾಗಿ ಆರಿಸಿದರು. ೧೭-೧೦-೧೯೪೦ರಂದು ಪೇನಾರ ಎಂಬ ಹಳ್ಳಿಯಲ್ಲಿ ಮೊದಲು ಸತ್ಯಾಗ್ರಹ ನಡೆಯಬೇಕೆಂದು ತಿರ್ಮಾನಿಸಿದರು. ವಿನೋಬಾ ಅವರು ಕಾಂಗ್ರೆಸ್ಸಿನ ನೀತಿಗಳನ್ನು ತಿಳಿ ಹೇಳಿ ಯುದ್ಧವು ಅನೈತಿಕ ಹಾಗೂ ವಿಧ್ವಂಸಕರವಾಗಿರುವದರಿಂದ ಅದಕ್ಕೆ ಸಹಾಯ ಮಾಡಕೂಡದೆಂದು ಸಾರ್ವಜನಿಕ ಭಾಷಣದಲ್ಲಿ ಸಾರಬೇಕೆಂದು ಸೂಚಿಸಿದರು. "ವಿನೋಬಾ ಭಾವೆಯವರು ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದರು. ನಂತರ ಎರಡನೆ ಸತ್ಯಾಗ್ರಹಿ ನೆಹರು ಬಂಧನಕ್ಕೆ ಒಳಗಾದರು. ಈ ಚಳವಳಿಯಲ್ಲಿ ಸುಮಾರು ೩೦೦೦೦ ಜನರು ಸೆರೆಮನೆಗೆ ಹೋದರು. ಸರಕಾರದವರು ಸುಮಾರು ೬ ಲಕ್ಷ ರೂಪಾಯಿ ದಂಡ ವಸೂಲ ಮಾಡಿದರು."[೩೦] ಪ್ರಾಂತೀಯ ಕಾಂಗ್ರೆಸ ಕಮಿಟಿಯವರು ಸತ್ಯಾಗ್ರಹಿಗಳ ಪಟ್ಟಿಯನ್ನು ಗಾಂಧಿಯವರಿಗೆ ಕಳುಹಿಸಿದ ನಂತರ ಅವರು ಪಟ್ಟಿಯನ್ನು ಪರಿಶೀಲಿಸಿ ಅನುಮತಿ ನೀಡುತ್ತಿದ್ದರು. ಅನುಮತಿ ದೊರೆತ ಸತ್ಯಾಗ್ರಹಿಗಳು ತಾವು ಸತ್ಯಾಗ್ರಹ ಮಾಡುವ ಸ್ಥಳ, ವೇಳೆಯನ್ನು ನಮೂದಿಸಿ ಜಿಲ್ಲಾಧಿಕಾರಿಗಳಿಗೆ ಮೊದಲೆ ತಿಳಿಸಬೇಕಿತ್ತು. ಸತ್ಯಾಗ್ರಹ ಮಾಡುವಾಗ ಈ ಯುದ್ಧ ನಮ್ಮದಲ್ಲ. ಸರಕಾರಕ್ಕೆ ತನು ಮನು ಧನಗಳಿಂದ ಯಾರೂ ಸಹಾಯ ಮಾಡಕೂಡದೆಂದು ಘೋಷಿಸಬೇಕು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಕಮಿಟಿಯ ಉಪಾಧ್ಯಕ್ಷರಾದ ಕೃಷ್ಣಬಾಯಿ ಪಂಜೇಕರ ಅವರು ಎರಡುನೂರಕ್ಕಿಂತ ಅಧಿಕ ಸತ್ಯಾಗ್ರಹಿಗಳ ಹೆಸರನ್ನು ತೆಗೆದುಕೊಂಡು ಸೇವಾಗ್ರಾಮಕ್ಕೆ ಹೋಗಿ ಗಾಂಧೀಜಿಯವರಿಂದ ಅನುಮತಿ ಪಡೆದುಕೊಂಡು ಬಂದರು. "ಅಂಬಲಿ ಚನ್ನಬಸಪ್ಪನವರು ವೈಯಕ್ತಿಕ

ಸತ್ಯಾಗ್ರಹ ಮಾಡಲು ಹೋಗಿ ಬಂಧನಕ್ಕೆ ಒಳಗಾದರು. ಈ ಮೂಲಕ ಕರ್ನಾಟಕದಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿದ ಮೊದಲನೆ ಸರ್ವಾಧಿಕಾರಿಗಳಾದರು."[೨೧]

೮.೨.೨ ಬಾಗಲಕೋಟ ಜಿಲ್ಲಾ ವೈಯಕ್ತಿಕ ಸತ್ಯಾಗ್ರಹ

ಸತ್ಯಾಗ್ರಹ ಕಮಿಟಿಯು ೨೪-೦೪-೧೯೪೦ರಂದು ವಿಜಾಪೂರ ಜಿಲ್ಲಾ ಕಾಂಗ್ರೆಸ ಕಮಿಟಿಯ ಸಭೆಯನ್ನು ನಡೆಸಿತು. ಜಿಲ್ಲಾ ಕಮಿಟಿಯ ೪೦೮ ಜನ ಸದಸ್ಯರು ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಒಪ್ಪಿಕೊಂಡು ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿದರು. ಗಾಂಧೀಯವರು ಇವರಲ್ಲಿ ೨೭೧ ಸದಸ್ಯರಿಗೆ ಮಾತ್ರ ಸತ್ಯಾಗ್ರಹ ಮಾಡಲು ಅನುಮತಿ ನೀಡಿದರು. ಈ ಸಭೆಯ ನಿರ್ಣಯದಂತೆ ಸತ್ಯಾಗ್ರಹದ ಮೊದಲ ಶಿಬಿರವನ್ನು ದಿನಾಂಕ ೦೧.೦೬.೧೯೪೦ರಂದು ರಾಜಾರಾಮ ದುಬೆಯವರ ನೇತೃತ್ವದಲ್ಲಿ ಆರಂಭಿಸಿದರು. "ಕರ್ನಾಟಕ ಪ್ರಾಂತಿಯ ಕಾಂಗ್ರೆಸ ಕಮಿಟಿಯ ಉಪಾಧ್ಯಕ್ಷರಾದ ಶ್ರೀಮತಿ ಕೃಷ್ಣಾಬಾಯಿ ಪಂಜೇಕರ ಅವರು ಶಿಬಿರವನ್ನು ಉದ್ಘಾಟಿಸಿ ಸತ್ಯಾಗ್ರಹಿಗಳ ಕರ್ತವ್ಯದ ಬಗ್ಗೆ ಮಾತನಾಡಿದರು. ಎರಡನೆ ದಿನ ಭಾರತೀಯ ರಾಷ್ಟ್ರೀಯ ಕಾಂಗ್ರೆಸದ ಇತಿಹಾಸವನ್ನು ಕುರಿತು ವ್ಹಿ.ಬಿ. ನಾಯಕ ಅವರು ಮಾತನಾಡಿದರು. ಮೂರನೆ ದಿನ ಜಿ.ಎಸ್. ಸಜ್ಜನ ಅವರು ರೈತರ ಸಮಸ್ಯಗಳ ಬಗ್ಗೆ, ನಾಲ್ಕನೆಯ ದಿನ ಆರ್.ಆರ್. ದೇಶಪಾಂಡೆಯವರು ಪ್ರಥಮ ಚಿಕಿತ್ಸೆ ಬಗೆಗೆ, ಐದನೆಯ ದಿನ ಎಸ್.ಬಿ. ಪಾಟೀಲರು ಕರ್ನಾಟಕ ಏಕೀಕರಣ ಬಗೆಗೆ ಏಳನೆಯ ದಿನ ಕಾಕಾ ಕಾರಖಾನೀಸರು ಅಸ್ಪೃಶ್ಯತೆಯ ಸಮಸ್ಯೆಯ ಬಗೆಗೆ, ಎಂಟನೆಯ ದಿನ ಎಸ್.ಸಿ. ಮಿರ್ಜಿಯವರು ಹಿಂದಿ ಶಿಕ್ಷಣದ ಬಗೆಗೆ, ಒಂಬತ್ತನೆ ದಿನ ಆದ್ಯ ಅನಂತಾಚಾರ್ಯ ಅವರು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯದ ಬಗೆಗೆ ಹತ್ತನೆಯ ದಿನ ಶ್ಯಾಮರಾವ್ ಗಜೇಂದ್ರಗಡ ಅವರು ಪ್ರಾಥಮಿಕ ಶಿಕ್ಷಣದ ಬಗೆಗೆ, ಬ್ಯಾರಿಸ್ಟರ್ ಎಮ್.ಪಿ. ಅನಕಲಕರ್ ಯುರೋಪಿನ ಯುದ್ಧ ಬಗೆಗೆ ಮಾತನಾಡಿದರು. ಖಾದಿ ಪ್ರಚಾರ ಬಗ್ಗೆ ಆರ್.ಎಚ್. ಮುದಕವಿ ಹಾಗೂ ಕೆ.ಜಿ. ಜೋಶಿಯವರು ಸಮಾಜದ ಬಗೆಗೆ ಹೀಗೆ ಪ್ರತಿದಿನ ಒಂದೊಂದು ವಿಷಯ ಕುರಿತು ತರಬೇತಿಯನ್ನು ನೀಡಿದರು."[೨೨] ಶಿಬಿರವು ೧೬ ದಿನಗಳ ಕಾಲ ನಡೆಯಿತು ವಿವಿಧ ತಾಲೂಕುಗಳಿಂದ ಒಟ್ಟು ೪೧ ಶಿಬಿರಾರ್ಥಿಗಳು ಪಾಲ್ಗೊಂಡಿದ್ದು ಅವರಿಗೆ ಆಹಾರ, ವಸತಿ, ಸಮವಸ್ತ್ರವನ್ನು ನೀಡಿ ವೈಯಕ್ತಿಕ ಸತ್ಯಾಗ್ರಹಕ್ಕೆ ಸಿದ್ದಗೊಳಿಸಿದರು.

"ಕರ್ನಾಟಕ ಪ್ರದೇಶ ಕಾಂಗ್ರೆಸ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾದ ಅಂಬಲಿ ಚನ್ನಬಸಪ್ಪನವರು ಪ್ರಥಮವಾಗಿ ವೈಯಕ್ತಿಕ ಸತ್ಯಾಗ್ರಹ ಮಾಡಲು ೨೬-೧೧-೧೯೪೦ರಂದು ಧಾರವಾಡ ಜಿಲ್ಲೆಯ ಗರಗ ಗ್ರಾಮಕ್ಕೆ ಹೊರಟರು. ಆದರೆ ಪೊಲೀಸರು ಅವರನ್ನು ಸತ್ಯಾಗ್ರಹ ಮಾಡುವದಕಿಂತ ಮೊದಲೆ ಬಂಧಿಸಿ ಒಂದು ವರ್ಷ ಕಾರಾಗೃಹ ಶಿಕ್ಷೆಗೆ ಒಳಪಡಿಸಿದರು. ಅಂಬಲಿ ಚನ್ನಬಸಪ್ಪನವರು ಕರ್ನಾಟಕದ ಪ್ರಪ್ರಥಮ ವೈಯಕ್ತಿಕ ಸತ್ಯಾಗ್ರಹಿಯಾದರು."[೨೩] "ಮುಂಬೈ ಶಾಸಕಾಂಗ ಸಭೆಯ ಸದಸ್ಯರಾದ ಸುಗಂಧಿ ಮುರಿಗೆಪ್ಪನವರು ೦೬-೧೨-೧೯೪೦ ರಂದು ವಿಜಾಪೂರ ತಾಲೂಕಿನ

ಸಾರವಾಡ ಗ್ರಾಮದಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿದರು. ಅಂದು ಹತ್ತುಸಾವಿರ ಜನರು ಸೇರಿದ್ದರು. ಸುಗಂಧಿಯವರು ಎರಡು ವರ್ಷ ಬಂಧನಕ್ಕೆ ಒಳಗಾದರು."[೨೪]

ನಾಗಠಾಣದಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿ ಒಟ್ಟು ೧೧ ಜನರು ಬಂಧನಕ್ಕೆ ಒಳಗಾದರು. ವಿಜಾಪೂರದಿಂದ ಬಂದ ಸಿದ್ದಪ್ಪ ನಿಂಬರಗಿಯವರು ವೈಯಕ್ತಿಕ ಸತ್ಯಾಗ್ರಹ ಮಾಡುವವರ ಹೆಸರು ಪಡೆದುಕೊಂಡು ಹೋದರು. ನಾಗಠಾಣದಲ್ಲಿಯ ವೈಯಕ್ತಿಕ ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದ ಸತ್ಯಾಗ್ರಹಿಗಳು.

ಹೆಸರು	**ಶಿಕ್ಷೆ ಪ್ರಮಾಣ**
೧. ಹಣಮಂತಪ್ಪ ವಾಡೆ	೬ ತಿಂಗಳು
೨. ಸಾಯಬಣ್ಣ ಸಿರಕನಹಳ್ಳಿ	೬ ತಿಂಗಳು
೩. ಗುರುಲಿಂಗಪ್ಪ ಲೋಣಿ	೪ ತಿಂಗಳು
೪. ಹುಸೇನಬೇಗ ಅಥರ್ಗಾ	೩ ತಿಂಗಳು
೫. ಚನ್ನಪ್ಪಾ ಹಂಡಿ	೩ ತಿಂಗಳು
೬. ಚನ್ನಪ್ಪ ಹುಣಶ್ಯಾಳ	೪ ತಿಂಗಳು
೭. ಈರಯ್ಯ ಮಠಪತಿ	೩ ತಿಂಗಳು
೮. ಹನಮಂತಪ್ಪಾ ಕತ್ನಳ್ಳಿ	೪ ತಿಂಗಳು
೯. ದುಂಡಪ್ಪಾ ಹುಣಶ್ಯಾಳ	–
೧೦. ಲಚಪ್ಪ ಗೊರನಾಳ	– [೨೫]

"ಇಂಡಿ ತಾಲೂಕಿನ ತಾಂಬಾ ಗ್ರಾಮದಲ್ಲಿ ಮಲಕನಗೌಡ ಬಿರಾದಾರ, ಶಿವಲಿಂಗಪ್ಪ ಗುಣಕಿ, ಸಿದ್ಧರಾಮಪ್ಪ ವಾಲಿ, ರಾಚಪ್ಪ ನಿವರಗಿ ವೈಯಕ್ತಿಕ ಸತ್ಯಾಗ್ರಹ ಮಾಡಿ ಆರು ತಿಂಗಳು ಶಿಕ್ಷೆ ಅನುಭವಿಸಿದರು."[೨೬] "ಶಿವಣಗಿಯಲ್ಲಿ ಯಲಗುರದಪ್ಪ ಗೌಡಪ್ಪ ಪಾಟೀಲ ಅವರು ವೈಯಕ್ತಿಕ ಸತ್ಯಾಗ್ರಹ ಮಾಡಿ ೧೯೪೨ ಚಳವಳಿಗೆ ಬುನಾದಿ ಹಾಕಿದರು."[೨೭] ಇಂಗಳೇಶ್ವರದಲ್ಲಿ ೧೯೪೧ ಮಾರ್ಚ್ ತಿಂಗಳಿನಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಅಪಾರ ಜನಸ್ತೋಮ ಕೂಡಿದ್ದು ವೈ. ಬಸವಯ್ಯ ಪುರಾಣಿಕರು ಭಾಷಣ ಮಾಡಿ ಜನರನ್ನು ಹುರಿದುಂಬಿಸಿದರು.

"ಮುದ್ದೆಬಿಹಾಳ ತಾಲೂಕಿನ ತಾಳಿಕೋಟೆಯ ಸೋಮಲಿಂಗಪ್ಪ ದ್ಯಾವಪೂರ, ಭೀಮರಾವ್ ಗೋಗಿ (ಬಳಗಾನೂರ) ರಾಮಚಂದ್ರ ಚಿತ್ರಗಾರ, ರಾಚಯ್ಯ ಉಳಿವೆಪ್ಪಮಠ, ರಾಮಸಿಂಹ ಹಜೇರಿ, ಶಿವಲಿಂಗಪ್ಪ ಸಾಲಂಕಿ, ಗುರುನಾಥ ಪುಕಾಳೆ, ಶ್ರೀಶೈಲಪ್ಪ ಮಸಳಿ ಡವಳಗಿಯ ನಾಗೇಂದ್ರ ಕಪಟಕರ, ಹಣಮಂತಪ್ಪ ತಳವಾರ, ಸಂಗಪ್ಪ ಕೋರಿ, ಕನಕಪ್ಪ ತಳವಾರ, ನಂದಪ್ಪ ತಳವಾರ, ನರಸಿಂಹ ಕಪಟಕರ ಮುದ್ದೇಬಿಹಾಳದ ತಮ್ಮಾಜಿ ಮಿರಜಕರ ವೈಯಕ್ತಿಕ ಸತ್ಯಾಗ್ರಹ ಮಾಡಿ ಶಿಕ್ಷೆಗೆ ಒಳಗಾದರು."[೨೮] "ಢವಳಗಿಯ ನರಸಿಂಗಪ್ಪಾ ಕಪಟಕರ ಅವರು ಹೇಳುವಂತೆ ರಾಜಾರಾಮ ದುಬೆಯವರು ವೈಯಕ್ತಿಕ ಸತ್ಯಾಗ್ರಹ ಮಾಡುವವರ ಪಟ್ಟಿ ಕಳುಹಿಸುವಂತೆ ಸಂದೇಶ ನೀಡಿದಾಗ ನಾನು ನರಸಿಂಗಪ್ಪ ಕಪಟಕರ, ನಾಗೇಂದ್ರಪ್ಪ ಕಪಟಕರ, ಎಲ್ಲಪ್ಪ ಫಕೀರಪ್ಪ ವಡ್ಡರ, ಸಂಗಪ್ಪ ಬಸವಕುಮಾರ ಕೋರಿ ಮಡಿವಾಳಪ್ಪ ಅಗಸರ, ಹನುಮಂತ ತಮ್ಮಣ್ಣಾ ತಳವಾರ, ವೀರಪ್ಪ ಗುರುಸಂಗಪ್ಪ ಕುಂಟೋಜಿ ಕನಕಪ್ಪಾ ವಾಲೀಕಾರ ಹೀಗೆ ಎಂಟು ಜನರ ಪಟ್ಟಿ ಕಳುಹಿಸಿದೆ. ಇದರಲ್ಲಿ ಮೊದಲು ನಾಲ್ಕು ಜನರಿಗೆ ಅವಕಾಶ ನೀಡಲಾಯಿತು. ನಾಗೇಂದ್ರ ಕಪಟಕರ ಅವರು ಢವಳಗಿಯಲ್ಲಿ ಸತ್ಯಾಗ್ರಹ ಮಾಡಿ ಆರು ತಿಂಗಳ ಶಿಕ್ಷೆ ಅನುಭವಿಸಿದರು. ಯಲ್ಲಪ್ಪಾ ಪಕೀರಪ್ಪ ವಡ್ಡರ ಬಸರಕೋಡದಲ್ಲಿ ಸತ್ಯಾಗ್ರಹ ಮಾಡಿ ಸಾದಾ ಶಿಕ್ಷೆ ಅನುಭವಿಸಿದರು. ಮಡಿವಾಳಪ್ಪ ಅಗಸರ ಕಂಠಿ ಬಸವೇಶ್ವರ ಜಾತ್ರೆಯಲ್ಲಿ ಸತ್ಯಾಗ್ರಹ ಮಾಡಿ ಆರು ತಿಂಗಳು ಶಿಕ್ಷೆ ಅನುಭವಿಸಿದರು. ಸಂಗಪ್ಪಾ ಬಸಪ್ಪ ಕೋರಿ ಕೂಡಲ ಸಂಗಮೇಶ್ವರ ಜಾತ್ರೆಯಲ್ಲಿ ಸತ್ಯಾಗ್ರಹ ಮಾಡಿ ಆರು ತಿಂಗಳ ಜೈಲು ಶಿಕ್ಷೆ ಅನುಭವಿಸಿದರು. ಉಳಿದ ನಾಲ್ಕು ಜನರಿಗೆ ಕಾಯ್ದೆ ಮುರಿಯಲು ನಂತರ ಆದೇಶ ಬಂದಿತು."[೨೯]

ಗುಡೂರದಲ್ಲಿ ಹುಚ್ಚಪ್ಪ ಲೆಕ್ಕದ ವೈಯಕ್ತಿಕ ಸತ್ಯಾಗ್ರಹ ಮಾಡಿದಾಗ ಎರಡು ಮೂರು ಸಾವಿರ ಜನರು ಸೇರಿದ್ದರು. ನಂತರ ಗಣಪ್ಪ ಬಂಡರಗಲ್ಲ, ಶಂಕರಪ್ಪ ಕವಿಶೆಟ್ಟಿ ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದರು. ರುದ್ರಶಾಸ್ತ್ರಿ ಯಾವಗಲ್‌ಮಠರು ಗುಡೂರು ಕಮತಗಿ ಭಾಗದಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಮಾಡಿದರು. "೧೯೪೧ ರಲ್ಲಿ ಚಂದ್ರಶೇಖರಪ್ಪ ಕುಂಬಾರ ಮಾಸ್ತರರ ಪ್ರೇರಣೆಯಿಂದ ವೈಯಕ್ತಿಕ ಸತ್ಯಾಗ್ರಹವನ್ನು ತುಂಬ ಗ್ರಾಮದಲ್ಲಿ ಮಾಡಿದರು. ೦೯-೧೨-೧೯೪೦ರಂದು ಚೊಳಚಗುಡ್ಡದಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿ ಸದಾಶಿವಪ್ಪ ಕೋರಣ್ಣವರು ಒಂಬತ್ತು ತಿಂಗಳು ಶಿಕ್ಷೆಗೆ ಒಳಪಟ್ಟರು."[೩೦]

ಹುನಗುಂದಲ್ಲಿ ದಾನಪ್ಪ ರಾಜಮನಿಯವರು ಬ್ರಿಟಿಷರ ಯುದ್ಧಕ್ಕೆ ತನು ಮನು ಧನಗಳಿಂದ ಸಹಾಯ ಮಾಡಬಾರದೆಂದು ತುಂಬಿದ ಸಭೆಯಲ್ಲಿ ವೈಯಕ್ತಿಕ ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದರು. "೨೩-೦೩-೧೯೪೧ರಲ್ಲಿ ಚಂದ್ರಶೇಖರಪ್ಪ ಕುಂಬಾರ ಮಾಸ್ತರರ ಪ್ರೇರಣೆಯಿಂದ ಗೋರಬಾಳದಲ್ಲಿ ಮಲ್ಲಪ್ಪ ನಡಹಳ್ಳಿಯವರು ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿದರು."[೩೧] "ಬಾಗಲಕೋಟ ತಾಲೂಕಿನ ಬೇವೂರದಲ್ಲಿ ಪರಪ್ಪ ಸಜ್ಜನ ೧೯೪೧ ಏಪ್ರಿಲ್ ೨೧ ರಂದು ವೈಯಕ್ತಿಕ

ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದರು. ಬಾಗಲಕೋಟ ತಾಲೂಕಿನ ಪೂರ್ವಭಾಗದಲ್ಲಿ ಶಿಕ್ಷೆಗೆ ಒಳಗಾದವರಲ್ಲಿ ಮೊದಲಿಗರು."[೩೨]

"ಬಲವಂತಪ್ಪ ಉಪ್ಪಾರ ಅವರು ೨೪-೦೩-೧೯೪೧ ರಂದು ವೈಯಕ್ತಿಕ ಸತ್ಯಾಗ್ರಹವನ್ನು ಸಾಸನೂರದಲ್ಲಿ ಮಾಡಿದ್ದರಿಂದ ಶಿಕ್ಷೆ ಮತ್ತು ದಂಡ ಆಯಿತು ದಂಡ ಕೊಡಲು ಆಗದಾಗ ಅವರ ಮನೆ ಲೀಲಾವು ಮಾಡಿದರು."[೩೩] "ವಡವಡಗಿಯ ಮಲ್ಲಿಕಾರ್ಜುನ ದೇವಾಲಯದ ಮುಂಭಾಗ ವೈಯಕ್ತಿಕ ಸತ್ಯಾಗ್ರಹವನ್ನು ಚಂದಪ್ಪಾ ಗೆಜ್ಜಿಯವರು ಮಾಡಿದರು. ಸತ್ಯಾಗ್ರಹಕ್ಕಿಂತ ಮುಂಚಿತವಾಗಿ ಊರಿನ ಬಡವರಿಗೆ ಅನ್ನಸಂಪರ್ತಣೆ ಮಾಡಿದರು."[೩೪] "ಮಸಬಿನಾಳದಲ್ಲಿ ಶಿವಪ್ಪ ಮುಂಡಗೊಂಡ, ತಿಪ್ಪಣ್ಣ ಗುದ್ದಿ, ಬಸಪ್ಪ ಬೇವನೂರ, ಬಾಳಪ್ಪ ಬೊಸಗಿ, ಇಸ್ಮಾಯಿಲ್‌ಸಾಬ್ ಹತ್ತರಕಿಹಾಳ, ಈರಪ್ಪ ಬಡಿಗೇರ, ಮಲ್ಲಪ್ಪಾ ಕುಂಬಾರ, ವೀರಭದ್ರಪ್ಪ ರಂಜಣಗಿ, ಸಂಗಪ್ಪಾ ಹಡಗಲಿ, ಶಿವಪ್ಪ ಹಡಪದ, ಸದಪ್ಪ ಕಾರಜೋಳ, ಭೀಮಪ್ಪ ಬಿರಾದಾರ, ಶಿವಪ್ಪ ಬಾಗೇವಾಡಿ, ಗುರಪ್ಪ ಸಿಂದಗಿ, ರಾಮಣ್ಣ ಮ್ಯಾಗೇರಿ, ರಾಚಪ್ಪ ಬರಡೆ, ದಾನಪ್ಪ ನಾಟಕಾರ, ಶಂಕರಪ್ಪ ನಾಗರಾಳ ಮುಂತಾದವರು ವೈಯಕ್ತಿಕ ಸತ್ಯಾಗ್ರಹ ಮಾಡಿ ಬಂಧನಕ್ಕೆ ಒಳಗಾದರು."[೩೫] "೧೦-೦೪-೧೯೪೧ ರಂದು ಮಲ್ಲಪ್ಪ ವಡ್ಡರ ಅವರು ಬಸರಕೋಡ ಗ್ರಾಮದ ಶ್ರೀ ಪವಾಡ ಬಸವೇಶ್ವರ ಜಾತ್ರೆಯ ದಿನ ದೇವಾಲಯದ ವಠಾರದಲ್ಲಿ ಮೆರವಣಿಗೆ ಹೋಗಿ ಯುದ್ಧ ವಿರೋಧಿ ಭಾಷಣ ಮಾಡಿದರು. ಹಿಟ್ಟಿನಹಳ್ಳಿ ತಾಂಡೆಯಲ್ಲಿ ಭಗವಾನಸಿಂಗ್ ಅಂಗಡಿಯವರು ವೈಯಕ್ತಿಕ ಸತ್ಯಾಗ್ರಹ ಮಾಡಿದರು."[೩೬]

ಅಖಂಡ ವಿಜಾಪೂರ ಜಿಲ್ಲೆಯಿಂದ ವೈಯಕ್ತಿಕ ಸತ್ಯಾಗ್ರಹದಲ್ಲಿ ೨೪೨ ಸದಸ್ಯರು ಬಂಧನಕ್ಕೆ ಒಳಗಾದವರ ಪ್ರತಿ ತಾಲೂಕಿನಲ್ಲಿಯ ಸತ್ಯಾಗ್ರಹಿಗಳ ಪಟ್ಟಿ.

ತಾಲೂಕು	**ಶಿಕ್ಷೆ ಯಾದವರ ಸಂಖ್ಯೆ**
೧. ಬಾಗೇವಾಡಿ ತಾಲೂಕ	೪೧
೨. ವಿಜಾಪೂರ ತಾಲೂಕ	೩೬
೩. ಹುನಗುಂದ ತಾಲೂಕ	೩೭
೪. ಇಂಡಿ ತಾಲೂಕ	೨೪
೫. ಸಿಂದಗಿ ತಾಲೂಕ	೨೧
೬. ಬದಾಮಿ ತಾಲೂಕ	೧೯
೭. ಮುದ್ದೇಬಿಹಾಳ ತಾಲೂಕ	೧೬

೮. ಬಾಗಲಕೋಟ ತಾಲೂಕ	೧೪
೯. ಬೀಳಗಿ ತಾಲೂಕ	೦೪
೧೦.ಮುಧೋಳ ಮತ್ತು ಜಮಖಂಡಿ ಸಂಸ್ಥಾನ	೦೫
ಒಟ್ಟು	೨೪೨ [೩೭]

ಗಾಂಧೀಜಿಯವರಿಂದ ವಿಜಾಪೂರ ಜಿಲ್ಲೆಯಲ್ಲಿ ಒಟ್ಟು ೨೭೧ ಜನ ವೈಯಕ್ತಿಕ ಸತ್ಯಾಗ್ರಹ ಮಾಡಲು ಹಂತ ಹಂತವಾಗಿ ಅನುಮತಿ ಪಡೆದವರು.

ಅನುಮತಿ ಪಡೆದವರ ಸಂಖ್ಯೆ

ಒಂದನೆಯ ಹಂತ	–	೦೨
ಎಡನೆಯ ಹಂತ	–	೩೭
ಮೂರನೆ ಹಂತ	–	೯೧
ನಾಲ್ಕನೆ ಹಂತ	–	೫೭
ಐದನೆ ಹಂತ	–	೮೪
ಒಟ್ಟು		೨೭೧ [೩೮]

ಕರ್ನಾಟಕ ಪ್ರದೇಶ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಡಿ.ಪಿ. ಕರಮಕರ ಅವರು ಎಸ್.ಆರ್. ಕಂಠಿ ಹಾಗೂ ಎಸ್.ಸಿ. ಮಿರ್ಜಿಯವರ ಜೊತೆಯಲ್ಲಿ ವಿಜಾಪೂರ ಜಿಲ್ಲೆಯಲ್ಲಿ ಸತ್ಯಾಗ್ರಹ ಪ್ರಚಾರ ಮಾಡಿದರು. ೧೪-೦೫-೧೯೪೧ರಂದು ಗುಳೇದಗುಡ್ಡದಲ್ಲಿ ನಂತರ ಬಬಲೇಶ್ವರ ಮತ್ತು ವಿಜಾಪೂರದಲ್ಲಿ ಸಾರ್ವಜನಿಕ ಸಭೆ ನಡೆಸಿದರು. "ಅಖಿಲ ಭಾರತ ಕಾಂಗ್ರೆಸದ ಪ್ರಧಾನ ಕಾರ್ಯದರ್ಶಿಗಳಾದ ಆಚಾರ್ಯ, ಕೃಪಾಲಾನಿಯವರು ೨೬-೦೯-೧೯೪೧ ರಂದು ವಿಜಾಪೂರಕ್ಕೆ ಭೇಟಿ ನೀಡಿ ಸಾರ್ವಜನಿಕ ಸಭೆ ನಡೆಸಿದರು."[೩೯] ಅಸ್ಪೃಶ್ಯತಾ ನಿವಾರಣಾ ಚಳವಳಿಯಿಂದ ಜಿಲ್ಲೆಯಲ್ಲಿ ಜಾಗೃತಿ ಮೂಡಿಸುವದರ ಜೊತೆಗೆ ಜನರಲ್ಲಿ ಬಾಂಧವ್ಯವನ್ನು ಮೂಡಿಸಿತು. ವೈಯಕ್ತಿಕ ಸತ್ಯಾಗ್ರಹದಲ್ಲಿ ಮಹಾತ್ಮರ ಅನುಮತಿ ಪಡೆದು ಚಳವಳಿ ಕೈಗೊಂಡ ಸತ್ಯಾಗ್ರಹಿಗಳು ಯಶಸ್ವಿಗೊಳಿಸಿದರು.

ಅಡಿ ಟಿಪ್ಪಣಿಗಳು

೧. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೧೮೬.

೨. ದ ಕಲೆಕ್ಟೆಡ್ ವರ್ಕ ಆಫ್ ಮಹಾತ್ಮಗಾಂಧಿ, ಸಂಪುಟ ೧೫, ಪುಟ ಸಂಖ್ಯೆ ೩೮೬–೩೮೭.

೩. ಬಿರಾದಾರ ಜಿ.ಎ., ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦, ಪುಟ ಸಂಖ್ಯೆ ೩೨೫.

೪. ಅದೇ, ಪುಟ ಸಂಖ್ಯೆ ೩೨೫.

೫. ಶ್ರೀರಾಮ ಇಟ್ಟಣ್ಣವರ, ಸ್ವಾತಂತ್ರ್ಯ ಹೋರಾಟಗಾರ್ತಿ ಸೀತಾಬಾಯಿ ತಿಮಸಾನಿ, ಎನಿ ಪ್ರಕಾಶನ, ಬೀಳಗಿ, ೨೦೦೦, ಪುಟ ಸಂಖ್ಯೆ ೧೫.

೬. ಹರ್ಡೇಕರ ಮಂಜಪ್ಪ, ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ, ಪ್ರಗತಿ ಗ್ರಂಥ ಪ್ರಚಾರ ಸಮಿತಿ, ಬೆಳಗಾವಿ, ೧೯೯೯, ಪುಟ ಸಂಖ್ಯೆ ೮೨.

೭. ಮಲ್ಲಿಕಾರ್ಜುನ ಮೇತ್ರಿ, ಕರ್ನಾಟಕ ಗಾಂಧಿ (ಹರ್ಡೇಕರ ಮಂಜಪ್ಪನವರ ಜೀವನ ಮತ್ತು ಕೃತಿಗಳು), ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಸಂಗಮ ಪ್ರಕಾಶನ, ವಿಜಾಪೂರ, ೨೦೦೨, ಪುಟ ಸಂಖ್ಯೆ ೧೪೧.

೮. ರಂಗನಾಥದಿವಾಕರ, ಕರ್ಮಯೋಗಿ ಹಣಮಂತರಾಯರು, ಕೌಜಲಗಿ ಹಣಮಂತರಾವ ಸ್ಮಾರಕ ನಿಧಿ, ಹುಬ್ಬಳ್ಳಿ ,೧೯೫೮, ಪುಟ ಸಂಖ್ಯೆ ೧೫೬.

೯. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೬೦.

೧೦. ರೇಡಿಯೋ ಸಂದರ್ಶನ ಏಣಗಿ ಬಾಳಪ್ಪ.

೧೧. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೫೫೮.

೧೨. ಸಂದರ್ಶನ, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಬಾಗಲಕೋಟ, ದಿನಾಂಕ ೧೫.೦೮.೨೦೧೩.

೧೩. ಶ್ರೀಹರ್ಷ (ಸಂ), ಲೋಕಾಭಿರಾಮ, ಗಾಲವ ಪ್ರಕಾಶನ, ಗಲಗಲಿ, ೧೯೮೦ ಪುಟ ಸಂಖ್ಯೆ ೧೮.

೧೪. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೮೦.

೧೫. ರಂಗನಾಥದಿವಾಕರ, ಕರ್ಮಯೋಗಿ ಹಣಮಂತರಾಯರು, ಕೌಜಲಗಿ ಹಣಮಂತರಾವ ಸ್ಮಾರಕ ನಿಧಿ, ಹುಬ್ಬಳ್ಳಿ ,೧೯೫೮, ಪುಟ ಸಂಖ್ಯೆ ೧೫೬.

೧೬. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೫೩೬.

೧೭. ಮೌಲಾನ ಅಬ್ದುಲ್ ಕಲಾಮ್ ಅಜಾದ, ಇಂಡಿಯಾ ವಿನ್ಸ್ ಫ್ರೀಡಂ, ಓರಿಯಂಟ್ ಲಾಂಗಮನ್, ನ್ಯೂ ದಿಲ್ಲಿ, ೧೯೮೯, ಪುಟ ಸಂಖ್ಯೆ ೩೦.

೧೮. ಹಾಲಪ್ಪ. ಜಿ.ಎಸ್. ಹಿಸ್ಟರಿ ಆಫ್ ಫ್ರೀಡಂ ಮೊವ್‌ಮೆಂಟ ಇನ್ ಕರ್ನಾಟಕ, ಸಂಪುಟ ೨, ಗೌರ್ನಮೆಂಟ್ ಆಫ್ ಮೈಸೂರು, ಬೆಂಗಳೂರು, ೧೯೬೪, ಪುಟ ಸಂಖ್ಯೆ ೫೫.

೧೯. ನರಸಿಂಹ ದಾಬಡೆ, ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨, ಪುಟ ಸಂಖ್ಯೆ ೩.

೨೦. ರಂಗನಾಥ ದಿವಾಕರ, ಸತ್ಯಾಗ್ರಹ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫, ಪುಟ ಸಂಖ್ಯೆ ೨೮೭.

೨೧. ಸಂದರ್ಶನ, ಮುದಕಪ್ಪ ಕಲಬುರ್ಗಿ. ಗುಳೇದಗುಡ್ಡ, ತಾ. ಬದಾಮಿ ದಿನಾಂಕ ೧೦-೮-೨೦೧೩.

೨೨. ವಿಶಾಲ ಕರ್ನಾಟಕ, ವಾರಪತ್ರಿಕೆ, ಧಾರವಾಡ, ದಿನಾಂಕ ೧೧-೦೬-೧೯೪೦.

೨೩. ಬಿರಾದಾರ ಜಿ.ಎ., ಕರ್ನಾಟಕ ಸರದಾರ ಪಟೇಲ ಚನ್ನಬಸಪ್ಪ ಅಂಬಲಿ, ಉದಯ ಪ್ರಕಾಶನ, ವಿಜಾಪೂರ, ೨೦೦೧ ಪುಟ ಸಂಖ್ಯೆ ೪೧.

೨೪. ಈಶ್ವರಚಂದ್ರ ಚಿಂತಾಮಣಿ, ಸುಗಂಧಿ ಮುರಿಗೆಪ್ಪನವರು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ ಗದಗ, ೧೯೮೫, ಪುಟ ಸಂಖ್ಯೆ ೩೭.

೨೫. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೦೨.

೨೬. ಅದೇ, ಪುಟ ಸಂಖ್ಯೆ ೧೨೦೮.

೨೭. ಅದೇ, ಪುಟ ಸಂಖ್ಯೆ ೧೨೨೪.

೨೮. ಅದೇ, ಪುಟ ಸಂಖ್ಯೆ ೧೨೩೩.

೨೯. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ.ಬದಾಮಿ, ದಿನಾಂಕ ೧೦-೮-೨೦೧೩.

೩೦. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೫೮೫.

೩೧. ಅದೇ, ಪುಟ ಸಂಖ್ಯೆ ೫೬೮.

೩೨. ಅದೇ, ಪುಟ ಸಂಖ್ಯೆ ೫೬೮.

೩೩. ಅದೇ, ಪುಟ ಸಂಖ್ಯೆ ೫೯೯.

೩೪. ಅದೇ, ಪುಟ ಸಂಖ್ಯೆ ೬೦೦.

೩೫. ಅದೇ, ಪುಟ ಸಂಖ್ಯೆ ೬೦೪.

೩೬. ಅದೇ, ಪುಟ ಸಂಖ್ಯೆ ೬೦೮ – ೬೦೯.

೩೭. ವಿಜಾಪೂರ ಜಿಲ್ಲಾ ಕಾಂಗ್ರೆಸ ಕಮಿಟಿಯ ಸತ್ಯಾಗ್ರಹದ ಸಂಕ್ಷಿಪ್ತ ವರದಿ, ದಿನಾಂಕ ೨೪-೦೪-೧೯೪೦ ರಿಂದ ೨೮-೦೨-೧೯೪೨, ಪುಟ ಸಂಖ್ಯೆ ೧.

೩೮. ಅದೇ, ಪುಟ ಸಂಖ್ಯೆ ೧.

೩೯. ವಿಜಾಪೂರ ಜಿಲ್ಲಾ ಕಾಂಗ್ರೆಸ ಕಮಿಟಿಯ ಸತ್ಯಾಗ್ರಹದ ಸಂಕ್ಷಿಪ್ತ ವರದಿ, ದಿನಾಂಕ ೨೪-೦೪-೧೯೪೦ ರಿಂದ ೨೮-೦೨-೧೯೪೨, ಪುಟ ಸಂಖ್ಯೆ ೩.

ಅಧ್ಯಾಯ ೯

ಚಲೇಜಾವ ಚಳವಳಿ

ಅಧ್ಯಾಯ ೯

ಚಲೇಜಾವ ಚಳವಳಿ

ಗಾಂಧೀಜಿಯವರ ಆದೇಶದಂತೆ ವೈಯಕ್ತಿಕ ಸತ್ಯಾಗ್ರಹದ ಎಲ್ಲ ಸತ್ಯಾಗ್ರಹಿಗಳು ಬಿಡುಗಡೆಯಾದರು. ಗಾಂಧೀಜಿ ಮತ್ತು ವೈಸರಾಯರ ಮಾತುಕತೆ ನಡೆದು ಸರಕಾರಕ್ಕೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಕಾಂಗ್ರೆಸ್ಸನಲ್ಲಿಯೇ ಸಮಾಜವಾದಿಗಳಾಗಿದ್ದ ಜಯಪ್ರಕಾಶ ನಾರಾಯಣ ಮುಂತಾದವರನ್ನು ಸರಕಾರ ಬಿಡುಗಡೆ ಮಾಡಲಿಲ್ಲ. ಇದು ಗಾಂಧೀಜಿಯವರನ್ನು ಕೆರಳಿಸಿತು.

೦೭-೧೨-೧೯೪೧ರಂದು ಜಪಾನ್ ಪರ್ಲ ಬಂದರ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡಿತು. ಹಾಗೂ ಬರ್ಮಾವನ್ನು ವಶಪಡಿಸಿಕೊಂಡು ಫೆಸಿಫಿಕ್ ಸಾಗರದವರೆಗೆ ಮುನ್ನಡೆದಿದ್ದರಿಂದ ಬ್ರಿಟಿಷರು ಭಾರತೀಯರನ್ನು ತಮ್ಮತ್ತ ಒಲಿಸಿಕೊಳ್ಳಲು ಉಪಾಯ ಮಾಡಿದರು. ಮಹಾಯುದ್ಧದಲ್ಲಿ ಭಾರತೀಯರ ಸಹಕಾರ ಪಡೆಯಲು ಬ್ರಿಟಿಷ್ ಸರಕಾರ ಸರ್. ಸ್ಟ್ಯಾಫರ್ಡ್ ಕ್ರಿಪ್ಸ್ ಅವರನ್ನು ಭಾರತಕ್ಕೆ ಕಳುಹಿಸಿತು. ಕ್ರಿಪ್ಸ್ ನಿಯೋಗ ಭಾರತಕ್ಕೆ ಬಂದು ಗಾಂಧಿ, ನೆಹರು, ಜಿನ್ನಾ ಮುಂತಾದ ಕಾಂಗ್ರೆಸ ಹಾಗೂ ಮುಸ್ಲಿಂ ಲೀಗ್‌ನೊಂದಿಗೆ ಮಾತುಕತೆ ನಡೆಸಿತು. ಕಾಂಗ್ರೆಸ ಕಾರ್ಯಕಾರಿ ಸಮಿತಿಯು ೧೯-೦೩-೧೯೪೨ ರಿಂದ ೧೧-೦೪-೧೯೪೨ರ ವರೆಗೆ ದೀರ್ಘ ಸಮಾಲೋಚನೆ ನಡೆಸಿತು. ಅಂತಿಮವಾಗಿ ಕ್ರಿಪ್ಸ್ ಹಾಗೂ ಭಾರತೀಯರ ನಡುವಿನ ಮಾತುಕತೆಗಳು ವಿಫಲವಾದವು.

ಮಹಾತ್ಮ ಗಾಂಧೀಜಿಯವರು ಕ್ರಿಪ್ಸ್ ಯೋಜನೆಯನ್ನು ದಿವಾಳಿ ಎದ್ದ ಬ್ಯಾಂಕಿನ ಮುಂದಿನ ದಿನಾಂಕದ ಚಕ್ ನೀಡಿದಂತೆ ಎಂದು ಟೀಕಿಸಿದರು. ಇದೇ ಸುಸಂಧಿ ಎಂದು ಬಗೆದು ಬ್ರಿಟಿಷರ ವಿರುದ್ಧವಾಗಿ ತೀವ್ರ ಕಾರ್ಯಾಚರಣೆ ತೊಡಗಿದರು. ಇಂಗ್ಲಿಷರು ಸುಸೂತ್ರವಾಗಿ ಭಾರತವನ್ನು ಬಿಟ್ಟು ಹೋದರೆ ಮಾತ್ರ ಭಾರತ ಮತ್ತು ಇಂಗ್ಲೆಂಡ ಎರಡು ದೇಶಗಳು ಸುರಕ್ಷಿತವಾಗಿ ಉಳಿಯಲು ಸಾಧ್ಯ ಎಂದು ಭಾರತವನ್ನು ಬಿಟ್ಟು ತೊಲಗಲು ಬ್ರಿಟಿಷರಿಗೆ ಇದು ತಕ್ಕ ಸಮಯ ಭಾರತದೊಂದಿಗಿದ್ದ ಇಂಗ್ಲಿಷರ ಸಂಬಂಧಗಳು ಕೂಡಲೇ ಕೊನೆಗೊಳ್ಳಬೇಕು, ಇದನ್ನು ಸಾಧಿಸಲು ನಾನು ಸರ್ವ ಶಕ್ತಿಗಳನ್ನು ಪಣಕ್ಕೆ ಒಡ್ಡುವೆನು'. ಬ್ರಿಟಿಷರು ಭಾರತದಲ್ಲಿ ನೆಲೆಯೂರಿದ್ದರಿಂದ ಜಪಾನ್‌ಗೆ ದಾಳಿಮಾಡಲು ಔತಣ ಕೊಟ್ಟಂತಾಗಿದೆ. ಸ್ವತಂತ್ರ ಭಾರತ ಜಪಾನನ್ನು ಎದುರಿಸಬಲ್ಲದು ಎಂದು ಮಹಾತ್ಮ ಗಾಂಧೀಯವರು ಅಭಿಪ್ರಾಯ ಪಟ್ಟರು.

"ಮೌಲಾನ ಅಜಾದ್, ನೆಹರು, ಗಾಂಧೀಜಿಯವರ ನಡುವೆ ಚಳವಳಿಯ ಕುರಿತು ದೀರ್ಘ ಚರ್ಚೆ ನಡೆಯಿತು. ಚಳವಳಿಯನ್ನು ಹಾಗೂ ಅದರ ಸಿದ್ಧತೆಯನ್ನು ಯಾವ ರೀತಿ ಮಾಡಬೇಕೆಂದು ಗಾಂಧೀಜಿಯವರನ್ನು ಕೇಳಿದಾಗ ಚಲೇಜಾವ ಚಳವಳಿಯನ್ನು ಮುಂದೂಡುವದು ಸರಿಯಲ್ಲ. ಅದು

ಹಾನಿಕಾರಕವಾಗಬಹುದು. ಚಳವಳಿಯ ಸಿದ್ಧತೆಗಾಗಿ ನಾನು ಇನ್ನು ಕಾಯಲು ತಯಾರಿಲ್ಲ ಎಂದು ಹೇಳಿದರು."[೧] ಗಾಂಧೀಜಿಯವರು ತಮ್ಮ ವಿಚಾರವನ್ನು ೭ ಜೂನ್ ೧೯೪೭೨ರ ಹರಿಜನ ಪತ್ರಿಕೆಯಲ್ಲಿ ಹೀಗೆ ಪ್ರಕಟಿಸಿದರು. "ಬ್ರಿಟಿಷರ ರಾಜ್ಯಾಡಳಿತವನ್ನು ಕಿತ್ತೆಸೆಯುವ ಅಹಿಂಸಾ ಶಕ್ತಿ ನಮ್ಮ ದೇಶದಲ್ಲಿ ಬೆಳೆದು ಬರಬೇಕೆಂದು ನಾನು ಈವರೆಗೆ ಕಾಯದೆ ಈಗ ನನ್ನ ನಿಲುವನ್ನು ಬದಲಾಯಿಸಬೇಕಾಗಿದೆ. ಇನ್ನು ಕಾಯುತ್ತಾ ಕೂಡುವದು ನನ್ನಿಂದ ಸಾಧ್ಯವಿಲ್ಲ. ನಾನು ಹೀಗೆಯೇ ಕಾಯುತ್ತಾ ಸಮಯ ಕಳೆದರೆ ಜಗತ್ತಿನ ಅಂತ್ಯದವರೆಗೆ ಕಾಯಬೇಕಾಗಬಹುದು. ಯಾವ ಸಿದ್ಧತೆಗಾಗಿ ನಾನು ಪ್ರಾರ್ಥಿಸುತ್ತಿದ್ದೆನೋ ಆ ಸಿದ್ಧತೆ ಎಂದಿಗೂ ಫಲಿಸದಿರಬಹುದು. ನಮ್ಮೆಲ್ಲರ ಆಸ್ತಿತ್ವಕ್ಕೆ ಮಾರಕವಾದ ಸ್ಥಿತಿಗತಿಗಳು ನಮ್ಮನ್ನು ದಹಿಸಬಹುದು. ಈ ಕಾರಣಕ್ಕಾಗಿ ಮುಂದೆ ಸಂಭವಿಸಬಹುದಾದ ಸಮಸ್ಯೆಗಳನ್ನು ಅನುಲಕ್ಷಿಸಿ ನಾನು ಜನರಿಗೆ ಪ್ರತಿಭಟಿಸಿರಿ ಎಂದು ಸಾರಿ ಹೇಳಲು ನಿಶ್ಚಯಿಸಿದ್ದೇನೆ."[೨]

ಜುಲೈ ೬, ೧೯೪೨ ರಂದು ವಾರ್ಧಾದಲ್ಲಿ ಕಾಂಗ್ರೆಸ ಸಮಿತಿಯ ಸಭೆ ಸೇರಿತು. ಆ ದಿನದ ಚರ್ಚೆಯಲ್ಲಿ ನೆಹರು ಅವರು ಚಲೇಜಾವ ಚಳವಳಿ ಎಂದರೆ ಪ್ರಕಟಿತ ಬಂಡಾಯವೇ? ಎಂದು ಗಾಂಧೀಜಿಯವರನ್ನು ಪ್ರಶ್ನಿಸಿದರು. ಪ್ರಕಟಿತ ಬಂಡಾಯ ಎಂಬ ಶಬ್ಧ ಗಾಂಧೀಜಿಯವರಿಗೆ ಹಿಡಿಸಿತು. ಭಾರತದಲ್ಲಿ ಅಹಿಂಸಾತ್ಮಕ ಕ್ರಾಂತಿಯನ್ನು ಹೂಡಲು ನಾನು ವಿಶ್ವ ಪ್ರಯತ್ನ ನಡೆಸಿದ್ದೇನೆ ಎಂದು ಘೋಷಿಸಿದರು. ಸಭೆಯು "೧೪ ಜುಲೈ ೧೯೪೨ ರಂದು ರಾಷ್ಟ್ರೀಯ ಬೇಡಿಕೆಯನ್ನು ರೂಪಿಸಿತು. ಭಾರತೀಯರಿಗೆ ತಕ್ಷಣವೇ ಅಧಿಕಾರ ವರ್ಗಾಯಿಸಬೇಕೆಂದೂ ಭಾರತ ಬಿಟ್ಟು ತೊಲಗಿರೆಂದೂ ಬ್ರಿಟನ್ನಿಗೆ ಕರೆ ಕೊಟ್ಟಿತು. ಈ ಸೂಚನೆ ತಿರಸ್ಕರಿಸಿದ್ದೆ ಆದರೆ ಕಾಂಗ್ರೆಸ ತನಗೆ ಇಷ್ಟವಿಲ್ಲದಿದ್ದರೂ ೧೯೨೦ ರಿಂದಲೂ ತಾನು ಸಂಚಯಗೊಳಿಸಿಕೊಂಡಿರುವ ಸಮಸ್ತ ಅಹಿಂಸಾತ್ಮಕ ಶಕ್ತಿಯನ್ನು ಉಪಯೋಗಿಸಲೇ ಬೇಕಾಗುತ್ತದೆ. ನೇರ ಕ್ರಿಯಾ ಚಳವಳಿ ಹೂಡಬೇಕಾಗುತ್ತದೆ. ಈ ನೀತಿಯ ನಿರ್ಧಾರವನ್ನು ಅನುಮೋದಿಸಲು ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅಧಿವೇಶನವು ಅಗಸ್ಟ್ ೭ ರಂದು ಮುಂಬಯಿಯಲ್ಲಿ ನೆರವೇರತಕ್ಕದ್ದು ಎಂದು ತೀರ್ಮಾನಿಸಲಾಯಿತು."[೩]

೯.೧ ಚಳವಳಿಯ ಆರಂಭ

ಅಗಸ್ಟ್ ೭ ಮತ್ತು ೮, ೧೯೪೨ರಲ್ಲಿ ಅಖಿಲ ಭಾರತ ಕಾಂಗ್ರೆಸ ಅಧಿವೇಶನ ಮುಂಬಯಿಯಲ್ಲಿ ಜರುಗಿತು. ಅಗಸ್ಟ್ ೮ ರಂದು ಪ್ರಖ್ಯಾತ ಭಾರತ ಬಿಟ್ಟು ತೊಲಗಲಿ ಎಂಬ ನಿರ್ಣಯವನ್ನು ಸ್ವೀಕರಿಸಿತು. ಈ ಗುರಿ ಸಾಧಿಸಲು ಗಾಂಧೀಜಿಯವರ ನೇತೃತ್ವದಲ್ಲಿ ಸಾಮೂಹಿಕ ಅಹಿಂಸಾತ್ಮಕ ಚಳವಳಿಯನ್ನು ಆರಂಭಿಸುವ ಪ್ರಸ್ತಾವನೆ ಸಲ್ಲಿಸಿತು. ನಿರ್ಣಯದ ಘೋಷಣೆ ಹೀಗಿವೆ...

ಭಾರತದ ಉದ್ದೇಶಗಳು ಮತ್ತು ಸಂಯುಕ್ತ ರಾಷ್ಟ್ರಗಳ ಉದ್ದೇಶಗಳ ಗೆಲುವಿಗಾಗಿ, ಭಾರತದಲ್ಲಿ ಬ್ರಿಟಿಷ ಆಳ್ವಿಕೆಯು ತಕ್ಷಣ ಅಂತ್ಯಗೊಳ್ಳುವದು ಅತ್ಯಂತ ಅವಶ್ಯಕವಾಗಿದೆ. ಆಧುನಿಕ ಸಾರ್ವಭೌಮತ್ವದ

ಉತ್ತಮ ದೇಶವಾದ ಭಾರತದ ಪ್ರಶ್ನೆಯು ಒಗಟೆನದಾಗಿದೆ. ಏಕೆಂದರೆ "ಭಾರತದ ಸ್ವಾತಂತ್ರ್ಯದಿಂದ ಬ್ರಿಟನ್ ಮತ್ತು ಆಫ್ರಿಕಾಗಳ ಜನರಲ್ಲಿ ಭರವಸೆ ಮತ್ತು ಉತ್ಸಾಹಗಳನ್ನು ತುಂಬಬೇಕಾಗಿದೆ. ಆದ್ದರಿಂದ ಈ ದೇಶದಲ್ಲಿ ಬ್ರಿಟಿಷ ಆಳ್ವಿಕೆಯ ಅಂತ್ಯವು ಯುದ್ಧದ ಭವಿಷ್ಯ ಹಾಗೂ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಗೆಲುವುಗಳನ್ನು ನಿರ್ಧರಿಸುವ ಅತ್ಯಂತ ಅವಶ್ಯಕ ಅಂಶವಾಗಿದೆ. ಸ್ವಾತಂತ್ರ್ಯ ಹೋರಾಟ ಮತ್ತು ನಾಜಿಸಂ, ಸರ್ವಾಧಿಕಾರ ಮತ್ತು ಸಾರ್ವಭೌಮತೆಗಳ ವಿರುದ್ಧ ಹೋರಾಟದಲ್ಲಿ ತನ್ನ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸ್ವತಂತ್ರ ಭಾರತವು ಭರವಸೆ ನೀಡುತ್ತದೆ."[೪]

ಅಗಸ್ಟ್ ೮ ರ ರಾತ್ರಿ ಕಾಂಗ್ರೆಸ ಪ್ರತಿನಿಧಿಗಳನ್ನು ಉದ್ದೇಶಿಸಿ ಗಾಂಧಿಯವರು ಮಾತನಾಡುತ್ತಾ "ನನಗೆ ತಕ್ಷಣ ಸಾದ್ಯವಾದರೆ, ಈ ರಾತ್ರಿಯೇ, ಬೆಳಕು ಹರಿಯುದರೊಳಗೆ ಸ್ವಾತಂತ್ರ್ಯ ಬೇಕು. ವಂಚನೆ ಮತ್ತು ಅಸತ್ಯವು ಈಗ ವಿಶ್ವವನ್ನು ಭೇಟಿಯಾಡುತ್ತಿವೆ. ನಾನು ವೈಸರಾಯನ ಜೊತೆಗೆ ಮಂತ್ರಿಗಳಿಗಾಗಿ ಅಥವಾ ಅಂತಹ ಮತ್ತಾವುದೇ ವಿಚಾರಗಳಿಗೆ ಚೌಕಾಸಿ ಮಾಡುವದಿಲ್ಲ ಎಂಬ ಮಾತಿನಲ್ಲಿ ನಂಬಿಕೆ ಇಡಿ. ಸಂಪೂರ್ಣ ಸ್ವಾತಂತ್ರ್ಯಕ್ಕೆ ಕಡಿಮೆಯಾದ ಯಾವುದರಿಂದಲೂ ನಾನು ತೃಪ್ತನಾಗುವದಿಲ್ಲ... ಇಲ್ಲಿ ನಾನು ನಿಮಗೆ ಕೊಡುವ ಪುಟ್ಟ ಮಂತ್ರವಿದೆ. ಅದನ್ನು ನೀವು ನಿಮ್ಮ ಹೃದಯಗಳ ಮೇಲೆ ಅಚ್ಚೊತ್ತಿಕೊಳ್ಳಿ ಮತ್ತು ನಿಮ್ಮ ಪ್ರತಿಯೊಂದು ಉಸಿರಾಟವೂ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಲಿ. ಆ ಮಂತ್ರವೆಂದರೆ 'ಮಾಡು ಇಲ್ಲವೆ ಮಡಿ' ನಮ್ಮ ಪ್ರಯತ್ನದಲ್ಲಿ ನಾವು ಭಾರತವನ್ನು ಸ್ವತಂತ್ರಗೊಳಿಸೋಣ ಅಥವಾ ಆ ಪ್ರಯತ್ನದಲ್ಲಿ ಮಡಿಯೋಣ ನಮ್ಮ ಗುಲಾಮಿಕೆಯು ಬೇರೂರುವುದನ್ನು ನೋಡಲು ನಾವು ಬದುಕಿರುವದು ಬೇಡ."[೫] ರಾತ್ರಿ ೧೨ ಗಂಟೆಗೆ ಎ.ಐ.ಸಿ.ಸಿ. ಕಾರ್ಯಕ್ರಮ ಮುಗಿಸಿ ನಾಯಕರೆಲ್ಲರು ಬಿರ್ಲಾ ಭವನಕ್ಕೆ ಬಂದರು. ಸರಕಾರ ನಾಯಕರನ್ನು ಬಂಧಿಸಲು ಮುಂಬಯಿ ವಿಕ್ಟೋರಿಯಾ ಟರ್ಮಿನಲ್‌ದಲ್ಲಿ ರೈಲು ವ್ಯವಸ್ಥೆ ಮಾಡಿತ್ತು. ಬೆಳಗಿನ ಜಾವ ಸುಮಾರು ೨ ಗಂಟೆಗೆ ನಾಯಕರೆಲ್ಲರನ್ನು ಬಂಧಿಸಲಾಯಿತು. ಗಾಂಧೀಜಿಯವರನ್ನು ಪುಣೆಯ ಆಗಾಖಾನ್ ಅರಮನೆಯಲ್ಲಿ ಸ್ಥಾನಬದ್ಧತೆಯಲ್ಲಿ ಇಡಲಾಯಿತು. ನೆಹರು, ವಲ್ಲಬಬಾಯಿ ಪಟೇಲ್, ಮೌಲಾನ್ ಆಜಾದ್ ಮುಂತಾದವರನ್ನು ಅಹ್ಮದನಗರ ಕೋಟೆಯಲ್ಲಿ ಸ್ಥಾನ ಬದ್ಧತೆಯಲ್ಲಿ ಇಡಲಾಯಿತು. ಈ ಬಂಧನಗಳ ಸುದ್ಧಿಯಿಂದ ಇಡಿ ದೇಶ ದಿಗ್ಭ್ರಮೆಗೊಂಡಿತು ಮತ್ತು ದೇಶದ ಎಲ್ಲ ಭಾಗಗಳಲ್ಲಿಯ ಜನರ ಮಡುಗಟ್ಟಿದ ಸಿಟ್ಟು ಅಭಿವ್ಯಕ್ತಗೊಂಡಿತು. ಸ್ವಯಂ ಪ್ರೇರಿತ ಪ್ರತಿಭಟನಾ ಚಳವಳಿಗಳು ಆರಂಭವಾದವು. ಎಡಪಂಥಿಯ ನಾಯಕರು ಮತ್ತು ಯಾವುದೇ ಸಂಸ್ಥೆಗಳಿಗೆ ಸೇರದ ಜನರು ತಮಗೆ ಸಾದ್ಯವಾದ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ದೇಶಾದ್ಯಂತ ಹರತಾಳ, ಮುಷ್ಕರಗಳು ಮತ್ತು ಪ್ರತಿಭಟನೆಗಳು ನಡೆದವು. ಆ ಕಾರಣದಿಂದ ಹಲವೆಡೆ ಲಾಠಿ ಪ್ರಹಾರ ಮತ್ತು ಗುಂಡಿನ ದಾಳಿಗಳು ನಡೆದವು. ಗುಂಡಿನ ದಾಳಿಗಳಿಂದ ಮತ್ತು ದಮನಗಳಿಂದ ಸಿಟ್ಟುಕೊಂಡ ಜನರು ಅನೇಕ ಕಡೆಗಳಲ್ಲಿ ಹಿಂಸಾಕೃತ್ಯಗಳಿಗೆ ಇಳಿದರು. ಪೊಲೀಸ ಠಾಣೆಗಳು, ಅಂಚೆ ಕಛೇರಿಗಳು, ರೈಲ್ವೆ ಸ್ಟೇಷನ್‌ಗಳು ಇತ್ಯಾದಿಗಳ ಮೇಲೆ ಆಕ್ರಮಣ ಮಾಡಿದರು.

ಟೆಲಿಗ್ರಾಫ್, ಟೆಲಿಫೋನ್ ತಂತಿಗಳನ್ನು ಕತ್ತರಿಸಿದರು. ರೈಲು ಮಾರ್ಗಗಳನ್ನು ಧ್ವಂಸ ಮಾಡಿದರು.ಗಾಂಧೀಜಿಯವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮೇಲೆ ಸಂಪೂರ್ಣ ನಂಬಿಕೆ ಇತ್ತು. ಗೋಪಾಲರಾವ ಬೆಲವಡಿಯವರು ಅಗಸ್ಟ್ ೮ ರಂದು ಅಖಿಲ ಭಾರತ ಕಾಂಗ್ರೆಸ ಅಧಿವೇಶನಕ್ಕೆ ಮುಂಬಯಿಗೆ ಹೋದಾಗ ಅಧಿವೇಶನದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿದರು. ಆಗ ಗಾಂಧಿಯವರು ಈ ಯಜ್ಞದಲ್ಲಿ ಎಲ್ಲ ಕರ್ನಾಟಕದವರು ಭಾಗವಹಿಸುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಹೇಳಿ ಕರ್ನಾಟಕ ಜನರ ತ್ಯಾಗವನ್ನು ಬಣ್ಣಿಸಿದರು.

"ಗಾಂಧೀಜಿಯವರ ಬಂಧನದ ವಾರ್ತೆ ಅಗಸ್ಟ್ ೯ ರಂದು ಕರ್ನಾಟಕದ ಪ್ರಮುಖ ಕೇಂದ್ರಗಳಿಗೆ ತಲುಪಿತು. ಹುಬ್ಬಳ್ಳಿಯಲ್ಲಿ ಬೆಳಗಾಗುವ ಮೊದಲೆ ಸುಣ್ಣದಿಂದ ಟಾರ್ ರಸ್ತೆಯ ಮೇಲೆ ಗಾಂಧೀಜಿಯವರ ಬಂಧನದ ಸುದ್ಧಿ ಬರೆಯಲ್ಪಟ್ಟಿತ್ತು. ಇದೆ ರೀತಿ ಬೆಂಗಳೂರಿನ ಟಾರ್ ರಸ್ತೆಯ ಮೇಲೆ ಬರೆಯಲಾಯಿತು. ಅಂದೆ ಧಾರವಾಡದಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಪೊಲೀಸರು ಅದನ್ನು ತಡೆದಾಗ ವಿದ್ಯಾರ್ಥಿಗಳು ಮಾರ್ಗ ಮದ್ಯದಲ್ಲಿಯೇ ಕುಳಿತು ರಾಮಧುನ್ ಹಾಡತೊಡಗಿದಾಗ ಜಿಲ್ಲಾಧಿಕಾರಿ ಮದ್ಯ ಪ್ರವೇಶಿಸಿ ಮೆರವಣಿಗೆ ಮಾಡಲು ಅವಕಾಶ ನೀಡಿದರು. ಹುಬ್ಬಳ್ಳಿಯಲ್ಲಿ ನಾ.ಸು. ಹರ್ಡೀಕರ್, ಜಿಲ್ಲಾ ಕಾಂಗ್ರೆಸ ಕಾರ್ಯದರ್ಶಿ ದೇವಪುರೆ ತಾಲೂಕ ಕಾಂಗ್ರೆಸ ಕಾರ್ಯದರ್ಶಿ ಸಯ್ಯದ್ ಬಂದಾರ್, ಆರ್.ವಿ. ಕರಗುದರಿ ವಿರಕ್ತಮಠ ಬಂಧನವಾಯಿತು. ಬೆಳಗಾವಿಯಲ್ಲಿ ಭೀಮರಾವ್ ಪೋತೆದಾರ, ಕೆ.ಎಸ್.ಪಾಟೀಲ, ಜೀವಣರಾವ್ ಯಾಳಗಿ ಮುಂತಾದವರು ಬಂಧನಕ್ಕೆ ಒಳಗಾದರು."[೬] ವಿಜಾಪೂರ ಜಿಲ್ಲೆಯಲ್ಲಿ ಅಗಸ್ಟ್ ೯ ರಂದು ಆರ್.ಜಿ. ದುಬೆ ಮತ್ತು ಮುರಿಗೆಪ್ಪ ಸುಂಗಧಿಯವರ ಬಂಧನವಾಯಿತು. "ರತನಚಂದ್ ಜಗಶೆಟ್ಟಿಯವರು ದಾಖಲಿಸಿರುವಂತೆ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಘೋಷಣೆ ಆದಾಗ ನಾನು ವಿಜಾಪೂರದ ಎಸ್.ಎಸ್. ಹೈಸ್ಕೂಲದಲ್ಲಿ ಮ್ಯಾಟ್ರಿಕ್ ಓದುತ್ತಿದ್ದೆ. ೦೯-೦೮-೧೯೪೨ಕ್ಕೆ ನಾವೆಲ್ಲರು ಒಟ್ಟುಗೂಡಿ ಪ್ರಭಾತಫೇರಿ ಹೊರಡಬೇಕೆಂದು ಹಿಂದಿನ ಠರಾವು ಮಾಡಿಕೊಂಡೆವು. ಸಿದ್ದೇಶ್ವರ ದೇವಾಲಯದ ಮುಂದಿನ ಪಟಾಂಗಳದಲ್ಲಿ ವಿದ್ಯಾರ್ಥಿಗಳೆಲ್ಲರು ಒಟ್ಟುಗೂಡಿದರು. ನಾನು ಸ್ವತಂತ್ರದ ಬಗ್ಗೆ ಮಾತನಾಡಿದೆನು. ಪ್ರಭಾತಫೇರಿಗೆ ಹೊರಟಾಗ ನಮ್ಮ ಬಂಧನವಾಯಿತು. ಉಳಿದವರನ್ನು ಮರಳಿ ಕಳುಹಿಸಿ ಕೇವಲ ೧೧ ಜನರನ್ನು ಬಂಧಿಸಿದರು."[೭]

ಶಿವಸಂಗಪ್ಪ ಉಳ್ಳಾಗಡ್ಡಿಯವರು ಹರತಾಳದ ಅನುಭವಗಳನ್ನು ಹೀಗೆ ಹಂಚಿಕೊಂಡಿದ್ದಾರೆ. "೦೯-೦೮-೧೯೪೨ ರಂದು ಸಂಜೆ ಅಡತಿ ಬಜಾರದಲ್ಲಿ ಮೆರವಣಿಗೆ ಜಿ.ಆರ್. ಮೋಟಗಿ ಅವರ ಅಂಗಡಿ ಬಳಿ ಬರುವಾಗ ಪೊಲೀಸರು ಮೆರವಣಿಗೆಯನ್ನು ತಡೆದು ಅನೇಕರನ್ನು ಹೊಡೆದರು. ಸಂಗಪ್ಪಾ ನಾಗಮೊತಿ ಧ್ವಜ ಹಿಡಿದಿದ್ದನ್ನು ಒಬ್ಬ ಪೊಲೀಸ ಅಧಿಕಾರಿ ಕಸಿದುಕೊಂಡನು. ಇದನ್ನು ನೋಡಿದ ನಾನು ಮತ್ತು ಸಿಂಗಪ್ಪ ಬೋರಗಿ ಕೂಡಿ ಆ ಅಧಿಕಾರಿಯನ್ನು ಗಟಾರದಲ್ಲಿ ನುಗಿಸಿ ಅವನ ಟೊಪ್ಪಿಗೆ ಕಸಿದುಕೊಂಡೆವು. ಆಗ ಎಸ್.ಬಿ. ಪಾಟೀಲ(ಸುನಗ), ವಸಂತಪಾಟೀಲ, ತಾಳಿಕೋಟೆಯ ಮಸಳಿ.

ಸಾಳುಂಕೆ, ನಿಂಗಪ್ಪ ಲಾಯದಗುಂದಿ ಬಂಧಿತರಾದರು."[೮] "ಅಗಸ್ಟ್ ೧೧ರಂದು ಜಮಖಂಡಿಯ ಮಾರುಕಟ್ಟೆ ಪ್ರವೇಶದಲ್ಲಿ ಮಧ್ಯಾಹ್ನ ೧೨:೦೦ಕ್ಕೆ ಡಾ. ಹುಲ್ಯಾಳಕರ ಅವರ ಅಧ್ಯಕ್ಷತೆಯಲ್ಲಿ ಹರತಾಳ ನಡೆಯಿತು. ಸಭೆ ಎರಡು ಸಾವಿರ ಜನ ಸೇರಿದ್ದರು. ಭಂಗಿ ವಕೀಲರು, ರಾಮಭಾವು ಕುಲಕರ್ಣಿ, ನರಗುಂದಕರ್ ವಕೀಲರು ಹಾಗೂ ಲೋಕಾಪೂರ ಭಾಷಣ ಮಾಡಿದರು."[೯] ಬನಹಟ್ಟಿಯಲ್ಲಿ ಹರತಾಳ ಆರಂಭಗೊಂಡು ಊರಲ್ಲಿಯ ಎಲ್ಲ ಅಂಗಡಿಗಳು ಹೋಟೆಲಗಳು ಬಂದ್ ಮಾಡಿದ್ದರು. ಪ್ರೌಢಶಾಲೆ ವಿದ್ಯಾರ್ಥಿಗಳು ಶಾಲೆಗಳನ್ನು ತೊರೆದರು. ಬನಹಟ್ಟಿಯ ಪರಯ್ಯ ಬಂಗಿಯವರು ಹೇಳುವಂತೆ ೧೯೪೨ರಲ್ಲಿ ನಾಯಕರ ಬಂಧನವಾದಾಗ ನಾವೂ ಚಳವಳಿಯಲ್ಲಿ ಭಾಗವಹಿಸಬೇಕೆಂಬ ಭಾವನೆ ಬೆಳೆಯಿತು. ಶಾಲೆಯಲ್ಲಿ ಸರಸ್ವತಿಯ ಪೂಜೆ ನಡೆಸುವ ಬದಲು ಮಹಾತ್ಮಾಗಾಂಧಿಯವರ ಭಾವಚಿತ್ರದ ಮೆರವಣಿಗೆ ನಡೆಸಲು ನಿರ್ಧರಿಸಿದೆವು. ಬಸವಣ್ಣೆಪ್ಪ ಮಟ್ಟಿಕಲ್ಲ, ಗಂಗಾಧರ ಗುಲ್ಲ, ಚನ್ನಮಲ್ಲಪ್ಪ ಯಲ್ಲಟ್ಟಿಯವರ ಬೆಂಬಲ ನೀಡಿದರು. ಒಂದು ಕುರ್ಚಿಯ ಮೇಲೆ ಭಾವಚಿತ್ರವಿಟ್ಟು ಅದನ್ನು ತಲೆ ಮೇಲೆ ಹೊತ್ತುಕೊಂಡು ಮೆರವಣಿಗೆ ನಡೆಸಿದೆವು.....ಒಮ್ಮೆ ಹಗಲು ಹೊತ್ತಿನಲ್ಲಿ ತಂತಿ ಕತ್ತರಿಸಿದಾಗ ಪೊಲೀಸರು ಬಂಧಿಸಲು ಬಂದರು ಆದರೆ ಜನಜಂಗುಳಿ ಕೂಡಿದ್ದರಿಂದ ಹೆದರಿ ಬಿಟ್ಟರು. ೧೪-೦೮-೧೯೪೨ರಂದು ಬ್ರಿಟಿಷರು ಭಾರತ ಬಿಟ್ಟು ತೊಲಗಲೇಬೇಕು ವಿಜಾಪೂರ ವಿದ್ಯಾರ್ಥಿಗಳು ಹಾಗೂ ವ್ಯಾಪಾರಸ್ಥರಿಂದ ಎಚ್ಚರವಾಗಿರಿ ಎಂಬ ಬರಹವನ್ನು ವಿಜಾಪೂರದ ಗೋಡೆಗಳ ಮೇಲೆ ಅಂಟಿಸಲಾಗಿತ್ತು.

"೧೫-೦೮-೧೯೪೨ ರಂದು ವಿಜಾಪೂರದ ಶಾಲೆಗಳ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸೇರಿ ಮುಂಜಾನೆ ೬ ಗಂಟೆಗೆ ರಾಷ್ಟ್ರಧ್ವಜವನ್ನು ಹಾರಿಸಿದ ನಂತರ ಮೆರವಣಿಗೆ ಹೊರಟರು. ಅದು ಮಾರುಕಟ್ಟೆ ತಲುಪಿದಾಗ ಪೊಲೀಸರು ವಿದ್ಯಾರ್ಥಿಗಳಿಗೆ ಚದುರುವಂತೆ ಸೂಚಿಸಿದರು. ಕೆಲ ವಿದ್ಯಾರ್ಥಿಗಳು ಚದುರಿದರು. ವಿದ್ಯಾರ್ಥಿಗಳ ಜೊತೆ ಊರಿನ ನಾಗರಿಕರು ಸೇರಿಕೊಂಡು ರಾಷ್ಟ್ರಭಕ್ತಿಗೀತೆಗಳನ್ನು ಹಾಡುತ್ತ ಮತ್ತೆ ಮೆರವಣಿಗೆ ಹೊರಟು ಪೊಲೀಸ್ ಕಛೇರಿ ತಲುಪಿದಾಗ ೯೨ ಜನರ ಬಂಧನವಾಯಿತು. ೪ ರಿಂದ ೮ ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡರು. ಅಂದು ಪೊಲೀಸರು ಊರಲ್ಲಿ ಗಸ್ತು ತಿರುಗಿ ಚಳವಳಿಯನ್ನು ನಿಯಂತ್ರಿಸಲು ಮುಂದಾದರು. ಮುಂದಿನ ಶನಿವಾರ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ತಮ್ಮ ಶಾಲೆಯ ಮೇಲೆ ಧ್ವಜವನ್ನು ಹಾರಿಸಿದರು. ಆದರೆ ಮುಖ್ಯೋಪಾಧ್ಯಾಯ ಅದನ್ನು ತೆಗೆದು ಹಾಕಿದ ಅಂದಿನ ಹರತಾಳದಲ್ಲಿ ಎಲ್ಲ ವ್ಯಾಪಾರಸ್ಥರು ಭಾಗವಹಿಸಿದ್ದರು. ಬ್ಯಾರಿಸ್ಟರ ಅಂಕಲಿಕರ ಬಂಧಿತರಾದರು."[೧೦] ಮಹಾದೇವ ದೇಸಾಯಿಯವರ ನಿಧನದ ಸುದ್ಧಿ ತಿಳಿದ ನಂತರ ವಿಜಾಪೂರದಲ್ಲಿ ಹರತಾಳ ಆಚರಿಸಿದ ನಂತರ ಸಭೆಯನ್ನು ಸಂಘಟಿಸಿದರು ಅಂದು ೯೦ ಜನರು ಬಂಧನಕ್ಕೆ ಒಳಗಾದರು.

೧೭-೦೮-೧೯೪೨ ರಂದು ಬಾಗಲಕೋಟದಲ್ಲಿ ೨೦೦ ಜನ ವಿದ್ಯಾರ್ಥಿಗಳು ಸೇರಿ ಭಾರಿ ಮೆರವಣಿಗೆ ಮಾಡಿದರು. ಜನರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿದರು"ಅದೇ ದಿನ

ಕೊಣ್ಣೂರದಲ್ಲಿ ರಾಷ್ಟ್ರಧ್ವಜ ಹಿಡಿದುಕೊಂಡು ಗಂಗಪ್ಪ ದ್ಯಾಪುರ, ಗುರುಪ್ಪ ಐನಾಪುರ ಮತ್ತು ಬಸವ ಮಕಾಂದಾರ ಮೆರವಣಿಗೆ ಮಾಡಿದ್ದರಿಂದ ಬಂಧನಕ್ಕೆ ಒಳಗಾದರು. ಬದಾಮಿ ತಾಲೂಕಿನ ನಾಲ್ಕು ಹುಡುಗರು ಕೆಲೂಡಿ, ತೊಗಣಸಿ, ಕುಟಕನಕೇರಿ, ಕೆಂದೂರು ನಂದಿಕೇಶ್ವರ ಬಾಚಿನಗುಡ್ಡ ಮುಂತಾದ ಗ್ರಾಮಗಳಿಗೆ ಸಂಚರಿಸಿ ಗಾಂಧೀಜಿಯವರ ಸಂದೇಶವನ್ನು ಸಾರಿದರು. ೨೧-೦೮-೧೯೪೨ ರಂದು ಬಾಗಲಕೋಟದಲ್ಲಿ ಚಾವಡಿ ಮುಂದೆ ಧ್ವಜ ಹಾರಿಸಿ ಊರಲ್ಲಿ ಮೆರವಣಿಗೆ ಮಾಡಿದರು. ಪೊಲೀಸರು ಧ್ವಜವನ್ನು ಜಪ್ತ ಮಾಡಿ ೧೯ ಜನರನ್ನು ಬಂಧಿಸಿದರು."[೧೧]

ವಿಜಾಪೂರ ಜಿಲ್ಲೆಯ ಚಳವಳಿಯ ಆರಂಭಿಕ ಸಂಘಟನೆಯ ಕುರಿತು ವಿಜಾಪೂರ ಡಿ.ಎಸ್.ಪಿ.ಯಾಗಿದ್ದ ಡಿ.ಎ. ಶಿರೋಳೆಯವರು ವರದಿ ಮಾಡಿರುವಂತೆ "ಚನ್ನಬಸಪ್ಪ ಅಂಬಲಿ ಗುಳೇದಗುಡ್ಡದ ಸಿದ್ರಾಮಪ್ಪ ತಿಪ್ಪಾ ಮತ್ತು ಚೋಳಚಗುಡ್ಡದ ಸಿದ್ದಪ್ಪ ಮಾಳವಾಡರು ಬಂಡುಕೋರರ ಕೂಟ ಸಂಘಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆಡಳಿತದ ಯಂತ್ರೋಪಕರಣಗಳನ್ನು ನಾಶಪಡಿಸುತ್ತಿರುವರು. ಈ ಮೂವರು ವ್ಯಕ್ತಿಗಳೇ ಬಂಡುಕೋರರ ಕೂಡ ಸಂಘಟನೆಯ ಹಿಂದಿರುವರು ಎಂದು ಗುರುತಿಸಲಾಗಿದೆ. ಸಿದ್ರಾಮಪ್ಪ ತಿಪ್ಪಾರ ನಂಬಿಗಸ್ಥ ಅನುಯಾಯಿಗಳಾದ ಗುಳೇದಗುಡ್ಡದ ಕನಕಪ್ಪ ಕಜೀರಪ್ಪ ದೇವದಾಸ ಎಂಬುವವನ ಮೂಲಕ ಅನಕ್ಷರಸ್ಥ ಜನರ ಮನವನ್ನು ಗೆದ್ದಿರುವರು. ಹಾಗೂ ಜನರಿಂದ ಸುದ್ಧಿ ತಿಳಿದುಕೊಳ್ಳುತ್ತಿದ್ದರು. ಸೂಳಿಭಾವಿ, ಕಮತಗಿ ಮತ್ತು ಅಮೀನಗಡಗಳಿಂದ ೨೦ ಜನಗಳ ಗುಂಪುಗಳನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾಗಿರುವರು."[೧೨]

೯.೨ ಶಾಂತಿಯುತ ಪ್ರತಿಭಟನೆ

ಗುಳೇದಗುಡ್ಡದ ಮುದಕಪ್ಪ ಕಲಬುರ್ಗಿಯವರು ತಮ್ಮ ಅನುಭವಗಳನ್ನು ಹೀಗೆ ಹೇಳಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ ಕಮಿಟಿಯ ಕ್ರಿಯಾ ಸಮಿತಿಯ ಅಧ್ಯಕ್ಷರು ಹಾಗೂ ವಿಜಾಪೂರ ಜಿಲ್ಲಾ ಕಾಂಗ್ರೆಸನ ಅಧ್ಯಕ್ಷರು ಆಗಿದ್ದ ಅಂಬಲಿ ಚನ್ನಬಸಪ್ಪನವರು ಕರ್ನಾಟಕದಲ್ಲಿ ಚಲೇಜಾವ ಚಳವಳಿಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊಂದಿದ್ದರು. ಆಗಾಗ ಗುಳೇದಗುಡ್ಡಕ್ಕೆ ಬರುತ್ತಿದ್ದರು. ವಿಜಾಪೂರ ಜಿಲ್ಲಾ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಯಾಗಿದ್ದ ಶರಣಯ್ಯ ವಸ್ತ್ರದ, ಬದಾಮಿ ತಾಲೂಕ ಕಾಂಗ್ರೆಸದ ಅಧ್ಯಕ್ಷರಾಗಿದ್ದ ಸಿದ್ದಪ್ಪ ಮಾಳವಾಡ, ಮಹಾರುದ್ರಪ್ಪ ಪಟ್ಟಣಶೆಟ್ಟಿಯವರು ಗುಳೇದಗುಡ್ಡಕ್ಕೆ ಬಂದಾಗ ಲಕ್ಷಣಸಾ ಕಾವಡೆ ಮತ್ತು ನಾನು (ಮುದಕಪ್ಪನವರು) ಸೇರಿಕೊಂಡು ಪುರಸಭೆಯ ಎದುರಿನ ಕಟ್ಟೆಯ ಮೇಲೆ ಭಾಷಣ ಏರ್ಪಡಿಸಿದೆವು. ಅಂಬಲಿಯವರು ಸರಕಾರದ ಯಂತ್ರ ತಡೆ ಹಿಡಿಯಬೇಕು, ಎಲ್ಲರು ಕೂಡಿ ಹೋರಾಡಿದರೆ ಸ್ವರಾಜ್ಯ ದೊರಕುವದೆಂದು ಭಾಷಣ ಮಾಡಿದರು. "ವಿಜಾಪೂರದ ಸಗಟು ವ್ಯಾಪಾರಸ್ಥರು ಮತ್ತು ಕಿರಾಣಿ ವ್ಯಾಪಾರಸ್ಥರು ಅಗಸ್ಟ್ ೩೦ ರಂದು ಸಭೆ ಸೇರಿ ಮಹದೇವ ದೇಸಾಯಿಯವರ ಮರಣವನ್ನು ಖಂಡಿಸಿ ಮತ್ತು ಬ್ರಿಟಿಷ ಸರಕಾರ ಬಂಧಿಸಿದ ಕಾಂಗ್ರೆಸ ಮುಖಂಡರನ್ನು ಬಿಡುಗಡೆಗೊಳಿಸುವಂತೆ ವಿನಂತಿ ಮಾಡುವ ನಿರ್ಣಯವನ್ನು ಮಾಡಿದರು."[೧೩]

ನಿಂಗಪ್ಪ ಲಾಯದಗುಂಡಿ ಮತ್ತು ಸಂಗಪ್ಪ ನಾಗಮೋತಿಯವರು ೧೫-೦೯-೧೯೪೨ ರಂದು ವಿಜಾಪೂರ ಜಿಲ್ಲಾ ಕೋರ್ಟ್ ಮುಂದೆ ಪಿಕೆಟಿಂಗ್ ಆರಂಭಿಸಿ ಕೋರ್ಟ್‌ದ ಬಾರ ಕೌನ್ಸಿಲ್‌ಗೆ ನುಗ್ಗಿ ತಮ್ಮ ಕೈಯಲ್ಲಿದ್ದ ಕರಪತ್ರವನ್ನು ನೀಡಿ ವಕೀಲರುಗಳಿಗೆ ಕಲಾಪ ಬಹಿಷ್ಕರಿಸುವಂತೆ ಹೇಳಿದರು. ನಂತರ ಕೋರ್ಟ್ ಎದುರಿಗೆ ರಾಷ್ಟ್ರಧ್ವಜವನ್ನು ಹಾರಿಸಿ ತಮ್ಮ ಕೈಯಲ್ಲಿದ್ದ ಕರಪತ್ರವನ್ನು ಜೋರಾಗಿ ಓದಿದರು. ಪಿಕೆಟಿಂಗ್ ಮಾಡಿ ಬಂಧನಕ್ಕೆ ಒಳಗಾದರು.

"ಸಂಗಪ್ಪ ನಾಗಮೋತಿಯವರು ವಿಜಾಪೂರದಲ್ಲಿ ಡಿಸ್ಟ್ರಿಕ್ಟ್ ಕೋರ್ಟಗೆ ಹೋಗಿ, ಜಡ್ಜರಿಗೆ ರಾಜೀನಾಮೆ ಕೊಡಲು ಹೇಳಿ ಘೋಷಣೆ ಕೂಗಿದರು. ಸಂಜೆ ಜಡ್ಜರು ಮನೆಗೆ ಹೊರಟಾಗ ಅವರ ಎದುರಾಗಿ ಧ್ವಜ ಹಾರಿಸಿ ಅದನ್ನು ನಂದಿಸಲು ಅವರಿಗೆ ತಿಳಿಸಿದರು. ಅಲ್ಲಿ ಕೋರ್ಟಿನ ಎಲ್ಲ ವಕೀಲರೂ ಜನರೂ ಸೇರಲು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳ ವಿಚಾರ ಭಾಷಣ ಮಾಡಿ ಬಂಧಿತರಾದರು. ಬಿಜಾಪೂರದ ಪಿ.ಡಿ.ಜೆ. ಹೈಸ್ಕೂಲಿನ ವಿದ್ಯಾರ್ಥಿಗಳು ೧೯-೦೯-೧೯೪೨ರಂದು ಹರತಾಳ ಆರಂಭಿಸಿ ಶಿಕ್ಷಕರಿಗೆಲ್ಲ ಗಾಂಧಿ ಟೊಪ್ಪಿಗೆ ವಿತರಿಸಿ ವಿದೇಶಿ ಟೊಪ್ಪಿಗೆಗಳನ್ನು ದಹನ ಮಾಡಿದರು. "ಬಾಗಲಕೋಟದಲ್ಲಿ ಹರತಾಳ ನಡೆದಾಗ ವಿದ್ಯಾರ್ಥಿಗಳು ಶಾಲೆಗಳಿಗೆ ಅಧಿಕ ಸಂಖ್ಯೆಯಲ್ಲಿ ಗೈರಾಗಿದ್ದರು."[೧೪]

"೨೮-೦೯-೧೯೪೨ ರಂದು ಮದ್ಯಾಹ್ನ ೩ ಗಂಟೆಗೆ ಡಾ.ಎಸ್.ಟಿ. ಪಾಟೀಲರ ನೇತೃತ್ವದಲ್ಲಿ ಸಭೆ ನಡೆಯಿತು. ಬ್ರಿಟಿಷರ ಪರವಾಗಿ ಪ್ರತಿನಿಧಿಸಿ ಕಾಂಗ್ರೆಸದ ವಿರುದ್ಧ ಕಾರ್ಯ ಮಾಡುವದನ್ನು ಖಂಡಿಸುವ ಹಾಗೂ ರಾಷ್ಟ್ರೀಯ ಸರಕಾರ ರಚನೆಗೆ ಎಲ್ಲ ಜಾತಿ ಜನಾಂಗದವರು ಒಟ್ಟಾಗಿರಬೇಕೆಂದು ನಿರ್ಣಯವನ್ನು ಮಾಡಲಾಯಿತು."[೧೫]

ಚಂದಪ್ಪ ಗೆಜ್ಜಿಯವರು ಹೇಳುವಂತೆ "೨೬-೦೯-೧೯೪೨ ರಂದು ಸಾಸನೂರದಲ್ಲಿ ಅಧಿಕಾರಿಗಳಿಗೆ ಮೊದಲೇ ತಿಳಿಸಿ ತ್ರಿವರ್ಣಧ್ವಜ ಹಿಡಿದು ಊರಲ್ಲಿ ಘೋಷಣೆ ಕೂಗುತ್ತಾ ಪ್ರಭಾತಫೇರಿಗೆ ಹೋದಾಗ ಬಂಧನಕ್ಕೆ ಒಳಗಾದರು."[೧೬] "ಬಲವಂತಪ್ಪ ಉಪ್ಪಾರ ಅವರು ಸಾಸನೂರಿನ ಸುತ್ತಲೂ ಗ್ರಾಮಗಳಿಗೆ ತೆರಳಿ ಬುಲೆಟನ್ ಹಂಚುತ್ತಿದ್ದರು. ೨೬-೧೦-೧೯೪೨ ರಂದು ಮಿಟಿಂಗ್ ಮಾಡಿದಕ್ಕಾಗಿ ಬಂಧನಕ್ಕೆ ಒಳಗಾದರು."[೧೭]

ಹುನಗುಂದ ಸೋಮಶೇಖರ ದಿಡ್ಡಿಮನಿಯವರು ಹಾಗೂ ಗುಳೇದಗುಡ್ಡದ ಸಿದ್ರಾಮಪ್ಪಾ ತಿಪ್ಪಾ ಅವರು ಕೆರೂರಿನಲ್ಲಿ ಬುಲೆಟನ್ ಹಂಚಿ ನಂತರ ಕಟ್ಟೆಯೊಂದನ್ನು ಏರಿ ಹದಿನೈದು ನಿಮಿಷ ಭಾಷಣ ಮಾಡಿ ಬಂಧನಕ್ಕೆ ಒಳಗಾದರು. ಚಳವಳಿಯನ್ನು ತೀವ್ರಗೊಳಿಸಲು ರಾಜಾರಾಮ ದುಬೆ ಮತ್ತು ಎಸ್.ಆರ್. ಕಂಠಿಯವರು ಗುಡೂರದ ರುದ್ರಶಾಸ್ತ್ರಿ ಯಾವಗಲ್‌ಮಠ ಅವರನ್ನು ಗುಪ್ತಚಾರರನ್ನಾಗಿ ಮಾಡಿದರು. ಈ ಅವಧಿಯಲ್ಲಿ ರುದ್ರಶಾಸ್ತ್ರಿಗಳು ಸಾರುವ ಅಯ್ಯನಾಗಿ, ಚುಟ್ಟ ಕುಟ್ಟುವವರಾಗಿ,

ಭಾಂಡಿಗಳ ಮೇಲೆ ಹೆಸರು ಹಾಕುವವರಾಗಿ ಸ್ತ್ರೀಯರ ವೇಷ ಧರಿಸಿ ಮಾಹಿತಿ ಸಂಗ್ರಹಿಸುವ ಕಾರ್ಯ ಮಾಡುತ್ತಿದ್ದರು. ತಾಳಿಕೋಟೆಯಲ್ಲಿ ವಿದ್ಯಾರ್ಥಿಗಳ ಗುಂಪು ಕಾಂಗ್ರೆಸದ ಘೋಷಣೆ ಹಾಕಿದಾಗ ಪೊಲೀಸರು ಲಘು ಲಾಠಿ ಪ್ರಹಾರ ಮಾಡಿ ಗುಂಪನ್ನು ಚದುರಿಸಿದರು. ಮತ್ತೆ ವಿದ್ಯಾರ್ಥಿಗಳು ಗುಂಪಾಗಿ ಸಬ್ ಇನ್ಸಪೆಕ್ಟರ್ ಆಫೀಸಿನ ಹತ್ತಿರ ರಾಷ್ಟ್ರಧ್ವಜ ಹಾರಿಸಿ ಘೋಷಣೆ ಕೂಗಿದರು. ಪೊಲೀಸರು ಲಾಠಿ ಪ್ರಹಾರ ಮಾಡಿದಾಗ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡರು. ಇಬ್ಬರು ಬಂಧನಕ್ಕೆ ಒಳಗಾದರು. ವಿಜಾಪೂರ, ಗುಳೇದಗುಡ್ಡ, ಬಾಗಲಕೋಟ, ಬೀಳಗಿ ಇಂಡಿ ಹಾಗೂ ಇತರ ಕಡೆಗಳಲ್ಲೆಲ್ಲ ೦೨-೧೦-೧೯೪೨ರಂದು ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಅಂದು ಶಾಲೆಗಳು ಮತ್ತು ಬಟ್ಟೆ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಗಾಂಧೀಜಿಯವರು ೨೧ ದಿನಗಳ ಕಾಲ ಉಪವಾಸ ವ್ರತ ಕೈಗೊಂಡಿರುವದನ್ನು ಬೆಂಬಲಿಸಲು ಗುಳೇದಗುಡ್ಡದ ವ್ಯಾಪಾರಸ್ಥರು ಹರತಾಳ ಆರಂಭಿಸಿದರು.

೯.೩ ಭೂಗತ ಚಳವಳಿ

ರಾಷ್ಟ್ರೀಯ ನಾಯಕರನ್ನು ಬ್ರಿಟಿಷ ಸರಕಾರ ಬಂಧಿಸಿತು. ಅದರಂತೆ ಕರ್ನಾಟಕದ ಹಲವಾರು ನಾಯಕರು ಬಂಧನಕ್ಕೆ ಒಳಗಾದರು. ಇನ್ನಿತರ ನಾಯಕರು ಚಳವಳಿಯನ್ನು ಮುಂದುವರೆಸಲು ಭೂಗತರಾಗಿ ಚಟುವಟಿಕೆಯನ್ನು ಆರಂಭಿಸಿ ಚಳವಳಿಯನ್ನು ಜನರಲ್ಲಿ ಜೀವಂತವಾಗಿರಿಸಲು ಸಾಕಷ್ಟು ಶ್ರಮಿಸಿದರು.

ಕರ್ನಾಟಕದ ಮುಖಂಡರು ಮುಂಬೈಯಲ್ಲಿ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಕೆಲವು ಸದಸ್ಯರನ್ನು ಭೇಟಿಯಾದರೂ ಕಾರ್ಯಕ್ರಮದ ಬಗೆಗೆ ತಿಳಿಯದಿದ್ದಾಗ ಚಳವಳಿಯ ರೂಪುರೇಷಗಳನ್ನು ತಿಳಿಯಲು ಕರ್ನಾಟಕದ ಮುಖಂಡರು ಕ್ರಿಯಾ ಸಮಿತಿ ರಚಿಸಲು ನಿರ್ಧರಿಸಿದರು. ಈ ಕ್ರಿಯಾ ಸಮಿತಿಗೆ "ಚನ್ನಬಸಪ್ಪ ಅಂಬಲಿ ಅಧ್ಯಕ್ಷರಾದರು, ಆರ್.ಆರ್.ದಿವಾಕರ ಅವರು ಕಾರ್ಯದರ್ಶಿಯಾದರು, ಆರ್.ಎಸ್. ಹುಕ್ಕೇರಿಕರ, ಡಿ.ಪಿ.ಕರಮಕರ್ ಮತ್ತು ಶ್ರೀನಿವಾಸಮಲ್ಯ ಸದಸ್ಯರಾದರು. ಮುಂಬೈನ ಕೆ.ಎಚ್.ಕಬ್ಬೂರರು ೧೦೦೦ ರೂಪಾಯಿ ದೇಣಿಗೆ ನೀಡಿದರು. ಮುಂಬೈದಲ್ಲಿಯೇ ಕ್ರಿಯಾ ಸಮಿತಿಯ ಚಟುವಟಿಕೆ ಕೇಂದ್ರವಾಗಿರಬೇಕೆಂದು ನಿರ್ಧರಿಸಲಾಯಿತು. ಒಂದು ಬೆರಳಚ್ಚಿನ ಯಂತ್ರ, ಒಂದು ಸಾಯಿಕ್ಲೋಸ್ಟೈನ್ ಯಂತ್ರ ಹಾಗೂ ಕನಿಷ್ಠ ಇಬ್ಬರು ಸದಸ್ಯರನ್ನು ಒದಗಿಸಿಕೊಳ್ಳಲಾಯಿತು. ಕ್ರಿಯಾ ಸಮಿತಿಯ ಸದಸ್ಯರಲ್ಲದೆ. ಶಂಕರ ಕುರ್ತುಕೋಟಿ, ಆರ್. ಶ್ರೀನಿವಾಸರಾವ್, ಸತ್ಯಭೋದ ಸಿಂಗೀತ್ ಮತ್ತು ನರಸಿಂಹ ದಾಬಡೆಯವರು ಕ್ರಿಯಾ ಸಮಿತಿ ಹಾಗೂ ಕರ್ನಾಟಕದ ಜಿಲ್ಲೆಗಳ ನಡುವಿನ ಸಂಪರ್ಕ ವ್ಯಕ್ತಿಗಳಾಗಿದ್ದರು."[೧೮]

ಕ್ರಿಯಾ ಸಮಿತಿಯ ಸದಸ್ಯರುಗಳು ಬೇರೆ ಬೇರೆ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವ್ರುಗಳೆಂದರೆ - ನರಸಿಂಹ ದಾಬಡೆ - ಪ್ರಕಾಶ, ಹುಕ್ಕೇರಿಕರ್ - ಶ್ರೀನಿವಾಸ್, ಕುರ್ತಕೋಟಿ -

ಶ್ರೀಧರ, ಶ್ರೀರಂಗ ಕಾಮತ್ – ಶ್ರೀರಾಮ, ಚನ್ನಬಸಪ್ಪ ಅಂಬಲಿ – ಶ್ರೇಷ್ಠಿ ಎಂದು. "ಕರ್ನಾಟಕ ಜನರನ್ನು ಭೇಟಿ ಮಾಡಿ ಚಳವಳಿಯನ್ನು ಸಂಘಟಿಸಲು ದಾಬಡೆಯವರನ್ನು ಕಳುಹಿಸಲಾಯಿತು. ಕ್ರಿಯಾ ಸಮಿತಿಯ ಸದಸ್ಯರೂ ಕರ್ನಾಟಕದ ಗಡಿಗಳಿಗೆ ಹೋಗಿ ಕಾರ್ಯಕರ್ತರನ್ನು ಭೇಟಿ ಮಾಡಿ ಅವರಿಗೆ ಮಾರ್ಗದರ್ಶನ ಮತ್ತು ಸ್ಫೂರ್ತಿ ನೀಡಿದರು. ಪುಣೆಯಲ್ಲಿ ಎಲ್ಲರೂ ಒಟ್ಟಾಗಿ ಸೇರಲು ೨–೩ ಸ್ಥಳಗಳನ್ನು ವ್ಯವಸ್ಥೆ ಮಾಡಲಾಯಿತು. ಎಲ್ಲ ಇಂಗ್ಲೀಷ ವರದಿಯನ್ನು ಮುದ್ರಿಸಿ ಕರ್ನಾಟಕದ ವಿಳಾಸಗಳಿಗೆ ನಾಸಿಕ್, ಅಹಮ್ಮದನಗರ ಹಾಗೂ ಸೊಲ್ಲಾಪುರಗಳಿಂದ ಅಂಚೆಗೆ ಹಾಕಲಾಗುತ್ತಿತ್ತು. ಕರ್ನಾಟಕದ ವರದಿಗಳನ್ನು, ಸೂಚನೆಗಳನ್ನು, ಹಣವನ್ನು ಕಳುಹಿಸಿಕೊಡಲು ಪ್ರತ್ಯೇಕ ವಿಳಾಸಗಳಿದ್ದವು. ಸಂಶಯಕ್ಕೆ ಅವಕಾಶವಿರಬಾರದು ಎಂದು ಒಂದೆ ವಿಳಾಸವನ್ನು ಖಾಯಂ ಆಗಿ ಬಳಸುತ್ತಿರಲಿಲ್ಲ. "ಭೂಗತ ಕಾರ್ಯಕರ್ತರ ೧೩ ತಂಡಗಳನ್ನು ಒಳಗೊಂಡ ಒಂದು ಸಂಪರ್ಕ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ರೂಪಿಸಲಾಯಿತು. ಬೇರೆ ಜಿಲ್ಲಾ ಮತ್ತು ತಾಲೂಕುಗಳಿಗೆ ಸುತ್ತೋಲೆಗಳನ್ನು ಕಳುಹಿಸಲು ಮುಂಬೈಯಲ್ಲಿ ಕ್ರಿಯಾ ಸಮಿತಿ ವ್ಯವಸ್ಥೆ ಮಾಡಿತು. ದಾಬಡೆ ಮತ್ತು ಕುರ್ತಕೋಟಿಯವರು ಮುಂಬೈ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಧಾರವಾಡ ಮತ್ತು ವಿಜಾಪೂರ ಜಿಲ್ಲೆಗಳಲ್ಲಿ ಸಂಚರಿಸುತ್ತಿದ್ದರು."[೧೯]

ಚನ್ನಬಸಪ್ಪ ಅಂಬಲಿಯವರು ಕೆ.ಪಿ.ಸಿ.ಸಿ. ಕ್ರಿಯಾ ಸಮಿತಿಯ ಅಧ್ಯಕ್ಷರಾಗಿದ್ದರೂ ಕೂಡಾ ವಿಜಾಪೂರ ಜಿಲ್ಲೆ ಗುಳೇದಗುಡ್ಡ, ಬದಾಮಿ, ಬಾಗಲಕೋಟ, ಇಂಡಿ, ಮುಂತಾದ ಕಡೆಗಳಲ್ಲೆಲ್ಲ ಸಂಚರಿಸಿ ಹೋರಾಟಕ್ಕೆ ಸ್ಫೂರ್ತಿ ತುಂಬುತ್ತಿದ್ದರು. ಇವರಿಗೆ ನಬಿಸಾಬ್ ಬಾಲಸಿಂಗ್ ಮಾಸ್ತರ, ಬಾಗಲಕೋಟದ ಜಂಗಿನ ಲಿಂಗಯ್ಯ ಮತ್ತು ಚೋಳಚಗುಡ್ಡದ ಸಿದ್ದಪ್ಪ ಮಾಳವಾಡ ಗುಳೇದಗುಡ್ಡದ ಸಿದ್ರಾಮಪ್ಪಾ ತಿಪ್ಪಾ ಮುಂತಾದವರು ಸಹಾಯ ಮಾಡುತ್ತಿದ್ದರು. ಮುದಕಪ್ಪ ಕಲಬುರ್ಗಿಯವರು ಹೇಳುವಂತೆ ಅಂಬಲಿ ಚನ್ನಬಸಪ್ಪನವರು ಗುಳೇದಗುಡ್ಡಕ್ಕೆ ರಾತ್ರಿ ಹೊತ್ತು ಬಂದು ಚಳವಳಿಗಾರರಿಗೆ ಸೂಕ್ತ ನಿರ್ದೇಶನವನ್ನು ಕೊಟ್ಟು ಹೋಗುತ್ತಿದ್ದರು. "ವಿಜಾಪೂರ ಖಾರಖಾನ ಪ್ರದೇಶದ ಪರಪ್ಪ ಧುಂದರಗಿಯವರ ಮನೆಯಲ್ಲಿ ಬಾಗಲಕೋಟದ ಬಳಿಯ ಮಲ್ಲಾಪುರ ಗುಡ್ಡಗಳಲ್ಲಿ ಚೋಳಚಗುಡ್ಡ, ಬನಹಟ್ಟಿ, ಇಲಕಲ್ಲ ಹಾಗೂ ಹುನಗುಂದಗಳಲ್ಲಿ ಗುಪ್ತ ಸಭೆಗಳು ಆಗಾಗ ನಡೆಯುತ್ತಿದ್ದವು."[೨೦] ಜಮಖಂಡಿಯ ಅಡಿವಯ್ಯ ಮುಧೋಳ ಅವರು ಭೂಗತ ಚಳವಳಿಗಾರರಿಗೆ ಆಶ್ರಯ ನೀಡುತ್ತಿದ್ದರು. ಇವರ ಮನೆಯು ಚಳವಳಿಗಾರರಿಗೆ ಕೇಂದ್ರವಾಗಿತ್ತು.

ಈಶ್ವರಪ್ಪ ಗತ್ತರಗಿಯವರು ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಅಗ್ರನಾಯಕ ವಾಮನ ಬಿದರಿ ಭೂಗತರಾಗಿ ಜಮಖಂಡಿಗೆ ಬಂದಾಗ ಅವರಿಗೆ ಬೆಂಗಾವಲಿಗರಾಗಿದ್ದರು. ಬಿದರಿಯವರು ಜಮಖಂಡಿಯಲ್ಲಿ ಅಡಗಿರುವ ಸಂಶಯದಿಂದ ಸಿ.ಐ.ಡಿ.ಗಳು ಬೀದಿ ಬೀದಿ ಅಲೆಯುತ್ತಿದ್ದಾಗ ಸಿ.ಐ.ಡಿ.ಗಳ ಚಲನವಲನದ ಬಗ್ಗೆ ಬಿದರಿಯವರಿಗೆ ಮಾಹಿತಿ ನೀಡುತ್ತಿದ್ದರು. ಗುಪ್ತಸಭೆಗಳು ಬಿ.ಡಿ. ಜತ್ತಿಯವರ ಮನೆಯಲ್ಲಿ ಹಾಗೂ ಅಡಿವಯ್ಯ ಮುಧೋಳರ ಮನೆಯಲ್ಲಿ ರಾತ್ರಿ

ನಡೆಯುತ್ತಿದ್ದವು. ಅಲ್ಲಿ ಕಾರ್ಯಕರ್ತರಿಗೆ ಚಳವಳಿಯ ಮುಂದಿನ ವಿಷಯಗಳನ್ನು ಚರ್ಚಿಸಿ ಕರಪತ್ರಗಳ ಮೂಲಕ ಉಳಿದ ಕಾರ್ಯಕರ್ತರಿಗೆ ನಿವೇದಿಸುತ್ತಿದ್ದರು. ಕರಪತ್ರಗಳನ್ನು ಗುಪ್ತವಾಗಿ ಬೆಳಗಾವಿ ಹಾಗೂ ಇತರ ಭಾಗದ ಕಾರ್ಯಕರ್ತರಿಗೆ ಮುಟ್ಟಿಸುತ್ತಿದ್ದರು. ಅಲ್ಲಿ ಸಂಗ್ರಹಿಸಿದ ಹಣ ಮತ್ತು ಕಾಂಗ್ರೆಸ ಸಂಸ್ಥೆಯ ಪ್ರಧಾನ ಕಛೇರಿಯಿಂದ ಹಣವನ್ನು ಭೂಗತರಾದ ಬಡ ಕಾಂಗ್ರೆಸ ಕಾರ್ಯಕರ್ತರಿಗೆ ಮುಟ್ಟಿಸುತ್ತಿದ್ದರು. ಬನಹಟ್ಟಿ ಮತ್ತು ರಬಕವಿಗಳಿಂದ ಬಂದ ಸೀರೆ ಖಣ ಬಟ್ಟೆಗಳನ್ನು ಬಡ ಕಾರ್ಯಕರ್ತರಿಗೆ ಹಂಚುತ್ತಿದ್ದರು. ಪ್ರತಿದಿನ ೨೦-೩೦ ಗುಪ್ತ ಪತ್ರಗಳಿಗೆ ಉತ್ತರಿಸಿ ಜಮಖಂಡಿಯಿಂದ ಅವುಗಳನ್ನು ಅಂಚೆಗೆ ಹಾಕಿದರೆ ಸರಕಾರಕ್ಕೆ ತಿಳಿಯುವದೆಂದು ಕುಡುಚಿ ತೆರದಾಳ, ರಬಕವಿ ಅಂಚೆ ಕಛೇರಿಯಿಂದ ಹಾಕುತ್ತಿದ್ದರು.

೯.೪ ಹಿಂಸಾತ್ಮಕ ಹೋರಾಟಗಳು

೧. ಮಿಂಚನಾಳ ರೈಲ್ವೆ ನಿಲ್ದಾಣ ಧ್ವಂಸ

ಬ್ರಿಟಿಷ ಆಡಳಿತ ಯಂತ್ರವನ್ನು ತಡೆಯಲು ಜಿಲ್ಲೆಯಲ್ಲಿ ಹಲವಾರು ವಿಧ್ವಂಸಕ ಕೃತ್ಯಗಳು ಆರಂಭಗೊಂಡವು. ಸೆಪ್ಟೆಂಬರ್ ತಿಂಗಳಿನಲ್ಲಿ ಢವಳಗಿಯ ತುಳಜಾರಾಮ ಉತ್ತರಕರ ಅವರಿಗೆ ವಿಜಾಪೂರಕ್ಕೆ ಬರುವಂತೆ ಸಂದೇಶ ಬಂದಿತು. ಢವಳಗಿಯಿಂದ ೧೨ ಜನ, ಮುದ್ದೇಬಿಹಾಳದಿಂದ ಪ್ರತಾಪಸಿಂಗ್ ಹಜೇರಿ, ದತ್ತು ಹಂಚಾಟೆ, ತಮ್ಮಾಜಿ ಲೋಕರೆ ಹೋರಟರು. ವಿಜಾಪೂರದಲ್ಲಿ ಸುಗಂಧಿ, ದುಬೆ, ಅಂಬಲಿ ಮತ್ತು ಶರಣಯ್ಯ ವಸ್ತ್ರದ ಸಭೆಯಲ್ಲಿದ್ದರು. ಮಿಂಚನಾಳ ರೈಲು ನಿಲ್ದಾಣವನ್ನು ಸುಡಲು ನಿಶ್ಚಯಿಸಲಾಯಿತು.

"ಚಳವಳಿಗಾರರ ಈ ಯೋಜನೆ ಸರಕಾರಕ್ಕೆ ಬಹುಬೇಗನೆ ಮುಟ್ಟಿತು. ಪರಪ್ಪ ಧಂದುರಗಿಯವರ ಮನೆ ಭೂಗತ ಸಭೆ ನಡೆದ ಸ್ಥಳವಾಗಿದ್ದರಿಂದ ಪೊಲೀಸರು ಅವರ ಮನೆಯನ್ನು ಜಪ್ತು ಮಾಡಿದರು. ಧುಂದರಗಿಯವರನ್ನು ಬಂಧಿಸಿ ಮಿಂಚನಾಳ ರೈಲು ನಿಲ್ದಾಣ ಸುಡುವ ಯೋಜನೆಯ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ನಾನಾ ಆಸೆ ಆಮಿಷಕ್ಕೆ ಒಳಪಡಿಸಿದರೂ ಧುಂದರಗಿಯವರು ಆ ಕುರಿತು ಏನೂ ಬಾಯಿ ಬಿಡಲಿಲ್ಲ."[೨೧] "೨೦೦ ಜನ ಸೇರಿ ಮಿಂಚನಾಳ ನಿಲ್ದಾಣ ಸುಡಲು ನಿಶ್ಚಯಿಸಿದಂತೆ ತುಳಜಾರಾಮ ಉತ್ತರಕರ ಹಾಗೂ ಢವಳಗಿಯ ಚಳವಳಿಗಾರರು ಮೊದಲೇ ವೇಷ ಮರೆಸಿಕೊಂಡು ಹೋದರು."[೨೨]

ಮಿಂಚನಾಳ ರೈಲ್ವೆ ನಿಲ್ದಾಣವನ್ನು ೦೬-೧೦-೧೯೪೨ರಲ್ಲಿ ಧ್ವಂಸ ಮಾಡಿ ಬೆಂಕಿ ಹಚ್ಚುವ ಮೊದಲು ಸ್ಟೇಷನ್ ಮಾಸ್ತರ್ ಮತ್ತು ಕಾವಲುಗಾರರನ್ನು ಬಂಧಿಸಿದರು. ನಂತರ ನಿಲ್ದಾಣದ ಕಟ್ಟಡಕ್ಕೆ ಸೀಮೆ ಎಣ್ಣೆಯನ್ನು ಉಗ್ಗಿ ಬೆಂಕಿ ಹಚ್ಚಿದರು.

"ಚನ್ನಬಸಪ್ಪ ಅಂಬಲಿಯವರು ಸ್ಟೇಷನ್ ಸುಡುವ ವೇಳೆಯಲ್ಲಿ ತಮ್ಮ ಚಿಕ್ಕ ತಮ್ಮ ಅಡಿವೆಪ್ಪ ಸಂಗಡ ಕರೆದುಕೊಂಡು ಹೋಗಿದ್ದರು. ಪೊಲೀಸರು ಬೆನ್ನು ಹತ್ತಿದಾಗ ಅಡಿವೆಪ್ಪನನ್ನು ಹೊತ್ತುಕೊಂಡು ಓಡತೊಡಗಿದರು. ದುರ್ದೈವದಿಂದ ಸಜ್ಜಿಕೋಲಿಗೆ ಎಡವಿ ಅಡಿವೆಪ್ಪನನ್ನು ಹಾಕಿಕೊಂಡು ಬಿದ್ದರು. ಆದರೆ ಎತ್ತರ ಬೆಳೆದ ತೊಗರಿ ಬೆಳೆಗಳ ನಡುವಿನಲ್ಲಿ ಪೊಲೀಸರಿಗೆ ಕಾಣಲಿಲ್ಲ. ಬ್ಯಾಟಿ ಪಾರಾಯಿತು ಬ್ಯಾಟಿ ಪಾರಾಯಿತು ಎಂದು ವಟಗುಟ್ಟುವ ಹಿರಿಯ ಪೊಲೀಸ ಅಧಿಕಾರಿಯ ಧ್ವನಿ ಕೇಳಿಸುವಷ್ಟು ಸಮೀಪದಿಂದ ಪಾರಾದರು."[೨೩] "ವಿಜಾಪೂರ ಡಿ.ಎಸ್.ಪಿ. ಡಿ.ಎ.ಶಿರೋಳೆಯವರು ೦೬-೧೦-೧೯೪೨ ರಂದು ಮಿಂಚನಾಳ ರೈಲ್ವೆ ನಿಲ್ದಾಣ ಸುಟ್ಟ ಬಗ್ಗೆ ವರದಿ ಮಾಡಿರುವಂತೆ ಢವಳಗಿಯ ಮಲ್ಲಪ್ಪ ಪಕೀರಪ್ಪ ವಡ್ಡರ ಎಂಬುವನು ಬಹಿರಂಗ ಪಡಿಸಿದಂತೆ ಮಿಂಚನಾಳ ರೈಲ್ವೆ ನಿಲ್ದಾಣವನ್ನು ೧೬೦ ಜನರೊಂದಿಗೆ ಸುಟ್ಟಿರುವುದಾಗಿ ಅದರ ಜವಾಬ್ದಾರಿಯನ್ನು ಒಪ್ಪಿಕೊಂಡಿರುವನು. ಢವಳಗಿ, ತಾಳಿಕೋಟೆ ಮತ್ತು ವಿಜಾಪೂರದ ಜನರು ಭಾಗವಹಿಸಿದ್ದರು. ಈ ಕೂಟದ ಸಂಘಟಕ ತಾಳಿಕೋಟೆಯ ಶ್ರೀಶೈಲಪ್ಪ ಮಸಳಿ ಅವನು ಇನ್ನೂ ಸಿಕ್ಕಿಲ್ಲ. ಆದರೆ ಕಾರ್ಯದಲ್ಲಿ ಸಿ.ಜೆ. ಅಂಬಲಿ, ಕಾರ್ಯದರ್ಶಿ, ಕರ್ನಾಟಕ ಪ್ರಾಂತಿಯ ಕಾಂಗ್ರೆಸ ಕಮಿಟಿ, ಧಾರವಾಡ ಇವರ ಕೈವಾಡವಿದೆಯೆಂದು ಸಂಶಯವಿದೆ. ಈ ಕೂಟದ ಸದಸ್ಯರು ವಡ್ಡರ, ಹೊಲೆರ ಮತ್ತು ಇತರ ವರ್ಗದವರಾಗಿದ್ದರು."[೨೪]

೨. ನೀರಲಕೇರಿ ಹತ್ತಿರ ಮಾಲುಗಾಡಿ ಉರುಳಿಸಿದ್ದು

ಗುಳೇದಗುಡ್ಡದ ಚಳವಳಿಗಾರರಿಗೆ ಬಾಗಲಕೋಟಗೆ ಬರಲು ಅಂಬಲಿಯವರಿಂದ ಸೂಚನೆಯು ಸಿದ್ದಪ್ಪ ಮಾಳವಾಡರವರ ಮೂಲಕ ಸಿದ್ಧರಾಮಪ್ಪ ತಿಪ್ಪಾ ಅವರಿಗೆ ಬಂದಿತು. ಅಂಬಲಿಯವರ ಆದೇಶದಂತೆ ಮುದಕಪ್ಪನವರು ಚನ್ನಪ್ಪ ಹರವಿ ಶಿವಪುತ್ರಪ್ಪ ಪಟ್ಟಣಶೆಟ್ಟಿ, ರಾಚಪ್ಪ ಶೆಟ್ಟರ, ಪರ್ವತಿಯ ದ್ಯಾಮನಗೌಡರ ಮುಂತಾದವರು ಬಾಗಲಕೋಟಗೆ ಪ್ರಯಾಣ ಬೆಳೆಸಿದರು. ಅಂಬಲಿಯವರು ಭೂಗತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಬಾಗಲಕೋಟದ ಮುಚಖಂಡಿ ಕ್ರಾಸ್ ಹತ್ತಿರವಿರುವ ಶಹಾ ವಕೀಲರ ಮನೆಯಲ್ಲಿ ರಾತ್ರಿ ೮:೩೦ಕ್ಕೆ ಗುಪ್ತ ಸಭೆ ನಡೆಯಿತು. ಈ ಸಭೆಯಲ್ಲಿ ಶರಣಯ್ಯ ವಸ್ತ್ರದ ತಾಳಿಕೋಟೆಯ ಹಮ್‌ಜದ್‌ಸಾಬ್, ಚೋಳಚಗುಡ್ಡದ ಸಿದ್ದಪ್ಪ ಮಾಳವಾಡ, ಶಿವಯೋಗಿ ಮುಂತಾದ ಹದಿಮೂರು ಮಂದಿ ಚಳುವಳಿಗಾರರು ಭಾಗವಹಿಸಿದ್ದರು. ಸಭೆಯು ನಡೆಯುತ್ತಿರುವ ಮನೆಯ ಸುತ್ತಲೂ ಇಬ್ಬರು ಕಾಂಗ್ರೆಸ ಕಾರ್ಯಕರ್ತರ ಪಹರೆ ಇಡಲಾಗಿತ್ತು. ಒಂದು ವೇಳೆ ಪೊಲೀಸರು ಬಂದರೆ ಇವರು ಒಳಗೆ ಇದ್ದವರಿಗೆ ಸೂಚನೆ ನೀಡುತ್ತಿದ್ದರು. ಅಂಬಲಿಯವರು ಶಹಾ ವಕೀಲರ ಮನೆಯಲ್ಲಿ ಇದ್ದರೂ ಸಭೆಗೆ ಬಂದ ಚಳವಳಿಗಾರರಿಗೆ ಅದು ತಿಳಿದಿರಲಿಲ್ಲ, ಎಲ್ಲವೂ ಇಲ್ಲಿ ಗುಪ್ತವಾಗಿತ್ತು. ಸಿದ್ದಪ್ಪ ಮಾಳವಾಡ ಅವರು ಅಂಬಲಿಯವರಿದ್ದ ಕೋಣೆಗೆ ಹೋಗಿ ಅವರು ಸೂಚನೆಗಳನ್ನು ಚಳವಳಿಗಾರರಿಗೆ ತಿಳಿಸುತ್ತಿದ್ದರು. ಸಿದ್ದರಾಮಪ್ಪ ತಿಪ್ಪಾ ಅವರಿಗೆ ಮೂಲೆಯಲ್ಲಿರುವ ತೊಗರಿಬೇಳೆ ಚೀಲದಲ್ಲಿ ಕೈ ಹಾಕುವಂತೆ ಸೂಚನೆ ಬಂದಾಗ ಅವರು ತೊಗರಿಬೇಳೆ ಚೀಲದಲ್ಲಿ ಕೈ ಹಾಕಿದರು. ಒಂದು ಪಿಸ್ತೂಲು

ಇತ್ತು. ಅದನ್ನು ಇಟ್ಟುಕೊಳ್ಳುವಂತೆ ಆದೇಶ ಬಂದಿತು. ಸಭೆಯಲ್ಲಿ ಯಾರಿಗೂ ಕೂಡಾ ಎಲ್ಲಿಗೆ ಹೋಗಬೇಕು ಏನು ಮಾಡಬೇಕು ಎಂಬುದನ್ನು ಸೂಚಿಸಿರಲಿಲ್ಲ. ಈ ದಿಕ್ಕಿಗೆ ಹೋಗಿ ಅಲ್ಲಿ ಒಂದು ಮರ ಅಥವಾ ದೊಡ್ಡ ಕಲ್ಲಿನ ಬುಡದಲ್ಲಿ ಕಾಗದ ಇರುತ್ತದೆ. ಅದು ತೋರಿಸುವ ದಿಕ್ಕಿನತ್ತ ನಡೆಯಿರಿ ಎಂದಷ್ಟೆ ಹೇಳಲಾಗಿತ್ತು. ಸಭೆಯು ಮುಗಿದ ನಂತರ ಎಲ್ಲರೂ ಮೌನವಾಗಿರುತ್ತಿದ್ದರು. ಮಾತನಾಡಲು ಅಲ್ಲಿ ಅವಕಾಶವಿರಲಿಲ್ಲ. ಊಟವಾದ ನಂತರ ತಮಗೆ ಮೊದಲು ಸೂಚಿಸಿದ ದಿಕ್ಕಿನ ಕಡೆಗೆ ಹದಿಮೂರು ಜನರು ಹೊರಟಾಗ ಪೋಲೀಸರಿಗೆ ಸಂಶಯ ಬರಬಾರದೆಂದು ತಮ್ಮಲ್ಲಿ ಎರಡು ತಂಡಗಳಾಗಿ ಹೊರ ನಡೆದರು. ಕಾಲನಡಿಗೆಯಲ್ಲಿ ಮುಚಖಂಡಿ ಗುಡ್ಡದ ಮೂಲಕ ನೀರಲಕೇರಿ ಹತ್ತಿರವಿರುವ ರೈಲು ತಿರುವು ಇರುವ ಸ್ಥಳಕ್ಕೆ ರಾತ್ರಿ ಹನ್ನೊಂದು ಘಂಟೆಗೆ ಬಂದು ತಲುಪಿದರು. ಹಿಂದಿನ ದಿನ ಈ ಹದಿಮೂರು ಮಂದಿಯನ್ನು ಹೊರತು ಪಡಿಸಿ ಬೇರೆ ಚಳವಳಿಗಾರರ ಮೂಲಕ ಗಜಗದ ಕಂಟಿಗಳಲ್ಲಿ ಕವಣೆ, ಸೀಮೆಎಣ್ಣೆ, ಪಾನಾ, ಹಾರಿ ಮುಂತಾದ ವಸ್ತುಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಅಡಗಿಸಿಡಲಾಗಿತ್ತು. ಈ ತಂಡಕ್ಕೆ ತಿಳಿಯಲೆಂದು ಅಲ್ಲಲ್ಲಿ ಕಾಗದಗಳ ಮೇಲೆ ಬಾಣದ ಗುರುತು ಹಾಕಿ ಹಾರಿಹೋಗದಂತೆ ಕಾಗದಗಳ ಮೇಲೆ ಕಲ್ಲು ಇಟ್ಟು ಬಂದಿದ್ದರು. ಈ ಬಾಣದ ಗುರುತುಗಳನ್ನು ಹುಡುಕಿಕೊಂಡು ಹೋದ ತಂಡದವರು. ಅಲ್ಲಿರುವ ಸೀಮೆಎಣ್ಣೆ, ಕವಣೆ, ಪಾನ, ಹಾರಿ ಮುಂತಾದ ವಸ್ತುಗಳನ್ನು ಸಂಗ್ರಹಿಸಿದರು. ಆಗ ಅಂಬಲಿಯವರು ಪಿಸ್ತೂಲಿನೊಂದಿಗೆ ಆ ಸ್ಥಳಕ್ಕೆ ಪ್ರತ್ಯಕ್ಷರಾದರು. ಅಂಬಲಿಯವರನ್ನು ಕಂಡ ಚಳವಳಿಗಾರರಿಗೆ ಎಲ್ಲಿಲ್ಲದ ಸಂತೋಷ ಉಂಟಾಯಿತು. ಅಂಬಲಿಯವರು ಚಳವಳಿಗಾರರಿಂದ ತಾವು ಮುಂದೆ ಮಾಡುವ ಕಾರ್ಯದ ಬಗೆಗೆ ಈ ರೀತಿ ಹೇಳಿದರು. ಈಗ ದೇಶದಲ್ಲಿ ದುಷ್ಕಾಲ ಬಿದ್ದಿದೆ. ಜನರಿಗೆ ತಿನ್ನಲು ಆಹಾರವಿಲ್ಲ, ಸರಕಾರದವರು ದ್ವಿತೀಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ ತಮ್ಮ ಸೈನಿಕರಿಗೆ ಆಹಾರ ಪೂರೈಸುತ್ತಿದೆ. ಇಲ್ಲಿ ನಾವು ಉಪವಾಸವಿದ್ದು ಬೇರೊಂದು ದೇಶದ ಸೈನಿಕರಿಗೆ ಆಹಾರ ನೀಡುವದು ಸಮಂಜಸವಲ್ಲ. ಈಗ ೧೨:೩೦ ಘಂಟೆಗೆ ಬ್ರಿಟಿಷ ಸೈನಿಕರಿಗೆ ಆಹಾರ ಒದಗಿಸಲು ಸಜ್ಜಿ ತುಂಬಿದ ಗೂಡ್ಸ್‌ರೈಲು ಬರುವದು. ಅದನ್ನು ನಾವು ಉರುಳಿಸಲು ಸಿದ್ಧರಾಗಿರಬೇಕು ಎಂದು ಹೇಳಿ ಪ್ರತಿಯೊಬ್ಬರಿಗೂ ಒಂದೊಂದು ಕಾರ್ಯವನ್ನು ಹಂಚಿಕೊಟ್ಟರು. ರೈಲು ಬರುವ ವೇಳೆ ಕಂಬಿಗಳ ಮೇಲೆ ಕೈ ಇಟ್ಟರೆ ಕಂಬಿಗಳಿಂದ ಹೊರಡುವ ಶಬ್ದಗಳ ಆಧಾರದ ಮೇಲೆ ರೈಲು ತಮ್ಮಿಂದ ಎಷ್ಟು ಮೈಲು ಅಂತರದಲ್ಲಿದೆ ಎಂಬುದನ್ನು ತಿಳಿಸಿಕೊಡಲಾಯಿತು.

"ಮುದಕಪ್ಪನವರು ಪಕ್ಕದಲ್ಲಿರುವ ಮೈಲುಗಲ್ಲನ್ನು ಕಿತ್ತು ತಂದರು. ಇತರರು ಪಾನಾಗಳಿಂದ ಕಂಬಿಗಳಿಗೆ ಜೋಡನೆ ಮಾಡಿದ ಬೋಲ್ಟ್‌ಗಳನ್ನು ಸಡಿಲಿಸಿದರು. ಹಲವರು ಹಾರೆಯಿಂದ ಕಂಬಿಯನ್ನು ಮೇಲಕ್ಕೆ ಎಬ್ಬಿಸಿದರು. ಕಂಬಿಯ ಕೆಳಗೆ ಮೈಲುಗಲ್ಲನ್ನು ಸೇರಿಸಿದಾಗ ಕಂಬಿಗಳು ಆರರಿಂದ ಎಂಟು ಇಂಚು ಎತ್ತರವಾದವು. ರೈಲು ಮಾರ್ಗವನ್ನು ಕಾಯುವ ಪೋಲೀಸರು ಇತ್ತಕಡೆಗೆ ಬರದಂತೆ ತಡೆಯಲು ಮಾರ್ಗದ ಎರಡು ಬದಿಯಲ್ಲಿ ಕವಣೆಗಲ್ಲನ್ನು ಬೀಸಲು ಇಬ್ಬರು ಸಜ್ಜಾಗಿ ನಿಂತಿದ್ದರು. ರೈಲು ತಮ್ಮನ್ನು ಸಮೀಪಿಸುತ್ತಿದಂತೆ ಎಲ್ಲರೂ ಗಜಗದ ಕಂಟಿಗಳ ಮರೆಯಲ್ಲಿ ಅಪಿತುಕೊಂಡು ಕುಳಿತರು ರೈಲು ನಿಗದಿತ

ಸ್ಥಳಕ್ಕೆ ಬಂದು ಉರುಳಿತು. ಎಂಟು ವ್ಯಾಗಿನಗಳು(ಡಬ್ಬಿಗಳು) ಬಿದ್ದವು. ಆಗ ರೈಲು ಗಾರ್ಡ್ ಹೊರಗೆ ಬಂದು ಪರೀಕ್ಷಿಸುವಾಗ ಸಿದ್ಧರಾಮಪ್ಪ ತಿಪ್ಪಾ ಅವರು ತಮ್ಮ ಹತ್ತಿರವಿರುವ ಪಿಸ್ತೂಲಿನಿಂದ ಗುಂಡು ಹೊಡೆಯಲು ಮುಂದಾದರು ಆಗ ಅಂಬಲಿಯವರು ಅದನ್ನು ತಡೆದು ನಾವು ಗಾಂಧಿತತ್ವದವರು, ಹಿಂಸೆ ಸಲ್ಲದು, ಪಿಸ್ತೂಲನ್ನು ಬ್ರಿಟಿಷರನ್ನು ಹೆದರಿಸಲು ಮಾತ್ರ ಇಟ್ಟುಕೊಳ್ಳಬೇಕು ಕೊಲ್ಲಲು ಅಲ್ಲವೆಂದು ಹೇಳಿದಾಗ ತಿಪ್ಪಾ ತಮ್ಮ ಯೋಜನೆಯನ್ನು ಕೈಬಿಟ್ಟರು. ತಮ್ಮ ಉದ್ದೇಶಿತ ಕಾರ್ಯ ಯಶಸ್ವಿಯಾದ್ದರಿಂದ ಎಲ್ಲರೂ ಬೆಳಗಾಗುವ ಹೊತ್ತಿಗೆ ತಮ್ಮ ಮನೆಗಳನ್ನು ಸೇರಿಕೊಂಡರು. ಮುದಕಪ್ಪನವರು ಹಾಗೂ ಗುಳೇದಗುಡ್ಡದ ಇನ್ನಿತರ ಸ್ನೇಹಿತರು ಶಿರೂರ ಗುಡ್ಡದ ಮೂಲಕ ಕಾಲನಡಿಗೆಯಲ್ಲಿ ಊರನ್ನು ತಲುಪಿದರು. ಮುದಕಪ್ಪನವರ ಮೇಲೆ ಹಿಂದಿನಿಂದಲೂ ಸಂಶಯವಿದ್ಧ ಸರಕಾರ ಪ್ರತಿದಿನ ಮುಂಜಾನೆ ವಾಲಿಕಾರನನ್ನು ಕಳುಹಿಸಿ ಮುದಕಪ್ಪ ಊರೊಳಗಿರುವದನ್ನು ಖಚಿತಪಡಿಸಿಕೊಳ್ಳುತ್ತಿತ್ತು. ಬೆಳಗಾಗುವದರ ಒಳಗಾಗಿ ಮುದಕಪ್ಪ ಮನೆ ಸೇರಿದ್ದರಿಂದ ಎಂದಿನಂತೆ ವಾಲಿಕಾರ ಮನೆಗೆ ಬಂದಾಗ ಮುದಕಪ್ಪ ಇರುವದನ್ನು ಕಂಡು ಮರಳಿದ್ದರಿಂದ ಸರಕಾರಕ್ಕೆ ಇವರ ಮೇಲೆ ಸಂಶಯ ಬರಲಿಲ್ಲ. ಇತ್ತ ಸಜ್ಜಿ ಚೀಲಗಳನ್ನು ಸುತ್ತಲಿನ ಗ್ರಾಮಸ್ಥರು ಮನೆಗೆ ಒಯ್ದು ತಮ್ಮ ಆಹಾರದ ಕೊರತೆಯನ್ನು ನೀಗಿಸಿಕೊಂಡರು."[೨೫] ಡಿ.ಎ.ಶಿರೋಳೆಯವರ ಅಭಿಪ್ರಾಯದಂತೆ ಬಾಗಲಕೋಟ ಹತ್ತಿರ ೩-೧೧-೧೯೪೨ರಂದು ಮಾಲಗಾಡಿಯನ್ನು ಹಳಿತಪ್ಪಿಸಿದ ಕಾರ್ಯದಲ್ಲಿ ಚನ್ನಪ್ಪ ಅಂಬಲಿ, ಸಿದ್ದಪ್ಪ ಮಾಳವಾಡ, ಲಿಂಗಯ್ಯ ಜಂಗಿನ, ಮುತ್ತಿರರು ೭ ಜನ ಭಾಗವಹಿಸಿದ್ದರು. ಹತ್ತು ಜನ ಕಾಂಗ್ರೆಸಿಗರಲ್ಲಿ ನಾಲ್ಕು ಜನರನ್ನು ಬಂಧಿಸಲಾಯಿತು. ಇಬ್ಬರನ್ನು ಗುರುತು ಹಿಡಿಯಲು ಸಾಧ್ಯವಾಗಲಿಲ್ಲ ಹಾಗೂ ನಾಲ್ಕನೆಯವರು ಪರಾರಿಯಾದರು ಈ ಕುರಿತು ಕೇಸ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಯಿತು.

೩. ಬಾಗಲಕೋಟ ಕಡ್ಲಿಮಟ್ಟಿ ನಡುವಿನ ಕಂಬಿ ಕಿತ್ತು ಹಾಕಿರುವದು

ಚನ್ನಬಸಪ್ಪನವರು ಭೂಗತರಾಗಿದ್ದಾಗ ಬಾಗಲಕೋಟಗೆ ಬಂದು ಬಸವಣ್ಣೆಪ್ಪಾ ಪಲ್ಲೇದ ಅವರ ಅಡತಿ ಅಂಗಡಿಯಲ್ಲಿ ಒಮ್ಮೆ ಗುಪ್ತಸಭೆ ಕರೆದಿದ್ದರು. ಅದಕ್ಕೆ ಬಾಗಲಕೋಟ, ಗುಳೇದಗುಡ್ಡ ಮತ್ತು ಮಸಬಿನಾಳ ಕಾರ್ಯಕರ್ತರು ಹೋಗಿದ್ದರು. ಬಾಗಲಕೋಟ ಮತ್ತು ಕಡ್ಲಿಮಟ್ಟಿಗಳ ನಡುವಿನ ರೈಲ್ವೆ ಹಳಿ ಕಿತ್ತುವ ನಿರ್ಧಾರ ಕೈಗೊಂಡರು. ನಂತರ ಹಿಡಿದ ಕಾರ್ಯ ಮುಗಿಸುವವರೆಗೆ ನಾವು ಯಾವುದಕ್ಕೂ ಹಿಂದೆ – ಮುಂದೆ ನೋಡಬಾರದು ಭಯಭೀತರಾಗಬಾರದು, ಯಾರಾದರೂ ಅಂಜುವವರಿದ್ದರೆ ಮೊದಲೆ ಹಿಂದೆ ಸರಿಯಬೇಕು ಕೈಗೊಂಡ ಕೆಲಸ ಮುಗಿದ ತಕ್ಷಣ ಅವರಿವರ ದಾರಿಕಾಯದೇ ತೋರಿದ ದಿಕ್ಕಿನಲ್ಲಿ ಹೋಗಿ ಭೂಗತರಾಗಬೇಕು ಎಂದು ಎಚ್ಚರಿಸಿದರು. ಬಾಗಲಕೋಟ ಮತ್ತು ಕಡ್ಲಿಮಟ್ಟಿಯ ನಡುವೆ ೧೩-೧೧-೧೯೪೨ ರಂದು ರೈಲು ಕಂಬಿಯ ೩ ಬೋಲ್ಟ್‌ಗಳನ್ನು ಕಿತ್ತುಹಾಕಿ ತಾರ ತಂತಿಯನ್ನು ಕತ್ತರಿಸಿ ೫ ನಿರೋಧಕಗಳನ್ನು ಕಿತ್ತು ಹಾಕಿದೆವು ಎಂದು ಎಸ್.ಎಸ್. ಪಟ್ಟಣಶೆಟ್ಟಿಯವರು ತಮ್ಮ ನೆನಪುಗಳನ್ನು ಮೆಲುಕು ಹಾಕುವರು.

ನಿರ್ಧರಿಸಿದ ದಿನದಂದು ಚಳವಳಿಗಾರರು ಕಡ್ಲಿಮಟ್ಟಿ ಕಡೆಗೆ ಹೊರಟರು. ತಮ್ಮ ಜೊತೆಗೆ ಲಾರಿ, ಹಗ್ಗ, ಸುತ್ತಿಗೆ ಮೊದಲಾದ ಸಾಧನ ಸಲಕರಣೆಗಳನ್ನು ಮತ್ತು ಆತ್ಮರಕ್ಷಣೆಗೆಂದು ಒಂದು ಪಿಸ್ತೂಲನ್ನು ತೆಗೆದುಕೊಂಡರು. ಬಾಗಲಕೋಟ-ಕಡ್ಲಿಮಟ್ಟಿ ನಡುವೆ ಸಂಚಾರಿ ಕಾವಲಿನ ವ್ಯವಸ್ಥೆ ಇತ್ತು. ತಮ್ಮ ಮಾರ್ಗ ಬದಲಾಯಿಸಿ ಕಾಡುದಾರಿ ಹಿಡಿದರು ಎದುರಿಗೆ ಬಂದ ಘಟಪ್ರಭಾ ನದಿಯನ್ನು ದಾಟಬೇಕಾಯಿತು. ನೀರು ರಭಸದಿಂದ ಹರಿಯುತ್ತಿದ್ದರಿಂದ ಚಳವಳಿಗಾರರು ನದಿದಾಟಲು ಹಿಂಜರಿದರು. ಅಂಬಲಿಯವರು ಅವರನ್ನು ಹುರಿದುಂಬಿಸಿ ತಾವೇ ಸ್ವತಃ ಮುಂದಾಗಿ ಒಬ್ಬರ ಕೈ ಒಬ್ಬರು ಹಿಡಿದು ನದಿ ದಾಟಿದರು. ದಾಟುವಾಗ ನೀರು ಭುಜದವರೆಗೆ ಬರುತ್ತಿತ್ತು ಭಾರತಾಂಬೆಯ ನಾಮ ಸ್ಮರಣೆ ಮಾಡುತ್ತ ದಡ ಸೇರಿ ರೈಲು ಮಾರ್ಗ ತಲುಪಿದರು. "ಕಂಬಿ ಕೀಳಲು ಮೊದಲು ದೂರವಾಣಿಯ ತಂತಿಗಳನ್ನು ಕತ್ತರಿಸಹತ್ತಿದ್ದರು. ಸುತ್ತಿಗೆ ಏಟು ಬಿದ್ದಕೂಡಲೇ ವಿಪರಿತ ಸಪ್ಪಳವಾಗುತ್ತಿತ್ತು. ಸ್ವಲ್ಪ ಹೊತ್ತಿನಲ್ಲಿಯೇ ಆ ಸಪ್ಪಳ ಕೇಳಿ ಕಾವಲುಗಾರರು ಅತ್ತಕಡೆ ಬಂದು ೩೦-೪೦ ಮಾರುಗಳ ಅಂತರದಲ್ಲಿ ನಿಂತರು. ಇವರಿದ್ದಕಡೆಗೆ ಬರದೆ ನಿಂತ ಕಾರಣ ಅವರಿಗೂ ಭಯವಿದೆ ಎಂದು ತಿಳಿಯಿತು. ಹಿಡಿದ ಕಾರ್ಯವನ್ನು ಮುಗಿಸುವವರೆಗೆ ನಿಲ್ಲಬಾರದು ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು. ಅಂಬಲಿಯವರು ತಾವೇ ಸ್ವತಃ ಮುಂದಾಗಿ ಸುತ್ತಿಗೆ ಏಟು ಹಾಕಿ ತಂತಿ ಕತ್ತರಿಸಿದರು. ನಂತರ ಎಲ್ಲರೂ ಕೂಡಿ ಕೆಲವೊಂದು ಹಳಿಗಳನ್ನು ಕಿತ್ತಿದರು. ಕೂಡಲೇ ಅಲ್ಲಿಂದ ಸಿಕ್ಕಸಿಕ್ಕ ಕಡೆಗೆ ಹೊರಡಲು ಎಲ್ಲರಿಗೂ ತಿಳಿಸಿದರು."[೨೬]

ಈ ಘಟನೆಯ ಕುರಿತು ವಿಜಾಪೂರದ ಡಿ.ಎಸ್.ಪಿ., ಡಿ.ಎ. ಶಿರೋಳೆಯವರು ಮುಂಬೈ ಸರಕಾರಕ್ಕೆ ಈ ರೀತಿ ವರದಿ ನೀಡಿದ್ದಾರೆ. "ಚನ್ನಬಸಪ್ಪ ಅಂಬಲಿ, ಸಿದ್ದಪ್ಪ ಮಾಳವಾಡರ ನಾಯಕತ್ವದಲ್ಲಿ ಕನಕಪ್ಪ ದೇವದಾಸ, ಇಂಗಳಗಿಯ ಹನಮಂತ, ತಮ್ಮಣ್ಣದಾಸರ, ನಾಗೂರದ ದತ್ತು ರಂಗಪ್ಪ ದಾಸರ, ಅಮೀನಗಡದ ಚಂದಪ್ಪ ಬಸಪ್ಪ ಕುರುಬರ, ಸೂಳೆಬಾವಿಯ ಚಂದ್ರಪ್ಪ ಲಕ್ಕಪ್ಪ ಮಾದರ ಹಾಗೂ ಇತರರ ಮೂರು ಕಾರ್ಯಕರ್ತರು ಭಾಗವಹಿಸಿದ್ದರು."[೨೭]

೪. ಜುಮನಾಳ ರೈಲ್ವೆ ನಿಲ್ದಾಣ ಧ್ವಂಸ

ಜುಮನಾಳ ರೈಲು ನಿಲ್ದಾಣವನ್ನು ಸುಡಲು ಚನ್ನಬಸಪ್ಪ ಅಂಬಲಿಯವರು ತಮ್ಮ ಬಲಗೈ ಭಂಟನಾದ ಚಿಕ್ಕ ರೂಗಿಯ ದುಂಡಪ್ಪಾ ಉಪ್ಪಾರ ಮತ್ತು ಮಸಬಿನಾಳದ ತಿಪ್ಪಣ್ಣ ಗದ್ದಿಯವರಿಗೆ ತಮ್ಮ ತಮ್ಮ ಕಾರ್ಯಕರ್ತರ ಜೊತೆಗೆ ಹತ್ತರಕಿ ಹಾಳದ ವೆಂಕಪ್ಪ ಅಸಾಂಪುರ ಅವರ ಮನೆಯಲ್ಲಿ ೧೯೪೨ರ ನವೆಂಬರ್ ತಿಂಗಳಲ್ಲಿ ಒಂದು ನಿರ್ಧಿಷ್ಟ ದಿನ ಬಂದು ಸೇರಲು ತಿಳಿಸಿದರು. ೧೭-೧೧-೧೯೪೨ರ ರಾತ್ರಿ ಹತ್ತರಕಿಹಾಳದಲ್ಲಿ ಸಭೆ ನಡೆಯಿತು. ಅಲ್ಲಿ ತಿಪ್ಪಣ್ಣಗದ್ದಿ, ದುಂಡಪ್ಪ ಉಪ್ಪಾರ, ಯಮನಪ್ಪ ಅವಟಿ, ಮುಂತಾದವರು ಸೇರಿದ್ದರು. "ಜುಮನಾಳ ನಿಲ್ದಾಣ ನಾಶಪಡಿಸಲು ಭೀಮನಗೌಡ ಬಿರಾದಾರ, ಬಸಪ್ಪ ಬೀವನೂರ, ಬಾಳಪ್ಪ ಬೋಸಗಿ, ಶಿವಪ್ಪ ಹಡಪದ, ಇಂಗಳೇಶ್ವರದ ಯಮನಪ್ಪಾ ಅವಟಿ,

ಗುಳೇದಗುಡ್ಡದ ಸಿದ್ದರಾಮಪ್ಪ ತಿಪ್ಪಾ ಹಾಗೂ ಶಿವರಾಯಿ ಚಿಕ್ಕರೂಗಿ ಮತ್ತು ಅಡಿವೆಯ್ಯಾ ಟಕ್ಕಳಕಿ ಹೀಗೆ ೧೦ ಜನರಿದ್ದರು."[೨೮] ಕೇವಲ ೧೦-೧೨ ಜನರು ಕಪ್ಪುಬಟ್ಟೆ ಧರಿಸಿ ಮತ್ತು ಮುಖವಾಡ ಧರಿಸಿ ಜಮುನಾಳ ರೈಲ್ವೆ ನಿಲ್ದಾಣ ಕಡೆಗೆ ಹೊರಟರು. ಎದುರಾಳಿಗೆ ಭಯ ಹುಟ್ಟಿಸಲೆಂದು ಪಿಸ್ತೂಲು ತೆಗೆದುಕೊಂಡರು.

ಬೇರೆ ಕಡೆಗೆ ಸುದ್ಧಿ ಮುಟ್ಟಿಸಬಾರದೆಂದು ಮೊದಲು ರೈಲ್ವೆ ಸ್ಟೇಷನ್ ಮಾಸ್ತರರರನ್ನು ಒಂದು ಕೋಣೆಯಲ್ಲಿ ಬಂಧಿಸಿಟ್ಟರು. ನಂತರ ತಮ್ಮೊಡನೆ ಎತ್ತಿನ ಗಾಡಿಯಲ್ಲಿ ತಂದಿದ್ದ ೬೦-೭೦ ಬಡಿಗೆಗಳನ್ನು ಸೀಮೆ ಎಣ್ಣೆ ಹಿಲಾಲ ಮಾಡಿ ಸುತ್ತೆಲ್ಲ ನೆಟ್ಟರು. ಇದರ ಉದ್ದೇಶ ಚಳವಳಿಗಾರರು ಬಹಳಷ್ಟು ಜನರಿದ್ದಾರೆ ಎಂಬ ಭಯ ಹುಟ್ಟಿಸುವುದಾಗಿತ್ತು. ರೈಲ್ವೆ ನಿಲ್ದಾಣಕ್ಕೆ ಬೆಂಕಿ ಹಚ್ಚಿದರು.

೫. ರೈಲ್ವೆ ಪೂಲ್‌ಗೆ ಬೆಂಕಿ

ಬಾಗಲಕೋಟ ಹತ್ತಿರದ ಮಲ್ಲಾಪುರ ಬಳಿ ಜಂಗಿನ ಲಿಂಗಯ್ಯ, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಮಾಳವಾಡದ ಸಿದ್ದಪ್ಪ ಇನ್ನಿತರರು ಸೇರಿಕೊಂಡು ಎಂಟ ರೈಲ್ವೆ ಪೂಲನ್ನು ಸುಟ್ಟು ಹಾಕಿದರು.[೨೯]

೬. ನಿಂಬಾಳ ರೈಲ್ವೆ ನಿಲ್ದಾಣ ಧ್ವಂಸ

ಸಿಂದಗಿ ತಾಲೂಕಿನ ಸುರಗಳ್ಳಿ ಗ್ರಾಮದಲ್ಲಿ ಅಂಬಲಿಯವರು ಮತ್ತು ದುಂಡಪ್ಪ ಉಪ್ಪಾರ ಅವರು ಚಳವಳಿಗೆ ಜನರನ್ನು ಪ್ರೇರೇಪಿಸಿ ಒಂದು ಗುಂಪನ್ನು ರಚಿಸಿದರು. ಚಿಕ್ಕರೂಗಿಗೆ ಹೋಗಿ ಇನ್ನೊಂದು ಗುಂಪನ್ನು ರಚಿಸಿಕೊಂಡು ೨೪-೧೧-೧೯೪೨ರಲ್ಲಿ ರಾತ್ರಿ ನಿಂಬಾಳ ರೈಲ್ವೆ ನಿಲ್ದಾಣವನ್ನು ಸುಟ್ಟರು.

೭. ಹೊಳೆ ಆಲೂರ ರೈಲ್ವೆ ನಿಲ್ದಾಣಕ್ಕೆ ಬೆಂಕಿ

ಚೋಳಚಗುಡ್ಡದ ಶಂಕರಗೌಡರು, ಸಿದ್ದಪ್ಪ ಮಾಳವಾಡ, ಹಾಗೂ ಗುಳೇದಗುಡ್ಡದ ಚಳವಳಿಗಾರರು ಸೇರಿಕೊಂಡು ಹೊಳೆಆಲೂರು ನಿಲ್ದಾಣವನ್ನು ನಾಶ ಪಡಿಸಲು ಮುಂದಾದರು. ಸ್ಟೇಷನ್ ಮಾಸ್ತರನ ಹತ್ತಿರ ಹೋಗಿ ತಿನ್ನಲು ಕಬ್ಬು ನೀಡಿದರು. ಆಗ ಸ್ಟೇಷನ್ ಮಾಸ್ತರ ತನ್ನ ಕೈಯಲ್ಲಿದ್ದ ಬಂದೂಕನ್ನು ಕೆಳಗೆ ಇಟ್ಟು ಕಬ್ಬು ತಿನ್ನಲು ಮುಂದಾದ ಚಳವಳಿಗಾರರು ಆತನನ್ನು ಥಳಿಸಿ ಕೈಕಾಲು ಕಟ್ಟಿ ದೂರದ ಎರಿ ಹೊಲದಲ್ಲಿ ಎಸೆದು ನಿಲ್ದಾಣಕ್ಕೆ ಬೆಂಕಿ ಹಚ್ಚಿ ಸುಟ್ಟರು.

೮. ತಾರ ತಂತಿಗಳಿಗೆ ಕತ್ತರಿ

ಬ್ರಿಟಿಷ ಸರಕಾರದ ಸುದ್ಧಿ ಸಂಪರ್ಕ ಸಾಧನವಾದ ತಾರ ತಂತಿಗಳನ್ನು ಕತ್ತರಿಸುವ ಮೂಲಕ ಚಳವಳಿಗಾರರು ತಮ್ಮ ಚಟುವಟಿಕೆಯ ಬಗ್ಗೆ ಸರಕಾರಕ್ಕೆ ಬೇಗನೆ ಮಾಹಿತಿ ದೊರೆಯದ ಹಾಗೆ ಮಾಡಿದರು. ಧಾರವಾಡ, ವಿಜಾಪೂರ, ಕೊಲ್ಲಾಪೂರ, ಸತಾರ ಮುಂತಾದ ಜಿಲ್ಲೆಯ ಚಳವಳಿಗಾರರು

ಒಂದೆಡೆ ಸೇರಿ ತಾರ ತಂತಿಗಳನ್ನು ಕತ್ತರಿಸುವ ಕಾರ್ಯಕ್ರಮವನ್ನು ಹಾಕಿಕೊಂಡರು. ಅದರಂತೆ ೧೬-೧೨-೧೯೪೨ ರಂದು ಮದ್ಯಾಹ್ನ ಒಂದು ಗಂಟೆಗೆ ಏಕಕಾಲಕ್ಕೆ ಕಾರ್ಯ ಆರಂಭಿಸಿ ಪುಣೆಯಿಂದ ಹರಿಹರದವರೆಗೆ ಮತ್ತು ಹುಬ್ಬಳ್ಳಿಯಿಂದ ಬಾಗಲಕೋಟವರೆಗೆ ತಾರ ತಂತಿಗಳನ್ನು ಕತ್ತರಿಸಿದರು. “ಗುಳೇದಗುಡ್ಡದಲ್ಲಿ ಮುದಕಪ್ಪ ಕಲಬುರ್ಗಿ ಹಾಗೂ ಇತರರು ಸೇರಿಕೊಂಡು ಊರ ಹೊರಗಿನ ತಾರ ತಂತಿಗಳನ್ನು ಕತ್ತರಿಸಿ ಹಾಕಿದರು. ತಂತಿಗಳು ಪೊಲೀಸರಿಗೆ ಸಿಗಬಾರದೆಂದು ಪಕ್ಕದಲ್ಲಿದ್ದ ಬಾವಿಗೆ ಕಲ್ಲು ಕಟ್ಟಿ ಎಸೆದು ಬಂದರು.”[೩೦] ಬನಹಟ್ಟಿಯ ಚಳವಳಿಗಾರರಾದ ಕಲಕಂಬ ಮಾಸ್ತರ, ನಿಂಗಪ್ಪ, ನಾಮದೇವ, ಗಂಗಪ್ಪ ಸೇರಿಕೊಂಡು ಸಿದ್ದಾಪೂರದಿಂದ ಶಿರೋಳವರೆಗಿನ ತಾರತಂತಿಗಳನ್ನು ಕಡಿದು ಹಾಕಿ ಹಾಳಬಾವಿಗೆ ಎಸೆದರು. ಸೂರ್ಯಪಂಡಿತ ಉಪಾಧ್ಯಾಯವರು ಜಮಖಂಡಿ – ಕುಂಚನೂರು, ಮುಧೋಳ – ಬಾಗಲಕೋಟ, ಮುಧೋಳ – ಜಮಖಂಡಿ ನಡುವಿನ ತಾರತಂತಿಗಳನ್ನು ಕತ್ತರಿಸಿ ಹಾಕಿದರು.

ಗುರುಬಸಪ್ಪ ಪಾಗಿಯವರನವರು ತಮ್ಮ ಸ್ಮೃತಿಗಳಲ್ಲಿ ಹೀಗೆ ದಾಖಲಿಸಿದ್ದಾರೆ. ನಿಜಪ್ಪ ನಿಡಗುಂದಿ, ಹನುಮಂತಪ್ಪ ಸಾಳೇರ, ವಿಠ್ಠಪ್ಪ ಗುಂಡಿ, ವೀರಭದ್ರಪ್ಪ ಕದಾನಪುರ, ಶಿವಲಿಂಗಯ್ಯ ಗಣಾಚಾರಿ, ರಂಗಪ್ಪ ತೋಗುಣಶಿ, ಬಸಪ್ಪ, ಕೊಂಗೂರ, ಭೀಮಪ್ಪ ಚಿಲ್ಲಾಪುರ, ಇವರ ಸಂಗಡ ಹೋಗಿ ಕಮತಗಿ ನದಿಯಿಂದ ಮಾಗಿ ಚೌಕಿಯವರೆಗೆ ಒಂದುವರೆ ಮೈಲುಗಳವರೆಗೆ ತಂತಿ ಕೆಡವಿದರು. “ಜೆ.ಪಿ. ಹಾದಿಮನಿಯವರು ಹದಿನೈದು ಮಂದಿ ಕಾರ್ಯಕರ್ತರ ಜೊತೆಗೂಡಿ ಇಲಕಲ್ಲ – ಹುನಗುಂದ ನಡುವೆ ೨೦ ಕಿ.ಮೀ. ದಾರಿಯ ಗುಂಟ ಇರುವ ತಾರ ತಂತಿ ಕತ್ತರಿಸಿ ೧೦ ಕ್ಕೂ ಅಧಿಕವಾದ ಕಂಬಗಳನ್ನು ಕೆಡವಿ ಹೊಲದಲ್ಲಿ ಹುಗಿದರು.”[೩೧] ಕಮತಗಿಯಿಂದ ಶಿರೂರ ಹಾಗೂ ಬಾಗಲಕೋಟಯವರೆಗಿನ ತಾರ ತಂತಿಗಳನ್ನು ೫-೦೯-೧೯೪೨ ರಲ್ಲಿ ಸುಮಾರು ೨೦ ಜನರ ತಂಡವನ್ನು ಕಟ್ಟಿಕೊಂಡು ಶಿವಪುತ್ರಪ್ಪ ಪಟ್ಟಣಶೆಟ್ಟಿ ಏಮ್ಮಿಮಠ, ಮಲ್ಲಪ್ಪ ಯಂಡಿಗೇರಿ, ಸಿದ್ದಪ್ಪ ಹುಂಡೇಕಾರ, ಅಕ್ಕಿ ಮುಂತಾದವರು ಕಡಿದು ಹಾಕಿದರು. ಕಂಬಗಳನ್ನು ಹಳ್ಳಗಳಲ್ಲಿ ಎಸೆದರು. ಮರು ದಿವಸ ಮತ್ತೆ ರಾತ್ರಿ ಬಾಗಲಕೋಟ ಸುತ್ತಲಿನ ಗ್ರಾಮಗಳನ್ನು ಸಂಚರಿಸಿ ತಾರತಂತಿಗಳನ್ನು ಕತ್ತರಿಸಿ ಬಾವಿಗೆ ಎಸೆದರು.”[೩೨]

ಗುಳೇದಗುಡ್ಡದ ದತ್ತಾತ್ರೇಯ ವ್ಯಾಯಾಮಶಾಲೆಯ ಯುವಕರಾದ ರಾಚಪ್ಪ ಶೆಟ್ಟರ, ಶಿವನಗೌಡ ಸಾಲಿಗೌಡರ, ಸಿದ್ರಾಮಪ್ಪ ತಿಪ್ಪಾ, ಮುದಕಪ್ಪ ಕಲಬುರ್ಗಿ, ಚನ್ನಪ್ಪ ಹರವಿ ಚೋಳಚಗುಡ್ಡದ ಸಿದ್ದಪ್ಪ ಮಾಳವಾಡ ಮುಂತಾದವರು ಸೇರಿ ಅಂಬಲಿ ಚನ್ನಬಸಪ್ಪನವರ ಮಾರ್ಗದರ್ಶನದಲ್ಲಿ ವಿಜಾಪೂರ ಜಿಲ್ಲಾದ್ಯಂತ ತಾರ ತಂತಿ ಕತ್ತರಿಸಿದರು.[೩೩]

೯. ಅಂಚೆ ಅಪಹರಣ

ತಾರ ತಂತಿಗಳನ್ನು ಕತ್ತರಿಸುವ ಜೊತೆಗೆ ಸರಕಾರದ ಅಂಚೆಗಳನ್ನು ಅಪಹರಿಸಿ ಸರಕಾರಕ್ಕೆ ಸುದ್ಧಿಗಳು ಮುಟ್ಟದಂತೆ ನೋಡಿಕೊಳ್ಳುವದು ಚಳವಳಿಗಾರರ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು. ಗಲಗಲಿಯ ನಾರಾಯಣ ಜೋಶಿಯವರು ತಮ್ಮ ಚಳವಳಿಯ ಬಗ್ಗೆ ಸ್ಮರಿಸಿಕೊಳ್ಳುತ್ತಾ – ಗಲಗಲಿಯ ಯುವಕರಾದ ಲಕ್ಷ್ಮಣನಾವಿ ರಂಗನಾಥ ಹಬ್ಬು, ಹಣಮಂತ ಜೋಶಿ, ರಾಮಾಚಾರಿ ಕಾಖಂಡಕಿ ಮುಂತಾದವರು ಬಾಬೂ ಶಹಾಪೂರ(ಸತ್ಯಕಾಮ)ರ ನೇತೃತ್ವದಲ್ಲಿ 'ಜೀವನ ನಾಟ್ಯವಿಲಾಸಿ ಸಂಘ'ವನ್ನು ಕಟ್ಟಿ ಊರಲ್ಲಿ ನಾಟಕವಾಡುತ್ತಿದ್ದರು. ಆದರೆ ಯುವಕರ ಒಳ ಉದ್ದೇಶ ನಾಟಕವಾಡುವುದಾಗಿರಲಿಲ್ಲ. 'ಅಂಚೆಯನ್ನು ಒಡೆದು ಚಳವಳಿಯನ್ನು ತೀವ್ರಗೊಳಿಸುವದಾಗಿತ್ತು. ಯುವಕರು ತಮ್ಮ ತಮ್ಮಲ್ಲಿ ಚಿಕ್ಕ ಚಿಕ್ಕ ತಂಡಗಳನ್ನು ರಚಿಸಿಕೊಂಡು ಗಲಗಲಿ, ಬೀಳಗಿ, ಕಡ್ಲಿಮಟ್ಟಿ, ಬಬಲೇಶ್ವರ, ಬೇವೂರ ಮುಂತಾದ ಕಡೆ ಅಂಚೆಗಳನ್ನು ಅಪಹರಿಸುತ್ತಿದ್ದರು."[೩೪] ಮಹಾದೇವಪ್ಪ ಕತ್ತಿ, ಶಿವಪ್ಪ ಗಾಣಿಗೇರ, ಲಕ್ಷ್ಮಣ ನಾವಿ ಪ್ರತಿದಿನ ಗಲಗಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅಗಸಿ ಗೋಡೆಗೆ ಅವಿತುಕೊಂಡು ಕುಳಿತು. ಅಂಚೆ ಚೀಲ ಹೊತ್ತುಕೊಂಡು ಬರುವ ವ್ಯಕ್ತಿಯ ಕಣ್ಣಿಗೆ ಖಾರಪುಡಿ ಇಲ್ಲವೆ ಮಣ್ಣನ್ನು ಎರಚಿ ಅಂಚೆ ಚೀಲ ಕಸಿದುಕೊಂಡು ಅದನ್ನು ನಾಶ ಪಡಿಸುತ್ತಿದ್ದರು.[೩೫]

೧೯೪೩ ಜೂನ್ ೭ ರಂದು ಅಮವಾಸ್ಯೆ ದಿವಸ ಕತ್ತಿ ಮಹಾದೇವಪ್ಪ, ಬಾಬು ಶಹಾಪೂರ ಹಾಗೂ ಲಕ್ಷ್ಮಣ ನಾವಿಯವರು ತೆಲಗಿಯಿಂದ ಕೋಲ್ಹಾರಕ್ಕೆ ಬರುವ ಅಂಚೆಯನ್ನು ಒಡೆಯುವ ಸಂಚಿನಲ್ಲಿದ್ದಾಗ ಪೊಲೀಸರು ಮೂವರನ್ನು ಬೆನ್ನಟ್ಟಿ ಗುಂಡು ಹಾರಿಸಿದರು. ಲಕ್ಷ್ಮಣ ನಾವಿಯವರ ಮೊಣಕಾಲ ಕೆಳಗೆ ಗುಂಡು ತಾಗಿತು. ಮೂವರು ಬಂಧನಕ್ಕೆ ಒಳಗಾದರು.

"ಬೇವೂರನ ಅಂಚೆ ಕಛೇರಿಯಿಂದ ಅಂಚೆ ಚೀಲವನ್ನು ಲಕ್ಷ್ಮಪ್ಪ ಬಾರಕೇರ ಎಂಬಾತನು ತೆಗೆದುಕೊಂಡು ಹೋಗಿ ಕಡ್ಲಿಮಟ್ಟಿ ರೈಲುಗೆ ಇಡಬೇಕಿತ್ತು ೦೩-೦೪-೧೯೪೩ರಂದು ಚಳವಳಿಗಾರ ಕಂಬಪ್ಪ ಚಲವಾದಿಯವರು ಲಕ್ಷ್ಮಪ್ಪನನ್ನು ಬಂಧಿಸಿ ಒಂದು ದಿನ ಬಂಧನದಲ್ಲಿ ಇಟ್ಟುಕೊಂಡು ಅಂಚೆಗಳನ್ನು ನಾಶಮಾಡಿದರು."[೩೬]

ಸುಮಾರು ೩೦ ಜನ ಚಳವಳಿಗಾರರ ಗುಂಪು ರಾಮದುರ್ಗ – ಕಟಗೇರಿ ಮಾರ್ಗವಾಗಿ ಬರುತ್ತಿರುವ ಅಂಚೆ ಹೊತ್ತುಕೊಂಡು ಬರುವ ಬಸ್ಸನ್ನು ತಡೆಯಲು ಸಂಚು ರೂಪಿಸಿದರು. ಅದರಂತೆ ಇಬ್ಬರು ಚಳವಳಿಗಾರರು ಮೊದಲೆ ಆ ಬಸ್ಸಿನಲ್ಲಿ ಕುಳಿತು ಕೊಳ್ಳುವದು ಹಾಗೂ ಇತರರು ಮಾರ್ಗ ಮದ್ಯದ ಹೊಸಕೇರಿ ಕಾಲುವೆ ಹತ್ತಿರ ಕಾದು ಕುಳಿತು ಕೊಳ್ಳಲು ನಿರ್ಧರಿಸಿದರು. "೨೩-೦೧-೧೯೪೩ರಂದು ಅಂಚೆ ಇದ್ದ ಬಸ್ ಹೊಸಕೇರಿ ಸಮೀಪ ಬಂದಾಗ ಬಸ್‌ನಲ್ಲಿದ್ದ ಚಳವಳಿಗಾರರು ತಾವು ಇಳಿಯುವದಾಗಿ ಬಸ್ಸನ್ನು ನಿಲ್ಲಿಸುವಂತೆ ಚಾಲಕನಿಗೆ ಹೇಳಿ ಬಸ್‌ನಿಲ್ಲಿಸಿದರು. ಅವಿತುಕೊಂಡು

ಕುಳಿತಿದ್ದರು ಚಳವಳಿಗಾರರು ಬಸ್ಸಿಗೆ ನುಗ್ಗಿ ಪಿಸ್ತೂಲ ತೋರಿಸಿ ಇತರ ಪ್ರಯಾಣಿಕರನ್ನು ಹೆದರಿಸಿ ಅಂಚೆ ಚೀಲವನ್ನು ಸುಟ್ಟು ಹಾಕಿದರು. ಬಸ್ಸಿನ ಗಾಳಿಗಳನ್ನು ಬಿಚ್ಚಿ ಹೋದರು."[೩೭]

ಗೋವಿನ ಕೊಪ್ಪದಲ್ಲಿ ೨೫ ರಿಂದ ೩೦ ಚಳವಳಿಗಾರರು ಸೇರಿ ೨೨-೦೧-೧೯೪೩ ರಂದು ಅಂಚೆ ಕಛೇರಿಯ ವ್ಯವಸ್ಥಾಪಕನ ಸಹೋದರನಿಂದ ಕಛೇರಿಯ ಬೀಗದ ಕೈಯನ್ನು ಕಿತ್ತುಕೊಂಡು ಕಛೇರಿಯಲ್ಲಿದ್ದ ಅಂಚೆಗಳನ್ನು ಸುಟ್ಟು ಹಾಕಿದರು.[೩೮]

೧೦. ಸರಕಾರಿ ಕಟ್ಟಡಗಳ ನಾಶ

"ಆರ್.ಜಿ. ದೇಸಾಯಿಯವರು ಬಾಗಲಕೋಟದ ರಿಕಾರ್ಡ್ ರೂಮಿನ ರಿಕಾರ್ಡ್ ಕೀಪರಾಗಿ ಕೆಲಸ ಮಾಡುತ್ತಿರುವಾಗ ಅದನ್ನು ಸುಟ್ಟರು. ಅವರೇ ದಾಖಲಿಸಿದಂತೆ ಗುರುರಾವ ಜೋರಾಪುರ, ಶ್ರೀನಿವಾಸ ಮಂಗಳವೇಡೆಯವರ ಸೂಚನೆಯಂತೆ ರೆಕಾರ್ಡ್ ರೂಮ್‌ಗೆ ಬೆಂಕಿ ಹಚ್ಚಬೇಕು ಅದು ಒಮ್ಮೆಲೆ ಉರಿಯದಂತೆ ಎಚ್ಚರಿಕೆ ವಹಿಸಲು ದೂದಿ ಅರಳಿಯಿಂದ ದಾರ ಮಾಡಿ ಅದು ಹೇಗೆ ಉರಿಯುವದು ಎಂಬುದನ್ನು ಹಲವಾರು ಪ್ರಯೋಗ ಮಾಡಿದೆವು. ೧೯೪೨ ಅಕ್ಟೋಬರ್ ತಿಂಗಳಿನಲ್ಲಿ ಸಂಜೆ ೫ ಗಂಟೆಗೆ ಒಬ್ಬ ಚಳವಳಿಗಾರ ಸೀಮೆ ಎಣ್ಣೆ, ದೂದಿ ಅರಳಿಯ ದಾರ, ಕಡ್ಡಿಪೆಟ್ಟಿಗೆ ನೀಡಿ ಹೋದರು. ೫:೩೦ಕ್ಕೆ ರೂಮ್ ಕೀಲಿ ಹಾಕುವ ವೇಳೆಗೆ ಕಾಗದ ಪತ್ರಗಳ ಮೇಲೆ ಸೀಮೆ ಎಣ್ಣೇ ಸುರಿದು ಬೆಂಕಿ ಹಂಚಿ ಬಂದೆನು. ಮೊದಲು ಯೋಜನೆ ಮಾಡಿದಂತೆ ಬೆಂಕಿ ನಿಧಾನವಾಗಿ ಉರಿಯುತ್ತಿರುವದರಿಂದ ರಾತ್ರಿ ಯಾರಿಗೂ ಗೋತ್ತಾಗಲಿಲ್ಲ. ಹಲವು ಕಾಗದ ಪತ್ರಗಳು ಸುಟ್ಟವು."[೩೯]

ಭೂಪಾಲ ನಾಂದ್ರೇಕರ, ಸೂರ್ಯಪಂಡಿತ ಉಪಾಧ್ಯ, ವಾಸಪ್ಪ ಉಪಾಧ್ಯ ಮುಂತಾದವರು ಕೂಡಿಕೊಂಡು ಸಾವಳಗಿಯ ಸರಕಾರಿ ಬಂಗ್ಲೆಯನ್ನು ಸುಟ್ಟು ಹಾಕಿದರು. ಸರಕಾರಿ ಅಧಿಕಾರಿಗಳನ್ನು ಹೆದರಿಸಿ ಕಛೇರಿಗಳನ್ನು ಧ್ವಂಸ ಮಾಡಲು ಕುಂಚನೂರಿನ ನಾಗಪ್ಪ ಪತ್ತಾರ ದೇಶಿಯ ಪಿಸ್ತೂಲುಗಳನ್ನು ನಾಡ ಬಾಂಬ್‌ಗಳನ್ನು ತಯಾರಿಸಿ ಬನಹಟ್ಟಿಯ ಕಲಕಂಬ ಮಾಸ್ತರರ ಗುಂಪಿಗೆ ಹಾಗೂ ಇಂಚಗೇರಿ ಮಾಧವಾನಂದರ ಗುಂಪಿಗೆ ಸರಬರಾಜು ಮಾಡುತ್ತಿದ್ದರು.

"ಜಕನೂರ ಸರಕಾರಿ ಬಂಗ್ಲೆ, ಅಲಗೂರಿನ ಸರಕಾರಿ ಶಾಲೆ ಕಣ್ಣೂರ ದೇಸಾಯಿ ವಾಡೆಯನ್ನು ಕುಂಚನೂರಿನ ರಾಯಪ್ಪ ನ್ಯಾಮಗೌಡ ನೇತೃತ್ವದ ತಂಡ ಸುಟ್ಟು ಹಾಕಿತು".[೪೦] "ಸಾವಳಗಿಯಲ್ಲಿ ಧರ್ಮಣ್ಣ ಮುತ್ತೂರ ಅವರು ತಮ್ಮ ಇತರ ಚಳವಳಿಗಾರರೊಂದಿಗೆ ಸೇರಿಕೊಂಡು ಪೊಲೀಸ ಠಾಣೆಗೆ ಮುತ್ತಿಗೆ ಹಾಕಿ ಶಸ್ತ್ರಾಸ್ತ್ರ ವಶಪಡಿಸಿಕೊಂಡು ವಿಜಾಪೂರ ಜಿಲ್ಲೆಯ ಕಲ್ಲೊಳ್ಳಿ, ಸಾವಳಗಿ, ಕೊಣ್ಣೂರ ಚಾವಡಿಗಳನ್ನು ಸುಟ್ಟು ಕಾಗದ ಪತ್ರಗಳನ್ನು ನಾಶಪಡಿಸಿದರು. ಕಲಕಂಬ ಮಾಸ್ತರರು ಬನಹಟ್ಟಿಯ ಸುತ್ತಮುತ್ತಲಿನ ಪೊಲೀಸ್ ಠಾಣೆಗಳ ಮೇಲೆ ದಾಳಿ ಮಾಡಿ ಕಛೇರಿಗಳಲ್ಲಿಯ ಕಾಗದ ಪತ್ರಗಳನ್ನು ಸುಟ್ಟು ಹಾಕಿ ಕಾಡತೂಸುಗಳನ್ನು ವಶಪಡಿಸಿಕೊಳ್ಳುತ್ತಿತ್ತು."[೪೧]

೧೧. ಸರಕಾರಿ ಖಜಾನೆ ಲೂಟಿ ಯತ್ನ

ಬಿಜಾಪೂರದ ಸರಕಾರಿ ಬ್ಯಾಂಕ್‌ನ್ನು ಲೂಟಿ ಮಾಡಲು ಚನ್ನಬಸಪ್ಪ ಅಂಬಲಿಯವರು ಯೋಜನೆಯನ್ನು ಸಿದ್ಧಪಡಿಸಿ ಚಿಕ್ಕರೂಗಿಯ ಚಳವಳಿಗಾರರನ್ನು ಗುಪ್ತವಾಗಿ ಬರುವಂತೆ ಹೇಳಿಕಳುಹಿಸಿದರು. ಅವರ ಆದೇಶದಂತೆ ಮಲ್ಲಕಪ್ಪ ಬಾಗಲಕೋಟ, ಸಾಯಬಣ್ಣ ನಾಟಿಕಾರ ಮಲಕಪ್ಪ ಪ್ಯಾಟಿ ಭಗವಾನಸಿಂಗ್ ಅಂಗಡಿ ಮುಂತಾದ ೬೦ ಜನರು ವಿಜಾಪೂರಕ್ಕೆ ಬಂದು ಸೇರಿದರು. ಆದರೆ ಈ ಸುದ್ದಿ ಸರಕಾರಕ್ಕೆ ಮೊದಲೆ ತಿಳಿದಿದ್ದರಿಂದ ಮುಂಬೈಯಿಂದ ವಿಶೇಷ ಮಿಲಿಟರಿ ತರಿಸಿದರು, ಯೋಜನೆ ವಿಫಲಗೊಂಡಿತು.

ಅಂಬಲಿಯವರು ಮತ್ತೊಂದು ಯೋಜನೆಗೆ ಕೈ ಹಾಕಿದರು. ಗುಳೇದಗುಡ್ಡದಲ್ಲಿಯ ಗುಡ್ಡದ ಮೇಲೆ ಇರುವ ವೀರಭದ್ರೇಶ್ವರ ದೇವಸ್ಥಾನಕ್ಕೆ ಭೂಗತರಾಗಿ ಬಂದರು. ಇತರ ಊರುಗಳಿಂದ ಹಲವು ಚಳವಳಿಗಾರರನ್ನು ಕರೆಯಿಸಿ ಅಂದು ವೀರಭದ್ರೇಶ್ವರ ದೇವಸ್ಥಾನದಲ್ಲಿ ಬದಾಮಿ ತಾಲೂಕ ಖಜಾನೆ ಲೂಟಿ ಮಾಡಲು ಯೋಜನೆಯೊಂದನ್ನು ಸಿದ್ಧಪಡಿಸಿ ಗುಪ್ತ ಸಭೆ ನಡೆಸಿದರು. ಸಭೆಯ ನಂತರ ಎಲ್ಲರೂ ಗುಡ್ಡದ ಮೇಲೆ ಇದ್ದರೆ ಸಂಶಯ ಬರುವದೆಂದು ಕೆಲವು ಚಳವಳಿಗಾರರನ್ನು ಬೇರೆ ಕಡೆಗೆ ಕಳುಹಿಸಲಾಯಿತು. ಬಂದ ಚಳವಳಿಗಾರರಿಗೆ ಊರಿನ ಜನ ಆಶ್ರಯ ನೀಡಿದರು.

ಬದಾಮಿಯ ಖಜಾನೆಯಲ್ಲಿ ರೈತರಿಂದ ಸಂಗ್ರಹಿಸಿದ ಅರವತ್ತು ಸಾವಿರ ತಗಾವಿ ಹಣ ಸಂಗ್ರಹಿಸಲಾಗಿತ್ತು ಅದನ್ನು ರಕ್ಷಿಸಲು ಬಲವಾದ ಪೊಲೀಸ್ ಕಾವಲು ಪಡೆಯು ಇತ್ತು. ಯಾರಾದರೂ ಖಜಾನೆ ಮೇಲೆ ದಾಳಿ ಮಾಡಲು ಮುಂದಾದರೆ ಕಾವಲು ಕಾಯುವ ಪೊಲೀಸ ಗಂಟೆ ಬಾರಿಸಿ ಇತರ ಪೊಲೀಸರನ್ನು ಎಚ್ಚರಿಸುತ್ತಿದ್ದರು. ಹೀಗಾಗಬಾರದೆಂದರೆ ಗಂಟೆ ಬಾರಿಸುವದನ್ನು ತಡೆಯಬೇಕೆಂದು ಇಬ್ಬರು ಚಳವಳಿಗಾರರನ್ನು ನೇಮಿಸಲಾಯಿತು. ಒಂದು ವೇಳೆ ಗಂಟೆ ಬಾರಿಸಿದರೆ ಅಥವಾ ಲೂಟಿ ಮಾಡುವಾಗ ಪೊಲೀಸರು ದಾಳಿ ಮಾಡಿದರೆ ಅವರಿಗೆ ಕವಣೆಗಳಿಂದ ಕಲ್ಲುಬೀಸಲು ಚಳವಳಿಗಾರರ ಒಂದು ಪಡೆ ರಚನೆಗೊಂಡಿತ್ತು. ಆದರೆ ಇದೇ ಸಮಯದಲ್ಲಿ ಗುಳೇದಗುಡ್ಡದಲ್ಲಿ ಬಟ್ಟೆ ಅಂಗಡಿ ಲೂಟಿಯಾಗಿದ್ದರಿಂದ ಜಿಲ್ಲಾ ಕೇಂದ್ರದಿಂದ ಹೆಚ್ಚಿನ ಪೊಲೀಸ್‌ರು ಗುಳೇದಗುಡ್ಡಕ್ಕೆ ಬಂದಿರುವರಿಂದ ಅಂಬಲಿಯವರು ಈ ಯೋಜನೆಯನ್ನು ಕೈಬಿಟ್ಟರು.

"ಬದಾಮಿಯ ಮಾಮಲೇದಾರ ಹಾಗೂ ಫೌಜದಾರ ಕಛೇರಿಗಳಲ್ಲಿ ಬಾಂಬ ಸ್ಫೋಟಿಸಲು ಅಂಬಲಿಯವರು ಯೋಜನೆಯೊಂದನ್ನು ಹಾಕಿದರು. ಮಡಿವಾಳಪ್ಪ ಪಟ್ಟಣಶೆಟ್ಟಿಯವರು ದಾಖಲಿಸಿದಂತೆ ಒಂದು ದಿನ ಸಂಜೆ ಸಿದ್ದಪ್ಪ ಮಾಳವಾಡರು ಜಂಗಮ ವೇಷದಲ್ಲಿ ಕೈಯಲ್ಲಿ ಕಾಯಿಪಲ್ಲೆ ಚೀಲ ಹಿಡಿದುಕೊಂಡು ನಮ್ಮ ಮನೆಗೆ ಬಂದರು. ಅವರ ಸೂಚನೆಯಂತೆ ಮಾಳಿಗೆ ಏರಿದಾಗ ಕಾಯಿಪಲ್ಲೆ

ಚೀಲದಲ್ಲಿ ಒಂದು ದೇಶಿ ಬಾಂಬನ್ನು ತಂದಿದ್ದರು. ಬದಾಮಿಯ ಮಾಮಲೇದಾರ ಹಾಗೂ ಪೌಜದಾರ ಕಛೇರಿ ಸ್ಫೋಟಿಸಲು ಸೂಚಿಸಲಾಗಿತ್ತು. ಆ ದಿಶೆಯಲ್ಲಿ ಎರಡು ಮೂರು ಬಾರಿ ಪ್ರಯತ್ನಿಸಿದರೂ ಪೊಲೀಸರ ಭದ್ರ ಕಾವಲಿದ್ದುದರಿಂದ ಈ ಕಾರ್ಯ ನಡೆಯಲಿಲ್ಲ."[೪೨]

ಮಹಾತ್ಮರ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯು ಬಹುಬೇಗನೇ ಜನಪ್ರಿಯವಾಯಿತು. ನಾಯಕರ ಬಂಧನದ ನಂತರ ಚಳವಳಿಯು ಅಹಿಂಸಾತ್ಮಕ ರೂಪ ತಾಳಿತು. ಜಿಲ್ಲೆಯ ನಾಯಕರು ಭೂಗತರಾಗಿದ್ದುಕೊಂಡೆ ಹಿಂಸಾತ್ಮಕ ಕಾರ್ಯ ಆರಂಭಿಸಿ ಸರಕಾರಕ್ಕೆ ಅಪಾರ ನಷ್ಟ ಮಾಡಿದರು.

೧೯೪೨ ಚಲೇಜಾವ ಚಳವಳಿಯ ಕಾವು ೧೯೪೪ರಲ್ಲಿ ಇಳಿಯಿತು. ಮುಂದೆ ಈ ತರಹದ ಚಳವಳಿಗಳು ಭಾರತದಲ್ಲಿ ನಡೆಯಲಿಲ್ಲ. ಭಾರತೀಯರ ಪ್ರಯತ್ನದ ಫಲವಾಗಿ ಅಗಸ್ಟ್ ೧೫, ೧೯೪೭ರಂದು ಭಾರತವು ಸ್ವತಂತ್ರಗೊಂಡಿತು.

ಅಡಿ ಟಿಪ್ಪಣಿಗಳು

೧. ಪ್ರಧಾನ ಗ.ಪ.(ಮೂಲ), ಸರಸ್ವತಿ ರಿಸಬೂಡ (ಅನು), ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೯೪, ಪುಟ ಸಂಖ್ಯೆ ೧೭೦.

೨. ಅದೇ, ಪುಟ ಸಂಖ್ಯೆ ೧೭೦.

೩. ಅದೇ, ಪುಟ ಸಂಖ್ಯೆ ೧೭೧.

೪. ಬಿಪಿನ್ ಚಂದ್ರ (ಮೂಲ), ಗೋಪಾಲರಾವ್ ಎಚ್.ಎಸ್(ಅನು), ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪, ಪುಟ ಸಂಖ್ಯೆ ೩೪೭.

೫. ಅದೇ, ಪುಟ ಸಂಖ್ಯೆ ೩೪೭.

೬. ಸೂರ್ಯನಾಥ ಕಾಮತ, ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ, ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೯೨, ಪುಟ ಸಂಖ್ಯೆ ೧೯.

೭. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೧೯೭.

೮. ಅದೇ, ಪುಟ ಸಂಖ್ಯೆ ೧೧೯೫.

೯. ಸೂರ್ಯನಾಥ ಕಾಮತ, ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ, ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೯೨, ಪುಟ ಸಂಖ್ಯೆ ೨೩.

೧೦. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೧೮-೮-೧೯೪೨, ಪುಟ ಸಂಖ್ಯೆ ೩.

೧೧. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೨೮-೮-೧೯೪೨, ಪುಟ ಸಂಖ್ಯೆ ೪.

೧೨. ಬಿರಾದಾರ ಜಿ.ಎ., ಕರ್ನಾಟಕ ಸರದಾರ ಅಂಬಲಿ ಚನ್ನಬಸಪ್ಪ, ಉದಯ ಪ್ರಕಾಶನ, ವಿಜಾಪೂರ, ೨೦೦೧, ಪುಟ ಸಂಖ್ಯೆ ೫೩.

೧೩. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೧೧-೯-೧೯೪೨, ಪುಟ ಸಂಖ್ಯೆ ೩.

೧೪. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೨೨-೯-೧೯೪೨, ಪುಟ ಸಂಖ್ಯೆ ೨.

೧೫. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೨-೧೦-೧೯೪೨, ಪುಟ ಸಂಖ್ಯೆ ೧.

೧೬. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೬೦೧.

೧೭. ಅದೇ, ಪುಟ ಸಂಖ್ಯೆ ೬೦೦

೧೮. ಸೂರ್ಯನಾಥ ಕಾಮತ, ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ, ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೯೨, ಪುಟ ಸಂಖ್ಯೆ ೭೭.

೧೯. ಅದೇ, ಪುಟ ಸಂಖ್ಯೆ ೭೯.

೨೦. ಸಂದರ್ಶನ, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಬಾಗಲಕೋಟ, ದಿನಾಂಕ ೬-೨-೨೦೧೨.

೨೧. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೬೦೭.

೨೨. ಅದೇ, ಪುಟ ಸಂಖ್ಯೆ ೫೪೬.

೨೩. ಮುಳಗುಂದ ಸಿ.ವಿ., ಚನ್ನಬಸಪ್ಪ ಅಂಬಲಿ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ೧೯೮೬, ಗದಗ, ಪುಟ ಸಂಖ್ಯೆ ೩೬-೩೭.

೨೪. ಬಿರಾದಾರ ಜಿ.ಎ., ಕರ್ನಾಟಕ ಸರದಾರ ಅಂಬಲಿ ಚನ್ನಬಸಪ್ಪ, ಉದಯ ಪ್ರಕಾಶನ, ವಿಜಾಪೂರ, ೨೦೦೧, ಪುಟ ಸಂಖ್ಯೆ ೫೭.

೨೫. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೧೦-೮-೨೦೧೩.

೨೬. ಮುಳಗುಂದ ಸಿ.ವಿ., ಚನ್ನಬಸಪ್ಪ ಅಂಬಲಿ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ೧೯೮೬, ಗದಗ, ಪುಟ ಸಂಖ್ಯೆ ೩೭.

೨೭. ಬಿರಾದಾರ ಜಿ.ಎ., ಕರ್ನಾಟಕ ಸರದಾರ ಅಂಬಲಿ ಚನ್ನಬಸಪ್ಪ, ಉದಯ ಪ್ರಕಾಶನ, ವಿಜಾಪೂರ, ೨೦೦೧, ಪುಟ ಸಂಖ್ಯೆ ೫೮.

೨೮. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೬೦೩.

೨೯. ಸಂದರ್ಶನ, ಶಿವಪುತ್ರಪ್ಪ ಪಟ್ಟಣಶೆಟ್ಟಿ, ಬಾಗಲಕೋಟ, ದಿನಾಂಕ ೬-೨-೨೦೧೨.

೩೦. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೧೦-೮-೨೦೧೩.

೩೧. ಸುಬ್ರಮಣ್ಯ ಸುಶೀಲಾ (ಸಂ), ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು, ೧೯೯೩, ಪುಟ ಸಂಖ್ಯೆ ೧೩೮.

೩೨. ಸಂದರ್ಶನ, ಗುರಪ್ಪ ಜಾಪಳ, ಕಮತಗಿ, ತಾ. ಹುನಗುಂದ, ದಿನಾಂಕ ೯-೩-೨೦೧೩.

೩೩. ಸಂದರ್ಶನ, ರಾಚಪ್ಪ ಗೊಗಲ್, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೧೦-೦೩-೨೦೧೪.

೩೪. ಸಂದರ್ಶನ, ನಾರಾಯಣ ಕೆ. ಜೋಶಿ, ಗಲಗಲಿ, ತಾ. ಬೀಳಗಿ, ದಿನಾಂಕ ೦೫-೦೪-೨೦೧೨.

೩೫. ಅದೇ,

೩೬. ಸಂದರ್ಶನ, ಭೀಮಪ್ಪ ಚಲವಾದಿ, ಜೇವೂರ, ತಾ. ಬಾಗಲಕೋಟ, ದಿನಾಂಕ ೬-೮-೨೦೧೨.

೩೭. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ದಿನಾಂಕ ೨೪-೧-೧೯೪೩, ಪುಟ ಸಂಖ್ಯೆ ೪.

೩೮. ಅದೇ,

೩೯. ಸುಬ್ರಮಣ್ಯ ಸುಶೀಲಾ (ಸಂ), ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು, ೧೯೯೩, ಪುಟ ಸಂಖ್ಯೆ ೬೪.

೪೦. ಸಂದರ್ಶನ, ಎಸ್.ಬಿ.ಮಟೋಳಿ, ಜಮಖಂಡಿ, ದಿನಾಂಕ ೮-೭-೨೦೧೩.

೪೧. ಸದಾಶಿವ ದಸ್ತೂಟ, ಜಮಖಂಡಿ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು: ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ಸಂಖ್ಯೆ ೧೩೦.

೪೨. ಮಡಿವಾಳಪ್ಪ ಪಟ್ಟಣಶೆಟ್ಟಿ, ನಾನು ನಡೆದು ಬಂದದಾರಿ, ಚಿತ್ತರಗಿ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೮೮.

ಅಧ್ಯಾಯ ೧೦

ಸ್ವಾತಂತ್ರ್ಯ ಚಳವಳಿಯ ಜೀವನಾಡಿಗಳು

೧೦.೧ ರಂಗಭೂಮಿ ಪಾತ್ರ

೧೦.೨ ಬ್ರಿಟಿಷರ ವಿರುದ್ಧ ಸಮರ ಸಾರಿದ ನಾಟಕಗಳು

೧೦.೩ ಸ್ವಾತಂತ್ರ ಚಳವಳಗೆ ಆಶ್ರಯ ತಾಣವಾದ ರಂಗಭೂಮಿ

೧೦.೪ ಬೆಳ್ಳಿ ಪರದೆ ಮತ್ತು ಸ್ವಾತಂತ್ರ್ಯ ಚಳವಳಿ

೧೦.೫ ವೃತ್ತ ಪತ್ರಿಕೆಗಳು

೧೦.೬ ಕಾವ್ಯಗಳಲ್ಲಿ ಸ್ವಾತಂತ್ರ್ಯ ಚಳವಳಿ

ಅಧ್ಯಾಯ ೧೦

ಸ್ವಾತಂತ್ರ್ಯ ಚಳವಳಿಯ ಜೀವ ನಾಡಿಗಳು

೧೦.೧ ರಂಗಭೂಮಿ ಪಾತ್ರ

ರಂಗಭೂಮಿಯು ಸಮಾಜದ ಮನೋಧೋರಣೆಯನ್ನು ಬದಲಿಸುವ ಮಹತ್ವದ ಮಾದ್ಯಮವಾಗಿದೆ. ಸಮಾಜದ ಅಂಕುಡೊಂಕನ್ನು ನೇರವಾಗಿ ಜನರಿಗೆ ತಲುಪಿಸುತ್ತವೆ. ಅಂದು ನಾಡಿನ ಸ್ವಾತಂತ್ರ್ಯದ ಕುರಿತಾಗಿ ರಾಷ್ಟ್ರೀಯ ಪ್ರಜ್ಞೆಯನ್ನು ಈ ರಂಗಭೂಮಿ ಮೂಡಿಸಿತು.

“ಒಂದು ಪುಸ್ತಕ ಮಾಡುವದಕ್ಕಿಂತ ನೂರು ಪಾಲು ಹೆಚ್ಚಿನ ಸಾಧನೆಯನ್ನು ನಾಟಕ ಮಾಡಬಲ್ಲದು” ಎಂದು ಹೆನ್ರಿ ಇರ್ವಿಂಗ್‌ರು ಅಭಿಪ್ರಾಯ ಪಟ್ಟಿದ್ದಾರೆ.

“ನಾಟಕಕ್ಕೆ ರಂಗಭೂಮಿ ಎಂದು ಹೆಸರಿದೆ.

ರಂಗ > ರಂಜನೆ ಭೂಮಿ > ಸ್ಥಳ

ರಂಗಭೂಮಿ > ರಂಜಿಸುವ ಸ್ಥಳ

ರಂಜಿಸುವದಷ್ಟೆ ಅಲ್ಲ ಲೋಕ ವ್ಯವಹಾರಕ್ಕೆ ತಕ್ಕಂತೆ ಜ್ಞಾನವನ್ನು ಒದಗಿಸುವುದು. ಸಮಾಜದ ಸುಖ ಸಂತೋಷ ಯೋಗಕ್ಷೇಮವನ್ನು ಕಾಯ್ದುಕೊಳ್ಳುವುದು ಇದರ ಮುಖ್ಯ ಉದ್ದೇಶ.”[೧] ರಂಗಭೂಮಿ ಹಲವಾರು ಜ್ವಲಂತ ಸಮಸ್ಯೆಗಳನ್ನು ಎದುರಿಸಿ ವೈಭವವನ್ನು ಕಂಡಿದೆ. ತನ್ನ ಮಾರ್ಗದಲ್ಲಿ ಏರಿಳಿತಗಳನ್ನು ಅನುಭವಿಸಿದೆ. ಹೀಗಾಗಿ ರಂಗಭೂಮಿಗೆ ಒಂದು ಇತಿಹಾಸ ಪರಂಪರೆ ಬೆಳೆದು ಬಂದಿದೆ.

ಭಾರತ ಬ್ರಿಟಿಷ ವಿರೋಧಿ ಚಳವಳಿಯನ್ನು ಪುನರ್ ವ್ಯಾಖ್ಯಾನಿಸುವುದು ಅಗತ್ಯವಿದೆ. ಅದು ಮುಖ್ಯವಾಗಿ ಗಾಂಧಿ ಮತ್ತು ಕಾಂಗ್ರೆಸ ಚಳವಳಿಯಾಗಿ ಬಿಂಬಿತವಾಗಿದೆ. ಇದರೊಳಗೆ ಲೇಖಕರು, ಉದ್ಯಮಿಗಳು, ಕ್ರಾಂತಿಕಾರರು, ರೈತರು, ಕಲಾವಿದರು ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಕಲಾವಿದರ ಪಾತ್ರವು ಬಹುಶಃ ಮುಖ್ಯವಾಗಿತ್ತು. ಕಾರಣ ಸಿನಿಮಾ ಮತ್ತು ನಾಟಕದಂತಹ ಜನರನ್ನು ನೇರವಾಗಿ ತಲುಪುವ ಪ್ರಭಾವಶಾಲಿ ಮಾಧ್ಯಮಗಳಲ್ಲಿ ಅವರು ರಾಜಕೀಯ ಸಂದೇಶಗಳನ್ನು ಸಮರ್ಥವಾಗಿ ತಲುಪಿಸಬಲ್ಲವರಾಗಿದ್ದರು.

ಸಾಮಾಜಿಕ ರಾಜಕೀಯ ಹೋರಾಟಗಳಿಗೆ ತೀವ್ರವಾಗಿ ಸ್ಪಂದಿಸುವ ಕಲಾ ಮಾಧ್ಯಮವೆಂದರೆ, ರಂಗಭೂಮಿ ಇದಕ್ಕೆ ಹಲವು ಉದಾಹರಣೆಗಳು ನಮ್ಮ ದೇಶದ ಇತಿಹಾಸದಲ್ಲಿ ದೊರಕುತ್ತವೆ. ಸ್ವಾತಂತ್ರ್ಯ ಸಂಗ್ರಾಮದ ಹೊತ್ತಿನಲ್ಲಿ ಮಹಾರಾಷ್ಟ್ರದಲ್ಲಿ ತಮಾಷಾ ಪ್ರಕಾರದ ಮೂಲಕ, ಬಂಗಾಳದಲ್ಲಿ ಜಾತ್ರಾ

ಪ್ರಕಾರದ ಮೂಲಕ, ಅಂಧ್ರದಲ್ಲಿ ಬುರ್ರಕಥಾ ಪ್ರಕಾರದ ಮೂಲಕ ಬ್ರಿಟಿಷರ ವಿರುದ್ಧ ರಂಗಕರ್ಮಿಗಳು ಸಮರ ಸಾರಿದ್ದರು. ಕರ್ನಾಟಕದಲ್ಲಿ ಆಗ ಉತ್ತುಂಗದಲ್ಲಿದ್ದ ವೃತ್ತಿ ರಂಗಭೂಮಿ ತನ್ನದೇ ರೀತಿಯಲ್ಲಿ ಸ್ವಾತಂತ್ರ್ಯ ಚಳವಳಿಗೆ ಸ್ಪಂದಿಸಿತು.

ಭಾರತದ ಸ್ವಾತಂತ್ರ್ಯಕ್ಕಾಗಿ ೧೮೫೭ ರಿಂದ ೧೯೪೭ರ ವರೆಗೆ ತೊಂಬತ್ತು ವರ್ಷಗಳ ಕಾಲ ರಾಷ್ಟ್ರೀಯ ಜಾಗೃತಿ ಅಸ್ಪೃಶ್ಯತಾ ನಿವಾರಣೆ, ವಿದೇಶಿ ವಸ್ತು ಬಹಿಷ್ಕಾರ, ಚಲೇಜಾವ ಚಳವಳಿ, ಅಹಿಂಸಾತ್ಮಕ ಹೋರಾಟ, ಖಾದಿ ಪ್ರಚಾರ ಮುಂತಾದ ಚಟುವಟಿಕೆಗಳು ನಡೆದವು. ಇವುಗಳ ಪ್ರಭಾವಕ್ಕೆ ಒಳಗಾದ ರಂಗಕರ್ಮಿಗಳು ತಮ್ಮ ನಾಟಕಗಳಲ್ಲಿ ಈ ಆಶಯಗಳನ್ನು ಬಿಂಬಿಸಿದರು. ಉದಾಹರಣೆಗೆ ರಂಗಭೂಮಿಯ 'ನೀಲ್‌ದರ್ಪಣ್' ಎಂಬ ನಾಕಟದ ಮೂಲಕ ವಸಾಹತುಷಾಹಿಯ ಕ್ರೌರ್ಯವನ್ನು ಬಯಲಿಗೆಳೆಯಿತು.

ಕ್ರಿ.ಶ.೧೮೯೫-೯೬ ರಲ್ಲಿ ಬಾಗಲಕೋಟ ಜಿಲ್ಲೆಯಲ್ಲಿ ಬದಾಮಿ ಹಾಗೂ ಗುಳೇದಗುಡ್ಡದಲ್ಲಿ ಒಂದೊಂದು ನಾಟಕ ಕಂಪನಿಗಳು ಸ್ಥಾಪನೆಗೊಂಡವು. ಬದಾಮಿಯಲ್ಲಿ 'ಕನ್ನಡ ನಾಟಕ ಮಂಡಳಿ' ಹುಟ್ಟಿಕೊಂಡಿತು. ಈ ಮಂಡಳಿಯಿಂದ ಚುರುಮರಿಯವರ 'ಶಾಕುಂತಲ' ಮೂರನೇ ನಾಲ್ಕು ಅಂಕಗಳನ್ನು ಕನ್ನಡದಲ್ಲಿ ಪ್ರದರ್ಶಿಸಲಾಯಿತು. ಬದಾಮಿಯ ವೆಂಕಣ್ಣಭಟ್ಟರೆಂಬ ಪ್ರಸಿದ್ಧ ಗಾನ ಕಲಾವಿದ ಈ ನಾಟಕದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದರು. ಈ ಮಂಡಳಿ ಹೆಚ್ಚು ಕಾಲ ಬದುಕದೇ ಹೋಯಿತು.

ಇನ್ನೊಂದು ನಾಟಕ ಕಂಪನಿ ಎಂದರೆ "ದಿ. ಚಂಚಲ ಕಟ್ಟಿ ಶ್ರೀಗೋವಿಂದಪ್ಪನವರು ಗುಳೇದಗುಡ್ಡದ 'ಶ್ರೀ ಬಾಲ ನಾಟಕ ಮಂಡಳಿ'ಯನ್ನು ಸ್ಥಾಪಿಸಿ ಸುತ್ತಲಿನ ಊರುಗಳಲ್ಲಿ ಸುತ್ತಾಡಿ ಖ್ಯಾತರಾದರು. ಆದರೆ ನೇಕಾರಿಕೆ ವೃತ್ತಿಯ ಬಡವರಾದ ಯುವಕರು ತಮ್ಮ ಹೊಟ್ಟೆಪಾಡಿಗೆ ಮುಂದುವರೆಯದೆ ಈ ಕಂಪನಿ ಮುಚ್ಚಿತು."[೨]

೧೯೨೦-೪೭ರ ಅವಧಿಯಲ್ಲಿ ಮುಂಬೈ ಕರ್ನಾಟಕದ ರಂಗಭೂಮಿ ಬಹುತೇಕ ನಾಟಕಗಳು ಬ್ರಿಟಿಷ ವಿರೋಧಿ ಆಯಾಮ ಒಳಗೊಂಡಿದ್ದವು. ಈ ಸಮಯದಲ್ಲಿ ನಾಡಿನಾದ್ಯಂತ ಹಲವಾರು ನಾಟಕ ಕಂಪನಿಗಳು ಸ್ಥಾಪನೆಗೊಂಡವು. "೧೯೦೩ರಲ್ಲಿ 'ವಿಶ್ವ ಗುಣಾದರ್ಶ ನಾಟಕ ಮಂಡಳಿ' (೧೯೦೩) ರಬಕವಿಯ ವಾಮನ ರಾಯರು(ವಾಮನ ಮಾಸ್ತರ) ಮತ್ತು ಕೆಲವು ನಟರಿಂದ ಸ್ಥಾಪನೆಗೊಂಡಿತು."[೩] ೧೯೨೫ರಲ್ಲಿ ಗಂಗೂಬಾಯಿ ಗುಳೇದಗುಡ್ಡ 'ಶ್ರೀ ಕೃಷ್ಣ ನಾಟಕ ಮಂಡಳಿ' ಆರಂಭಿಸಿದರು. ಇವರ ಕಲಾ ಸೇವೆಗೆ ವಿಜಾಪೂರದ ನಾಗರಿಕರು ಮರಾಠಿ ಕಲಾವಿದರು ಎಲ್ಲರೂ ಸೇರಿ ಸ್ವಾತಂತ್ರ್ಯ ಹೋರಾಟಗಾರ ಶ್ರೀನಿವಾಸ ಕೌಜಲಗಿಯವರ ಅಧ್ಯಕ್ಷತೆಯಲ್ಲಿ ಗಂಗೂಬಾಯಿಗೆ 'ಗಾನರತ್ನ' ಎಂಬ ಬಿರುದು ನೀಡಿದರು. "ಬಾಗಲಕೋಟದಲ್ಲಿ ಕೆರೂರ ವಾಸುದೇವಾಚಾರ್ಯರು ನಿಧನರಾದ ಆರು ವರ್ಷಗಳ ನಂತರ ಅವರ ಅಭಿಮಾನಿಗಳು 'ವಾಸುದೇವ ವಿನೋದಿನಿ ನಾಟ್ಯಸಭೆ' ಎಂಬ ಹವ್ಯಾಸಿ ತಂಡವನ್ನು ೧೯೨೭ರಲ್ಲಿ ಸ್ಥಾಪಿಸಿದರು. ಇದೇ ಅವಧಿಯಲ್ಲಿ 'ಮಲ್ಲಿಕಾರ್ಜುನ ನಾಟ್ಯ ಸಂಘ' ಜಮಖಂಡಿಯಲ್ಲಿ

ಆರಂಭಗೊಂಡಿತು. 'ಶ್ರೀ ಗಜಾನನ ನಾಟ್ಯ ಸಂಘ' ದತ್ತಂಬಟ್ಟ ಒಡೆಯರ ನೇತೃತ್ವದಲ್ಲಿ ೧೯೩೫ರಲ್ಲಿ ಜಮಖಂಡಿಯಲ್ಲಿ ಸ್ಥಾಪನೆಗೊಂಡಿತು."[೪]

ಕರ್ನಾಟಕದ ಶೆಕ್ಸಪೀಯರ್ ಎಂದು ಪ್ರಸಿದ್ಧರಾದ ಕಂದಗಲ್ ಹನಮಂತರಾಯರು ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಕಂದಗಲ್ ಗ್ರಾಮದವರು. " 'ಶ್ರೀ ಕೃಷ್ಣ ನಾಟಕ ಮಂಡಳಿ', 'ಲಲಿತ ಕಲೋದ್ಧಾರಕ ನಾಟಕ ಮಂಡಳಿ' ಮತ್ತು 'ಅರವಿಂದ ಸಂಗೀತ ನಾಟಕ ಮಂಡಳಿ' ಎಂಬ ಮೂರು ನಾಟಕ ಮಂಡಳಿಯನ್ನು ಕಟ್ಟಿ ಬೆಳೆಸಿದರು. "೧೯೪೯ರಲ್ಲಿ ಖ್ಯಾತಗಾಯಕರಾದ ಬಸವರಾಜ ಮನ್ಸೂರವರು ಗುಳೇದಗುಡ್ಡದಲ್ಲಿ 'ಶ್ರೀ ಕಲಾ ಪ್ರಕಾಶ ನಾಟಕ ಮಂಡಳಿ'ಯನ್ನು ಸ್ಥಾಪಿಸಿದರು."[೫] ೧೯೪೦ರಲ್ಲಿ ಸತ್ಯಕಾಮ (ಬಾಬು ಅನಂತ ಕೃಷ್ಣ ಶಹಾಪೂರ) ಅವರು 'ಜೀವನ ನಾಟ್ಯ ವಿಲಾಸಿ ಸಂಘ' ಎಂಬ ನಾಟಕ ಸಂಘವನ್ನು ಸ್ಥಾಪಿಸಿದರು. ಬೇರೆ ಬೇರೆಯ ಜಿಲ್ಲೆಯ ನಾಟಕ ಕಂಪನಿಗಳು ಬಾಗಲಕೋಟ ಜಿಲ್ಲೆಯಲ್ಲಿ ಬಂದು ನಾಟಕ ಪ್ರದರ್ಶನ ಮಾಡಿ ಜನರನ್ನು ರಾಷ್ಟ್ರೀಯತೆಗೆ ಪ್ರೇರೇಪಿಸಿದವು. ಅದರಲ್ಲಿ ಮುಖ್ಯವಾಗಿ ಗರುಡ ಸದಾಶಿವರಾಯರ ಹಾಗೂ ಹುಯಿಲಗೋಳರು ಮೊದಲಾದ ಐತಿಹಾಸಿಕ ನಾಟಕಗಳು ಜಿಲ್ಲೆಯ ನಾಟಕಕಾರರ ಮೇಲೆ ಪ್ರಭಾವ ಬೀರಿದವು. ಕಂದಗಲ್ ಹನಮಂತರಾಯ್ 'ವರಪ್ರಧಾನ' ಎಲ್.ಎಸ್. ಇನಾಂದಾರರ 'ಸಿಂಧೂರ ಲಕ್ಷ್ಮಣ' ಇತ್ಯಾದಿ ಐತಿಹಾಸಿಕ ನಾಟಕಗಳು ಹೊರಬಂದು ರಾಷ್ಟ್ರೀಯ ಚಳವಳಿಗೆ ಸ್ಫೂರ್ತಿ ನೀಡಿದವು.

೧೦.೨ ಬ್ರಿಟಿಷರ ವಿರುದ್ಧ ಸಮರಸಾರಿದ ನಾಟಕಗಳು

೧. ಚವತಿ ಚಂದ್ರ

ಚವತಿ ಚಂದ್ರ ನಾಟಕದಲ್ಲಿ ಶಮಂತಕ ಮಣಿಯನ್ನು ಅರಸುತ್ತ ಜಾಂಬವಂತನ ಹತ್ತಿರ ಬಂದ ಕೃಷ್ಣ ಆ ಮಣಿ ಅವನಿಗೆ ಸೇರಿದ್ದ ಸೊತ್ತು, ಅದನ್ನು ಮರಳಿ ಕೊಡಬೇಕೆಂದು ಕೇಳಿದಾಗ ಜಾಂಬವಂತನು ನೀಡಲು ನಿರಾಕರಿಸುತ್ತಾನೆ. ಪರಸ್ಪರರಲ್ಲಿ ಮಾತಿನ ಚಕಮಕಿ ಆಗುತ್ತದೆ. ವಿಜಯನು ಮಧ್ಯಪ್ರವೇಶಿಸುತ್ತಾನೆ. ಆಗ ಜಾಂಬವಂತನು "ಅಯ್ಯಾ ಆರ್ಯ ಮಹಾಶಯರೇ ನೀವೆಂತಹ ನ್ಯಾಯ ಮೂರ್ತಿಗಳು? ಕೇವಲ ಧರ್ಮ ಶ್ರವಣ ಮಾಡಲಿಕ್ಕೆ ಬಂದಿರುವಿರಿ, ನೀವು ವಾಸಿಸುವ ದೇಶ ಯಾವುದು ? ಮೂಲ ನಿವಾಸಿಗಳಾದ ನಮ್ಮವರಲ್ಲವೆ ? ಅದು ಬಿಡಿ, ನೀವು ನಿಮ್ಮ ನಿಮ್ಮಲ್ಲಿಯೇ ಒಬ್ಬರ ರಾಜ್ಯವನ್ನು ಮತ್ತೊಬ್ಬರು ಅಪಹರಿಸುತ್ತಿರುವಿರಲ್ಲವೆ ? ಅದು ನ್ಯಾಯವೇ ? ನಿಮ್ಮ ರಾಜನಾದ ಕೃಷ್ಣನು ಮೊದಲು ಗೊಲ್ಲನು. ಈಗ್ಗೆ ಬಂಗಾರದ ದ್ವಾರಕೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿರುವನಂತೆ, ಆ ಸಂಪತ್ತನ್ನು ಅವನು ಎಲ್ಲಿಂದ ತಂದನೋ ! ಘನವಂತರಾಗಿ ಮೆರೆದಾಡುವ ನಿಮ್ಮ ಮೂಲ ಚರಿತ್ರೆಯನ್ನು ನೋಡ ಹೋದರೆ ಅಲ್ಲಿ ಅನ್ಯಾಯದ ಕತ್ತಲೆಯು ಮುಸುಕಿದೆ. ಕೊಲೆಯ ದುರ್ಗಂದವೇ ತುಂಬಿದೆ."[೬] ಎಂಬ ಸಂಭಾಷಣೆಗಳಲ್ಲಿ ವ್ಯಾಪಾರಕ್ಕಾಗಿ ಒಂದು ಧರ್ಮ ಪ್ರಸಾರಕ್ಕೆ ತೊಡಗಿದ ಬ್ರಿಟಿಷರು ಭಾರತದ ಭೂಮಿಯನ್ನು ಆಕ್ರಮವಾಗಿ ಕೈವಶ ಮಾಡಿಕೊಂಡು ನಡೆಸಿದ ದುರಾಚಾರವನ್ನು ಧ್ವನಿಸುತ್ತದೆ. "ನೀವು

ವಾಸಿಸುವ ದೇಶ ಯಾವುದು? ಮೂಲ ನಿವಾಸಿಗಳಾದ ನಮ್ಮದಲ್ಲವೇ ? ಎನ್ನುವ ಮಾತು ಭಾರತೀಯರು ಬ್ರಿಟಿಷರಿಗೆ ಒಡ್ಡಿದ ನೇರ ಸವಾಲಿನಂತಿದೆ. ಇಲ್ಲಿ ಜಾಂಬವಂತ ಭಾರತೀಯ ಪ್ರತೀಕವಾಗಿ ನಿಲ್ಲುತ್ತಾನೆ. ಅವನ ದೇಶಿಯ ರೀತಿ, ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಅದರಂತೆ ಕೃಷ್ಣಾದಿಗಳ ನಾಗರಿಕ ರೀತಿ ಮತ್ತು ಬ್ರಿಟಿಷರ ಸಂಸ್ಕೃತಿ ನಾಗರಿಕತೆಗಳನ್ನು ಟೀಕಿಸುವಂತಿದೆ. ಅದು ಬಿಡಿ, ನೀವು ನಿಮ್ಮ ನಿಮ್ಮಲ್ಲಿಯೇ ಒಬ್ಬರ ರಾಜ್ಯವನ್ನು ಮತ್ತೊಬ್ಬರು ಅಪಹರಿಸುತ್ತಿರುವಿರಲ್ಲವೇ ? ಎನ್ನುವ ಮಾತು ಬ್ರಿಟಿಷರಿಗೆ ಅಷ್ಟೆ ಅಲ್ಲ, ಒಟ್ಟು ಯುರೋಪಿಯನ್ನರ ವಸಾಹತುಶಾಹಿ ಹಾಗೂ ಆಕ್ರಮಣಕಾರಿ ಪ್ರವೃತ್ತಿಯನ್ನು ಅದೇ ಕಾರಣಕ್ಕಾಗಿ ಜಾಗತಿಕ ಯುದ್ಧದಂಥ ಭೀಕರ ಯುದ್ಧ ಸಂದರ್ಭವನ್ನು ನೆನಪಿಗೆ ತಂದುಕೊಡುತ್ತದೆ."[2] ಜಗತ್ತಿನ ಒಂದು ತುಂಡು ನಿವಾಸಿಗಳಾದ ಬ್ರಿಟಿಷರು ಭಾರತದ ಪ್ರಮುಖ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೆರೆಯುತ್ತಿರುವ ರೀತಿಯನ್ನು ನಿಮ್ಮ ರಾಜನಾದ ಕೃಷ್ಣನು ಮೊದಲು ಗೊಲ್ಲನು, ಈಗ್ಗೆ ಬಂಗಾರದ ದ್ವಾರಕೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿರುವಂತೆ ಅ ಸಂಪತ್ತಿಯನ್ನವನು ಎಲ್ಲಿಂದ ತಂದನೋ ಎನ್ನುವುದೂ ಬ್ರಿಟಿಷರು ಭಾರತದ ಸಂಪತ್ತನ್ನು ಕೊಳ್ಳೆ ಹೊಡೆದು ಶ್ರೀಮಂತರಾದರು ಎಂಬುದನ್ನು ಇಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ.

೨. ಲಂಕಾ ದಹನ

ಈ ನಾಟಕವು ಕೂಡಾ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆ ನೀಡಿದೆ. ಗರುಡ ಸದಾಶಿವರಾಯರ ದತ್ತಾತ್ರೇಯ ನಾಟಕ ಮಂಡಳಿ ೧೯೨೯ರಲ್ಲಿ ವಿಜಾಪೂರದಲ್ಲಿ ಬೀಡು ಬಿಟ್ಟಿತ್ತು. ಆಗ ಗರುಡರು ಲಂಕಾ ದಹನ ನಾಟಕವನ್ನು ಆಡುತ್ತಿದ್ದರು. ಈ ಹಿಂದೆ ರಾವಣನ ದರಬಾರಿನಲ್ಲಿ ಮಾರುತಿ ಪಾತ್ರಧಾರಿ ಹೇಳುತ್ತಿದ್ದ ಮಾತುಗಳನ್ನು ಅನುಲಕ್ಷಿಸಿ ಜಿಲ್ಲೆ ಕಲೆಕ್ಟರ್ ನಾಟಕ ಪ್ರದರ್ಶನಕ್ಕೆ ತಡೆ ಒಡ್ಡಿದನು. ಇದನ್ನು ಸವಾಲನ್ನಾಗಿ ಸ್ವೀಕರಿಸಿದ ಗರುಡರು ರಾವಣನ ಅಂದರೆ ಬ್ರಿಟಿಷರ ನೀಚತನದಿಂದ ಸಾಮ್ರಾಜ್ಯ ವಿಸ್ತರಿಸಿದ ಗೀತೆಯೊಂದನ್ನು ರಚಿಸಿ ಜನರಲ್ಲಿ ಜಾಗೃತಿ ಮೂಡಿಸಿದರು.

"ದಾನವನಿವ ಸಾರ್ವಭೌಮ ನೃಪನೆ ಘನತಮದುರಾಚಾರಿ ।
ಮುನಿಜನಗಳಿಗಿನವರತ ಭಾದಿಸುವ ॥
ನ್ಯಾಯ ನೀತಿ ಮೊದಲಾದ ಸಗುಣಗಳ ನಾವನೋ
ತಾಯಿ ಮಗುವ ಸಂಗೋಪಿಸುವ ತೆರೆ ಕಾಯ್ವನು
ಆಯುಘವಾನ್ ಸಮ್ರಾಯನಲ್ಲವೇ
ಹೇಯರ ಕರ್ಮರತನಾದ ಪತೀತ ಖಲ ।
ದಾನವನಿವ ಸಾರ್ವಭೌಮನೇ ।
ಅಕ್ಕರೆತೆಯನನುಭವಿಸತಕ್ಕ ಭೂಮಿಯಾಳ್ವರಾ
ಚಿಕ್ಕ ಚಿಕ್ಕ ದೇಶಗಳ ಕಸಿದು ಆ ಸರ್ವರಾ

ಅಕ್ಕರತೆಯ ಮುರಿದಿಕ್ಕಿ ಪರವಶದೊಳಿಕ್ಕಿದ
ಸೊಕ್ಕಿನ ಠಕ್ಕ ಶಿಖಾಮಣಿ
ದಾನವನಿವ ಸಾರ್ವಭೌಮನೇ"[೮]

ಈ ಗೀತೆಯನ್ನು ಸಾಂಕೇತಿಕವಾಗಿ ರಾವಣನ ದುರಾಚಾರವನ್ನು ಉಲ್ಲೇಖಿಸಿದರೂ ಅದು ನೈಜವಾಗಿ ರಾವಣ ರೂಪದಲ್ಲಿರುವ ಬ್ರಿಟಿಷರ ಕುತಂತ್ರ ಹಾಗೂ ಅವರ ದಬ್ಬಾಳಿಕೆಯನ್ನು ಸದಾಶಿವರಾಯರು ಇಲ್ಲಿ ಸ್ಪಷ್ಟವಾಗಿ ಜನರಿಗೆ ಅರ್ಥವಾಗುವ ರೀತಿ ಈ ಪದ್ಯವನ್ನು ರಚಿಸಿದ್ದಾರೆ.

"ಬ್ರಿಟಿಷರ ಪ್ರತೀಕವಾಗಿರುವ ರಾವಣನ ಅಕ್ರಮಣಕಾರಿ ಮನೋಭಾವ, ಭೂಮಿಭಾಗ್ಯ, ಭಾಮೆಯರನ್ನು ಉಪಯೋಗಿಸುವ ಆತನ ಹೀನ ವೃತ್ತಿಯನ್ನು ಖಂಡಿಸುವ ಸೌಮ್ಯ ಹಾಗೂ ಸಾಕೇಂತಿಕವಾಗಿರುವ ಈ ಗೀತೆಯು ಚಳವಳಿಗಾರರನ್ನು ಹುರಿದುಂಬಿಸುತ್ತಿತ್ತು. ರಾಷ್ಟ್ರಪ್ರೇಮಿಯೊಬ್ಬನು ಈ ಗೀತೆಯನ್ನು ಕೇಳಿ ರೋಮಾಂಚನಗೊಂಡು ಅವೇಷ ತುಂಬಿ, ರಂಗಭೂಮಿಯನ್ನೇರಿ. ಮಾರುತಿ ಪಾತ್ರಧಾರಿ ಗರುಡರ ತಲೆಗೆ ಗಾಂಧಿ ಟೊಪ್ಪಿಗೆಯನ್ನು ಹಾಕಿದರಂತೆ."[೯] ಅಂದಿನ ಕಾಲದ ಜನರು ಪೌರಾಣಿಕ ನಾಟಕಗಳಲ್ಲಿ ರಾಷ್ಟ್ರೀಯತೆಯನ್ನು ಪ್ರಸ್ತಾಪಿಸುವ ಇಂಥ ಹಾಡು, ಸಂಭಾಷಣೆಗಳನ್ನು ಗುರುತಿಸುವ ಮನೋಭಾವನೆ ಹೊಂದಿದ್ದರು. ನಾಟಕದ ಮಧ್ಯದಲ್ಲಿ ರಾಷ್ಟ್ರೀಯತೆ ಪ್ರಸ್ತಾಪವಾದಾಗ 'ಭಾರತ ಮಾತಾ ಕೀ ಜೈ' ಹಾಗೂ 'ವಂದೇ ಮಾತರಂ' ಎಂಬ ಘೋಷಣೆಗಳನ್ನು ಕೂಗಿ ಸ್ಪಂದಿಸುತ್ತಿದ್ದರು. ಇಲ್ಲಿ ರಂಗಭೂಮಿ ಜನರ ಮನಸ್ಸಿನ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತು ಎಂಬುವುದು ಅರಿವಾಗುವದು.

೩. ಕೀಚಕನ ವಧ

ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಡುವಾಗ ಭೂಗತರಾಗಿ ತಮ್ಮ ಹೋರಾಟ ಮುಂದುವರೆಸಬೇಕು, ಇಲ್ಲದಿದ್ದರೆ ಕುತಂತ್ರಿಗಳಾದ ಬ್ರಿಟಿಷರು ಹೊಂಚು ಹಾಕಿ ನಮ್ಮ ಶಕ್ತಿಯನ್ನು ಕುಂದಿಸುವರು ಎಂಬುವ ಸಂದೇಶವನ್ನು ನೀಡಲು ಗರುಡ ಸದಾಶಿವರಾಯರು 'ಕೀಚಕ ವಧ' ಎಂಬ ನಾಟಕದ ಮೂಲಕ ಭಾರತೀಯರ ಸ್ವಾತಂತ್ರ್ಯ ಚಳವಳಿಯನ್ನು ಬೆಂಬಲಿಸಿದ್ದಾರೆ. ಈ ನಾಟಕದಲ್ಲಿ "ನೀಚ ಕೀಚಕನು ಸೈರೇಂಧ್ರಿಯನ್ನು ಬಲತ್ಕರಿಸಲು ಮುಂದಾದಾಗ ಅದನ್ನು ತಡೆಗಟ್ಟಲು ಅಜ್ಞಾತವಾಸದಲ್ಲಿದ್ದ ಪಾಂಡವರು ಆ ಕೀಚಕನನ್ನು ಕೊಂದರು. ಇಲ್ಲಿ ಪಾಂಡವರ ಅಜ್ಞಾತವಾಸವನ್ನು ಭೂಗತ ಚಳವಳಿಗಾರರಿಗೆ ಹೋಲಿಸಿದ್ದಾರೆ. ಬ್ರಿಟಿಷರು ಭಾರತೀಯರ ಮೇಲೆ ನಡೆಸುತ್ತಿದ್ದ ದರ್ಪ ದೌರ್ಜನ್ಯ ಅತ್ಯಾಚಾರಗಳನ್ನು ಸ್ವಾತಂತ್ರ್ಯ ಹೋರಾಟಗಾರರು ಭೂಗತರಾಗಿದ್ದುಕೊಂಡೇ ತಡೆಯಬೇಕೆಂಬುದನ್ನು ಗರುಡರು ಈ ನಾಟಕದಲ್ಲಿ ಸೂಚ್ಯವಾಗಿ ತಿಳಿಸಿದ್ದಾರೆ."[೧೦]

೪. ಶ್ರೀರಾಮ ಪಾದುಕ ಪಟ್ಟಾಭಿಷೇಕ

ಶ್ರೀರಾಮ ಪಾದುಕ ಪಟ್ಟಾಭೀಷೇಕ ನಾಟಕದಲ್ಲಿ ಕೈಕೆಯನ್ನು ಬ್ರಿಟಿಷರಂತೆ ಹಾಗೂ ಭರತನನ್ನು ಭಾರತೀಯರಂತೆ ಬಿಂಬಿಸಿ ನಾಟಕವನ್ನು ರಚಿಸಲಾಗಿದೆ. ಶ್ರೀರಾಮ ಪಟ್ಟಾಭಿಷೇಕ ನಾಟಕದಲ್ಲಿ ರಾಮನಿಗೆ ಪಟ್ಟಾಭಿಷೇಕ ಮಾಡಲು ಸಿದ್ಧತೆ ನಡೆಸಿದಾಗ ಕೈಕೆಯಿಯು ಭರತನಿಗೆ ಪಟ್ಟಗಟ್ಟಬೇಕೆಂದು ಪಟ್ಟು ಹಿಡಿದಳು. ಇದಕ್ಕೆ ತನ್ನ ಪ್ರಜೆಗಳ ಸಮ್ಮತಿ ಇಲ್ಲವೆಂದು ದಶರಥ ಕೈಕೆಗೆ ಈ ರೀತಿ ಹೇಳುತ್ತಾನೆ."ಏನು ಹೀನ ಮಾತುಗಳನ್ನಾಡುವೆ ? ನನ್ನ ಪ್ರಜಾ ಜನರು ನನ್ನನ್ನು ವಿಶ್ವಾಸದಿಂದ ವಿಷ್ಣುರೂಪದಲ್ಲಿ ನೋಡುತ್ತಿರುವರು, ರಾಜನು ತನ್ನ ಮನಸ್ಸಿಗೆ ವಿರುದ್ಧವಾಗಿ ಅಚರಿಸಿದರೆ ಗುಂಪು ಗುಂಪಾಗಿ ಎದ್ದು ಪಿಶಾಚಿಗಳಂತೆ ಅವನ ಮೇಲೆ ಸಾಗಿ ಪವಿತ್ರವಾದ ಅವನ ಪ್ರಾಣವನ್ನು ತೆಗೆದುಕೊಳ್ಳುವ ರಾಕ್ಷಸ ಪ್ರವೃತ್ತಿಯವರಲ್ಲ ನನ್ನ ಪ್ರಜಾಜನರು. ನನ್ನ ಪ್ರಜರು ಕೇವಲ ಧಾರ್ಮಿಕರು"[೧೧] ದಶರಥನ ಮೇಲಿನ ಮಾತುಗಳಲ್ಲಿ ಬ್ರಿಟಿಷರ ದುಷ್ಟನೀತಿ ಹಾಗೂ ಭಾರತೀಯರ ಸೌಮ್ಯತೆ ಹಾಗೂ ಗಾಂಧೀಜಿಯವರ ಅಂಹಿಸಾತ್ಮಕ ಮಾರ್ಗವನ್ನು ಇಲ್ಲಿ ಗರುಡರು ಮಾರ್ಮಿಕವಾಗಿ ಪ್ರೇಕ್ಷಕರಿಗೆ ತಿಳಿಸಿ ಅಂಹಿಸಾತ್ಮಕ ಹೋರಾಟಕ್ಕೆ ಬೆಂಬಲಿಸುತ್ತಾರೆ. ಈ ಮೇಲಿನ ಸಂಭಾಷಣೆಗಳಲ್ಲಿ ಪೌರಾಣಿಕ ನಾಟಕ ಅಥವಾ ಐತಿಹಾಸಿಕ ನಾಟಕಗಳ ಕೇಳಿ ಬರುವ ಸಹಜ ಮಾತುಗಳೆಂಬಂತೆ ಕಂಡು ಬಂದರೂ ಕೂಡಾ ಭಾರತೀಯರ ರಾಜಕೀಯ ಪ್ರಜ್ಞೆಯನ್ನು ಜ್ವಲಂತವಾಗಿ ಇಟ್ಟುಕೊಂಡು ಈ ನಾಟಕವನ್ನು ರಚಿಸಲಾಗಿದೆ.

ರಾಮನು ವನವಾಸಕ್ಕೆ ಹೋದ ಮೇಲೆ ದಶರಥ ಮರಣ ಹೊಂದುವನು. ಆಗ ಭರತ ಮತ್ತು ಕೈಕೆಯ ನಡುವೆ ನಡೆದ ಸಂಭಾಷಣೆ. ಬ್ರಿಟಿಷ ಮತ್ತು ಭಾರತೀಯರ ಮಧ್ಯ ನಡೆದ ಸಂಭಾಷಣೆಯಂತಿದೆ.

"ಭರತ – ಧರ್ಮವಂತ ರಾಜನನ್ನು ಮರಣಕ್ಕೆ ಗುರಿಮಾಡಿ ಪಟ್ಟ ಬಾದ್ಯನಾದ ರಾಜಪುತ್ರನನ್ನು ಅಡವೀಪಾಲು ಮಾಡಿ, ಪ್ರಜಾ ಜನರ ಅತಂಕರಣಕ್ಕೆ ಬಲವಾದ ಗಾಯವನ್ನು ಮಾಡಿದೆ. ಇಂತಹ ಸಂದರ್ಭದಲ್ಲಿ ನಿನ್ನ ವಿಷಯದ ಸಹಾನುಭೂತಿಯು ಪ್ರಜರಲ್ಲುಗಳಿಯಬಹುದೆ ?

ಕೈಕೇಯಿ – ಉಳಿಯದಿದ್ದರಿಲ್ಲ, ಆ ಪ್ರಜಾಸಹಾನುಭೂತಿಯಿಂದ ನನಗೇನಾಗಬೇಕಾಗಿದೆ ? ರಾಜದಂಡ ಸಹಾಯದಿಂದ ಪ್ರಜಾ ಸಹಾನುಭೂತಿಯನ್ನು ಸಹಜವಾಗಿ ಸಂಪಾದಿಸಬಹುದು.

ಭರತ – ಏನು, ರಾಜದಂಡ ಸಹಾಯದಿಂದ ಪ್ರಜಾ ಸಹಾನುಭೂತಿಯನ್ನು ಸಂಪಾದಿಸಬೇಕೆನ್ನುವಿಯಾ ? ಆ ರಾಜ ನೀತಿಯನ್ನು ನೀನೆಲ್ಲಿ ಕಲಿತು ಬಂದೆ ಮಾರಿ ? ದಂಡ ನೀತಿಯನ್ನು ಮನ ಬಂದಂತೆ ನಡೆಸಿಕೊಳ್ಳಲಿಕ್ಕೆ ಪ್ರಜರು ನಿನ್ನ ಪಾಲಿಗೆ ಕುರಿಗಳಾದರಲ್ಲಾ"[೧೨]

ಈ ಮೇಲಿನ ಮಾತುಗಳಲ್ಲಿ ಕೈಕೇಯಿಯು ಸಹಾನುಭೂತಿಯಿಂದ ನನಗೇನಾಗಬೇಕಾಗಿದೆ ? ಕೇವಲ ರಾಜದಂಡದಿಂದ ಪ್ರಜಾನುಭೂತಿ ಪಡೆಯಬಹುದು ಎಂಬ ಮಾತಿನಲ್ಲಿ ಬ್ರಿಟಿಷರು ಭಾರತೀಯರ

ಸಹಾನುಭೂತಿಯನ್ನು ಗಳಿಸದೆ ಆಕ್ರಮವಾಗಿ ದಂಡ ನೀತಿಯಿಂದ ದೇಶವನ್ನು ವಶಪಡಿಸಿಕೊಂಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಭರತನ ಮಾತುಗಳಲ್ಲಿ ಭಾರತೀಯ ಆಶಯವನು ನಿಚ್ಚಳವಾಗಿ ನಿರ್ದೇಶಿಸುವಂತಿದೆ.

೫. ಅಕ್ಷಯಾಂಬರ ಅರ್ಥಾತ್ ದ್ರೌಪದಿ ವಸ್ತ್ರಾಪಹರಣ

ಕಂದಗಲ್ ಹನುಮಂತರಾಯರು ಅಕ್ಷಯಾಂಬರ ನಾಟಕದ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು. ಈ ನಾಟಕದಲ್ಲಿ ಖಾದಿ ಪ್ರಚಾರ ಹಾಗೂ ಬ್ರಿಟಿಷರ ದಬ್ಬಾಳಿಕೆ ಭಾರತೀಯರಲ್ಲಿನ ಐಕ್ಯತೆಯ ಕೊರತೆಯನ್ನು ಮಹಾಭಾರತದ ಪಾತ್ರಗಳ ಮೂಲಕ ದೇಶದ ಅಂದಿನ ನೈಜ ಸ್ಥಿತಿಯನ್ನು ಜನರಿಗೆ ತಿಳಿಸಿ ರಾಷ್ಟ್ರೀಯತೆಯನ್ನು ಬೆಳೆಸಿದರು.

ಗಾಂಧೀಜಿಯರ ರಚನಾತ್ಮಕ ಕಾರ್ಯದಲ್ಲಿ ಒಂದಾದ ಖಾದಿ ಪ್ರಚಾರವನ್ನು ಮಾಡುವದನ್ನು ಗಮನದಲ್ಲಿ ಇಟ್ಟುಕೊಂಡು ಕಂದಗಲ್‌ರು ಅಕ್ಷಯಾಂಬರ ನಾಟಕವನ್ನು ರಚಿಸಿದರು. ನಾಟಕದ ಸನ್ನಿವೇಶದಲ್ಲಿ ಓರ್ವ ವೃದ್ಧ ನೇಕಾರ ಒಬ್ಬ ಹುಡುಗ ಹಾಗೂ ಹುಡುಗಿಯನ್ನು ಕೃಷ್ಣನ ಬಳಿಗೆ ಕರೆದುಕೊಂಡು ಬರುವನು ಕೃಷ್ಣ ಮತ್ತು ವೃದ್ಧನ ಸಂಭಾಷಣೆ ಈ ರೀತಿ ಮುಂದುವರೆಯುವುದು.

"ಕೃಷ್ಣ – ನೀನಾರು ?

ವೃದ್ಧ – ದೇವಾ ! ನಾವೇನು ಯಾಚಕರಲ್ಲ, ನೂಲು ನೇದು ಹೊಟ್ಟೆ ತುಂಬಿಸಿಕೊಳ್ಳುವಂತ ಭಾರತಮಾತೆಯ ಮಾನವಂತ ಮಕ್ಕಳು, ಅವನಾವನೋ ಶಕುನಿಯಂತೆ; ನಮ್ಮ ಅನ್ನಕ್ಕೆ ಚಕ್ರವನ್ನೇ ತಂದಿರುವನು. ಗಾಂಧಾರ ದೇಶದಿಂದ ನೋಡಲಿಕ್ಕೆ ಬಲು ಚಂದವಾದ ಬಟ್ಟೆಗಳನ್ನು ತರಿಸಿ ರಾಶಿ–ರಾಶಿಯಾಗಿ ಒಟ್ಟಿರುವನು. ಪುರದಲ್ಲಿ ನೆರದ ಜನರೆಲ್ಲ ಆ ಕಡೆಗೇ ಹೋಗುತ್ತಿರುವರು ನಮ್ಮ ಬಟ್ಟೆಗಳಿಗೆ ಗಿರಾಕಿಗಳೆ ಇಲ್ಲ."[೧೩] ತನ್ನನ್ನು ರಕ್ಷಿಸುವಂತೆ ಈ ಹಾಡಿನ ಮೂಲಕ ಬೇಡಿಕೊಳ್ಳುವನು.

"ಯಾದವರಾಯ ಕೃಷ್ಣಯ್ಯ । ದಾನ ಮಾಡಯ್ಯ ಕೃಷ್ಣಯ್ಯಾ ॥ ಪ ॥
ಹೊಟ್ಟೆಗಿಲ್ಲದೆ ಬಹುಬಳಲುತಿಹೆವು । ಪುಟ್ಟ ಮಕ್ಕಳು ನೀ ಕಾಣಯ್ಯ ।
ಕಷ್ಟಗೊಳಿಸಿದ ಅನ್ನ ರಾಶಿಗೆ ಶನಿಬಂದು । ದಿಕ್ಕೆಟ್ಟು ಬಂದೆನು ನೋಡಯ್ಯ ॥
ರಾಟಿಯ ಮಾಟದ ಚಕ್ರ ಪಿಡದ ಕೃಷ್ಣಯ್ಯ । ಮಾಟದ ನೇಗಿಲು ಅಣ್ಣಯ್ಯ
ರಾಟಿಮೇಟಿಗಳೆರಡು ನಮಗೆಮಿಗಿಲೆಂದು । ಪಾಠ ಕಲಿಸುವ ರಾಷ್ಟ್ರ ಪುರುಷಯ್ಯಾ॥"[೧೪]

ಈ ಮೇಲಿನ ಸಂಭಾಷಣೆ ಹಾಗೂ ಹಾಡಿನಲ್ಲಿ ಕಂದಗಲ್‌ರು ಶಕುನಿಯನ್ನು ಬ್ರಿಟಿಷರಂತೆ ಹಾಗೂ ವೃದ್ಧನನ್ನು ಭಾರತೀಯ ಬಡ ನೇಕಾರನ ಪ್ರತಿನಿಧಿಯಂತೆ ಚಿತ್ರಿಸಿದ್ದಾರೆ.

ಕೃಷ್ಣ –"ವೃದ್ಧನ ಬಳಿ ಇರುವ ವಸ್ತ್ರಗಳನ್ನು ತೋರಿಸು" ಎಂದು ಕೇಳಿದನು.

ವೃದ್ಧ –"ತಮ್ಮಂತವರು ಉಡುವ ವಸ್ತ್ರವಲ್ಲ ಬಹು ಉರುಟಾದ ಬಟ್ಟೆ" ಎಂದು ಖಾದಿ ಸೀರೆಯನ್ನು ನೀಡುವನು.

ಕೃಷ್ಣ – ಏನಯ್ಯ ಇದು ಉರುಟಾದ ಬಟ್ಟೆಯೇ ! ರಾಮೇ ಇದು ಉರುಟಾದ ಬಟ್ಟೆಯಂತೆ ಅಹುದು ಎಂಥ ದಿವ್ಯವಾದ ವಸ್ತ್ರವಿದು'

ಎಂದು ಖಾದಿಯ ಬಗ್ಗ ಅಭಿಮಾನ ಹುಟ್ಟುವಂತೆ ಶ್ರೀ ಕೃಷ್ಣನು ಪದ್ಯವನ್ನು ಹಾಡುವನು.

"ಹರ ತಾ ಧರಿಸುವ ವಸ್ತ್ರವೋ ॥
ಗಿರಿಜಾ ಜನನಿಯಾ ಧರಿಸುವ ಸುರಚಿರ ವಸನವೋ ॥
ಭಾರತೀಯರ ಮಾನ ಕಾಯುವ ॥
ವರಶುಭ ವಸ್ತ್ರವೋ ಇದು ಬಡತನಕ್ಕೆ ಶಸ್ತ್ರವೊ ॥

ಈ ಪದ್ಯದಲ್ಲಿ ಹರ ಮತ್ತು ಆತನ ಗಿರಿಜೆಯು ಖಾದಿ ವಸ್ತ್ರವನ್ನು ಧರಿಸುತ್ತಾರೆ ಹಾಗೂ ಅದು ಭಾರತೀಯರ ಮಾನ ಕಾಪಾಡುವದರ ಜೊತೆಗೆ ಬಡತನ ನಿವಾರಣೆಗೆ ಸಹಕಾರಿಯಾಗಿದೆ ಎಂದು ಭಾರತೀಯ ಬಡ ನೇಕಾರರಲ್ಲಿ ಆತ್ಮವಿಶ್ವಾಸ ಬೆಳಸಿ ವಿದೇಶಿ ವಸ್ತ್ರಗಳ ಮುಂದೆ ದೇಶಿಯ ವಸ್ತ್ರಗಳು ಕೀಳು ಎಂಬ ಮನೋಭಾವನೆಯನ್ನು ಇಲ್ಲಿ ತೊಡೆದು ಹಾಕಿ ಭಾರತೀಯ ನೇಕಾರರಲ್ಲಿ ಆತ್ಮ ವಿಶ್ವಾಸ ಬೆಳೆಸಿದ್ದಾರೆ.

ಅಲ್ಲದೆ ಕೃಷ್ಣನು ದ್ರೌಪದಿಗೆ ಖಾದಿ ಸೀರೆಯನ್ನು ಉಡುಗೊರೆಯಾಗಿ ನೀಡಿ ಸೀರೆ ನಿನಗೆ ಅಕ್ಷಯಾಂಬರವಾಗಲಿ ಎಂದು ಹರಿಸಿ ಕಂದ ಪದ್ಯವೊಂದನ್ನು ಹಾಡುವನು.

"ಇದು ನಿನಗೆ ಯದುಕುಲದ ಉಡುಗರೆ
ಇದು ತವರೂರಿನ ಪ್ರೇಮದುಡುಗರೆ
ಇದು ನಿನಗೆ ಭಾರತೀಯ ।
ಹರುಷದಿ ಮೊದಲರ್ಪಿಸಿ ಅಕ್ಷಯಾಂಬರದುಡುಗರೆ"[೧೫]

ಇದೇ ನಾಟಕದಲ್ಲಿ ಬರುವ ದ್ರೌಪದಿ ಹಾಗೂ ಕೃಷ್ಣನ ನಡುವಿನ ಸಂಭಾಷಣೆಯಲ್ಲಿ ಖಾದಿ ಪ್ರಚಾರ ಮಾಡಿದ ಕುರಿತು ಹಿರಿಯ ರಂಗಕರ್ಮಿ ಮೋನಪ್ಪಗಾಡದ ಮತ್ತೊಂದು ಪ್ರಸಂಗವನ್ನು ತಮ್ಮ ರಂಗ ದರ್ಶಣದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

"ಶ್ರೀ ಕೃಷ್ಣನ ಪಾತ್ರದಲ್ಲಿ ವರನಟ ಸಿದ್ರಾಮಪ್ಪನವರು ತಮ್ಮ ಎಡಗೈ ತೋರುಬೆರಳನ್ನು ಬಲಗೈಯಿಂದ ರಕ್ತಬರದಂತೆ, ಬದ್ರವಾಗಿ ಹಿಡಿದುಕೊಂಡು ಬರುತ್ತಾರೆ ಅಲ್ಲಿಗೆ ದ್ರೌಪದಿ ಪ್ರವೇಶಿಸಿ ಕೃಷ್ಣನ ಬೆರಳು ರಕ್ತಸಿಕ್ತವಾದದ್ದನ್ನು ಕಂಡು ಗಾಬರಿಯಿಂದ ಏನಿದು ಅಣ್ಣಾ ರಕ್ತ ಎಂದು ಕೇಳುವಳು. ಕೃಷ್ಣನು

ತಂಗಿ ಪಲ್ಲೆಯನ್ನು ಹೆಚ್ಚುತ್ತಿದ್ದ ಕೈಗೆ ಗಾಯ ಎಂದು ಹೇಳಿದ. ತಕ್ಷಣವೇ ದ್ರೌಪದಿ ತಾನುಟ್ಟ ಪೀತಾಂಬರ ಸೀರೆ ಸೇರಗನ್ನೇ ಹರಿದು ಕಟ್ಟುತ್ತಾಳೆ. ಕೃಷ್ಣನು ತಂಗಿ ನಿನ್ನ ದಿವ್ಯ ಪೀತಾಂಬರದ ಸೆರಗನ್ನೇ ಹರಿದು ಕಟ್ಟಿ ಪರಿಶುದ್ಧ ಪ್ರೇಮದ ಚಿತ್ರವನ್ನು ಈ ಭೂಪಟದ ಮೇಲೆ ಚಿತ್ರಿಸಿದೆ. ಪ್ರೀತಿಯಭಗಿನಿ ಸುದರ್ಶನ ಚಕ್ರದ ಪವಿತ್ರತೆಗೆ ಸಮಾನವಾದ ರಾಟಿಯನ್ನು ಯಾವ ವನಿತೆಯು ಸದಾ ತನ್ನ ಮನೆಯಲ್ಲಿ ತಿರುಗಿಸುತ್ತಿರುವಳೋ ಆ ಸೌಭಾಗ್ಯಶೀಲಳಿಗೆ ಅನ್ನ ವಸ್ತ್ರಾದಿಗಳ ಕೊರತೆಯಾಗದಂತೆ ಈ ಕೃಷ್ಣನು ಸದಾ ಕಾಯುವನೆಂದು ಭರತಭೂಮಿಯ ಸಾಕ್ಷಿಯಾಗಿ ಸಾರಿ ಸಾರಿ ಹೇಳುವೆನು"[೧೬]

ಭಾರತೀಯರು ನೂಲು ತೆಗೆಯುವ ರಾಟಿಯನ್ನು ಸುದರ್ಶನ ಚಕ್ರಕ್ಕೆ ಹೋಲಿಸಿ ಯಾರ ಮನೆಯಲ್ಲಿ ರಾಟಿ ಸದಾಕಾಲ ತಿರುಗುತ್ತದೆಯೋ ಅಂದರೆ, ನೂಲನ್ನು ತೆಗೆದು ಖಾದಿ ಬಟ್ಟೆ ತಯಾರಿಸುವರೋ ಅಂಥವರ ಮನೆಯಲ್ಲಿ ಅನ್ನ ವಸ್ತ್ರಕ್ಕೆ ಕೊರತೆ ಇಲ್ಲವೆಂದು ಶ್ರೀಕೃಷ್ಣನ ಪಾತ್ರದ ಮೂಲಕ ಭಾರತೀಯರಿಗೆ ಕಂದಗಲ್ ಹನುಮಂತರಾಯರು ಅಭಯವನ್ನು ನೀಡುತ್ತಾರೆ. ಇಲ್ಲಿ ಜನರಿಗೆ ಖಾದಿ ಬಟ್ಟೆಯನ್ನು ತಯಾರಿಸುವಂತೆ ಹಾಗೂ ಅವುಗಳನ್ನು ಧರಿಸುವಂತೆ ಹೇಳಿ ಖಾದಿ ಪ್ರಚಾರ ಮಾಡಿದರು.

ಭಾರತೀಯರು ಧೀರರು ಅವರಿಗೆ ಕ್ಷಾತ್ರತೇಜ ಹುಟ್ಟು ಗುಣವಾಗಿದೆ. ಆದರೆ ತಮ್ಮ ತಮ್ಮಲ್ಲಿ ದ್ವೇಷಾಸೂಯೆ ಭಾವನೆಗಳಿಂದ ಸದಾಕಾಲ ಒಬ್ಬರ ಮೇಲೊಬ್ಬರು ಕೆಂಡಕಾರುತ್ತಿರುವದರಿಂದ ಮೂರನೆಯವರಾದ ಪರದೇಶಿಯರು ಇದರ ಲಾಭ ಪಡೆಯುತ್ತಿರುವದನ್ನು ಪಾಂಡವರ ಹಾಗೂ ಕೌರವರ ನಡುವಿನ ದಾಯಾದಿ ಮತ್ಸರಕ್ಕೆ ಹೋಲಿಸಿ ಕೃಷ್ಣ ಹಾಗೂ ಭೀಮನ ನಡುವಿನ ಸಂಭಾಷಣೆಯ ಮೂಲಕ ವ್ಯಕ್ತಪಡಿಸಿದ್ದಾರೆ.

"ಕೃಷ್ಣನು – ಪಾಂಡವಾ ಸಮುದ್ರದೊಳಗಿ ವಡವಾನಲವನ್ನು ನಂದಿಸಬಹುದು, ಪೃಥ್ವಿಯ ಗರ್ಭದಿಂದ ಹೊರಚಿಮ್ಮುವ ಲಾಲಾರಸವನ್ನು ತಡೆದು ನಿಲ್ಲಿಸಬಹುದು; ಅದರೆ ದಾಯಾದಿಗಳ ಹೃದಯದ ಮಾತ್ಸರ್ಯದ ಅಗ್ನಿಯನ್ನು ನಂದಿಸಲು ಶಕ್ಯವಿಲ್ಲ. ಈ ದಾಯಾದಿ ಮಾತ್ಸರ್ಯವೆ ಸಾಮ್ರಾಟನ ಸಿಂಹಾಸನವನ್ನು ರಸಾಯಲಕ್ಕೆ ನೂಕುವದು. ದೇಶದ ಸಂಪತ್ತು ಪರರ ಪಾಲು ಮಾಡುವದು ಕೊನೆಗೆ ಜನ್ಮಮಾತೆಯ ಕಾಲುಗಳಲ್ಲಿ ಪಾರತಂತ್ರ್ಯದ ಶೃಂಖಲೆಗಳನ್ನು ಹಾಕಿಸುವುದು, ಇದೆ ದಾಯಾದಿ ಮಾತ್ಸರ್ಯ ಸರ್ವನಾಶಕ್ಕೆ ಕಾರಣೀಭೂತವಾಗುವ ಮಾತ್ಸರ್ಯವೇ ಕಾಲಕೂಟಾ."[೧೭]

ಈ ಮೇಲಿನ ಕೃಷ್ಣನ ಉಪದೇಶಕ್ಕೆ ಭೀಮನು ಆಡುವ ಮಾತುಗಳಲ್ಲಿ ಒಬ್ಬ ನಿಜವಾದ ದೇಶ ಪ್ರೇಮಿಯ ಭಾವನೆಗಳು ವ್ಯಕ್ತವಾಗುತ್ತವೆ.

ಕೌರವರು ಮತ್ತು ಪಾಂಡವರ ನಡುವೆ ನಡೆದ ಲೆತ್ತದಾಟ (ಪಗಡೆ ಆಟ)ದಲ್ಲಿ ಪಾಂಡವರು ತಮ್ಮೆಲ್ಲ ಸಮಸ್ತ ಆಸ್ತಿಯನ್ನು ಪಣಕ್ಕೆ ಇಟ್ಟು ಸೋತ ನಂತರ ಕೊನೆಗೆ ತಮ್ಮ ಪತ್ನಿ ದ್ರೌಪದಿಯನ್ನು ಸೋತರು. ಕೌರವರು ದ್ರೌಪದಿಯನ್ನು ತಮ್ಮ ಆಸ್ಥಾನಕ್ಕೆ ಕರೆಯಿಸಿ ತಮ್ಮ ದಾಸಿಯಾಗು ಎಂದು

ಒತ್ತಾಯಿಸಿ ಅವಳನ್ನು ಅಪಮಾನ ಮಾಡುವ ಸಂದರ್ಭವನ್ನು ಕಂದಗಲ್ ಹನುಮಂತರಾಯರು ಅಂದಿನ ದೇಶದ ನೈಜಸ್ಥಿತಿಗೆ ಹೋಲಿಸಿದ್ದಾರೆ. ಇಲ್ಲಿ ಕೌರವರು ಕಪಟತನದಿಂದ ರಾಜ್ಯವನ್ನು ಪಡೆದಂತೆ ಬ್ರಿಟಿಷರು ಭಾರತವನ್ನು ಪ್ರವೇಶಿಸಿದ ನಂತರ ಒಂದೊಂದು ರಾಜ್ಯವನ್ನು ತಮ್ಮ ಕೈವಶ ಮಾಡಿಕೊಂಡರು. ತಮ್ಮ ಸಾರ್ವಭೌಮವನ್ನು ಒಪ್ಪದ ಭಾರತೀಯ ಅರಸರುಗಳಿಗೆ ಒತ್ತಾಯದ ಮೂಲಕ ಅವರನ್ನು ಒಪ್ಪಿಸಲು ಮುಂದಾದಾಗ ಭಾರತೀಯರು ದೇಶ ಭಕ್ತರು ಆಡುವ ಮಾತುಗಳನ್ನು ವಿಧುರ ಹಾಗೂ ದ್ರೌಪದಿಯ ಕಡೆಯಿಂದ ಅಡಿಸಿದ್ದಾರೆ.

ವಿಧುರ – "ಅನ್ಯಾಯದಿಂದಲೂ ಕಾಪಟ್ಯದಿಂದಲೂ, ಪರರ ಸ್ವಾತಂತ್ರ್ಯ ಹರಣ ಮಾಡಿದ ದಾಸ್ಯ, ದಾಸ್ಯ ಎಂದು ಕೂಗಿದರೆ ನಿಮ್ಮೀ ಕೂಗನ್ನು ಧರ್ಮ ದೇವತೆ ಕೇಳಬಲ್ಲಳೇ ? ಸ್ವಾತಂತ್ರ್ಯ ದೇವಿಯು ಇದನ್ನು ಲಕ್ಷೀಕರಿಸಲಾರಳು.

"ದ್ರೌಪದಿ – ಅಖಿಲ ಜಗತ್ತೆ ಆದಿ ಮಾಯೆಯ ದಾಸ್ಯದಲ್ಲಿರುವದು ಈ ಆದಿ ಮಾಯೆಯನ್ನು ದಾಸ್ಯದ ದರಿಯಲ್ಲಿ ನೂಕಲು ಅದಾವ ಶಕ್ತಿಗೆ ಸಾದ್ಯವಿರುವದು ? ಯಾವತ್ತು ಭಾರತಾಂಗನೆಯರ ಆಶೀರ್ವಾದದ ವಜ್ರಕವಚವು ಈ ದೇಹಕ್ಕೆ ಇರುವದು. ಸಾಕ್ಷಾತ್ ಭಾರತ ಭೂಮಿಯ ಆಶೀರ್ವಾದದ ಮಣಿ ಮುಕುಟವು ಮಸ್ತಕಕ್ಕೇರುವದು. ಈ ಭಾರತೀಯರನ್ನು ಅವಮಾನಗೊಳಿಸಲು ಆದಾವ ದಾನವೀಶಕ್ತಿಗೆ ಸಾದ್ಯವಿರುವದು."[೧೮]

೬. ಉತ್ತರ ಭೂಪ

ಉತ್ತರ ಭೂಪ ನಾಟಕವು ಸಹ ಮಹಾಭಾರತದ ಕೌರವ ಮತ್ತು ಪಾಂಡವರ ನಡುವಿನ ದಾಯಾದಿ ಕಲಹವನ್ನು ವಿಷಯ ವಸ್ತುವಾಗಿ ರಚನೆಗೊಂಡಿದೆ. ದುರ್ಯೋಧನನು ಭೀಷ್ಮ ಪಿತಾಮಹನಿಗೆ ಪಾಂಡವರ ಜೊತೆ ಯುದ್ಧ ಮಾಡಲು ಸಿದ್ಧರಾಗು ಎಂದಾಗ ಕೌರವರ ದಾಸ್ಯದಲ್ಲಿ ಬಿದ್ದ ಭೀಷ್ಮನ ಮಾನಸಿಕ ತುಮಲವನ್ನು ಈ ನಾಟಕದಲ್ಲಿ ಬ್ರಿಟಿಷರ ದಾಸ್ಯದಲ್ಲಿದ್ದ ಕೆಲವು ಭಾರತೀಯರು ತಮ್ಮ ದೇಶದವರ ವಿರುದ್ಧವೇ ಹೋರಾಟ ಮಾಡಲು ನಿಂತಾಗ ಅವರಲ್ಲಿ ಆದ ಮಾನಸಿಕ ತುಮುಲತೆಯನ್ನು ಭೀಷ್ಮನ ಮೂಲಕ ಈ ನಾಟಕದಲ್ಲಿ ಜನರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಬೇರೊಬ್ಬರ ದಾಸ್ಯದಲ್ಲಿದ್ದರೆ ದೇಶಾಭಿಮಾನವನ್ನು ಕಳೆದುಕೊಳ್ಳಬೇಕಾಗುವುದು ಎಂದು ಸಂದೇಶ ಸಾರಲು ಈ ದೃಶ್ಯವನ್ನು ಸೃಷ್ಟಿಸಲಾಗಿದೆ.

"ಇದಕ್ಕೆಲ್ಲ ಕಾರಣ ಪರದಾಸ್ಯ ದುರ್ದೈವಿ ಭೀಷ್ಮ ಅನ್ನಕ್ಕಾಗಿ ನಿನ್ನ ತೂಕವನ್ನು ಕಡಿಮೆ ಮಾಡಿಕೊಂಡೆಯಾ ಎಂದು ಹೇಳಿ ಕಣ್ಣೀರು ಸುರಿಸುವನು. ಇದರಲ್ಲಿ ರಾಷ್ಟ್ರೀಯತೆಯ ಅಂಶವೂ ಇದೆ. ಏನೆಂದರೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ನಮ್ಮ ಸ್ಥಿತಿಯನ್ನು ಪರೋಕ್ಷವಾಗಿ ತಿಳಿಸುತ್ತಿದ್ದರು."[೧೯]

೭. ಅಸ್ಪೃಶ್ಯತಾ ನಿವಾರಣೆ

ರಾಷ್ಟ್ರೀಯ ಪುರುಷರಗಳ ಬಗೆಗೆ ನಾಟಕಗಳನ್ನು ಆಡದಂತೆ ಬ್ರಿಟಿಷರು ನಿರ್ಬಂಧ ಹಾಕಿದಾಗ ಚಿಕ್ಕೋಡಿ ಶಿವಲಿಂಗಸ್ವಾಮಿಗಳು 'ಸಮನ್ವಯ' ತಂತ್ರದಿಂದ ಅಸ್ಪೃಶ್ಯತಾ ನಿವಾರಣೆ ನಾಟಕವನ್ನು ೧೯೩೧ರಲ್ಲಿ ರಚಿಸಿದರು. ಗಾಂಧೀಜಿಯವರ ಹೋರಾಟದ ವಿವರಗಳನ್ನು ತಿಳಿಸುವದೆ ನಾಟಕದ ಮುಖ್ಯ ಉದ್ದೇಶವಾಗಿತ್ತು.

ಈ ನಾಟಕದಲ್ಲಿ ಹಿರಿಯ ರಂಗ ಕರ್ಮಿ ಏಣಗಿ ಬಾಳಪ್ಪನವರು ತಾವು ಅಭಿನಯಿಸಿದ ಬಗೆಗೆ ವಿವರಣೆ ನೀಡುತ್ತಾರೆ. ಬಸವಣ್ಣನನ್ನು ನೆಹರುಜಿ ಆಗಿ, ಜಾತವೇದ ಮುನಿಗಳನ್ನು ಗಾಂಧೀಜಿಯವರಾಗಿ ಕಲ್ಪಿಸಿದ್ದರು. "೮೦೦ ವರ್ಷಗಳ ಹಿಂದೆ ಬಸವಣ್ಣ ಸಮಾಜಕ್ಕೆ ಹಾಕಿಕೊಟ್ಟ ಮಾರ್ಗವನ್ನೇ ಗಾಂಧೀಜಿ ತುಳಿದು, ಕೆಲವೊಂದನ್ನು ಅನುಷ್ಠಾನಕ್ಕೆ ತಂದರು. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಇದನ್ನು ಗಾಂಧೀಜಿಯವರೆ ತಂದ್ರು ಅಂತ ಹೇಳಿದ್ರ ಆಗಿನ ಬ್ರಿಟಿಷ ಸರಕಾರ ನಾಟಕಗಳಿಗೆ ಪರವಾನಿಗೆ ನೀಡುತ್ತಿರಲಿಲ್ಲ. ಅದಕ್ಕೆ ಶಿವಲಿಂಗ ಸ್ವಾಮಿಗಳು ಮಾಡಿದ್ದು ಏನಂದ್ರ ಗಾಂಧೀಜಿ ಅವರ ತತ್ವಗಳು ಪ್ರಚಾರ ಆಗಬೇಕು ಜೊತೆಗೆ ನಾಟಕಕ್ಕೆ ಪರವಾನಿಗೆ ಸಿಗಬೇಕೆನ್ನುವ ಸಲುವಾಗಿ ಗಾಂಧೀಜಿ ಹೇಳಿದ್ದನ್ನೆಲ್ಲ ನಾಟಕದಲ್ಲಿ ಜಾತವೇದ ಮುನಿಗಳಿಂದ ಹೇಳಿಸಿದ್ದು ಉದಾಹರಣೆಗೆ ಸ್ಪೃಶ್ಯರು ಮತ್ತು ಅಸ್ಪೃಶ್ಯರು ಒಂದಾಗಬೇಕೆಂದು ಗಾಂಧೀಜಿ ೨೧ ದಿವಸ ಉಪವಾಸ ಮಾಡಿದ್ರು. ಇದನ್ನು ಜಾತವೇದ ಮುನಿಗಳು ಮಾಡ್ತಿದ್ರು ಅಂತ ಹೇಳಿದ್ರು. ಇದಲ್ಲದೇ ದಲಿತ ಹರಳಯ್ಯನ ಮಗನಿಗೆ ಶರಣ ಮಧುವರಸರು ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿದ್ರು. ಇದನ್ನು ಬಸವಣ್ಣನೇ ಮಾಡಿಸಿದ್ರು, ಹಿಂಗ ಗಾಂಧೀಜಿ ಕೂಡಾ ಮಾಡಿಸಿದ್ರು, ಅಲ್ಲದೆ ಜಾತವೇದ ಮುನಿಗಳು ವೀರಶೈವರೆಲ್ಲರೂ ಒಂದೇ ಆಗಬೇಕೆಂದು ೨೧ ದಿವಸಗಳ ಉಪವಾಸ ವ್ರತ ಕೈಗೊಂಡಿದ್ದಾರೆ ಯಾವ ದಿವಸ ಆ ಮಹಾತ್ಮರ ತಪಸ್ಸು ಸಿದ್ಧಿಯಾಗುವುದೋ ಅಂದೇ ನಮ್ಮ ರಾಷ್ಟ್ರ ಉದ್ದಾರವಾಯಿತು ಎಂದು ಭಾವಿಸಬೇಕು ಎಂದು ಹೇಳುವರು. ಶಂಕರ ರಾಗದಲ್ಲಿ ದೇಶಭಕ್ತಿಯನ್ನು ಪ್ರೋತ್ಸಾಹಿಸುವ ಹಾಡೊಂದನ್ನು ಹಾಡುತ್ತಿದ್ದರು.

ಖಂಡಿತವೀ ಈ ರಾಷ್ಟ್ರತೇಜ
ಮಂಡಿಸಿ ಪರಿ ದಿವ್ಯ ಭಾಗ್ಯ
ಖಂಡನವ ತುಂಬಿ ನೀನು ತೇಜಾತ್ಮನೇ ರಂಜಿಸೆಂದು
ಸತ್ಯ ಸಂಗ ಆರ್ಯ ಧರ್ಮ ನಿತ್ಯದಲ್ಲಿ ಕಾಯ್ದು ಪ್ರೇಮಿ
ಮಾತೃ ಭಾಷೆ ಸೇವೆಯಿಂದ ಪಾವನಾಗಿ ಮೆರವನಿಂದು"[೨೦]

ಈ ರೀತಿಯಾಗಿ ಸ್ವಾತಂತ್ರ್ಯ ಚಳವಳಿ ಬಗ್ಗೆ ಜನರಿಗೆ ತಿಳಿಸಿ ಬೆಳೆಸಬೇಕಿತ್ತು.

೮. ರಾಜದ್ರೋಹ

ಹಿರಿಯ ರಂಗ ಕರ್ಮಿ ಕಂಠಿ ಹನಮಂತರಾಯರು ನೆನಪಿಸಿಕೊಳ್ಳುವಂತೆ "ಬಾಗಲಕೋಟಗೆ ಗೋಕಾಕದ ಶಾರದಾ ಸಂಗೀತ ನಾಟಕ ಮಂಡಳಿ ಕ್ಯಾಂಪ ಹಾಕಿದಾಗ ಬ್ರಿಟಿಷ ಸರಕಾರದ ಧೋರಣೆಯನ್ನು ಖಂಡಿಸುವ 'ರಾಜದ್ರೋಹ' ಎಂಬ ನಾಟಕವಾಡುತ್ತಿತ್ತು. ಈ ನಾಟಕದಲ್ಲಿ ನೆಹರು ಮತ್ತು ಸುಭಾಷಚಂದ್ರ ಬೋಸರ ಕುರಿತು ಪಾತ್ರಗಳಿದ್ದವು. ಈ ನಾಟಕ ಯಶಸ್ಸು ಕಂಡಿತು. ನಾಟಕ ನೋಡಿದ ಜನರು ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಸುಭಾಸ ಚಂದ್ರ ಬೋಸ ಮತ್ತು ನೆಹರು ಅವರ ಪಾತ್ರ ಬಂದ ಕೂಡಲೆ 'ಸುಭಾಸಚಂದ್ರ ಬೋಸ ಕಿ ಜೈ' 'ನೆಹರುಜಿ ಕಿ ಜೈ' ಎಂದು ಜೈಕಾರ ಹಾಕುತ್ತಿದ್ದರು. ಈ ನಾಟಕದಿಂದ ಬಾಗಲಕೋಟ ಮತ್ತು ಸುತ್ತಲಿನ ಗ್ರಾಮಗಳ ಜನರಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸಿತು. ನಾಟಕದ ಯಶಸ್ಸನ್ನು ಕಂಡು ಬೆದರಿದ ಸರಕಾರ ರಾಜದ್ರೋಹ ನಾಟಕವನ್ನು ರದ್ದುಗೊಳಿಸಿತು."[೨೧]

೧೦..೩ ಸ್ವಾತಂತ್ರ್ಯ ಚಳವಳಿಗಾರರಿಗೆ ಆಶ್ರಯತಾಣವಾದ ರಂಗಭೂಮಿ

ದೇಶಭಕ್ತಿಯ ಕಿಚ್ಚನ್ನು ಹಚ್ಚುವ ನಾಟಕಗಳನ್ನು ರಂಗಭೂಮಿ ಆಡುವದರ ಜೊತೆಗೆ ಹಲವು ಸಾರಿ ಸರಕಾರದ ಕಠಿಣ ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು. ಎಂತಹ ಕಠಿಣ ಸಂದರ್ಭ ಇದ್ದರು ಕೂಡಾ ರಂಗ ಭೂಮಿಯ ಒಂದು ಕಡೆಗೆ ಸ್ವಾತಂತ್ರ್ಯ ಚಳುವಳಿಗಾರರನ್ನು ರಕ್ಷಿಸ ತೊಡಗಿದರೆ ಇನ್ನೊಂದೆಡೆ ಸರಕಾರದ ಕೆಲವು ನಿಯಮಗಳನ್ನು ಪಾಲಿಸುವ ಸ್ಥಿತಿ ಒದಗಿಬರುತ್ತಿತ್ತು. ಇಂಥಹ ಒಂದು ಅನುಭವವನ್ನು ಎ.ಟಿ. ಜೋಶಿಯವರು ಹಂಚಿಕೊಂಡಿದ್ದಾರೆ.

"ಶ್ರೀ ಗಜಾನನ ನಾಟಕ ಮಂಡಳಿ ಧಾರವಾಡ ಜಿಲ್ಲೆಯ ಮಾಸೂರನಲ್ಲಿ ಕ್ಯಾಂಪ ಹಾಕಿದಾಗ ಈಸೂರಿನ ಅನೇಕ ಮುಖಂಡರು ಮತ್ತು ಸ್ವಾತಂತ್ರ್ಯಯೋಧರು ಗುಪ್ತವಾಗಿ ನಾಟಕ ಕಂಪನಿಗೆ ರಾತ್ರಿ ಬಂದು ಆಶ್ರಯ ಪಡೆದು ಬೆಳಿಗ್ಗೆ ಹೋಗುತ್ತಿದ್ದರು. ಮಾಸೂರು ಧಾರವಾಡ ಜಿಲ್ಲೆಯಲ್ಲಿದ್ದರಿಂದ ಮೈಸೂರ ಸ್ಟೇಟ್ ಪೊಲೀಸ್‌ರು ಮಾಸೂರಿಗೆ ಬರುತ್ತಿರಲಿಲ್ಲ. ಹೀಗಾಗಿ ನಮ್ಮ ಸಂಘವು ಲುಪ್ತಕಾಲದಲ್ಲಿ ಅನೇಕ ಜನ ದೇಶಭಕ್ತರಿಗೆ ಆಶ್ರಯ ಕೊಟ್ಟಿತ್ತು. ಅನಂತ ಭಟ್ಟ ಹುರಳಿಕೊಪ್ಪ ಎಂದು ಶಿಗ್ಗಾಂವ ತಾಲೂಕ ಧಾರವಾಡ ಜಿಲ್ಲಾ ದೇಶಭಕ್ತರು ನಮ್ಮ ಸಂಘಕ್ಕೆ ಆಗಾಗ ತಮ್ಮ ಸ್ನೇಹಿತರನ್ನು ಕರೆದುಕೊಂಡು ಬಂದು ಗುಪ್ತವಾಗಿ ತಮ್ಮ ಕಾರ್ಯಾಚರಣೆ ನಡೆಸಿ ಹೋಗುತ್ತಿದ್ದರು."[೨೨] "ಜಗನ್ನಾಥ ಪದಕಿ ಎಂಬ ಕುಷ್ಟಗಿಯ ತರುಣನು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದ. ಅಲ್ಲಿ ವಾರೆಂಟ್ ಬಂದಾಗ ಓಡಿ ಬಂದು ನಮ್ಮ ಸಂಘದಲ್ಲಿ ಗುಪ್ತವಾಗಿ ಆಶ್ರಯ ಪಡೆದಿದ್ದ. ನಮ್ಮ ಸಂಘದಲ್ಲಿ ಆತನಿಗೆ ಪಾತ್ರ ಕಲಿಸಿ ಮಕ್ಕಳಿಗೆ ಸ್ಕೂಲ್ ಪಾಠ ಹೇಳುವುದನ್ನು ವಹಿಸಿ ಕೊಡಲಾಯ್ತು ಹೀಗೆ ಕಂಪನಿಯಲ್ಲಿ ಐದು ಆರುವರ್ಷ ಆಶ್ರಯ ಪಡೆದಿದ್ದ. ನಂತರ ಸೆರೆಮನೆಗೂ ಹೋಗಿಬಂದ".[೨೩]

೧೦.೪ ಬೆಳ್ಳಿ ಪರದೆ ಮತ್ತು ಸ್ವಾತಂತ್ರ್ಯ ಚಳವಳಿ

ರಂಗಭೂಮಿಯಂತೆ ಕೆಲವು ಚಲನಚಿತ್ರಗಳು ಸ್ವಾತಂತ್ರ್ಯದ ಕಹಳೆಯನ್ನು ಊದಿವೆ. ಸಿನಿಮಾ ಚಿಂತಕ ಆಶ್ರಫ ಅಜೀತ್ ಈ ರೀತಿ ವಿಶ್ಲೇಷಿಸುತ್ತಾರೆ. ಅವರ ಪ್ರಕಾರ "ಮೊದಲ ಘಟ್ಟದ ಮತ್ತು ಸಿನಿಮಾಗಳಿಗೆ ಸೌಂಡ್ ಟ್ರ್ಯಾಕ್ ಬಂದು ಸೇರಿ ಅವು ಟಾಕಿಗಳಾಗಿ ಮಾರ್ಪಟ್ಟ ವರ್ಷವು (೧೯೩೧) ಈ ವೇಳೆಯಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ದಂಡಿಯಾತ್ರೆ ಕೈಕೊಂಡ ಆಸುಪಾಸಿನ ವರ್ಷವಾಗಿದ್ದು ಸಾಂಕೇತಿಕವಾಗಿ ಅಂದರೆ, ಭಾರತದ ಬ್ರಿಟಿಷ ವಿರೋಧಿ ಹೋರಾಟಗಳು ದನಿ ಪಡೆಯುತ್ತಿರುವ ಹೊತ್ತಿಗೆ ಭಾರತದ ಮೂಕ ಸಿನಿಮಾಗಳೂ ತಮ್ಮ ದನಿಯನ್ನು ಪಡೆದುಕೊಂಡವು. ಇದೇ ಹೊತ್ತಿಗೆ ಸರಿಯಾಗಿ ದೇಶದ ನಾನಾ ಕಡೆಯಿಂದ ಅಮೀರಬಾಯಿ, ಶಂಶಾದ, ಖುರ್ಶಿದ ನೂರ ಜಹಾನ ಮುಂತಾದ ಮೈಕ್ರೋಫೋನ್ ರಹಿತ ರಂಗಭೂಮಿಯ ಹಿನ್ನೆಲೆಯಿಂದ ಗಡಸುದನಿಯ ಗಾಯಕಿಯರು ಮುಂಬೈ ಸಿನಿಮಾ ಲೋಕವನ್ನು ಪ್ರವೇಶಿಸಿದರು. ಅವರ ಹಾಡುಗಳು ಸಮಕಾಲೀನ ಸ್ವಾತಂತ್ರ್ಯ ಚಳವಳಿ ಹಾಗೂ ಅದರಲ್ಲಿ ಮಹಿಳೆಯರು ವಹಿಸುತ್ತಿದ್ದ ಪಾತ್ರಕ್ಕೆ ಹೊಸ ಅರ್ಥ ತುಂಬುತ್ತಿತ್ತು."[೨೪]

ಅಮೀರಬಾಯಿಯವರು ಕಿಸ್ಮತ್ ಚಿತ್ರದಲ್ಲಿ ಹಾಡಿದ 'ದೂರ ಹಟೋ' ಹಾಡು ದೇಶಪ್ರೇಮದ ಕುರಿತಾಗಿದೆ ಎಂದು ರಹಮತ ತರಿಕೇರಿ ಅವರ ಅಮೀರಬಾಯಿ ಕರ್ನಾಟಕಿ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. "ಭಾರತದ ನಕ್ಷೆಯ ಹಿನ್ನೆಲೆಯಲ್ಲಿ ಒಬ್ಬನ ನೆರಳು ಢಕ್ಕೆ ಬಾರಿಸುವ ಮೂಲಕ ಆರಂಭವಾಗುತ್ತದೆ. ಎಲ್ಲ ಧರ್ಮಕ್ಕೆ ಸೇರಿದ ಎಲ್ಲಾ ಪ್ರಾಂತ್ಯದ ತರುಣರು ತರುಣಿಯರು ಹಿನ್ನೆಲೆಯಲ್ಲಿ ಕೈಯನ್ನು ಪ್ರತಿಜ್ಞೆ ಮಾಡುವಂತೆ ಚಲಿಸುತ್ತಾ ಹಾಡುವರು.

ಜಹಾಂ ಹಮಾರ ತಾಜ್ ಮಹಲ್ ಹೈ ಓರ್ ಕುತುಬ್ ಮಿನಾರ ಹೈ
ಜಹಾ ಹಮಾರೆ ಮುಸ್ಜಿದ ಮಂದಿರ ಸಿಖ್ಖೋಂಕೆ ಗುರುದ್ವಾರ ಹೈ
ಧರತಿ ಫರ ಕದಂ ಬಢನಾ ಅತ್ಯಾಚಾರ ತುಮ್ಹಾರಾ ಹೈ
ಆಜ್ ಹಿಮಾಲಯಕೆ ಚೋಟಿಸೇ ಫಿರ್ ಹಮ್ನೆ ಲಲ್‌ಕಾರ ಹೈ
ದೂರ ಹಟೊ ದೂರ ಹಟೊ, ಆಯ್ ದುನಿಯಾ ವಾಲೋ
ಹಿಂದೂಸ್ಥಾನ ಹಮಾರಾ ಹೈ

ಭಾರತದ ನಕ್ಷೆಯುಳ್ಳ ಪರದೆಯು ತೆರೆಯುವ ಮೂಲಕ ಈ ಹಾಡು ಥೇಟರಿನಲ್ಲಿ ಆರಂಭವಾಗುತ್ತದೆ.

"ಈ ಹಾಡು ನಲವತ್ತರ ದಶಕದಲ್ಲಿ ವಿಶಿಷ್ಟವಾದ ಸಂಚಲನಕ್ಕೆ ಕಾರಣವಾಯಿತು. ಪ್ರದೀಪ ರಚಿಸಿದ ಈ ಗೀತೆ ಬ್ರಿಟಿಷರ ಸೆನ್ಸಾರ ಮಂಡಳಿಯಿಂದ ಕಣ್ಣು ತಪ್ಪಿಸಿಕೊಂಡು ಬಂದಿತ್ತು. ನಂತರ ಸರಕಾರಕ್ಕೆ ಗೊತ್ತಾದರೂ, ಅದು ಕ್ರಮ ತೆಗೆದುಕೊಳ್ಳುವದಕ್ಕೆ ಸಮಯ ಮೀರಿತ್ತು. ಚಲೇಜಾವ

ಚಳವಳಿಯಲ್ಲಿ ಪ್ರತಿಯೊಬ್ಬ ಸ್ವಯಂ ಸೇವಕ ಸೇವಕಿಯರೂ ಕೋರಸ್ಸಿನಲ್ಲಿ ಈ ಹಾಡನ್ನು ಹಾಡುತ್ತಿದ್ದರು."[೨೫]

ಅಮೀರಬಾಯಿ ಕರ್ನಾಟಕಿ ಬಾಗಲಕೋಟ ಜಿಲ್ಲೆಯ ಬೀಳಗಿಯವರಾಗಿದ್ದರೂ. ಕೂಡಾ ತಮ್ಮ ಅದ್ಭುತ ಪ್ರತಿಭೆಯ ಅಭಿನಯ ಹಾಗೂ ಸುಮಧುರ ಕಂಠದಿಂದ ಭಾರತದ ಎಲ್ಲ ಭಾಷೆ ಹಾಗೂ ರಾಜ್ಯದ ಜನರಿಗೆ ಚಿರಪರಿಚಿತರಾಗಿದ್ದರು. ತಮ್ಮ ವೃತ್ತಿಯಿಂದ ದೇಶ ಸೇವೆಯನ್ನು ಮಾಡಿದ ಹಲವಾರು ಧೀರ ಮಹಿಳೆಯರ ಸಾಲಿಗೆ ಇವರು ಸೇರುತ್ತಾರೆ. ಅಮೀರಬಾಯಿಯು ಗಾಂಧೀಜಿಯವರ ಪ್ರಸಂಶೆಗೂ ಪಾತ್ರರಾಗಿದ್ದರು.

ಅಮೀರಬಾಯಿ ಕರ್ನಾಟಕಿಯವರು ರಾಷ್ಟ್ರೀಯ ಅಂದೋಲನಕ್ಕೆ ಜನರನ್ನು ಹುರಿದುಂಬಿಸಲು ಅನೇಕ ಚಿತ್ರಗಳಲ್ಲಿ ನಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಎಂದರೆ – ಭಾರತ ಕೆ ಬೇಟಿ (೧೯೩೫), ಫಿರಾ ಎ ವತನ (೧೯೩೬), ಹಮಾರ ದೇಶ (೧೯೪೦), ಭರತ ವಿಲಾಪ (೧೯೪೨) ಮುಂತಾದವುಗಳು.

ಅಭಿನಯವು ಒಂದು ಪ್ರಭಾವಶಾಲಿ ಕಲೆಯಾಗಿದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಕೇವಲ ಪ್ರಮುಖ ನಾಯಕರು ಭಾಗವಹಿಸಿದ್ದರೆ ನಮಗೆ ಸ್ವಾತಂತ್ರ್ಯ ದೊರೆಯುವದು ದುರ್ಲಬವಾಗುತ್ತಿತ್ತು. ನಾಯಕರ ಅಣತೆಯಂತೆ ಜನರನ್ನು ಚಳವಳಿಗೆ ತಯಾರಿಸಲು ರಂಗಮಂದಿರಗಳು ಕಲಾವಿದರಿಗೆ ತರಬೇತಿ ಶಾಲೆಗಳಂತೆ ಇದ್ದವು. ಕಲಾವಿದರು ತಮ್ಮ ಹೊಟ್ಟೆ ಹೊರೆಯುವದರ ಜೊತೆಗೆ ತಾಯ್ನಾಡಿನ ಬಿಡುಗಡೆಗೆ ಜನರನ್ನು ಹುರುದುಂಬಿಸಬೇಕಿತ್ತು. ಒಂದು ಕಡೆ ಆಳುವ ವರ್ಗಕ್ಕೆ (ಬ್ರಿಟಿಷರಿಗೆ) ನಿಷ್ಠರಾಗಿರುವಂತೆ ನಟಿಸಿ ಒಳ ಒಳಗೆ ದೇಶದ ಬಗ್ಗೆ ಅಭಿಮಾನ ಹೊಂದಿದ್ದರು.

ಇಂಥ ಕಲಾವಿದರಿಂದ ನಾಟಕಗಳು ಪ್ರದರ್ಶನಗೊಂಡು ನಾಡು ನುಡಿಗಳ ಬಗೆಗೆ ಅಭಿಮಾನ ಹುಟ್ಟುವಂತೆ ಮಾಡಿ ಜನರಲ್ಲಿ ತಾವು ಅನುಭವಿಸುತ್ತಿದ್ದ ಪರತಂತ್ರದ ಅರಿವನ್ನು ಮೂಡಿಸಿ ಎಚ್ಚರಗೊಳಿಸುವದು ನೂರು ಭಾಷಣಗಳು ಸಾಧಿಸಲಾರದನ್ನು ತಮ್ಮ ಒಂದು ನಾಟಕದಿಂದ ಸಾಧಿಸುತ್ತಿದ್ದರು.

ರಾಷ್ಟ್ರೀಯತೆಯ ಬಗ್ಗೆ ನಾಟಕವಾಡಿದಾಗ ಬ್ರಿಟಿಷರು ನೀಡುವ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅವುಗಳನ್ನು ಪೌರಾಣಿಕ ರೂಪಕ್ಕೆ ಬದಲಾಯಿಸಿ ಜನರಿಗೆ ಮುಟ್ಟಿಸಬೇಕಾದ ಸಂದೇಶವನ್ನು ಮುಟ್ಟಿಸಲು ಯಶಸ್ವಿಯಾದರು. ಇತ್ತ ಸರಕಾರದ ಕೆಂಗಣ್ಣಿಗೆ ಗುರಿಯಾಗದ ಜಾಣತನವನ್ನು ಪ್ರದರ್ಶಿಸಿದರು. ಮಹಿಳೆಯರು ಕೂಡಾ ಈ ಸಮಯದಲ್ಲಿ ರಂಗಭೂಮಿಯಲ್ಲಿ ತಮ್ಮ ಕಲಾವಂತಿಕೆಯನ್ನು ಪ್ರದರ್ಶಿಸಿದ್ದು ಅಂದಿನ ಮಡಿವಂತಿಕೆಯ ಕಾಲದಲ್ಲಿ ಒಂದು ಸವಾಲಾಗಿತ್ತು. ಸಮಾಜ ಆಡುವ ಕೀಳು ಮಾತುಗಳಿಗೆ ಕಿವಿಗೊಡದೆ ಯಲ್ಲೂಬಾಯಿ ಗುಳೇದಗುಡ್ಡ ಅಮೀರಬಾಯಿ ಕರ್ನಾಟಕಿ ಮುಂತಾದವರು ರಾಷ್ಟ್ರೀಯ ಮನೋಭಾವನೆಯನ್ನು ಜನರಲ್ಲಿ ಮೂಡಿಸಿದರು. ರಂಗಭೂಮಿಯು ಸ್ವಾತಂತ್ರ್ಯ ಚಳವಳಿಗಾರರಿಗೆ

ಆಶ್ರಯತಾಣವಾಗಿ ಹಾಗೂ ಬ್ರಿಟಿಷರ ವಿರುದ್ಧ ಜನರನ್ನು ಜಾಗೃತಿಗೊಳಿಸುವ ಗರಡಿಮನಿಯಾಗಿ ಕಾರ್ಯನಿರ್ವಹಿಸಿತು.

೧೦.೫ ವೃತ್ತ ಪತ್ರಿಕೆಗಳು

ಭಾರತದಂತ ವಿಶಾಲವಾದ ದೇಶದಲ್ಲಿ ರಾಷ್ಟ್ರೀಯ ಚಳವಳಿಯು ನಿರಂತರವಾಗಿ ಪಸರಿಸಬೇಕಾದರೆ ಹಾಗೂ ದೇಶದ ಒಂದು ಮೂಲೆಯಲ್ಲಿ ರಾಷ್ಟ್ರೀಯ ನಾಯಕರು ಸಾರಿದ ಸಂದೇಶವನ್ನು ದೇಶದ ಇತರ ಎಲ್ಲಾ ಬಾಗಗಳಿಗೆ ಮುಟ್ಟಿಸಲು ಅಂದು ವೃತ್ತ ಪತ್ರಿಕೆಗಳು ಅಪಾರವಾಗಿ ಶ್ರಮಿಸಿದವು. ಭಾರತವು ವಿವಿಧ ಭಾಷೆಗಳನ್ನು ಒಳಗೊಂಡ ದೇಶ. ಜನರಿಗೆ ಸುದ್ಧಿ ತಿಳಿಸಲು ದೇಶಿ ಭಾಷಾ ಪತ್ರಿಕೆಗಳು ಪ್ರಮುಖ ಪಾತ್ರವಹಿಸಿದವು. ಸರಕಾರ ಭಾರತೀಯ ಪತ್ರಿಕೆಗಳು ಮೇಲೆ ಅನೇಕ ಕಠಿಣ ಕಾನೂನುಗಳನ್ನು ಹಾಕಿದರೂ ಕೂಡಾ ಪತ್ರಿಕೆಗಳು ಜನರನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾದವು. ಕನ್ನಡ ಪತ್ರಿಕೆಗಳು ಕೂಡಾ ದೇಶ ಹಾಗೂ ಕರ್ನಾಟಕದಲ್ಲಿ ನಡೆಯುವ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದವು. ಮಾತೃಭೂಮಿಯ ವಿಮೋಚನೆಗಾಗಿ ಹಲವು ರೀತಿ ಶ್ರಮಿಸಿದವು.

"ವೃತ್ತ ಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಸರಕಾರ ಪತ್ರಿಕಾ ಕಾಯ್ದೆಯನ್ನು ೧೯೦೮ ಮತ್ತು ೧೯೧೦ರಲ್ಲಿ ಜಾರಿಗೆ ತಂದಿತು. ಮುಂದೆ ಸಪ್ರು ಕಮಿಟಿಯು ಎರಡು ಕಾಯ್ದೆಯನ್ನು ರದ್ದುಗೊಳಿಸಿತು. ೧೯೨೨ ರಿಂದ ೧೯೩೦ರ ವರೆಗೆ ಸರಕಾರ ಮತ್ತು ಪತ್ರಿಕೆಗಳ ನಡುವೆ ಸೌಹಾರ್ದ ವಾತಾವರಣ ಇತ್ತು. ೧೯೩೦ರ ಪತ್ರಿಕಾ ಕಾಯ್ದೆಯು ಮತ್ತೆ ಪತ್ರಿಕೆಯ ಮೇಲೆ ನಿರ್ಬಂಧ ಹೇರಿತು. ಗಾಂಧೀಜಿಯವರ ಬಂಧನದ ನಂತರ ಈ ಕಾಯ್ದೆಯು ೧೯೩೨ರಲ್ಲಿ ತಿದ್ದುಪಡಿಗೆ ಒಳಪಟ್ಟಿತು. ಎರಡನೆ ಜಾಗತಿಕ ಯುದ್ಧದ ಸಮಯದಲ್ಲಿ ಪತ್ರಿಕೆಯ ಮೇಲೆ ಸರಕಾರ ಕಠಿಣ ನಿರ್ಬಂದನೆ ಹಾಕಿತು. ಪತ್ರಿಕೆಗಳು ರಾಷ್ಟ್ರೀಯ ಚಳವಳಿಯಲ್ಲಿ ಪ್ರಧಾನ ಪಾತ್ರ ವಹಿಸಿದವು."[೨೬]

ಕನ್ನಡ ಪತ್ರಿಕೋದ್ಯಮವು ಹತ್ತೊಂಬತ್ತನೆ ಶತಮಾನದ ಮಧ್ಯಭಾಗದಿಂದ ಆರಂಭಗೊಂಡಿತು. ಮೊದಲ ಕನ್ನಡದ ಪತ್ರಿಕೆ 'ಮಂಗಳೂರು ಸಮಾಚಾರ' ಮಂಗಳೂರಿನಲ್ಲಿ ೧೮೪೩ರಲ್ಲಿ ಪ್ರಕಟಗೊಂಡಿತು. ನಂತರ 'ಕರ್ನಾಟಕ ಪ್ರಕಾಶಿಕಾ' ೧೮೬೫ರಲ್ಲಿ ಪ್ರಕಟಗೊಂಡಿತು. ವರ್ಷದಲ್ಲಿ ೧೮೬೮ರಲ್ಲಿ 'ಮೈಸೂರು ಸ್ಟಾರ್' ಪತ್ರಿಕೆ ಪ್ರಕಟಗೊಂಡಿತು. "ಮುಂಬೈ ಕರ್ನಾಟಕದಲ್ಲಿ ಮೊದಲು ಕನ್ನಡ ಪತ್ರಿಕೆ ಆರಂಭಿಸಿದ ಕೀರ್ತಿ ಬಾಗಲಕೋಟ ಜಿಲ್ಲೆಗೆ ಸಲ್ಲುತ್ತದೆ. ೧೮೭೨ರಲ್ಲಿ ಅಂದಿನ ಜಿಲ್ಲಾ ಕೇಂದ್ರವಾದ ಕಲಾದಗಿಯಿಂದ 'ಹಿತೇಚ್ಛು' ಪ್ರಕಟಗೊಂಡಿತು. ಫಲಸಣಕರ ಎಂಬುವವರು ಇದನ್ನು ಆರಂಭಿಸಿದರು. ಕೆವಲ ೮೫ ಪ್ರತಿಗಳನ್ನು ಮುದ್ರಿಸುತ್ತಿದ್ದರು."[೨೭]

ವಿಜಾಪೂರ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಗುಮಾಸ್ತರು ಮೊದಲ ಬಾರಿಗೆ ಮುದ್ರಣಕಾರ್ಯ ಆರಂಭಿಸಿದರು. ಈ ವೇಳಗಾಗಲೇ ತಿಲಕರ ಕೇಸರಿ ಪತ್ರಿಕೆಯು ಜಿಲ್ಲೆಯಲ್ಲಿ ರಾಷ್ಟ್ರೀಯತೆಯನ್ನು ಜಾಗೃತಗೊಳಿಸಿತ್ತು. ವಿಜಾಪೂರದಲ್ಲಿ 'ಕರ್ನಾಟಕ ವೈಭವ' ಪತ್ರಿಕೆ ೫-೦೩-೧೮೯೨ ರಂದು ಅಣ್ಣಾಜಿ

ಗೋಪಾಲ ಜೋರಾಪುರ, ಗುಂಡೇರಾವ ರಾಮಚಂದ್ರರಾವ ವಣೂರಕರ ಇವರ ನೇತೃತ್ವದಲ್ಲಿ ಗ್ರಾಮಾಧಿಕಾರಿ ಎಂಬ ಪ್ರೆಸ್ಸಿನಲ್ಲಿ ಪ್ರಾರಂಭವಾಯಿತು. ಅಣ್ಣಾಜೀಯವರು ವ್ಯವಸ್ಥಾಪಕರಾಗಿ, ಗುಂಡೇರಾವ ಅವರು ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಅಂದಿನ ಪ್ರಸಿದ್ಧ ಲೇಖಕರಾದ ಕೆರೂರ ವಾಸುದೇವಾಚಾರ್ಯರು, ಜಿ.ಆರ್. ಕುಲಕರ್ಣಿ, ಆಲೂರು ವೆಂಕಟರಾವ, ಇತಿಹಾಸ ಸಂಶೋಧಕ ನಾ.ಶ್ರೀ. ರಾಜಪುರೋಹಿತ ಮೊದಲಾದವರು ಲೇಖನವನ್ನು ಬರೆಯುತ್ತಿದ್ದರು. ವಾಲಂಟೈನ್ ಚಿರೋಲ್ ಅವರು ೧೯೦೭ರಲ್ಲಿ 'ಇಂಡಿಯನ್ ಅನರೆಸ್ಟ್' ಎಂಬ ಗ್ರಂಥದಲ್ಲಿ ಕರ್ನಾಟಕ ವೈಭವ ಪತ್ರಿಕೆ ಒಂದು ಉಗ್ರ ಕ್ರಾಂತಿಕಾರಿ ಪತ್ರಿಕೆಯಾಗಿದ್ದು ಕನ್ನಡ ಬಲ್ಲ ಎಲ್ಲ ಭಾಗಗಳಲ್ಲಿ ಅದರ ಪ್ರಸಾರವಿದೆ ಎಂದು ಉಲ್ಲೇಖಿಸಿದ್ದಾರೆ.[೨೮]

ಕರ್ನಾಟಕ ವೈಭವ ಪತ್ರಿಕೆಯು ಉತ್ತರ ಕರ್ನಾಟಕದಲ್ಲಿ ಮರಾಠಿ ಬಾಹುಳ್ಯ ಪ್ರದೇಶವಾದ ಜಮಖಂಡಿ, ಮುಧೋಳ, ರಾಮದುರ್ಗ ದಕ್ಷಿಣ ಮರಾಠ ಪ್ರದೇಶಗಳಲ್ಲಿ ಆರಂಭಗೊಂಡಿತು. ಈ ಪ್ರದೇಶಗಳಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ಇರಲಿಲ್ಲ. ಮದುವೆಯ ಆಮಂತ್ರಣ ಪತ್ರಿಕೆಗಳು ಸಹಿತ ಕನ್ನಡದಲ್ಲಿ ಮುದ್ರಿಸುತ್ತಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಕರ್ನಾಟಕ ವೈಭವ ಜನ್ಮ ತಾಳಿತು.

೧. ಅಖಿಲ ಕರ್ನಾಟಕ ವೃತ್ತ ಪತ್ರಕರ್ತರ ಪ್ರಥಮ ಪರಿಷತ್ತು

೧೯೨೮ರ ಜುಲೈ ೩೧ನೆಯ ತಾರೀಖಿನಂದು ಬಾಗಲಕೋಟದಲ್ಲಿ ಅಖಿಲ ಕರ್ನಾಟಕ ವೃತ್ತ ಪತ್ರಕರ್ತರ ಪ್ರಥಮ ಪರಿಷತ್ತು ಸಭೆ ಸೇರಿತು. ಈ ಸಭೆಯ ಸ್ವಾಗತ ಸಭಾಧ್ಯಕ್ಷತೆಯನ್ನು ಶ್ರೀ ಯಲಗುರ್ದ ವಾಸುದೇವ ಧಾರವಾಡ ವಕೀಲರು ವಹಿಸಿದ್ದರು. ಹಾಗೂ ಸಭೆಯ ಅಧ್ಯಕ್ಷತೆಯನ್ನು ಕನ್ನಡದ ಖ್ಯಾತ ಸಾಹಿತಿಗಳು ಹಾಗೂ ಪತ್ರಕರ್ತರಾಗಿ ಸೇವೆ ಸಲ್ಲಿಸಿದ ಡಿ.ವಿ.ಗುಂಡಪ್ಪನವರು(ಡಿ.ವ್ಹಿ.ಜಿ) ವಹಿಸಿಕೊಂಡಿದ್ದರು. ಮೊದಲು ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಪತ್ರಿಕಾ ಲೇಖಕರೆಂದು ಪ್ರಸಿದ್ಧರಾದ ಮೈಸೂರಿನ ವೆಂಕಟಕೃಷ್ಣಯ್ಯನವರನ್ನು ವಹಿಸಿಕೊಳ್ಳಲು ಆಮಂತ್ರಿಸಲಾಗಿತ್ತು. ಆದರೆ ವೆಂಕಟಕೃಷ್ಣಯ್ಯನವರಿಗೆ ಬಾಗಲಕೋಟಗೆ ಬರಲು ಆಗದಕ್ಕೆ ಅವರ ಅನುಪಸ್ಥಿತಿಯಲ್ಲಿ ಅಧ್ಯಕ್ಷ ಸ್ಥಾನವನ್ನು ಡಿ.ವಿ.ಗುಂಡಪ್ಪನವರಿಗೆ ವಹಿಸಲಾಯಿತು.

ಬಾಗಲಕೋಟದಲ್ಲಿ ವೃತ್ತ ಪತ್ರಕರ್ತರ ಪರಿಷತ್ತು ಸೇರಬೇಕೆಂದರೆ ಇಲ್ಲಿಯ ಪತ್ರಿಕೆಗಳು ರಾಜ್ಯಮಟ್ಟದಲ್ಲಿ ಒಳ್ಳೆಯ ಹೆಸರು ಮಾಡಿರುವುದು ಗಮನಿಸಬೇಕಾದ ವಿಷಯ. ಡಿ.ವಿ. ಗುಂಡಪ್ಪನವರು ತಮ್ಮ ಸುದೀರ್ಘ ಭಾಷಣದಲ್ಲಿ ವೃತ್ತ ಪತ್ರಕರ್ತ ಹೇಗಿರಬೇಕು ಆತನ ಇತಿಮಿತಿಗಳೇನು, ಇಂಗ್ಲೆಂಡಿನ ಪತ್ರಕರ್ತರ ಸಂಘದ ಸಂಘಟನೆ, ಸ್ವತಂತ್ರ ವಿವೇಚನೆ, ಸರ್ಕಾರದ ಆಡಳಿತದ ವಿಮರ್ಶೆ, ಪತ್ರಿಕೆಗಳಲ್ಲಿ ಬಳಸಬೇಕಾದ ಪಾರಿಭಾಷಿಕ ಪದಗಳ ಅವಶ್ಯಕತೆ, ಪತ್ರಕರ್ತ ಹಾಗೂ ಪತ್ರಿಕೆಗಳು ಎದುರಿಸುವ ಸಮಸ್ಯೆ, ಜನರ ಸಂಘಟನೆ, ದೇಶದ ಸದ್ಯದ ಪರಿಸ್ಥಿತಿಯಲ್ಲಿ ಪತ್ರಿಕೆಗಳ ಪಾತ್ರ, ಸ್ವಾತಂತ್ರ್ಯ ಆಂದೋಲನ ಮುಂತಾದ ವಿಷಯಗಳ ಕುರಿತಾಗಿ ಸುದೀರ್ಘವಾಗಿ ಭಾಷಣವನ್ನು ಮಾಡಿದರು. ವೃತ್ತ ಪತ್ರಿಕೆಗಳು

ಸಮಾಜವನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಿ ಜನರಲ್ಲಿ ಸ್ವತಂತ್ರ ವಿವೇಚನೆ ಬೆಳೆಯುವಂತೆ ಮಾಡಬೇಕೆಂದು ಪ್ರಸ್ತಾಪಿಸಿದರು.

"ಪ್ರಜೆಗಳು ತಮ್ಮ ಸ್ವಂತ ಬುದ್ಧಿಗೆ ಸ್ವಲ್ಪವಾದರೂ ಕೆಲಸ ಕೊಡದೆ ಹೋದರೆ, ಆ ಅಂಗವು ಕ್ರಮೇಣ ಕೃಶವಾಗಿ ಕೆಲಸಕ್ಕೆ ಬಾರದೆ ಹೋಗಿ, ಆ ಮೇಲೆ ಅವರು ಪರಾಧೀನರಾದಾರು. ಎಂದರೆ ಒಂದು ಕಡೆ ಸರಕಾರದ ಅಧಿಕಾರಿಗಳ ವಶವರ್ತಿಗಳಾದರು, ಅಥವಾ ಇನ್ನೊಂದು ಕಡೆ ಪತ್ರಿಕಾ ಲೇಖಕರ ವಶವರ್ತಿಗಳಾದರು, ಅಂತೂ ಇಂತಹ ಪ್ರಜಾಧಿಪತ್ಯವು ಸಿದ್ಧಿಸಿದ ಹಾಗಾಗುವುದಿಲ್ಲ. ಮಗನ ಪುರೋವೃದ್ಧಿಯನ್ನು ಬಯಸುವ ಯಾವ ತಂದೆಯೂ ಮಗನನ್ನು ಸ್ವಾತಂತ್ರ್ಯಕ್ಕೆ ಬಿಡದೆ ತನ್ನ ನೆರಳಿನಂತೆ ಇರಿಸಿಕೊಂಡಿರುವುದಿಲ್ಲ, ಎಷ್ಟೋ ವಿಷಯಗಳನ್ನು ಮಗನ ಸ್ವತಂತ್ರ ತಿರ್ಮಾನಕ್ಕೆ ಬಿಟ್ಟು, ಅವನು ಸ್ವಬುದ್ಧಿಯಿಂದ ಜೀವಿಸುವಂತೆ ಮಾಡುತ್ತಾನೆ. ದೂರ ವಿಚಾರವುಳ್ಳ ಪತ್ರಿಕಾಕರ್ತರೂ ಹಾಗೆಯೇ. ತಮ್ಮ ಅಭಿಪ್ರಾಯಗಳನ್ನು ಮಾತ್ರವೇ ಅವರು ಜನರಿಗೆ ಮೂರು ಹೊತ್ತು ಸಾರಿ ಜನರು ತಮ್ಮ ಸ್ವತಂತ್ರ ವಿವೇಚನೆಯನ್ನು ಬಿಟ್ಟು ಬಿಡುವಂತೆ ಪ್ರೇರೇಪಿಸುವುದಿಲ್ಲ. ಮಗುವು ಆಹಾರವನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬೇಕೆಂಬುದೇ ತಾಯಿಯ ಇಷ್ಟವಾಗಿದ್ದರೂ, ಆಕೆ ತುತ್ತನ್ನು ತನ್ನ ಬಾಯಲ್ಲೇ ಅಗಿದು ಆ ಉಗುಳನ್ನು ಮಗುವಿಗೆ ತಿನ್ನಿಸುವುದಿಲ್ಲ, ಆಹಾರವನ್ನು ಪಕ್ವಮಾಡಿ ಮಗುವೇ ಅದನ್ನು ಹಿಡಿವ ಮಟ್ಟಿಗೂ ತನ್ನ ಕೈಯಿಂದಲೇ ಉಂಡು ತನ್ನ ಜೀರ್ಣಶಕ್ತಿಯನ್ನು ತಾನಾಗಿ ಹೆಚ್ಚಿಸಿಕೊಳ್ಳುವಂತೆ ಮಾಡುತ್ತಾಳೆ. ವೃತ್ತ ಪತ್ರಿಕೆಯೂ ಹಾಗೆಯೇ ಮಾಡಬೇಕು. ದೇಶದ ಸ್ಥಿತಿ ಕುರಿತು ವಿಷಯಗಳನ್ನೆಲ್ಲಾ ಅದು ವೃತ್ತಾಂತ ವರದಿಗಳ ರೂಪದಲ್ಲಿ ಪ್ರಜೆಗಳಿಗೆ ಒದಗಿಸಬೇಕು. ಹಾಗೆ ಸಿದ್ಧವಾದ ವಿಷಯಗಳನ್ನು ಕುರಿತು ಸಂಪಾದಕೀಯ ಲೇಖನದಲ್ಲಿಯೂ ಇತರ ಪ್ರಬಂಧಗಳಲ್ಲಿಯೂ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಯುಕ್ತಿ, ನ್ಯಾಯ, ತರ್ಕಗಳ ಮೂಲಕ ಗುಣದೋಷಗಳನ್ನು ತೋರಿಸಿಕೊಡಬೇಕು. ಕೇವಲ ಸಂಭಾಷಣೆ, ಉದ್ಗಾರ, ಮುಷ್ಕರ ಇವುಗಳನ್ನವಲಂಬಿಸಬಾರದು. ತಾವು ಆಕ್ಷೇಪಣೆಯ ಸೂಚನೆಯನ್ನು ತೋರದೆ, ವಾಚಕರು ತಾವಾಗಿಯೇ ಆಕ್ಷೇಪಿಸುವ ರೀತಿಯಲ್ಲಿ ವಿಷಯ ಪ್ರತಿಪಾದನೆ ಮಾಡುವುದು ಲೇಖನದ ಕುಶಲತೆ. ಪ್ರತಿಕಾ ಲೇಖಕರು ಮುಖ್ಯವಾಗಿ ಬೋಧಿಸಬೇಕಾದುದು ಸಿದ್ಧಾಂತವನ್ನಲ್ಲ – ಸಿದ್ಧಾಂತ ಮಾಡುವ ಕ್ರಮವನ್ನು, ಆದ ಕಾರಣ ಪತ್ರಿಕೆ ವಾದ ಕ್ಷೇತ್ರದಲ್ಲಿ ಮೊದಲನೆಯ ಭಾಗವಾದ ಸಂಪಾದಕ ಸ್ಥಾನದ ಲೇಖನಗಳು ಅವೇಶ ಪ್ರಧಾನವಾಗಿರುವುದು ಅಷ್ಟು ಅವಶ್ಯವಲ್ಲ, ಅವು ಯೋಚನೆ ಪ್ರಧಾನವಾಗಿರುವುದು ಅತ್ಯಂತ ಅವಶ್ಯಕ."[೨೯]

"ಸ್ವಾಭಾವಿಕವಾಗಿಯೇ ನಮ್ಮ ದೇಶದಲ್ಲಿ ಸ್ವತಂತ್ರ ವಿವೇಚನೆ ಅಭ್ಯಾಸವು ಕಡಿಮೆ. ಶಾಸ್ತ್ರದಲ್ಲಿ ಶ್ರದ್ಧೆ, ಗುರು ವಚನದಲ್ಲಿ ವಿಶ್ವಾಸ, ರಾಜಭಕ್ತಿ, ರಾಜಾಧಿಕಾರಿಗಳಲ್ಲಿ ವಿಧೇಯತೆ, ಪದಪೀಧರರಲ್ಲಿ ವಿನಯ. ಬಂಧು ಮಿತ್ರರಲ್ಲಿ ದಾಕ್ಷಿಣ್ಯ, ಸಭಾ ಮಂಟಪದಲ್ಲಿ ಮರ್ಯಾದೆ – ಈ ರೀತಿಯಾದ ನಮ್ಮವರ ಸಾಮಾನ್ಯ ಮನೋವೃತ್ತಿ, ಇಂಥವರಿಗೆ ಸ್ವತಂತ್ರ ವಿವೇಚನೆಯನ್ನು ಕಲಿಸುವುದು ಸುಲಭವಲ್ಲ. ಇಷ್ಟರ

ಜೊತೆಗೆ, ಈ ಕಾಲದಲ್ಲಿ ಹೊಸ ಹೊಸ ಕಕ್ಷಿಗಳೂ, ಹೊಸ ಹೊಸ ಮತಗಳೂ ಹುಟ್ಟಿಕೊಳ್ಳುತ್ತಿವೆ. ಇಂತಹ ಸಮಯದಲ್ಲಿ ವೃತ್ತ ಪತ್ರಿಕೆಯವರು ಎಚ್ಚತ್ತಿದ್ದು ಜನಕ್ಕೆ ಎಚ್ಚರಿಕೆ ಕೊಡಬೇಕು. "ಪ್ರಸಿದ್ಧರೊಬ್ಬರು ಹೀಗೆ ಹೇಳುತ್ತಾರೆ: ಅವರ ಗಂಟಲು ದೊಡ್ಡದು ಆದ್ದರಿಂದ ಹಾಗೆಯೇ ಹೇಳೋಣ" – ಎಂದು ಜನ ನಡೆಯುವುದನ್ನು ಪತ್ರಿಕೆಗಳು ತಪ್ಪಿಸಬೇಕು. ಜನರು ಹೇಗೆ ಬೇಕಾದರೂ ಹೇಳಲಿ : ಆದರೆ ವಿಚಾರ ಮಾಡಿ ಹೇಳಲಿ. ಜನರ ಮಾತು ವಿಧೇಯತೆಯಿಂದ ಹೊರಟದ್ದಾಗದೇ ವಿವೇಚನೆಯಿಂದ ಹೊರಟದ್ದಾಗಲಿ. ಜನರು ಯಾವ ಪಕ್ಷವನ್ನಾದರೂ ಹಿಡಿಯಲಿ. ಹೀಗಾಗುವುದು ಕಷ್ಟ. ಇದನ್ನು ಸುಲಭಗೊಳಿಸುವುದು ಪತ್ರಿಕಾ ಲೇಖಕರ ಪ್ರಯತ್ನವಾಗಿರಬೇಕು. ಅವರು ತಮ್ಮ ಲೇಖನಗಳನ್ನು ಚರ್ಚಾ ಪ್ರಧಾನವನ್ನಾಗಿ ಮಾಡಿ, ವಿಷಯ ಶೋಧನೆ ಮಾರ್ಗದಲ್ಲಿ ವಾಚಕರನ್ನು ನಡೆಯಿಸಿದರೆ, ನಮ್ಮ ಜನರಿಗೆ ಸ್ವಬುದ್ಧಿವಿಕಾಸದ ಮೂಲಕವೂ ಮೌಢ್ಯನಾಶನದ ಮೂಲಕವೂ ಆಗುವ ಉಪಕಾರವೂ ಅಷ್ಟಿಷ್ಟಲ್ಲ."[೨೦]

ಸರಕಾರದ ಆಡಳಿತವನ್ನು ವಿಮರ್ಶೆಗೆ ಒಳಪಡಿಸಿ ವಿವಿಧ ಇಲಾಖೆಗಳ ಮಾಹಿತಿಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿ ಪ್ರಕಟಿಸಿದಾಗ ಮಾತ್ರ ಜನರಿಗೆ ರಾಜಕೀಯ ಸಂಸ್ಕಾರ ದೊರೆಯುವುದು ಎಂದು ಡಿ.ವಿ.ಜಿ.ಯವರು ಹೇಳುತ್ತಾ ಪರ್ತಕರ್ತರಿಗೆ ಮಾಹಿತಿ ಸಂಗ್ರಹ ಮಾಡುವದರ ಬಗೆಗೆ ಕಿವಿ ಮಾತನ್ನು ಈ ರೀತಿ ಹೇಳಿದ್ದಾರೆ. ಹಾಗೂ ವಿಮರ್ಶಾತ್ಮಕ ಲೇಖನಗಳು ಬರೆಯುವದು ಕಡಿಮೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಸರಕಾರದ ಆಡಳಿತಗಳನ್ನು ವಿಮರ್ಶೆ ಮಾಡಿ ತಿದ್ದು ಪಾಟುಗಳನ್ನು ಸೂಚಿಸುವುದು ಪತ್ರಿಕೆಗಳ ಅತಿ ಮುಖ್ಯ ಕರ್ತವ್ಯ. "ನಮ್ಮ ಪತ್ರಿಕೆಗಳಲ್ಲಿ ಈ ಬಗೆಯ ಲೇಖನವು ಇನ್ನೂ ಉತ್ತಮಗೊಳ್ಳಬೇಕಾಗಿದೆ. ಈ ಲೇಖನದಲ್ಲಿ ಅಲಂಕಾರ ಅವೇಶಗಳಿಗಿಂತ ವಾಸ್ತವಾಂಶಗಳು ಲೆಕ್ಕ ಉದಾಹರಣೆಗಳೂ ಹೆಚ್ಚಾಗಿರಬೇಕು. ಬರೆಯ ತಕ್ಕವರು ಬೇರೆ ಬೇರೆ ಇಲಾಖೆಗಳಿಗೆ ವಿಧಾಯಕವಾಗಿರುವ ಉದ್ದೇಶಗಳನ್ನೂ ಕಾರ್ಯಕ್ರಮಗಳ ಮನದಟ್ಟು ಮಾಡಿಕೊಂಡು, ಹಿಂದಿನ ವರ್ಷಗಳ ವರದಿಗಳನ್ನು ಇತರ ಪ್ರಾಂತಗಳ ವರದಿಗಳನ್ನು ಪರೀಕ್ಷಿಸಿ ಹೋಲಿಸಿ ನೋಡಿ ಸೂಕ್ಷ್ಮಾಂಶಗಳನ್ನು ಗಮನಕ್ಕೆ ತರಬೇಕು. ಈ ತರದ ಬರವಣಿಗೆಯು ಶ್ರಮ ಸಾಧ್ಯವಾದದ್ದು. ಹಿಂದೆ ಗೋಖಲೆಯವರೂ, 'ಹಿಂದೂ' ಪತ್ರಿಕೆಯ ಜಿ. ಸುಬ್ರಹ್ಮಣ್ಯಯ್ಯರ ಅವರೂ ಈ ತರದ ಸರಕಾರಿ ಕಾರ್ಯ ವಿಮರ್ಶೆಗಳನ್ನು ಬರೆಯುತ್ತಿದ್ದರು. ಈಚೆಗೆ ಏಕೋ ಆ ಬಗೆಯ ಕಷ್ಟಸಿದ್ಧವಾದ ವಿಮರ್ಶೆ ಕ್ರಮವು ಇಂಡಿಯಾ ದೇಶದ ಎಲ್ಲ ಭಾಗಗಳಲ್ಲಿಯೂ ಕಡಿಮೆಯಾಗುತ್ತಿದೆ. ಇದು ಶೋಚನೀಯವಾದ ವಿಷಯ. ನಾನಾ ಇಲಾಖೆಗಳ ಕಾರ್ಯವಿಧಾನಗಳನ್ನು ಮರ್ಮಗಳನ್ನು ಚೆನ್ನಾಗಿ ಪರೀಕ್ಷಿಸದ ಹೊರತು ಆಡಳಿತದ ನಿಜವಾದ ಸ್ವಭಾವವು ನಮಗೆ ತಿಳಿದು ಬರುವುದಿಲ್ಲ. ರಾಜ್ಯವಿಚಾರಕರ್ತರು ಅದರ ಸ್ವಭಾವವನ್ನು ತಾವು ತಿಳಿದುಕೊಂಡು ಜನರಿಗೆ ತಿಳಿಸಿಕೊಟ್ಟ ಹೊರತು ರಾಜಕೀಯ ಸಂಸ್ಕಾರಗಳು ಸರಿಯಾಗಿ ನಡೆಯಲಾರವು. ಮೇಲೆ ಹೇಳಿದಂತೆ ವರದಿಗಳ ಆಧಾರದ ಮೇಲೆ ಅಂಕಿ ಪ್ರಮಾಣ ಉದಾಹರಣೆಗಳ ಸಮೇತವಾಗಿ ವಿಮರ್ಶೆಯು ವಾಚಕರಿಗೆ ಒಂದು

ಬಗೆಯ ವಿದ್ಯಾಭ್ಯಾಸವನ್ನು ಮಾಡಿಸುವುದಲ್ಲದೆ ಲೇಖಕನಿಗೂ ಒಂದು ತರದ ವಿದ್ಯಾಭ್ಯಾಸವಾಗುವುದು."[೩೧] ಸರಕಾರಿ ನೌಕರಿ ಮಾಡಿ ನಿವೃತ್ತರಾದವರು ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯಬೇಕು. ಅವರು ಸುಮ್ಮನೆ ಕುಳಿತು ಸಮಯ ಹಾಳುಮಾಡುವದಕ್ಕಿಂತ ಪತ್ರಿಕೆಯಲ್ಲಿ ಲೇಖನ ಬರೆಯುವಂತೆ ಸಂಪಾದಕರು ಅವರ ಮನವೊಲಿಸಬೇಕು. ಇದರಿಂದ ಅನೇಕ ಸರಕಾರದ ಮಹತ್ವದ ವಿಷಯಗಳು ತಿಳಿಯುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

"ನಮ್ಮಲ್ಲಿ ಸರಕಾರದ ಉದ್ಯೋಗವನ್ನು ಮಾಡಿ, ಲೋಕಾನುಭವವನ್ನು ಸಂಪಾದಿಸಿ ವಿಶ್ರಾಂತರಾಗಿ ಪೆನ್‌ಷನ್ ತೆಗೆದುಕೊಳ್ಳುತ್ತಿರುವ ದೊಡ್ಡ ಮನುಷ್ಯರ ಸಹಾಯವನ್ನು ಸಂಪಾದಿಸುವುದು ಇದೇನೂ ಸುಲಭವೆಂದು ನಾನು ತಿಳಿದಿಲ್ಲ. ಕಾಲು ಚಾಚಿಕೊಂಡು ಹಾಯಾಗಿ ಕುಳಿತಿರೋಣವೆಂದು ಪೆನ್‌ಷನ್‌ದಾರರು ಅಂದುಕೊಂಡು ಮಂಕಾಗಿ ಕಾಲ ತಳ್ಳುವುದು ನಮ್ಮ ದೇಶದಲ್ಲಿ ವಾಡಿಕೆಯಾಗಿದೆ. ಈ ಬಗೆಯ ಜೀವನವು ಅವರಿಗೆ ಹಾನಿಕಾರಕವೆಂದೂ, ಕೈಲಾದಷ್ಟು ಜ್ಞಾನವನ್ನಾದರೂ ದಾನ ಮಾಡುವುದು ದೇಶ ವಿಷಯದಲ್ಲಿ ಅವರ ಕರ್ತವ್ಯವೆಂದು ಯಾರಾದರೂ ಅವರಿಗೆ ಅನುನಯ ವಚನಗಳಿಂದ ಹೇಳಿ ಅವರನ್ನೊಡಂಬಡಿಸಿದರೆ, ಅವರು ಕೆಲವು ಒಳ್ಳೊಳ್ಳೆಯ ಕಥೆಗಳನ್ನು ಹೇಳಿಯಾರು ಅಥವಾ ಉಪಯುಕ್ತ ವಿಷಯಗಳನ್ನು ಕುರಿತು ಟೀಕಿಸಿಯಾರು, ಪ್ರಯತ್ನಪಟ್ಟು ಈ ತೆರದ ಸಹಾಯವನ್ನು ನಮ್ಮ ಪತ್ರಿಕಾ ಪಾಲಕರು ಸಂಪಾದಿಸಬೇಕು."[೩೨]

ಪತ್ರಿಕೆಗಳು ಜನ ಜಾಗೃತಿ ಉಂಟು ಮಾಡಬೇಕು. ಜನರಲ್ಲಿ ಪತ್ರಿಕೆಯ ಬಗ್ಗೆ ಪ್ರೀತಿ ಅಭಿಮಾನ ಮೂಡಿಸಬೇಕು. ಸರಕಾರದ ಲೋಪದೋಷಗಳನ್ನ, ಸಮಾಜದ ಬೇಕು ಬೇಡಿಕೆಗಳ ಕುರಿತು ಜನರು ಸ್ವಯಂ ಪ್ರೇರಿತವಾಗಿ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುವಂತೆ ಸಿದ್ಧರಾದಾಗ ರಾಜಕೀಯ ಪ್ರಜ್ಞೆ ಉಂಟಾಗಿ ಜನರಲ್ಲಿ ಸ್ವರಾಜ್ಯ ಕಲ್ಪನೆ ಮೂಡಲು ಸಹಾಯವಾಗುವುದು.

ಪತ್ರಿಕೋದ್ಯಮಿಯನ್ನು ಡಿ.ವಿ.ಜಿ. ಯವರು ಸೈನಿಕರಿಗೆ ಹೋಲಿಸಿ ಅವರ ಕರ್ತವ್ಯದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. "ಪತ್ರಿಕೋದ್ಯೋಗಿಯನ್ನು ಒಂದು ತರದ ಸೈನಿಕನೆನ್ನಬಹುದು. ಊರಿನವರೆಲ್ಲ ರಾತ್ರಿ ನಿಶ್ಚಿಂತೆಯಿಂದ ನಿದ್ರಿಸಲೆಂದು ಪೋಲೀಸಿನವರು ಆ ಕಾಲದಲ್ಲಿ ಎಚ್ಚರುವಂತೆ ದೇಶದವರು ಕ್ಷೇಮದಿಂದ ಬಾಳಲೆಂದು ಯೋಧನು ರಣರಂಗದಲ್ಲಿ ನಿಲ್ಲುವಂತೆ – ಸಕಲ ಜನರು ಸುಖದಿಂದ ಆಶೆಯನ್ನು ಬಿಟ್ಟು ದುಡಿಯುತ್ತಿರಬೇಕು. ತನ್ನ ಸ್ನೇಹಿತರು ವಿನೋದಪಡುತ್ತಿರುವಾಗ ಅವನು ಚಿಂತೆಯಲ್ಲಿ ಮೈಮರೆತಿರಬೇಕು. ಸಮಾನ ಮನಸ್ಕರು ಹಣಸಂಪಾದಿಸಿ ಮೆರೆಯುತ್ತಿರುವಾಗ ಅವನು ದೊರೆತಷ್ಟರಿಂದಲೇ ಸಂತುಷ್ಟನಾಗಬೇಕು. ಇತರ ಲಾಭ ಸೌಖ್ಯಗಳು ಕುಂದದೆ ಇರುವಂತೆ ಮಾಡುವುದಕ್ಕೋಸ್ಕರ ಇವನು ತನ್ನ ಲಾಭ ಸೌಖ್ಯಗಳ ಚಿಂತೆಯನ್ನು ತೊರೆದಿರಬೇಕು."[೩೩] "ಇಂತಹ ಸಂಸ್ಥೆಯು ಕಷ್ಟದಿಂದ ಕುಗ್ಗುತ್ತಿರುವ ನಮ್ಮ ಉತ್ಸಾಹಕ್ಕೆ ಉತ್ತೇಜಕವಾಗಿ ನಮ್ಮ ಔದ್ಯೋಗಿಕ ಧರ್ಮಕ್ಕೆ ಅಧಿಷ್ಠಾನವಾಗಿರುವುದು. ನಮ್ಮ ಗೋಳು ನಿಷ್ಠುರಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡು ಸಮಾಧಾನ

ಪಡೆಯುವುದಕ್ಕೂ ಇದು ಒಂದು ಆಸರೆಯಾಗಿರುವುದು. ಇಂಥ ಸಂಸ್ಥೆಯೊಂದನ್ನು ಕಟ್ಟಲು ಹಿಂದೆ ಒಂದೆರಡು ಪ್ರಯತ್ನಗಳಾದವು. ಈ ಬಾಗಲಕೋಟದ ಪ್ರಯತ್ನವಾದರೂ ಜಯಶಾಲಿಯಾಗುವಂತೆ ದೈವವು ಅನುಗ್ರಹಿಸಿ ತಮ್ಮಗಳನ್ನು ಪ್ರಚೋದಿಸಲಿ. ನಾವುಗಳೆಲ್ಲರು ಮನಸ್ಸು ಗಟ್ಟಿ ಮಾಡಿ, ನಾವು ದಿನದಿನವು ಇತರರಿಗೆ ಉಪದೇಶಿಸುತ್ತಿರುವ ಶ್ರದ್ಧೆಯನ್ನು ಐಕ್ಯಮತ್ಯ ಪ್ರೀತಿಯನ್ನು, ಸಹನೆಯನ್ನು ಔಣತನವನ್ನು ನಮ್ಮ ಸ್ವಂತ ಕಸಬಿನ ಹಿತ ಸಾಧನೆಗೋಸ್ಕರವಾಗಿ ಸ್ವಲ್ಪಮಟ್ಟಿಗಾದರೂ ಅನುಷ್ಠಾನ ಮಾಡುವುದಾದರೆ. ಈ ಪರಿಷತ್ತು ಶಾಶ್ವತ ಸಂಸ್ಥೆಯಾಗಿ ಯಶಸ್ವಿಯಾದೀತು. ಇದು ಒಂದು ದಿನದ ನಿರ್ಗುಳ್ಳೆಯಾಗಿದೆ, ಸ್ಥಿರವಾಗಿ ನೆಲೆಗೊಂಡು ಜನಜೀವನದ ಆಧಾರ ಸ್ತಂಭವೆನಿಸಲಿ – ಎಂಬುದೇ ನಾನು ಪುನಃ ಪುನಃ ಮಾಡುವ ಪ್ರಾರ್ಥನೆ."[೩೪] ಡಿ.ವಿ.ಜಿ ಯವರ ನೇತೃತ್ವದಲ್ಲಿ ವೃತ್ತ ಪತ್ರಕರ್ತರ ಸಭೆ ಯಶಸ್ಸನ್ನು ಕಂಡಿತು.

ಡಿ.ವಿ.ಜಿ.ಯವರು ಬಾಗಲಕೋಟದಲ್ಲಿ ನಡೆದ ಪತ್ರಿಕಾ ಪರಿಷತ್‌ನ ಯಶಸ್ವಿಯನ್ನು ಕುರಿತು ತಮ್ಮ ಭಾಷಣದಲ್ಲಿ ಪ್ರಶಂಸೆ ವ್ಯಕ್ತಪಡಿಸುವದರ ಜೊತೆಗೆ ಈ ರೀತಿ ಸಮ್ಮೇಳನಗಳು ನಡೆಸುವುದರಿಂದ ಪತ್ರಿಕೆಗಳು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ಹೇಳಿದ್ದಾರೆ.

೨. ಕರ್ನಾಟಕ ವೈಭವ ಪತ್ರಿಕೆ

ಸೈಮನ್ ಆಯೋಗ ಭಾರತಕ್ಕೆ ಬಂದಾಗ ಅದನ್ನು ಟೀಕಿಸಿ ಜಲಿಯನ್‌ವಾಲಾಬಾಗ ಘಟನೆ ಹಾಗೂ ಲಾಲಾ ಲಜಪತರಾಯರ ಮೇಲೆ ಲಾಠಿ ಪ್ರಹಾರ ಮಾಡಿರುವದನ್ನು ಕರ್ನಾಟಕ ವೈಭವ ೦೨–೧೨–೧೯೨೮ ರಂದು ನಿರ್ಲಜ್ಜದ ಪರಮಾವಧಿ ಎಂಬ ಲೇಖನವನ್ನು ಪ್ರಕಟಿಸಿದೆ.

ನಿರ್ಲಜ್ಜದ ಪರಮಾವಧಿ

"ಸೈಮನ್ ಸರಕಾರವು ಹಿಂದೂಸ್ತಾನಕ್ಕೆ ಬಂದಂದಿನಿಂದ ನೌಕರಶಾಹಿಯು ಯುಕ್ತಿ – ಪ್ರಾಯುಕ್ತಿಗಳನ್ನು ನಡೆಸುತ್ತ ಆ ಸರ್ಕಸ್ಸಿಗೆ ಜನರು ಸ್ವಾಗತವನ್ನೀಯುತ್ತಾರೆಂದು ತೋರಿಸುವ ಅನೇಕ ಹಿಂದೀ ಜನರ ಹಣದಿಂದ ಕೊಟ್ಟಿದ ನೌಕರಶಾಹಿಯು ಅವರ ಆಕಾಂಕ್ಷೆಗಳನ್ನು, ಮನೋಭಾವನೆಗಳನ್ನು ಕಾಲಿನಿಂದ ತುಳಿಯುತ್ತ ಯಾವ ತಾರತಮ್ಯವಿಲ್ಲದೆ ಗೇಣು ಹೊಟ್ಟೆಗಾಗಿ ಮನುಷ್ಯತ್ವವನ್ನು ಕಳೆದುಕೊಂಡು ಕೇವಲ ನಾಲ್ಕು ಪಾದಗಳ ಪ್ರಾಣಿಯಂತೆ ಆಚರಿಸುವ ತಮ್ಮ ಹಸ್ತಾಕ್ಷರ ಇಡೀ ಹಿಂದೀ ಜನಾಂಗವನ್ನೇ ಅಡಿ ಅಡಿಗೆ, ಅವಮಾನಗೊಳಿಸುತ್ತಿದ್ದ ಸಂಗತಿಯನ್ನು ದಿನಾಲೂ ಕಾಣುತ್ತಿದ್ದೇವೆ. ಜಲಿಯನ್‌ವಾಲಾಬಾಗ್‌ದ ಅಮಾನುಷ ಕೊಲೆಯನ್ನು ಮಾಡಿದಂಥ ನರಾಧಮರನ್ನು ನ್ಯಾಯಸ್ಥಾನಕ್ಕೆಳೆಯಲಾರದಂಥ ನಿರ್ಲಜ್ಜ ಬ್ಯೂರಾಕ್ರಸಿಯೂ ಲಾಲಾಜಿಯವರ ಮೇಲೆ ಲಾಠಿ ಪ್ರಹಾರ ಮಾಡಿದ್ದರಲ್ಲಿ ಅಶ್ಚರ್ಯವೇನು ?"[೩೫]

ದಬ್ಬಾಳಿಕೆಯ ಸತ್ರವು

ಮೊಹರೆ ಹನಮಂತರಾಯರು ರಾಷ್ಟ್ರೀಯತೆಯ ವಿಚಾರವನ್ನು ಕರ್ನಾಟಕ ವೈಭವದಲ್ಲಿ ಈ ರೀತಿ ವ್ಯಕ್ತ ಪಡಿಸಿದ್ದಾರೆ. ದಬ್ಬಾಳಿಕೆಯ ಸತ್ರವು – ಎಲ್ಲಿ ನೋಡಿದರಲ್ಲಿ ಜನರನ್ನು ಹಿಡಿಯುವ ಸುದ್ಧಿಯೂ ಕೇಳಿಬರುತ್ತದೆ. ಅನ್ಯಾಯದ ಉಪ್ಪಿನ ಕಾಯ್ದೆಯನ್ನು ಭಂಗ ಮಾಡಿದ ಎಲ್ಲ ಜನರನ್ನು ಹಿಡಿಯದೆ ಕೆಲವು ಮುಖ್ಯ ಜನರನ್ನು ಮಾತ್ರ ಹಿಡಿದು ಸರಕಾರ ತನ್ನ ಡೌಲನ್ನು ತೋರಿಸುತ್ತದೆ. ಕಾಯ್ದೆ ಭಂಗ ಮಾಡಿದ ಎಲ್ಲ ಜನರನ್ನು ಹಿಡಿದ್ದರೆ ಅದೊಂದು ಸಾಹಸವಾಗುತ್ತಿತ್ತು.

ಸಾಯಮನ್ ಸಪ್ತಗ್ರಹ ಆಯೋಗವು ಸಮೀಪಿಸಿತು, ಎಚ್ಚರಿಕೆ

ಸೈಮನ್ ಕಮಿಷನ್ ಭಾರತಕ್ಕೆ ಬರುವುದನ್ನು ವಿರೋಧಿಸಿ ಮೊಹರೆ ಹನಮಂತರಾಯರು ಸಂಪಾದಕೀಯಲ್ಲಿ ದಿನಾಂಕ ೨೯–೦೧–೧೯೨೮ರ ಕರ್ನಾಟಕ ವೈಭವ ಪತ್ರಿಕೆಯಲ್ಲಿ ಬರೆದ ಲೇಖನ "ಫೆಬ್ರುವರಿ ೭ನೇ ತಾರೀಖಿನ ದಿವಸ ನಮ್ಮ ಭರತ ಭೂಮಿಗೆ ಸಾಯಮನ್ ಸಪ್ತಗ್ರಹ ಆಯೋಗವು ಬರುವದು ಬೇಕಾದಷ್ಟು ಜನರು ಛೀ, ಥೂ, ಹಾಕುತ್ತಿದ್ದರು. ಕೂಡಾ ಅದನ್ನು ದುರ್ಲಕ್ಷಿಸಿ ಬರ್ಕನ್ ಹೆಡ್‌ರು ಈ ಸಪ್ತಗ್ರಹಗಳ ಕಮಿಷನ್‌ವನ್ನು ಹಿಂದೂಸ್ಥಾನಕ್ಕೆ ಅಟ್ಟಿದರು. ಸಾಯಮನ್ ಸಾಹೇಬರೂ ಬೇರೆ ಅವರು ಮಂದಿಯ ಬಾಲಂಗಸಿಯನ್ನು ಕಟ್ಟಿಕೊಂಡು ಇಂಗ್ಲೆಂಡದಿಂದ ಹೊರಟಿದ್ದಾರೆ.

"ಹಿಂದೂ ಜನರ ಕ್ಷುಲಕ ಆಕಾಂಕ್ಷೆಗಳನ್ನು ಕೂಡಾ ಬುಡಕ್ಕೆ ತುಳಿದು ಬರೆ ಮೊರೆಯ ಮೇಲೆ ಕೈ ಎಳೆದು ಸಮಾಧಾನ ಮಾಡಿದರೆ ಎಷ್ಟು ದಿವಸ ನಡೆದೀತು? ಇಷ್ಟು ದಿವಸಗಳವರೆಗೆ ಆಳರಸರು ಅಂದದ್ದಕ್ಕೆಲ್ಲ ಹಿಂದೆ ಉಧೋ ಉಧೋ ಎಂದು ಕುಣಿಯುವ ಜನರು ಹಿಂದುಸ್ಥಾನದಲ್ಲಿ ಬಹುಜನ ಸಿಗುತ್ತಿದ್ದರಿಂದಲೇ ಅವರು ಚಲ್ಲಾಟದಲ್ಲಿದ್ದರು. ಜಾತಿ, ಜಾತಿಗಳಲ್ಲಿ, ಪಂಗಡ–ಪಂಗಡಗಳಲ್ಲಿ ಭೇದ–ಭಾವ ಹುಟ್ಟಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದರು. ಬರಗಾಲದಲ್ಲಿದ್ದರು ಬಹಳ ಸಿಟ್ಟಿಗೆದ್ದು ಕುಂಯಿ ಕುಂಯಿ ಮಾಡಿದರೆ ಒಂದು ತುಣುಕು ತೌಡಿನ ರೊಟ್ಟಿಯನ್ನು ಚೆಲ್ಲಿ ಕಿವಿ ಹಿಂಡಿ ಕೆಡುವುತ್ತಿದ್ದರು. ಆದರೆ ಈಗ ಕಾಲ ಮಹಿಮೆಯಿಂದ ಆಸ್ಥಿತಿಯು ಬಹುಶಃ ದೂರವಾಗಿರುವದು ಬರಗಾಲದಲ್ಲಿದ್ದರೂ ಕೂಡಾ ಜಿಗಿದು ಬಂದು ಗುರ್ರ್ ಎಂದು ಅನ್ನುವಂತಿದ್ದಾರೆ. ಸಾಕು ನಿಮ್ಮ ಆಡಳಿತ, ಇನ್ನು ಮೇಲೆ ಟೋಪ್ಪಿಗೆಯನ್ನು ತಲೆಗೆ ಹಾಕಿರೆಂದು ಸ್ಪಷ್ಟವಾಗಿ ಹೇಳಹತ್ತಿದ್ದಾರೆ. ಅದರೇನು, ಆಶೆಬುರುಕರಾದ ಅಳರಸರಿಗೆ ಮಾತಿನ ಪೆಟ್ಟು ಇದ್ದರಲ್ಲವೇ ಆ ಮಾತು."[೩೬]

ಕರ್ನಾಟಕದಲ್ಲಿ ಸತ್ಯಾಗ್ರಹವೆ ?

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಯುವಕರ ಪಾಲ್ಗೊಳ್ಳಬೇಕು. ಯುವಕರು ಮುಂದೆ ಬಂದಾಗ ಮಾತ್ರ ಚಳವಳಿಗಳು ಯಶಸ್ಸಾಗುತ್ತವೆ ಎಂದು ನಾಡಿನ ಯುವಶಕ್ತಿಯನ್ನು ಎಚ್ಚರಗೊಳಿಸಲು

ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕೀಯಲ್ಲಿ ದಿನಾಂಕ ೦೧-೦೩-೧೯೩೦ ರಂದು ಕರ್ನಾಟಕದಲ್ಲಿ ಸತ್ಯಾಗ್ರಹವೇ ? ಎಂಬ ಲೇಖನ ಬರೆದಿದ್ದಾರೆ.

೧೪ನೇ ತಾರೀಖಿಗೆ ಸಾಬರಮತಿಯಲ್ಲಿ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲವು ಸ್ವಾತಂತ್ರ್ಯದ ರಣಭೇರಿ ಹೊಡೆಯಿತೆಂದು ನಾವು ಹೋದ ವಾರದಲ್ಲಿ ಬರೆದಿದ್ದೇವೆ. ಈ ರಣದುಂದುಭಿಯ ನಿನಾದದಿಂದ ಎಚ್ಚೆತ್ತ ಕರ್ನಾಟಕವು ಎಷ್ಟರ ಮಟ್ಟಿಗೆ ಈ ಸಂಗ್ರಾಮದಲ್ಲಿ ಸಹಾಯ ಮಾಡಲು ಶಕ್ಯವಿದೆಯೆಂಬುದನ್ನು ವಿಚಾರಿಸುವ ಕುರಿತು ಮೊನ್ನೆ ೨೩ನೇ ತಾರೀಖಿನ ದಿವಸ ಬಳ್ಳಾರಿಯಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಕಮಿಟಿಯ ಅಧಿವೇಶನವು ಕೂಡಿತ್ತು. ಕೆಲಸಗಾರರೆಲ್ಲ ಕೂಡಿಕೊಂಡು ಈ ರೀತಿಯಾಗಿ ವಿಚಾರಿಸುವದು ಅತ್ಯಂತ ಅವಶ್ಯವೆಂಬುದನ್ನು ನಾವು ಅಲ್ಲಗಳೆಯಲಾರೆವು. ಆದರೆ ಕೇವಲ ವಿಚಾರ ವಿನಿಮಯ, ಸಮಿತಿ, ಉಪಸಮಿತಿಗಳೆಂದು ಹೇಳಿ ಅಲ್ಲಿಗೆ ಕೈಬಿಟ್ಟು ಕುಳಿತು ಇದ್ದಂತೆ ಇದೇ ಸಿದ್ದೇಶ್ವರ ಎಂಬಂತೆ ಮಾತ್ರ ನಮ್ಮ ಸ್ಥಿತಿಯಾಗಬಾರದೆಂದಷ್ಟೇ ನಮ್ಮ ಹಾರೈಕೆ ಈ ನಮ್ಮ ಹಾರೈಕೆಯು ಕೈಗೂಡಬೇಕಾದರೆ ಕರ್ನಾಟಕದಲ್ಲಿಯ ತರುಣರು ಮುಂದೆ ಬರಬೇಕಾಗುವದು. ಕೇವಲ ಕಾರ್ಯನಿರ್ವಾಹಕರನ್ನಷ್ಟೇ ನಿಂದಿಸುತ್ತ ಕಾಲ ಕಳೆದರೆ ತೀರಿದಂತಾಗುವದು.

ನಿಜವಾದ ದೇಶಪ್ರೇಮವುಳ್ಳವರು ಅತ್ಯಂತ ಅಸ್ಥೆಯಿಂದ ಜೀವನದ ಹಂಗು ತೊರೆದು ಸಾಯಲು ಸಿದ್ಧರಾಗಿ ಮುಂದೆ ಬಂದರೆ ಒಂದು ಕ್ಷಣದಲ್ಲಿಯೇ ಚವನನಂತೆ ನಮ್ಮ ಸದ್ಯದ ದೈನ್ಯಾವಸ್ಥೆಯೆಲ್ಲ ಅಡಗಿ ನಾವು ಜಗತ್ತಿನ ಇತಿಹಾಸದಲ್ಲಿ ತಲೆ ಎತ್ತುತ್ತೇವೆ. ಕರ್ನಾಟಕದಲ್ಲಿಯೂ ಸತ್ಯಾಗ್ರಹವೇ ? ಎಂದು ಸದಿಚ್ಛೆಯುಳ್ಳ ಮಿತ್ರರು ಸೋಜಿಗಗೊಳ್ಳಬಹುದು. ಅದರಂತೆ ನಿರಾಶಾವಾದಿಗಳಾದ ಕೆಲವರು ಇದನ್ನು ಕಂಡು ಮೂಗು ಮುರಿಯಬಹುದು. ಆದರೆ ಉದಾತ್ತ ನಾಡಿನ ಯುವಕರು ಮುಂದೆ ಒಂದು ಜನಜಾಗೃತಿಯ ಕಾರ್ಯವನ್ನು ವಹಿಸಿಕೊಂಡು ಕ್ರಾಂತಿ ಧ್ವಜವನ್ನೆತ್ತಿಕೊಂಡು ಶಾಂತಿ ಯುದ್ಧವನ್ನು ಸಾಗಿಸಿದರೆ, ಕರ್ನಾಟಕವನ್ನಷ್ಟೆ ಏಕೆ? ಇಡೀ ಭರತಖಂಡವನ್ನು ಮುಂದೆ ಬರುವಂತೆ ಮಾಡಬಹುದು. ಇದಕ್ಕೆ ಅತ್ಯಂತ ಉಗ್ರವಾದ ಸ್ವಾರ್ಥ ತ್ಯಾಗವೂ, ಕಡುತರವಾದ ಕಾರ್ಯ ಪ್ರೇಮವೂ, ನಿಸ್ಸೀಮ ದೇಶಾಭಿಮಾನವೂ ಅವಶ್ಯವೆಂಬುದೇನೋ ನಿಜ. ಯಾವ ದೇಶದವರಾದರೂ ಇವುಗಳಿಲ್ಲದೆ ಮುಂದೆ ಬಂದಿಲ್ಲವೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿಯು."[೩೭]

ಅಪೂರ್ವ ಹೋರಾಟ

ಭಾರತೀಯರ ದೈನಂದಿನ ಜೀವನಕ್ಕೆ ಅವಶ್ಯವಿರುವ ಉಪ್ಪಿನ ಮೇಲೆ ಕರ, ಹಾಗೂ ಭೂಕಂದಾಯ ಹೆಚ್ಚಳಮಾಡಿ ಬಡ ಭಾರತೀಯರನ್ನು ಶೋಷಣೆಗೆ ಒಳಪಡಿಸಿ. ದುಂದುವೆಚ್ಚ ಮಾಡುವ ಬ್ರಿಟಿಷರ ನೀತಿಯನ್ನು ಖಂಡಿಸಿ ಕರ್ನಾಟಕ ವೈಭವ ಪತ್ರಿಕೆ ಸಂಪಾದಕೀಯಲ್ಲಿ ೦೮-೦೩-೧೯೩೦ ಮೊಹರೆ ಹನಮಂತರಾಯರು ಅಗ್ರಲೇಖನ ಬರೆದಿದ್ದಾರೆ.

"ನಮ್ಮನ್ನು ಆಳಲಿಕ್ಕೆಂದು ಇಂಗ್ಲೆಂಡದಿಂದ ಇಪ್ಪತ್ತು ವರ್ಷದ ಹುಡುಗರು ಇಲ್ಲಿಗೆ ಬರುತ್ತಾರೆ. ಅವರಿಗೆ ಮಿತಿಮೀರಿ ಸಂಬಳ ಕೊಡುತ್ತಾರೆ. ಯುರೋಪಿಯನ್ ನೌಕರರ ಸಂಬಳ ರೂಪದಿಂದ ಪ್ರತಿವರ್ಷ ಸುಮಾರು ೩೦ ಕೋಟಿ ರೂಪಾಯಿಗಳು ಇಂಗ್ಲೆಂಡಕ್ಕೆ ಹೋಗುತ್ತದೆ. ಹೊಟ್ಟೆ ಹೊರಕೊಳ್ಳಲಿಕ್ಕೆ ಬಂದ ನೌಕರರಿಗೆ ಇರಲಿಕ್ಕೆ ಅರಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ವ್ಹಾಯಿಸರಾಯ್, ಗರ್ವನರ್ ಮೊದಲಾದವರ ಹಜಾಮತಿ ವೆಚ್ಚವನ್ನು ಸಹ ಬಡ ಹಿಂದೂಸ್ತಾನದ ಜನರ ಮೇಲೆ ಹೇರುತ್ತಾರೆ. ಇತರ ಯಾವ ದೇಶದಲ್ಲಿಯೂ ಉಪ್ಪಿನ ಮೇಲೆ ಕರವಿಲ್ಲ. ಒಂದು ಮಣ ಉಪ್ಪು ಸಿದ್ಧವಾಗಬೇಕಾದರೆ ಆರು ದುಡ್ಡಿನ ವೆಚ್ಚ ಬರುತ್ತದೆ. ಒಂದು ಮಣ ಉಪ್ಪಿಗೆ ಸರಕಾರದವರು ೧ ರೂ. ೪ ಆಣೆ ಕರವನ್ನು ಹಾಕಿದ್ದಾರೆ. ಖರ್ಚಿಗೆ ಕಡಿಮೆ ಬಿದ್ದ ಕೂಡಲೇ ಸರಕಾರದವರು ಉಪ್ಪಿನ ಮೇಲೆ ಕರವನ್ನು ಹೆಚ್ಚಿಸುತ್ತಾರೆ. ಅದರಂತೆ ಭೂ ಕಂದಾಯವನ್ನೂ ಹೆಚ್ಚಿಸ ಹತ್ತಿದ್ದಾರೆ. ೧೭೭೪-೧೮೬೧ರ ಇಸ್ವಿ ವರೆಗೆ ಸರಕಾರಕ್ಕೆ ಭೂ ಕಂದಾಯ ಆದಾಯ ೧೬ ಕೋಟಿ ೪೪ ಲಕ್ಷ ರೂಪಾಯಿ ಆಯಿತು. ಆದರೆ ಈಗ ಆದಾಯವು ೨೮ ಕೋಟಿ ರೂಪಾಯಿ ಆಗಿದೆ. ಒಕ್ಕಲಿಗರಂತು ಸಾಲದಲ್ಲಿ ಮುಳುಗಿದ್ದಾರೆ. ಹಿಂದೂ ಸ್ಥಾನವನ್ನು ಸಂರಕ್ಷಿಸಲಿಕ್ಕೆಂದು ಹೇಳಿ ೫೦-೬೦ ಕೋಟಿ ರೂಪಾಯಿಗಳನ್ನು ಸೈನ್ಯ ಖಾತೆಗೆ ವೆಚ್ಚ ಮಾಡುತ್ತಾರೆ. ೧೮೬೧ನೇ ಇಸ್ವಿಯಲ್ಲಿ ಸೈನ್ಯದ ಖಾತೆಯ ವೆಚ್ಚವು ೧೬ಕೋಟಿ ರೂಪಾಯಿ ಇತ್ತು. ಈಗ ನಾಲ್ಕು ಪಟ್ಟು ಬೆಳೆದಿರುತ್ತದೆ. ಕೋಟಿಗಟ್ಟಲೇ ಹಣವನ್ನು ಸೂರೆ ಮಾಡಿ, ದಂಡವನ್ನು ನಮ್ಮನ್ನು ಸಂರಕ್ಷಿಸಲಿಕ್ಕೆ ಇಟ್ಟಿಲ್ಲ, ಆದರೆ ಹಿಂದೂಸ್ಥಾನವನ್ನು ಕಡೆತನಕ ಪಾರತಂತ್ರ್ಯದಲ್ಲಿಡಬೇಕೆಂದು ಇಷ್ಟು ದಂಡವನ್ನು ಇಟ್ಟಿದ್ದಾರೆ."[೩೮]

ರಣಬೇರಿ ಕೇಳಿಸುವದಿಲ್ಲವೆ ?

ಗಾಂಧಿಜೀಯವರ ಸತ್ಯಾಗ್ರಹ ಬಿರುಸಾಗಿ ನಡೆದಾಗ ಇಡೀ ದೇಶವೇ ಅವರ ಕರೆಗೆ ಓಗೊಟ್ಟು ಚಳವಳಿಗೆ ಮುಂದಾಯಿತು. ಕರ್ನಾಟಕದ ಜನತೆಯು ಮಹಾತ್ಮರ ಕರೆಗೆ ಸ್ಪಂದಿಸಬೇಕು. ಸ್ವಾತಂತ್ರ್ಯ ಚಳವಳಿಯಲ್ಲಿ ಕರ್ನಾಟಕದವರು ಹಿಂದುಳಿಯ ಬಾರದೆಂದು ರಣಭೇರಿಯು ಕೇಳಿಸುವದಿಲ್ಲವೆ ? ಎಂಬ ಲೇಖನವನ್ನು ೨೨-೦೩-೧೯೩೦ರ ಕರ್ನಾಟಕ ವೈಭವ ಪತ್ರಿಕೆಯಲ್ಲಿ. ಮೊಹರೆ ಹನಮಂತರಾಯರ ಲೇಖನವನ್ನು ಸಂಪಾದಕೀಯದಲ್ಲಿ ಬರೆದಿದ್ದಾರೆ.

"ಜಗದ್ವಂದ್ಯನಾದ ಮಹಾತ್ಮಗಾಂಧಿಯು ಪವಿತ್ರವಾದ ಸಾಬರಮತಿ ತೀರದ ಮೇಲೆ ನಿಂತು ೧೨ನೇ ತಾರೀಖಿನ ದಿವಸ ರಣಭೇರಿಯನ್ನು ಹೊಡೆದು, ಈ ಸರಕಾರದ ಕೂಡಾ ಅಹಿಂಸಾತ್ಮಕ ಸ್ವಾತಂತ್ರ್ಯ ಯುದ್ಧವನ್ನು ಹೂಡಿರುತ್ತೇನೆಂದು ಉದ್ಘೋಷಿಸಿದ್ದಾನೆ. ಅವನು ಹೂಡಿದ್ದು ಅಹಿಂಸಾತ್ಮಕ ಯುದ್ಧವು ಭಾರತಾಂಬೆಯ ಪಾದ ಶೃಂಗಲೆಗಳನ್ನು ಕಡಿದು ಚಲ್ಲಲಿಕ್ಕೆ ಹೂಡಿದ ಯುದ್ಧವು. ಅದು ದಾಸ್ಯ ಶೃಂಗಲೆಯಲ್ಲಿ ಕೊಳೆಯುತ್ತ ಬಿದ್ದ ೩೩ ಕೋಟಿ ಜನರನ್ನು ಉದ್ಧಾರಮಾಡುವದಕ್ಕಾಗಿ ಹೂಡಿದ ಯುದ್ಧವು. ಅದು ದಾರಿದ್ರ್ಯ ಧಾರುಣವಾದ ಕಷ್ಟಗಳನ್ನು ಸಹಿಸುತ್ತಿರುವ ದೀನರಾದಂಥ. ಕಂಗಾಲಾದಂಥ. ಮುಖಹೀನರಾದಂಥ. ದುರ್ಬಲರಾದಂಥ. ಪರಕೀಯರ ಹೊಡೆತಕ್ಕೆ ಸಿಕ್ಕು ಜರ್ಜರಿತರಾದಂಥ ಆ

ಹಿಂದೂ ಜನರನ್ನು ಮೇಲಕ್ಕೆತ್ತುವ ಸಲುವಾಗಿ ಹೂಡಿದ ಯುದ್ಧವು. ಅದು ಆದಿ ಭೌತಿಕ ಸುಖಲಾಸಿಗಳಿಗೆ ಬಲಿ ಬಿದ್ದು ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ರಕ್ತದ ಕಾಲುವೆಗಳನ್ನು ಹರಿಸಲಿಕ್ಕೂ, ಮಾನವ ಜಾತಿಯ ಕೊಲೆಯನ್ನು ಮಾಡಲಿಕ್ಕೂ ಪ್ರೋತ್ಸಾಹಿಸುವಂಥ ಪಾಶ್ಚಾತ್ಯ ಸಂಸ್ಕೃತಿಯ ಮೋಹಜಾಲವನ್ನು ಆರ್ಯ ಸಂಸ್ಕೃತಿಯೆಂಬ ಖಡ್ಗದಿಂದ ಕತ್ತರಿಸಿ, ಇಡೀ ಜಗತ್ತಿನಲ್ಲಿ ಶಾಂತಿಯನ್ನುಂಟು ಮಾಡುವ ಸಲುವಾಗಿ ಹೂಡಿದ ಘನಘೋರ ಯುದ್ಧವು.

ಸತ್ಯ, ಅಹಿಂಸಾ, ಕಾಲಾತೀತ ತತ್ವಗಳು ಪ್ರಪಂಚದಲ್ಲಿ ಸ್ಥಾಪಿಸಲ್ಪಡಬೇಕಾದರೆ ಶಾಂತತೆಯು ಅವಶ್ಯಕವು. ಜಗತ್ತಿನಲ್ಲಿ ಶಾಂತತೆ ಉಂಟಾಗಬೇಕಾದರೆ ಭರತಖಂಡವು ಸ್ವತಂತ್ರವಾಗಲಿಕ್ಕೆ ಬೇಕು. ಮಹಾತ್ಮ ಗಾಂಧಿಯು ಮಾಡುವ ಸಿಂಹನಾದವು ಆರು ಸಾವಿರ ಮೈಲುಗಳಾಚೆಗೆ ಹೋಗಿ ಅನೇಕ ಜನಗಳ ಹೃದಯಗಳನ್ನು ಭೇದಿಸಿದ್ದರೂ ಕನ್ನಡ ಕಡುಗಲಿಗಳ ಕಿವಿಗೆ ಇನ್ನೂ ಕೇಳಿಸಿಲ್ಲವೆ? ಈ ಸಮಯದಲ್ಲಿ ಹಿಂದುಳಿದು ಕಡೆತನಕ ಹಿಂಮುಳಿದವರಾಗಬೇಡಿರಿ. ಅನೇಕ ಶತಮಾನಗಳವರೆಗೆ ದೇಶಾಭಿಮಾನವಾಗಿ ಪ್ರಕಾಶಿಸಿದಂಥ ಕರ್ನಾಟಕ ಮಾತೆಯ ಮೋರೆಗೆ ಈ ಹೊತ್ತು ಕಪ್ಪು ಹಚ್ಚಬೇಡಿರಿ."[೩೯]

೩. 'ಕನ್ನಡಿಗ' ಪತ್ರಿಕೆ

ಕರ್ನಾಟಕತ್ವ ರಾಷ್ಟ್ರೀಯತ್ವಕ್ಕೆ ವಿರುದ್ಧ ಎಂಬ ಕೆಲವರ ಅಭಿಪ್ರಾಯಕ್ಕೆ ಉತ್ತರ ನೀಡಲೆಂದು 'ಕನ್ನಡಿಗ' ವಾರಪತ್ರಿಕೆಯನ್ನು ೧೯೨೫ ರಿಂದ ಆರಂಭಿಸಲಾಯಿತು. "ಎಲ್ಲಿ ನೋಡಿದರಲ್ಲಿ ಮಹಾರಾಷ್ಟ್ರದ ಕೀರ್ತಿ, ಎಲ್ಲಿ ನೋಡಿದರಲ್ಲಿ ಮಹಾರಾಷ್ಟ್ರದ ಧರ್ತಿ" ಎಂಬ ಶಾಂತ ಕವಿಗಳ ವೇದನೆಗೆ ಉತ್ತರವಾಗಿ.

"ಎದ್ದರೆ ಕನ್ನಡ, ಕುಳಿತರೆ ಕನ್ನಡ, ನುಡಿದರೆ ಕನ್ನಡವು ।
ಹೃದ್ಯವು ಕನ್ನಡ, ಉದ್ಯಮ ಕನ್ನಡ, ಕನ್ನಡ ಕನ್ನಡವು ॥
ಕನಸು ಮನಸಿನೊಳು ಕನ್ನಡ ಕನ್ನಡ, ನಿದ್ದೆಯು ಕನ್ನಡವು ।
ತಿನಿಸು ಕನ್ನಡವು ಜೀವಿತ ಕನ್ನಡ – ಎಲ್ಲವೂ ಕನ್ನಡವು ॥

ಎಂಬ ಸಗರ ಕವಿಯ ನುಡಿಯೊಂದನ್ನು ಎತ್ತಿಕೊಂಡು ಪತ್ರಿಕೆಯ ಶಿರೋಲೇಖವಾಗಿ ಮಾಡಲು, ಪತ್ರಿಕೆ ಆರಂಭವಾದ ಒಂದು ತಿಂಗಳಲ್ಲೆ ಈ ಹಾಡು ಮನೆಮನೆಗಳಲ್ಲಿ ಪ್ರತಿಧ್ವನಿತವಾಯಿತು. ಬೆಳಗಾವಿಯಲ್ಲಿ ಸ್ಥಾಪನೆಗೊಂಡ 'ಕರ್ನಾಟಕ ಏಕೀಕರಣ ಸಭೆ'ಯ ಮುಖಪತ್ರವೆಂದು ಪತ್ರಿಕೆ ನಡೆಯಿತು. ಮುಗುಳಿ, ಸ.ಸ. ಮಾಳವಾಡ, ಕೃಷ್ಣಮೂರ್ತಿ ಪುರಾಣಿಕ, ಸಿಂಪಿ ಲಿಂಗಣ್ಣ ಮುಂತಾದ ಅನೇಕ ಲೇಖಕರು 'ಕನ್ನಡಿಗ'ವೇ ತಮ್ಮ ಸಾಹಿತ್ಯ ಸೇವೆಗೆ ಅನುವುಮಾಡಿಕೊಟ್ಟ ಪತ್ರಿಕೆಯೆಂದು ಸಾರ್ವಜನಿಕವಾಗಿ ಹೇಳಿದ್ದಾರೆ. ಅನಕೃ, ಬೆಲೂರು, ಕೇಶವದಾಸ, ಸಿದ್ದವ್ವನ ಹಳ್ಳಿ ಕೃಷ್ಣಶರ್ಮ, ಟಿ.ಟಿ. ಶರ್ಮಾ, ಆಲೂರು ವೆಂಕಟರಾಯರು, ಹೈದ್ರಾಬಾದಿನ ಚಿಮ್ಮಲಗಿ, ಮದ್ರಾಸಿನ ಬೆನಗಲ್ ರಾಮರಾವ್, ಮಂಗಳೂರಿನ ಜಿ.

ನಾಗರಾಜ ಹೆಗ್ಗಡೆ, ಉಡಪಿಯ ಫಣಿಯಾಡಿ ಇವರೆಲ್ಲ ಪತ್ರಿಕೆಗೆ ಆತ್ಮೀಯ ಬೆಂಬಲ ನೀಡಿದರು. ಆಲೂರು, ಬೇಂದ್ರೆ, ಮುದವೀಡು, ಮಧುರ ಚೆನ್ನ, ಕೊಣ್ಣೂರ ಹನಮಂತರಾವ್ ಇವರು ಆಗಾಗ ಲೇಖನ ಬರೆಯುತ್ತಿದ್ದರು ಎಂದು ಕನ್ನಡಿಗದ ಸಂಪಾದಕರಾದ ಮಂಗಳವೇಡೆ ಶ್ರೀನಿವಾಸ ಪತ್ರಿಕೆ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

"ಕಾಯಿದೆ ಭಂಗ ಚಳವಳಿಯ ತಾಜಾ ಸುದ್ದಿಗಳನ್ನು ಮುದ್ರಿಸಲು 'ಕನ್ನಡಿಗ' ದಿನಪತ್ರಿಕೆಗೆ ೨೨–೦೩–೧೯೩೦ರಿಂದ ಅಸೋಸಿಯೇಟೆಡ್ ಪ್ರೆಸ್‌ನ ಸಂಕ್ಷಿಪ್ತ ತಂತಿಗಳನ್ನು (ವರ್ನ್ಯಾಕ್ಯುಲರ್ ಸಮ್ಮರಿ ಸರ್ವಿಸ್) ತರಿಸುವ ವ್ಯವಸ್ಥೆ ಮಾಡಿದೆ. ಬೇರೆ ಕನ್ನಡ ಪತ್ರಿಕೆಗಳಿಗೆ ಆಗ ಈ ವ್ಯವಸ್ಥೆ ಇರಲಿಲ್ಲ. ಇದರಿಂದ ಪತ್ರಿಕೆ ಪ್ರಸಾರ ಹೆಚ್ಚಿತು. ಕೊನೆಗೆ ೨೪–೦೭–೧೯೩೦ರಂದು ಪತ್ರಿಕೆಯನ್ನು ಸರಕಾರದ ಆಜ್ಞೆಯಂತೆ ನಿಲ್ಲಿಸಲಾಯಿತು. ಮಂಗಳವೇಡೆಯವರು ಜೈಲಿನಿಂದ ಬಂದ ನಂತರ ಪತ್ರಿಕೆಯ ಪುನರುಜ್ಜೀವನಕ್ಕಾಗಿ ಅದನ್ನು ಧಾರವಾಡಕ್ಕೆ ಒಯ್ದು. ೨೪–೦೮–೧೯೩೩ ರಿಂದ ಅದು ಆಲೂರರ ಸಂಪಾದಕತ್ವದಲ್ಲಿ ಕೆಲದಿನ ನಡೆದು ಮುಂದೆ ಬೆಳಗಾವಿಯ 'ಸಂಯುಕ್ತ ಕರ್ನಾಟಕ'ದಲ್ಲಿ ಲೀನವಾಯಿತು. 'ಇದರಲ್ಲಿ ಕನ್ನಡಿಗವೂ ಸಮಾವೇಶವಾಗಿದೆ' ಎಂದು ಸಂಯುಕ್ತ ಕರ್ನಾಟಕದ ಶೀರ್ಷಿಕೆಯ ಜೊತೆ ಅನೇಕ ವರ್ಷ ಮುದ್ರಿಸಲಾಗುತ್ತಿತ್ತು."[೬೦] ಗಲಗಲಿಯ ರಾಷ್ಟ್ರೀಯ ಚಳವಳಿ ಒಂದು ಘಟನೆಯನ್ನು 'ಗಲಗಲಿಯು ಬಾರ್ಡೋಲಿಯಾಯ್ತು' ಎಂಬ ಶಿರೋನಾಮೆಯಿಂದ ಪ್ರಕಟಿಸಿತು.

ಚಡಚಣ ರೈತರಿಗೆ ಸರ್ಕಾರದಿಂದ ಅಪಮಾನ

೧೯೨೬–೨೭ರ ಸುಮಾರಿಗೆ ಇಂಡಿ ತಾಲೂಕಿನ ಹಲವು ಹಳ್ಳಿಗಳು ಬರಗಾಲಕ್ಕೆ ಈಡಾಗಿದ್ದವು. ತಾಲೂಕಿನ ಅಧಿಕಾರಿಗಳು ಹಳ್ಳಿಗಳನ್ನು ಸಂದರ್ಶಿಸಲು ಹೊರಟಾಗ ಚಡಚಣ ಗ್ರಾಮಕ್ಕೆ ಬಂದರು. ಆಗ ಜನ ತಮ್ಮ ಕಷ್ಟ ಹೇಳಿಕೊಂಡರು. ಅಧಿಕಾರಿಗಳ ತಲೆ ಚೌಕಟ್ಟು ಕಳಚಿ ರೈತರ ಮೇಲೆ ಅಪಶಬ್ಧಗಳ ಸುರಿಮಳೆಯೇ ಆಯಿತು. ಮುಂದೆ ನಾಲ್ಕು ದಿನಗಳಲ್ಲಿ 'ಚಡಚಣ ರೈತರಿಗೆ ಸರಕಾರದಿಂದ ಅಪಮಾನ' ಎನ್ನುವ ದಪ್ಪಕ್ಷರಗಳು 'ಕನ್ನಡಿಗ' ಪತ್ರಿಕೆಯಲ್ಲಿ ಕಾಣಿಸಿಕೊಂಡವು. ಸಂಪಾದಕರು ಈ ಬಗ್ಗೆ ಉಗ್ರಲೇಖನವನ್ನೂ ಬರೆದರು. ಮರುದಿನವೇ ಜಿಲ್ಲಾಧಿಕಾರಿಗಳು ಚಡಚಣ ಚಾವಡಿಯಲ್ಲಿ ಕಾಣಿಸಿಕೊಂಡರು. " 'ನಾನು ಚಡಚಣ ರೈತರ ಕ್ಷಮೆ ಕೇಳುವೆ' ಎಂದು ಕೈಮುಗಿದರು. ಮರುವಾರವೇ ಕನ್ನಡಿಗ ಪತ್ರಿಕೆಯಲ್ಲಿ 'ಚಡಚಣ ರೈತರಿಗೆ ಸರಕಾರ ಬಗ್ಗಿತು' ಎಂದು ದಪ್ಪಕ್ಷರದಲ್ಲಿ ಮುಖಪುಟ ಸುದ್ದಿ ಬಂದಿತು. ಸಂಪಾದಕೀಯವೂ ಇತ್ತು. ರೈತರಾದವರಿಗೆ ಇದು ಅಭಿಮಾನದ ಸಂಗತಿಯಾಗಿದ್ದರೆ. ಚಡಚಣದವರಿಗೆ ಮಹಾವಿಜಯದ ಅಧಿಕೃತ ಲೇಖನವೇ ಆಗಿತ್ತು. ಇದರ ಹಿಂದೆ ಊರಲ್ಲಿ ಭಾರೀ ರಾಷ್ಟ್ರೀಯ ಚಟುಚಟಿಕೆ ನಡೆಯಲು ನಾಂದಿಯಾಯಿತು ಎಂದು ಸಿಂಪಿ ಲಿಂಗಣ್ಣ ಹೇಳಿದ್ದಾರೆ."[೬೧]

ರೈತರ ಕಷ್ಟ, ಅಧಿಕಾರಿಗಳ ದರ್ಪ, ಲಂಚಕೋರತನ, ಸಾರಿಗೆ, ರೈಲು ಅಂಚೆ ವ್ಯವಸ್ಥೆಯ ಸುಧಾರಣೆ ಈ ರೀತಿ ಜನರ ಕಷ್ಟಗಳಿಗೆ ಸ್ಪಂದಿಸುವದರ ಜೊತೆ ರಾಷ್ಟ್ರೀಯತೆ ಕನ್ನಡಾಭಿಮಾನಗಳ ಜಾಗೃತಿಗೂ 'ಕನ್ನಡಿಗ ಶ್ರಮಿಸಿತು'. ಬಾಗಲಕೋಟದಲ್ಲಿ ವೃತ್ತ ಪತ್ರಿಕೆಗಳು ಚಳವಳಿಯ ಕಾಲದಲ್ಲಿ ಹೆಚ್ಚು ಪ್ರಭಾವಿತವಾಗಿದ್ದವು ಎಂಬುದು ಕನ್ನಡಿಗ, ಕರ್ನಾಟಕ ವೈಭವ, ಚಂದ್ರಿಕಾ, ಪತ್ರಿಕೆಗಳಿಂದ ತಿಳಿಯುತ್ತದೆ.

೧೦.೬ ಕಾವ್ಯಗಳಲ್ಲಿ ಸ್ವಾತಂತ್ರ್ಯ ಚಳವಳಿ

ಹಲಗಲಿ ಬೇಡರ ಲಾವಣಿ

ಪಲ್ಲಾ

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡುದ ಜನಕ
ಶಿತ್ತಿನ ಮಂದಿ ಭಟರ ಹಲಗಲಿ ಮುಟ್ಟಲಿಲ್ಲ ದಡಕ

೧ನೇ ನುಡಿ

ವಿಲಾತಿಯಿಂದ ಹುಕುಮ ಕಳವಿದರ ಕಂಪಣಿ ಸರಕಾರಾ
ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ
ಕತ್ತಿಕಟಾರಿ ಕೈ-ಚೂರಿ ಬಾಕಂ ಗುರ್ದಿ ಸುರಾಯಿ ಚಕ್ರಾ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲಿನವರಾ
ಪಟಾತ ಪಿಸ್ತೂಲ ಕರುಲಿ ತೇಗಾ ಚಾಪಗೊಡ್ಲಿ ಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದಗುಂಡ ಬಿಡಬ್ಯಾಡರಿ ಚೂರಾ
ಮುಚ್ಚಿ ಇಟ್ಟವರಿಗೆ ಮೂರು ವರ್ಷ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರ ॥ಚ್ಯಾಲ॥

ಬೇಡಿದ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು
ವತ್ನಕೊಡತೇವ ಅನ್ನರಿ ವೊಂದ ಒಂದು
ತಂದ ಕೊಡತಾರ ತಮ್ಮ ಕಂಸಿಲಿಂದು
ಬಂದಿತು ಹುಕುಮ ಹೀಂಗ್ ಎಂದು
ಡಣ್ಗುರ ಸಾರಿದರ ಮುಂದು
ಶೋರ ಸಿಪಾಯಿಜನರ ತಾವು ತಿಳಿದು
ಅಳತಾರ ಕಣ್ಣಿಗೆ ನೀರ ತಂದು
ಬಹಳ ಚಿಂತಿಯ್ ಆಗಿ ಮುಖದಿಂದ ಆವರು ಬಿದ್ದರ್ – ಅಣ್ಣ ನೆಲಕ

೨ನೇ ನುಡಿ

ಕೇಳಂತ ಹಂಕಂಮಾ ಕೆಳವರ ತಂದ ಕಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟರವೊಳಗ
ಸಾಲ ಸಮದ ಮಾಡಿ ದನ-ಕರ ಮಾರಿ ತಂದಿನ್ನಿ ಹಬ್ಬದಾಗ
ನೋಡನೋಡ ಹ್ಯಾಂಗೆ ಕೊಡುನ ಅಂತ ಹುಂಗಿದ್ ಇಟ್ಟರ ನೆಲದಾಗ
ಶೂರ ಚಟೆಗಾರು ಜಾಯಿತ ಸಾಹೇಬ ಬಂದಾರ ಆವಗಾಗ
ಸಂದಿಯಗೊಂದಿವೊಂದು ಉಳಿಯದ ಅಂಗ ಹೊಕ್ಕ ಹುಡಿಕೆರ ಮನಿಯಾಗ
ತೆಪ್ಪಿತ ಉಪಾಯಿ ಇನ್ನ ಮಾತರ ಮಾಡುನ ಅಂತರ ಹ್ಯಾಂಗ
ವೊಬ್ಬರಕ್ ಒಬ್ಬರ ಜ್ಯಾಡ ಹೇಳತರ ವರ್ಮ ಸಾಧಿಸಿದ್ ಹಾಂಗ್ ॥ ಜ್ಯಾಲ ॥
ಜ್ಯಾಡಿಸಿ ಹೋದವೊಯಲ್ಲಾ
ನಾಡ್ ಒಳಗೆಯೇನು ಉಳಿಲಿಲ್ಲಾ
ಅಜ್ಜಮುತ್ತೆರ ಹಿಡುವ ಪಿಸ್ತೂಲ
ಕಾಸದ್ ಓದರ ಕತ್ತಿಯ ಡಾಲಾ
ಕವಚ ಬೆಳ್ಳಿಯ ಮಕಮಾಲಾ
ರತ್ನದ ಹಿಡಿಕಿವ ಹೋದವು ಯೆಲ್ಲಾ
ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

೩ನೇ ನುಡಿ

ಹಲ್ಲುಕಿತ್ತಿದಾ ಹಾಂವಿನ ಪರಿಯು ನಮಗ ಆದಿತ್ ಅಲ್ಲಾ
ರಂಡಿ ಮುಸಂಕ ಹಾಕಿ ತಿರುಗಿದರ ನಮ ಮಾನ ಉಳಿಯುವದಿಲ್ಲಾ
ಮಗ್ಗಲದಾಗಿನ ಹೆಣತಿ ಕೊಟ್ ಅಂಗ ಅತಿ ಹೇಡಿ ಅದೇವ್ ಅಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತ್ ಅಲ್ಲಾ
ಸಾವಕಾರ ನಮ್ಮ ಜೀವ ಹೋದಿತ್ ಅಂತ ಚಿಂತಿ ಮಾಡೇರ್ ಅಲ್ಲಾ
ಹಗಲಿ ಮನಿ ಹೊಕ್ಕ ಹಣಾವೋದರ ಕೇಳವರ್ ಯಾರ್ ಇಲ್ಲಾ
ಪುಂಡ ಪಾಳೆಗಾರ ಪಚ್ಚ್ಯಾ ವಜೀರರು ಪಂತ ಹಿಡಿಯಲಿಲ್ಲಾ
ದಂಡನ್ ಆಳುವ ಧೊರಿ ದೌಲತರ ಅಂಜಿ ಕುಳಿತರಲ್ಲಾ
ದೇವರ ತಂದ ಪಡಿಪಾಟಾ
ಚಿಂತಿ ಹತ್ತಿ ಅದರೋ ನಷ್ಟಾ
ಅಧಿಕಾರ ಉಳಿಯಲಿಲ್ಲಯೆಳ್ಳ್ ಅಷ್ಟಾ
ಕೇಡಗಾಲ ಬಂದಿತು ಕನಿ ಕಷ್ಟಾ

ಹೆಂಗಸ್ ಆಗಿ ಶೀರಿಯ ವುಟ್ಟಾ
ಸೋಂಡ್ ಒಣಗಿ ಅದೀತೋ ಬೊಬ್ಬಾಟಾ
ಆದ್ ಹ್ಯಾಂಗ್ ಅತಿ ಸ್ತ್ರೀಯರ ಕ್ರೀಡಾದ್ ಆಟಾ
ಭಂಟರಿಗೆ ಬಂದಿತೋ ಬಿಕ್ಕಷ್ಟಾ
ಪಕ್ಕಾ ಕಿತ್ತ ಪಕ್ಷಿಗತಿ ಆಗಿ ಚಿಂತಿ ಆದರ ಮನಕ

೪ನೇ ನುಡಿ

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜೆರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು
ಕೈನ ಹತಾರ ಕೊಡಬಾರದೊ ನಾವು ನಾಲ್ಕುಮಂದಿ ಜತ್ತು
ಹತಾರ ಹೋದ್ ಇಂದ ಬಾರದ ನಮ್ಮ ಜೀವ ಸತ್ ಓಗುದು ಗೊತ್ತು
ಸುತ್ತಿನ ಹಳ್ಳಿ ಮತ್ತ ದೊರಿಗಳಿಗೆ ತಿಳಶೇರ ಹೀಂಗ್ ಅಂತು
ಮಾಡರಿ ಜಗಳಾ ಕೂಡ್ ಇರತೇವು ಕುಮುಕಿ ಯಾವತ್ತು
ವೊಳಗಿಂದ ಒಳಗ ವಚನ ಕೊಟ್ಟರೊ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಸಿಪಾಯಿ ನೆಲಕ ಚಿತ್ತು
ದುಃಖದಿಂದ ಅವರು ಅಲ್ಲಿಗ್ ಹೋಗಿ
ಸಾಹೇಬಗ ಹೇಳಿದರ ಕೂಗಿ
ಕೇಳಿ ಸಾಹೇಬ ಯೆದ್ದ ಸಿಟ್ಟಿಗಿ
ತಿರಿಗಿ ಹೋದ ಆವಾಗ ಕಲಾದಗಿ
ಕರ್ಸಿ ಕೃಷ್ಣನಾಯಕಗೌಡ ಕುಂದರಗಿ
ಕರಿಶ್ಯಾನ ಸಂದಾನಕ್ಕೆ ಆಗಿ ॥ಯೇರ॥
ಹಟಾ ಮಾಡಬಾರದು ನಿಮ್ಮ ಹತರಾ ಕೊಡಿರಿ ಸಾಹೇಬನ್ ಈಶಕ

೫ನೇ ನುಡಿ

ಹತಾರ ಕೊಡಲಿಕೆ ಹೆಂಗಸ್ ಆಗಿ ಬಳಿಯ್ ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವಹೋದರು ಕೊಡುದಿಲ್ಲ ಸುಮ್ಮನ್ ಹೋಗರಿ ಈಗ
ಅಂದ ಮಾತಯೆಲ್ಲ ಬಂದ ಹೇಳಿದಾಗ ಆವಾಗ ಸಾಹೆಬಗ
ಶಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮಕೊಟ್ಟರ್ ಆಗ
ಕುದುರಿಯಮಂದಿ ಕೂಡಿ ಮಟ್ಟಿತೊ ಹಲಗಲಿಸ್ಥಳದ ಮೇಗ
ವೊಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿ ಮಳಿ ಸುರದ ಅಂಗ
ಹೊರಗಿನ ಮಂದಿ ಗುಂಡಹತ್ತಿಕೆರ ತಿರಿಗೆರ ಆವಾಗ

ಕಾಗದ ಬರದ ಕಳವೆರ ಬೇಗನ ದಂಡ ಬರಲ್ ಎಂತ ಹೀಂಗ ॥ಜ್ಯಾಲ॥
ದಂಡ ಬಂತ ನೋಡ ತಯಾರ್ ಆಗಿ
ಜಲದ ಮಾಡಿ ಬಂತ ಹಲಗಲಿಗಿ
ಅರತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುತ್ತಿಗಿ
ಗುಂಡ ಹೊಡದಾರ ವಿಪರೀತ ಸೂರಿ ಆಗಿ
ಅಂಜಿ ವೋಡಾಕ ಹತ್ತಿತ ಮುದ ಆಗಿ
ಬೆನ್ನ ಹತ್ತಿ ನೋಡಿದಾರ ಇವರ್ ಆಗಿ
ಬಿದ್ದಾವ ಹೆಣಗೋಳು ಸೂರಿ ಆಗಿ ॥ಯೇರ॥
ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲಯಾತ್ ಏತಕ

೬ನೇ ನುಡಿ

ಬೆನ್ನ ಹತ್ತಿ ತಿರಿತಿರಿವಿ ಕಡದರೋ ಯೇನು ಉಳಿಯದ್ ಅಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದಹಾಂಗ
ಕವಾತ ಫೈರಾ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತೂಲ ಬಾಕ ನಡವಿನಾಗ
ಸಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್ ಅಂಗ
ನಡುಗಿತು ಬ್ಯಾಡಕಿಕೆನ–ಧೂಳ ಹರಿದ್ – ಆಂಗ ಕಡದಾಟವು ಹ್ಯಾಂಗ
ಕೇಡ–ಗಾಲ ಬಂದಿತ ನಡವಿ ಶಿಕ್ಕರೊ ಬಿಡಸವರ್–ಯಾರ್–ಈಗ
ಚಟಿಕಾರರು ಚಾಟಿ ಮಡುತ ನಡದರ ಗುಡದಾಗ ॥ಇಳುವ॥
ಅಗಸಿಗೆ ಬಂದುನಿಂತಿತು
ಹೆಬಲಕ್–ಸಾಹೇಬಂದು ತಾವು ನಿಂತು
ಹೇಳತಾರ ಬುದ್ಧಿಯ ಮಾತು
ಕೊಡುತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್ತಾನೀವು ಸತ್ತು ॥ಯೇರ॥
ಯೆಂಬು ಮಾತಿಗೆ ನಂಬಿಗೆ ಸಾಲದ ಹಣಮ ಬಂದ ಮುಂದಕ

೭ನೇ ನುಡಿ

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕೊರೊಯಿವರಾ
ಇಸವಸ–ಘಾತಾ ಮಾಡಿ ನಂಬಿಗಿಲೆ ಮಾಡತಾರು ಫೀತುರಾ
ಮಾಸ–ಮಾಡಿ–ಬಲ–ದೇಶ ತಗೋತರ ಮುಂದ ನಮಗ ಗೋರಾ

ಅಂದ ಹೊಡದಾರೊವೊಂದು ಗುಂಡಿಗೆ ಆದ ಸಾಹೇಬ ಟಾರಾ
ಕಾರ್-ಸಾಹೇಬ ಬೆಂಕಿ-ಚೂರ ಆಗಿ ತಾನುಲೂಟಿ ಮಾಡ್-ಅಂದವೂರ
ಹುರುಪಿಲಿ ಹೊಡದರ ಮಳಿ ಆದ ಹಾಂಗ ಗುಂಡಸುರದವು ಬರಪೂರಾ
ಹಣಮ ಹೇಳತನ ಗುಂಡು ಹೊಡದಕೆರ ಕೆಡವುನ್-ಅಷ್ಟು ಬಾರಾ
ಮುನ್-ನೂರ ಮಂದಿಯನ್ನ ಮೇಲೆ ಬಿಟ್ಟ ಆಗ ನೋಡಿರಿ ಜೋರಾ॥ಚ್ಯಾಲ॥
ಭೀಮನು ಇವರಿಗೆ ನಿಂತಾ
ಐ-ನೂರ ಮಂದಿಗೆ ಮಲತಾ
ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ
ರಾಮನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ
ಸಾವಿರ ಆಳಿಗೆವೊಬ್ಬ ಮಲತಾ
ಕೂಗುತಾನೊ ಕಡಿ-ಕಡಿರ್ ಎಂತಾ ॥ಯೇರ॥
ನಾಲ್ಕು ಮಂದಿ ಹೀಂಗ ಕಡದ ಸತ್ತರೊ ಭಂಟರ್-ಅನಸೆರೆ ಜನಕ

೮ನೇ ನುಡಿ

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮ ಬಿದ್ದನೆಲಕ
ಚೀರಿ-ಆಡುತ ಸುತ್ತಗಟ್ಟಿತೊ ಅಂಜಿ-ಕೊಂಡ ಜೀವಕ
ಶೂರವೊಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಯೇರಿ ಬರು ಕುದುರಿ ಕಾಲ ಕಡದನೊ ಸ್ವಾರ ಬಿದ್ದ ನೆಲಕ
ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರು ಮಂದಿ ಶಿರಕ
ಆರ ಕುದರಿಯ ಕಡದ ಸಿಡದಳೊ ಬಾಲನ ಸೊರಾಯಕ ॥ಚ್ಯಾಲ॥
ಯಾರ-ಯಾರು ಇಲ್ಲದ್ – ಅದೀತು
ಊರ್ – ಎಲ್ಲಾ ಲೂಟಿ ಆಗಿ ಹೋತು
ಮಂದಿ ಮನಿ ಹೊಕ್ಕ ಹುಡುಕಿತು
ದನ-ಕರಾ ಲಯಾ ಅದೀತು
ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಚ್ಯಾರ ವೂರ ಸುಟ್ಟಿತು
ನಷ್ಟ ಆತಿ ನೋಡಿರಿ ಈವತ್ತು
ನಾ ಹೇಳತನ ಈ ಮಾತು ॥ಯೇರ॥

ಇಷ್ಟ-ಎಲ್ಲ-ಅಳವ್-ಆಗಿ ಹೋದಿತೊ ಮಟ್ಟಲಿಲ್ಲ ಯಾತ್-ಎತಕ

೯ನೇ ನುಡಿ

ಕತ್ತಿ ಕುದುರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಬಂಗಾರಾ - ಹರಳಿನ್ - ಉಂಗರಾ ಹೊನ್ನ - ಉಂಗರ ಗೋಲಾ
ಸರಗಿ ಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡವಿನ - ಡಾಬಾ ನಡಕಟ್ಟು ರುಮಾಲಾ
ಕುಬಶಾ ಶೀರಿ ಹಪ್ಪಳ ಶಾಂಡಿಗಿ ಕಂರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಂಡ-ಕಬ್ಬಿಣಾ ಮಸುರ ಬೆಣ್ಣೆ ಹಾಲಾ
ಉಪ್ಪ ಯೆಣ್ಣಿ ಅರಿಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಗಿ ಮಂಗಳಸೂತ್ರಾ ತಕೊಂಡ ಹೋದರ ಬಿಸು-ಕಲ್ಲಾ
ಹಾಳ್-ಆಗಿ ಹೋದಿತೋ ಇಷ್ಟು
ವರ್ಣಿಸಿ ಹೇಳಲು ಎಷ್ಟು
ಯೆಲ್ಲಾ ತಗೊಂಡರೊ ಶಿಕ್ಕ್ - ಅಷ್ಟು
ಸರ್ದ ನಿಂತರೊ ವೂರಿಗೆ ಕೊಳ್ಳಿ ಕೊಟ್ಟು
ಬೂದಿಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳಷ್ಟು
ಕಾಣಸ್ತ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು
ಕುರ್ತಕೋಟಿ ಕಲ್ಮೇಶನ ದಯದಿಂದ ಹೇಳುದ - ಕೇಳುದಕ

ಫ್ಲೀಟರು ಸಂಗ್ರಹಿಸಿದ ಲಾವಣಿ

* ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ. ೧೯೯೧, ಪುಟ. ೫೭

ಹುಟ್ಟುವಳಿಯ ಮೇಲೆ ತೆರಿಗೆ ಹಾಕಿದಾಗ ಹೊರಹೊಮ್ಮಿರ ಲಾವಣಿ

ಏನು ಹೇಳಲಿ ಜನ್ಮದ ಗೋಳಾ
ಇಂಗರಜಿ ಉಪದರ ಹಾದೀತು ಬಹಳಾ
ಬಡವರು ಅಳತಾರೊ ಗಳಾಗಳಾ
ಮಾಡ ತಾರೊ ಚಿಂತಿ ॥
ಕಠಿಣ ಬಡವರದ ತುಂಬೋದು ಹೊಟ್ಟಿ

ಮಾರಿ ಕೊಟ್ಟಾರೊ ನೂಲುವ ರಾಟಿ
ದುಡ್ಡಿನ ಆಶೆ ಹತ್ತಿತ ಸರಕಾರಕ
ಹಲಗೀ ಕುಂಟೆ ರೇಸಮಿ ಪಟ್ಟಿ
ಭಾಂಡೇ ಸಾಮಾನಾ ಜಮಾನು ಪಾಟಿ
ಲೀಲಾವ ಮಾಡಸ್ಯಾರು ಕಿಮ್ಮತ ಕಟ್ಟಿ
ಭಾಳ ಕಟ್ಟಾರಂಣಾ ಸರಕಾರಾ
ಬಡವರು ತಂದಾರ ಕಣ್ಣೀರಾ
ಹೆಂತಾ ವ್ಯಾಳೆ ತಂದಿ ಈಶ್ವರಾ
ನಮಗ ಯಾರದು ಇಲ್ಲಾ ಅದರ್‍ಯಾ

* ಹೊಸಗನ್ನಡದ ಅರುಣೋದಯ 'ಶ್ರೀನಿವಾಸ ಹಾವನೂರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

ಎದ್ದೇಳಿ ಕನ್ನಡಿಗರೇ

ಬನ್ನಿರಿ ಬನ್ನಿರಿ ಕನ್ನಡ ಚಿಣ್ಣರೆ
ಸತ್ಯಾಗ್ರಹಕ್ಕೆ ತೆರಳೋಣ
ಕನ್ನಡ ನಾಡಿನ ಬನ್ನವ ಬಿಂಬಿಸುವ
ಮೊದಲನೆ ಮೆಟ್ಟಿಲು ಏರೋಣ
ನಮ್ಮಯ ನಾಡಿನ ಉಪ್ಪನೆಲ್ಲಾ ತಮದಾಗಿ ಮಾಡಿರುವ
ಆಳರ ಕೈಯ್ಯಿಂ ।
ತಾಳ್ಮೆಯಿಂದಲಿ ।
ಉಪ್ಪನ್ನು ಕಸಿಯಲು ನಾಡಿನ ಯುವಕರು
ಧೈರ್ಯದಿಂದ ಸಾಗೋಣ ॥೧॥

ಭಾರತ ಭೂಮಿಯ ಒಡಲೂಳಗಿರುತಿಹ
ಉಪ್ಪಿನ ಒಡೆಯರು ನಾವೆಲ್ಲ
ನಮ್ಮಯ ಉಪ್ಪನು ನಾವೆ ತಿನ್ನಲು
ಕಪ್ಪನು ನಾಡಿಗನಿಡಬೇಕೆ ?
ಕಾರಣವಿಲ್ಲದೆ ಕರಗಳ ಹೇರಿದ
ಸಪ್ಪಗೆ ಕೂಡ್ರುವದೇತಕ್ಕೆ ?
ಹಿರಿಯರು ಕಿರಿಯರು

ದುರ್ಬಲರೆನ್ನದೆ
ಸರುವರೊಂದಿಗೆ ಭಾರತ ಯಜ್ಞಕೆ
ಆತ್ಮಾತಿಯನ್ನಿಯೋಣ ॥ ೨ ॥

ಯುದ್ಧದ ಭೇರಿಯ ಗರ್ಜನೆ ಕೇಳದೆ
ಕಿವುಡರಾದಿರಾ ನಾಡಿಗರೇ
ಯುದ್ಧದ ತಂಡಕೆ ತಂಡವೆ ಸಾಗಿರೆ
ಷಡು ತರದಿಂ ಕೂಡ್ರುವವರೆ
ಹಿಂದಣ ಹಿರಿಯರು ನಮ್ಮ ನಡತೆಗೆ
ಕುದಿಯಲಾರರೇ ಬಂಧುಗಳೇ
ಹಿಂದಣ ಹಿರಿಯರ
ಸಂತಸ ಗೊಳಿಸಲು
ನಿಮ್ಮಯ ಶಕ್ತಿಯ ತಿಲಕರ್ಪಣವನು
ನೀಡುತ ನಡೆಯಿರಿ ಕಾಳಗಕೆ ॥ ೩ ॥

ಕತ್ತೆಯ ತರದಿಂ ತಿಂದು ಸತ್ತರೆ
ಮಾನವ ಜನ್ಮದ ಸಾರ್ಥಕವೆ
ಮಾತೆಯ ಪಾಕವ ಹರಿದೊಗೆಯಲೆ
ಹೇಡಿಗಳಂತೆ ಕೂಡ್ರುವದೆ
ಕೈದುಗಳಿಲ್ಲದ ಕಾಳಗವಾಡುವ
ಸೊಬಗನು ಕಾಣ್ದವ ಮಾನವನೆ
ಎಲ್ಲಿ ನಿನ್ನಬಾಳು
ಎಲ್ಲಿ, ಎಲ್ಲಾ ಹಾಳು
ಸ್ವಾತಂತ್ರ್ಯವಿಲ್ಲದೆ ಬಾಳೊಂದು ಬಾಳೆ
ಎದ್ದೇಳಿ ಕನ್ನಡಿಗರೇ ॥ ೪ ॥

– ಧಿಟ್ಟ ಕವಿ

* ಕನ್ನಡಿಗ ೦೯/೦೪/೧೯೩೦, ಪುಟ ಸಂ.೩.

ಗಂಗಾಧರರಾಯರು ಕಾರಾಗೃಹಕ್ಕೆ ನಡೆದರು ತರುಣರು ಮಾಡುವದೇನು

ಭಾರತೀಯ ನಿಟ್ಟದಿಟ್ಟಿಯಲಿ
ನಾಡಿನ ಹಿರಿಯರ ನೋಡುತಿರೆ
ಹಿರಿಯರಿಗೆ ಮನ್ನಣೆ ಪಿರಿದಾಗಿ
ಅರಸನ ಅತಿಥಿಗಳಾಗಿಹರು
ಕರಿನಾಡದಂಡನಾಯಕನೂ
ಕಾರಾಗೃಹವನ್ನೆರಿದನು
ಹಿರಿಯನ ಬಾದನ್ಯಡೆಕೊಟ್ಟು
ಹರೆಯ ಹುಡುಗರು ಎದೆಗಟ್ಟು
ಕರಿನಾಡ ಕೀರ್ತಿಯನ್ನುಳಿಸುವಿರೋ ?
ಭಾರತೀಯ ಗುಡಿಯನುಳಿಸುವಿರೋ ॥ ೧ ॥

ಮಾಗಿಯ ಹೊತ್ತದು ಹರತನವು
ಹಾರುತ್ತ ಮುಂದೆನಾಗುವದು
ಸಾಗಿರಿಸತ್ಯದ ಕಾಳಗಕೆ
ಸಾರ್ಥಕವು ನಿಮ್ಮ ಹರೆತನವು
ರಣದಲ್ಲಿ ಮಡಿಯೆ ಕೇಡೆನು
ಹೆಣವಾಗಿ ಜಗತಿಗೆ ಬಾಳುವರೆ
ಮುಂದಾಳು ಜಾರಿ ಹೋಗಿಹನೆಂದು
ಮುಂದಿಟ್ಟುಡಿಯನುಪಿಂತಗೆದು
ರಣಹೇಡಿಗಳೀನಾಡವರು
ಎಂದೆಂಬ ಬಿರುದುಗಳಿಸುವಿರಾ ॥ ೨ ॥

ಕೆಚ್ಚೆದೆಯ ಗಂಡುತನವನ್ನು
ನಿಜ ಸಮರದಲ್ಲಿ ತೋರಿಸಿ
ರೊಚ್ಚಿನ ಕಿಚ್ಚಿದು ಹೊರಗೆದ್ದು
ಹೆಚ್ಚಾಗಿ ನರಗಳಲ್ಲಿ ಹರಿದಾಡಿ
ಸ್ವಾತಂತ್ರ್ಯಮೂರ್ತಿ ಮೋಹನನ
ಪರತತ್ವದಲ್ಲಿ ಸೂಸಾಡಿ

ಭಾರತಿಯ ಭಾವುಟಡಿ ಒಡಮೂಡಿ
ಆಳಸರಸರಲ್ಲಿ ಭಯ ಮೂಡಿ
ಸ್ವಾತಂತ್ರ್ಯ ದೇವಿಗೆ ಕರೆಯಾಗೆ
ಸಾರ್ಥಕವು ನಮ್ಮ ಹರೆತನವು ॥ ೩ ॥

– ಧಿಟ್ಟಕವಿ

ಕನ್ನಡಿಗ ೧೬/೦೪/೧೯೩೦ ಪುಟ ಸಂಖ್ಯೆ.೧೫.

ಮಂಗಲ ನಿಮಗಾಗಲಿ ನಿಮ್ಮಿಂದ ಹಿಂದ ಮಾತೆಗೆ

ಮಂಗಲ ನಿಮಗಾಗಲಿ ನಿಮ್ಮಿಂದ ಹಿಂದ ಮಾತೆಗೆ
ಹಿಂಗಲಿ ಪರತಂತ್ರತೆಯು ರಥಾಂಗಧರನ ಕಬಣದಿ ॥ ಪ ॥
ಸಮರ ಭೂಮಿಗೈದಲಿರುವ ಧೀರ ಕನ್ನಡಿಗರಿಗೆ
ಅಮಿತ ಹರುಷದಿಂದ ರಣಾಂಗಣಕೆ ಧುಮುಕಲಿಹರಿಗೆ ॥ ೧ ॥
ಅಂಕೋಲೆಗೆ ಪಯಣ ಬೆಳಸಿ ಆಂಗ್ಲರೀ ಪ್ರಭುತ್ವದ
ಸಂಕೋಲೆಗಳ ಕಡಿಮೆ ಸುಖವತರುವ ಸಾಹಸಿಗರಿಗೆ ॥ ೨ ॥
ಬಿದ್ದನಾಡಿನುದ್ಧರಿಸಲು ಬದ್ಧ ದೀಕ್ಷರಾದವರಿಗೆ
ಮುದ್ದು ಮೋಹನನ ವಿಶುದ್ಧ ಪದ್ಧತಿಯನು ಬಿಡದವರಿಗೆ ॥ ೩ ॥

– ಧಿಟ್ಟಕವಿ

ಕನ್ನಡಿಗ ೯/೦೪/೧೯೩೦ ಪುಟ ಸಂ.೫.

ಗೆಲವು ಕಟ್ಟಿಟ್ಟದ್ದು

ಭಾರತೀಯ ಬಂಧನವ ಹರಿಯಲಿಕ್ಕೆ
ನಾಡಿನಯುವಕರು ತ್ವೇಷದಲಿ
ಕಾರಾಗೃಹವನ್ನು ಮಿಗೆಲೆಕ್ಕಿಸದೆ
ಉಪ್ಪಿನ ಕಟ್ಟಳೆ ಮುರಿಯಲಿಕ್ಕೆ
ವರ ಶೂರರಂತೆ ನಿಜ ಪ್ರಾಣವನು
ಕೈಯಲ್ಲಿ ಹಿಡಿದು ಸಾಗಿಹರು
ಜೀವಭವ ಹಂಗವನು ಹರಿದರು
ಪ್ರಾಣದ ಭೀತಿಯ ತೊರೆದವರು
ರಣದಲ್ಲಿ ಮಡಿಯೆ ಹೆದರುವವರೆ

ಆಳಾತ್ಮರ ಭೀತಿಗೆ ಬೆಚ್ಚುವರೆ ॥ ೧ ॥
ಶತಕೋಟಿ ಪ್ರಾಣಗಳು ಮರುಮರಗಿ
ಕುಳಿತಲ್ಲಿ ಕುಳಿತು ಬೇಸತ್ತು
ಮತ ಭಾವನೆಗಳೆಲ್ಲ ಕಿತ್ತೊಗೆದು
ರಣರಂಗದಲ್ಲಿ ತೆರಳುತಲಿ
ಪ್ರಾಣ ಪರಿವೆಯ ಹರಿದೊಗೆದು
ಗಾಂಧಿಯ ಸೇವಕರಾಗಿರುವರು
ಗಾಂಧಿಯೆ ಪರದೈವತನೆಂದು
ಬಂಧನ ತೋರಿವ ಹರಿಯೆಂದು
ಮೋಹನನ ಪದ ತಳದಿಹೊರಳಾಗಿ
ಧನ್ಯತೆಯ ವ್ಯಕ್ತಪಡಿಸಿಹರು ॥ ೨ ॥
ದ್ವಾಪರದ ಕೃಷ್ಣ ಪರಮಾತ್ಮ
ತ್ರೇತಾಯುಗದ ಸತ್ಯಶ್ರೀರಾಮ
ಕಲಿಯುಗದಿ ಭಾರತದ ಪರಮಾತ್ಮ
ನಾಗಿಹನು ಧನ್ಯ ಮಹಾತ್ಮ
ದೇವರ ದೇವನು ಮೋಹನನು
ಪೂರ್ತಿಯಗೊಳಿಸುವನು ಕಾರ್ಯವನು
ಹೀಗೆಂದು ಜನರು ಮುಂಬಂದು
ಸಾಕ್ದೆದು ಮನೆಯ ಹಿಂಬಂದು
ಭಾರತೀಯ ಸ್ವಾತಂತ್ರ್ಯಯಾಗಕ್ಕೆ
ಅಹುತಿಗಳಾಗಿ ನಡೆದಿಹರು ॥ ೩ ॥
ಒಟ್ಟೊಂದು ಕಟ್ಟಿನಲಿ ಜಗವೆಲ್ಲ
ಕಟ್ಟಿಟ್ಟು ತಮ್ಮ ಸ್ವಾರ್ಥವನು
ಹಿಟ್ಟಿನ ರೊಟ್ಟಿಯ ಕಾಯುವದಕ್ಕೆ
ಓಟ್ಟಾಗಿ ದಿಟ್ಟತನದಲ್ಲಿ
ಕಟ್ಟನು ಮೆಟ್ಟಲು ಭಾರತೀಯ
ಒಕಟ್ಟೆ ನಮ್ಮ ದೊರೆತನವು
ಕಲ್ಲಾದಮ್ಮಯ ಹೃದಯವನು
ಬೀರುತ ತಾಯಿಯ ಬ್ಯಾಯತಿನು

ಭೀಕರ ಗರ್ಜನೆ ಬೋರ್ಗರೆಯೆ
ಚೂರಾಗಿ ಹರಿಯುವದು ಕಟ್ಟಳೆಯು ॥ ೪ ॥

— ಧಿಟ್ಟಕವಿ

ಕನ್ನಡಿಗ ೨೪/೦೪/೧೯೩೦ ಪುಟ ಸಂಖ್ಯೆ. ೫

ನಮ್ಮ ಕೊಳಗುಳ

ಖಡ್ಗಗಳ ಹೊಳಪಿಲ್ಲ ಕೂರಸಿಯ ಹೊಯ್ಲಿಲ್ಲ
ಗುಂಡುಮದ್ದುಗಳಲ್ಲಿ ನಮ್ಮ ಕೊಳಗಳು
ಮುಂಡೆದಿರುಗಿದ, ತೋಳಬಲುವೆಮಗೆ ಬೇಕಿಲ್ಲ
ರುಂಡಗಳ ಮುಂಡಗಳ ನೆತ್ತರಿನ ಹೊಂಡದಲಿ
ಕತ್ತರಿಸಿ ಕೆಡಹುವರಿಲ್ಲ
ಭಲೆಗಳ ಈಟಿಗಳ
ಕೂರಿತದ ಹೊಳಪಿಲ್ಲ ನಮ್ಮ ಕೊಳಗುಳದಿ ॥ ೧ ॥
ಹುಂಬಶಕ್ತಿಯಬೇಡ, ಒಂಟಿತನ ಬೇಕಮಗೆ
ಕೈದುಗಕಬ್ಬರಬೇಡ, ಮೊಂಡಾಟ ತನವಿರಲಿ
ಚಿತ್ರಹಿಂಸೆಯು ಬೇಡ, ನಾವಹಿಂಸಿಗರಿಹೆವು
ಧಿಟ್ಟ ಎದೆ ನಮಗಿರಲಿ, ಸುಟ್ಟು ಹೋಗಲಿಶಕ್ತಿ
ಮಾನಸಿಕ ಬಲವಿರಲಿ, ಸ್ವಾತಂತ್ರ್ಯ ಧ್ಯೇಯವಿರಲಿ
ಕ್ಷಾತ್ರಿ ವೃತ್ತಿಯಬೇಕೆ ? ಕೊಳಗುಳದಿ ॥ ೨ ॥
ಬಹ್ಮತೇಜ ಮುಂದೆ, ಕ್ಷತ್ರಿಯರಬಲ ಜೊಳ್ಳು
ಭಾಗುವವು ಕೀರಿಟಗಳು, ನಮ್ಮೊಜೆಯೆದುರಿನಲಿ
ಭಾರತೀಗೆ ಬೇಕಿಂದು ಇಂಥ ಸಾಹಸದುರಿಗೆ
ಹುರುಪಳಿಸಿ ಹರಿಗೊಂಡು ಸಾಯಲಿಹ ಬಂಟಣತಿಗರು
ಸ್ವಾರ್ಥ ವೃತ್ತಿಯ ಹರಿದು
ನಿಶ್ಯಸ್ತ್ರದಿಂತರಿದು
ಮಡಿಯಲಿಹ ಬಂಟರ್ರೈ ನಮ್ಮ ಕೊಳಗುಳದಿ ॥ ೪ ॥
ಹಳ್ಳಿಗಳ ಊರುಗಳ ಗಡಿದಾಟಿ ಬನ್ನಿರೈ
ಸಂಸಾರ ಸಾಗರದ ನಾವೇಯನು ಬದಿಗೊತ್ತಿ
ಹೆಂಡಿರನು ಮತ್ತು ಮಕ್ಕಳನು ನೆರೆ ಮರೆತು ಸಾಗಿರೈ
ಭಾರತೀಯ ಶೆರೆಯನ್ನು ಹಂದೊಗೆವಪಣ ಹೂಡಿ

ಹೊಲಗಳನ್ನು ಮನೆಗಳನ್ನು, ಹಲುಸಾದ ಪೈರುಗಳ
ಮರೆತವರು ಕಲೆಯಿರೈ ನಮ್ಮ ಕೊಳಗುಳದಿ ॥ ೫ ॥
ತರುಣ ಹೆಂಡಿರ ಕೂಡ ಸರಸವಾಡುವಕಾಲ
ಜಾರಿಹುದು ನಾಡಿಗರೆ, ಎಚ್ಚರಾಗಿರಿ ಇನ್ನು
ಪ್ರೇಮಮಯರೇ ನಿಮ್ಮ ಪ್ರೇಮಗೀತೆಯು ಬೇಡ
ನಾಡಿನಂಗಳಕಿಂದು ಬೆಂಕಿಬಿದ್ದಿಹದು
ವೀಳ್ಯೆಯಂ ಕೈಗೊಟ್ಟು
ಹರಿಸಿ ಕೈ ಯುವತಿಯರೆ ನಿಮ್ಮ ರಾಯರನು ॥ ೬ ॥
ನಿಮ್ಮ ಎದೆದರ್ಪದಿಂದರಿಯ ದೈರ್ಯವು ಕುಗ್ಗಿ
ಗಡಗಡನೆ ನಡುಗಲೈ ನಿಮ್ಮ ಕೈ ಮೇಲಾಗಲಿ
ಹೊಡೆದಾಡಿ ಮಡಿದರೇಂದು ಕೆಡರೇಸು ನಾಡಿಗರೆ
ವೀರಸ್ವಗ್ಗದ ರಾಣಿ ಪೂಮಾಲೆ ತೊಡಿಸುವಳು
ಸತ್ತ ಬಿದ್ದರೆ ಸಗ್ಗ, ಬದಕಿ ಉಳಿದರೆ ಸಾಕು ನಿಮ್ಮ
ದೈವವೇ ದೈವ ಹೇಡಿಗಳು ಕಾಣ್ಬುದೇನು ? ॥ ೭ ॥
ಶಾಂತತೆಯೆ ನಮ್ಮಗುರಿ, ಮಹಾತ್ಮನೆ ನಮ್ಮಹರಿ
ಸಾಹಸವೆ ಭಕ್ತಿಲಿತ ಭಾರತೀಯ ಪರದೈವವು
ಕೆಚ್ಚೆದೆಯ ಬಿಲ್ಲಿನಲಿ ಆಗ್ರಹದ ಕೂರಂಬು
ಶಾಚಿತತೆಯ ಟಂಕಾರದಿಂ ಭೋರ್ಗರೆಯಲು
ಎದುರಾಳು ಯಾವನವ ?
ಹೆದೆಗೆದುರು ನಿಲ್ಲುವದು ?
ಗಂಡುಗಲಿಗಳೆಸಾಗಿ ದಂಡಯಾತ್ರೆಗೆ ನೀವು
ಪರಯೆಯದು ನಿಮ್ಮುಡಿಯ ಬುತ್ತಿ ॥ ೮ ॥

– ಧಿಟ್ಟಕವಿ

ಕನ್ನಡಿಗ ೨೩/೦೪/೧೯೩೦ ಪುಟ ಸಂಖ್ಯೆ೪

ನಮ್ಮ ಧ್ವಜವು

ಇದು ತಪೋನಧಿ ಗಾಂಧಿ ಕಲ್ಪಿಸಿದ ಧ್ವಜವು
ಇದು ಭರತನ ಸಂತತಿಯ ಸರ್ವಸ್ವವು ॥ ಪಲ್ಲವಿ ॥
ಇದು ನಮ್ಮ ನಾಡಿನದ್ಯಾಸ್ಮಶಕ್ತಿ ಧ್ವಜವು
ಇದು ನಮ್ಮ ತಾಯ್ನಾಡ ಸೌಭಾಗ್ಯವು

ಇದು ನಮ್ಮ ನಾಡ ಪುಣ್ಯಪ್ರಕರ್ಷ ಧ್ವಜವು
ಇದು ನಮ್ಮ ತಾಯ್ನಾಡ ಚೈತನ್ಯವು ॥ ೧ ॥
ಇದರದರ್ಶನ ನಮಗೆ ಪರಮ ಪುಣ್ಯಪದವು
ಇದರಿಂದ ತೇಜಸ್ವಿ ನಾತ್ಕರ್ಷವು
ಇದರ ನೆರಳೊಳಗೆ ನಮ್ಮ ಸ್ವಾತಂತ್ರ್ಯ ಮಂದಿರವು
ಇದರಿಂದಲೇ ವಿಶ್ವದಭ್ಯುದಯವು ॥ ೨ ॥
ಇದರ ರಕ್ಷಣದಿಂದ ನಮ್ಮ ಸಂರಕ್ಷಣವು
ಇದರ ಮಾನವು ನಮ್ಮ ಸನ್ಮಾನವು
ಇದರ ಪಾವನ ಕೀರ್ತಿ ಸಕಲಭುವನವ್ಯಾಪ್ತಿ
ಇದು ಜಗಕೆ ಮಂಗಲವು ನಮ್ಮ ಧ್ವಜವು ॥ ೩ ॥

– ಸಾ.ರಾ

ಕನ್ನಡಿಗ ೦೪/೦೬/೧೯೩೦

ಕೆಚ್ಚೆದೆಯ ಒರೆಗಲ್ಲು

ಜಗದಜೀವಿಗಳೆಲ್ಲ ಮೋಹನನ ಪ್ರಭೆಯಲ್ಲಿ
ತಲೆಬಾಗಿ ಮಣಿಮಣಿದು ಸಂತಸದ ಕಡಲಲ್ಲಿ
ಸ್ವಾನಂದ ದರೆಯಾಗಿ ತೇಲು ತೇಲುತಲಿರಲು
ಬಿರುಗಾಳಿಯ ಭೀಕರದಿ ವಾರಿನಿಧಿ ಮೇಲ್ವಾಯ್ದು
ತೋಪ ತೆರೆಗಳ ತೂರ ಬರ್ದರಗಾಳಿಬೀರಿ
ಬಡಬಾಗ್ನಿಯಂ ಹುಂಸಿಸಾಗುವಂತೆ ॥ ೧ ॥
ಭಾರತ ಕೆಚ್ಚೆದೆಗಳೊಗಿಲ್ಲ ಮೇಲ್ತಡಿ
ಸ್ವಾಸಾ ವಿಹಿರಿ ಹೃದಯ ಕುಗ್ಗಿಸಲೆಂದು
ಜೊಳ್ಳು ಭೀತಿಯತೋರಿ ನಾಡಿಗರು
ದೌರ್ಬಲ್ಯತನವಿಹಿತೋ ?
ಕಾಲಗತಿ ಹಿಸಿತೋ ?
ಕರುಬನಾ ಹಿಂದಿರಿಸಲು
ಏದೆಗಳಂಕದುವರೇ ? ನೋಡಿಲೆಂದು ॥ ೨ ॥
ಭಾರತೀಯ ಪಾಶವನ ಹರಿಯಲ್ಕೆ ಸಿದ್ಧನಿಹ
ಹುರಿಯಾಳು ಮೋಹನನನಾಳರಿಗೀನ್ನು

ನಿಗ್ಗಿಗಿಪ ಕಂಡವರ ಬೈಡನ ತದಂತೆ
ಸೆರೆಮನೆಗೆ ಕೊಂಡೊಯ್ದು ಮೊಸಲಿಹ
ಅಹುತಿಯ ಭಾರತೀಯ .....
ಸ್ವಾತಂತ್ರ್ಯ ಕುಂಡಕ್ಕೆ ॥ ೩ ॥

ತಾಯ್ನಾಡ ನಾಯಕನ ಬಂಧನದಿ ಕೊಡಿಟ್ಟು
ಹೇಡಿಗಳು ಕೈಗೆ ಚಾಲನೆಪ್ಪಣೆ ಕೊಟ್ಟು
ಹೆಣವಾಗಿ ಬಾಗುವಿರೋ ? ರಣದಲ್ಲಿ ಧುಮುಕುವಿರೋ ?
ಶೆರಗ ಮೋರೆಗೆ ಹಾಕಿ ಭೋರೆಂಡು ಅಳುವಿರೋ ?
ಹೇಳಿರೈ । ನಾಡಿಗರೆ ನಿಮ್ಮ ಮನೊಲವನು ॥ ೪ ॥

– ಧಿಟ್ಟಕವಿ

ಕನ್ನಡಿಗ ೧೨/೧೨/೧೯೩೦ ಪುಟ ಸಂಖ್ಯೆ.೧೨

ಸತ್ಯಾಗ್ರಹಿ

ದಂಡ ಪಟಕಿ ಶಿಕ್ಷೆ
ಶೆರೆಯ ಕೈದಿಗಂಜುದೆಲ್ಲಿ
ರುಂಡನಿಟ್ಟು ಪ್ರಾಣಬಿಡುವೆ
ಶೂಲ ಗಂಧದಲ್ಲಿ ॥ ೧ ॥

ಮಾಡಿದು ಪಡಿದು
ವೀರಮರಣ ತಾಯಿಯ ಸೇವೆಯಲ್ಲಿ
ದುಡಿದು ನೀಡು ಪ್ರಾಣ
ನಾಡ ಪ್ರೇಮ ಯಜ್ಞದಲ್ಲಿ ॥ ೨ ॥

ಹರಿದು ಸುರಿಗ ಹರಿದು ಹಾರಿ
ಅರಿಯ ಗುರುವ ಹರಿಸೈ
ತರುಣರರಕ್ತದಿಂದ ಉರಿವ
ಶೌರ್ಯ ಧೈರ್ಯ ತೋರಿಸೈ ॥ ೩ ॥

ನ್ಯಾಯನೀತಿ ಧರ್ಮದಿಂದ
ವೈರಿಯ ಶಿರವ ಬಾಗಿಸು
ಮಾಯ ಮೋಹ ತೊರದು
ಶರಣರ ತಲೆದೂಗಿಸು ॥ ೪ ॥

ಪಾರತಂತ್ರ್ಯ ಹರಿದು
ಹರುಷಗೊಳ್ಳು ಕಷ್ಟದೂಡು
ಸಾರವತ್ತ ಸರಸಪುಣ್ಯ ಭೂಮಿ ನಮ್ಮ ನಾಡು ॥ ೫ ॥

– ಧಿಟ್ಟಕವಿ

ಕನ್ನಡಿಗ ೨೪/೦೪/೧೯೩೦ ಪುಟ ಸಂಖ್ಯೆ.೨

ಅಖಿಲ ಭಾರತೀಯ ಧ್ವಜವು

ಅಖಿಲ ಭಾರತೀಯ ರಾಷ್ಟ್ರಧ್ವಜಕೆ ವಿಜಯವಾಗಲಿ
ನಿಖಿಲ ಲೋಕಪಾಲನೀ ಧ್ವಜಕೆ ಶುಭವ ನೀಯಲಿ ॥ ಪ ॥
ಸಿಂಧು ಭದ್ರೆ ಯಮುನೆ ಗಂಗೆ ನರ್ಮದಾಶ್ರಯ ಧ್ವಜಂ ।
ವಿಂಧ್ಯಸೇತು ಹಿಮಗಿರೀಂದ್ರ ಸಾಂದ್ರಕೇಂದ್ರ ಭೂಧ್ವಜಂ ॥ ೧ ॥
ವಿಮಲ ಪಾರಿಜಾತೆ ಕಮಲ ವಿಕಸಿತಾವ ನೀ ಧ್ವಜಂ ।
ಅಮರ ಲೋಕಮಾನ್ಯವಿಭವ ವಿಲಸಿತಾಂಬರ ಧ್ವಜಂ ॥ ೨ ॥
ಹಿಂದು ಮುಸಲಮಾನ ಸಕಲರೈಕ್ಯ ಲಾಂಛನ ಧ್ವಜಂ ।
ಗಾಂಧಿ ಚರಖ ಯುಕ್ತಗುಣ ಸುವರ್ಣ ಮೋಹನ ಧ್ವಜಂ ॥ ೩ ॥
ಮಾನಿನೀ ಕುಲಾಭೀಮಾನ ರಕ್ಷಣಾಕ್ಷರ ಧ್ವಜಂ ।
ಧೀನಬಾಲ ವೃದ್ಧಜಾಲ ಪಾಲನಾಕ್ಷಯ ಧ್ವಜಂ ॥ ೪ ॥
ಪಾರತಂತ್ರ್ಯ ಬಂಧನೋಗ್ರ ಪಾಶನಾಶಕ ಧ್ವಜಂ ।
ಭಾರತೀ ಸ್ವತಂತ್ರ ಮಂತ್ರ ಘೋಷ ಪೋಷಕ ಧ್ವಜಂ ॥ ೫ ॥

ಕ್ಷೇತ್ರ ಕಾರ್ಯದಲ್ಲಿ – ಹಾಡಿದವರು ಸೂರ್ಯಪಂಡಿತ ಉಪಾಧ್ಯಯರು

ಅಡಿ ಟಿಪ್ಪಣಿಗಳು

೧. ಬಸು ಪಟ್ಟದ ಎಸ್.ಎಸ್., ಬೇವೂರ ಬಾದಶಹ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧, ಪುಟ ಸಂಖ್ಯೆ. ೨.

೨. ಗುಳೇದಗುಡ್ಡ ಪುರಸಭೆಯ ಶತಮಾನೋತ್ಸವ ಸ್ಮರಣ ಸಂಚಿಕೆ, ಗ್ರಂಥಕ್ಕೆ ಪುಟ ಸಂಖ್ಯೆ ಇಲ್ಲ.

೩. ಮುನಿಸ್ವಾಮಿ (ಸಂ), ವಿಜಾಪೂರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ೧೯೯೯, ಪುಟ ಸಂಖ್ಯೆ ೬೦೧.

೪. ಅದೇ, ಪುಟ ಸಂಖ್ಯೆ. ೯೦೧.

೫. ಗುಳೇದಗುಡ್ಡ ಪುರಸಭೆಯ ಶತಮಾನೋತ್ಸವ ಸ್ಮರಣ ಸಂಚಿಕೆ, ಗ್ರಂಥಕ್ಕೆ ಪುಟ ಸಂಖ್ಯೆ ಇಲ್ಲ.

೬. ಮೋನಪ್ಪ ಗಾಡದ, ರಂಗದರ್ಶನ, ಗ್ರಾಮೀಣ ಸಾಹಿತ್ಯ ಮಾಲೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ ಗದಗ, ೨೦೦೮, ಪುಟ ಸಂಖ್ಯೆ. ೩೬.

೭. ಅದೇ, ಪುಟ ಸಂಖ್ಯೆ. ೩೬.

೮. ವಿರೂಪಾಕ್ಷನಾಯಕ, ಕನ್ನಡ ರಂಗಭೂಮಿ ಹಾಗೂ ಸ್ವಾತಂತ್ರ್ಯ ಚಳವಳಿ, ರಂಗ ತೋರಣ, ಧಾರವಾಡ, ೧೯೯೮, ಪುಟ ಸಂಖ್ಯೆ. ೪೬.

೯. ಅದೇ, ಪುಟ ಸಂಖ್ಯೆ. ೪೬.

೧೦. ಅದೇ, ಪುಟ ಸಂಖ್ಯೆ. ೪೬.

೧೧. ಅದೇ, ಪುಟ ಸಂಖ್ಯೆ. ೪೨.

೧೨. ಅದೇ, ಪುಟ ಸಂಖ್ಯೆ. ೪೩.

೧೩. ಕಂದಗಲ್ ಹನಮಂತರಾಯರು, ಅಕ್ಷಯಾಂಬರ, ಪ್ರಭಾ ಪ್ರಿಂಟರ್ಸ್, ಗದಗ, ೧೯೮೪, ಪುಟ ಸಂಖ್ಯೆ. ೬೦.

೧೪. ಅದೇ, ಪುಟ ಸಂಖ್ಯೆ. ೬೦.

೧೫. ಅದೇ, ಪುಟ ಸಂಖ್ಯೆ. ೪೧.

೧೬. ಮೋನಪ್ಪ ಗಾಡದ, ರಂಗದರ್ಶನ, ಗ್ರಾಮೀಣ ಸಾಹಿತ್ಯ ಮಾಲೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ ಗದಗ, ೨೦೦೮, ಪುಟ ಸಂಖ್ಯೆ. ೭೫.

೧೭. ಕಂದಗಲ್ ಹನಮಂತರಾಯರು, ಅಕ್ಷಯಾಂಬರ, ಪ್ರಭಾ ಪ್ರಿಂಟರ್ಸ್, ಗದಗ, ೧೯೮೪, ಪುಟ ಸಂಖ್ಯೆ. ೬೨.

೧೮. ಅದೇ, ಪುಟ ಸಂಖ್ಯೆ. ೧೨೭.

೧೯. ಗಣೇಶ ಅಮೀನಗಡ, ಬಣ್ಣದ ಬದುಕಿನ ಚಿನ್ನದ ದಿನಗಳು, ಏಣಗಿ ಬಾಳಪ್ಪನವರ ರಂಗಾನುಭವ ಕಥನ, ಪ್ರಸಾಧನ, ಪ್ರಕಾಶನ, ಮಂಗಳೂರು, ೨೦೦೭, ಪುಟ ಸಂಖ್ಯೆ. ೯೨.

೨೦. ಅದೇ, ಪುಟ ಸಂಖ್ಯೆ. ೫೨.

೨೧. ಸಂದರ್ಶನ, ಕಂಠಿ ಹನುಮಂತರಾಯರ, ನಾಗರಾಳ, ತಾ.ಬೀಳಗಿ, ದಿನಾಂಕ ೦೭-೦೪-೨೦೧೩.

೨೨. ವಿರೂಪಾಕ್ಷ ನಾಯಕ, ಕನ್ನಡ ರಂಗಭೂಮಿ ಹಾಗೂ ಸ್ವಾತಂತ್ರ್ಯ ಚಳವಳಿ, ರಂಗ ತೋರಣ, ಧಾರವಾಡ, ೧೯೯೮, ಪುಟ ಸಂಖ್ಯೆ. ೪೭.

೨೩. ಅದೇ, ಪುಟ ಸಂಖ್ಯೆ. ೪೭.

೨೪. ರಹಮತ ತರೀಕೆರೆ, ಅಮೀರಬಾಯಿ ಕರ್ನಾಟಕಿ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೧೨, ಪುಟ ಸಂಖ್ಯೆ ೧೫೦.

೨೫. ಅದೇ, ಪುಟ ಸಂಖ್ಯೆ. ೧೫೩.

೨೬. ಹಾಲಪ್ಪ ಜಿ.ಎಸ್. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ, ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥ ಮಾಲೆ, ಧಾರವಾಡ, ೧೯೬೬, ಪುಟ ಸಂ.೯೨೭

೨೭. ಪುರೋಹಿತ ದ.ರಾ., ಕಲಾದಗಿ ದರ್ಶನ, ಪ್ರಗತಿ ಸಾಹಿತ್ಯ ವೇದಿಕೆ, ಕಲಾದಗಿ, ೧೯೯೬, ಪುಟ ಸಂಖ್ಯೆ ೯

೨೮. ಶ್ರೇಷ್ಠ ಪತ್ರಿಕೋದ್ಯಮಿ ಮೊಹರೆ ಹನುಮಂತರಾಯರು, ಲೋಕ ಶಿಕ್ಷಣ ಟ್ರಸ್ಟ, ಹುಬ್ಬಳ್ಳಿ, ಬೆಂಗಳೂರು, ೧೯೯೨, ಪುಟ ಸಂಖ್ಯೆ. ೬೧.

೨೯. ಗುಂಡಪ್ಪ ಡಿ.ವಿ., ವೃತ್ತಪತ್ರಿಕೆ, ಕರ್ನಾಟಕ ಪತ್ರಿಕಾ ಅಕಾಡಮಿ, ಬೆಂಗಳೂರು, ೧೯೮೮, ಪುಟ ಸಂಖ್ಯೆ .೩೪.

೩೦. ಅದೇ, ಪುಟ ಸಂಖ್ಯೆ. ೪೫.

೩೧. ಅದೇ, ಪುಟ ಸಂಖ್ಯೆ. ೪೬.

೩೨. ಅದೇ, ಪುಟ ಸಂಖ್ಯೆ. ೪೮.

೩೩. ಅದೇ, ಪುಟ ಸಂಖ್ಯೆ. ೬೧.

೩೪. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ ದಿನಾಂಕ ೦೨-೧೨-೧೯೨೮ ಪುಟ ಸಂಖ್ಯೆ ೦೪.

೩೫. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ ದಿನಾಂಕ ೦೨-೧೨-೧೯೨೮ ಪುಟ ಸಂಖ್ಯೆ ೦೩.

೩೬. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ ದಿನಾಂಕ ೨೯-೦೧-೧೯೨೮ ಪುಟ ಸಂಖ್ಯೆ ೦೨.

೩೭. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪೂರ ದಿನಾಂಕ ೦೧-೦೩-೧೯೩೦ ಪುಟ ಸಂಖ್ಯೆ ೦೩.

೩೮. ಚಂದುನವರ ಜೆ.ಎಂ., ಪತ್ರಕರ್ತರಾಗಿ ಮೊಹರೆ ಹನುಮಂತರಾಯ ಒಂದು ಅಧ್ಯಯನ, ಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಮಧುರಾ ಪ್ರಕಾಶನ, ಧಾರವಾಡ, ೨೦೦೮, ಪುಟ ಸಂ. ೯೫.

೩೯. ಅದೇ, ಪುಟ ಸಂಖ್ಯೆ. ೯೫.

೪೦. ಸೂರ್ಯನಾಥ ಕಾಮತ (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೮, ಪುಟ ಸಂಖ್ಯೆ ೧೨೮೧.

೪೧. ಸೂರ್ಯನಾಥ ಕಾಮತ, ಇತಿಹಾಸದ ಆಚೆ ಈಚೆ, ಹೇಮಂತ ಪ್ರಕಾಶನ, ಬೆಂಗಳೂರು, ೨೦೧೨ ಪುಟ ಸಂ. ೩೦೬.

ಅಧ್ಯಾಯ ೧೧

ಸ್ವಾತಂತ್ರ್ಯ ಚಳವಳಿಗಾರರು

ಅಧ್ಯಾಯ ೧೧

ಸ್ವಾತಂತ್ರ್ಯ ಚಳವಳಿಗಾರರು

೧. ಸಿದ್ದಪ್ಪ ಅಕ್ಕಿ

ಸಿದ್ದಪ್ಪ ವೀರಭದ್ರಪ್ಪ ಅಕ್ಕಿಯವರು ಮಲ್ಲಾಪೂರದ ಗೌಡರ ಮನೆತನದಲ್ಲಿ ಜನಿಸಿದರು. ಎತ್ತರ ನಿಲುವು ಹಾಗೂ ಸದೃಢ ದೇಹದವರಾಗಿದ್ದರು. ೫ನೇ ತರಗತಿಯವರೆಗೆ ವಿದ್ಯಾಭ್ಯಾಸ ಪೂರೈಸಿದ ನಂತರ ಶ್ರೀನಿವಾಸ ಮಂಗಳವೇಡೆ, ಹರ್ಡೇಕರ ಮಂಜಪ್ಪ, ಮುಂತಾದವರ ಭಾಷಣಗಳಿಂದ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. ಬಾಗಲಕೋಟಯ ಸೇವಾದಳದಲ್ಲಿ ತರಬೇತಿಯನ್ನು ಪಡೆದರು.

೧೯೩೦ ರಲ್ಲಿ ಗಾಂಧಿಯವರ ಕರೆಯಂತೆ ದೇಶಾದ್ಯಂತ ಉಪ್ಪಿನ ಸತ್ಯಾಗ್ರಹ ಬಾಗಲಕೋಟ ಜಿಲ್ಲೆಯ ಬಿಸನಾಳ ಗ್ರಾಮದ ಉಪ್ಪಿನ ಸತ್ಯಾಗ್ರಹದಲ್ಲಿ ಗಲಗಲಿಯ ಹಬ್ಬು, ಬಾಗಲಕೋಟದ ಶ್ರೀನಿವಾಸ ಮಂಗಳವೇಡೆ, ಮೊಹರೆ ಹನಮಂತರಾಯ, ಕಿರಸೂರ ವಕೀಲರು ಹಾಗೂ ಸಿದ್ದಪ್ಪ ಅಕ್ಕಿಯವರು ಡಾ॥ ನಾ.ಸು. ಹರ್ಡೀಕರ ಆದೇಶದಂತೆ ಬಾಗಲಕೋಟದ ತರುಣ ಸ್ವಯಂ ಸೇವಕರ ತಂಡ ಕೃಷ್ಣ ಪದಕಿಯವರ ನೇತೃತ್ವದಲ್ಲಿ ಮೂರು ತಿಂಗಳ ಕಾಲ ಉಪ್ಪನ್ನು ತಯಾರಿಸಿದರು.

೧೯೩೨ರಲ್ಲಿ ಅಕ್ಟೋಬರ ತಿಂಗಳಲ್ಲಿ ಬಾಗಲಕೋಟ ತಾಲೂಕಿನ ಶಿರೂರ ಗ್ರಾಮದಲ್ಲಿ ಅರಣ್ಯ ಸತ್ಯಾಗ್ರಹ ನಡೆಸಿದರು. ಈ ಚಳವಳಿಯಲ್ಲಿ ಶ್ರೀನಿವಾಸ ಮಂಗಳವೇಡೆ ಸಿದ್ದಪ್ಪ ಹುಂಡೇಕಾರ, ಮಲ್ಲಪ್ಪ ಯಂಡಿಗೇರಿ, ಶಿವಪುತ್ರಪ್ಪ, ಪಟ್ಟಣಶೆಟ್ಟಿಯವರು ಭಾಗವಹಿಸಿದ್ದರು.

೧೯೪೧ರಲ್ಲಿ ನಡೆದ ವೈಯಕ್ತಿಕ ಸತ್ಯಾಗ್ರಹದಲ್ಲಿ ಅಕ್ಕಿಯವರು ಭಾಗವಹಿಸಿದ್ದರು. ೧೯೪೨ರ ಚಲೇಜಾವ ಚಳವಳಿಯಲ್ಲಿ ಬಾಗಲಕೋಟ ನಗರವು ಸುತ್ತಲಿನ ಗ್ರಾಮಗಳಿಗೆ ಕೇಂದ್ರಬಿಂದುವಾಗಿತ್ತು. ಬಸಪ್ಪ ಪಲ್ಲೇದ ಅವರ ಅಡತಿ ಅಂಗಡಿಯಲ್ಲಿ ಗುಪ್ತಸಭೆಗಳು ನಡೆಯುತ್ತಿದ್ದವು. ಸುತ್ತಲಿನ ಗ್ರಾಮದ ಚಳವಳಿಗಾರರು ಇಲ್ಲಿ ಆಶ್ರಯ ಪಡೆಯುತ್ತಿದ್ದರು. ಚನ್ನಬಸಪ್ಪ ಅಂಬಲಿ, ಸಿದ್ದಪ್ಪ ಮಾಳವಾಡ, ಸಿದ್ದಪ್ಪ ಅಕ್ಕಿ, ಸಿದ್ದಪ್ಪ ಹುಂಡೆಕಾರ ಹಾಗೂ ಯಂಡಿಗೇರಿ ಮಲ್ಲಪ್ಪ ಮುಂತಾದ ಚಳವಳಿಗಾರರು ಮಲ್ಲಾಪೂರ ಹತ್ತಿರ ರೈಲು ಹಳಿಗಳನ್ನು ಕಿತ್ತುಹಾಕಿ ಎಂಟು ಪೋಲ್‌ನ್ನು ಸುಟ್ಟು ಹಾಕಿದರು. ಸರಕಾರದಿಂದ ಬಂಧನಕ್ಕೆ ಒಳಗಾಗಿ ಆರು ತಿಂಗಳ ಜೈಲುವಾಸ ಅನುಭವಿಸಿದರು. ಜೈಲಿನಲ್ಲಿರುವಾಗಲೇ ಇವರ ಧರ್ಮಪತ್ನಿ ಮರಣ ಹೊಂದಿದ್ದರಿಂದ ಮನೆಯಿಂದ ಅಂತ್ಯಕ್ರಿಯೆಗೆ ಬರುವಂತೆ ಕರೆಬಂದಿತು. ಆದರೆ ಜೈಲು ಅಧಿಕಾರಿಯು ಬಿಡುಗಡೆ ಮಾಡಲು ಒಪ್ಪದೆ "ನೀನು ಇನ್ನು ಮುಂದೆ ಚಳವಳಿ ಮಾಡುವದಿಲ್ಲ ಎಂದು ಬರೆದುಕೊಟ್ಟರೆ ಮಾತ್ರ ಬಿಡುಗಡೆ ಮಾಡುತ್ತೇನೆ" ಎಂದು ಹೇಳಿದ. ಇದಕ್ಕೆ ಒಪ್ಪದ ಅಕ್ಕಿಯವರು "ನನಗೆ ಹೆಂಡತಿಗಿಂತ ದೇಶ ಮುಖ್ಯ" ಎಂದು ಮಾರುತ್ತರ ನೀಡಿದರು. ಮಲ್ಲಾಪೂರದ ಪ್ರಮುಖರಿಂಗೆ ಪತ್ರಬರೆದು

ಅಂತ್ಯಕ್ರಿಯೆ ಮಾಡುವಂತೆ ಸೂಚಿಸಿದರು. ೧೯೪೨ರಲ್ಲಿ ಬರೆದ ಪತ್ರವನ್ನು ಅವರ ಮನೆಯಲ್ಲಿ ಇಂದಿಗೂ ಕಾಪಾಡಿಕೊಂಡು ಬಂದಿದ್ದಾರೆ.[೧]

೨. ನಿಂಗಪ್ಪ ಅಂಟಿನ

ನಿಂಗಪ್ಪನವರು ೧೯೧೦ರಲ್ಲಿ ಸಿದ್ದಾಪೂರದಲ್ಲಿ ಜನಿಸಿದರು. ತಂದೆ ಪಾಯಪ್ಪ, ತಾಯಿ ಸತ್ಯವ್ವ ಕಡು ಬಡತನ ಇದ್ದುದರಿಂದ ಶಾಲೆಗೆ ಹೋಗದೆ ಕೂಲಿ ಕೆಲಸ ಮಾಡುತ್ತಿದ್ದರು. ೧೯೩೪ರ ಸುಮಾರಿಗೆ ಸಿದ್ದಾಪೂರದಲ್ಲಿ ದುಡಿಮೆವಿಲ್ಲವೆಂದು ಬನಹಟ್ಟಿಗೆ ಪ್ರಯಾಣ ಬೆಳೆಸಿ ಅಲ್ಲಿ ಶ್ರೀಮಂತರ ಮನೆಗಳಲ್ಲಿ ನೇಯುವ ದಿನಗೂಲಿ ಕೆಲಸ ಮಾಡಲಿಕ್ಕೆ ನೇಮಕವಾದರು.

ಇವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಒಂದು ಘಟನೆ ಕಾರಣವಾಗಿದೆ. "ಪ್ರತಿ ದಿನ ಎಂದಿನಂತೆ ಬಾವಿಗೆ ಸ್ನಾನಕ್ಕೆ ಹೋಗಿ ಬರುವದು ರೂಢಿಯಾಗಿತ್ತು. ಒಂದು ದಿನ ನಿಂಗಪ್ಪನವರು ಸ್ನಾನಕ್ಕೆ ಹೋದಾಗ ಬ್ರಿಟಿಷ ಅಧಿಕಾರಿಯು ಬಟ್ಟೆ ತೊಳೆಯಲು ಬಂದ ಸ್ತ್ರೀಯೊಬ್ಬಳನ್ನು ಬಲತ್ಕಾರ ಮಾಡಲು ಮುಂದಾದ ಆ ಸ್ತ್ರೀಯ ಕಿರುಚಾಟ ಕೇಳಿದ ನಿಂಗಪ್ಪನವರು ಕೂಡಲೇ ಹೋಗಿ ಬ್ರಿಟಿಷ ಅಧಿಕಾರಿಯನ್ನು ಥಳಿಸಿದರಲ್ಲದೆ. ಇನ್ನೊಂದು ಸಾರಿ ಈ ರೀತಿ ಮಾಡಬಾರದೆಂದು ಆತನನ್ನು ನಡು ಊರಿಗೆ ತಂದು ಕಂಬಕ್ಕೆ ಕಟ್ಟಿ ಹಾಕಿ ಸ್ತ್ರೀಯ ಮಾನವನ್ನು ರಕ್ಷಿಸಿದರು. ಅಂದಿನಿಂದ ಬ್ರಿಟಿಷ ಸರಕಾರ ಇವರ ಮೇಲೆ ಸದಾ ಒಂದು ಕಣ್ಣಿಟ್ಟಿತು. ನಿಂಗಪ್ಪನವರ ಮೇಲೆ ಯಾವುದಾದರೂ ಒಂದು ನೆಪದ ಮೇಲೆ ಬಂಧಿಸಬೇಕೆಂದು ಸಂಚು ಹಾಕುತ್ತಿದ್ದರು. ಇತ್ತ ನಿಂಗಪ್ಪನವರ ಬಗ್ಗೆ ಬನಹಟ್ಟಿಯ ಜನರಿಗೆ ಊರಿನ ಹೆಣ್ಣುಮಗಳ ಮಾನ ಕಾಪಾಡಿದ್ದರಿಂದ ಹೆಮ್ಮೆ ಇತ್ತು. ಅಂದಿನಿಂದ ಬನಹಟ್ಟಿಯ ಜನರಿಗೆ ನಿಂಗಪ್ಪನವರೆಂದರೆ ಎಲ್ಲಿಲ್ಲದ ಪ್ರೀತಿ. ಬ್ರಿಟಿಷರು ಭಾರತೀಯರ ಮೇಲೆ ನಿರಂತರವಾಗಿ ದೌರ್ಜನ್ಯ ಎಸಗುತ್ತಿರುವದು ನಿಂಗಪ್ಪನವರಿಗೆ ಅರಿವಿಗೆ ಬಂದಿತು.

ಹುದಲಿ ಗ್ರಾಮಕ್ಕೆ ಗಾಂಧೀಜಿಯವರು ಭೇಟಿ ನೀಡಿದಾಗ ನಿಂಗಪ್ಪನವರು ಅಲ್ಲಿಗೆ ಹೋಗಿ ಮಹಾತ್ಮರ ಪಾದ ಮುಟ್ಟಿ ನಮಸ್ಕರಿಸಿದರು. ಮಹಾತ್ಮರು 'ಚೂನಾ ಮತ್' (ನಮಸ್ಕರಿಸಬೇಡ) ನಾನು ದೇವರಲ್ಲ ಎಂದರು. ಹುದಲಿಯಿಂದ ಖಾದಿಯನ್ನು ತಂದು ಹಳ್ಳಿ ಹಳ್ಳಿಗೆ ಪ್ರಚಾರ ಮಾಡುತ್ತಿದ್ದರು.

ಇಂಚಗೇರಿ ಮಠದ ಮಾಧವಾನಂದ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ಹಾಗೂ ಬನಹಟ್ಟಿಯ ಕಲಕಂಬ ಮಾಸ್ತರ, ಬಾಸ್ಕರಪ್ಪ ಕೊಪರ್ಡೆ, ದಬಾಡಿ ಚೆನ್ನಪ್ಪ, ಮಂಡಿ ಪರಪ್ಪ ಮುಂತಾದ ಚಳವಳಿಗಾರರ ಜೊತೆಗೆ ಸಂಪರ್ಕ ಬೆಳೆಯಿತು.

೧೯೪೨ರ ಚಲೇಜಾವ ಚಳವಳಿಯಲ್ಲಿ ರಾಯಭಾಗ ತಾಲೂಕಿನ ಎಲ್ಲಾರಟ್ಟಿಯಲ್ಲಿದ್ದ ಪೋಸ್ಟ್ ಆಫೀಸನ್ನು ಸುಟ್ಟು ಹಾಕಿದರು. ಈ ವೇಳೆಯಲ್ಲಿ ಪೊಲೀಸರು ನಿಂಗಪ್ಪನವರನ್ನು ಬಂಧಿಸಲು ವಾರೆಂಟ

ಹೊರಡಿಸಿದಾಗ ಭೂಗತರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸ್ತ್ರೀಯರ ವೇಷಧರಿಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಿದ್ದರು. ಕೆಲವು ಸಲ ಹಗಲು ಹೊತ್ತಿನಲ್ಲಿ ಅಡವಿಯಲ್ಲಿ ಕುರಿಗಾರರ ಜೊತೆ ಕಾಲ ಕಳೆದು ರಾತ್ರಿಯಾಗುತ್ತಿದ್ದಂತೆ ಚಳವಳಿಯ ಸಂದೇಶಗಳನ್ನು ಅಥಣಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ತಲುಪಿಸುತ್ತಿದ್ದರು.

ಕೆಲವು ಸಲ ಮಹಾರಾಷ್ಟ್ರದ ಗಡಿ ಹಳ್ಳಿಗಳಿಗೆ ಹೋಗಿ ಜಾಗೃತಿಯನ್ನು ಮೂಡಿಸುತ್ತಿದ್ದರು. ರಾತ್ರಿ ಹೊತ್ತು ಒಂದೂರಿನಿಂದ ಇನ್ನೊಂದು ಊರಿಗೆ ಸೈಕಲ್ ಮೇಲೆ ಹೋಗುತ್ತಿದ್ದರು. ಅಥಣಿಯ ಕುಲಕರ್ಣಿ ಎಂಬ ವಕೀಲರು ಚಳವಳಿಗಾರರಿಗೆ ಆಶ್ರಯ ನೀಡುತ್ತಿದ್ದರು. ಉಚಿತವಾಗಿ ಚಳವಳಿಗಾರರ ಪರವಾಗಿ ವಾದಿಸುತ್ತಿದ್ದರು. ನಿಂಗಪ್ಪನವರು ಬನಹಟ್ಟಿ ಸುತ್ತಲಿನ ಪ್ರದೇಶಗಳಲ್ಲಿ ತಾರತಂತಿಗಳನ್ನು ಕತ್ತರಿಸಿದರು. ಪೊಲೀಸರು ನಿಂಗಪ್ಪನವರ ಮನೆಗೆ ಸರ್ಚ್ ಮಾಡಲು ಬಂದಾಗ ಮನೆಯಲ್ಲಿದ್ದ ತಾರತಂತಿಗಳನ್ನು ಇವರ ಧರ್ಮಪತ್ನಿ ಗೌರಮ್ಮ ಅವರು ಕಟ್ಟಿಗೆ ಹೊರೆಯಲ್ಲಿ ಮುಚಿಟ್ಟಿದ್ದದರಿಂದ ಯಾವುದೇ ವಸ್ತು ಸಿಗದೆ ಪೊಲೀಸರು ಬರಿಗೈಯಿಂದ ವಾಪಸ್ಸಾದರು.

ಅಥಣಿಯಲ್ಲಿ ಐವತ್ತು ಮಂದಿ ಚಳವಳಿಗಾರು ಖಾನಾವಳಿಯಲ್ಲಿ ಊಟಕ್ಕೆ ಕುಳಿತಾಗ ಖಾನಾವಳಿಯ ಮಾಲಕ ಖಾದಿಧಾರಿಗಳಾದ ಈ ಜನರನ್ನು ಕಂಡು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಖಾನಾವಳಿಗೆ ಬಂದಿದ್ದಾರೆ ಎಂದು ಮಾಹಿತಿಯನ್ನು ನೀಡಿದಾಗ ಪೊಲೀಸರು ಎಲ್ಲರನ್ನು ಬಂಧಿಸಿ ಬೆಳಗಾವಿಯ ಜೈಲಿನಲ್ಲಿಟ್ಟರು.

ಮಗನನ್ನು ಜೈಲಿಗೆ ಹಾಕಿದ ನಂತರ ಇವರ ತಂದೆ ಪಾಯಪ್ಪನವರು ಮಗನ ಚಿಂತೆಯ ಕೊರಗಿನಲ್ಲಿ ಮರಣ ಹೊಂದಿದರು. ತೀರಾ ಬಡತನ ಕುಟುಂಬ ಇರುವದರಿಂದ ಊರಿನ ಪ್ರಮುಖರೆಲ್ಲರು ಕೂಡಿ ಜೈಲ ಅಧಿಕಾರಿಗೆ ಪತ್ರ ಬರೆದು ಮನೆಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಬಿಡುಗಡೆಗೊಳಿಸಿ ಎಂದು ಕೇಳಿಕೊಂಡಾಗ ಅಧಿಕಾರಿಗಳು ಇದಕ್ಕೆ ಒಪ್ಪಲಿಲ್ಲ. ಇದೇ ಜೈಲಿನಲ್ಲಿದ್ದ ಭಾರತದ ಸ್ವಾತಂತ್ರ್ಯ ಚಳವಳಿಗಾರರು ಹಾಗೂ ಉದ್ಯಮಿಗಳು ಆದ ಜಮುನಾಲಾಲ್ ಬಜಾಜ್ ಅವರು ಈ ವಿಷಯ ತಿಳಿದು ತಮ್ಮ ಕಂಪನಿಯ ಮ್ಯಾನೇಜರ್‌ಗೆ ಪತ್ರ ಬರೆದು ನಿಂಗಪ್ಪನರು ಜೈಲದಿಂದ ಬಿಡುಗಡೆಯಾಗುವವರೆಗೆ ಪ್ರತಿತಿಂಗಳು ಎರಡು ರೂಪಾಯಿ ಅವರ ಕುಟುಂಬಕ್ಕೆ ಕಳುಹಿಸುವಂತೆ ಸೂಚಿಸಿದರು. ಅದರಂತೆ ನಿಂಗಪ್ಪನವರು ಬಿಡುಗಡೆಗೊಳ್ಳುವವರೆಗೆ ಬಜಾಜ್ ಕಂಪನಿಯಿಂದ ಪ್ರತಿತಿಂಗಳು ಎರಡು ರೂಪಾಯಿ ಇವರ ಕುಟುಂಬ ನಿರ್ವಹಣೆಗೆ ಬರತೊಡಗಿತು. ಬನಹಟ್ಟಿಯ ಶೇಠಜಿಯೊಬ್ಬರು ಚಳವಳಿಯಲ್ಲಿ ಜೈಲಿಗೆ ಹೋದ ಜನರ ಮನೆಗಳಿಗೆ ಅರಿವೆಯನ್ನು ಹಾಗೂ ದಿನನಿತ್ಯದ ಬಳಕೆ ಸಾಮಾನುಗಳನ್ನು ನೀಡುತ್ತಿದ್ದರು.

ಜೈಲಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಾಗ ಪೊಲೀಸರ ಕೈಯಲ್ಲಿ ಸಿಕ್ಕಾಕಿಕೊಂಡರು.

ಮರುದಿನ ವಿಸಾಪೂರ ಜೈಲಿಗೆ ಹಾಕಿದರು. ವಿಸಾಪೂರದಲ್ಲಿ ಬುರ್ಲಿ ಬಿಂಧುಮಾಧವ, ಬಿ.ಡಿ.ಜತ್ತಿ, ಮುರಾರ್ಜಿ ದೇಸಾಯಿ ಅವರ ಜೊತೆ ಸಂಪರ್ಕ ಬೆಳೆಯಿತು. ಇಲ್ಲಿಯೆ ಓದಲು ಬರೆಯಲು ಕಲಿತರು. ೧೯೪೩ರ ಏಪ್ರಿಲ್ ೧೯ ರಿಂದ ೧೯೪೫ರ ನವ್ಹೆಂಬರ್ ೧೪ರ ವರೆಗೆ ಶಿಕ್ಷೆ ಅನುಭವಿಸಿದರು.

ಸ್ವಾತಂತ್ರ್ಯ ನಂತರ ವಿನೋಬಾ ಭಾವೆಯವರ ಸರ್ವೋದಯ ಚಳವಳಿಯಲ್ಲಿ ಭಾಗವಹಿಸಿದರು. ೧೯೫೩ರಲ್ಲಿ ಬಸವನ ಬಾಗೇವಾಡಿ ತಾಲೂಕಿನಲ್ಲಿ ವಿನೋಬಾ ಭಾವೆಯವರು. ವ್ಯಸನ ಮುಕ್ತ ಸಮಾಜ ಭೂದಾನ, ಮತ್ತು ಗೋದಾನ, ಚಳವಳಿಗೆ ಬಂದಾಗ ಅವರ ಜೊತೆ ಚಳವಳಿ ಮಾಡಿದರು. ಸರ್ವೋದಯದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಇದರಿಂದ ತಿಂಗಳಿಗೆ ಒಂದು ನೂರು ರೂಪಾಯಿ ಸಂಬಳ ಬರುತ್ತಿತ್ತು. ಇದೇ ಅವರ ಕುಟುಂಬಕ್ಕೆ ಆಧಾರವಾಗಿತ್ತು. ಪ್ರತಿದಿನ ಒಂದೊಂದು ಹಳ್ಳಿಗೆ ಹೋಗಿ ಪಾನ ಮುಕ್ತರನ್ನಾಗಿ ಮಾಡಲು ಜನರಿಗೆ ಉಪನ್ಯಾಸ ನೀಡುತ್ತಿದ್ದರು. ಒಂದೊಂದು ಸಲ ಹಳ್ಳಿಗಳಲ್ಲಿ ವಸತಿ ಇರಬೇಕಾಗುತ್ತಿತ್ತು. ಯಾರಾದರೂ ಊಟ ಮಾಡಲು ಕರೆದರೆ ನಿಮ್ಮ ಗ್ರಾಮದಲ್ಲಿ ಒಬ್ಬನಾದರೂ ನನ್ನ ಜೀವಿತ ಅವಧಿಯಲ್ಲಿ ಇನ್ನು ಮುಂದೆ ಸರಾಯಿ ಕುಡಿಯುವದಿಲ್ಲವೆಂದು ಪ್ರತಿಜ್ಞೆ ಮಾಡಿದರೆ ಮಾತ್ರ ನಾನು ಈ ಊರಿನಲ್ಲಿ ಊಟ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಯಾರಾದರೊಬ್ಬರು ಪ್ರತಿಜ್ಞೆ ಮಾಡಿದಾಗ ಮಾತ್ರ ಊಟ ಮಾಡುತ್ತಿದ್ದರು. 'ವ್ಯಸನ ಮುಕ್ತ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಆದರೆ ಅದು ಇನ್ನೂ ಹಸ್ತಪ್ರತಿ ರೂಪದಲ್ಲಿದೆ ಪ್ರಕಟಗೊಂಡಿಲ್ಲ. ಈ ಗ್ರಂಥದಲ್ಲಿ ಜೂಟಾಟ, ವೇಶ್ಯಾಸಂಗ, ಹಾಗೂ ಸರಾಯಿ ಕುಡಿತದಿಂದ ಆಗುವ ದುಷ್ಪರಿಣಾಮಗಳ ಕುರಿತು ದಾಖಲಿಸಿದ್ದಾರೆ. ೧೯೮೦ರಲ್ಲಿ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಅಖಿಲ ಭಾರತ ಸ್ವಾತಂತ್ರ್ಯ ಯೋಧರನ್ನು 'ವ್ಯಸನಮುಕ್ತ'ರಾಜ್ಯ ಮಾಡಲು ಸಭೆ ಸೇರಿಸಿದರು. ೧೩-೧೦-೧೯೮೬ರಲ್ಲಿ ನಿಂಗಪ್ಪನವರು ದೈವಾಧೀನರಾದರು.[೨]

೩. ಲಚ್ಚಪ್ಪ ಜೀವಪ್ಪ ವಿಜಾಪೂರ

ಲಚ್ಚಪ್ಪನವರು ೧ ಜನೇವರಿ ೧೯೦೯ ರಂದು ಜೀವಪ್ಪ ಮತ್ತು ಯಂಕುಬಾಯಿಯವರ ದ್ವಿತೀಯ ಮಗನಾಗಿ ಬಾಗಲಕೋಟದಲ್ಲಿ ಜನಿಸಿದರು. ಅಂದು ಎಸ್.ಎಸ್.ಸಿ. ಶಿಕ್ಷಣವನ್ನು ಧಾರವಾಡದಲ್ಲಿ ಪಡೆದರು. ಕುಟುಂಬದ ಮೂಲ ವೃತ್ತಿಯಾದ ಅಡತಿ ವ್ಯಾಪಾರವನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದರು. ತಮ್ಮ ೨೦ನೆಯ ವಯಸ್ಸಿನಲ್ಲಿ ಬಾಗಲಕೋಟದ ಕೋರಾ ಮನೆತನದ ಹೆಣ್ಣುಮಗಳು ಕಮಲಾಬಾಯಿಯವರನ್ನು ವಿವಾಹವಾಗಿ ೪ ಗಂಡು ೩ ಹೆಣ್ಣು ಮಕ್ಕಳನ್ನು ಪಡೆದರು.

ಶ್ರೀನಿವಾಸರಾವ್ ಮಂಗಳವೇಡೆಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಚಳವಳಿಗೆ ಇಳಿದರು. ಕುಟುಂಬಕ್ಕೆ ಆಧಾರವಾದ ಅಡತಿ ಅಂಗಡಿಯನ್ನು ಬಿಟ್ಟು ಸಂಪೂರ್ಣವಾಗಿ ರಾಷ್ಟ್ರೀಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ೧೯೨೪ರ ಕಾಂಗ್ರೆಸ ಅಧಿವೇಶನಕ್ಕೆ ಬೆಳಗಾವಿಗೆ ಹೋಗಿ

ಗಾಂಧೀಜಿಯವರ ದರ್ಶನ ಪಡೆದರು. ಅಂದಿನ ಕಾಲದಲ್ಲಿ ಬಾಗಲಕೋಟ ಯುವಕರಿಗೆ ಮಾದರಿಯಾದ ಕಾನೂನು ಭಂಗ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ಒಂದಾದ ಖಾದಿ ಬಟ್ಟೆಯ ಪ್ರಚಾರಕ್ಕಾಗಿ ಸ್ವತಃ ತಾವೇ ಖಾದಿ ಬಟ್ಟೆಯನ್ನು ತಲೆಯ ಮೇಲೆ ಹೊತ್ತು ಬಾಗಲಕೋಟ ಸುತ್ತಮುತ್ತಲಿನ ಗ್ರಾಮಗಳಿಗೆ ಹೋಗುತ್ತಿದ್ದರು.

೧೯೪೨ರ ಚಲೇಜಾವ ಚಳವಳಿ ಪ್ರಾರಂಭವಾದಾಗ ಬದಾಮಿ ನೀರಲಕೇರಿ, ಮಧ್ಯದಲ್ಲಿ ರೈಲು ಕಂಬಿಕಿತ್ತು ಹಾಕಿದರು. ಅಂಚೆ ಕಛೇರಿಯ ಮೇಲೆ ದಾಳಿ ಮಾಡಿ ಅದನ್ನು ಸುಟ್ಟು ಹಾಕಿದರು. ರಾಜದ್ರೋಹದ ಅಪಾದನೆಯ ಮೇಲೆ ಇವರನ್ನು ಬ್ರಿಟಿಷ ಸರಕಾರ ಬಂಧಿಸಿತು. ಸುಮಾರು ೮ ತಿಂಗಳುಗಳ ಕಾಲ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಇಡಲಾಯಿತು.

ಅತ್ತ ಇವರು ಜೈಲಿನಲ್ಲಿ ಇದ್ದಾಗ ಇವರ ಅಡತಿ ವ್ಯಾಪಾರ ಕುಂಟಿತಗೊಂಡಿತು. ಇವರ ಪತ್ನಿ ಮತ್ತು ಮಕ್ಕಳಿಗೆ ಕೋರಾ ಅವರ ಮನೆಯೇ ಆಶ್ರಯ ತಾಣವಾಯಿತು. ಹಾಗು ಅಡತಿ ವ್ಯಾಪಾರ ನಿಂತು ಹೋಯಿತು. ಅಂಗಡಿಯಲ್ಲಿ ದೀಪ ಹಚ್ಚಲು ಸೀಮೆ ಎಣ್ಣೆ ಇರಲಿಲ್ಲ. ಜೈಲಿನಿಂದ ಬಿಡುಗಡೆಗೊಂಡ ನಂತರ ವ್ಯಾಪಾರ ವೃತ್ತಿ ಆರಂಭಿಸಿ ಕಾಯಿಪಲ್ಲೆ ದಲಾಲಿ ವ್ಯಾಪಾರದಲ್ಲಿ ತೊಡಗಿದರು. ಸ್ವಾತಂತ್ರ್ಯಾನಂತರ ಬಿ.ಸಿ. ಬಡದಾಳಿಯವರ ಅಂಗಡಿಯಲ್ಲಿ ಕಾರ್ಯನಿರ್ವಹಿಸಿದರು. ಬಡತನದಲ್ಲಿಯೇ ತಮ್ಮ ಜೀವನವನ್ನು ಕಳೆದರು.[೩]

೪. ಚನ್ನಬಸಯ್ಯ ಗುರುಸಿದ್ದಯ್ಯ ಮಠಪತಿ

ಬೆಣ್ಣೂರಿನ ಚನ್ನಬಸಯ್ಯ ಮಠಪತಿಯವರು ಬಾಗಲಕೋಟ ತಾಲೂಕಿನ ಒರ್ವ ಸ್ವಾತಂತ್ರ್ಯ ಹೋರಾಟಗಾರರು. ನಾಲ್ಕನೆಯ ತರಗತಿಯವರೆಗೆ ಮಾತ್ರ ಶಿಕ್ಷಣವನ್ನು ಪೂರೈಸಿ ಮನೆತನದ ಮೂಲ ವೃತ್ತಿಯಾದ ಕೃಷಿಯಲ್ಲಿ ತೊಡಗಿಕೊಂಡು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರು. ಬಾಗಲಕೋಟದ ಪ್ರಮುಖ ನಾಯಕರು ಚಳವಳಿಯ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಆಗಾಗ ಬೆಣ್ಣೂರಿಗೆ ಬರುತ್ತಿದ್ದರು. ಮಲ್ಲಪ್ಪ ವಾರದ ಅವರ ಪ್ರಭಾವಕ್ಕೆ ಚನ್ನಬಸಯ್ಯನವರು ಒಳಗಾಗಿ ಊರಲ್ಲಿ ಗೌಪ್ಯ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಪ್ರತಿಯೊಂದು ಗ್ರಾಮಕ್ಕೆ ಗಾಂಧೀಜಿಯವರ ಸಂದೇಶ ಮುಟ್ಟಬೇಕೆಂಬ ಕಾರಣಕ್ಕಾಗಿ ಗ್ರಾಮಗಳಿಗೆ ಸಂಚರಿಸಿ ಜನರಿಗೆ ತಿಳಿಯುವಂತೆ ಜಾನಪದ ಗೀತೆಗಳು, ಹಾಗೂ ಗೀಗೀ ಪದಗಳನ್ನು ಹಾಡಿ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತಿದ್ದರು. ಸ್ವದೇಶಿ ಪ್ರಚಾರಕ್ಕಾಗಿ ಗೀಗೀಪದವೊಂದನ್ನು ರಚಿಸಿ ಹಾಡಿ ಮಹಿಳೆಯರಲ್ಲಿ ವಿದೇಶಿ ವಸ್ತುಗಳ ವ್ಯಾಮೋಹ ಬಿಡಿಸಿದ್ದಾರೆ.

ನಮ್ಮ ದೇಶದ ಹಸಿರು ಬಳೆಗಳನ್ನು
ಇಟ್ಟುಕೊಂಡು ದೇಶಿ ಖಾದಿ ಬಟ್ಟೆ ತೊಟ್ಟುಕೊಂಡು
ದೇಶದ ಹೆಸರು ತರಬೇಕವ್ವಾ ತಂಗಿ ಹೆಸರು

ಉಳಿಸಬೇಕವ್ವಾ ಅಂದ್ರ ಖುಷಿ ಅಗ್ತಾರ
ಕಾಂಗ್ರೆಸ್ಸಿನವರು

ಈ ಹಾಡಿನಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಸ್ವದೇಶಿ ವಸ್ತುಗಳ ಪುರಸ್ಕರಿಸಬೇಕೆಂಬ ತತ್ವ ಅಡಗಿದೆ. ಬ್ರಿಟಿಷರ ಆರ್ಥಿಕ ನೀತಿಯನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

ಅರಣ್ಯ ಸತ್ಯಾಗ್ರಹ ನಡೆದಾಗ ಚನ್ನಬಸಯ್ಯನವರ ಮುಖಂಡತ್ವದಲ್ಲಿ ಬೆಣ್ಣೂರಿನ ಸುತ್ತಲಿನ ಸೇಂಧಿಗಿಡಗಳನ್ನು ಕಡಿದು ಹಾಕಿದ್ದರು. ಮಧ್ಯಪಾನವನ್ನು ವಿರೋಧಿಸಿ ಮಧ್ಯಪಾನ ಮಾರಾಟ ಮಾಡುವ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದರು. ೧೯೪೨ರಲ್ಲಿ ಚಲೇಜಾವ ಚಳವಳಿಯಲ್ಲಿ ಭಾಗವಹಿಸಿ ತಾರತಂತಿಗಳನ್ನು ಕಡಿದು ಹಾಕುವ ಕಾರ್ಯವನ್ನು ಮಾಡಿದ್ದಾರೆ.[೪]

೫. ಕೂಡ್ಲೆಪ್ಪ ಸಂಗಪ್ಪ ಮದಕಟ್ಟಿ

ಕೂಡ್ಲೆಪ್ಪ ಮದಕಟ್ಟಿಯವರು ೧೯೧೭ರಲ್ಲಿ ಗುಳೇದಗುಡ್ಡದಲ್ಲಿ ಜನಿಸಿದರು. ತಮ್ಮ ಉನ್ನತ ವ್ಯಾಸಂಗಕ್ಕಾಗಿ ಪುಣೆಗೆ ಹೋದಾಗ ಅಲ್ಲಿ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ೧೯೩೨ರಲ್ಲಿ ನಾಟಕ ಕಂಪನಿಯಲ್ಲಿ ಸೇವೆಸಲ್ಲಿಸಿದರು. 'ಸತ್ಯ ಸಂಕಲ್ಪ' ಎಂಬ ದೇಶಭಕ್ತಿ ನಾಟಕವನ್ನು ಆಡಿದರು. ಗುಳೇದಗುಡ್ಡದ ದತ್ತಾತ್ರೇಯ ವ್ಯಾಯಾಮ ಶಾಲೆ ಅಂದು ಯುವಕರಿಗೆ ಪ್ರೇರಣಾ ಕೇಂದ್ರವಾಗಿತ್ತು. ವ್ಯಾಯಾಮ ಶಾಲೆಯನ್ನು ಸೇರಿದ ಕೂಡ್ಲೆಪ್ಪನವರು ದೇಶಭಕ್ತಿಯನ್ನು ಮೈಗೂಡಿಸಿಕೊಂಡು ಸೇವಾದಳದಲ್ಲಿ ತರಬೇತಿಯನ್ನು ಹೊಂದಿದರು.

೧೯೪೨ರಲ್ಲಿ ಚಲೇಜಾವ ಚಳವಳಿಯಲ್ಲಿ ಭಾಗವಹಿಸಿ ಹೊಳೆ ಆಲೂರು ರೈಲ್ವೆ ಸ್ಟೇಷನ್ ಸುಟ್ಟರು. ಬಾಗಲಕೋಟ ಸುತ್ತ ಮುತ್ತಲಿನ ತಾರ ತಂತಿ ಕತ್ತರಿಸಿ, ಅಂಚೆ ಪೆಟ್ಟಿಗೆಯನ್ನು ನಾಶ ಮಾಡಿ ಆರು ತಿಂಗಳ ಕಾಲ ಜೈಲುಶಿಕ್ಷೆ ಅನುಭವಿಸಿದರು. ಇವರಿಗೆ ಜಿಲ್ಲಾ ಕಾಂಗ್ರೆಸ ಕಮಿಟಿ ಉತ್ತಮ ಸ್ವಾತಂತ್ರ್ಯ ಹೋರಾಟಗಾರನೆಂದು ಗುರುತಿಸಿ ಬೆಳ್ಳಿ ಪದಕ ನೀಡಿ ಗೌರವಿಸಿದೆ.[೫]

೬. ಮಲ್ಲಪ್ಪ ಯಂಡಿಗೇರಿ

ಬಾಗಲಕೋಟ ಚಳವಳಿಗಾರರಲ್ಲಿ ಮಲ್ಲಪ್ಪ ಯಂಡಿಗೇರಿಯವರು ಒಬ್ಬರು. ಮೂಲತಃ ಬಾಗಲಕೋಟದವರಾದ ಇವರು ಸರಳ ಜೀವಿ ಹಾಗೂ ಪ್ರಾಮಾಣಿಕ ಗಾಂಧಿವಾದಿ ಚಳವಳಿಯ ಸಂದರ್ಭದಲ್ಲಿ ಎಲ್ಲ ಚಳವಳಿಗಾರರಿಗೆ ಸಂದೇಶವನ್ನು ಮುಟ್ಟಿಸುವ ಕಾರ್ಯವನ್ನು ಇವರು ಮಾಡುತ್ತಿದ್ದರು. ಮಲ್ಲಾಪೂರದ ಗುಡ್ಡದಲ್ಲಿ ಕರ ಪತ್ರಗಳನ್ನು ಮುದ್ರಿಸಿ ಬೆಳಗಾಗುವ ಹೊತ್ತಿಗೆ ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದರು. ಭಗವತಿ, ಬೇವೂರ, ಶಿರೂರ ಮುಂತಾದ ಗ್ರಾಮಗಳಿಗೆ ಸಂಚರಿಸಿ ಜಾಗೃತಿಯನ್ನು ಉಂಟು ಮಾಡಲು ಲಾವಣಿಪದಗಳನ್ನು ಹಾಡುತ್ತಿದ್ದರು.[೬] ಇವರ

ಮಕ್ಕಳು ಇಂದಿಗೂ ಕೂಲಿ ಕೆಲಸ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ.

೭. ಲಕ್ಕಪ್ಪ ಮೇಟಿ

ಲಕ್ಕಪ್ಪ ಮೇಟಿಯವರು ಬೆಣ್ಣೂರಿನವರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಊರಲ್ಲಿಯೇ ಪೂರೈಸಿದರು. ಮನೆತನದ ಮೂಲ ವೃತ್ತಿಯಾದ ವಾಲಿಕಾರಿಕೆಯನ್ನು ಮಾಡುತ್ತಿದ್ದರು. ಬ್ರಿಟಿಷ ಕಾಲಾವಧಿಯಲ್ಲಿ ವಾಲಿಕಾರಿಕೆ ಮಾಡುವದೆಂದರೆ ಸರಕಾರದ ಪರವಾಗಿ ಮಾಡುವ ಕೆಲಸವಾಗಿತ್ತು.

ಬಾಗಲಕೋಟದ ಮಲ್ಲಪ್ಪ ಯಂಡಿಗೇರಿ ಎಂಬುವವರು ಹಲವಾರು ಪ್ರಮುಖ ಚಳವಳಿಗಾರರನ್ನು ಬೆಣ್ಣೂರಿಗೆ ಕರೆದುಕೊಂಡು ಬಂದು ಊರಲ್ಲಿ ಸಭೆಗಳನ್ನು ನಡೆಸುತ್ತಿದ್ದರು. ಗೀಗೀ ಪದಗಳನ್ನು ಹಾಗೂ ಹುಲಕುಂದದ ಭೀಮಕವಿ ರಚಿಸಿದ ಲಾವಣಿ ಪದಗಳನ್ನು ಹಾಡುತ್ತಿದ್ದರು. ಈ ಪದಗಳು ಗಾಂಧೀಜಿಯವರ ಸಂದೇಶಗಳನ್ನು ಹಾಗೂ ಖಾದಿ ಪ್ರಚಾರವನ್ನು ಮಾಡಿ ಜನರನ್ನು ಚಳವಳಿಯತ್ತ ಆಕರ್ಷಿಸುತ್ತಿದ್ದವು. ಇವು ಲಕ್ಕಪ್ಪನವರ ಮೇಲೆ ಪ್ರಭಾವ ಬೀರಿದವು.

ಊರಿನ ವಾಲಿಕಾರನಾಗಿರುವದರಿಂದ ಸರಕಾರಕ್ಕೆ ನಿಷ್ಠೆಯಾಗಿ ಕಾರ್ಯ ಮಾಡುವದು ಅನಿವಾರ್ಯವಾಗಿತ್ತು. ಆದರೆ ಲಕ್ಕಪ್ಪನವರು ಬ್ರಿಟಿಷ ಅಧಿಕಾರಿಗಳ ಮುಂದೆ ಸರಕಾರಕ್ಕೆ ತಾವು ನಿಷ್ಠೆ ಹೊಂದಿದಂತೆ ನಟಿಸುತ್ತಿದ್ದರು. ಇತ್ತ ಊರಿನ ಚಳವಳಿಗಾರರಿಗೆ ಬೆಂಬಲ ನೀಡುತ್ತಿದ್ದರು. ಊರಿಗೆ ಯಾರಾದರು ಚಳವಳಿಗಾರರು ಬಂದರೆ ಅವರ ಬಗ್ಗೆ ಮಾಹಿತಿ ನೀಡಬೇಕೆಂದು ಲಕ್ಕಪ್ಪನವರಿಗೆ ಸರಕಾರ ಆದೇಶಿಸುತಿತ್ತು. ಆದರೆ ಈಗಾಗಲೇ ಚಳವಳಿಗಾರರಿಂದ ರಾಷ್ಟ್ರೀಯ ಪ್ರಜ್ಞೆ ಬೆಳೆಸಿಕೊಂಡಿರುವದರಿಂದ ಊರಿಗೆ ಯಾವ ಸ್ವಾತಂತ್ರ್ಯ ಚಳವಳಿಗಾರರು ಬಂದಿಲ್ಲವೆಂದು ಸರಕಾರಕ್ಕೆ ಸುಳ್ಳು ಹೇಳುತ್ತಿದ್ದರು.

ಬಾಗಲಕೋಟಯಿಂದ ಪೊಲೀಸ್ ಅಧಿಕಾರಿಗಳು ಬೆಣ್ಣೂರಿಗೆ ಬರುತ್ತಿರುವ ವಿಷಯ ವಾಲಿಕಾರ ಲಕ್ಕಪ್ಪನವರಿಗೆ ಮೊದಲೇ ತಿಳಿಯುತ್ತಿತ್ತು. ಚಳವಳಿಗಾರರಿಗೆ ಪೊಲೀಸರು ಬರುವ ವಿಷಯ ತಿಳಿಸಿ ಗೌಪ್ಯವಾಗಿ ಚಳವಳಿ ನಡೆಸುವಂತೆ ಮುನ್ಸೂಚನೆಯನ್ನು ನೀಡುತ್ತಿದ್ದರು.[೭] ಸರಕಾರಿ ನೌಕರರಾಗಿದ್ದರು ಚಳವಳಿಯಲ್ಲಿ ಭಾಗವಹಿಸಿದ ಅಪರೂಪದ ವ್ಯಕ್ತಿತ್ವ ಇವರದು.

೮. ಸೀತಾಬಾಯಿ ತಿಮಸಾನಿ

ಸೀತಾಬಾಯಿ ತಿಮಸಾನಿ ಅವರು ಮುಧೋಳ ತಾಲೂಕಿನ ಉತ್ತೂರು ಗ್ರಾಮದಲ್ಲಿ ಕ್ರಿ.ಶ. ೧೯೧೪ ರಲ್ಲಿ ಜನಿಸಿದರು. ತಂದೆ ಹನಮಂತಗೌಡ ತಾಯಿ ರಂಗವ್ವ ಸೀತಾಬಾಯಿ ನಾಲ್ಕನೆ ತರಗತಿಯವರೆಗೆ ಕಲಿತರು. ಮಂಟೂರಿನ ಬಸಪ್ಪಗೌಡರ ಜೊತೆ ವಿವಾಹವಾಯಿತು. ಮಂಟೂರಿನ ಇವರ ಮನೆಗೆ ಸ್ವಾತಂತ್ರ್ಯ ಹೋರಾಟಗಾರರು ಬರುತ್ತಿದ್ದರು. ಅವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು. ೧೯೩೪ ರಲ್ಲಿ ಗಾಂಧಿಯವರು ವಿಜಾಪೂರಕ್ಕೆ ಹರಿಜನ ಪ್ರವಾಸಕ್ಕೆ

ಬಂದಾಗ ಸೀತಾಬಾಯಿ ತಮ್ಮ ಕೈಯಲ್ಲಿದ್ದ ಐದು ತೊಲೆ ಬಂಗಾರದ ಬಳೆಗಳನ್ನು ಹರಿಜನ ಫಂಡಿಗೆ ನೀಡಿದರು.

೧೯೪೧ ರ ಮಾರ್ಚ ತಿಂಗಳ ಯಾದವಾಡದಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಮಾಡಿ ಬಂಧನಕ್ಕೆ ಒಳಗಾಗಿ ಬೆಳಗಾವಿಯ ಹಿಂಡಲಗಾ ಜೈಲು ಸೇರಿದರು. ಬಿಡುಗಡೆಯ ನಂತರ ಮೆಳ್ಳಿಗೇರಿ, ಹಲಗಲಿ, ಕಾತರಕಿ, ಕೊಪ್ಪ, ಕಲಾದಗಿ ಮುಂತಾದ ಹಳ್ಳಿಗಳಿಗೆ ಸಂಚರಿಸಿ ಸ್ವಾತಂತ್ರ್ಯದ ಬಗೆಗೆ ಜನರಿಗೆ ತಿಳುವಳಿಕೆ ನೀಡಿದರು. ಇವರ ಪತಿ ಬಸಪ್ಪಗೌಡ ಅವರು ಕೂಡಾ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ನಂತರ ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗದೆ. ಸ್ವಾತಂತ್ರ್ಯ ಯೋಧರಿಗೆ ನೀಡುವ ಪಿಂಚಣಿಯನ್ನು ನಿರಾಕರಿಸಿದರು. ೬ ಅಕ್ಟೋಬರ ೨೦೦೦ ರಂದು ನಸುಕಿನ ಎರಡು ಗಂಟೆಗೆ ಮರಣ ಹೊಂದಿದರು.[೮]

೯. ಪರಪ್ಪ ಸಜ್ಜನ

ಪರಪ್ಪ ಸಜ್ಜನ ಬೇವೂರಿನ ಬಸಪ್ಪ, ಹಾಗೂ ಧರ್ಮವ್ವರ ಉದರದಲ್ಲಿ ೧೯೦೪ ರಲ್ಲಿ ಜನಿಸಿದರು. ಮಕ್ಕಳಿಲ್ಲದ ಇವರ ಸಂಬಂಧಿ ಸಂಗಪ್ಪನವರು ಇವರನ್ನು ೧೯೨೮ ರಲ್ಲಿ ದತ್ತು ಪಡೆದುಕೊಂಡರು. ಹೆಚ್ಚಿನ ಶಿಕ್ಷಣ ಪಡೆಯದ ಇವರು ಮೂರನೆ ತರಗತಿಯವರೆಗೆ ಮಾತ್ರ ಓದಿದರು. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರಿಂದ ಪ್ರಭಾವಿತರಾದರು. ೧೯೨೪ ರಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ ಅಧಿವೇಶನದಲ್ಲಿ ಭಾಗವಹಿಸಿ ಗಾಂಧಿಯವರನ್ನು ಕಂಡು ಖಾದಿ ಪ್ರಚಾರ ಕೈಗೊಂಡರು. ರೈತರನ್ನು ಶೋಷಿಸುತ್ತಿದ್ದ ಬ್ರಿಟಿಷ ಅಧಿಕಾರಿಗಳ ವಿರುದ್ಧ ಕಲೆಕ್ಟರ ಮತ್ತು ಮಾಮಲೇದಾರರಿಗೆ ಅರ್ಜಿಕೊಟ್ಟು ರೈತರ ಶೋಷಣೆಯನ್ನು ತಪ್ಪಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ರೂಪುರೇಷೆ ತಯಾರಿಸಲು ಬೇವೂರಿನ ಹುಚ್ಚಪ್ಪಯ್ಯನ ಮಠ ಹಾಗೂ ಪರ್ವತ ಮಲ್ಲಯ್ಯ ದೇವಸ್ಥಾನದ ಹತ್ತಿರ ಸಭೆಗಳನ್ನು ಏರ್ಪಡಿಸುತ್ತಿದ್ದರು. ಅರಣ್ಯ ಸತ್ಯಾಗ್ರಹ ಮತ್ತು ಜಲೇಜಾವ್ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಬ್ರಿಟಿಷ ಸರಕಾರ ಇವರನ್ನು ಬಂಧಿಸಿ ೧೦-೦೫-೧೯೪೧ ರಿಂದ ೦೪-೧೨-೧೯೪೧ ರವರೆಗೆ ಪುಣೆಯ ಯರವಾಡ ಜೈಲಿನಲ್ಲಿ ಇಟ್ಟರು. ಬಾಗಲಕೋಟ ತಾಲೂಕಿನ ಪೂರ್ವಭಾಗದಲ್ಲಿ ರಾಷ್ಟ್ರೀಯ ಆಂದೋಲನದಲ್ಲಿ ಶಿಕ್ಷೆಯಾದವರಲ್ಲಿ ಇವರೆ ಮೊದಲಿಗರು.

ಸ್ವಾತಂತ್ರ್ಯ ನಂತರ ಸಮಾಜಸೇವೆ ಪ್ರಾರಂಭಿಸಿದರು. ಬೇವೂರಿನಲ್ಲಿ ಸರಕಾರಿ ಆಸ್ಪತ್ರೆ, ಪ್ರಾಥಮಿಕ ಶಾಲೆಗಳನ್ನು ತಾವೆ ಮುತುವರ್ಜಿ ವಹಿಸಿ ಕಟ್ಟಿಸಿದರು. ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಅಸ್ಪೃಶ್ಯರು ಸಾರ್ವಜನಿಕ ಭಾವಿಯನ್ನು ಉಪಯೋಗಿಸುವಂತೆ ಮಾಡಿದರು. ಅಲ್ಲದೆ ಅಸ್ಪೃಶ್ಯರ ಮನೆಯಲ್ಲಿ ಊಟ ಮಾಡಿದರು. ೧೯೬೬ ರಲ್ಲಿ ಆದರ್ಶ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಜಿ.ಜಿ. ಬೇವೂರ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ಈ ಸಂಘ ಇಂದು ಪದವಿಪೂರ್ವ ಕಾಲೇಜ ಮತ್ತು ಪದವಿ ಕಾಲೇಜನ್ನು

ಒಳಗೊಂಡಿದೆ. ಬಡ ಮತ್ತು ಅನಾಥ ಮಕ್ಕಳಿಗೆ ವಸತಿ ನಿಲಯವನ್ನು ಸ್ಥಾಪಿಸಿದರು. ಅವಿರತವಾಗಿ ದೇಶಕ್ಕಾಗಿ ದುಡಿದ ಪರಪ್ಪನವರು ೧ ಜುಲೈ ೧೯೮೭ ರಲ್ಲಿ ಮರಣ ಹೊಂದಿದರು.[೯]

೧೦. ಎಸ್.ಎಸ್. ಪಟ್ಟಣಶೆಟ್ಟಿ

ಬಾಗಲಕೋಟ ತಾಲೂಕಿನ ಶಿವಪುತ್ರಪ್ಪ ಸಣ್ಣತಮ್ಮಪ್ಪ ಪಟ್ಟಣಶೆಟ್ಟಿಯವರು ೮ ಅಗಸ್ಟ ೧೯೧೯ ರಲ್ಲಿ ಸಣ್ಣತಮ್ಮಪ್ಪ ಹಾಗೂ ಹಂಪವ್ವರ ಮಗನಾಗಿ ಗುಳೇದಗುಡ್ಡದಲ್ಲಿ ಜನಿಸಿದರು. ಗುಳೇದಗುಡ್ಡದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿ ಒಂಬತ್ತನೆಯ ತರಗತಿಯವರೆಗೆ ಶಿಕ್ಷಣವನ್ನು ಪಡೆದರು. ನಂತರ ಹತ್ತನೆಯ ತರಗತಿ (ಮೆಟ್ರಿಕ್) ವನ್ನು ಬಾಗಲಕೋಟದಲ್ಲಿ ಪೂರೈಸಿದರು.

ಬಾಗಲಕೋಟದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಪ್ರೌಢ ಶಾಲೆಯಲ್ಲಿ ಮೊದಲಿಗೆ ದೈಹಿಕ ಶಿಕ್ಷಕರಾಗಿ ನೇಮಕಗೊಂಡರು. ನಂತರ ಹಿಂದಿ ಶಿಕ್ಷಕರಾಗಿಯು ಸೇವೆಸಲ್ಲಿಸಿದರು. ಪ್ರತಿದಿನ ಸಾಯಂಕಾಲ ವಾಯು ವಿಹಾರಕ್ಕೆ ಹೋದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಶ್ರೀನಿವಾಸ ಮಂಗಳವೇಡೆಯವರ ಪರಿಚಯವಾಯಿತು. ಮಂಗಳವೇಡೆಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಪಟ್ಟಣಶೆಟ್ಟಿಯವರು ಭಾಗವಹಿಸಿದರು.

ಸಿದ್ಧಪ್ಪ ಮಾಳವಾಡ ಮತ್ತು ಶ್ರೀನಿವಾಸ ಮಂಗಳವೇಡೆ ಅವರ ಮನೆಯಲ್ಲಿ ಮೇಲಿಂದ ಮೇಲೆ ಸಭೆ ಸೇರಿ ಹೋರಾಟದ ರೂಪುರೇಷೆಗಳನ್ನು ತಯಾರಿಸುತ್ತಿದ್ದರು. ಈ ಅವಧಿಯಲ್ಲಿ ಲಿಂಗಯ್ಯ ಜಂಗಿನ, ಲಚ್ಚಪ್ಪ ವಿಜಾಪೂರ, ಹಾಗೂ ಗುಳೇದಗುಡ್ಡದ ಸಿದ್ಧರಾಮಪ್ಪ ತಿಪ್ಪಾ, ರಾಚಪ್ಪ ಶೆಟ್ಟರ, ಚನ್ನಪ್ಪ ಹರವಿ, ಮುದಕಪ್ಪ ಕಲಬುರ್ಗಿ ಮುಂತಾದವರ ಸ್ನೇಹ ಬೆಳೆಯಿತು.

೧೯೪೨ ರಲ್ಲಿ ಗಾಂಧಿಯವರು ಚಲೇಜಾವ್ ಚಳವಳಿಯನ್ನು ಪ್ರಾರಂಭಿಸಿ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ಹೊರಡಿಸಿದಾಗ ಅದರಿಂದ ಪ್ರೇರೇಪಿತರಾದ ಪಟ್ಟಣಶೆಟ್ಟಿಯವರು ತಮ್ಮ ಸ್ನೇಹಿತರ ಜೊತೆ ಕೂಡಿಕೊಂಡು ಬಾಗಲಕೋಟ, ಬದಾಮಿ ನಡುವಿನ ನೀರಲಕೇರಿ ಗ್ರಾಮದ ಹತ್ತಿರ ರೈಲು ಬರುವಾಗ ಹಳಿಗಳನ್ನು ತಪ್ಪಿಸಿದರಿಂದ ಗೂಡ್ಸ ರೈಲಿನ ಎಂಟು ಡಬ್ಬಿಗಳು ಉರುಳಿದವು.

ಬಾಗಲಕೋಟ-ಶಿರೂರ ರಸ್ತೆಯಲ್ಲಿ ಇರುವ ಒಂಬತ್ತು ಟೆಲಿಫೋನ ಕಂಬಗಳ ತಂತಿಯನ್ನು ಕತ್ತರಿಸಿ ಸಂಪರ್ಕವನ್ನು ಕಡಿದು ಹಾಕಿದರು. ಈ ಕಾರ್ಯದಲ್ಲಿ ಇವರ ಜೊತೆ ಬೆನಕಟ್ಟಿ ಗ್ರಾಮದ ಕಟಗೇರಿ ಯಲ್ಲಪ್ಪ ಎಂಬುವರು ಇದ್ದರು.

ಬಾಗಲಕೋಟ ನಗರದ ಹೊರವಲಯ ಮಲ್ಲಾಪೂರ ಗ್ರಾಮದ ಬಳಿ ಘಟಪ್ರಭಾ ನದಿಗೆ ಕಟ್ಟಿರುವ ರೈಲು ಸೇತುವೆ ಎಂಟ ಪೋಲ್‌ನ ಕೆಳಭಾಗದಲ್ಲಿ ಜನರು ಸಂಚರಿಸಲು ಇದ್ದ ಕಟ್ಟಿಗೆಯ ಸೇತುವೆಯನ್ನು ಲಿಂಗಯ್ಯ ಜಂಗಿನ ಮತ್ತು ಪಟ್ಟಣಶೆಟ್ಟಿಯವರು ಕೂಡಿಕೊಂಡು ಪಕ್ಕದ ಹೊಲದಲ್ಲಿದ್ದ ಮುಳ್ಳಿನ ಕಂಟಿಗಳಿಂದ ಸೇತುವೆಯನ್ನು ಸುಟ್ಟು ಹಾಕಿ ಸಂಪರ್ಕವನ್ನು ತಪ್ಪಿಸಿದರು.

ಬ್ರಿಟಿಷ ಸರಕಾರ ರಾಜದ್ರೋಹದ ಅಪಾದನೆಯ ಮೇಲೆ ಇವರನ್ನು ಡಿಸೆಂಬರ ತಿಂಗಳ ೧೯೪೨ ರಲ್ಲಿ ಬಂಧಿಸಿ ಮೂರುದಿನಗಳಕಾಲ ವಿಜಾಪೂರ ಜೈಲಿನಲ್ಲಿ ನಂತರ ಬೆಳಗಾವದ ಹಿಂಡಲಗಾ ಜೈಲಿನಲ್ಲಿ ಒಂದು ವರ್ಷ ಐದು ತಿಂಗಳಕಾಲ ಬಂಧಿಸಿ ಇಡಲಾಯಿತು. ಇಲ್ಲಿರುವಾಗ ಬೈಲಹೊಂಗಲದ ಸ್ವಾತಂತ್ರ್ಯ ಹೋರಾಟಗಾರ ಹಿರೇಮಠ ಎಂಬುವರು ಬೂಟಿಗೆ ಮಳಿ ಬಡಿದು ಅದರಿಂದ ಜೈಲಿನ ಅಧಿಕಾರಿಯ ತಲೆಗೆ ಹೊಡೆದರು. ಈ ಘಟನೆಯಿಂದ ಜೈಲಿನಲ್ಲಿ ಇದ್ದ ಎರಡನೂರು ಸ್ವಾತಂತ್ರ್ಯ ಹೋರಾಟಗಾರರನ್ನು ಮಹಾರಾಷ್ಟ್ರದ ದೌಡಮುಳವಾಡ ಹತ್ತಿರದ ವಿಸಾಪೂರ ಜೈಲಿಗೆ ವರ್ಗಾಯಿಸಲಾಯಿತು. ಸುಮಾರ ಏಳು ದಿನಗಳ ಕಾಲ ಇಲ್ಲಿ ಬಂಧನದಲ್ಲಿ ಇದ್ದರು.

ಇವರ ಮೇಲಿದ್ದ ಕೇಸುಗಳ ವಿಚಾರಣೆ ನ್ಯಾಯಾಲಯದಲ್ಲಿ ಪ್ರಾರಂಭವಾದುದರಿಂದ ಇಸಾಪೂರದಿಂದ ವಿಜಾಪೂರಕ್ಕೆ ಪುನಃ ಕರೆತರಲಾಯಿತು. ವಿಜಾಪೂರದ ತಾಲೂಕ ನ್ಯಾಯಾಲಯದಲ್ಲಿ ವಿಚಾರಣೆ ಮಾಡಿ ತಪ್ಪಿತಸ್ಥರೆಂದು ೫ ವರ್ಷ ಸೆರೆವಾಸ ಶಿಕ್ಷೆ ನೀಡಲಾಯಿತು. ಈ ತೀರ್ಪಿನ ವಿರುದ್ಧ ವಿಜಾಪೂರ ಜಿಲ್ಲಾ ನ್ಯಾಯಾಲಯದಲ್ಲಿ ಹಿರೇಮಠ ಮತ್ತು ಶಿವಪುತ್ರಪ್ಪ ಅಂಗಡಿ ವಕೀಲರುಗಳ ಸಹಾಯದಿಂದ ಮೇಲ್ಮನವಿ ಸಲ್ಲಿಸಿದರು.ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಯಿತು. ನ್ಯಾಯಾಧೀಶರು ಪೊಲೀಸ ಅಧಿಕಾರಿಗೆ ಇವರನ್ನು ಬಂಧಿಸಿದ ದಿನಾಂಕ ಮತ್ತು ಸ್ಥಳ ಯಾವುದು ಎಂದು ಪ್ರಶ್ನಿಸಿದಾಗ ಅಧಿಕಾರಿ ದಾಖಲೆಯನ್ನು ಬಿಟ್ಟು ಬಂದಿದ್ದುದರಿಂದ ಏನೂ ಉತ್ತರಿಸಲಿಲ್ಲ. ನಂತರ ಇವರ ಬಗೆಗೆ ಇತರರನ್ನು ವಿಚಾರಿಸಿದಾಗ ಸರಿಯಾದ ಪುರಾವೆಗಳು ದೊರಯದೆ ಇದ್ದುದರಿಂದ ನಿರಪರಾಧಿ ಎಂದು ಬಿಡುಗಡೆ ಗೊಂಡರು.

ಪುನಃ ತಮ್ಮ ಪ್ರೌಢಶಾಲಾ ಶಿಕ್ಷಕರ ವೃತ್ತಿಯನ್ನು ಮುಂದುವರೆಸಿದರು. ಬಾಗಲಕೋಟದ ವೆಂಕಟಪೇಟೆಯ ವೆಂಕಟೇಶ್ವರ ದೇವಸ್ಥಾನದ ಹತ್ತಿರ ಖಾದಿ ಪ್ರಚಾರ ಕೈಗೊಂಡು ವಿದೇಶಿ ಬಟ್ಟೆಗಳನ್ನು ಸುಟ್ಟು ಹಾಕಿದರು. ಭಾರತವು ಸ್ವಾತಂತ್ರ್ಯಗೊಂಡ ನಂತರ ಹಲವಾರು ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಬಾಗಲಕೋಟ ಜಿಲ್ಲಾ ಸ್ವಾತಂತ್ರ್ಯ ಯೋಧರ ಸಂಘವನ್ನು ಕಟ್ಟಿ ಅದರ ಅಧ್ಯಕ್ಷರಾಗಿಯು ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ತೊಂಬತ್ತೆರಡನೆಯ ಇಳಿ ವಯಸ್ಸಿನಲ್ಲಿಯು ಕೂಡಾ ಯುವಕರನ್ನು ನಾಚಿಸುವಂತೆ ಚಟುವಟಿಕೆಯಿಂದ ಇದ್ದಾರೆ.[೧೦]

೧೧. ಮುದಕಪ್ಪ ಕಲಬುರ್ಗಿ

ಮುದಕಪ್ಪನವರು ೪ ಸಪ್ಟೆಂಬರ್ ೧೯೨೧ರಂದು ಗುಳೇದಗುಡ್ಡದಲ್ಲಿ ಸಿದ್ದರಾಮಪ್ಪ ಮತ್ತು ನಾಗಮ್ಮರ ಎರಡನೆಯ ಮಗನಾಗಿ ಜನಿಸಿದರು. ಕುಟುಂಬದ ಮೂಲ ಉದ್ಯೋಗ ನೇಕಾರಿಕೆ, ಕಡು ಬಡತನದಲ್ಲಿ ಬೆಳೆದರು. ಮುದಕಪ್ಪನವರು ಐದನೆಯ ತರಗತಿಯವರೆಗೆ ಮಾತ್ರ ಶಿಕ್ಷಣವನ್ನು ಪಡೆದುಕೊಂಡು ತಮ್ಮ ಕುಟುಂಬದ ಕಸಬು ನೇಕಾರಿಕೆಯನ್ನು ಪ್ರಾರಂಭಿಸಿದರು. ಅಲ್ಲದೆ ಇವರ ತಂದೆ

ಸಿದ್ದರಾಮಪ್ಪನವರು ಪಿಟೀಲು ಬಾರಿಸುತ್ತಿದ್ದರಿಂದ ಬಿಡುವಿನ ಸಮಯದಲ್ಲಿ ಊರೂರು ತಿರುಗಿ ವಾರಕ್ಕೆ ಐದು ರೂಪಾಯಿಯನ್ನು ಸಂಪಾದಿಸುತ್ತಿದ್ದರು.

೧೯೩೪-೩೫ರ ಕಾಲಾವಧಿಯಲ್ಲಿ ಪೌಜಧಾರನಾದ ರಾಜೇಸಾಬ ಗುಳೇದಗುಡ್ಡದ ಯುವಕರಿಗೆ ಒಂದು ವ್ಯಾಯಾಮ ಶಾಲೆ ಪ್ರಾರಂಭಿಸಬೇಕೆಂದು ಸಲಹೆ ನೀಡಿದ ಎಸ್.ವ್ಹಿ. ಹುರಕಡ್ಲಿ ಮಾಸ್ತರರು ಊರ ಹೊರಗಿನ ಸ್ಮಶಾನದ ಹತ್ತಿರದ ಮಳಿಸ್ವಾಮಿ ಮಠದ ಜಾಗೆಯಲ್ಲಿ ದತ್ತಾತ್ರೇಯ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದರು. ಊರಿನ ಯುವಕರಾದ ಮಡಿವಾಳಪ್ಪ ಪಟ್ಟಣಶೆಟ್ಟಿ, ಸಿದ್ರಾಮಪ್ಪ ತಿಪ್ಪಾ, ಮುದಕಪ್ಪ ಕಲಬುರ್ಗಿ, ಶಿವಪುತ್ರಪ್ಪ ಹರವಿ, ರಾಧಾಕೃಷ್ಣ ಭಂಡಾರಿ, ರಾಮರಕ್‌ರಾಠಿ, ರಾಮಪಾಲ್ ಭಂಡಾರಿ ಮುಂತಾದವರು ಈ ವ್ಯಾಯಾಮ ಶಾಲೆಯಲ್ಲಿ ಪ್ರತಿದಿನ ಸರಮನಿ, ಹುಡತುತ್ತೂ, ಲಾಠಿ ತಿರುಗಿಸುವದು, ಲೇಜಿಂ ಆಡುತ್ತಿದ್ದರು. ಕೆ.ವ್ಹಿ. ಅಯ್ಯರ ಬೆಂಗಳೂರಿನ ವ್ಯಾಯಾಮಪಟು ಯುವಕರಿಗೆ ಸೂರ್ಯ ನಮಸ್ಕಾರ ಹಾಗೂ ಇನ್ನಿತರ ವ್ಯಾಯಾಮ ಕುರಿತು ತರಬೇತಿ ನೀಡುತ್ತಿದ್ದರು. ಮುದಕಪ್ಪನವರು ಡಬ್ಬಲ್ ಬಾರ್ ಮಾಡುವದರಲ್ಲಿ ಪ್ರವೀಣರಾದರೆ, ಶಿವಪುತ್ರಪ್ಪ ಪಟ್ಟಣಶೆಟ್ಟಿಯವರು ಒಬ್ಬರ ಮೇಲೆ ಒಬ್ಬರು ಹತ್ತಿ ಪಿರಾಮಿಡ್ ಮಾಡುತ್ತಿದ್ದರು. ವ್ಯಾಯಾಮ ಶಾಲೆಯು ಕೇವಲ ವ್ಯಾಯಾಮ ಶಾಲೆಯಾಗಿ ಉಳಿಯಲಿಲ್ಲ. ಗುಳೇದಗುಡ್ಡದ ಸ್ವಾತಂತ್ರ್ಯ ಹೋರಾಟಗಳಿಗೆ ಜಾಗೃತಿ ಕೇಂದ್ರವಾಯಿತು. ಇಲ್ಲಿ ಪ್ರತಿ ವರ್ಷ ವಿಜೃಂಭಣೆಯಿಂದ ಗಾಂಧಿ ಜಯಂತಿಯನ್ನು ಆಚರಿಸಲಾಗುತ್ತಿತ್ತು.

ದೀಪಾವಳಿಯ ಸಂದರ್ಭದಲ್ಲಿ ವ್ಯಾಯಾಮ ಶಾಲೆಯಲ್ಲಿ ಮೂರುದಿನಗಳ ಕಾಲ ಉತ್ಸವ ನಡೆಸುತ್ತಿದ್ದರು. ಈ ಉತ್ಸವ ಊರಿನ ಉತ್ಸವವಾಗುತ್ತಿತ್ತು. ಪ್ರತಿ ಶನಿವಾರದಂದು ವ್ಯಾಯಾಮ ಶಾಲೆಗೆ ರಜೆ ಇರುತ್ತಿತ್ತು. ಅಂದು ಎಲ್ಲ ಯುವಕರು ಕೂಡಿಕೊಂಡು ವ್ಯಾಯಾಮ ಶಾಲೆಯನ್ನು ಸ್ವಚ್ಛಗೊಳಿಸಿ ಸಾಯಂಕಾಲ ಏಳು ಗಂಟೆಗೆ ಪೂಜೆ ಮಾಡುತ್ತಿದ್ದರು. ಚಹಾ ಕುಡಿಯುವವರಿಗೆ, ಬೀಡಿ ಸೇದುವವರಿಗೆ, ವ್ಯಾಯಾಮ ಶಾಲೆಯಲ್ಲಿ ಪ್ರವೇಶವಿಲ್ಲ ಎಂದು ಫಲಕವನ್ನು ಹಾಕಿ ಅಂಥವರಿಗೆ ಪ್ರವೇಶವನ್ನು ನಿರಾಕರಿಸಿತು. ಪ್ರತಿದಿನ ಬೆಳಿಗ್ಗೆ ವ್ಯಾಯಾಮ ಶಾಲೆಯಿಂದಲೆ ಪ್ರಭಾತಫೇರಿ ನಡೆಯುತ್ತಿತ್ತು. ಪುನಃ ಅದು ಮುಕ್ತಾಯವಾಗುವದು ಕೂಡಾ ವ್ಯಾಯಾಮ ಶಾಲೆಯಲ್ಲಿಯೇ ಊರಿನ ಯುವಕರು ದೇಶಭಕ್ತಿಗೀತೆಗಳನ್ನು (ಪ್ರಭಾತಫೇರಿ ಸಮಯದಲ್ಲಿ). ಹಾಡುತ್ತಿದ್ದರು.

'ವಿಜಯ ವಿಶ್ವಕಿ ತಿರಂಗಾ ಪ್ಯಾರ
ಝುಂಡಾ ಊಂಚಾ ರಹೇ ಹಮಾರಾ
ಇತನಾ ಸದಾಶಕ್ತಿ ಭರಸಾನೆ ವಾಲಾ
ಪ್ರೇಮ ಸುಧಾ ಭರಸಾನೆ ವಾಲಾ
ದಿರೋಕೋ ಹರಸಾನೆ ವಾಲಾ'

ಹಾಡನ್ನು ಹಾಡಿ ಸ್ವಾತಂತ್ರ್ಯ ಚಳವಳಿಗೆ ಯುವಕರನ್ನು ಹುರಿದುಂಬಿಸುತ್ತಿದ್ದರು. ಅಂದು ಒಂದು ಬಿಲ್ಲೆಗೆ (ನಾಲ್ಕು ಬಿಲ್ಲೆ ಎಂದರೆ ಒಂದು ಆಣೆ) ಎಂಟರಿಂದ ಹತ್ತು ರಾಷ್ಟ್ರೀಯ ನಾಯಕರ ಭಾವಚಿತ್ರಗಳು ದೊರೆಯುತ್ತಿದ್ದವು. ಯುವಕರಿಗೆ ಸರೋಜಿನಿ ನಾಯ್ಡು, ಕಮಲಾಬಾಯಿ ಚಟ್ಟೋಪಾಧ್ಯಾಯ, ಸರ್ದಾರ ವಲಭಬಾಯಿ ಪಟೇಲ, ಮೌಲಾನ ಅಜಾದ್, ಅನಿಬೆಸೆಂಟ್, ಸುಭಾಸಚಂದ್ರಬೋಸ, ಭಗತಸಿಂಗರ ಮುಂತಾದ ನಾಯಕರ ಚಿತ್ರಗಳ ಪ್ರೇರಣೆಯಾಗಿದ್ದವು. ಬಳ್ಳಾರಿ ಎಂಬ ಸಬ್ ಇನ್ಸ್‌ಪೆಕ್ಟರ್ ಮೇಲಿಂದ ಮೇಲೆ ವ್ಯಾಯಾಮ ಶಾಲೆಗೆ ಭೇಟಿ ನೀಡಿ ಕ್ರಾಂತಿಕಾರಕ ಚಟುವಟಿಕೆ ನಡೆಯುವ ಬಗೆಗೆ ತಪಾಸಿಸುತ್ತಿದ್ದನು.

೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಗೊಂಡಾಗ ಮುದಕಪ್ಪನವರು ವೈಯಕ್ತಿಕ ಸತ್ಯಾಗ್ರಹ ಮಾಡಿದರು. ಈ ಸತ್ಯಾಗ್ರಹದಲ್ಲಿ 'ಬ್ರಿಟಿಷ ಸರಕಾರಕ್ಕೆ ಯಾವುದೇ ರೀತಿಯ ಜನ ಹಾಗೂ ಧನ ಸಹಾಯ ಮಾಡಬಾರದು' ಎಂದು ಘೋಷಿಸಿ ಇಂಥ ದಿನದಂದು ಇಂಥ ವ್ಯಕ್ತಿ ವೈಯಕ್ತಿಕ ಸತ್ಯಾಗ್ರಹ ಮಾಡುವರೆಂದು ಸರಕಾರಕ್ಕೆ ಮೊದಲೆ ತಿಳಿಸುತ್ತಿದ್ದರು. ಇದು ಗುಳೇದಗುಡ್ಡದ ಮುನಿಸಿಪಾಲಿಟಿ ಎದುರಿನ ಕಟ್ಟೆಯ ಮೇಲೆ ನಡೆಯುತ್ತಿತ್ತು. ಸತ್ಯಾಗ್ರಹದ ನಂತರ ಸತ್ಯಾಗ್ರಹಿಯನ್ನು ಖೈದು ಮಾಡುತ್ತಿದ್ದರು.

೧೯೪೨ರಲ್ಲಿ ಗಾಂಧಿಜೀಯವರು ಬ್ರಿಟಿಷರ ವಿರುದ್ಧ ಚಲೇಜಾವ ಚಳುವಳಿ ಘೋಷಿಸಿದಾಗ ಗುಳೇದಗುಡ್ಡದ ಯುವಕರು ವಿಜಾಪೂರದ ಚನ್ನಬಸಪ್ಪ ಅಂಬಲಿ, ಇಲಕಲ್ಲದ ಶಿವಲಿಂಗಪ್ಪ ಕಂಠಿ (ಎಸ್.ಆರ್.ಕಂಠಿ), ಬಾಗಲಕೋಟದ ಶಹಾ ವಕೀಲರು ಹಾಗೂ ಚೋಳಚಗುಡ್ಡದ ಸಿದ್ದಪ್ಪ ಮಾಳವಾಡರ ಪ್ರೇರಣೆಯಿಂದ ಹೋರಾಟಕ್ಕೆ ಇಳಿದರು. ಸಿದ್ರಾಮಪ್ಪ ತಿಪ್ಪಾ, ಸಾಲಿಗೌಡರ ಮಾಸ್ತರ ಮತ್ತು ಮುದಕಪ್ಪ ಕಲಬುರ್ಗಿಯವರು ಸೇರಿಕೊಂಡು ಗುಳೇದಗುಡ್ಡದ ಕುಲಕರ್ಣಿ ಗುಂಡಪ್ಪ ಬಾವಿ ಹತ್ತಿರ ಟೆಲಿಫೋನ್ ತಂತಿಯನ್ನು ಕಲಬುರ್ಗಿಯವರು ಕತ್ತರಿಸಿದರು. ಕತ್ತರಿಸಿದ ತಂತಿಯನ್ನು ಸುರಳಿಸುತ್ತಿ ಅದಕ್ಕೆ ಕಲ್ಲನ್ನು ಕಟ್ಟಿ ಬಾವಿಯಲ್ಲಿ ಎಸೆದರು. ಇದು ನಾಲ್ಕು ದಿನದವರೆಗೂ ಯಾರಿಗೂ ಗೊತ್ತಾಗಲಿಲ್ಲ.

ಗುಳೇದಗುಡ್ಡದ ಅಗಸಿಯಲ್ಲಿ ಸೇಂಧಿಯನ್ನು ಮಾರಾಟ ಮಾಡದಂತೆ ತಡೆಗಟ್ಟಲು ಕಲಬುರ್ಗಿಯವರು

ಕುಂಟ ಕುದರಿ ಮೇಲೆ
ಕುಣಕೊತ ಬರತಾಳ
ಈಚಲ ಮರದವ್ವ
ಕಾಸ ಕೊಟ್ಟರ
ಕೈಲಾಸ ತೋರಿಸತಾಳ
ಈಚಲ ಮರದವ್ವ

ಎಂದು ಹಾಡನ್ನು ಹಾಡುತ್ತ ಸೇಂಧಿ ತುಂಬಿದ ಹರವಿಗೆ ಕಲ್ಲನ್ನು ಎಸೆದು ಸೇಂಧಿಯನ್ನು ನಾಶಮಾಡುತ್ತಿದ್ದರು.

ಸ್ವಾತಂತ್ರ್ಯದ ನಂತರ ಹುಬ್ಬಳ್ಳಿಯ ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ನಿವೃತ್ತಿಯ ನಂತರ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ದೆಹಲಿಯಲ್ಲಿ ಅಣ್ಣಾ ಹಜಾರೆಯವರು ಉಪವಾಸ ಸತ್ಯಾಗ್ರಹ ಕುಳಿತಾಗ ಅವರನ್ನು ಬೆಂಬಲಿಸಿ ಹುಬ್ಬಳ್ಳಿಯಲ್ಲಿ ಒಂದು ದಿನ ಉಪವಾಸ ಸತ್ಯಾಗ್ರಹ ಮಾಡಿದರು. ಇಂದಿನ ಸಮಾಜದ ವ್ಯವಸ್ಥೆಯನ್ನು ಕಂಡು ಬೇಸರಗೊಳ್ಳುವರು.[೧೧]

೧೨. ರಾಜಮಾ ಇದ್ದಲಗಿ

ರಾಜಮಾ ಇದ್ದಲಗಿ ವೇಶ್ಯಾವೃತ್ತಿಯನ್ನು ಮಾಡುತ್ತಿದ್ದ ಮುಸ್ಲಿಂ ಮಹಿಳೆ. ಸ್ವಾತಂತ್ರ್ಯ ಚಳವಳಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾಳೆ. ಹುನಗುಂದ ಹಾಗೂ ಕಮತಗಿಯವರೆಗೆ ಕುದುರೆಯ ಮೇಲೆ ಸಂಚರಿಸಿ ಚಳವಳಿಗಾರರಿಗೆ ಗುಪ್ತ ಸಂದೇಶಗಳನ್ನು ತಲುಪಿಸುವ ಕಾರ್ಯಗಳನ್ನು ಮಾಡುತ್ತಿದ್ದಳು. ಜಿಲ್ಲೆಯ ಪ್ರಮುಖ ನಾಯಕರ ಸಂದೇಶಗಳನ್ನು ಗ್ರಾಮಗಳಿಗೆ ರಾತ್ರಿಯ ವೇಳೆಯಲ್ಲಿ ತಲುಪಿಸುತ್ತಿದ್ದುದರಿಂದ ಇವಳನ್ನು 'ಬೆಳ್ಳಿಚುಕ್ಕಿ ವಾರ್ತೆ' ಎಂದು ಕರೆಯುತ್ತಿದ್ದರು. ಕಮತಗಿಯ ಚಳವಳಿಗಾರರು ನದಿಯ ಪ್ರವಾಹಕ್ಕೆ ಕೊಚ್ಚಿ ಹೋಗುವಾಗ ತಾನುಟ್ಟ ಸೀರೆಯನ್ನು ಹಗ್ಗದಂತೆ ನೀಡಿ ಅವರ ಪ್ರಾಣ ರಕ್ಷಿಸಿದಳು. ದೇಶದ ಹಿತಕ್ಕಾಗಿ ಮಹತ್ವದ ಕೆಲಸ ಮಾಡಿದ ಇವರು ಈಗಲು ಜಿಲ್ಲೆಯ ಜನರ ಮನದಲ್ಲಿ ನೆಲೆಸಿದ್ದಾಳೆ. ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಮಾಹಿತಿ ದೊರೆತಿದೆ.[೧೨]

೧೩. ಸೂರ್ಯಪಂಡಿತ ಉಪಾಧ್ಯ

ಸೂರ್ಯಪಂಡಿತ ಉಪಾಧ್ಯಾಯರು ೧೯೨೩ರಲ್ಲಿ ಜಮಖಂಡಿ ಹತ್ತಿರದ ಆಲಗೂರದಲ್ಲಿ ಜನಿಸಿದರು. ತಂದೆ ವಾಸಪ್ಪ ತಾಯಿ ಪದ್ಮಾವತಿ. ಈ ದಂಪತಿಗಳಿಗೆ ಒಂಬತ್ತು ಜನ ಮಕ್ಕಳಲ್ಲಿ ಸೂರ್ಯಪಂಡಿತರು ಎಂಟನೆಯ ಮಗ. ಆಲಗೂರದಲ್ಲಿ ಎರಡನೆಯ ತರಗತಿಯವರೆಗೆ ಓದಿದರು. ಮೂರನೆಯ ತರಗತಿಯನ್ನು ಓದಲು ಸಾವಳಗಿಯ ತಮ್ಮ ಸಂಬಂಧಿ ರಾಮು ಕವಠೆಕರ ಅವರ ಮನೆಗೆ ತೆರಳಿದರು. ಸಾವಳಗಿಯು ಅಂದು ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರ ಸ್ಥಾನವಾಗಿತ್ತು. ಸೂರ್ಯಪಂಡಿತರ ಸಂಬಂಧಿ ರಾಮು ಕವಠೆಕರರು ಸ್ವಾತಂತ್ರ್ಯ ಚಳವಳಿಗಾರರಾಗಿದ್ದರಿಂದ ಸೂರ್ಯಪಂಡಿತರ ಮೇಲೆ ಅವರ ಪ್ರಭಾವ ಬೀರಿತು. ತಮ್ಮ ಶಿಕ್ಷಣವನ್ನು ಮೂರನೆಯ ತರಗತಿಗೆ ಮೊಟಕುಗೊಳಿಸಿ ಆಲಗೂರಿನ ಆದಿನಾಥರ ದೇವಾಲಯದಲ್ಲಿ ಉಪಾಧ್ಯಾಯರಾಗಿ ಧಾರ್ಮಿಕ ವಿಧಿ

ವಿಧಾನಗಳನ್ನು ಕುರಿತು ಪುರೋಹಿತ ವೃತ್ತಿ ಕೈಕೊಂಡರು. ಆಲಗೂರಿನಲ್ಲಿದ್ದರೂ ಸಾವಳಗಿಯ ಸಂಪರ್ಕ ಕಡಿಮೆಯಾಗಿರಲಿಲ್ಲ.

ಸಾವಳಗಿಯ ರಾಮು ಕವಠೆಕರ ಹಾಗೂ ಸುರೇಂದ್ರ ನಾಂದ್ರೇಕರ ಅವರಿಂದ ಪ್ರೇರಣೆಗೆ ಒಳಗಾಗಿ ಚಳವಳಿಗೆ ಇಳಿದರು. ಸುರೇಂದ್ರ ನಾಂದ್ರೇಕರರು ಪುಣೆಯಲ್ಲಿ ಇಂಟರ್ ಮೆರಿಟ್ ಕಲಿಯುತ್ತಿದ್ದನ್ನು ಬಿಟ್ಟು ಬಂದರು. ಸಾವಳಗಿಯಲ್ಲಿ 'ಚರಖಾ ಸಂಘ'ವನ್ನು ಸ್ಥಾಪಿಸಿದರು. ಈ ಸಂಘದಲ್ಲಿ ಮೂವತ್ತರಿಂದ ನಾಲವತ್ತು ಸದಸ್ಯರು ಇದ್ದರು. ಸುರೇಂದ್ರ ನಾಂದ್ರೇಕರ ಮತ್ತು ಭೂಪಾಲ ನಾಂದ್ರೇಕರ ಅವರು ನೂಲುವದನ್ನು ಕಲಿಸುತ್ತಿದ್ದರು. ಚರಖಾ ಸಂಘದ ಸದಸ್ಯರು ತಾವು ತಯಾರಿಸಿದ ಖಾದಿಯ ಬಟ್ಟೆಗಳನ್ನು ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರ ಮಾಡುತ್ತಿದ್ದರು.

ಪ್ರತಿದಿನ ಸಾವಳಗಿಯಲ್ಲಿ ಪ್ರಭಾತಫೇರಿ ಊರಿನ ಪ್ರಮುಖ ಬೀದಿಗಳಲ್ಲಿ ನಡೆಯುತ್ತಿತ್ತು. ಆಗ ಜನರನ್ನು ಹೋರಾಟಕ್ಕೆ ಹುರಿದುಂಬಿಸಲು ರಾಷ್ಟ್ರಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಖಾದಿಯ ಪ್ರಚಾರದ ಸಂದರ್ಭದಲ್ಲಿಯು ಕೂಡ ಜನರ ಮನವೊಲಿಸಲು ರಾಷ್ಟ್ರಭಕ್ತಿ ಮೂಡಿಸುವಂತಹ ಗೀತೆಗಳನ್ನು ಹಾಡುತ್ತಿದ್ದರು.

ಎಂಥಾಶಾಣ್ಯೆ ಮಹಾತ್ಮಾಗಾಂಧಿ ಹಿಂದೂಸ್ಥಾನಕ್ಕೆ ಅವನೆ ತಂದಿ

ಕೂಡಿಸ್ಯಾನ ವಾನರದಂಡ ಹಿಡಿಸ್ಯಾನ ಕೈಯಾಗ ಝೇಂಡಾ

ಗದಗಮಿಸಿ ಬಿಟ್ಟ ಇಂಗ್ಲೆಂಡ, ಇಂಗ್ಲೆಂಡ

ಎಂಥಾಶಾಣ್ಯ ಮಹಾತ್ಮಾಗಾಂಧಿ ಹಿಂದೂಸ್ಥಾನಕ್ಕೆ ಅವನೆ ತಂದಿ

ಖಾದಿ ಉಡರೆಂದು ಖಾದಿ ತೊಡೆರೆಂದ ಹೇಳ್ಯಾನ.

ಸಾವಳಗಿಯಲ್ಲಿ ಸೇವಾದಳದ ಶಾಖೆ ಕೂಡಾ ರಚನೆಯಾಗಿತ್ತು. ಸ್ವಯಂ ಸೇವಕರಿಗೆ ತರಬೇತಿಯನ್ನು ನೀಡಲಾಗುತ್ತಿತ್ತು. ಊರಲ್ಲಿನ ತರುಣರು ಸೇವಾದಳ ಸೇರಲಿ ಅವರ ಮೂಲಕ ಸ್ವಾತಂತ್ರ್ಯ ಲಭಿಸಲಿ ಎಂದು ಸೇವಾದಳದ ಬಗೆಗೆ ಗೀತೆಯನ್ನು ಕಟ್ಟಿ ಹಾಡುತ್ತಿದ್ದರು.

ಸೇರಿರೆಲ್ಲ ತರುಣರೆಲ್ಲ ಈಗ ಶಾಂತಿಯ ಸೇನಾ
ಸೇವೆ ಮಾಡಿರಿ ಈಗ ಜನದ ರಕ್ಷಣಾ ಧನದ ರಕ್ಷಣಾ
ದಾಳಿಯೊಮ್ಮೆ ನಿಮ್ಮ ಮೇಲೆ ಸಾಗಿ ಬಂದರೆ
ಧೈರ್ಯ ಮೇಳರಾಗಿ ಜೀವ ಉಳಿಸುವಾ
ಮೇಳಗಾಗಿ ಸೇರಿ ಈಗ ಶಾಂತಿ ಸೇನಾ

ಸೇವೆ ಮಾಡಿರಿ ಈಗ ಜನದ ರಕ್ಷಣಾ ಧನದ ರಕ್ಷಣಾ
ಶಿಸ್ತು ತಪ್ಪದಾಗಿದೆ ದೇಶದಲಿ ಪುಂಡರು
ವಸ್ತು ವಡವೆಗಳನ್ನು ಕದ್ದು ಒಯುವರಿಲ್ಲಿ
ಶಿಸ್ತಿಗಾಗಿ ಸೇರಿ ನೀವು ಶಾಂತಿ ಸೇನಾ
ಸೇರಿ ಮಾಡಿರಿ ಈಗ ಜನದ ರಕ್ಷಣಾ ಧನದ ರಕ್ಷಣಾ

೧೯೪೧ರಲ್ಲಿ ತುಂಗಳದಲ್ಲಿ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಜಮಖಂಡಿಯ ಹತ್ತನೆಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಭಾಗವಹಿಸಿದ್ದರು. ೧೯೪೨ರಲ್ಲಿ ಚಲೇಜಾವ ಚಳವಳಿ ಪ್ರಾರಂಭವಾದಾಗ ಉಪಾಧ್ಯಾಯರು ಸಾವಳಗಿಯ ಹೋರಾಟಗಾರರ ಜೊತೆ ಸೇರಿಕೊಂಡು ಅನೇಕ ವಿಧ್ವಂಸರ ಚಟುವಟಿಕೆಗಳನ್ನು ಕೈಗೊಂಡರು. ಸಾವಳಗಿಯಲ್ಲಿ ಜಮಖಂಡಿ ಅರಸ ಬಂಗ್ಲೆಯ ಮತ್ತು ಜಮಖಂಡಿ ಮತ್ತು ಸಾವಳಗಿಯ ಮಧ್ಯೆ ತಾರ. ತಂತಿಗಳನ್ನು ಕತ್ತರಿಸಿ ಹಾಕಿದರು. ಈ ವೇಳೆಯಲ್ಲಿ ಪೊಲೀಸರು ಬೆನ್ನು ಹತ್ತಿದಾಗ ರಾತ್ರಿ ಕತ್ತಲಲ್ಲಿ ಸಾವಳಗಿ ಮತ್ತು ಕುರಗೋಡ ಗುಡ್ಡದಲ್ಲಿ ತಪ್ಪಿಸಿಕೊಂಡರು.

ಕುರಗೋಡದಲ್ಲಿ ಸೇಂಧಿಗಿಡಗಳು ಬಹಳ ಇದ್ದುದರಿಂದ ಪ್ರತಿದಿನ ಇಲ್ಲಿ ಸರಾಯಿ ತಯಾರಿಸಿ ಎರಡು ಒಂಟೆಗಳ ಮೇಲೆ ತುಂಬಿಕೊಂಡು ಜಮಖಂಡಿಗೆ ತರುತ್ತಿದ್ದರು. ಇದನ್ನು ತಡೆಗಟ್ಟಲು ಕುರಗೋಡ ಹಳ್ಳದಲ್ಲಿಯ ಸೇಂಧಿಗಿಡಗಳನ್ನು ಕಡಿದು ಹಾಕಿದರು

ಘಾರಿಸ ನಾಂದ್ರೇಕರ, ನಾರಾಯಣ ಕಾಟ್ಕರ, ಬಾಳುತೇಲಿ, ಭೀಮು ಮಾಳಿ, ಭೂಪಾಲ ನಾಂದ್ರೇಕರ, ಅಪ್ಪಣ್ಣ ತೋರುವ, ಯಶವಂತ ತೋರುವ ಜೊತೆ ಸೂರ್ಯಪಂಡಿತ ಉಪಾಧ್ಯಯರು ಸೇರಿಕೊಂಡು ಸಾವಳಗಿಯ ಮೇಸ್ತ್ರಿ ಆಫೀಸ ಮತ್ತು ಸರಕಾರಿ ಶಾಲೆಗಳನ್ನು ಸುಟ್ಟರು. ರಾಮು ಕವಠೇಕರ ಅವರು ತೀವ್ರಗಾಮಿಗಳು ಆಗಿದ್ದು ಅವರ ಮನೆಯಲ್ಲಿ ಪೊಲೀಸರು ಜಪ್ತಿ ಮಾಡಿದಾಗ ಪಿಸ್ತೂಲ ದೊರೆಯಿತು. ಸಂಸ್ಥಾನದಲ್ಲಿ ಪ್ರಜೆಗಳು ಆರ್ಥಿಕವಾಗಿ ಬಲಿಷ್ಠರಾದರೆ ಸ್ವಾತಂತ್ರ್ಯ ಹೊಂದುವ ಮನೋಭಾವನೆ ಬರುವದು ಎಂದು ಬ್ರಿಟಿಷ ಸರಕಾರದ ಒತ್ತಡಕ್ಕೆ ಮಣಿದು ಮನೆಗಳಲ್ಲಿರುವ ಹೆಚ್ಚಿನ ಜೋಳಗಳನ್ನು ಜಮಖಂಡಿ ಸಂಸ್ಥಾನದಲ್ಲಿ ಜಪ್ತು ಮಾಡಲಾಯಿತು. ಇದನ್ನು ಉಪಾಧ್ಯಯರು ವಿರೋಧಿಸಿ ಚಳವಳಿ ಮಾಡಿದರು.

ಉಪಾಧ್ಯಯರನ್ನು ಬಂಧಿಸಿ ಡಿಫೆನ್ಸ ಆಫ್ ಇಂಡಿಯಾ ಕಲಂ ೨೬ರ ಅನ್ವಯ ಶಿಕ್ಷೆಯಾಗಿ ಜಮಖಂಡಿ ಜೈಲಿಗೆ ಹಾಕಲಾಯಿತು. ಜೈಲಿನಲ್ಲಿ ರಾಜಕೀಯ ಖೈದಿಗಳನ್ನು ಕ್ರಿಮಿನಲ್ ಖೈದಿಗಳಿಗಿಂತ ಕೀಳುಮಟ್ಟದಲ್ಲಿ ನೋಡಿಕೊಳ್ಳುತ್ತಿದ್ದರು. ಒಂದು ದಿನಕ್ಕೆ ನಾಲ್ಕು ರೊಟ್ಟಿಗಳನ್ನು ಮಾತ್ರ ನೀಡುತ್ತಿದ್ದರು. ಎರಡು ವರ್ಷ ಶಿಕ್ಷೆ ಅನುಭವಿಸಿದ ನಂತರ ಆಲಗೂರಿಗೆ ಹಿಂತಿರುಗಿದಾಗ ಉಪಾಧ್ಯಯರ ಮನೆಯವರು ಮಗ ಜೈಲು ವಾಸಮಾಡಿ ಕುಲಗೆಟ್ಟಿದ್ದಾನೆ ಎಂದು ಒಳಸೇರಿಸಿಕೊಳ್ಳಲಿಲ್ಲ. ನಂತರ ಊರಿನ ಹಿರಿಯರು

ತಿಳಿ ಹೇಳಿದಾಗ ಮನೆ ಒಳಗೆ ಪ್ರವೇಶಿಸಲು ಅನುಮತಿ ದೊರೆಯಿತು. ಕೆಲವು ಸಾರಿ ಮನೆಯವರ ವಿರೋಧದ ನಡುವೆಯು ದೇಶಕ್ಕಾಗಿ ಹೋರಾಡುವ ಸ್ಥಿತಿ ಬಂದು ಒದಗುತ್ತಿತ್ತು.[೧೩]

೧೪. ಈಶ್ವರಪ್ಪ ಸತ್ಯಪ್ಪ ಹಾಡಕಾರ

ಈಶ್ವರಪ್ಪನವರು ಸತ್ಯಪ್ಪ ಮತ್ತು ಲಕ್ಕವ್ವರ ಹಿರಿಯ ಪುತ್ರರಾಗಿ ಜನಿಸಿದರು. ಮೂಲತ: ರೈತಾಪಿ ಕುಟುಂಬದವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಇಂಡಿ ತಾಲೂಕಿನ ಇಂಚಗೇರಿ ಮಠದ ಸ್ವಾಮಿಗಳಾದ ಹುಬ್ಬಳ್ಳಿಯ ಮಾಧವಾನಂದ ಪ್ರಭುಜೀಯವರ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

ರನ್ನ ಬೆಳಗಲಿಯಲ್ಲಿಯೇ ನಾಲ್ಕಾಣೆ ಕೊಟ್ಟು ಕಾಂಗ್ರೆಸನ ಸದಸ್ಯರಾದರು. ಕಾಂಗ್ರೆಸ ಸೇವಾದಳದ ಘಟಕವು ರನ್ನ ಬೆಳಗಲಿಯಲ್ಲಿ ಆಗಲೇ ಪ್ರಾರಂಭವಾಗಿತ್ತು. ಸೇವಾದಳವನ್ನು ಸೇರಿದರು. ಸೇವಾದಳದ ಸ್ವಯಂ ಸೇವಕರಿಗೆ ಭೀಮಪ್ಪ ಬೀಜಾನವರ ತರಬೇತಿ ನೀಡುತ್ತಿದ್ದರು. ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ ಪ್ರತಿದಿನ ಲಾಟಿ ತಿರುಗಿಸುವದ ವ್ಯಾಯಾಮ ಹಾಗೂ ಯೋಗದ ತರಬೇತಿ ಪಡೆಯುತ್ತಿದ್ದರು. ಪ್ರತಿದಿನ ಬೆಳಿಗ್ಗೆ ಸೇವಾದಳದ ಸಮವಸ್ತ್ರಗಳಾದ ಬಿಳಿಯ ಖಾದಿ ಟೊಪ್ಪಿಗೆ, ಖಾದಿ ಅಂಗಿ ಹಾಗೂ ಖಾದಿ ಚಡ್ಡಿಯನ್ನು ಹಾಗೂ ಬೂಟುಗಳನ್ನು ಧರಿಸಿ ಒಂದು ಕೈಯಲ್ಲಿ ಲಾಠಿ ಹಾಗೂ ಇನ್ನೊಂದು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಪ್ರಭಾತ ಫೇರಿ ಮಾಡುತ್ತಾ

ಸೇವಾದಳದ ಸೈನಿಕರೆ
ಚಳವಳಿ ಮಾಡುವರೆ
ತಿಳಿಯನು ಹೇಳುವರೆ
ಬಂಡೆಬ್ಬಿಸಿ ಸರಕಾರ
ಓಡಿಸುವವರೆ

ಎಂದು ದೇಶಭಕ್ತಿ ಗೀತೆಗಳನ್ನು ಹಾಡುತ್ತಾ ಚಳವಳಿಗೆ ಜನರನ್ನು ಜಾಗೃತಗೊಳಿಸುತ್ತಿದ್ದರು.

ರನ್ನ ಬೆಳಗಲಿಯ ಸೇವಾದಳದ ಪ್ರಮುಖರಾದ ಭೀಮಪ್ಪ ಬೀಜಾನವರ, ಭಗವಂತ ಮುಂತಾದವರ ಜೊತೆಗೂಡಿ ಬೆಳಗಲಿಯ ಸುತ್ತಲಿನ ಊರುಗಳಾದ ಮಹಾಲಿಂಗಪೂರ, ನಾಗರಾಳ ಜೀಸಲದಿನ್ನಿ ಸೂರಗಾಂವ ಮುಂತಾದ ಕಡೆಗೆ ಹೋಗಿ ಪ್ರಭಾತಫೇರಿ ಮಾಡಿ ಊರಲ್ಲಿನ ಎಲ್ಲ ಜನರನ್ನು ಒಂದುಗೂಡಿಸಿ ದೇಶದ ದುಸ್ಥಿತಿಯ ಬಗೆಗೆ, ರಾಷ್ಟ್ರೀಯ ನಾಯಕರ ಜೀವನಗಳನ್ನು ತಿಳಿಹೇಳಿ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬರು ದುಡಿಯಬೇಕೆಂದು ಹೇಳಿ ದೇಶ ಸೇವೆಗೆ ಜನರನ್ನು ಸನ್ನದ್ಧರಾಗಿಸುತ್ತಿದ್ದರು.

೧೯೪೨ರ ಚಲೇಜಾವ ಚಳವಳಿಯಲ್ಲಿ ಭಾಗವಹಿಸಿ ಬೆಳಗಲಿಯ ಇತರ ಹೋರಾಟಗಾರರಾದ ಯಮನಪ್ಪ ಕಣಬೂರ, ಭೀಮಪ್ಪ ಅವರ ಜೊತೆ ಸೇರಿ ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಸೇಂಧಿಗಿಡಗಳನ್ನು ಕಡಿದು ಹಾಕಿದರು.

ಮುಧೋಳ ತಾಲೂಕಿನ ಗುರ್ಲಾಪೂರ ಗ್ರಾಮದಲ್ಲಿ ಬ್ರಿಟಿಷ ಅಧಿಕಾರಿಗಳಿಗಾಗಿ ನಿರ್ಮಿಸಲಾದ ಸರಕಾರ ಅತಿಥಿಗೃಹಕ್ಕೆ ರಾತ್ರಿ ಹತ್ತು ಗಂಟೆಯ ಸಮಯಕ್ಕೆ ಸತ್ಯಪ್ಪ ಹಾಡಕಾರ ಹಾಗೂ ಇನ್ನಿತರ ಸ್ವಾತಂತ್ರ್ಯ ಹೋರಾಟಗಾರರು ದಾಳಿ ಮಾಡಿ ಅತಿಥಿಗೃಹದ ಸುತ್ತಲೂ ಇರುವ ತಾರ ತಂತಿಗಳನ್ನು ಕಡಿದು ಹಾಕಿ ಸಂಪರ್ಕ ತಪ್ಪಿಸಿ ಸರಕಾರಿ ಅತಿಥಿಗೃಹವನ್ನು ಸುಟ್ಟು ಹಾಕಿದರು. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಹಾಡಕರರನ್ನು ಹುಡುಕಲು ಪ್ರಾರಂಭಿಸಿದರು. ಆಗ ಮನೆ ತೊರೆದು ಹೊಲ ಹಾಗೂ ಗುಡ್ಡಗಳಲ್ಲಿ ವಾಸಿಸುತ್ತಿದ್ದರು. ಊರಿನ ಜನರು ತಮ್ಮ ತೋಟದಲ್ಲಿ ಆಶ್ರಯ ನೀಡುತ್ತಿದ್ದರು. ಹಟ್ಟಿನಾಗ, ಮಂದಕನಾರು ಹೊಸಪಟ್ಟಿ ಮುಂತಾದ ಮನೆತನದವರು ಇವರಿಗೆ ಆಹಾರ ನೀಡಿ ತಮ್ಮ ತೋಟದಲ್ಲಿ ಆಶ್ರಯ ನೀಡುತ್ತಿದ್ದರು. ಊರಲ್ಲಿ ತಪಾಸಣೆ ತೀವ್ರಗೊಂಡಾಗ ಅಥಣಿಗೆ ಹೋದರು ಅಲ್ಲಿ ನಿಜಾಮುದ್ದಿನ್ ಎಂಬ ಡಿ.ವೈ.ಎಸ್.ಪಿಯಿಂದ ಬಂಧನಕ್ಕೆ ಒಳಗಾದರು. ಬಿಡುಗಡೆ ನಂತರ ಹೋರಾಟವನ್ನು ಮುಂದುವರೆಸಿದರು.

ಸ್ವಾತಂತ್ರ್ಯ ನಂತರ ಅಬಕಾರಿ ಇಲಾಖೆಯಲ್ಲಿ ಗುತ್ತಿಗೆ ನೌಕರರಾಗಿ ಸೇವೆ ಸಲ್ಲಿಸಿದರು. ಇಂದು ಸಮಾಜ ಸೇವೆ ಮಾಡುತ್ತ ಕಾಲ ಕಳೆಯುತ್ತಿದ್ದಾರೆ.[೧೪]

ಅಡಿ ಟಿಪ್ಪಣಿಗಳು

೧. ಸಂದರ್ಶನ, ಶಿವಯೋಗೆಪ್ಪ ಅಕ್ಕಿ, ಮಲ್ಲಾಪೂರ, ತಾ. ಬಾಗಲಕೋಟ, ದಿನಾಂಕ ೧೧-೧೨-೨೦೧೨.

೨. ಸಂದರ್ಶನ, ರುದ್ರಪ್ಪ ಅಂಟಿನ ಮತ್ತು ಹನುಮಂತ ಅಂಟಿನ, ನಿಂಗಪ್ಪನವರು ಪುತ್ರರು, ಸಿದ್ಧಾಪೂರ ತಾ. ಬೀಳಗಿ, ದಿನಾಂಕ ೧೩-೦೪-೨೦೧೩.

೩. ಸಂದರ್ಶನ, ವಾಸುದೇವ ವಿಜಾಪುರ, ಬಾಗಲಕೋಟ, ದಿನಾಂಕ ೦೪-೦೮-೨೦೧೪.

೪. ಸಂದರ್ಶನ, ಸಂಗಯ್ಯ ಮಠಪತಿ, ಬೆಣ್ಣೂರು, ತಾ. ಬಾಗಲಕೋಟ, ದಿನಾಂಕ ೦೫-೦೭-೨೦೧೨.

೫. ಸಂದರ್ಶನ, ಸದಾಶಿವ ಮದಕಟ್ಟಿ, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೦೪-೦೪-೨೦೧೩.

೬. ಸಂದರ್ಶನ, ಮಲ್ಲಪ್ಪ ಯಂಡಿಗೇರಿ, ಬಾಗಲಕೋಟ, ದಿನಾಂಕ ೧೩-೦೭-೨೦೧೨.

೭. ಲಕ್ಕಪ್ಪ ಮೇಟಿಯವರ ವೈಯಕ್ತಿಕ ಟಿಪ್ಪಣಿಗಳು.

೮. ಶ್ರೀರಾಮ ಇಟ್ಟಣ್ಣವರ, ಸ್ವಾತಂತ್ರ್ಯ ಹೋರಾಟಗಾರ್ತಿ ಸೀತಾಬಾಯಿ ಸಿಮಸಾನಿ, ವಿನಿ ಪ್ರಕಾಶನ, ಬೀಳಗಿ, ೨೦೦೦. ಪುಟ ಸಂಖ್ಯೆ ೧೫.

೯. ಸಂದರ್ಶನ, ಅಶೋಕ ಎಮ್. ಸಜ್ಜನ, ಬೇವೂರ, ತಾ. ಬಾಗಲಕೋಟ, ದಿನಾಂಕ ೦೬-೧೦-೨೦೧೪.

೧೦. ಸಂದರ್ಶನ, ಎಸ್.ಎಸ್. ಪಟ್ಟಣಶೆಟ್ಟಿ, ಬಾಗಲಕೋಟ, ದಿನಾಂಕ ೦೫-೧೦-೨೦೧೦.

೧೧. ಸಂದರ್ಶನ, ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ, ತಾ. ಬದಾಮಿ, ದಿನಾಂಕ ೧೫ ಎಪ್ರಿಲ್ ೨೦೧೨.

೧೨. ಕ್ಷೇತ್ರ ಕಾರ್ಯದಿಂದ.

೧೩. ಸಂದರ್ಶನ, ಸೂರ್ಯಪಂಡಿತ ಉಪಾಧ್ಯಾಯ, ಅಲಗೂರು, ತಾ. ಜಮಖಂಡಿ, ದಿನಾಂಕ ೨೦-೦೩-೨೦೧೬.

೧೪. ಸಂದರ್ಶನ, ಈಶ್ವರಪ್ಪ ಹಾಡಕಾರ, ರನ್ನಬೆಳಗಲಿ, ತಾ. ಮುಧೋಳ, ದಿನಾಂಕ ೧೦-೦೯-೧೨೧೩.

ಅಧ್ಯಾಯ ೧೨

ಉಪಸಂಹಾರ

ಅಧ್ಯಾಯ ೧೨

ಉಪಸಂಹಾರ

ಭಾರತಕ್ಕೆ ಕೇವಲ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಭಾರತೀಯ ಅರಸರ ಆಂತರಿಕ ಕಚ್ಚಾಟದ ಲಾಭವನ್ನು ಪಡೆದುಕೊಂಡು ರಾಜಕೀಯವಾಗಿ ಪ್ರಬಲರಾಗತೊಡಗಿದರು. ೧೭೫೭ರ ಪ್ಲಾಸಿ ಕದನ ಮತ್ತು ೧೭೬೪ರ ಬಕ್ಸಾರ ಕದನಗಳ ವಿಜಯಗಳು ಬ್ರಿಟಿಷರ ಏಳಿಗೆಗೆ ಕಾರಣಗಳಾದವು. ಮುಂದೆ ಹಂತ ಹಂತವಾಗಿ ಇಡೀ ಭಾರತವನ್ನೇ ಆಕ್ರಮಿಸಿಕೊಂಡರು. ಪ್ರಸ್ತುತ ಪ್ರಬಂಧದಲ್ಲಿ ೧೮೫೭ರ ದಂಗೆಯಿಂದ ಹಿಡಿದು ೧೯೪೭ರಲ್ಲಿ ಭಾರತ ಸ್ವತಂತ್ರವಾಗುವವರೆಗೆ ಬಾಗಲಕೋಟ ಜಿಲ್ಲೆಯ ಚಳವಳಿಯನ್ನು ಗಮನದಲ್ಲಿಟ್ಟುಕೊಂಡು ಈ ಮಹಾಪ್ರಬಂಧದಲ್ಲಿ ನಿರೂಪಿಸಲಾಗಿದೆ.

೧೮೫೭ರಲ್ಲಿ ಭಾರತೀಯರು ಬ್ರಿಟಿಷ ಪ್ರಭುತ್ವದ ವಿರುದ್ಧ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ದಂಗೆ ಆರಂಭವಾದ ಸಮಯದಲ್ಲಿ ಬಾಗಲಕೋಟ ಜಿಲ್ಲೆಯ ಮುಧೋಳ ಸಂಸ್ಥಾನದ ಚಿಕ್ಕ ಗ್ರಾಮದ ಹಲಗಲಿಯ ಬೇಡರು ದಂಗೆ ಎದ್ದರು. ಬ್ರಿಟಿಷರ ಶಸ್ತ್ರಾಸ್ತ್ರ ಕಾಯ್ದೆಯನ್ನು ವಿರೋಧಿಸುವ ಮೂಲಕ ಆಡಳತ ಯಂತ್ರಕ್ಕೆ ಬಿಸಿ ಮುಟ್ಟಿಸಿದರು. ದಂಗೆಯಲ್ಲಿ ಭಾಗವಹಿಸಿದ ಪ್ರಮುಖ ೧೯ ಜನರನ್ನು ಗಲ್ಲಿಗೇರಿಸಲಾಯಿತು. ಇದೆ ಅವಧಿಯಲ್ಲಿ ಜಮಖಂಡಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಜನರು ಸನ್ನದ್ದರಾಗತೊಡಗಿದರು.

ಮುಂಬಯಿ ಕರ್ನಾಟಕ ಭಾಗದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಜನರ ಮನೆಗಳಿಗೆ ಹಾಗೂ ಮನ ಮನಗಳಿಗೆ ಮುಟ್ಟಿಸಿದವರೆಂದರೆ ಬಾಲಗಂಗಾಧರ ತಿಲಕರು. ಸಾರ್ವಜನಿಕ ಗಣೇಶೋತ್ಸವ, ಶಿವಾಜಿ ಜಯಂತೋತ್ಸವ ಆರಂಭಿಸಿ ಈ ಭಾಗದ ಜನರಿಗೆ ರಾಷ್ಟ್ರೀಯತೆಯ ಕಲ್ಪನೆಯನ್ನು ಮೂಡಿಸಿದರು. ಸ್ವದೇಶಿ ಚಳವಳಿಯಿಂದ ಮುಧೋಳ, ಜಮಖಂಡಿ, ಬಾಗಲಕೋಟಗಳಲ್ಲಿ ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಸ್ವದೇಶಿ ವಸ್ತುಗಳ ಪ್ರಚಾರ ಆರಂಭಗೊಂಡಿತು. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ನೀಡಲು ರಾಷ್ಟ್ರೀಯ ಶಾಲೆಗಳು ಆರಂಭವಾದವು. ಅಸಹಕಾರ ಚಳವಳಿಗೆ 'ಕರ್ನಾಟಕ ವೈಭವ' ಮತ್ತು 'ಕನ್ನಡಿಗ' ಪತ್ರಿಕೆಗಳ ಪ್ರಚಾರ ಮಾಡಿದವು. ಗಾಂಧೀಜಿಯವರು ಬಾಗಲಕೋಟಗೆ ಬಂದಾಗ ಕರ್ನಾಟಕದ ಮುಖಂಡರುಗಳಾದ ಶ್ರೀನಿವಾಸರಾವ ಕೌಜಲಗಿ, ನಾ.ಸು. ಹರ್ಡೀಕರ, ಗಂಗಾಧರರಾವ್ ದೇಶಪಾಂಡೆ ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡರು. ಇದರಿಂದ ಜನಗಳ ಮನದಲ್ಲಿ ರಾಷ್ಟ್ರೀಯತೆ ಕಲ್ಪನೆ ಮೂಡಿ ನಾಯಕರೊಂದಿಗೆ ಕೈಜೋಡಿಸಿದರು.

ಬಾಗಲಕೋಟ, ಹುನಗುಂದ, ಕಲಾದಗಿಗಳಲ್ಲಿ ಖಾದಿ ಕೇಂದ್ರಗಳನ್ನು ಸ್ಥಾಪಿಸಿ ರಚನಾತ್ಮಕ ಕಾರ್ಯಗಳನ್ನು ಆರಂಭಿಸಲಾಯಿತು. ಜಿಲ್ಲೆಯ ವಿವಿಧ ಕಡೆಗಳಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು. ವಿದೇಶಿ ವಸ್ತುಗಳ ಬಹಿಷ್ಕಾರ ಗೊಂಡವು. ಮನೆಯಲ್ಲಿ ಕಲಿಯುತ್ತಿದ್ದ

ಬಾಗಲಕೋಟದ ಯುವಕರು ಗಾಂಧೀಜಿಯವರ ಕರೆಗೆ ಓಗೊಟ್ಟು ಕಾಲೇಜುಗಳನ್ನು ತೊರೆದು ಊರಿಗೆ ಮರಳಿ ರಾಷ್ಟ್ರೀಯ ಶಾಲೆಯ ಶಿಕ್ಷಕರಾದರು. ಶ್ರೀನಿವಾಸ ಕೌಜಲಗಿ ಕಿರಸೂರ, ಬಾಡಗಂಡಿ, ಮುಂತಾದ ವಕೀಲರು ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು.

ಅಖಂಡ ಬಿಜಾಪೂರ ಜಿಲ್ಲೆಯ ಜನತೆಗೆ ಸ್ವಾತಂತ್ರ್ಯ ಚಳವಳಿಗೆ ಸ್ಪೂರ್ತಿ ತುಂಬಿದ್ದು, ಬೆಳಗಾವಿ ಕಾಂಗ್ರೆಸ ಅಧಿವೇಶನ. ಗಾಂಧೀಜಿಯವರು ಇದರ ಅಧ್ಯಕ್ಷತೆ ವಹಿಸಿರುವದರಿಂದ ಈ ಭಾಗದ ಜನರು ಪ್ರೀತಿಯಿಂದ ಅಧಿವೇಶನದಲ್ಲಿ ಭಾಗವಹಿಸಿದರು. ಕಾನೂನುಭಂಗ ಚಳವಳಿಗೆ ಗಾಂಧೀಜಿಯವರು ಕರೆ ಕೊಟ್ಟಾಗ ಜಿಲ್ಲೆಯಾದ್ಯಂತ ಚಳವಳಿ ಆರಂಭಗೊಂಡಿತು. ದಂಡಿಯಲ್ಲಿ ಮಹಾತ್ಮರು ಉಪ್ಪಿನ ಕಾಯ್ದೆಯನ್ನು ಮುರಿದರು. ಪ್ರತಿಯೊಬ್ಬ ದೇಶಾಭಿಮಾನಿಯು ಉಪ್ಪಿನ ಕಾಯ್ದೆ ಮುರಿದು ಸ್ವದೇಶಿ ಉಪ್ಪನ್ನು ತಯಾರಿಸುವಂತೆ ಕರೆ ನೀಡಿದರು. ಬಾಗಲಕೋಟ ಜಿಲ್ಲೆಯಲ್ಲಿ ಯಾವುದೇ ಸಮುದ್ರ ಇಲ್ಲದೆ ಇರುವದರಿಂದ ಜಿಲ್ಲಾ ಕಾಂಗ್ರೆಸ ಕಮಿಟಿಯು ಬೀಳಗಿ ತಾಲೂಕಿನ ಬಿಸನಾಳ ಗ್ರಾಮದ ಸವಳು ಭೂಮಿಯಲ್ಲಿ ಉಪ್ಪು ತಯಾರಿಸಲು ಆಯ್ಕೆ ಮಾಡಿಕೊಂಡಿತು. ಸುಮಾರು ಒಂದು ತಿಂಗಳ ಕಾಲ ಉಪ್ಪನ್ನು ತಯಾರಿಸಿ ಗಲಗಲಿ, ಬಾಗಲಕೋಟ ಮತ್ತಿತರ ಕಡೆಗಳಲ್ಲಿ ಮಾರಾಟ ಮಾಡಲಾಯಿತು.

ಸೇಂಧಿಗಿಡಗಳನ್ನು ಕಡಿಯುವುದು ಹಾಗೂ ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವ ಮೂಲಕ, ಸ್ವದೇಶಿ ಪ್ರಚಾರ, ಹಾಗೂ ಖಾದಿ ಪ್ರಚಾರದ ಮೂಲಕ ದೇಶದ ಅರ್ಥವ್ಯವಸ್ಥೆಯನ್ನು ಸದೃಢಗೊಳಿಸ ತೊಡಗಿದರು. ಸರಕಾರಿ ಕಟ್ಟಡಗಳ ಮೇಲೆ ಧ್ವಜಾರೋಹಣ ಮಾಡಲು ಕರೆ ನೀಡಿದಾಗ ಗುಳೇದಗುಡ್ಡದ ಪುರಸಭೆಯ ಮೇಲೆ ಫಕೀರವ್ವ ಹಂಪಿಹೊಳಿ ಎಂಬ ಮಹಿಳೆ ಪೊಲೀಸ ಕಾವಲಿನ ಮಧ್ಯದಲ್ಲಿ ಧ್ವಜಾರೋಹಣವನ್ನು ಮಾಡಿದಳು. ವಿಜಾಪೂರ, ಬಾಗಲಕೋಟ, ಹುನಗುಂದ ಮುಂತಾದ ಕಡೆಗಳಲ್ಲಿ ಧ್ವಜಾರೋಹಣ ಮಾಡಲಾಯಿತು. ಸೊಲ್ಲಾಪೂರದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಬಾಗಲಕೋಟ ಚಳವಳಿಗಾರರು ಭಾಗವಹಿಸಿದ್ದರು. ಸೇಂಧಿಗಿಡ ಕಡಿಯುವುದರಿಂದ ಮಳೆಬರುವದಿಲ್ಲ ಹಾಗೂ ಸ್ವಯಂ ತಯಾರಿಸಿದ ಉಪ್ಪನ್ನು ತಿಂದರೆ ಹೊಟ್ಟೆ ಜಾಡಿಸುತ್ತದೆ ಎಂದು ಹೇಳಿ ಚಳವಳಿಯನ್ನು ತಡೆಗಟ್ಟಲು ನಾನಾ ಉಪಾಯಗಳನ್ನು ಕೆಲವು ಸರಕಾರಿ ಅಧಿಕಾರಿಗಳು ಮಾಡುತ್ತಿದ್ದರು. ಇವುಗಳನ್ನು ಲೆಕ್ಕಿಸದೆ ಜಿಲ್ಲೆಯ ಜನರು ಚಳವಳಿಯಲ್ಲಿ ಭಾಗವಹಿಸಿದರು.

ಅಸ್ಪೃಶ್ಯತೆ ನಿವಾರಣೆ ಮಾಡುವದು ಸ್ವಾತಂತ್ರ್ಯ ಚಳವಳಿಯ ಅಂಗವಾಗಿತ್ತು. ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಭಾರತೀಯ ಸಮಾಜದಿಂದ ತೊಲಗಿಸಲು ಪಣ ತೊಟ್ಟಿದ್ದರು. ಹರಿಜನರಿಗೂ ಇತರರಂತೆ ಬದಕುವ ಅವಕಾಶ ದೊರೆತಾಗ ಮಾತ್ರ ಭಾರತಕ್ಕೆ ನಿಜವಾದ ಸ್ವರಾಜ್ಯ ದೊರಕುವದು ಎಂದು ಸಾರುತ್ತಿದ್ದರು. ಬಿಜಾಪೂರದಲ್ಲಿ ಮುಂಬಯಿ ಪ್ರಾಂತಿಕ ಕಾಂಗ್ರೆಸ ಸಮ್ಮೇಳನದಲ್ಲಿ ಅಸ್ಪೃಶ್ಯನಿವಾರಣಾ ಸಮ್ಮೇಳನವನ್ನು ಆಯೋಜಿಸಿ ಗಾಂಧಿಯವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರು.

ಅಸ್ಪೃಶ್ಯರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕೆಂದರು. ಕಾಕಾ ಖಾರಖಾನೀಸರು ವಿಜಾಪೂರದಲ್ಲಿ ಹರಿಜನ ಬಾಲಕರಿಗಾಗಿ ವಸತಿ ಶಾಲೆ ಆರಂಭಿಸಿ ಅವರಿಗೆ ಶಿಕ್ಷಣ ನೀಡಿದರು. ಗಲಗಲಿಯ ಸಂಪ್ರದಾಯಸ್ಥ ಬ್ರಾಹ್ಮಣರಾದ ರಾಮಾಚಾರ್ಯ ಕಾಖಂಡಕಿಯವರು ತಿಗುಳರ ಕನ್ಯೆಯನ್ನು ವಿವಾಹವಾಗಿ ಸಮಾಜದಲ್ಲಿ ಬದಲಾವಣೆ ತರಲು ಮುಂದಾದರು. ಹೀಗೆ ಬಾಗಲಕೋಟ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿಯ ನೆಪದಲ್ಲಿ ಸಾಮಾಜಿಕ ಆಂದೋಲನವನ್ನೆ ಅಲ್ಲಿಯ ಜನರು ಮಾಡಿದರು.

ಮಹಾತ್ಮರು ಚಲೇಜಾವ ಚಳುವಳಿಗೆ ಕರೆ ನೀಡಿದಾಗ ಜಿಲ್ಲೆಯು ಅಭೂತ ಪೂರ್ವವಾಗಿ ಸ್ಪಂದಿಸಿತು. ರಾಷ್ಟ್ರೀಯ ನಾಯಕರೆಲ್ಲರು ಬಂಧನಕ್ಕೆ ಒಳಗಾದ್ದರಿಂದ ಚಳವಳಿಗಾರರಿಗೆ ನಿರ್ದೇಶನ ನೀಡುವವರು ಯಾರೂ ಇರಲಿಲ್ಲ ಹೀಗಾಗಿ ಚಳವಳಿಯು ಹಿಂಸಾತ್ಮಕ ರೂಪಕ್ಕೆ ತಿರುಗಿತು. ಮಿಂಚನಾಳ, ಜುಮನಾಳ, ನಿಂಬಾಳ, ಹೊಳೆ ಆಲೂರು ರೈಲ್ವೆ ಸ್ಟೇಷನ್‌ಗಳು ಚಳವಳಿಗಾರರಿಂದ ಧ್ವಂಸಗೊಂಡವು. ನೀರಲಕೇರಿ ಸಮೀಪ ಮಾಲರೈಲು ಗಾಡಿಯನ್ನು ಉರುಳಿಸಲಾಯಿತು. ತಾರ ತಂತಿಗಳನ್ನು ಕತ್ತರಿಸುವದು ಅಂಚೆ ಅಪಹರಣ ಸರಕಾರಿ ಕಟ್ಟಡಗಳನ್ನು ನಾಶಪಡಿಸುವ ಕಾರ್ಯವನ್ನು ಮಾಡಿದರು.

ಸ್ವಾತಂತ್ರ್ಯ ಚಳವಳಿಯು ನಿರಂತರವಾಗಿ ಪ್ರವಾಹದಂತೆ ಹರಿಯುವಂತೆ ಪತ್ರಿಕೆಗಳು, ರಂಗಭೂಮಿ ಹಾಗೂ ದೇಶಭಕ್ತಿಗೀತೆಗಳ ಕೊಡುಗೆ ದೊಡ್ಡದು. ಪತ್ರಿಕೆಗಳು ದೇಶದ ತುಂಬೆಲ್ಲಾ ನಡೆಯುವ ಚಳವಳಿಯ ಸುದ್ಧಿಗಳನ್ನು ಜನರಿಗೆ ತಿಳಿಸುವ ಕಾರ್ಯವನ್ನು ವಿಶೇಷವಾಗಿ ಮಾಡಿದವು. 'ಕನ್ನಡಿಗ', 'ಕರ್ನಾಟಕ ವೈಭವ', 'ಶರಣ ಸಂದೇಶ'ಗಳು ಜನರಿಗೆ ಸ್ಫೂರ್ತಿ ನೀಡಿದವು. ರಂಗಭೂಮಿಯು ಜನರ ಮೇಲೆ ಆಗಾಧವಾದ ಪರಿಣಾಮ ಬೀರಿತು. ಕನ್ನಡದ ಅಂದಿನ ನಾಟಕಗಳು ಭಾರತೀಯ ಸಮಾಜದ ಕಂದಾಚಾರಗಳನ್ನು ತೊಡೆದು ಹಾಕಿ, ಅನಕ್ಷರಸ್ಥ ಜನರಿಗೆ ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಿದವು. ದೇಶ ಭಕ್ತಿ ಗೀತೆಗಳು ಅನಕ್ಷರಸ್ಥ ಜನರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿದವು.

೧೮೫೭ರಿಂದ ೧೯೪೭ರ ವರೆಗೆ ಭಾರತದ ಸ್ವಾತಂತ್ರ್ಯ ಚಳವಳಿ ವಿವಿಧ ಹಂತಗಳಲ್ಲಿ ನಡೆಯಿತು. ಅದರ ಪ್ರಭಾವಕ್ಕೆ ಒಳಗಾದ ಬಾಗಲಕೋಟ ಜಿಲ್ಲೆಯ ಜನರು ಈ ರಾಷ್ಟ್ರೀಯ ಹೋರಾಟದ ಪ್ರತಿಯೊಂದು ಮಜಲುಗಳಿಗೆ ಸ್ಪಂದಿಸಿದರು. ಆರಂಭದಲ್ಲಿ ೧೮೫೭ರ ದಂಗೆಯ ಸಮಯದಲ್ಲಿ ಹಲಗಲಿ ಬೇಡರು ಬಂಡಾಯವೆದ್ದರು. ನಂತರ ತೀವ್ರಗಾಮಿಗಳ ಕಾಲದಲ್ಲಿ ತಿಲಕರ ಪ್ರಭಾವಕ್ಕೆ ಒಳಗಾಗಿ ಸ್ವದೇಶಿ ಚಳವಳಿಯನ್ನು ಮಾಡಿ ಯಶಸ್ವಿಯಾದರು. ಗಾಂಧೀಜಿಯವರು ಚಳವಳಿಯ ನಾಯಕತ್ವ ವಹಿಸಿಕೊಂಡಾಗ ಅಹಿಂಸಾತ್ಮಕ ಚಳವಳಿ ಆರಂಭಿಸಿದರು. ಒಟ್ಟಾರೆ ಮಾತೃ ಭೂಮಿಯ ವಿಮೋಚನೆಗಾಗಿ ತನು ಮನ ಧನದಿಂದ ತಮ್ಮನ್ನು ತಾವು ದೇಶಕ್ಕಾಗಿ ಅರ್ಪಿಸಿಕೊಂಡರು. ಇವರ ತ್ಯಾಗಮಯಿ ಜೀವನ ಮುಂದಿನ ಪೀಳಿಗೆಗೆ ಆದರ್ಶವಾಗುವದು.

ಅಧ್ಯಯನದ ಪ್ರಮುಖ ಫಲಿತಗಳು

೧. ಬಾಗಲಕೋಟ ಜಿಲ್ಲೆಯ ಜನರಲ್ಲಿ ೧೮೫೭ರ ದಂಗೆಯು ರಾಷ್ಟ್ರೀಯತೆಯ ಮನೋಭಾವನೆಯನ್ನು ಬೆಳೆಸುವುದರ ಜೊತೆಗೆ ದೇಶ, ಭಾಷೆಗಳ ಬಗೆಗೆ ಅಭಿಮಾನ ಮೂಡಿಸಿತು. ಅಕ್ಷರಸ್ಥರು ಹಾಗೂ ಅನಕ್ಷರಸ್ಥರೂ ಸಹ ಬ್ರಿಟಿಷರ ಆಕ್ರಮಣಗಳಿಗೆ ಪ್ರತಿಯಾಗಿ ಬಂಡಾಯ ಏಳಲು ಕಾರಣವಾದ ಅಂಶಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಬಂಡಾಯದ ಪ್ರತಿಫಲವಾಗಿ ಜನಸಾಮಾನ್ಯರು ಅನುಭವಿಸಿದ ಯಾತನೆಯ ಸಂಗತಿಗಳನ್ನು ಈ ಮಹಾಪ್ರಬಂಧದ ಮೂಲಕ ಕಂಡುಕೊಂಡ ಮಹತ್ವ ಫಲಿತವಾಗಿದೆ.

೨. ರಾಷ್ಟ್ರೀಯ ಚಳವಳಿಯೊಂದಿಗೆ ಸ್ಥಳೀಯ ಮಟ್ಟದಲ್ಲಿ ದೇಶಕ್ಕಾಗಿ ಬ್ರಿಟಿಷರ ವಿರುದ್ಧ ಜಿಲ್ಲೆಯಲ್ಲಿ ಸಿಂದಗಿ ಬಂಡಾಯ, ಬದಾಮಿ ಬಂಡಾಯ, ಚಾಂದಕವಟೆ ಬಂಡಾಯ, ಹಲಗಲಿ ಬಂಡಾಯಗಳು ನಡೆದವು. ಬಂಡಾಯಗಳ ಸ್ವರೂಪದ ಬಗೆಗೆ ಅಧ್ಯಯನದಲ್ಲಿ ನಿರೂಪಿಸಿ ಅವುಗಳ ಮಹತ್ವದ ಕುರಿತು ಪ್ರಸ್ತುತ ಪ್ರಬಂಧದಲ್ಲಿ ದಾಖಲಿಸಲಾಗಿದೆ. ಈ ಚಳವಳಿಯಲ್ಲಿ ಭಾಗವಹಿಸಿದ ಜನಸಾಮಾನ್ಯರ ಬದುಕು ಬವಣೆಯನ್ನು ಮತ್ತು ಅವರ ಚಾರಿತ್ರಿಕ ಸಂಗತಿಗಳನ್ನು ಗುರುತಿಸಿದ್ದು ಈ ಮಹಾಪ್ರಬಂಧದ ಮಹತ್ವದ ಫಲಿತಗಳಲ್ಲಿ ಒಂದಾಗಿದೆ,

೩. ಬಾಗಲಕೋಟ ಜಿಲ್ಲೆಯಲ್ಲಿ ಈ ಮಾದರಿಯ ರಾಷ್ಟ್ರೀಯ ಪ್ರಜ್ಞೆ ಮೂಡಿಸಲಿಕ್ಕೆ ಮುಖ್ಯ ಕಾರಣೀಭೂತವಾದ ಅಂಶಗಳೆಂದರೆ, ಪಾಶ್ಚಿಮಾತ್ಯ ಶಿಕ್ಷಣ, ಬುದ್ಧಿಜೀವಿಗಳ ಪಾತ್ರ, ರಾಷ್ಟ್ರೀಯ ಮುಖಂಡರ ಪ್ರಭಾವ, ಧಾರ್ಮಿಕ ಉತ್ಸವಗಳು ಮುಂತಾದವುಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಿ, ಅವುಗಳ ಮಹತ್ವವನ್ನು ನಿರೂಪಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

೪. ರಾಷ್ಟ್ರೀಯತೆಗಾಗಿ ಜಿಲ್ಲೆಯ ಜನತೆ ಜಾತಿಭೇದ ಮರೆತು ಬ್ರಿಟಿಷರ ವಿರುದ್ಧ ಒಂದಾದರು. ಮುಸ್ಲಿಂ ನಾಯಕರು, ಹಿಂದೂ ನಾಯಕರು ಮಂದಿರ ಮಸೀದಿಗಳಲ್ಲಿ ಸಭೆಸೇರಿ ಖಾದಿಬಟ್ಟೆ ಧರಿಸುವುದಾಗಿ, ಪರಕೀಯರ ವಸ್ತಗಳನ್ನು ಬಹಿಷ್ಕರಿಸುವುದಾಗಿ, ಸೇಂಧಿಗಳಿಂದ ದೂರ ಉಳಿಯುವುದಾಗಿ ಪ್ರತಿಜ್ಞೆಗೈದರು. ಇಂತಹ ಅಂಶಗಳನ್ನು ಅಧ್ಯಯನದಲ್ಲಿ ಪ್ರಸ್ತುತಪಡಿಸಿ ಚರ್ಚಿಸಿರುವುದು ಈ ಪ್ರಬಂಧದ ಮಹತ್ವದ ಫಲಿತಗಳಲ್ಲಿ ಒಂದಾಗಿದೆ.

೫. ಸ್ವದೇಶಿ ಚಳವಳಿಯ ಚಟುವಟಿಕೆ ಅಂದು ದೇಶದಲ್ಲಿ ಪ್ರಬಲವಾಗಿತ್ತು. ಸ್ವದೇಶಿ ವಸ್ತುಗಳ ಪ್ರಚಾರ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ, ದೇಶೀ ಕೈಗಾರಿಕೆಗಳ ಸ್ಥಾಪನೆ, ರಾಷ್ಟ್ರೀಯ ಶಿಕ್ಷಣ ಹೀಗೆ ರಾಷ್ಟ್ರೀಯ ನಾಯಕರ ಮುಂದಾಳತ್ವದಲ್ಲಿ ನಡೆಯಿತು. ಹಿರಿಯ ನಾಯಕರ ಪ್ರೇರಣೆಯಿಂದ ಬಾಗಲಕೋಟದಲ್ಲಿ ಚಳವಳಿಯು ಮಹತ್ವದ ಸ್ವರೂಪ ಪಡೆಯಿತು. ಗಾಂಧೀಜಿ, ಶ್ರೀನಿವಾಸ

ಕೌಜಲಗಿ, ನಾ.ಸು. ಹರ್ಡಿಕರ್, ಗಂಗಾಧರರಾವ್ ದೇಶಪಾಂಡೆ ಇವರ ವಿಚಾರಧಾರೆಗಳು ಅಂದು ಜನಗಳ ಮನ ಪರಿವರ್ತಿಸಿದ ಬಗ್ಗೆ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

೬. ಮುಂಬಯಿ ಕರ್ನಾಟಕದ ಭಾಗದಲ್ಲಿ ವಿಜಾಪುರ, ಬಾಗಲಕೋಟ, ಮುದ್ದೇಬಿಹಾಳ ಮುಂತಾದ ಭಾಗದ ಜನರು ನಿಸ್ವಾರ್ಥತೆಯಿಂದ ಚಳವಳಿಗಳಲ್ಲಿ ಭಾಗವಹಿಸಿದರು. ರಾಷ್ಟ್ರೀಯ ನಾಯಕರ ಮಾತಿಗೆ ತಲೆಬಾಗಿ ರಾಷ್ಟ್ರಕೋಸ್ಕರ ಅನೇಕ ಜನರು ತಮಗೆ ಸರಕಾರ ನೀಡಿದ ಬಿರುದು ಬಾವಲಿಗಳನ್ನು ತ್ಯಜಿಸಿದರು, ಸ್ಥಳೀಯ ಸರಕಾರದಲ್ಲಿ ನಾಮನಿರ್ದೇಶನಗೊಂಡವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದರು. ಸರಕಾರ ನಡೆಸುವ ಕಾರ್ಯಕ್ರಮಗಳಿಗೆ ಯಾರೂ ಹಾಜರಾಗುತ್ತಿರಲಿಲ್ಲ, ಸರಕಾರದ ಅನುದಾನ ಪಡೆಯುತ್ತಿರುವ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸುವುದು, ಶಾಲೆಬಿಟ್ಟ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವುದು, ಸರಕಾರಿ ಕೋರ್ಟ್ ಕಛೇರಿಗಳನ್ನು ಬಹಿಷ್ಕರಿಸಿ ನಡೆದ ಚಳವಳಿಯ ಹಲವು ಅಂಶಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಿ ಮಹತ್ವದ ವಿಚಾರವನ್ನು ಪ್ರಬಂಧದಲ್ಲಿ ದಾಖಲಿಸಲಾಗಿದೆ.

೭. ಹಿಂದೂಸ್ಥಾನಿ ಸೇವಾದಳವನ್ನು ಜಿಲ್ಲೆಯಲ್ಲಿ ಸ್ಥಾಪಿಸುವುದರೊಂದಿಗೆ ರಾಷ್ಟ್ರೀಯ ಪ್ರಜ್ಞೆ ಮೂಡಿಸಿದರು. ಹಾಗೂ ಯುವಕರಿಗೆ ದೈಹಿಕ ಮತ್ತು ಮಾನಸಿಕವಾಗಿ ಸದೃಢರನ್ನಾಗಿಸಲು ಹಲವು ತರಬೇತಿಗಳನ್ನು ನೀಡುವುದರ ಮೂಲಕ ರಾಷ್ಟ್ರೀಯ ಪ್ರಜ್ಞೆಯನ್ನು ಬಿತ್ತರಿಸಲು ಮಾಡಿದ ಕಾರ್ಯಚಟುವಟಿಕೆಗಳ ಬಗೆಗೆ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

೮. ಕರ್ನಾಟಕದಲ್ಲಿ ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಗಾಗಿ ಪ್ರವಾಸ ಕೈಗೊಂಡಾಗ ವಿಜಾಪುರ ಮತ್ತು ಬಾಗಲಕೋಟ ಜಿಲ್ಲೆಗೆ ಆಗಮಿಸಿ ಅಂದು ಅಸ್ಪೃಶ್ಯತೆ ನಿವಾರಣೆಗೆ ಜನರಲ್ಲಿ ಮೂಡಿಸಿದ ವಿಚಾರಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಿದೆ. ಜೊತೆಗೆ ಅಂದು ಜಿಲ್ಲೆಯಲ್ಲಿ ತಳಸಮುದಾಯದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ನಾಯಕರು ಕೈಗೊಂಡಿದ್ದರು. ಮಹಿಳೆಯರು ತಮ್ಮಲ್ಲಿದ್ದ ಬೆಲೆಬಾಳುವ ಬಂಗಾರದ ವಸ್ತುಗಳನ್ನೆ ಈ ಜನರ ಅಭಿವೃದ್ಧಿಗಾಗಿ ನೀಡಿದರು. ಹಲವು ಮಹಿಳೆಯರು ಹರಿಜನರ ಕೇರಿಗಳಿಗೆ ಹೋಗಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿದರು, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿದರು. ಹೆಣ್ಣುಮಕ್ಕಳಿಗೆ ದೇವದಾಸಿ ಬಿಡದಂತೆ ಅವರಲ್ಲಿ ಮನವರಿಕೆ ಮಾಡಿದರು. ಅವರು ತಮ್ಮಂತೆ ಮಾನವರೆಂದು ತಿಳಿದು ಅವರ ಆರ್ಥಿಕಾಭಿವೃದ್ಧಿ ಹಾಗೂ ಸಾಮಾಜಿಕಾಭಿವೃದ್ಧಿಗಾಗಿ ಕೈಗೊಂಡ ಕಾರ್ಯವೈಖರಿಯ ಕುರಿತು ಪ್ರಬಂಧದಲ್ಲಿ ಚರ್ಚಿಸಿ ಮಹತ್ವದ ಅಂಶಗಳನ್ನು ದಾಖಲಿಸಲಾಗಿದೆ.

೯. ವಿಶೇಷವಾಗಿ ಹಲಗಲಿ ಬೇಡರು, ರಜಪೂತರು ಮುಸ್ಲಿಮರು, ಅಸ್ಪೃಶ್ಯರು ಮತ್ತು ಇತರ ಹಿಂದುಳಿದ ವರ್ಗದ ಜನರು ಚಳವಳಿಯನ್ನು ಯಶಸ್ವುಗೊಳಿಸುವಲ್ಲಿ ನಿರ್ವಹಿಸಿದ ಪಾತ್ರವನ್ನು

ದಾಖಲಿಸಲಾಗಿದೆ. ಇದೇ ವೇಳೆಯಲ್ಲಿ ಕೆಲವು ಮುಂದುವರೆದ ಜನಾಂಗದ ಕುಟೀಲ ನೀತಿಯನ್ನು ಉದಾಹರಣೆ ಸಹಿತ ಪ್ರಸ್ತುತ ಪ್ರಬಂಧದಲ್ಲಿ ದಾಖಲಿಸಲಾಗಿದೆ.

೧೦. ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ವೃತ್ತ ಪತ್ರಿಕೆ, ಸಿನಿಮಾ ಮಾಧ್ಯಮ ಹಾಗೂ ರಂಗಭೂಮಿಯ ಪಾತ್ರ ಅಪಾರ. ಇವುಗಳು ಜನರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಮಹತ್ತರ ಕೆಲಸ ಮಾಡಿವೆ. ಜನಪದ ಸಾಹಿತ್ಯಗಳ ಮೂಲಕ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ಅಭಿಮಾನ ಮೂಡಿಸಿದ ಬಗೆಗೆ ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಿ ದಾಖಲಿಸಿದೆ.

೧೧. ದೇಶದ ಸ್ವಾತಂತ್ರ್ಯಕ್ಕೋಸ್ಕರ ಅಂದು ಜಲ್ಲೆಯ ಅನೇಕ ಜನರು ಜಾತಿಭೇದಗಳನ್ನು ತೊರೆದು ಪುರುಷ ಮತ್ತು ಮಹಿಳೆಯರು ಭಾಗವಹಿಸಿದರು. ರಾಜಮಾ ಇದ್ದಲಗಿ ಎಂಬ ವೇಶ್ಯಾವೃತ್ತಿಯ ಸ್ತ್ರೀ ಚಳುವಳಿಯಲ್ಲಿ ಭಾಗವಹಿಸಿ ದೇಶಾಭಿಮಾನದಿಂದ ಮೆರೆದಿದ್ದಾಳೆ ಹಾಗೂ ಫಕೀರವ್ವ ಹಂಪಿಹೊಳೆ ಅವರ ಸಾಹಸ ಹಾಗೂ ಸೀತಾಬಾಯಿ ತಿಮಸಾನಿ ಮತ್ತು ಇತರ ಮಹಿಳೆಯರ ತ್ಯಾಗವನ್ನು ಪ್ರಬಂಧದಲ್ಲಿ ನಿರೂಪಿಸಲಾಗಿದೆ.

೧೨. ಅಂದಿನ ವಿಜಾಪುರ ಜಿಲ್ಲಾಧಿಕಾರಿಯಾಗಿದ್ದ ಆರ್. ಎಸ್ ಹಿರೇಮಠರವರು ಬ್ರಿಟಿಷರ ಪರವಾಗಿದ್ದು, ರಾಷ್ಟ್ರೀಯನಾಯಕರ ಚಳವಳಿಗಳಿಗೆ ಯಾವುದೇ ಸಹಕಾರ ನೀಡಬಾರದೆಂದು ಸ್ಥಳೀಯ ಅಧಿಕಾರಿಗಳಿಗೆ ಸೂಚಿಸುತ್ತಿದ್ದರು. ಅಲ್ಲದೇ ಸ್ಥಳೀಯ ಜನರಿಗೆ ಸಭೆಯ ಮೂಲಕ ಚಳವಳಿಯ ನಾಯಕರೊಂದಿಗೆ ನೀವು ಕೈಜೋಡಿಸಬಾರದೆಂದು ಹೇಳುತ್ತಿದ್ದರು, ಬ್ರಿಟೀಷರ ಪರವಾಗಿ ಈ ಅಧಿಕಾರಿ ಕೆಲಸಮಾಡುತ್ತಿದ್ದ ಇಂತಹ ದೇಶ ವಿರೋಧಿ ಕೆಲಸ ಮಾಡುವ ಸ್ಥಳೀಯ ನಾಯಕರ ಬಗೆಗೆ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

೧. ವರದಿಗಳು

೨. ಗ್ರಂಥಗಳು

೩. ಪತ್ರಿಕೆಗಳು

೪. ಸ್ವಾತಂತ್ರ್ಯ ಚಳವಳಿಗಾರರ ಸಂದರ್ಶನಗಳು

ಆನುಷಂಗಿಕ ಆಕರಗಳು

೧. ಕನ್ನಡ ಗ್ರಂಥಗಳು

೨. ಇಂಗ್ಲಿಷ ಗ್ರಂಥಗಳು

೩. ಎಂ.ಫಿಲ್ ಮತ್ತು ಪಿಎಚ್.ಡಿ ಪ್ರಬಂಧಗಳು

೪. ಗ್ಯಾಸೆಟಿಯರಗಳು

೫. ಸಂದರ್ಶನಗಳು

ಪ್ರಾಥಮಿಕ ಆಕರಗಳು

೧. ವರದಿಗಳು

೧. ಕರ್ನಾಟಕದಲ್ಲಿ ಸ್ವಾತಂತ್ರ್ಯ ವರದಿಗಳು (೧೯೩೦-೧೯೩೧), ಕರ್ನಾಟಕ ಪ್ರಾಂತಿಯ ಕಾಂಗ್ರೆಸ ಕಮಿಟಿ, ಧಾರವಾಡ, ೧೯೩೧.

೨. ವಿಜಾಪೂರ ಜಿಲ್ಲಾ ಕಾಂಗ್ರೆಸ ಕಮಿಟಿಯ ಸತ್ಯಾಗ್ರಹದ ಸಂಕ್ಷಿಪ್ತ ವರದಿ ೨೪-೦೪-೧೯೪೦ ರಿಂದ ೨೮-೦೨-೧೯೪೨ರ ವರೆಗೆ, ವಿಜಾಪೂರ ಜಿಲ್ಲಾ ಕಾಂಗ್ರೆಸ ಕಮಿಟಿ, ವಿಜಾಪೂರ, ೧೯೪೨.

೩. ವಿಜಾಪೂರ ಜಿಲ್ಲಾ ಖೈದಾದ ಸತ್ಯಾಗ್ರಹಿಗಳ ವಿವರ, ದಿನಾಂಕ ೨೬-೧೧-೧೯೪೦ ರಿಂದ ೦೬-೦೧-೧೯೪೧.

೨. ಕನ್ನಡ ಗ್ರಂಥಗಳು

ಆಲೂರು ವೆಂಕಟರಾಯ : ನನ್ನ ಜೀವನ ಸ್ಮೃತಿಗಳು, ಮನೋಹರ ಗ್ರಂಥಮಾಲೆ, ಧಾರವಾಡ, ೧೯೭೪.

ಗುಂಡಪ್ಪ ಡಿ.ವಿ. : ವೃತ್ತಪತ್ರಿಕೆ, ಕರ್ನಾಟಕ ಪತ್ರಿಕಾ ಅಕಾಡಮಿ, ಬೆಂಗಳೂರು, ೧೯೮೮.

ನರಸಿಂಹ ದಾಬಡೆ : ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೮೫.

ಮಡಿವಾಳಪ್ಪ ಪಟ್ಟಣಶೆಟ್ಟಿ : ನಾನು ನಡೆದು ಬಂದ ದಾರಿ, ಚಿತ್ತರಗಿ ವಿಜಯಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೮೮.

ಸೂರ್ಯನಾಥ ಕಾಮತ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ ೧ ಮತ್ತು ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೮.

ಹರ್ಡೇಕರ ಮಂಜಪ್ಪ : ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ, ಪ್ರಗತಿ ಗ್ರಂಥ ಪ್ರಚಾರ ಸಮಿತಿ, ಬೆಳಗಾವಿ, ೧೯೯೯.

೩. ಪತ್ರಿಕೆಗಳು

೧. ಕನ್ನಡಿಗ, ವಾರಪತ್ರಿಕೆ, ಬಾಗಲಕೋಟ, ೧೯೨೨-೩೦.

೨. ಕನ್ನಡ ನವಜೀವನ, ವಾರಪತ್ರಿಕೆ, ಬಾಗಲಕೋಟ, ೧೯೨೨.

೩. ಕರ್ನಾಟಕ ವೈಭವ, ವಾರಪತ್ರಿಕೆ, ವಿಜಾಪುರ, ೧೯೦೮-೧೯೩೦

೪. ಕರ್ನಾಟಕ ವೃತ್ತಿ, ವಾರಪತ್ರಿಕೆ, ಧಾರವಾಡ, ೧೯೦೮.

೫. .ಕರ್ಮವೀರ, ವಾರಪತ್ರಿಕೆ, ಹುಬ್ಬಳ್ಳಿ. ೧೯೨೭-೩೦.

೬. ಕರ್ನಾಟಕ ಕೇಸರಿ, ವಾರಪತ್ರಿಕೆ, ಧಾರವಾಡ, ೧೯೦೮.

೭. ಚಂದ್ರಿಕಾ, ಮಾಸಪತ್ರಿಕೆ, ಬಾಗಲಕೋಟ, ೧೯೦೮.

೮. ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ಹುಬ್ಬಳ್ಳಿ, ೧೯೪೨-೪೩.

೯. ವಿಶಾಲ ಕರ್ನಾಟಕ, ವಾರಪತ್ರಿಕೆ, ಧಾರವಾಡ, ೧೯೪೦.

೧೦. ಶರಣ ಸಂದೇಶ, ವಾರಪತ್ರಿಕೆ, ಆಲಮಟ್ಟಿ, ೧೯೩೦.

೪. ಸ್ವಾತಂತ್ರ್ಯ ಚಳವಳಿಗಾರರ ಸಂದರ್ಶನಗಳು

೧. ಈಶ್ವರಪ್ಪ ಹಾಡಕಾರ, ರನ್ನಬೆಳಗಲಿ. ತಾ.ಮುಧೋಳ, ೧೦-೦೯-೨೦೧೩.

೨. ಮುದಕಪ್ಪ ಕಲಬುರ್ಗಿ, ಗುಳೇದಗುಡ್ಡ ತಾ.ಬದಾಮಿ, ೧೦-೦೮-೨೦೧೩.

೩. ದೊರೆಸ್ವಾಮಿ ಎಚ್.ಎಸ್, ಬೆಂಗಳೂರು. ೫-೩-೨೦೧೩.

೪. ಶಿವಪುತ್ರಪ್ಪ ಪಟ್ಟಣಶೆಟ್ಟಿ, ಬಾಗಲಕೋಟ, ೦೬-೦೨-೨೦೧೨.

೫. ಸೂರ್ಯಪಂಡಿತ ಉಪಾದ್ಯ, ಆಲಗೂರು, ತಾ.ಜಮಖಂಡಿ, ೨೦-೦೩-೨೦೧೪.

ಆನುಷಂಗಿಕ ಆಕರಗಳು

೧. ಕನ್ನಡ ಗ್ರಂಥಗಳು

ಈಶ್ವರಚಂದ್ರ ಚಿಂತಾಮಣಿ : ಸುಗಂಧಿ ಮುರಿಗೆಪ್ಪನವರು, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ ಗದಗ, ೧೯೮೫.

ಕಂದಗಲ್ ಹಣಮಂತರಾಯ : ಅಕ್ಷಯಾಂಬರ, ಪ್ರಭಾ ಪ್ರಿಂಟರ್ಸ್, ಗದಗ, ೧೯೮೪.

ಕಂಠಿ ಹನುಮಂತರಾಯ (ಸಂ), : ಬಾಗಲಕೋಟ ಜಿಲ್ಲಾ ದರ್ಶನ, ಸ್ವಾಗತ ಸಮಿತಿ ಅಖಿಲ ಭಾರತ ೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟ, ೨೦೦೦,

ಕುರ್ತುಕೋಟಿ ಕೆ.ಡಿ, ಜೋಶಿ ಜಿ.ಬಿ(ಸಂ) : ವಾಸುದೇವ ಪ್ರಶಸ್ತಿ, ವಾಸುದೇವ ವಿನೋದಿನಿ ನಾಟ್ಯ ಸಭೆ, ಬಾಗಿಲಕೋಟೆ,೧೯೯೪.

ಕೃಷ್ಣರಾವ್ ಎಂ. ಕೇಶವಭಟ್ಟ : ಕರ್ನಾಟಕ ದರ್ಶನ, ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೦.

ಗಣೇಶ ಅಮೀನಗಡ : ಬಣ್ಣದ ಬದುಕಿನ ಚಿನ್ನದ ದಿನಗಳು, ಪ್ರಸಾಧನ, ಪ್ರಕಾಶನ, ಮಂಗಳೂರು, ೨೦೦೭.

ಗೋಪಾಲ ಆರ್ (ಸಂ) : ಬಾಗಲಕೋಟ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೧೧.

ಗೋವಿಂದಮೂರ್ತಿ ದೇಸಾಯಿ : ಕೌಜಲಗಿ ಹಣಮಂತರಾಯರು, ವಿಜಾಪೂರ ಜಿಲ್ಲಾ ಹಣಮಂತರಾವ್ ಕೌಜಲಗಿ ಜನ್ಮಶತಾಬ್ಧಿ ಸಮಾರಂಭ ಸಮಿತಿ, ವಿಜಾಪೂರ, ೧೯೯೨.

ಜಯವಂತ ಕಾಡದೇವರ : ಕಲಕಂಬ ಮಾಸ್ತರರು, ಜಗದ್ಗುರು ತೋಂಟದಾರ್ಯ ಸಂಸ್ಥಾನಮತ, ಡಂಬಳ ಗದಗ, ೧೯೮೪.

ದಾತಾರ ಹಣಮಂತರಾವ(ಸಂ) : ಲೋಕಮಾನ್ಯ ತಿಲಕರು ಹಾಗೂ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ತಿಲಕ ಟ್ರಸ್ಟ್ ಫಂಡ್, ಬೆಂಗಳೂರು, ೧೯೯೦.

ದೇವರಕೊಂಡಾ ರೆಡ್ಡಿ : ಮುಳಗಡೆ ಗ್ರಾಮದಲ್ಲಿನ ಶಾಸನಗಳ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

ನಂಜುಡಸ್ವಾಮಿ ಎ.ಎಸ್. : ಭಾರತೀಯ ರಾಷ್ಟ್ರೀಯತೆಯ ವಿಕಾಸ, ಬೆಂಗಳೂರ, ೧೯೯೨.

ನಾಡಗೌಡ ಬಿ.ಆರ್. : ಮೊಹರೆ ಹಣಮಂತರಾಯರು, ನೆಲೆ ಪ್ರಕಾಶನ, ಸಿಂದಗಿ, ೨೦೦೧.

ಪುರೋಹಿತ ದ.ರಾ : ಕಲಾದಗಿ ದರ್ಶನ, ಪ್ರಗತಿ ಸಾಹಿತ್ಯ ವೇದಿಕೆ, ಕಲಾದಗಿ, ೧೯೯೬.

ಪ್ರಧಾನ ಗ.ಪ.(ಮೂಲ) (ಅನು) ಸರಸ್ವತಿ ರಿಸಬೂಡ : ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಕನ್ನಡ ಮರಾಠಿ ಸ್ನೇಹವರ್ಧಕ ಕೇಂದ್ರ, ಪುಣೆ, ೧೯೯೪.

ಬಸುಪಟ್ಟದ ಎಸ್.ಎಸ್ : ಬೇವೂರ ಬಾದಶಹ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಬಿರಾದಾರ ಜಿ.ಎ. : ಕರ್ನಾಟಕ ಸರದಾರ ಪಟೇಲ ಚನ್ನಬಸಪ್ಪ ಅಂಬಲಿ, ಉದಯ ಪ್ರಕಾಶನ, ವಿಜಾಪೂರ, ೨೦೦೧.

: ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೦.

: ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ, ಅಭಿರುಚಿ ಪ್ರಕಾಶನ, ಮೈಸೂರು, ೨೦೧೨.

ಬಿಪಿನ್ ಚಂದ್ರ (ಮೂಲ) (ಅನು)ಗೋಪಾಲ ರಾವ್ ಎಚ್.ಎಸ್ : ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೨೦೧೪.

ಮಟೋಳಿ ಎಸ್.ಬಿ. : ಜಮಖಂಡಿ ಇತಿಹಾಸ ದರ್ಪಣ, ಗೆಳೆಯರ ಬಳಗ, ತುಂಗಳ, ೨೦೦೮.

ಮನಗೂಳಿ ಶಂ.ಬಾ : ಮಾಗಿದರೂ ಮೊಗ್ಗು, ಹಿಂದ್ ಸೇವಾ ಟ್ರಸ್ಟ್, ಹುಬ್ಬಳ್ಳಿ. ೧೯೭೦

ಮಂಜುನಾಥ ಬೇವಿನಕಟ್ಟಿ : ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

ಮುಳಗುಂದ ಸಿ.ವಿ : ಚನ್ನಬಸಪ್ಪ ಅಂಬಲಿ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ ಗದಗ, ೧೯೮೬.

ಮುರಿಗೆಪ್ಪ ಎ., (ಪ್ರ.ಸಂ)
ಚಿನ್ನಸ್ವಾಮಿ ಸೊಸಲೆ ಎನ್(ಸಂ)
ರಮೇಶ ನಾಯಕ(ಸಂ)
ಕೊಟ್ರೇಶ ಎಮ್ (ಸಂ) : ಬಾದಾಮಿ ಚಾಲುಕ್ಯರು ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

ಮೋನಪ್ಪ ಗಾಡದ : ರಂಗದರ್ಶನ, ಗ್ರಾಮೀಣ ಸಾಹಿತ್ಯ ಮಾಲೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ ಗದಗ,೨೦೦೮.

ರಂಗನಾಥ ದಿವಾಕರ : ಕರ್ಮಯೋಗಿ ಹಣಮಂತರಾಯರು, ಕೌಜಲಗಿ ಹಣಮಂತರಾಯ ಸ್ಮಾರಕ ನಿಧಿ, ಹುಬ್ಬಳ್ಳಿ, ೧೯೫೪.

: ಸತ್ಯಾಗ್ರಹ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಕಯ, ಕರ್ನಾಟಕ ಸರಕಾರ, ಬೆಂಗಳೂರು, ೧೯೮೫.

ರಹಮತ ತರೀಕೆರೆ : ಅಮೀರಬಾಯಿ ಕರ್ನಾಟಕಿ, ಪಲ್ಲವ ಪ್ರಕಾಶನ,ಬಳ್ಳಾರಿ, ೨೦೧೨.

ರಾಮಸ್ವಾಮಿ ಎಸ್.ಆರ್(ಸಂ) : ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು, ೧೯೯೭.

ವಡವಿ ರಾಮಚಂದ್ರ : ಕಾಂಗ್ರೆಸ್ ರನ್ನಮಹೋತ್ಸವ, ೧೯೪೮.

: ಕರ್ನಾಟಕದಲ್ಲಿ ಖಾದಿ ಇತಿಹಾಸ, ಕರ್ನಾಟಕ ರಾಜ್ಯ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು, ೧೯೮೩.

ವಿರುಪಾಕ್ಷ ನಾಯಕ : ಕನ್ನಡ ರಂಗಭೂಮಿ ಮತ್ತು ಸ್ವಾತಂತ್ರ್ಯ ಚಳವಳಿ, ರಂಗ ತೋರಣ, ಧಾರವಾಡ, ೧೯೯೮.

ಶಂಕರನಾರಾಯ ರಾವ ಎನ್.ಪಿ : ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪಬ್ಲಿಕೇಶನ್ಸ, ಬೆಂಗಳೂರು, ೨೦೧೦.

ಶರ್ಮಾ ತಿ.ತಾ : ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೭೩.

ಶ್ರೀರಾಮ ಇಟ್ಟಣ್ಣವರ : ಹಲಗಲಿ ಗ್ರಾಮ ಜಾನಪದ ಅಧ್ಯಯನ, ನಾಗೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೫.

: ಸ್ವಾತಂತ್ರ್ಯ ಹೋರಾಟಗಾರ್ತಿ ಸೀತಾಬಾಯಿ ತಿಮಸಾನಿ, ವಿನಿ ಪ್ರಕಾಶನ, ಬೀಳಗಿ, ೨೦೦೦.

ಶ್ರೀ ಹರ್ಷ (ಸಂ) : ಲೋಕಾಭಿರಾಮ, ಗಾಲವ ಪ್ರಕಾಶನ, ಗಲಗಲಿ, ೧೯೮೦.

ಶ್ರೇಷ್ಠ ಪತ್ರಿಕೋದ್ಯಮಿ : ಮೊಹರೆ ಹಣಮಂತರಾಯರು, ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ ಬೆಂಗಳೂರು, ೧೯೯೨.

ಸಂಗಮನಾಥ ಲೋಕಾಪೂರ : ಚಿಕ್ಕರೂಗಿ ಚಳವಳಿಗಾರರು, ಪುರುಷೋತ್ತಮ ಪ್ರಕಾಶನ, ಸಿಂದಗಿ, ೨೦೦೨.

ಸಿದ್ದವ್ವನಹಳ್ಳಿ ಕೃಷ್ಣಶರ್ಮಾ(ಸಂ) : ಗಾಂಧಿ ಮತ್ತು ಕರ್ನಾಟಕ, ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ೧೯೯೬

ಸುಬ್ರಮಣ್ಯ ಸುಶೀಲಾ(ಸಂ) : ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ, ಸ್ಮರಣ ಸಂಚಿಕೆ, ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಸ್ಥೆ, ಬೆಂಗಳೂರು, ೧೯೯೩.

ಸೂರ್ಯನಾಥ ಕಾಮತ : ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಮ್.ಸಿ.ಸಿ. ಪಬ್ಲಿಕೇಷನ್, ಬೆಂಗಳೂರು, ೧೯೭೩.

: ಕ್ವಿಟ್ ಇಂಡಿಯಾ, ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ, ೧೯೯೨

: ಸ್ವಾತಂತ್ರ್ಯ ಸಂಗ್ರಾಮದ ಗೇಯ ಗೀತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮

: ಇತಿಹಾಸದ ಆಚೆ–ಈಚೆ, ಹೇಮಂತ ಪ್ರಕಾಶನ, ಬೆಂಗಳೂರು, ೨೦೦೨

ಹಣಮಂತ ತಾಸಗಾಂವಕರ : ಜೋರಾಪೂರ ಗುರುರಾಯರು, ವಿಪ್ರಕಲ್ಯಾಣ ಟ್ರಸ್ಟ್, ವಿಜಾಪೂರ, ೨೦೦೦.

ಹಾಲಪ್ಪ ಗ.ಸ. : ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ, ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥ ಮಾಲೆ, ಧಾರವಾಡ, ೧೯೬೬.

ಇಂಗ್ಲಿಷ ಗ್ರಂಥಗಳು

Azad Moulana Abul Kalam: India wins Freedom, orient Longman, New Delhi, 1989.

Batrashakti : The Quintessence of Gandhi in his own words, madhu muskan publishers, New Delhi, 1984.

Bipan Chandra and others : Freedom struggle, National Book Trust, New Delhi, 1972.

Basavaraj K.R. : History and culture of Karnataka, Chalukya Publication, Dharwad ,1987.

Divakar V.D . : South India in 1857 war of Independence, Lokamanya Tilak Smarak Trust, Poona,1993.

Gopal S. (Ed). : Selected works of Jawaharalala Nehru, Vol-III ,Sangam Books, New Delhi ,1975.

Gopalkrishan S. : Political Movement in South India 1914-1929,

Hallappa G.S . : History Freedom movement in Karnataka,Vol-II, Government of Bengalore, Mysore,1964.

Hallappa G.S.(Ed). : Freedom for Progress, Gulbarga, 1996.

KrishanRao M.V
Hallappa G.S : History Freedom movement in Karnataka,Vol-I, Government of Mysore, Bengalore,1962.

Mujumadar R.C.(Ed). : Struggle For Freedom, Vol XI, Bharatiya Vidya Bhavan Series, Bombay, 1978.

Patil V.T : Mahatma Gandhi and the Civil Disobedience Movement(1930-34),Renaissance publishing house, Delhi , 1988.

Pradan G.P and Bhagawat A.K: Indian Freedom Struggle – An Epic of Sacrifice and sufferings, popular prakashan, Bombay, 1990.

Shankar Girji : Social Trends and Indian National Movement, Meerat, 1987.

Srivastav Y.N : History of the freedom movement (1857-1947), Amar Prakashan, Delhi ,1989.

Sathyan B.N (Ed) : Bijapur District Gazetteer, Government press, Bangalore ,1966.

Venkataramaiah .K.A : The Story of A Satyagrahi, Saradar K.A. Venkataramaiah Smarak Samithi, Bangalore, 1983

೩. ಎಮ್.ಫಿಲ್ ಮತ್ತು ಪಿಎಚ್.ಡಿ. ಪ್ರಬಂಧಗಳು

ಅಂಬಣ್ಣ ಡವಳಾರ : ಸಿಂದಗಿ ತಾಲೂಕಿನ ಸ್ವಾತಂತ್ರ್ಯ ಸಂಗ್ರಾಮ : ಒಂದು ಅವಲೋಕನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

ಚಂದುನವರ ಜೆ.ಎಮ್ : ಪತ್ರಕರ್ತರಾಗಿ ಮೊಹರೆ ಹಣಮಂತರಾಯರು ಒಂದು ಅಧ್ಯಯನ, ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೧.

ನಾಗರತ್ನಮ್ಮ ಎಸ್. : ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳವಳಿ, ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಬೆಂಗಳೂರು, ವಿಶ್ವವಿದ್ಯಾಲಯ, ೨೦೦೪.

ಮಲ್ಲಿಕಾರ್ಜುನ ಮೇತ್ರಿ : ಕರ್ನಾಟಕ ಗಾಂಧಿ (ಹರ್ಡೇಕರ ಮಂಜಪ್ಪನವರ ಜೀವನ ಮತ್ತು ಕೃತಿಗಳು) ಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮.

ಶರಣಪ್ಪ ನಾಯಕರ : ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ರೈತರು ಮತ್ತು ವಿದ್ಯಾರ್ಥಿಗಳ ಪಾತ್ರ, (ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಹಾಸನ ಜಿಲ್ಲೆಗಳನ್ನು ಅನುಲಕ್ಷಿಸಿ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಶ್ರೀಕಾಂತ ತಳವಾರ : ಹಲಗಲಿ ಬೇಡರು ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೯.

೪. ಗ್ಯಾಸೆಟಿಯರಗಳು

ಮುನಿಸ್ವಾಮಿ ಆರ್.(ಸಂ) : ವಿಜಾಪೂರ ಜಿಲ್ಲಾ ಗ್ಯಾಸೆಟಿಯರ, ಗ್ಯಾಸೆಟಿಯರ ಇಲಾಖೆ, ಕರ್ನಾಟಕ ಸರಕಾರ, ೧೯೯೯.

ಸತ್ಯನ ಬಿ.ಎನ್. (ಸಂ) : ವಿಜಾಪೂರ ಜಿಲ್ಲಾ ಗ್ಯಾಸೆಟಿಯರ, ಗೌರ್ನಮೆಂಟ್ ಪ್ರೆಸ್, ಬೆಂಗಳೂರು, ೧೯೬೬.

ಸೂರ್ಯನಾಥ ಕಾಮತ : ಧಾರವಾಡ ಜಿಲ್ಲಾ ಗ್ಯಾಸೆಟಿಯರ, ಗ್ಯಾಸೆಟಿಯರ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ೧೯೯೫,

೫. ಸಂದರ್ಶನಗಳು

೧. ಕಂಠಿ ಹನುಮಂತರಾಯ, ನಾಗರಾಳ, ತಾ.ಬೀಳಗಿ, ೭-೪-೨೦೧೩.

೨. ಗುರಪ್ಪ ಜಾಪಳ, ಕಮತಗಿ, ತಾ.ಹುನಗುಂದ, ೦೬-೦೩-೨೦೧೩.

೩. ಗುರುರಾಜ ಹಬ್ಬು, ಕಲ್ಲಳ್ಳಿ, ತಾ.ಜಮಖಂಡಿ, ೮-೩-೨೦೧೪.

೪. ಬಸಯ್ಯ ವಸ್ತ್ರದ, ವಿಜಾಪೂರ, ೧೫-೬-೨೦೧೨.

೫. ಭೀಮಪ್ಪ ಚಲವಾದಿ, ಬೀಳಗಿ, ೧೬-೦೮-೨೦೧೨.

೬. ನಾರಾಯಣ ಜೋಶಿ, ಗಲಗಲಿ, ತಾ. ಬೀಳಗಿ, ೫-೪-೨೦೧೨.

೭. ರವೀಂದ್ರ ದಬಾಡಿ, ಕಮತಗಿ, ತಾ. ಹುನಗುಂದ, ೧೩-೧೦-೨೦೧೪.

೮. ರಾಚಪ್ಪ ಗೊಗಲ್, ಗುಳೇದಗುಡ್ಡ, ತಾ.ಬದಾಮಿ, ೧೦-೩-೨೦೧೪.

೯. ಶಂಕರಗೌಡರ ಕುಟುಂಬಸ್ಥರು, ಚೋಳಚಗುಡ್ಡ, ತಾ.ಬದಾಮಿ, ೦೨-೦೨-೨೦೧೧.

೧೦. ಶ್ರೀರಾಮ ಇಟ್ಟಣ್ಣವರ, ಬೀಳಗಿ, ೨೫-೬-೨೦೧೨.

೧೧. ಸೂರ್ಯನಾಥ ಕಾಮತ, ಬೆಂಗಳೂರು, ೨೫-೯-೨೦೧೨.

೧೨. ಹಣಮಂತ ತಾಸಗಾಂವಕರ, ಬಾಗಲಕೋಟ, ೧೩-೧೦-೨೦೧೩.

೧೩. ಎಸ್.ಬಿ. ಮಟೋಳಿ, ಜಮಖಂಡಿ, ೧೭-೧೦-೨೦೧೪.

ಅನುಬಂಧಗಳು

೧. ಪ್ರಶ್ನಾವಳಿಗಳು

೨. ನಕ್ಷೆಗಳು

೩. ಛಾಯಾಚಿತ್ರಗಳು

ಪ್ರಶ್ನಾವಳಿ

ಇಂದ,

ವಿನಯಕುಮಾರ ಹಿರೇಮಠ

ಸಂಶೋಧನಾ ಅಭ್ಯರ್ಥಿ

ಬ.ವ್ಹಿ.ವ್ಹಿ. ಸಂಘದ ಸಂಶೋಧನಾ ಕೇಂದ್ರ

ಬಾಗಲಕೋಟ.

ಮಾನ್ಯರೇ

ನಾನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಮಾನ್ಯತಾ ಸಂಸ್ಥೆಯಾದ ಬಾಗಲಕೋಟೆಯ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಂಶೋಧನಾ ಕೇಂದ್ರದ ಚರಿತ್ರೆ ವಿಭಾಗದಲ್ಲಿ ಡಾ. ಜಿ.ಬಿ. ಕುಲಕರ್ಣಿಯವರ ಮಾರ್ಗದರ್ಶನದಲ್ಲಿ ಬಾಗಲಕೋಟ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳವಳಿ : ಒಂದು ಅಧ್ಯಯನ ಎಂಬ ವಿಷಯದಲ್ಲಿ ಪಿಎಚ್.ಡಿ ಮಾಡುತ್ತಿರುವೆನು.

ಈ ಕೆಳಗೆ ನಮೂದಿಸಿದ ವಿಷಯದ ಬಗ್ಗೆ ತಮ್ಮ ಅಮೂಲ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಸಂಶೋಧನೆಗೆ ಸಹಕರಿಸುತ್ತೀರೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಮಾಹಿತಿದಾರರ ವಿವರ

೧) ಸ್ವಾತಂತ್ರ್ಯ ಹೋರಾಟಗಾರರ ಪೂರ್ಣ ಹೆಸರು :

೨) ತಂದೆ – ತಾಯಿಯರ ಹೆಸರು :

೩) ವೃತ್ತಿ :

೪) ನಿಮ್ಮ ಜನ್ಮ ದಿನಾಂಕ, ಸ್ಥಳ, ತಾಲೂಕ ಮತ್ತು ಜಿಲ್ಲೆ :

೫) ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಪ್ರೇರಣೆ ನೀಡಿದ ಅಂಶಗಳಾವುವು.?

೬) ನೀವು ಭಾಗವಹಿಸಿದ ಪ್ರಮುಖ ಚಳವಳಿಗಳಾವುವು ?

೭) ನೀವು ಭಾಗವಹಿಸಿದ ರಾಷ್ಟ್ರಮಟ್ಟದ ಮತ್ತು ಪ್ರಾಂತಮಟ್ಟದ ಸಭೆಗಳಾವುವು ?


೮) ನೀವು ಭೇಟಿ ಮಾಡಿದ ಪ್ರಮುಖ ಪ್ರಾಂತಿಯ ಹಾಗು ರಾಷ್ಟ್ರೀಯ ನಾಯಕರ ಹೆಸರುಗಳನ್ನು ತಿಳಿಸಿರಿ.

೯) ನಿಮಗೆ ಮೆಚ್ಚುಗೆಯಾದ ಪ್ರಾಂತಿಯ ಹಾಗೂ ರಾಷ್ಟ್ರಮಟ್ಟದ ಸ್ವಾತಂತ್ರ್ಯ ಚಳವಳಿಯ ನಾಯಕರುಗಳು ಯಾರು ?


೧೦) ಚಳವಳಿಯ ಸಮಯದಲ್ಲಿ ಪ್ರಸಾರಗೊಳ್ಳುತ್ತಿರುವ ವೃತ್ತ ಪತ್ರಿಕೆಗಳಾವವು ?

೧೧) ಇಂದಿನ ಭಾರತದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಕರ್ನಾಟಕ



ಬಾಗಲಕೋಟ ಜಿಲ್ಲೆ





ಛಾಯಾ ಚಿತ್ರಗಳು




ಅಖಂಡ ವಿಜಾಪೂರ ಜಿಲ್ಲಾ ಸ್ವಾತಂತ್ರ್ಯ ಚಳವಳಿಗಾರರು. ಕೃಪೆ: ಜಿಲ್ಲಾಧಿಕಾರಿ ಕಛೇರಿ, ವಿಜಾಪುರ



ದತ್ತಾತ್ರೇಯ ವ್ಯಾಯಾಮ ಶಾಲೆ ಗುಳೇದಗುಡ್ಡ. ತಾ॥ ಬದಾಮಿ.



ಕಲಾದಗಿ ಜಿಲ್ಲಾ ಕೇಂದ್ರವಾಗಿದ್ದಾಗ ನ್ಯಾಯಾಲಯವಾಗಿ ಬಳಸುತ್ತಿದ್ದ ಕಟ್ಟಡ.



... that the convict mentioned below was confined in this prison ... imprisonment as under:

No. 1210

Name Ayappa Rachappa

Caste Lingayat

Native place Hubli

Hubli

Dharwar.

... write literate

... occupation Pr. Servant

... identification (1) Mole 2" front of Rt. armpit.
(2) Two scares one large and one small left side of abdomen.
(3) Mole Rt side of neck

Sentencing authority Magistrate F.C. Honavar.

Section under which convicted U/S 70 Dist. police act IV of 1890

Date of sentence 3 11 1930


Date of admission 5 11 - 1930

... of sentence R I

... sentence One (1) month.
Fine Rs. 25/- or seven days R.I.

... 9 - 12 1930

ಜೈಲು ಪತ್ರ, ಕೃಪೆ ಅಯ್ಯಪ್ಪ ರಾಚಪ್ಪ, ಬನಹಟ್ಟಿ.



ಕನ್ನಡಿಗ

KANNADIGA

ಸಂಪಾದಕರು:- ಬಳವಂತ ಅಣ್ಣಾರಾವ ಮುಜುಮದಾರ


ಮಹಾತ್ಮರ ಸಂದೇಶ

ಪತ್ರಿಕೆಗಳ ಮೇಲೆ ಗದಾಪ್ರಹಾರ

ಗಾಂಧಿ ಟೊಪ್ಪಿಗೆಯವರಿಗೆ ಗನ್ನಾ

ದುಂಡುಮೇಜಿನ ಪರಿಷತ್ತಿನಲ್ಲಿ ವಿಶ್ವಾಸವಿಲ್ಲ

ಪೋಲೀಸ ಅಧಿಕಾರಿಗಳಿಮನಲ್ಲಿಯೇ ಉಬ್ಬು



ಬಾಗಲಕೋಟೆಯಲ್ಲಿ


೧೧ ಜನ ರಾಷ್ಟ್ರಸೇವಕರಿಗೆ ಕಠಿಣ ಶಿಕ್ಷೆ.

ಅಹಮ್ಮದಾಬಾದದಲ್ಲಿ

ವಲ್ಲಭಭಾಯಿಯವರ ಬಾಯಿಗೆ ಬೀಗ

ಕೃಪೆ: ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಪತ್ರಿಕೆಗಳು


ಶರಣ ಸಂದೇಶ

The Sharana Sandesh.

ಸಂಪಾದಕರು:-

ಬಿಡಿಸಂಚಿಕೆಗೆ ೧ ಆಣೆ.

ಪ್ರತಿ ಸೋಮವಾರವೂ ಪ್ರಕಟವಾಗುತ್ತದೆ.

ಸೋಮವಾರ ತಾರೀಖು ೩೦ ನೆಯ

ಸಂಚಿಕೆಗಳು.

ಬನಾರಸದಲ್ಲಿ

ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧಿವೇಶನ.

ಮ. ಗಾಂಧಿ

ಸರದಾರ ವಲ್ಲಭಭಾಯಿ

ಇವರ ಸಂದರ್ಶನ.

೨೭ನೆಯ ತಾರೀಖಿನ ದಿವಸ ಬನಾರಸ (ಕಾಶಿ) ದಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧಿವೇಶನವು ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಜರುಗಿತು. ರಾಷ್ಟ್ರೀಯ ಪ್ರಮುಖರೆಲ್ಲರು ದಯಮಾಡಿಸಿದ್ದರು.

ಅಧಿವೇಶನದ ಕಾರ್ಯವು ಪ್ರಾರಂಭವಾಗುವ ಪೂರ್ವದಲ್ಲಿ ಮ. ಗಾಂಧಿ ಮತ್ತು ಸರದಾರ ವಲ್ಲಭಭಾಯಿಯವರ ಪರಸ್ಪರ ದರ್ಶನವಾದ ಕೂಡಲೆ ಅತಿ ಪ್ರೇಮದಿಂದ ಗಾಢಾಲಿಂಗನ ಮಾಡಿದರು. ಈ ೧೮ ತಿಂಗಳುಗಳಲ್ಲಿ ಇದೇ ಅವರ ಮೊದಲನೆಯ ಸಂದರ್ಶನವಾಗಿದೆ.



ಕೃಪೆ: ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ಸ್ವಾತಂತ್ರ್ಯ ಚಳವಳಿಗಾರರು



ಕಾಕಾ ಕಾರಖಾನೀಸ್
ವಿಜಾಪೂರ



ಶಂಕರ ಸಿಂಧೆ ಗುಳೇದಗುಡ್ಡ
ತಾ. ಬದಾಮಿ



ಮುದಕಪ್ಪ ಕಲಬುರ್ಗಿ
ಗುಳೇದಗುಡ್ಡ ತಾ. ಬದಾಮಿ



ಎಸ್. ಎಸ್. ಪಟ್ಟಣಶೆಟ್ಟಿ
ಬಾಗಲಕೋಟ



ಸಂಗಪ್ಪ ಸಿನ್ನೂರ
ಕಮತಗಿ, ತಾ. ಹುನಗುಂದ



ಹನುಮಂತಪ್ಪ ಮೇದಾರ
ಕಮತಗಿ, ತಾ. ಹುನಗುಂದ



ಪರಪ್ಪ ಸಜ್ಜನ
ಬೇವೂರ ತಾ. ಬಾಗಲಕೋಟ



ಶೀವಲಿಂಗಪ್ಪ ಸಾವಳಗಿ
ಹುನ್ನೂರು ತಾ. ಜಮಖಂಡಿ



ಯಂಕುಬಾಯಿ ಪರ್ವತಿ
ಬಾಗಲಕೋಟ















ಕೌಜಲಗಿ ಹಣಮಂತರಾಯರ ದಿನಚರಿಯ ಟಿಪ್ಪಣಿ.



ಕೌಜಲಗಿ ಹಣಮಂತರಾಯರು ಮರಣ ಹೊಂದಿದಾಗ ಮಹಾತ್ಮರ ಕಳುಹಿಸಿದ ಶೋಕ ಸಂದೇಶ. ಕೃಪೆ: ಹಣಮಂತ ತಾಸಗಾಂವಕರ, ಬಾಗಲಕೋಟ

ಸಂದರ್ಶನಗಳು



ಶಂಕರಗೌಡರ ಪುತ್ರರ ಸಂದರ್ಶನ, ಚೋಳಚಗುಡ್ಡ, ತಾ|| ಬದಾಮಿ.



ಸೂರ್ಯಪಂಡಿತ ಉಪಾಧ್ಯ ಅವರ ಸಂದರ್ಶನ, ಆಲಗೂರು,
ತಾ. ಜಮಖಂಡಿ.